

ವಿಚಾರ ಲಹರಿ

ಚಿಂತನಗಳ ಸಂಕಲನ

ಪ್ರೊ. ಎಸ್. ಕೆ. ರಾಮಚಂದ್ರ ರಾವ್

ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ
ಮೈಸೂರು

VICHARA LAHARI (A collection of essays) by Prof. S.K. Ramachandra Rao, Bangalore. Published by Jagadguru Sri Shivarathreeswara Granthamale, J.S.S. Mahavidya Peetha, Mysore - 4, First Edition 1999
Pages : xvi + 300; Price : Ordinary Rs. 80/-, Deluxe Rs. 100/-

ಮೊದಲನೆಯ ಮುದ್ರಣ 1999

ಬೆಲೆ : ಸಾದಾ ಪ್ರತಿ : ರೂ. 80/-
ಉತ್ತಮ ಪ್ರತಿ : ರೂ. 100/-

ಅಕ್ಷರ ಜೋಡಣೆ :
ಶ್ರೀ ರಾಜೇಂದ್ರ ಪ್ರಿಂಟರ್ಸ್ & ಪಬ್ಲಿಷರ್ಸ್
ಮೈಸೂರು

ಮುದ್ರಣ :
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
ಬೆಂಗಳೂರು
ದೂರವಾಣಿ : 6682802

ಪರಿವಿಡಿ

ಶುಭ ಹಾರೈಕೆ
ಪ್ರಕಾಶಕರ ನುಡಿ
ಮೊದಲ ಮಾತು

೧. ದೇವರ ಕಲ್ಪನೆ
೨. ಧರ್ಮ-ದೇವರು
೩. ಧರ್ಮ-ಸಮುದ್ರ
೪. ಅಧರ್ಮ-ಧರ್ಮ
೫. ಮಾಡಿದ್ದುಣ್ಣುವ ಮಹರಾಯ
೬. ಅಯ್ಯೋ ಕರ್ಮ!
೭. ಧರ್ಮಧ್ವಜಿ
೮. ತ್ರಿವರ್ಗ
೯. ಧರ್ಮಾಚರಣೆ
೧೦. ಸರ್ವ-ಧರ್ಮ ಸಮನ್ವಯ
೧೧. ದೇವರೋ, ಒಳಿತೋ ?
೧೨. ಟೊಳ್ಳು-ಗಟ್ಟಿ
೧೩. ಋತ-ಗೆಲುವು
೧೪. ಋಷಿ-ಋಷಿಣಿ
೧೫. ನಂಬಿಕೆ-ಶ್ರದ್ಧೆ
೧೬. ಆಸ್ತಿಕತೆ, ಒಳ್ಳೆಯತನ
೧೭. ಧ್ಯಾನದ ಬಲ
೧೮. ಪ್ರಾರ್ಥನೆ
೧೯. ತತ್ತ್ವದ ಅಂಜಿಕೆ
೨೦. ಈಗೇತಕೆ ಧರ್ಮಶ್ರವಣ?
೨೧. ಕಾಮದಲ್ಲಿ ಸ್ವಾತಂತ್ರ್ಯ
೨೨. ಮೂರ್ತಿಪೂಜೆ
೨೩. ಓಡಾಡುವ ಗುಡಿ
೨೪. ಪೂಜೆಗೆ ಅಲಂಕಾರವೇಕೆ?
೨೫. ಮರದ ದೇವರು
೨೬. ರಾಧಾಕೃಷ್ಣ
೨೭. ಮಹಾವೀರ
೨೮. ಅರ್ಹಂತರು
೨೯. ಇರುಳಲ್ಲಿ ದೀಪ
೩೦. ಪುಣ್ಯ-ಪ್ರಯೋಜನ
೩೧. ಮಂಜಿನ ಮನೆ
೩೨. ಗುರಿ - ಗರಿ
೩೩. ಆಳವಾದ ಸಮಸ್ಯೆಗಳು
೩೪. ಗುರು - ಶಿಷ್ಯ ಸಂವಾದ
೩೫. ಭಯ-ಭಕ್ತಿ
೩೬. ಭಕ್ತಿ ಕೈಗೂಲಿಯೆ?
೩೭. ಹರಿಕಥೆ - ಬರಿಗಾಲು
೩೮. ಮಹಾ ಪಾಪಗಳು
೩೯. ನೀತಿ
೪೦. ನೀತಿಯ ನೆಲೆ
೪೧. ನೀತಿ - ನಿರಾಶೆ
೪೨. ಸಹಜ ಮಾರ್ಗ
೪೩. ತಪಸ್ಸು
೪೪. ದುರ್ಜನತಾಪಸ
೪೫. ತ್ರಿಕರಣ ಶುದ್ಧಿ
೪೬. ದಾನಿ-ದಾನ
೪೭. ಲೋಭಿ-ದಾನಿ
೪೮. ತ್ಯಾಗ
೪೯. ಕರ್ತವ್ಯ
೫೦. ರಕ್ತಿ-ವಿರಕ್ತಿ
೫೧. ಸಂತೃಪ್ತಿ
೫೨. ಸೌಜನ್ಯ, ಸಂತೋಷ
೫೩. ನೆಮ್ಮದಿ
೫೪. ಶಿಸ್ತು
೫೫. ಶೀಲಶುದ್ಧಿ
೫೬. ವೃತ್ತ-ವಿತ್ತ
೫೭. ಅರಿವು-ಆಚಾರ
೫೮. ಆಚಾರ-ಆಕಾರ
೫೯. ಪ್ರಕೃತಿ-ಸಂಸ್ಕೃತಿ
೬೦. ಲೋಕೋಪಕಾರ
೬೧. ದೇಶಪ್ರೇಮ
೬೨. ಹಾಳುಬಿದ್ದ ಗುಡಿ
೬೩. ಪ್ರತಿಭೆ
೬೪. ಮುಖವಾಡದ ಸ್ವಾರಸ್ಯ
೬೫. ನಾಟ್ಯಧರ್ಮಿ
೬೬. ಕವಿ-ಕಾವ್ಯ

೬೭. ಕವಿಯ ಕೊಡುಗೆ
೬೮. ಕವಿಯ ಕಾಣ್ಕೆ
೬೯. ಕವಿಯ ಮನಸ್ಸು
೭೦. ಕವಿತೆಯ ಇಮ್ಮುಖ
೭೧. ರಸಿಕನ ಪರಿ
೭೨. ಹಣ-ಹೆಸರು
೭೩. ಬರಹಗಾರರ ಕೊರಗು
೭೪. 'ಕ್ಲಾಸಿಕ್'
೭೫. ಓದು-ಬರಹ
೭೬. ಓದಲು ಪುಸ್ತಕ
೭೭. ಎಂಥ ಸಾಹಿತ್ಯ ಬೇಕು?
೭೮. ಓದುವ ಗೀಳು
೭೯. ಪುಸ್ತಕ ಶುಶ್ರೂಷೆ
೮೦. ಪುಸ್ತಕ-ಪಿಶಾಚಿ
೮೧. ನಮ್ಮ ಭಾಷೆ
೮೨. ಸುಲಿದ ಬಾಳೆಯ ಹಣ್ಣು
೮೩. ಗಾದೆಯ ಗೊತ್ತುಗುರಿ
೮೪. ಕನ್ನಡದಲ್ಲಿ ವಿಜ್ಞಾನ
೮೫. ಶಿಕ್ಷೆ, ಶಿಕ್ಷಣ
೮೬. ಬೆತ್ತ-ಬುದ್ಧಿ
೮೭. ವೃತ್ತಿಗಾಗಿ ಶಿಕ್ಷಣ
೮೮. ಚೂರುಪಾರು ವಿದ್ಯೆ
೮೯. ಸಾಕ್ಷರ-ರಾಕ್ಷಸ
೯೦. ಕತ್ತೆ-ಕಸ್ತೂರಿ
೯೧. ಕಸ್ತೂರಿಯೋ ಕಸವೋ
೯೨. ಹೋಗದೂರಿನ ದಾರಿ ಕೇಳಬೇಕೆ ?
೯೩. ಗಿಡವಾಗಿ ಬಗ್ಗದ್ದು
೯೪. 'ಮಕ್ಕಳಿಸ್ಕೂಲ್'
೯೫. ಹೊರೆ-ಹೊಣೆ
೯೬. ಕಂಠಪಾಠ
೯೭. ಆತ್ಮಗೌರವ
೯೮. ಅಧ್ಯಾಪಕರಲ್ಲಿ ಮೂರು ತೆರ
೯೯. ನಮ್ಮ ಬದುಕು
೧೦೦. ಬದುಕಿನ ಬಂಡಿ
೧೦೧. ಬದುಕು-ಬಿಲ್ಲು
೧೦೨. ಬದುಕು-ಕಲೆ
೧೦೩. ತಪ್ಪೊ ಎಂಬ ದಾರಿ
೧೦೪. ನೆಲ-ಮುಗಿಲು
೧೦೫. ಗಳಿಗೆಯ ಬದುಕು
೧೦೬. ಮನುಷ್ಯರಲ್ಲಿ ಮೂರು ತೆರ
೧೦೭. ಸಿಹಿ-ಕಹಿ
೧೦೮. ಅನ್ಯೋನ್ಯಾಶ್ರಯ
೧೦೯. ನೆರವಿಗೆ ಬರುವ ಕೈ
೧೧೦. ಪರವಾಲಂಬಿ ಬದುಕು
೧೧೧. ಬೇಡುವ ಬವಣೆ
೧೧೨. ಬದುಕು-ಬವಣೆ
೧೧೩. ಬದುಕಿನಲ್ಲಿ ಬರಸಿಡಿಲು
೧೧೪. ಅಲ್ಲಾಡುವ ಹಲ್ಲು
೧೧೫. ಕೂಡಿಟ್ಟ ಕಸ
೧೧೬. ಹೊಟ್ಟನ್ನು ಕುಟ್ಟುವುದು
೧೧೭. ಭೋಗ-ರೋಗ
೧೧೮. ಹೋದದ್ದಕ್ಕೆ ದುಗುಡ
೧೧೯. ಬೀದಿ-ಜಗಳ
೧೨೦. ಇಲಿಯೋ ಹುಲಿಯೋ
೧೨೧. ವಾಸನೆಯ ಚೌಕಟ್ಟು
೧೨೨. 'ಶ್ರೇಯಾಂಸಿ ಬಹುವಿಘ್ನಾನಿ'
೧೨೩. ಯೋಗ್ಯತೆ - ಸಮಸ್ಯೆ
೧೨೪. ಸಮಸ್ಯೆಯ ಪರಿಹಾರ
೧೨೫. ಬಾರದುದು ಬೇಕೆಂಬ ಬಯಕೆ
೧೨೬. ಚಿಂತೆಯೆ ಮುಪ್ಪು
೧೨೭. ಚಿಂತೆಯ ಸುಳಿ
೧೨೮. ಹೊಟ್ಟೆ ಕಿಚ್ಚು
೧೨೯. ಅಸೂಯೆ
೧೩೦. ಕಿಡಿಯಿಂದ ಕಾಡು ಕಿಚ್ಚು
೧೩೧. ಕಿಚ್ಚು-ಉರಿ
೧೩೨. ವ್ಯಸನ
೧೩೩. ಹಣದ ಗೀಳು
೧೩೪. ಆಸೆ-ದುರಾಸೆ
೧೩೫. ಅಹಂಕಾರ
೧೩೬. ಹಗೆತನ
೧೩೭. ತಿಳಿವಳಿಕೆ
೧೩೮. ಸುಖ-ಹಿತ
೧೩೯. ಮುನ್ನೆಚ್ಚರಿಕೆ
೧೪೦. ಮಾತಿನಲ್ಲಿ ಹಿತ-ಮಿತ
೧೪೧. ನಯ-ನಾಜೂಕು
೧೪೨. 'ಸತ್ಯಂ ಬ್ರೂಯಾತ್'
೧೪೩. ಮೌನದ ಸ್ವಾರಸ್ಯ
೧೪೪. ದುಡಿಮೆಯೆ ಮದ್ದು

೧೪೫. ಬಲ-ಧೈರ್ಯ
೧೪೬. ಅತಿಯಿರಬಾರದು
೧೪೭. ಪ್ರಗತಿ
೧೪೮. "ಮುಂದ್ ಬರ್ಬೇಕು"
೧೪೯. ಕಾರ್ಯಶೂರ
೧೫೦. ವಿ-ಶ್ರಾಮ
೧೫೧. ಕಲ್ಲು-ಲಿಂಗ
೧೫೨. ವೃತ್ತಿ-ನಿವೃತ್ತಿ
೧೫೩. ನಕಾರದ ರೀತಿ
೧೫೪. ಹವಾ-ಮಾನ
೧೫೫. ಹೊತ್ತು ಹೋಗದು !
೧೫೬. 'ಸ್ವೇ ಸ್ವೇ ಕರ್ಮಣಿ'
೧೫೭. ಗೋಡೆ-ಚಿತ್ರ
೧೫೮. ಅಂತೆಗೆ ತಕ್ಕ ಬೊಂತೆ
೧೫೯. ಯಾರು ಹಿತವರು ನಿನಗೆ !
೧೬೦. ಹಗಲು-ರಾತ್ರಿ
೧೬೧. ಮರುಮಗುತನ
೧೬೨. ತಾನು-ಲೋಕ
೧೬೩. ಮೂರು-ಎರಡು-ಒಂದು
೧೬೪. ತೃಪ್ತಿ-ಸಂತೋಷ
೧೬೫. ಹಿರಿಯರ ನೆನಪು
೧೬೬. ಕಾಲ ಕೆಟ್ಟಿತೆ?
೧೬೭. ಬದುಕು-ಸಾವು
೧೬೮. ಚಿಟ್ಟೆ-ಮನುಷ್ಯ
೧೬೯. ಕತ್ತೆಯ ಪುಣ್ಯ
೧೭೦. ಒಳಿತು-ಕೆಡುಕು
೧೭೧. ಕತ್ತೆಯ ಮಾತು
೧೭೨. ಕತ್ತೆಯ ಬುದ್ಧಿವಂತಿಕೆ
೧೭೩. ಒಳಕತ್ತಲೆ, ಹೊರಬೆಳಕು
೧೭೪. ಹಿಡಿಯುವ ದಾರಿ
೧೭೫. ಕುರೂಪವನ್ನು ಕಾಣಲೇಕೆ?
೧೭೬. ಸುಂದೋಪ ಸುಂದರು
೧೭೭. ಮೂರ್ಖತನ
೧೭೮. ಎಂದಿನಂದವೇ ಸಾಕು
೧೭೯. ಕಾರಣ-ಕಾರ್ಯ
೧೮೦. ಸಾಗರದ ನೀರು
೧೮೧. ಖಂಡನೆ-ಮಂಡನೆ
೧೮೨. ಸಾಧನೆ ಸಾಲದು
೧೮೩. ರಸಿಕ-ಪಂಡಿತ
೧೮೪. ಇಲಿ-ಬಾಲ
೧೮೫. ತ್ರಿಕರಣಶುದ್ಧಿ
೧೮೬. ಮಾತು-ಮನಸ್ಸು
೧೮೭. ಕಿವಿ-ಬಾಯಿ
೧೮೮. ನುಡಿಯ ಬೆಳಕು
೧೮೯. ಮಾತಿನ ಮೋಡಿ
೧೯೦. ನಡೆ-ನುಡಿ
೧೯೧. ಮಾತಿನ ಬಡತನ
೧೯೨. ಕಾಡುಹರಟೆ
೧೯೩. ವಾಗ್ಮಿ
೧೯೪. ಬಿಳಿಯ ಸುಳ್ಳು
೧೯೫. ಗೊಣಗಲೇಕೆ?
೧೯೬. ತಕ್ಕಡಿಯ ತಟ್ಟೆಗಳು
೧೯೭. ಕುರುಡು ಕಾಂಚಾಣ
೧೯೮. ಧನದ ದಾರಿ
೧೯೯. 'ಯಕ್ಷವಿತ್ತ'
೨೦೦. ಹಣ-ಹಸಿವು
೨೦೧. 'ಸಿರಿ ಬರಲು'
೨೦೨. ಬಡತನದ ಹೆಗ್ಗಳಿಕೆ
೨೦೩. ಬಕಬಂಧನ
೨೦೪. ಶಾಖಾಚಂದ್ರ
೨೦೫. ಮದ್ದಿನೊಂದಿಗೆ ಬೆಲ್ಲ
೨೦೬. ನ್ಯಾಯಾನ್ಯಾಯವಿಚಾರ
೨೦೭. ಕಾಲ: ಅಂದು-ಇಂದು
೨೦೮. ಹಳೆಯದು-ಹೊಸದು
೨೦೯. ಹಳಬರು-ಹಿರಿಯರು
೨೧೦. ಪವಾಡದ ಮೂಲ
೨೧೧. ಅಂಧ ಪರಂಪರೆ
೨೧೨. ಪವಾಡ
೨೧೩. ಗ್ರಹ-ಚಾರ
೨೧೪. ಭವಿಷ್ಯಚಿಂತನೆ
೨೧೫. ಇತಿಹಾಸದ ದೃಷ್ಟಿ
೨೧೬. ಚರಿತ್ರೆಯ ಚರಿತಾರ್ಥ
೨೧೭. ಆಧುನಿಕತೆಯ ಅವಾಂತರ
೨೧೮. ಅಲಂ-ಕಾರ
೨೧೯. ಹೊರಗಿನ ಶೃಂಗಾರ
೨೨೦. ತಾಂಬೂಲದ ಸ್ವಾರಸ್ಯ
೨೨೧. ಗುಟ್ಟು-ರಟ್ಟು
೨೨೨. ನಾಯಿ ಇದೆ, ಎಚ್ಚರಿಕೆ!

೨೨೩. ಹೋಗದೂರಿಗೆ ದಾರಿ
೨೨೪. ನರಕಕ್ಕೆ ದಾರಿ
೨೨೫. ಸ್ವಘಾತ
೨೨೬. ಶರೀರದಲ್ಲಿ ಬೆಂಕಿ
೨೨೭. ಮಧ್ಯಮಾರ್ಗ
೨೨೮. ಅಪ್ರಯೋಜಕರು
೨೨೯. ಹೆಸರಿನಲ್ಲೇನಿದೆ?
೨೩೦. ಹಾಸ್ಯಶಿಲ್ಪಿ
೨೩೧. ಹೆಣ್ಣನ್ನು ಹೀಗಳೆಯುವುದೆ?
೨೩೨. ಒಳಗಣ್ಣು-ವಿವೇಕ
೨೩೩. ಯೋಗಕ್ಷೇಮ
೨೩೪. ದೂರದ ಬೆಟ್ಟ
೨೩೫. ಕನ್ನಡಿಯ ಕೆಲಸ
೨೩೬. ಬುದ್ಧಿ- ಮನಸ್ಸು
೨೩೭. ಪ್ರತ್ಯಕ್ಷ-ಪ್ರಮಾಣ
೨೩೮. ಮೇಲೆ ನೋಡದಿರು
೨೩೯. ತನ್ನತನ
೨೪೦. ಮಾತು-ಕೆಲಸ
೨೪೧. ನಾಲಗೆಯ ಹೊಣೆ
೨೪೨. ಹೆಡ್ಡರು-ಜಾಣರು
೨೪೩. ಊರು-ಕಾಡು
೨೪೪. ಗೋರ್ಕಲ್ಲ ಮೇಲೆ ಮಳೆ
೨೪೫. ಗಾಜಿನ ಮನೆಯವರು
೨೪೬. ಸರಳ-ಜಟಿಲ
೨೪೭. ಗುಣ-ದೋಷ
೨೪೮. ನಾಯಿ ಕಚ್ಚಿದರೆ
೨೪೯. ಹಾವು-ಹುತ್ತ
೨೫೦. ಹೆಂಡ-ಹಣ
೨೫೧. ತೆರಿಗೆ-ದಾನ
೨೫೨. ಯುವ-ಶಕ್ತಿ
೨೫೩. ಗುಟ್ಟು
೨೫೪. ಸ್ವಾತಿ-ಮುತ್ತು
೨೫೫. ಸಂಸ್ಕಾರ
೨೫೬. ಉಪ್ಪು-ಕರ್ಪೂರ
೨೫೭. ಮನೆ-ಬಾಡಿಗೆ
೨೫೮. ದಿಟವಾದ ಸಾಧು
೨೫೯. ಬಂದದ್ದು, ಹೋದದ್ದು
೨೬೦. ಮನುಷ್ಯನ ನೆಲೆ-ಬೆಲೆ
೨೬೧. ಮನುಷ್ಯನ ಮೇಲ್ಮೆ
೨೬೨. ಮನುಷ್ಯ ಹಿಡಿದ ದಾರಿ
೨೬೩. ನಾಗರಿಕತೆಯ ಬಲೆ
೨೬೪. ಸುಧಾರಣೆ
೨೬೫. ಭೋಗವಸ್ತು ಸಂಗ್ರಹ
೨೬೬. ವ್ಯಕ್ತಿ-ಶಕ್ತಿ
೨೬೭. ಎತ್ತು ಏರಿಗೆ, ಎಮ್ಮೆ ನೀರಿಗೆ
೨೬೮. ಕೆಟ್ಟು-ಕೆಡಿಸುವುದು
೨೬೯. ಮನೆಯೆಂದರೇನು?
೨೭೦. ಎರಡು ಒಂದಾಗುವುದು
೨೭೧. ಹೆಣ್ಣು-ಗಂಡು
೨೭೨. ಮದುವೆಯೋ ಮನೆಹಾಳೋ
೨೭೩. ಆಯ-ವ್ಯಯ
೨೭೪. ಬರೀಗುಲ್ಲು
೨೭೫. ಆರೋಗ್ಯ ಸಾಧನೆ
೨೭೬. ನೀರು-ನೆರವು
೨೭೭. ಹಸಿವು
೨೭೮. ಆಹಾರದಂತೆ ಬುದ್ಧಿ
೨೭೯. ಜಿಹ್ವಾಚಾಪಲ್ಯ
೨೮೦. ಹಿತವಾದ ಊಟ
೨೮೧. ನಿದ್ರೆ-ಎಚ್ಚರ
೨೮೨. ವೈದ್ಯನ ವ್ಯಾಧಿ
೨೮೩. ಬುದ್ಧಿಯೇ ಮದ್ದು
೨೮೪. ರೋಗಿಯೂ ಧೈರ್ಯವೂ
೨೮೫. ನಿಸರ್ಗ
೨೮೬. ಪರಿಸರ
೨೮೭. ಪರಿಸರದ ಉಳಿವು
೨೮೮. ಕಾಡಿನ ಕರೆ
೨೮೯. ನೆಲದೊಳಗೆ ನೀರು
೨೯೦. ಮೃಗಾಲಯ
೨೯೧. ಪ್ರಾಣಿಹಿಂಸೆ
೨೯೨. ಮನುಷ್ಯ ಪ್ರಾಣಿ !
೨೯೩. ಆಳರಸರ ಮಾತು
೨೯೪. ಜನರ ಹಿತ
೨೯೫. ಹಿತಸಾಧನೆ
೨೯೬. ರಾಜಕಾರಣಿಯ ಧೋರಣೆ
೨೯೭. ಅಧಿಕಾರ-ದಾಹ
೨೯೮. ಎಮ್ಮೆ ಯಾರದ್ದು?
೨೯೯. ಕೈಯಾಸೆ
೩೦೦. ಲಂಚದ ಹೊಣೆ

ಶುಭ ಹಾರೈಕೆ

ಅಜ್ಞಾನ-ಕಳಂಕಗಳಲ್ಲೆಲ್ಲ ದೊಡ್ಡ ಕಳಂಕ ಎನ್ನುತ್ತಾನೆ ಬುದ್ಧ. 'ನ ಹಿ ಜ್ಞಾನೇನ ಸದೃಶಂ' ಎನ್ನುತ್ತದೆ ಭಗವದ್ಗೀತೆ. ಜ್ಞಾನದಂಥ ಪವಿತ್ರ ವಸ್ತು ಮತ್ತೊಂದಿಲ್ಲ. ವಿದ್ಯೆಯಾದರೊ ಮನವ ಬೆಳಗುವ ಬೆಳಕು, ಹಸಿವ ಹಿಂಗಿಸುವ ಅಮೃತತತ್ವ. ಅದು ಆತ್ಮವಿದ್ಯೆ. 'ಸಾ ವಿದ್ಯಾ ಯಾ ವಿಮುಕ್ತಯೇ'- ಯಾವುದು ಮುಕ್ತಿಗೆ ಹಾದಿಯೋ, ಅದು ನಿಜವಾದ ವಿದ್ಯೆ.

ವಿದ್ಯೆಯಿಂದ ವಿನಯ, ವಿಚಾರದಿಂದ ಜೀವಸಂವರ್ಧನೆ. ಈ ತೆರದ ವಿವೇಕದ ಅನುಭವಸಾರ ಚಿಂತನಬರಹಗಳಲ್ಲಿ ಪ್ರತಿಫಲಿತವಾಗುತ್ತದೆ. ದೇಶಕಾಲಗಳ ಸೀಮಾರೇಖೆಯನ್ನು ದಾಟಿ ನಿಲ್ಲಬಲ್ಲ ವಿಚಾರಪ್ರಬೋಧಕ ಅನಿಸಿಕೆಗಳು ಸಾರ್ವಕಾಲಿಕ ನಿತ್ಯಸತ್ಯಗಳು. ಇವು ಉದಾತ್ತ ಬದುಕಿನ ನಿರ್ವಹಣೆಯತ್ತ ಬೆಳಕು ಹರಿಸುವ ದಾರಿದೀಪಗಳು. ತಿಳಿವಿನ ಕೆನೆಯಾದ ಇಂತಹ ಅರ್ಥಪೂರ್ಣ ಜೀವನಾನುಭವಗಾಥೆಗಳು ಆಗಾಗ ಮೆಲುಕುಹಾಕಲು ಸತ್ವಯುತ ಸಾಮಗ್ರಿಯನ್ನು ಒದಗಿಸುತ್ತವೆ. ಲೋಕನೀತಿಯ ಅರಿವಿಗೆ ಸಹಾಯಕವಾದ ಈ ವಿಚಾರಸಂಪದ ಸಾಂಸ್ಕೃತಿಕಸಂವೇದನೆಗಳ ಉತ್ತಮ ದಾಖಲಾತಿಯಾಗಿ ಸಹ ಉಳಿಯುತ್ತದೆ.

ಪಿರಿದಾದುದನ್ನು ಸೆರೆಹಿಡಿದು, ಭಟ್ಟಿ ಇಳಿಸಿ ಕೆಲಮಾತಿನಲ್ಲಿ ಸಾರವತ್ತಾಗಿ ನಿರೂಪಿಸುವುದೊಂದು ಸುಂದರ ಕಲೆ. ಈ ಅಪೂರ್ವ ಕಲೆಗಾರಿಕೆ ಚಿಂತನಸಾಹಿತ್ಯ ರಚನೆಯ ಒಳಸತ್ವ. ಅದರಿಂದಾಗಿ, ಕರಿಯನ್ನು ಕನ್ನಡಿಯಲ್ಲಿ ತೋರಿಸುವ ಚಿಂತನ ಪ್ರಬಂಧಗಳು ಆಯಾ ಕನ್ನಡಿಯ ಶುಭ್ರತೆ ಹಾಗೂ ಪ್ರತಿಫಲನ ಸಾಮರ್ಥ್ಯವನ್ನವಲಂಬಿಸಿ ನಿಲ್ಲುವುದು ಸಹಜವೇ.

'ವಿಚಾರ ಲಹರಿ' 1990ರ ದಶಕದಲ್ಲಿ 'ಸುಧಾ', ವಾರಪತ್ರಿಕೆಯಲ್ಲಿ ವಾರಾಂಕಣದಡಿಯಲ್ಲಿ ಪ್ರಕಟವಾದ ಆಯ್ದ ಚಿಂತನಬರಹಗಳ ಸಂಕಲನ. ಪ್ರೊ. ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್ ಅವರು 'ದಾಸಯ್ಯ' ಕಾವ್ಯನಾಮದಲ್ಲಿ ಬರೆದ 300 ಚಿಂತನಗಳನ್ನೊಳಗೊಂಡ ಕೃತಿ ಇದು. ಧರ್ಮ, ನೀತಿ, ಭಕ್ತಿ, ದರ್ಶನ, ಸಮಾಜ, ಆರೋಗ್ಯ, ಪರಿಸರ, ಲೋಕನೀತಿ - ಹೀಗೆ ಹಲವಾರು ವಿಷಯಗಳ ವ್ಯಾಪ್ತಿ ಇಲ್ಲಿದೆ.

ಇಲ್ಲಿ ಅನುಭವದ ಶ್ರೀಮಂತಿಕೆಯಿದೆ; ರೀತಿನೀತಿಗಳ ವಿಮರ್ಶೆಯಿದೆ;

ಮಾನವಸ್ವಭಾವದ ವಿವಿಧ ಮುಖಗಳ ಪರಿಚಯವಿದೆ. ವ್ಯಕ್ತಿಯ ನೋವುನಲಿವಿನ ಚಿತ್ರಣವಿದೆ. ಅಂತರಂಗದ ಭಾವಗಳ ಆತ್ಮೀಯ ಮಿಡಿತವಿದೆ; ಪೂರ್ವಾಗ್ರಹ ವಿಲ್ಲದ, ಸಮನ್ವಯ ದೃಷ್ಟಿಯ ಚಿಂತನಶೀಲತೆಯಿದೆ. ಅತ್ಯುಕ್ತಿಯಿಂದ ದೂರಾದ ಅಭಿಪ್ರಾಯಗಳು ನೇರ ಮತ್ತು ಸಹಜ. ಖಚಿತತೆ, ಸಂಕ್ಷಿಪ್ತತೆ ಹಾಗೂ ಸ್ಪಷ್ಟತೆಯಿಂದ ಮೈಗೂಡಿದ ಹದವರಿತ ಔಚಿತ್ಯಪ್ರಜ್ಞೆ ಇಲ್ಲಿನ ಬರವಣಿಗೆಯ ಹೆಗ್ಗಳಿಕೆ.

ಪ್ರೊ. ರಾಮಚಂದ್ರರಾವ್ ಅವರು ಹೆಸರಾಂತ ವಿದ್ವಾಂಸರು, ಚಿಂತಕರು, ಕಲಾಪ್ರೇಮಿಗಳು, ಪ್ರಬಂಧಕಾರರು, ಉತ್ತಮ ವಾಗ್ಮಿಗಳು. ಅವರು ಸಾರಸ್ವತ ಲೋಕಕ್ಕೆ ನೀಡಿರುವ ಹಲವಾರು ಮೌಲಿಕ ಶಾಸ್ತ್ರಗ್ರಂಥಗಳು, ಕನ್ನಡ ಕೃತಿಗಳು ಹಾಗೂ ಇಂಗ್ಲಿಷಿನಲ್ಲಿರುವ ವಿವಿಧ ಕೋಶಗಳು ಅವರ ಅಪಾರ ವಿದ್ವತ್ತಿಗೆ ಪ್ರಬುದ್ಧ ಸಾಕ್ಷಿಯಾಗಿವೆ. ಹೇಳಬೇಕಾದುದನ್ನು ಸರಳವಾಗಿ, ತೂಕವಾಗಿ ಹೇಳುವ ಸಂಯಮ ಅವರಲ್ಲಿದೆ.

ಇಂತಹದೊಂದು ವಿಚಾರರುಚಿಯ ರಸಬುತ್ತಿಯನ್ನು ನೀಡಿರುವ ಪ್ರೊ. ರಾಮಚಂದ್ರ ರಾವ್ ಅವರು ಅಭಿನಂದನಾರ್ಹರು. ಈ ಸಂಗ್ರಹಯೋಗ್ಯ ಕೃತಿಯನ್ನು ಸಹೃದಯರು ಮನಸಾರೆ ಸ್ವಾಗತಿಸುವರೆಂಬ ನಂಬಿಕೆ ನಮ್ಮದು.

ಮೈಸೂರು
22.8.99

ಇತ್ಯಾಶಿಷಃ
ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು

ಪ್ರಕಾಶಕರ ನುಡಿ

ಈ ನಾಡಿನ ಸರ್ವತೋಮುಖವಾದ ಅಭಿವೃದ್ಧಿಗೆ ಸೇವಾಕ್ಷೇತ್ರಗಳನ್ನು ಕಾಲಕಾಲಕ್ಕೆ ವಿಸ್ತರಿಸುತ್ತಾ ಜನತೆಯ ಸಮಗ್ರ ಕಲ್ಯಾಣಕ್ಕೆ ಸದಾ ಶ್ರಮಿಸುತ್ತಿರುವ ಧಾರ್ಮಿಕ ಗುರುಪೀಠಗಳಲ್ಲಿ ಒಂದೆನಿಸಿದ ಮೈಸೂರು ಜಿಲ್ಲೆಯ ಕಪಿಲಾನದಿಯ ದಡದಲ್ಲಿರುವ ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ತನ್ನದೇ ಆದ ಉಜ್ವಲ ಇತಿಹಾಸವನ್ನು ಹೊಂದಿದೆ.

ಸುಮಾರು ಸಾವಿರ ವರ್ಷಗಳ ಹಿಂದೆಯೇ ಚೋಳ ಚಕ್ರೇಶ್ವರನ ಪ್ರಾರ್ಥನೆಯ ಮೇರೆಗೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರಿಂದ ಸಂಸ್ಥಾಪಿತವಾದ ಸುತ್ತೂರು ಜಗದ್ಗುರು ಪೀಠದ ದಿವ್ಯಪರಂಪರೆಯಲ್ಲಿ ಬಂದಂತಹ ಮಹಾನುಭಾವರು ಲೋಕಕಲ್ಯಾಣಕ್ಕಾಗಿ ಅವಿಸ್ಮರಣೀಯವಾದ ಸೇವೆಯನ್ನೆಸಗುತ್ತಾ ಬಂದಿರುತ್ತಾರೆ. ಸಾಹಿತ್ಯಿಕ ಚಟುವಟಿಕೆಗಳಿಗೆ ವಿಶೇಷವಾದ ಪ್ರೋತ್ಸಾಹವನ್ನಿತ್ತ ಈ ಪೀಠಾಧಿಪತಿಗಳಲ್ಲಿ ಕೆಲವರು ಬೆಲೆಯುಳ್ಳ ಕೊಡುಗೆಗಳನ್ನು ಸಾಹಿತ್ಯಲೋಕಕ್ಕೆ ಕೊಟ್ಟಿದ್ದಾರೆ. "ಪರಮ ಶಿವಾಧಿಕ್ಯ ಚೂಡಾಮಣಿ" ಎಂಬ ಗ್ರಂಥವನ್ನು ಬರೆದು, ಶ್ರೀ ಮಲೆಯ ಮಾದೇಶ್ವರರಿಗೆ ಆಶ್ರಯ ನೀಡಿದ್ದ ಸಿದ್ಧನಂಜದೇಶಿಕೇಂದ್ರರು, "ಅಮುಗಿದೇವಯ್ಯಗಳ ಸಾಂಗತ್ಯ"ವನ್ನು ಬರೆದ ಕವಿ ಶಿವಲಿಂಗದೇವನಿಗೆ ಪ್ರೇರಕ-ಪೋಷಕರಾದ ಕಪಿನೀ ನಂಜುಂಡದೇಶಿಕೇಂದ್ರರು, ತೋಂಟದ ಸಿದ್ಧಲಿಂಗಯತಿಗಳ ಶಿಷ್ಯ ಪ್ರಮುಖರಲ್ಲಿ ಒಬ್ಬರಾಗಿ ಸ್ವತಂತ್ರ ವಚನಕಾರರಾಗಿರುವ ಘನಲಿಂಗಿ ಶಿವಯೋಗಿಗಳು, "ಮಂತ್ರ ಮಹರ್ಷಿ" ಗಳೆನಿಸಿ "ಶಿವಮಂತ್ರ ಮಹಿಮೆ" ಎಂಬ ಗ್ರಂಥವನ್ನು ನೀಡಿದ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು, "ಘನಲಿಂಗಿದೇವರ ವಚನಗಳು" ಮತ್ತು ಶ್ರೀ ಗೌರೀಶಂಕರಸ್ವಾಮಿಗಳವರ "ಅಕ್ಕಮಹಾದೇವಿ" ಚಂಪೂಕಾವ್ಯ - ಇವುಗಳನ್ನು ಸಂಸ್ಕರಿಸಿ, ಸಂಪಾದಿಸಿ ಕೊಟ್ಟವರೂ ನಾಡಿನ ಕಲ್ಯಾಣವನ್ನೆಸಗಿದವರೂ ಪ್ರಾತಃಸ್ಮರಣೀಯರೂ ಆದ ಪರಮಪೂಜ್ಯ "ಶ್ರೀಮನ್ಮಹಾರಾಜ ರಾಜಗುರುತಿಲಕ" ಜಗದ್ಗುರು ಡಾ. ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು- ಇವರೇ ಮೊದಲಾದವರು ಸಾಹಿತ್ಯ-ಸಂಸ್ಕೃತಿಗಳ ಪೋಷಕರಾಗಿ ಕವಿಗಳಿಗೆ, ಕಲಾವಿದರಿಗೆ, ವಿದ್ವಾಂಸರಿಗೆ ಆಶ್ರಯ ದಾತರಾಗಿದ್ದಾರೆ.

ಈ ಪೀಠವು ಸಂಸ್ಥಾಪಿಸಿರುವ ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯೂ ಒಂದು. ಹಲವಾರು ಮಹತ್ವದ ಗ್ರಂಥಗಳನ್ನು ಪ್ರಕಟಿಸಿರುವ ಈ ಮಾಲೆಯಲ್ಲಿ ಈಗ ವಿಚಾರಲಹರಿ ಎಂಬ ಕೃತಿಯನ್ನು ಪ್ರಕಟಿಸಲು ಹರ್ಷವೆನಿಸಿದೆ.

ಇದು 'ಸುಧಾ' ಪತ್ರಿಕೆಯ ಅಂಕಣದಲ್ಲಿ 'ದಾಸಯ್ಯ' ಎಂಬ ಹೆಸರಿನಿಂದ ಪ್ರಕಟವಾದ ಆಯ್ದ ಚಿಂತನ ಬರಹಗಳ ಸಂಕಲನ. ಈ ಸಂಕಲನದಲ್ಲಿ ಧರ್ಮ, ದರ್ಶನ, ಸಮಾಜ, ನೀತಿ ಮುಂತಾದ ವಿಚಾರಗಳ ಬಗ್ಗೆ ಚಿಂತನೆಗಳಿವೆ. ಈ ಕೃತಿಯನ್ನು ರಚಿಸಿಕೊಟ್ಟಿರುವವರು ಪ್ರೊ. ಎಸ್. ಕೆ. ರಾಮಚಂದ್ರರಾವ್‌ರವರು. ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಅವರು ವೇದಾಂತ, ಬೌದ್ಧ-ಜೈನ ಧರ್ಮ, ಭಾರತೀಯ ಕಲೆ, ಸಂಸ್ಕೃತಿ, ಸಾಹಿತ್ಯ ಕುರಿತಂತೆ ಅಧಿಕಾರಯುತವಾಗಿ ಬರೆಯಬಲ್ಲ, ಮಾತನಾಡಬಲ್ಲ ಶ್ರೇಷ್ಠ ಚಿಂತಕರು. ಅನೇಕ ಭಾಷೆಗಳನ್ನು ಚೆನ್ನಾಗಿ ಬಲ್ಲವರು. ಪ್ರಾಚೀನ, ಅರ್ವಾಚೀನ ಸಾಹಿತ್ಯದ ಆಳಅಧ್ಯಯನ, ವಿಜ್ಞಾನದ ಬಹುಮುಖ ತಿಳಿವಳಿಕೆಯಿಂದಾಗಿ ಸಾರಸ್ವತ ಲೋಕದಲ್ಲಿ ಗೌರವಾದರಗಳಿಗೆ ಪಾತ್ರರಾದವರು. ಬಹುತೇಕ ಪ್ರಶಸ್ತಿ ಪುರಸ್ಕಾರಗಳು ಅವರನ್ನರಸಿ ಬಂದಿವೆ. ನಿರಾಡಂಬರದ ಸಜ್ಜನಿಕೆ, ಸಂಪನ್ನತೆಗೆ ಹೆಸರಾದ ಅವರದು ಸುಸಂಸ್ಕೃತ ಮನಸ್ಸು.

ಈ ಕೃತಿಯು ಅಚ್ಚುಕಟ್ಟಾಗಿ ಬರಲು ಸಹಕರಿಸಿದ ಶ್ರೀ ಕೆ. ಸಿ. ಶಿವಪ್ಪ ಹಾಗೂ ಶ್ರೀ ಮಲೆಯೂರು ಗುರುಸ್ವಾಮಿಯವರಿಗೂ, ಅಕ್ಷರ ಜೋಡಣೆ ಮಾಡಿಕೊಟ್ಟ ಶ್ರೀ ರಾಜೇಂದ್ರ ಪ್ರಿಂಟರ್ಸ್‌ನವರಿಗೂ, ಅಂದವಾಗಿ ಅಚ್ಚುಮಾಡಿಕೊಟ್ಟ ಬೆಂಗಳೂರಿನ ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೂ ಹಾರ್ದಿಕ ವಂದನೆಗಳು.

ಪ್ರಕಾಶಕರು

ಮೊದಲ ಮಾತು

ಬೆಂಗಳೂರಿನ 'ಸುಧಾ' ಪತ್ರಿಕೆಯಲ್ಲಿ 'ವಿಚಾರಲಹರಿ' ಎಂಬೊಂದು ಅಂಕಣವು ಸಾರೋದ್ಧಾರವಾಗಿ ಬರುತ್ತಿದೆಯಷ್ಟೆ. ಹಿರಿಯರಾದ ಶ್ರೀ ಜಿ. ಪಿ. ರಾಜರತ್ನಂ ಅವರು ಇದನ್ನು ಮೊದಲಿಗೆ ನಿರ್ವಹಿಸಿದರಾಗಿ ಇದು ಜನಪ್ರಿಯವಾಯಿತು. ಅವರು ತೀರಿಕೊಂಡಮೇಲೂ ಇದನ್ನು ಮುಂದುವರಿಸಲಾಯಿತು. ಈ ಅಂಕಣವನ್ನು ಕೈಗೆತ್ತಿಕೊಳ್ಳುವಂತೆ ನನ್ನನ್ನು ಕೇಳಿದಾಗ, ವಾರವಾರವೂ ಪತ್ರಿಕೆಗೆ ಗ್ರಾಸವನ್ನು ಒದಗಿಸುವ ಸಾಮಗ್ರಿಯಾಗಲಿ ಸಾಮರ್ಥ್ಯವಾಗಲಿ ನನಗಿರದೆಂದು ಹೇಳಿದೆ. ಆಗ ಪತ್ರಿಕೆಯ ನಿರ್ವಾಹಕ ಸಂಪಾದಕರಾಗಿದ್ದವರು ಶ್ರೀ ಎಂ. ಬಿ. ಸಿಂಗ್ ಅವರು ; ನನಗೆ ಮೊದಲಿಂದ ಮಿತ್ರರು. ಅವರ ಒತ್ತಾಯಕ್ಕೆ ಮಣಿದು ಒಪ್ಪಿಕೊಳ್ಳ ಬೇಕಾಯಿತು. ಕೆಲ ವರ್ಷಗಳಾದ ಮೇಲೆ, ಕಷ್ಟದ ಕೆಲಸವೆಂದು ನನಗನಿಸಿ ಬಿಟ್ಟು ಕೊಟ್ಟೆನೆನ್ನಿ.

ಈ ಅವಧಿಯಲ್ಲಿ ಬಂದ ನನ್ನ ಬರಹಗಳನ್ನು ಮೆಚ್ಚಿಕೊಂಡಿದ್ದ ಕೆಲವರು ಇವೆಲ್ಲ ಪುಸ್ತಕರೂಪದಲ್ಲಿ ಬಂದರೆ ಚೆನ್ನು ಎಂದು ಹೇಳುತ್ತಿದ್ದರು. ನನಗೇ ಅದರ ಮೇಲೆ ಆದರ ಇರಲಿಲ್ಲವಾಗಿ, ನನ್ನ ಬಳಿ ಈ ಯಾವ ಬರಹದ ಸಂಗ್ರಹವೂ ಇರಲಿಲ್ಲ. ಮೆಚ್ಚಿಕೊಂಡವರು ಅಷ್ಟಕ್ಕೆ ಬಿಡದೆ ತಮ್ಮಲ್ಲಿದ್ದ ಸಂಗ್ರಹವನ್ನು ನನ್ನ ಕೈಗಿತ್ತರು. ನಾನು ಏನು ಮಾಡುವುದೆಂದು ತಿಳಿಯದೆ, ಇಂಥ ಕೆಲಸದಲ್ಲಿ ಅನುಭವವಿರುವ ನನ್ನ ಹತ್ತಿರದ ಸ್ನೇಹಿತರು ಶ್ರೀ ಕೆ. ಸಿ. ಶಿವಪ್ಪನವರ ಮಡಿಲಿಗೆ ಈ ಸಂಗ್ರಹವನ್ನು ಹಾಕಿ ಕೈ ತೊಳೆದುಕೊಂಡೆ. ಶಿವಪ್ಪನವರಿಗೆ ನನ್ನನ್ನು ಕುರಿತಂತೆ ತುಂಬ ವಿಶ್ವಾಸ. ನಾವಿಬ್ಬರೂ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇದ್ದಾಗ, ನನ್ನನ್ನು 'ಮೂರ್ತಿಶಿಲ್ಪ - ನೆಲೆ, ಹಿನ್ನೆಲೆ' ಎಂಬ ಹೆಬ್ಬೊತ್ತಿಗೆಯನ್ನು ಬರೆಯಲು ಪ್ರೇರೇಪಿಸಿದವರು ಅವರೇ; ವಿಶ್ವವಿದ್ಯಾನಿಲಯದ ಕಡೆಯಿಂದ ಅದನ್ನು ಹೊರತಂದವರೂ ಅವರೇ. ಪುಸ್ತಕವನ್ನು ಅಚ್ಚುಮಾಡುವಾಗ ಅವರು ತೋರಿಸಿದ ಆದರ, ಉತ್ಸಾಹ, ಕೌಶಲ, ಚಾಕಚಕ್ಯತೆ, ಕಾರ್ಯಶೂರತೆ, ಇವನ್ನು ನಾನೆಂದೂ ಮರೆಯಲಾರೆ. ಎಷ್ಟಾದರೂ ಕವಿಗಳು, ರಸಿಕರು, ಸಹೃದಯರು, ರಸಜ್ಞರು, ಮೈತ್ರೀಸಂಪನ್ನರು. ಅವರ ಕೈಯಲ್ಲಿ ನನ್ನ ಈ ಬರಹಗಳ ಸಂಗ್ರಹವನ್ನಿರಿಸಿದ ಮೇಲೆ ಅವರು ಸುಮ್ಮನಿದ್ದಾರೆ? ಈ ಬರಹಗಳನ್ನೆಲ್ಲ ಓದಿ, ಮುನ್ನೂರನ್ನು ಆಯ್ದುಕೊಂಡು, ವಿಷಯಗಳನ್ನು ವಿಂಗಡಿಸಿ, ಮುದ್ರಣಕ್ಕೆ ಸಿದ್ಧಮಾಡಿದ್ದಲ್ಲದೆ

ಕಡೆಗೆ ಕರಡಚ್ಚನ್ನು ಕೂಡ ಪರಾಂಬರಿಸಿ ಉಪಕರಿಸಿದ್ದಾರೆ.

ಈಚೆಗೆ ಶಿವಪ್ಪನವರು ಮೈಸೂರಿನಲ್ಲಿದ್ದುಕೊಂಡು ಸುತ್ತೂರು ಶ್ರೀಮಠದ ಕೆಲವೊಂದು ಕಾರ್ಯಭಾರವನ್ನು ನೋಡಿಕೊಳ್ಳುತ್ತಿದ್ದಾರೆ. ನನ್ನ ಈ ಬರಹಗಳ ಸಂಗ್ರಹವನ್ನು ಅವರು ಸುತ್ತೂರು ಶ್ರೀಮಠದ ಕಡೆಯಿಂದಲೇ ಪ್ರಕಟಿಸಬಹುದೆಂದು ಬಗೆದು, ಅದಕ್ಕೆ ಶ್ರೀಗಳವರ ಅನುಮತಿಯನ್ನೂ ಪಡೆದುಕೊಂಡು, ಮುದ್ರಣದ ವ್ಯವಸ್ಥೆಯನ್ನು ಮಾಡಿ, ಕಡೆಯ ಕರಡಚ್ಚು ಸಿದ್ಧವಾದ ಮೇಲೇ ಅವರು ನನಗೆ ಈ ವಿಚಾರ ತಿಳಿಸಿದ್ದು ! ಕವಿ ಹೇಳಿದಂತೆ 'ಪ್ರಮಾಣಮಂತಃಕರಣಪ್ರವೃತ್ತಯಃ' ಯಾವ ರೀತಿಯಿಂದ ಉಪಕಾರಸ್ಮರಣೆ ಮಾಡುವುದೋ ನಾನರಿಯೆ. ವಿದ್ಯಾವಿತರಣೆಗೆ, ಸಂಸ್ಕೃತಿ ಪ್ರಸಾರಕ್ಕೆ ಇನ್ನೊಂದು ಹೆಸರಾದ ಸುತ್ತೂರು ಶ್ರೀಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಕೂಡ ನನ್ನಲ್ಲಿ ತುಂಬ ಅಕ್ಕರೆ ಉಳ್ಳವರು. ಅವರಿಗೆ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ.

'ಸುಧಾ' ಪತ್ರಿಕೆಯ ಅಂಕಣದಲ್ಲಿ ನನ್ನ ಬರಹಗಳು 'ದಾಸಯ್ಯ' ಎಂಬ ಹೆಸರಿನಿಂದ ಹೊರಬಂದುವು. ಇದರದ್ದೊಂದು ಕತೆ. ಆಗ ಸಂಪಾದಕರಾಗಿದ್ದ ಎಂ. ಬಿ. ಸಿಂಗ್ ಅವರು ನನ್ನನ್ನು ಈ ಅಂಕಣವನ್ನು ನಿರ್ವಹಿಸಲು ಒಪ್ಪಿಸಿದಾಗ, ನಾನು "ನನಗೆ ಇದರಲ್ಲಿ ಅನುಭವವಿಲ್ಲ. ಒಂದೆರಡು ಬರಹಗಳನ್ನು ಸಿದ್ಧಪಡಿಸಿ ಕೊಡುತ್ತೇನೆ. ನೋಡಿ, ನಿಮಗೆ ಆಗಬಹುದು ಎನಿಸಿದರೆ ಮುಂದಿನ ಮಾತು" ಎಂದು ಹೇಳಿದೆ. ಹಾಗೆಯೆ ಎರಡು ಬಿಡಿಬರಹಗಳನ್ನು ಅವರಿಗೆ ಕಳುಹಿಸಿದೆ. ಅದರಲ್ಲಿ ನನ್ನ ಹೆಸರನ್ನಾಗಲಿ, ಯಾವ ಅಂಕಿತವನ್ನಾಗಲಿ ಸೂಚಿಸಿರಲಿಲ್ಲ (ರಾಜರತ್ನಂ ಅವರು 'ಭ್ರಮ'ರ ಎಂಬ ಅಂಕಿತದಲ್ಲಿ ಬರೆಯುತ್ತಿದ್ದರು). ಸಿಂಗ್ ಅವರು ಅವನ್ನು ನೇರವಾಗಿ ತಮ್ಮ ಅಚ್ಚುಕೂಟಕ್ಕೆ ಕಳುಹಿಸಿಬಿಟ್ಟರು. ಬರಹಗಳು ಅಚ್ಚಾದ ಮೇಲೆ, ಅಲ್ಲಿನ ವ್ಯವಸ್ಥಾಪಕರು ಸಿಂಗ್ ಅವರಿಗೆ ಯಾವ ದಾಸಯ್ಯ ಬರೆದದ್ದು ಇದು? ಬರಹದ ಅಡಿಯಲ್ಲಿ ಯಾವ ಹೆಸರು ಬರಬೇಕು? ಎಂದು ಫೋನ್ ಮಾಡಿದರಂತೆ. ಸಿಂಗ್ ಅವರು ನನಗೆ ಫೋನ್ ಮಾಡಿ, ಈ ವಿಚಾರವನ್ನು ತಿಳಿಸಿ, ಯಾವ ಹೆಸರನ್ನು ಹಾಕುವುದೆಂದು ಕೇಳಿದರು. ನಾನು ಒಡನೆಯೇ "ದಾಸಯ್ಯ ಎಂದೇ ಇರಲಿ" ಎಂದು ಸೂಚಿಸಿದೆ. ನನಗೆ ಆಮೇಲೆ ತಿಳಿಯಿತು ಪ್ರಜಾವಾಣಿ - ಸುಧಾ ಪತ್ರಿಕೆಗಳ ಬಳಗದಲ್ಲಿ ಬಂದವರು ಯಾರೆಂದೋ ಬರೆದವರು ಯಾರೆಂದೋ ತಿಳಿಯದಿದ್ದರೆ 'ದಾಸಯ್ಯ' ಎಂದು ಪಾರಿಭಾಷಿಕವಾಗಿ ನಿರ್ದೇಶಿಸುತ್ತಾರಂತೆ!

'ಸುಧಾ' ಪತ್ರಿಕೆ ಆರಂಭವಾದಾಗಿನಿಂದ ಅದರೊಂದಿಗೆ ನನ್ನ ನಂಟು. ಈ ಅಂಕಣವನ್ನು ನಡೆಸುತ್ತಿರುವಾಗಲಂತೂ ಅದರ ಸಂಪಾದಕ ವರ್ಗದವರೆಲ್ಲ ನನ್ನನ್ನು ಅಭಿಮಾನದಿಂದ ಕಂಡುಕೊಂಡಿದ್ದಾರೆ. ಅದರಲ್ಲೂ ಎಂ. ಬಿ. ಸಿಂಗ್, ರಂಗನಾಥ ರಾಯರು, ನಾಗೇಶ ಹೆಗ್ಗಡೆ, ಶರತ್ ಕಲ್ಕೋಡ್, ಎಚ್. ಎನ್. ಆನಂದ, ವೆಂಕಟರಾವ್ ಮೊದಲಾದವರಿಗೆ ನನ್ನ ಕೃತಜ್ಞತಾಪೂರ್ವಕ ನಮನಗಳು ಸಲ್ಲಬೇಕು. ನನಗೆ ಇದೊಂದು ವಿಶೇಷವಾದ ಅನುಭವವಾಯಿತು; ಹಲವು ಕ್ಷೇತ್ರಗಳ ಪರಿಚಯಕ್ಕೆ ಅವಕಾಶವೊದಗಿತು; ಸಮಸಾಮಯಿಕವಾದ ಚಿಂತನೆಯನ್ನು ಮಾಡುವುದಾಯಿತು, ಎಷ್ಟೋ ಅನಿಸಿಕೆಗಳನ್ನು ಮಾತುಗಳಲ್ಲಿ ಮೂಡಿಸಿದ್ದಾಯಿತು, ಬದುಕಿನ ಹಲವು ಪ್ರಕಾರಗಳನ್ನು ಕುರಿತಂತೆ ಸಮಸ್ಯೆಗಳನ್ನು ಎತ್ತಿತೋರಿಸುವುದಾಯಿತು. ಈ ಲಾಭಕ್ಕಾಗಿ ನಾನು 'ಸುಧಾ' ವಾರಪತ್ರಿಕೆಗೆ ನನ್ನ ಋಣಭಾರವನ್ನು ಕಾಣಿಸುವುದು ನನ್ನ ಕರ್ತವ್ಯ.

ಸಾ.ಕೃ. ರಾಮಚಂದ್ರರಾವ್

ವಿಚಾರ ಲಹರಿ

ದೇವರ ಕಲ್ಪನೆ

ದೇವರ ಹೆಸರನ್ನು ಹೊತ್ತು ಹಗರಣ ನಡೆಸುವ ಜನಕ್ಕೆ ಏನನ್ನಬೇಕು ?

ದೇವರಿದ್ದಾನೆಯೊ ಇಲ್ಲವೊ; ದೇವರ ಕಲ್ಪನೆಯಂತೂ ಎಲ್ಲರಲ್ಲೂ ಉಂಟಲ್ಲ? ದೇವರ ಹಿರಿಮೆಯನ್ನು ಎಲ್ಲ ಕಲ್ಪನೆಯೂ ಅಂಗೀರಿಸುವುದೂ ಹೌದಷ್ಟೆ?

ಈ ಕಲ್ಪನೆಯ ಹಿನ್ನೆಲೆಯಲ್ಲಿ ಮನುಷ್ಯ ತನ್ನ ಅನುಕೂಲಕ್ಕಾಗಿ ಮಾಡಿಕೊಂಡ ಅಡ್ಡಗೋಡೆಗಳನ್ನೆಲ್ಲ ಮೀರಿದ ತತ್ತ್ವವನ್ನು ಕಂಡುಕೊಳ್ಳುವ ಹಂಬಲವಿದೆ.

ಮನುಷ್ಯ ಕಲ್ಪಿಸಿಕೊಂಡ ಅಡ್ಡಗೋಡೆಗಳಿಗೆ ಲೆಕ್ಕವಿಲ್ಲ. ಭಾಷೆ, ಮತ, ಆಚಾರ, ಆಹಾರ, ವ್ಯವಹಾರ, ಉಡುಗೆ, ಒಡವೆ, ಕಲೆ, ಆಟ ಎಲ್ಲದರಲ್ಲೂ ಬೇರೆಬೇರೆಯೇ; ಒಂದೊಂದು ಜನಾಂಗ ಒಂದೊಂದು ಬಗೆ.

ಒಂದೊಂದು ಭಾಷೆಯಲ್ಲಿ ಹಲವಾರು ಪ್ರಕಾರಗಳು. ಒಂದೊಂದು ಮತದಲ್ಲಿ ಹತ್ತಾರು ಪ್ರಕ್ರಿಯೆಗಳು ; ಆಚಾರದಲ್ಲಿ ದೇಶಾಚಾರಗಳು ಕುಲಾಚಾರಗಳು.

ಹೀಗೆ ಮನುಷ್ಯನ ಪ್ರವೃತ್ತಿಯನ್ನು ಹೋಳು ಹೋಳಾಗಿ ಒಡೆದು ಚೂರುಪಾರಾಗಿ ಚೆಲ್ಲುತ್ತಿರುವಾಗ ಅದನ್ನು ತಡೆಗಟ್ಟಿ ಎಲ್ಲ ವಿಭಾಗಗಳನ್ನು ಮೀರಿ ನಿಂತಿದ್ದು ದೇವರ ಕಲ್ಪನೆ.

ಮನುಷ್ಯರೆಲ್ಲರನ್ನು, ಜಗತ್ತೆಲ್ಲವನ್ನು ಒಂದು ನೆಲೆಯಲ್ಲಿ ಕಾಣಬಯಸುವ ಹಂಬಲದಿಂದ ಹೊರಬಂದದ್ದು ದೇವರೆಂಬ ಕಲ್ಪನೆ. ಎಲ್ಲೆಡೆ ಬೆಳಕನ್ನು ಒಂದೇ ರೀತಿಯಾಗಿ ಚೆಲ್ಲಿ, ಎಲ್ಲ ಪ್ರಾಣವನ್ನೂ ಸಮನಾಗಿ ನಿರ್ವಹಿಸುವ ಸೂರ್ಯ ಈ ಕಲ್ಪನೆಯ ಹಾದಿಯಲ್ಲಿ ಮೊದಲ ಎಣಿಕೆಯಾದದ್ದು ಸಹಜ.

ಸಮತ್ವವೇ ಯೋಗವೆಂದದ್ದೂ ಇದೆ ; ಏಕತ್ವವೇ ದೈವವೆಂದದ್ದೂ ಇದೆ. ಆದರೆ ಮನುಷ್ಯನ ವ್ಯವಹಾರ ಪ್ರಜ್ಞೆಗೆ ಸಮತ್ವ ಹಿಡಿಸದು; ಏಕತ್ವ ಸಮ್ಮತವಾಗದು; ತನ್ನ ನೆಲೆಯಲ್ಲಿಯೇ ಎಲ್ಲವನ್ನೂ ಅಡಗಿಸಿಕೊಳ್ಳುವ ಹಠ ಅವನದ್ದು!

ಹೀಗಾಗಿ ದೇವರೆಂಬ ಕಲ್ಪನೆಯಲ್ಲೂ ಅಡ್ಡಗೋಡೆಗಳು; ದೇವರ ವೈಶಿಷ್ಟ್ಯವನ್ನು ಉಳಿಸಿಕೊಳ್ಳಲು, ದೇವರ ಸಲುವಾಗಿಯೇ ಮನುಷ್ಯ ಹೋರಾಡಬೇಕೆಂದುಕೊಂಡದ್ದು ಅವನ ಪ್ರವೃತ್ತಿಗೆ ಸಹಜವಾಗಿಯೇ ಇದೆ.

ಧರ್ಮ-ದೇವರು

ಧರ್ಮಕ್ಕೂ ದೇವರಿಗೂ ಸಂಬಂಧವಿದೆಯೆ ?

ಇದೆಂಥ ಪ್ರಶ್ನೆ ಎಂದು ಸೋಜಿಗಪಡದಿರಿ. ನಮ್ಮಲ್ಲಿ ವೈದಿಕಪಂಥದ ಮುಂದಾಳುಗಳಾಗಿದ್ದ ಮೀಮಾಂಸಕರು ಇದೇ ಪ್ರಶ್ನೆಯನ್ನು ಎತ್ತಿಕೊಂಡು, ಧರ್ಮಕ್ಕೂ ದೇವರಿಗೂ ಸಂಬಂಧವಿರದು ಎಂದೇ ಹೇಳಿದರು. ಅವರು ಬಹುಮಟ್ಟಿಗೆ ನಾಸ್ತಿಕರು; ಅವರಲ್ಲಿ ದೇವರನ್ನು ಒಪ್ಪಿಕೊಂಡವರು ಕೂಡ ಆಸ್ತಿಕರಷ್ಟು ದೂರ ಹೋಗುವುದಿಲ್ಲ. ಆದರೆ ಧರ್ಮದ ಅಗತ್ಯವನ್ನೂ ಹಿರಿಮೆಯನ್ನೂ ಒಪ್ಪಿಕೊಂಡವರು ಅವರು. ದೇವರ ಕಲ್ಪನೆಯಿಲ್ಲದ ಧರ್ಮವೂ ಸಾಧ್ಯ ಎಂಬುದನ್ನು ಅರಿತುಕೊಳ್ಳಬೇಕು. ವ್ಯಕ್ತಿಜೀವನ ಸಾರ್ಥಕವಾಗಬೇಕಾದರೆ, ಸಮಾಜದಲ್ಲಿ ಶಾಂತಿ ಸುಭದ್ರತೆ, ವ್ಯವಸ್ಥೆ, ಐಕಮತ್ಯಗಳು ಇರಬೇಕಾದರೆ ಧರ್ಮದ ನೆರವು ಬೇಕು. ಜನರನ್ನು ವ್ಯಕ್ತಿಜೀವನದಲ್ಲೂ ಸಂಘಜೀವನದಲ್ಲೂ ಎತ್ತಿ ನಿಲ್ಲಿಸುವುದೇ ಧರ್ಮ.

ಆದರೆ ಇದನ್ನು ಕ್ರೈಸ್ತ, ಜೈನ, ಬೌದ್ಧ, ಮುಸಲ್ಮಾನ, ಹಿಂದೂ ಎಂದೆಲ್ಲ ಬಣ್ಣಿಸುವುದಾಗದು. ಇವೆಲ್ಲ ದೇವರ ಕಲ್ಪನೆಯನ್ನೊಳಗೊಂಡ ಮತಪ್ರಕ್ರಿಯೆಗಳು ಅಷ್ಟೆ. ಅವೆಲ್ಲದರ ಸ್ವಾರಸ್ಯವಾದ, ಅರ್ಥವತ್ತಾದ ಭಾಗವು ಧರ್ಮ. ಮತಪ್ರಕ್ರಿಯೆಗಳ ಅಡ್ಡಗೋಡೆಗಳನ್ನು ಮೀರಿದ ಮೇಲೇ ಧರ್ಮದ ನೆಲೆ ಕಾಣುವುದು. ಧರ್ಮವೆಂದರೆ ಆಚಾರಸಂಹಿತೆಯೂ ಅಲ್ಲ; ನಂಬಿಕೆಗಳ ಒಡಂಬಡಿಕೆಯೂ ಅಲ್ಲ. ಮೂಲಭೂತವಾದ ಮಾನವ ಮೌಲ್ಯಗಳನ್ನು ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಧರ್ಮವೆಂದು ನಮ್ಮವರ ನಿರೂಪಣೆ.

ಆದ್ದರಿಂದಲೆ ಹಿಂಸೆ ಮಾಡದಿರುವುದು (ಅಹಿಂಸೆ). ಸಟೆಯನ್ನು ನುಡಿಯದಿರುವುದು (ಸತ್ಯ), ಕಳವು ಮಾಡದಿರುವುದು (ಅಸ್ತೇಯ), ಕಾಮುಕತೆಯಿಲ್ಲದಿರುವುದು (ಬ್ರಹ್ಮಚರ್ಯ), ತನಗೆ ಅಗತ್ಯವಾದದ್ದಕ್ಕಿಂತ ಹೆಚ್ಚು ಗಳಿಸಿಟ್ಟುಕೊಳ್ಳದಿರುವುದು (ಅಪರಿಗ್ರಹ) ಇವೆಲ್ಲ ಧರ್ಮದ ಪ್ರಕಾರಗಳೆನಿಸಿಕೊಂಡುವು. ಚಾರ್ವಾಕರೂ, ಲೋಕಾಯತರೂ ದೇವರನ್ನು ನಂಬದಿದ್ದರೂ ಧರ್ಮವನ್ನು ಒಪ್ಪಿಕೊಂಡದ್ದು ಈ ಕಾರಣದಿಂದಲೆ.

ಧರ್ಮ-ಸಮುದ್ರ

ಸಮುದ್ರದಲ್ಲಿ ಕಪ್ಪೆ ಸತ್ತರೆ, ಸಮುದ್ರದ ನೀರೆಲ್ಲ ಕೊಳೆತು ನಾರುವುದುಂಟೆ? ಯಾವುದೆ ಧರ್ಮವಾಗಲಿ ಒಳ್ಳೆಯವರಿರುತ್ತಾರೆ, ಕೆಟ್ಟವರಿರುತ್ತಾರೆ. ಧರ್ಮವನ್ನು ಬದುಕಿನಲ್ಲಿ ಹೊಂದಿಸಿಕೊಂಡು ತಮಗೂ ಇತರರಿಗೂ ಒಳಿತಾಗುವಂತೆ ನಡೆಯು ವವರಿದ್ದಾರೆ. ಧರ್ಮದ ಹೆಸರಿನಲ್ಲಿ ತಮ್ಮ ಕಾಮ, ಕ್ರೋಧ, ಲೋಭ, ಮೋಹ ಗಳನ್ನೆಲ್ಲ ತೀರಿಸಿಕೊಳ್ಳುವವರೂ ಇದ್ದಾರೆ. ಎರಡನೆಯ ಗುಂಪಿನವರು ಬೇಗ ಕಣ್ಣಿಗೆ ಬೀಳುತ್ತಾರೆನ್ನಿ. ಅವರ ನಡೆ-ನುಡಿಯನ್ನು ನೋಡಿ ಬೇಸತ್ತವರು ಧರ್ಮವೆಂದರೇ ಬೆಚ್ಚಿ ಬೀಳುವುದು ಸಹಜ.

ಧರ್ಮವೇ ಮನುಷ್ಯನಿಗೆ ಮಾರಕ; ಧರ್ಮವಿರದಿದ್ದರೇ ಮನುಷ್ಯ ಉಳಿದಾನು, ಬೆಳೆದಾನು ಎನ್ನುವವರಿದ್ದಾರಲ್ಲವೆ? ಮೇಲಿನ ಮಾತು ಈ ಸಂದರ್ಭದಲ್ಲಿ ಬಂದದ್ದು. ಧರ್ಮದ ಹರವು ಕೆಲವು ಕೆಟ್ಟವರಲ್ಲೇ ಅಡಗಿದೆಯೆ ?

ಅವರು ಕೆಟ್ಟವರೆಂದ ಮಾತ್ರಕ್ಕೆ ಧರ್ಮವೇ ಕೆಟ್ಟದೆಂದರ್ಥವೇ ? ಧರ್ಮದಿಂದ ಕೆಟ್ಟವರು ಯಾರೂ ಇರರು. ಧರ್ಮದ ಉದ್ದೇಶ ಯಾರನ್ನೂ ಕೆಡಿಸುವುದಲ್ಲ. ಧರ್ಮಾಚರಣೆಯಲ್ಲಿ ತೊಡಗಿದಮೇಲೆ ಕೆಟ್ಟವರಾಗುತ್ತಾರೆ ಎನ್ನಬಹುದೆ? ಕೆಟ್ಟತನವೋ ಒಳ್ಳೆತನವೋ ಅದು ಬೇರೆ ಮೂಲದ್ದು; ಅದಕ್ಕೆ ಧರ್ಮ ಕಾರಣ ವಾಗುವುದಿಲ್ಲ; ಪೋಷಕವೂ ಆಗುವುದಿಲ್ಲ.

ಧರ್ಮದ ಆಚರಣೆ ಮಾಡುವವರಲ್ಲಿ ಒಳ್ಳೆಯವರೂ ಇರುತ್ತಾರೆ, ಕೆಟ್ಟವರೂ ಇರುತ್ತಾರೆ. ಒಳ್ಳೆಯವರಿಂದ ಧರ್ಮಕ್ಕೇನು ಕೋಡು ಮೂಡಿಬರುವುದಿಲ್ಲ; ಕೆಟ್ಟವರಿಂದ ಕಾಲು ಮುರಿಯುವುದಿಲ್ಲ.

ಅವರಿವರ ಆಚರಣೆಯನ್ನು ನೋಡಿ ಧರ್ಮದ ನೆಲೆಯನ್ನೂ ಬೆಲೆಯನ್ನೂ ಹೇಳಲಾದೀತೆ? ದಿಟವಾಗಿ ಧರ್ಮ ಸಮುದ್ರದಂತೆಯೆ. ಎಲ್ಲ ಕಾಲಕ್ಕೂ ಎಲ್ಲೆಡೆಯೂ ಹರಡಿ ನಿಂತಿರುವುದು ಧರ್ಮದ ಸ್ವಾರಸ್ಯ. ಯಾರು ಏನು ಮಾಡಿದರೂ ಅದರ ಸ್ವಭಾವವೇನು ಮಾರ್ಪಡುವುದಿಲ್ಲ.

ಅಧರ್ಮ-ಧರ್ಮ

ಧರ್ಮದ ಹೆಸರಿನಲ್ಲಿ ನಡೆದ, ನಡೆಯುತ್ತಿರುವ ಅನ್ಯಾಯ, ಕಾದಾಟ, ಸೆಣಸಾಟಗಳು ಕೊನೆ ಮೊದಲಿಲ್ಲದವು; ಲೆಕ್ಕವಿಲ್ಲದಷ್ಟು. ಧರ್ಮ ಇರುವುದೇ ಜನರನ್ನು ಒಡೆಯಲು, ಅವರನ್ನು ಹಿಂಸೆಯ ದಾರಿಗೆ ಎಳೆದೊಯ್ಯಲು ಎಂದರೂ ತಡೆದೀತು !

ಆದರೆ ಧರ್ಮವೆಂಬ ಮಾತಿಗೆ 'ಎತ್ತಿ ನಿಲ್ಲಿಸುವುದು' ಎಂದರ್ಥ. ಕಾಲಲ್ಲಿ ಬಲವಿಲ್ಲದೆ ಇದ್ದಾಗ ಊರುಗೋಲಾಗಿ ನಿಲ್ಲಿಸುವುದು ಧರ್ಮ; ಜಾರುವಾಗ ಹಿಡಿದೆತ್ತುವುದು ಧರ್ಮ; ಬದುಕಿನಲ್ಲಿ ಎಡರು-ತೊಡರುಗಳು ಕಾಡಿದಾಗ ಅವನ್ನು ಕರಗಿಸುವುದು ಧರ್ಮ.

ಇದೆಲ್ಲ ಪುಸ್ತಕದ ಬದನೆಕಾಯಿ ಎನ್ನುವಿರಾ? ದಿಟವಾಗಿ ವಾಡಿಕೆಯಲ್ಲಿರುವ ಧರ್ಮಕ್ಕೆ ಈ ಅರ್ಥ ಹೊಂದುವುದಿಲ್ಲ ಅಲ್ಲವೆ? ಅದು 'ಧರ್ಮ'ವೆಂಬ ಕಲ್ಪನೆಯ ತಪ್ಪಲ್ಲ. ಅದನ್ನು ಜನರ ನಡುವೆ ಸಿದ್ಧಗೊಳಿಸುತ್ತಿರುವವರ ತಪ್ಪು.

ಯಾವುದೇ ಧರ್ಮವಾಗಲಿ 'ಸುಳ್ಳು ಹೇಳು', 'ಕಳ್ಳತನ ಮಾಡು', 'ಬೇರೆಯವನನ್ನು ಹೊಡಿ, ಬಡಿ, ಕೊಲ್ಲು' ಎಂದು ಹೇಳಲಾರದು. ಆದರೆ ಎಲ್ಲ ಧರ್ಮಗಳ ಅನುಯಾಯಿಗಳಲ್ಲೂ ಇವನ್ನು ಮಾಡುವವರಿಲ್ಲವೆ ?

ಧರ್ಮದ ಉಪದೇಶಕ್ಕೂ ಮನುಷ್ಯನ ಸ್ವಭಾವಕ್ಕೂ ವಿರಸ ಬಂದಾಗ, ಗೆಲ್ಲುವುದು ಮನುಷ್ಯನ ಸ್ವಭಾವವಲ್ಲದೆ ಶಾಸ್ತ್ರದ ಉಪದೇಶವಲ್ಲ, ಧರ್ಮದ ಹೆಸರಿನಲ್ಲಿ ಹಿಂಸೆ, ದೌರ್ಜನ್ಯ ದಬ್ಬಾಳಿಕೆಗಳು ನಡೆಯುತ್ತಿದ್ದರೆ, ಅದು ಧರ್ಮದಿಂದಲ್ಲ; ಮನುಷ್ಯನ ಸ್ವಭಾವದಿಂದ.

ಧರ್ಮ ಮನುಷ್ಯನ ಪ್ರಕೃತಿಯ ಆಳದಲ್ಲಿ ಇಳಿಯದೆ, ಅವನ ಸ್ವಭಾವದಲ್ಲಿ ಸಂಸ್ಕೃತಿಯನ್ನು ಒದಗಿಸದೆ, ಅವನಿಗೆ ಬದುಕಿನ ತಾತ್ಪರ್ಯವನ್ನು ಮನದಟ್ಟು ಮಾಡಿಕೊಡದೆ ಇದ್ದಾಗ, ಮೇಲಿನ ಒಂದು ತೆಳುವಾದ ಪದರದಂತೆ ಇದ್ದುಕೊಂಡು ಮನುಷ್ಯನಿಗೆ ಯಾವ ಪ್ರಯೋಜನವನ್ನೂ ಒದಗಿಸಲಾರದು.

ಇಂಥ ಹೊರಪದರದ ಧರ್ಮಕ್ಕೇ ಅಂಟಿಕೊಂಡವರು ತಮ್ಮ ಸ್ವಭಾವದಂತೆ ಕೆಲಸ ಮಾಡುವರೇವಿನಾ ಧರ್ಮ ಹೇಳಿದಂತೆ ಅಲ್ಲ. ಅವರಿಗೆ ತಮ್ಮ ಧರ್ಮದ ದಿಟವಾದ ಪರಿಚಯವೇ ಇರುವುದಿಲ್ಲ. ತಾವು ಮಾಡುವುದಕ್ಕೆಲ್ಲ ಧರ್ಮವೆಂಬ ನೆಪವನ್ನು ಮುಂದಿರಿಸುತ್ತಾರೆ ಅಷ್ಟೆ.

ಮೇಲಾಗಿ, ಧರ್ಮ ವ್ಯಕ್ತಿಗತವಾದಾಗಲೆ ಅದರ ಸ್ವಾರಸ್ಯ; ಸಮುದಾಯದಲ್ಲಿ ಅದರಲ್ಲಿ ಸಾರ್ಥಕತೆ ಕಡಮೆ. ಅಧರ್ಮವೇ ಆದೀತು !

ಮಾಡಿದ್ದುಣ್ಣುವ ಮಹರಾಯ

ಮನುಸಂಹಿತೆಯಲ್ಲಿ ಧರ್ಮದ ಅಗತ್ಯವನ್ನು ಕುರಿತು ಹೇಳುವಾಗ ಇದೊಂದು ವಿವರವನ್ನು ಎತ್ತಿ ಕಾಣಿಸಲಾಗಿದೆ.

ಮನುಷ್ಯ ಹುಟ್ಟುವಾಗ ಏಕಾಕಿ; ಸಾಯುವಾಗಲೂ ಏಕಾಕಿಯೇ, ಜೊತೆಗಾರರು ಇರಲಾರರು. ಇನ್ನು ತನ್ನ ದೇಹ ತನ್ನದೇ; ತನ್ನ ಇಂದ್ರಿಯಗಳು ತನ್ನವೇ; ತನ್ನ ಮನಸ್ಸು ತನ್ನದೇ; ತನ್ನ ಒಡಲು ತನ್ನದೇ. ಬೇರೆಯವರು ಪಾಲುಗೊಳ್ಳಲಾರರು. ತನ್ನಿಂದ ನಡೆಯುವ ಕೆಲಸ (ಮೈ, ಮನಸ್ಸು, ಮಾತುಗಳ ಮೂಲಕ) ತನ್ನದೇ; ಅದರ ಹೊಣೆಯನ್ನು ಇತರರು ಹೊರುವುದಿಲ್ಲ. ಹಾಗೆಯೇ ಕೆಲಸದ ಫಲವನ್ನು ಅನುಭವಿಸುವವನೂ ತಾನೇ.

ಆದರೆ ಮನುಷ್ಯ ಸಂಘಜೀವಿಯಲ್ಲವೆ ? ಒಂದು ಕುಟುಂಬ, ಕುಲ, ಜನಾಂಗ, ಊರು, ನೆರೆಹೊರೆಗೆ ಸೇರಿದಂತೆ ತಾನೆ ಅವನ ಬದುಕು? ಬೇರೆಯವರ ನೆರವು, ಒತ್ತಾಸೆಯಿರದೆ ಇವನೊಬ್ಬನೆ ಕೆಲಸ ಮಾಡುವುದುಂಟೆ? ಅಥವಾ ಇವನು ಮಾಡಿದ ಕೆಲಸದ ಫಲ ಬೇರೆಯವರನ್ನು ಮುಟ್ಟದೆ ಹೋಗುತ್ತದೆ? ಒಳ್ಳೆಯ ಕೆಲಸದಿಂದ ಇತರರಿಗೆ ಹಿತವಿರದೆ? ಒಬ್ಬ ಮಾಡಿದ ತಪ್ಪು ಹಲವರನ್ನು ಕಾಡುವುದಿಲ್ಲವೆ?

ಮನುಸಂಹಿತೆಯ ಒಕ್ಕಣೆಯಲ್ಲಿ ಇದನ್ನು ಗಮನಿಸದೆ ಇಲ್ಲ. ಆದರೆ ಪ್ರತಿಯೊಬ್ಬ ವ್ಯಕ್ತಿಗೂ ವಿಚಾರ ಮಾಡಿ ಕೆಲಸ ಮಾಡಲು ನಿರ್ಧರಿಸುವ ಸ್ವಾತಂತ್ರ್ಯವಿರುತ್ತದೆ. ಇದರಲ್ಲಿ ಅವನು ಅಲಸಿಗನಾದರೆ ಹೊಣೆಗಾರಿಕೆ ಅವನದ್ದೇ. ಅನಂತರ ಆ ಕೆಲಸದಿಂದ ಒದಗುವ ಫಲಕ್ಕೂ ಅವನು ಬದ್ಧನೇ. ಕೆಲಸ ಮಾಡುವುದು, ಬಿಡುವುದು, ಒಂದು ತೆರನಾಗಿ ಮಾಡುವುದು, ಮತ್ತೊಂದು ತೆರನಾಗಿ ಮಾಡುವುದು ಇವೆಲ್ಲ ವ್ಯಕ್ತಿಯ ಸ್ವಾತಂತ್ರ್ಯವೇ. ಆದರೆ ಒಮ್ಮೆ ಕೆಲಸ ನಡೆಯಿತೆಂದರೆ ಅದರ ಫಲವನ್ನು ಕಡ್ಡಾಯವಾಗಿ ಅನುಭವಿಸಲೇಬೇಕು.

ಹೀಗೆ ಕರ್ಮ ಬಲವಂತವಾಗಿಬಿಡುತ್ತದೆ. ದಾಸರು ಹೇಳಿದಂತೆ 'ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ?' ದೇವರ ಕೈಯೂ ಕಟ್ಟುವುದಂತೆ! ಮನುಸಂಹಿತೆಯ ಉದ್ದೇಶ ಮನುಷ್ಯ ಕೆಲಸಕ್ಕೆ ತೊಡಗುವ ಮೊದಲೇ ಅವನಿಗೆ ಯುಕ್ತ, ಅಯುಕ್ತ ಎಂಬ ವಿವೇಚನೆ ಇರಬೇಕೆಂಬುದು.

ಹೀಗೆ ವಿಚಾರ ಮಾಡುವುದೇ ಧರ್ಮದ ಒಂದು ವಿವರ. ಎಚ್ಚರವಾಗಿರುವುದು ಧರ್ಮದಲ್ಲಿ ಮುಖ್ಯ. ಎಚ್ಚರ ತಪ್ಪಿದರೆ ಕಾಲುಜಾರುವುದು ತಪ್ಪಿದ್ದಲ್ಲ.

ಅಯ್ಯೋ ಕರ್ಮ!

ನಮ್ಮಲ್ಲಿ ಕರ್ಮಸಿದ್ಧಾಂತ ಬೇರೂರಿದೆಯಲ್ಲವೆ? ಎಲ್ಲೆಲ್ಲೂ ಹರಡಿಕೊಂಡಿದೆ ಅಲ್ಲವೆ? ಇದು ಮುಖ್ಯವಾಗಿ ನಂಬಿಕೆಯ ಮಾತು.

ಆದರೆ ನಂಬಿಕೆಯಲ್ಲೂ ಪದರಗಳು ಬಹಳ ಇವೆ; ಎಲ್ಲವೂ ಎಲ್ಲರಿಗೂ ಸರಿಯಾಗಿ ತೋರುವುದೆಂದೇನು ಇಲ್ಲ. ಕರ್ಮಕ್ಕೆ ತಕ್ಕ ಫಲ ಇದ್ದೇ ಇರುವುದೆಂಬ ನಂಬಿಕೆ, ಮಾಡಿದ್ದುಣ್ಣೋ ಮಹಾರಾಯ! ಒಳ್ಳೆಯದು, ಕೆಟ್ಟದ್ದು ಎಲ್ಲವೂ ಕಟ್ಟಿಟ್ಟ ಬುತ್ತಿ. ಅದು ಯಾರನ್ನೂ ಬಿಡುವುದಿಲ್ಲ; ಅದನ್ನು ಯಾರೂ ತಡೆಯಲಾರರು. ಜನ್ಮಾಂತರದ ನಂಬಿಕೆ ಇದನ್ನನುಸರಿಸಿಯೆ ಒದಗಿಬಂದಿರುವುದು.

ಕರ್ಮಸಿದ್ಧಾಂತದಲ್ಲಿ ಕರ್ಮವನ್ನು ಮೂರು ತೆರನಾಗಿ ವಿಂಗಡಿಸಿದ್ದಾರೆ.

ಈ ಗಳಿಗೆಗೆ ಮುನ್ನ ನಾವು ಮಾಡಿದ ಎಲ್ಲ ಕೆಲಸವೂ (ಮಾತಿನಿಂದ, ಮೈಯಿಂದ, ಮನಸ್ಸಿನಿಂದ) ಸಂಚಿತವೆನಿಸಿಕೊಳ್ಳುತ್ತದೆ. ಕರ್ಮ ಮುಗಿದೊಡನೆ ಅದರ ಪ್ರಭಾವ ಸೂಕ್ಷ್ಮವಾಗಿ ನಮ್ಮ ಚೇತನದಲ್ಲಿ ಸೇರಿಕೊಳ್ಳುತ್ತದೆ; ಕಾಣುವುದಿಲ್ಲವಾಗಿ 'ಅದೃಷ್ಟ'; ಹಿಂದೆ ಇರದೆ ಕರ್ಮವಾದ ಮೇಲೇ ಬರುವುದರಿಂದ 'ಅಪೂರ್ವ'. ಇವೆರಡೂ ಸಂಚಿತಕ್ಕೇ ಬೇರೆ ಹೆಸರುಗಳು. ಕರ್ಮವೆಲ್ಲ ಒಮ್ಮೆಲೆ ಮಾಗಿ ಫಲಕೊಡಲಾರವು; ಸುಖ ಮತ್ತು ದುಃಖಗಳು ಒಟ್ಟಿಗೆ ಬರಲಾರವು. ಸಂಚಿತದಿಂದ ಕೆಲವು ಕರ್ಮಗಳು ಹೊರಹೊಮ್ಮಿ ಫಲ ನೀಡಲು ಮೊದಲುಮಾಡುವುದು 'ಪ್ರಾರಬ್ಧ'. ಎಂದರೆ ಕರ್ಮಫಲ ಕಾಣಿಸಿಕೊಂಡಿದೆ ಎಂದರ್ಥ. ಈ ದೇಹ, ಸ್ವರೂಪ, ಸ್ವಭಾವ, ಮನೆತನ, ಅವಕಾಶ, ಸಂಗಾತಿಗಳು ಇವೆಲ್ಲವೂ ಪ್ರಾರಬ್ಧವೇ. ಸಂಚಿತವಾದ ಕರ್ಮಗಳು ಇನ್ನೂ ಬಲಿಯದೆ, ಅನುಕೂಲವಾದ ದೇಶ-ಕಾಲ-ನಿಮಿತ್ತಗಳನ್ನು ಕಾಯುತ್ತ ಅಡಗಿದ್ದರೆ ಅದು 'ಕ್ರಿಯಮಾಣ'; ಎಂದರೆ ಮುಂದೆ ಫಲ ಕೊಡುವ ಕರ್ಮಗಳು (ಆಗಾಮಿ). ಕರ್ಮಸಿದ್ಧಾಂತದಲ್ಲಿ ಪ್ರಾರಬ್ಧವಾದುದನ್ನು ಅನುಭವಿಸಿಯೇ ತೀರಿಸಿಕೊಳ್ಳಬೇಕೆಂದು ಹೇಳಿದೆ; ಬೇರೆ ದಾರಿಯಿಲ್ಲ. ಆದರೆ ಆಗಾಮಿಯಾದುದನ್ನು ನಮ್ಮ ಪ್ರಯತ್ನದಿಂದ, ವಿವೇಕದಿಂದ ಮಾರ್ಪಡಿಸಿಕೊಳ್ಳಬಹುದು, ತಡೆಗಟ್ಟಬಹುದು. ಕರ್ಮಸಿದ್ಧಾಂತವೆಂದರೆ ವಿಧಿವಾದವಲ್ಲ, ಪುರುಷಪ್ರಯತ್ನವೆಲ್ಲ ವ್ಯರ್ಥ ಎಂದು ತೆಪ್ಪಗೆ ಕೂಡಬೇಕೆಂದು ಹೇಳುವುದಿಲ್ಲ.

ಧರ್ಮಧ್ವಜಿ

ಸಂಸ್ಕೃತದಲ್ಲಿ ಧರ್ಮಧ್ವಜಿ ಎನ್ನುವುದೊಂದು ಮಾತಿದೆ. ಧರ್ಮವನ್ನು ತನ್ನ ಬಾವುಟವಾಗಿ ಉಳ್ಳವನು ಎಂದು ಆ ಮಾತಿನ ಅರ್ಥ. ಬಾವುಟ ಹಾರಿಸುವುದು ತನ್ನ ಮೇಲ್ಮೆಯನ್ನು ಹಿರಿಮೆಯನ್ನು ಎಲ್ಲರಿಗೂ ತಿಳಿಯಪಡಿಸಲೆಂದು ತಾನೆ? ಯುದ್ಧದಲ್ಲಿ ಗೆದ್ದವರು, ಸೋತವರ ಕೋಟೆ ಕೊತ್ತಲಗಳ ಮೇಲೆ ಬಾವುಟ ಹಾರಿಸುತ್ತಿದ್ದರು. ಸಂಭ್ರಮದ ಸಂದರ್ಭ ಎಲ್ಲರಿಗೂ ತಿಳಿಯಬೇಕಾದಾಗ ಗುಡಿಯ ಮೇಲೋ ಮನೆಯ ಮೇಲೋ ಧ್ವಜಾರೋಹಣ ನಡೆಯುತ್ತದೆ.

ಹಾಗೆಯೇ ತಾನು ಧರ್ಮಿಷ್ಟ. ಧರ್ಮವನ್ನು ಚಾಚೂ ತಪ್ಪದೆ ಪಾಲಿಸುವವನು ಎಂದು ಎಲ್ಲರಿಗೂ ತಿಳಿಯಲೆಂದು ತನ್ನ ಆಕಾರ ಇರಸರಿಕೆ, ಉಡುಗೆ-ತೊಡುಗೆ, ಮಾತು-ಕತೆಗಳಲ್ಲೆಲ್ಲ ಧರ್ಮವನ್ನು ಹೊರತೋರಿಸುವವನು ಧರ್ಮಧ್ವಜಿ; ಧರ್ಮ ಅವನ ಪಾಲಿಗೆ ಒಂದು ಬಾವುಟ ಅಷ್ಟೆ; ಅದೊಂದು ಸೋಗು.

ಸಂಸ್ಕೃತದಲ್ಲಿ ಧರ್ಮಧ್ವಜಿ ಎನ್ನುವುದು ಮೂದಲಿಕೆಯ ಮಾತು. ಹಳಿಯುವ ಮಾತು. ಆಚಾರ ಕೆಟ್ಟರೂ ಆಕಾರವನ್ನು ಕೆಡದಂತೆ ಉಳಿಸಿಕೊಳ್ಳುವ ಜಾಣರನ್ನು ಕುರಿತು ಹೇಳುವ ಮಾತು. 'ಮಾಡುವುದು ಅನಾಚಾರ, ಮನೆಯ ಮುಂದೆ ಬೃಂದಾವನ' ಎನ್ನುವಾಗಲೂ ಇದೇ ತಾತ್ಪರ್ಯವಷ್ಟೆ? ಧರ್ಮವನ್ನು ದಿಟವಾಗಿ, ಮನಸಾರೆ ನಂಬಿ, ಸಾಧ್ಯವಿದ್ದಷ್ಟೂ ಅದರಂತೆ ಬಾಳುವ ಮಂದಿ ಬಹಳ. ತಾವು ನಂಬಿ ನಡೆಸುವ ಧರ್ಮವನ್ನು ಬೇರೆಯವರೆದುರು ಎತ್ತಿ ಆಡುವ ಅಥವಾ ತೋರಿಸುವ ಅಗತ್ಯ ಅವರಿಗೆ ಕಾಣಿಸುವುದಿಲ್ಲ. ಧರ್ಮ ಇರುವುದು ಅನುಷ್ಠಾನಕ್ಕೆ, ಆಚರಣೆಗೆ; ಪ್ರದರ್ಶನಕ್ಕಾಗಿ, ಪ್ರಚಾರಕ್ಕಾಗಿ ಅಲ್ಲ. ಧರ್ಮವನ್ನು ತಮ್ಮ ಪ್ರಾಪಂಚಿಕ ಏಳ್ಗೆಗೆ ಸಾಧನವಾಗಿ ಬಳಸಿಕೊಳ್ಳುವವರೂ ಇರುತ್ತಾರೆ. ಎಲ್ಲ ಕಾಲದಲ್ಲೂ, ಎಲ್ಲ ದೇಶಗಳಲ್ಲೂ ಇಂಥವರು ಇಲ್ಲದೆ ಇಲ್ಲ; ಯಾವ ಧರ್ಮದಲ್ಲಾದರೂ ಇವರನ್ನು ಗುರುತಿಸಬಹುದು. ಅವರನ್ನು ನೋಡಿದೊಡನೆ ಯಾರಿಗಾದರೂ 'ಎಂಥ ಸಾತ್ತ್ವಿಕರು!' ಎನಿಸೀತು; ಅವರ ಮಾತನ್ನು ಕೇಳಿದಾಗ 'ಎಂಥ ಧರ್ಮಜ್ಞಾನಿಗಳು!' ಎನ್ನಬೇಕು. ಸಾರ್ವಜನಿಕ ಸಂದರ್ಭಗಳಲ್ಲಿ ಅವರು ನಡೆದುಕೊಳ್ಳುವ ರೀತಿಯನ್ನು ಗಮನಿಸಿದಾಗ 'ಇವರು ಧರ್ಮಿಷ್ಠರು' ಎಂಬ ಕಲ್ಪನೆಯೇ ಮೂಡಬೇಕು.

ಬೃಹಸ್ಪತಿಯ ನೀತಿ ಸೂತ್ರದಲ್ಲಿ ಒಂದು ಕಿವಿಮಾತಿದೆ - ಧರ್ಮಧ್ವಜಿ ಯಾದವನನ್ನು ನಂಬಲೂ ಬೇಡ. ಅವನನ್ನು ದೂರಲೂ ಬೇಡ (ಧರ್ಮಧ್ವಜಿನಂ ನ ವಿಶ್ವಸೇತ್. ನಿಂದೇನ್ನ ಚ).

ತ್ರಿವರ್ಗ

ನಮ್ಮಲ್ಲಿ ಪುರುಷಾರ್ಥಗಳು ಮೂರೆಂದು ಎಣಿಕೆ; ಮೂರನ್ನು ಕೂಡಿಸಿ ತ್ರಿವರ್ಗವೆಂದು ಕರೆಯುವುದು ವಾಡಿಕೆ. ಧರ್ಮ, ಅರ್ಥ, ಕಾಮ ಇವೇ ಮೂರು ಪುರುಷಾರ್ಥಗಳು, ಎಂದರೆ ಎಲ್ಲ ಮನುಷ್ಯರಿಗೂ ಅಗತ್ಯವಾದುವು. ಧರ್ಮವೆಂದರೆ ನೀತಿಯಂತೆ ಬದುಕುವುದು; ಅರ್ಥವೆಂದರೆ ನ್ಯಾಯದಿಂದ ಹಣವನ್ನು ಪಡೆದು ಕೊಳ್ಳುವುದು; ಕಾಮವೆಂದರೆ ಸಭ್ಯವೆನಿಸುವ ಸುಖಗಳನ್ನು ಅನುಭವಿಸುವುದು. ಇವುಗಳಲ್ಲಿ ಯಾವುದೊಂದೂ ಶ್ರೇಷ್ಠವೆಂದಲ್ಲ. ಮೂರನ್ನೂ ಸಮನಾಗಿಯೇ ಸಾಧಿಸಬೇಕೆಂದು ಮಹಾಭಾರತದ ಒಕ್ಕಣೆ (ಸಮಮೇವ ಸೇವ್ಯಾಃ)

ಮನುಷ್ಯನಿಗೆ ಇವು ಮೂರೂ ಅಗತ್ಯವೇ. ಒಂದು ಇನ್ನೊಂದಕ್ಕೆ ಅಡ್ಡಿ ಬರಬಾರದು. ಯಾವುದಾದರೂ ಹಟದಿಂದ ಒಂದನ್ನೇ ಹಿಡಿದುಕೊಂಡವನು (ಎಂದರೆ ಏಕಭಕ್ತನಾದವನು) ನೀಚನಂತೆ (ಜಘನ್ಯಃ); ಅವನ ದಾರಿಯನ್ನು ಯಾರೂ ಹಿಡಿಯಬಾರದು.

ಧರ್ಮವೊಂದನ್ನೆ ಆಶ್ರಯಿಸಿದವನು, ಕಾಮುಕನಂತೆಯೇ ನೀಚ; ಅರ್ಥವೇ ಸರ್ವಸ್ವವೆಂದುಕೊಂಡವನೂ ಹಾಗೆಯೇ ಸರಿ. ಕೆಲವರು ಎರಡೆರಡನ್ನು ಹಿಡಿಯುವರು. ಅರ್ಥ-ಕಾಮಗಳಿಗೊ ಅಂಟಿಕೊಂಡವರು ಬಹುಮಂದಿ. ಧರ್ಮ-ಅರ್ಥಗಳಿಗೋ, ಧರ್ಮ-ಕಾಮಗಳಿಗೆ ಜೋತು ಬಿದ್ದವರೂ ಇದ್ದಾರೆ ತಾನೆ? ಇವರೆಲ್ಲ ಮಧ್ಯಮ ವರ್ಗದವರು. ಎರಡರಲ್ಲಿ ಒಂದನ್ನು ಪ್ರಧಾನವಾಗಿ ಇನ್ನೊಂದನ್ನು ಗೌಣವಾಗಿ ಸಾಧಿಸುವುದು ಅವರ ಹವ್ಯಾಸ. ಯಾವುದು ಪ್ರಧಾನ, ಎಲ್ಲಿಯವರೆಗೆ ಅದರ ಪ್ರಾಧಾನ್ಯ ಮುಂತಾದ ವಿವರಗಳೆಲ್ಲ ಅವರವರ ಸ್ವಭಾವಕ್ಕೆ ಬಿಟ್ಟಿದ್ದು. ಮೂರು ಪುರುಷಾರ್ಥ ಗಳಲ್ಲಿ ಸಮನಾಗಿಯೇ ತೊಡಗಿರುವ ಮನುಷ್ಯ (ಅಭಿರತಸ್ತ್ರಿವರ್ಗೇ) ಉತ್ತಮ ನಾದವನೆಂದು ಮಹಾಭಾರತ ಹೇಳುತ್ತದೆ. ಮೂರರಲ್ಲಿ ಒಂದೊಂದರ ಮೌಲ್ಯವೇನು, ಸ್ಥಾನವೇನು, ಪಾತ್ರವೇನು ಎಂಬುದರ ಬಗ್ಗೆ ಅರಿವು ಅವನಿಗಿರುತ್ತದೆ; ಜಾಣತನದಿಂದ, ಆಲೋಚಿಸಿ, ಯಾವಾಗ ಯಾವುದನ್ನು ಸಾಧಿಸಬೇಕು ಎಂಬುದನ್ನು ತಿಳಿದಿರುತ್ತಾನೆ.

ಎದುರಿಗೆ ಸ್ವಹಿತ-ಪರಹಿತಗಳೆರಡನ್ನೂ ಇರಿಸಿಕೊಂಡು ತನ್ನ ಕೆಲಸಗಳಲ್ಲಿ ತೊಡಗುತ್ತಾನೆ ಅವನು.

ಅವನಿಗೆ ಸುಖ ಬೇಡವೆಂದಲ್ಲ; ಹಿತದೊಂದಿಗೆ ಕೂಡಿಕೊಂಡು ಬಂದ ಸುಖದ ಕಡೆ ಅವನ ನೋಟ.

ಧರ್ಮಾಚರಣೆ

ಇಟಾಲಿಯನ್ ಭಾಷೆಯಲ್ಲೊಂದು ಗಾದೆಯಿದೆಯಂತೆ -'ಎಲ್ಲರ ಸ್ನೇಹಿತನಾದವನು ಯಾರ ಸ್ನೇಹಿತನೂ ಅಲ್ಲ' ಎಂದು.

ಎಲ್ಲರಿಗೂ ಬೇಕಾದವನು, ಎಲ್ಲರಿಗೂ ಹಿತವೆನಿಸಿದವನು ಎಂದಾಗಿ ಇರುವುದು ಕಷ್ಟ. ಹಾಗಿರಲು ಪ್ರಯತ್ನ ಪಡಬೇಕಷ್ಟೆ. ಕೆಲವರು ಪ್ರಯತ್ನ ಪಡುತ್ತಾರೆ- 'ಅಂದರಿಕಿ ಮಂಚಿವಾಡು' ಎಂಬಂತೆ. ಎಲ್ಲರ ಆದರವನ್ನು ತಾನು ಪಡೆದುಕೊಳ್ಳಬೇಕು ಎಂಬುದು ಆಸೆ. ಎಲ್ಲರಿಗೂ ಸ್ನೇಹಿತನೆಂಬಂತೆಯೆ ಇರುತ್ತಾರೆ. ಆದರೆ ಇದೊಂದು ಸೋಗು ಅಷ್ಟೆ. ನಟನೆ, ದಿಟವಾಗಿ ಯಾರ ಮೇಲೂ ಒಲವಿಲ್ಲ. ಎಲ್ಲರನ್ನೂ ಮೆಚ್ಚಿಸಬೇಕೆಂಬ ಹಂಬಲ, ತನ್ನ ಸ್ವಾರ್ಥಕ್ಕಾಗಿಯೆ. ಬೇರೆಯವರ ಸಲುವಾಗಿ ಅಲ್ಲ. ಸ್ನೇಹವಿರುವುದು ಸಮಾನಶೀಲರಲ್ಲಿ. ತನ್ನ ನಂಬಿಕೆಗಳು, ನಿಯಮಗಳು ಇನ್ನೊಬ್ಬನಲ್ಲಿಯೂ ಇದ್ದಾಗ ಇಬ್ಬರ ನಡುವೆ ಗೆಳೆತನ ಕುದುರುತ್ತದೆ. ಯಾರೊಂದಿಗೆಂದರೆ ಅವರೊಂದಿಗೆ ಸ್ನೇಹ ಬೆಳೆಯುವುದಾದರೂ ಹೇಗೆ? ಹಾಗೆ ಸ್ನೇಹಿತನಾದವನಿಗೆ ತನ್ನದೇ ಆದ ನಿಲುವು ಯಾವುದೂ ಇರದೆಂದು ಅರ್ಥ ಅಷ್ಟೆ.

ಸ್ನೇಹಿತನೆಂದರೆ ತನ್ನ ಸ್ವಂತ ಪ್ರಯೋಜನವನ್ನೂ ಕಡೆಗಾಣಿಸಿ ಇನ್ನೊಬ್ಬನ ಸುಖವನ್ನೊ ಅನುಕೂಲವನ್ನೊ ಅಭ್ಯುದಯವನ್ನೊ ಬಯಸುವವ; ಅದಕ್ಕಾಗಿ ತೊಡಗುವವ. ಹೀಗಾಗಲು ಒಲವು ಮೂಡಬೇಕು. ಅದಿಲ್ಲದೆ ಸ್ನೇಹವೆಲ್ಲಿಯದು?

ಈ ಮಾತು ಸರ್ವಧರ್ಮ ಸಮನ್ವಯಕ್ಕೂ ಆಗುತ್ತದೆ. ಎಲ್ಲ ಧರ್ಮಗಳನ್ನೂ ನಂಬುವವನು ಯಾವ ಧರ್ಮವನ್ನೂ ನಂಬುವುದಿಲ್ಲ. ಬೇರೆಯ ಧರ್ಮವನ್ನು ಹಳಿಯಬೇಕೆಂದಲ್ಲ. ಆದರೆ ತನ್ನ ಧರ್ಮದಲ್ಲಿ ಬೇರೂರಿ ನಿಂತಂತೆ ಆಗುವುದಿಲ್ಲ, ಎಲ್ಲ ಧರ್ಮಗಳನ್ನೂ ಒಪ್ಪಿಕೊಂಡಾಗ. ಧರ್ಮವೆಂಬುದು ಅನುಷ್ಠಾನದಲ್ಲಿರುವುದು; ಬರಿಯ ಅಭಿಪ್ರಾಯಗಳಲ್ಲಲ್ಲ. ಎಲ್ಲ ಧರ್ಮವೂ ಸಮಾನವಾಗಿದೆ ಎಂಬುದು ಬುದ್ಧಿಗೆ ಹಿಡಿಸಬೇಕು. ಯಾವುದೂ ದೊಡ್ಡದಲ್ಲ, ಯಾವುದೂ ಕಳಪೆಯಲ್ಲ. ಇದು ಅಭಿಪ್ರಾಯವಾಗಬೇಕು. ಆದರೆ ತನ್ನ ಧರ್ಮವನ್ನು ಸರಿಯಾಗಿ ಅರಿತುಕೊಂಡರೆ, ಅದನ್ನು ಆಚರಣೆಯಲ್ಲಿ ತಂದುಕೊಂಡರೆ ಮಾತ್ರ ಇತರ ಧರ್ಮಗಳ ಮೇಲೂ ಗೌರವ ಮೂಡುತ್ತದೆ.

ಹಾಗಲ್ಲದಿದ್ದರೆ ಸರ್ವಧರ್ಮ ಸಮನ್ವಯ ಬರಿಯ ಮಾತಾಗುತ್ತದೆ; ಶ್ರದ್ಧೆಯಲ್ಲ.

ಸರ್ವ-ಧರ್ಮ ಸಮನ್ವಯ

ಹುಣ್ಣಿಮೆಯ ಚಂದ್ರ ಸಾವಿರಮನೆಗಳ ಅಂಗಳಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಒಂದೊಂದು ಮನೆಯವರೂ ತಮ್ಮ ಅಂಗಳದಲ್ಲೆ ನಿಂತು ಚಂದ್ರನನ್ನು ನೋಡಬಹುದು. ಎಲ್ಲರೂ ಒಂದೆಡೆ ನೆರೆಯಬೇಕೆಂಬ ಅಗತ್ಯವಿರದು. ಆದರೆ ತನ್ನ ಮನೆಯಲ್ಲಿ ಕಾಣಿಸಿಕೊಂಡವನೆ ದಿಟವಾದ ಚಂದ್ರ, ಉಳಿದೆಡೆ ಕಾಣಿಸಿಕೊಂಡದ್ದೆಲ್ಲ ಹುಸಿ ಎನ್ನಬಹುದೆ? ಅಥವಾ ಒಂದೊಂದು ಮನೆಯಂಗಳದಲ್ಲೂ ಕಾಣುವುದು ಚಂದ್ರನ ಒಂದು ತುಣುಕಷ್ಟೆ, ಎಲ್ಲ ತುಣುಕುಗಳನ್ನೂ ಕೂಡಿಸಿಕೊಂಡಾಗಲೇ ಪೂರ್ಣಚಂದ್ರ ಎಂದಾಗಲಿ ಹೇಳಬಹುದೆ? ಒಂದೊಂದು ಮನೆಯಂಗಳದಲ್ಲೂ ಕಾಣುವುದು ದಿಟವಾದ ಚಂದ್ರನೆ, ಪೂರ್ಣಚಂದ್ರನೆ. ಹಾಗೆಂದು ಸಾವಿರ ಚಂದ್ರರಿದ್ದಾರೆಯೆ? ಇರುವವನು ಒಬ್ಬನೆ ಚಂದ್ರ ತಾನೆ? ಸಾವಿರ ಕಡೆ ಕಾಣಿಸಿಕೊಳ್ಳುವುದೇನೋ ದಿಟ. ಕಾಣಿಸಿಕೊಳ್ಳುವ ಎಡೆಗಳು ಹಲವು; ಕಾಣಿಸಿಕೊಳ್ಳುವವನೊಬ್ಬನೆ. ಧರ್ಮಗಳು ಹಲವಾದರೂ ದೇವರು ಒಬ್ಬನೆ.

ಯಾರಿಗಾಗಲಿ, ತನ್ನ ಧರ್ಮದ ದೇವರೇ ದಿಟ ಎನ್ನುವ ಹಟ ಸರಿಯಲ್ಲ. ಪ್ರತಿಯೊಂದು ಧರ್ಮದಲ್ಲೂ ಪರಿಪೂರ್ಣವಾದ ಏಕೈಕವಾದ ಪರತತ್ತ್ವದ ಸೊಲ್ಲೆ ಇರುವುದು. ಸರ್ವ ಧರ್ಮ ಸಮನ್ವಯ ಎಂಬ ಮಾತನ್ನು ಆಗಾಗ ಕೇಳುತ್ತೇವೆ. ಇದರ ಅರ್ಥವೇನು? ಎಲ್ಲ ಧರ್ಮಗಳನ್ನೂ ಕೂಡಿಸಿಕೊಳ್ಳಬೇಕೆಂದಲ್ಲ. ಎಲ್ಲ ಧರ್ಮಗಳೂ ಸಮಾನವಾದುವು; ಅವುಗಳಲ್ಲಿ ಒಂದು ಹೆಚ್ಚು ಇನ್ನೊಂದು ಕಡಮೆ. ಒಂದು ದಿಟ ಇನ್ನೊಂದು ಹುಸಿ ಎನ್ನುವುದಿಲ್ಲ. ಒಂದರಲ್ಲಿ ಇಲ್ಲದ್ದನ್ನ ಇನ್ನೊಂದರಿಂದ ಆಯ್ದುಕೊಳ್ಳಬೇಕು ಎಂಬರ್ಥವೂ ಇರದು.

ಸರ್ವಧರ್ಮ ಸಮನ್ವಯ ಎನ್ನುವಾಗ ಔದಾರ್ಯದ ಅಂಶವೇನಿರದು. ಕಲಬೆರಕೆಯ ಕಾತರವೂ ಇರದು. ತನ್ನದು ತನಗೆ ಸರಿ; ಎಲ್ಲರಿಗೂ ಅದೇ ಸರಿಯೆಂಬ ಆಗ್ರಹವಿರದಿದ್ದರಾಯಿತು.

ಅಲ್ಲಿಂದ ಇಲ್ಲಿಂದ ಚೂರು-ಪಾರು ಸೇರಿಸಿಕೊಂಡುಬಿಟ್ಟರೆ ಸಮನ್ವಯವಾಗಲಿಲ್ಲ.

ದೇವರೋ, ಒಳಿತೋ ?

ದೇವರನ್ನು ನಂಬುವವರಿಗೆ ನಂಬದವರನ್ನು ಕಂಡರೆ ಆಗದು; ಅವರ ಬದುಕೇ ಕೇಡಿನದು. ಅವರನ್ನು ನಂಬುವಂತಿಲ್ಲ ಎಂದು ತಿಳಿಯುವರು.

ಇನ್ನು ದೇವರನ್ನು ನಂಬದೆಯಿರುವವರು ನಂಬುವರನ್ನು ಕಂಡರೆ ಹಾಗೆಯೆ ಹೇಸುವರು; ತಿಳಿವಳಿಕೆ ಸಾಲದವರು ಅವರು; ತಾವೇ ನಂಬಿ ಮೋಸ ಹೋಗಿರುವವರು ಕೆಲವರಾದರೆ ಬೇರೆಯವರನ್ನು ಮೋಸಗೊಳಿಸಲು ಹೊರಟಿರುವವರು ಇತರರು ಎಂದು ಅವರ ಕಲ್ಪನೆ. ನಮ್ಮ ಪ್ರಾಚೀನರು 'ಆಸ್ತಿಕ', 'ನಾಸ್ತಿಕ' ಎಂಬ ಮಾತುಗಳನ್ನು ದೇವರನ್ನು ನಂಬುವವರು, ದೇವರನ್ನು ನಂಬದೆ ಇರುವವರು ಎಂಬರ್ಥದಲ್ಲಿ ಬಳಸಲಿಲ್ಲ. ವೇದ-ಪ್ರಾಮಾಣ್ಯವನ್ನು ಒಪ್ಪಿಕೊಂಡವರು ಆಸ್ತಿಕರು, ಒಪ್ಪಿಕೊಳ್ಳದವರು ನಾಸ್ತಿಕರು. ಆಸ್ತಿಕರಲ್ಲಿ ಅಗ್ರಗಣ್ಯರೆನಿಸಿದ ಮೀಮಾಂಸಕರು ದಿಟವಾಗಿ ದೇವರನ್ನು ನಂಬಲೇ ಇಲ್ಲ. ವೇದ-ಪ್ರಾಮಾಣ್ಯಕ್ಕಾಗಲಿ, ಯಜ್ಞಯಾಗಾದಿ ಕರ್ಮಗಳಿಂದ ಒದಗುವ ಫಲಕ್ಕಾಗಲಿ ಅವರು ದೇವರನ್ನು ಈಡುಮಾಡಲಿಲ್ಲ. ಜಗತ್ತಿಗೆ ಕೊನೆ ಮೊದಲೇ ಇಲ್ಲವೆಂದ ಮೇಲೆ ದೇವರು ಸೃಷ್ಟಿಕರ್ತನೂ ಅಲ್ಲ, ಪ್ರಳಯಕಾರಿಯೂ ಅಲ್ಲ. ಮತ್ತೆ ವೇದದಲ್ಲಿ ಬರುವ ಅಗ್ನಿ, ವರುಣ, ಇಂದ್ರ, ವಾಯು ಮೊದಲಾದ ದೇವತೆಗಳೇನು? ಎಂದರೆ ಅವರ ಪ್ರಕಾರ ಇವೆಲ್ಲ ಬರಿಯ ಹೆಸರುಗಳು. ಅವುಗಳ ಹಿನ್ನೆಲೆಯಲ್ಲಿ ರೂಪಗಳೂ ಇಲ್ಲ, ವ್ಯಕ್ತಿಗಳೂ ಇಲ್ಲ, ಗುಣಗಳೂ ಇಲ್ಲ. ಕರ್ಮಕ್ಕೆ ನೆರವಾಗಲೆಂದು ನಾವೇ ಮಾಡಿಕೊಂಡ ಕಲ್ಪನೆಗಳಷ್ಟೆ. ಮೀಮಾಂಸವಿರಲಿ, ವೇದಾಂತವಾದರೂ ಆಸ್ತಿಕವಲ್ಲವೆ? ಅದೂ ಅನುಮಾನವೆ. ಪುರಾಣದ ವಿಷ್ಣು, ಶಿವ, ಗಣೇಶ ಮೊದಲಾದ ದೇವರುಗಳನ್ನು ಯಾವ ದಿಟವಾದ ವೇದಾಂತಿಯೂ ಒಪ್ಪುವುದಿಲ್ಲ. ವೇದಾಂತದ ಪ್ರಕಾರ ಇರುವುದು ನಿರಾಕಾರ, ನಿರ್ಗುಣ ಬ್ರಹ್ಮ; ಅದನ್ನು ಕುರಿತು ಮಾತನಾಡುವಂತೆಯೂ ಇಲ್ಲ, ಆಲೋಚನೆ ಮಾಡುವುದೂ ಸಾಧ್ಯವಿಲ್ಲ. ಅದು ನಂಬುವವರಿಗೂ ಇದೆ; ನಂಬದವರಿಗೂ ಇರುವುದೇ. ನಂಬಿದವರಿಗೇನು ಕೋಡು ಮೂಡಿ ಬರಲಾರದು; ನಂಬದವರಿಗೆ ಕೆಡುಕಾಗಲಾರದು.

ಆಸ್ತಿಕರೆಂದರೆ ಪರಲೋಕವನ್ನು, ಎಂದರೆ ಪುನರ್ಜನ್ಮವನ್ನು ನಂಬುವವರು ಎಂಬುದಿನ್ನೊಂದು ಅರ್ಥ. ಮಾಡುವ ಕರ್ಮಕ್ಕೆ ತಕ್ಕ ಫಲ ಇದ್ದೇ ಇದೆ. ಮಾಡಿದ್ದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂಬುದು ಈ ನಂಬಿಕೆಯ ತಾತ್ಪರ್ಯ. ಆದ್ದರಿಂದ ಒಳ್ಳೆಯದನ್ನು ಮಾಡು ಎನ್ನುವವರು ಆಸ್ತಿಕರು, ಇತರರಿಗೆ ಕೆಡುಕಾಗಲಿ ಎನ್ನುವವರು ನಾಸ್ತಿಕರು.

ಟೊಳ್ಳು-ಗಟ್ಟಿ

ಋಗ್ವೇದದಲ್ಲಿ 'ಅದ್ಧಾ' ಎನ್ನುವುದೊಂದು ಮಾತಿದೆ. ದಿಟವಾದುದು, ಸರಿಯಾದುದು, ಸ್ವಾರಸ್ಯವಿರುವುದು, ಸತ್ತ್ವವಿರುವುದು ಎಂದು ಈ ಮಾತಿಗೆ ಅರ್ಥ. ಸತ್ಯವಾದುದನ್ನು, ಸತ್ತ್ವವುಳ್ಳದ್ದನ್ನು ಅದಿರುವಂತೆಯೆ ಅರಿತುಕೊಳ್ಳುವವರು 'ಅದ್ಧಾತಯಃ'. ಗಟ್ಟಿ ಮನುಷ್ಯರು ಅವರು. ಹಾಗಲ್ಲದವರು 'ಅನದ್ಧಾ ಪುರುಷರು'. ಒಳಗೆ ಸತ್ತ್ವವಿರದವರು. ಅವರು ತಮ್ಮ ಹಿತವನ್ನೊ ಸುಖವನ್ನೊ ಅರಸಿಕೊಂಡು ತಮ್ಮ ಬಾಳನ್ನು ಕಳೆಯುತ್ತಾರೆ; ಬೇರೆಯವರನ್ನು ಕುರಿತಂತೆ ಎಳ್ಳಷ್ಟೂ ಎಣಿಕೆ ಇರುವುದಿಲ್ಲ.

ಇಂಥವರನ್ನು ಕುರಿತು ವೇದ ಹೇಳುತ್ತದೆ- ತಾನೊಬ್ಬನೆ ಕೂತು ಉಣ್ಣುವವನು ಪಾಪವನ್ನಷ್ಟೆ ಉಣ್ಣುತ್ತಾನೆ ('ಕೇವಲಾಘೋ ಭವತಿ ಕೇವಲಾದೀ'). ಅನದ್ಧಾ ಪುರುಷನಿಗೆ ಇರುವುದು ಕಾಮ, ಅರ್ಥಗಳೆಂಬ ಎರಡೇ ಪುರುಷಾರ್ಥಗಳು. ಧರ್ಮ ವೊಂದು ಪುರುಷಾರ್ಥವೆಂಬ ಎಣಿಕೆ ಅವನಿಗಿಲ್ಲ. ಕಾಮವನ್ನು ಪೂರೈಸಿಕೊಳ್ಳುವಾಗ, ಅರ್ಥವನ್ನು ಸಂಪಾದಿಸುವಾಗ ಧರ್ಮದ ಕಟ್ಟುಪಾಡು ಇದೆಯೆನ್ನುವುದು ಅವನಿಗೆ ತಿಳಿದಿರುವುದಿಲ್ಲ. ಮತ್ತೆ ಅವನಿಗೆ ಋಣದ ಕಲ್ಪನೆಯೂ ಇರದು. ಮನುಷ್ಯ ಹುಟ್ಟುವಾಗಲೆ ಮೂರು ಋಣಗಳು ಅವನನ್ನು ಬಂದಡರುತ್ತವೆಯಂತೆ. ಪಿತೃಋಣ, ಋಷಿಋಣ, ದೇವಋಣ ಎಂಬುವು. ತಾನು ಮದುವೆಯಾಗಿ ಮಕ್ಕಳನ್ನು ಪಡೆದು ಮನೆತನವನ್ನು ಮುಂದುವರಿಸಿದರೆ ಪಿತೃಋಣ ತೀರಿತು. ಪರಂಪರೆಯಿಂದ ಬಂದ ವಿದ್ಯೆಯನ್ನು ಅಭ್ಯಾಸ ಮಾಡಿದಾಗ ಋಷಿಋಣ ತೀರಿತು. ಪೂಜೆ, ದಾನ, ನೀತಿ ಮೊದಲಾದುವುಗಳಿಂದ ದೇವಋಣ ತೀರುತ್ತದೆ.

ಈ ಮೂರು ಋಣಗಳನ್ನು ತೀರಿಸಲೆಂದೇ ಬದುಕು ಇರುವುದು. ಹೀಗೆ ತೀರಿಸಿ ಕಡೆಗೆ ಅನೃಣಿಯಾಗಬೇಕು; ಆಗ ಬದುಕಿನ ಕೃತಾರ್ಥತೆ.

ಅನದ್ಧಾ ಪುರುಷನಿಗೆ ತನ್ನ ಮೇಲಿರುವ ಸಾಲಗಳನ್ನು ತಾನು ತೀರಿಸಿಕೊಂಡು ಋಣ ಮುಕ್ತನಾಗಬೇಕೆಂಬ ಕಾತರವಿರುವುದಿಲ್ಲ. ಇನ್ನು ಲೋಕಸಂಗ್ರಹವೆಂಬ ಗೀಳೂ ಅವನಿಗಿರುವುದಿಲ್ಲ. ಲೋಕಸಂಗ್ರವೆಂದರೆ ಬೇರೆಯವರ ಹಿತಕ್ಕಾಗಿ ತನ್ನ ಕೈಲಾದ ಮಟ್ಟಿಗೆ ಕೆಲಸ ಮಾಡುವುದು; ಸಮಾಜಕ್ಕೆ ತನ್ನಿಂದ ಯಾವುದಾದರೊಂದು ರೀತಿಯ ನೆರವು ದೊರಕಬೇಕು ಎಂಬ ತವಕ.

ಋತ-ಗೆಲುವು

ಋಗ್ವೇದದ ಮಂತ್ರವೊಂದರಲ್ಲಿ (೪,೨೩,೮) 'ಋತಸ್ಯ ಧೀತಿರ್ವೃಜನಾನಿ ಹಂತಿ' ಎಂಬ ಮಾತಿದೆ. ಋತವನ್ನು ಕುರಿತು ಚಿಂತನೆ ಮಾಡಿದರೆ ಪಾಪಗಳನ್ನು ಅದು ಕಳೆಯುತ್ತದೆ ಎಂದರ್ಥ.

ಋತವೆಂದರೆ ಜಗತ್ತಿನಲ್ಲಿ ಕಾಣಸಿಗುವ ನಿಯಮ. ಹಗಲು-ಇರುಳುಗಳ ಕ್ರಮ, ಋತುಗಳ ಚರ್ಯೆ; ಗಿಡ-ಮರಗಳು ಬೆಳೆಯುವಾಗ, ಮಳೆ ಬೀಳುವಾಗ, ನದಿಯು ಹರಿಯುವಾಗ, ಗಾಳಿ ಬೀಸುವಾಗ- ಎಲ್ಲವೂ ಒಂದು ನಿಯಮದ ಅಭಿವ್ಯಕ್ತಿಗಳೇ.

ಕಟ್ಟುಪಾಡಿರದೆ ನಿಸರ್ಗದಲ್ಲಿ ಏನೂ ಆಗದು. ಎಲ್ಲಕ್ಕೂ ಒಂದು ಅವ್ಯಕ್ತವಾದ ರೀತಿ ಇದೆ. ವೇದದಲ್ಲಿ ಒಕ್ಕಣೆಗೆ ಬರುವ ದೇವತೆಗಳೆಲ್ಲ ಈ ಋತವನ್ನು ಕಾಪಾಡುವವರೇ. ಋತವೆಂಬುದೇ ಸತ್ಯ. ಅದು ಮನುಷ್ಯನಲ್ಲಿ ಪ್ರತಿಫಲಿತವಾದಾಗ ಧರ್ಮವೆನಿಸಿಕೊಳ್ಳುತ್ತದೆ.

ನಮ್ಮೊಳಗೂ ಒಂದು ನಿಯಮವಿರಬೇಕು. ಹೊರಗಿರುವ ಋತಕ್ಕೆ ಅನುಸಾರವಾಗಿ ಒಳಗಿನ ಸತ್ಯ; ಅದಕ್ಕೆ ಹೊಂದಿಕೊಂಡರೆ, ಧರ್ಮ. ನಾವು ಅದನ್ನು ಎತ್ತಿ ನಿಲ್ಲಿಸಿಕೊಂಡರೆ ಅದು ನಮ್ಮನ್ನು ಎತ್ತಿ ನಿಲ್ಲಿಸುತ್ತದೆ. ನಾವು ಅದರ ಕೈಬಿಟ್ಟರೆ ಅದು ನಮ್ಮ ಕೈಬಿಡುತ್ತದೆ. ಈ ಎಚ್ಚರವಿದ್ದಾಗ, ಋತಕ್ಕೆ ವಿರುದ್ಧವಾದುದನ್ನು ನಾವು ಮಾಡುವುದಿಲ್ಲ. ಋತಕ್ಕೆ, ಸತ್ಯಕ್ಕೆ, ಧರ್ಮಕ್ಕೆ ವಿರುದ್ಧವಾಗಿ ನಾವು ಏನೇ ಮಾಡಿದರೂ ಅದು ಪಾಪ ಅನಿಸಿಕೊಳ್ಳುತ್ತದೆ.

ಸಂಸ್ಕೃತದಲ್ಲಿ ಪಾಪಕ್ಕೆ 'ದುರಿತ' ಎಂಬ ಇನ್ನೊಂದು ಮಾತಿದೆ. ಕೆಡುಕಿನತ್ತ ನಮ್ಮನ್ನು ಒಯ್ಯುವುದು ಎಂದು ಅರ್ಥ. (ದುಃ+ಇತ).

ಮಾಡುವಾಗ ಸಂತೋಷವೇ, ಅನುಕೂಲವೇ. ಆದರೆ ಮಾಡಿದ್ದು ಮಾಗಿ ಫಲ ಕೊಡುವಾಗ ದುಃಖವೇನು ತಪ್ಪುವುದಿಲ್ಲ. ಇದನ್ನೆ ಕೆಡುಕು ಎನ್ನುವುದು. ಮಾಡುವಾಗ ಸಮಾಧಾನವಿದ್ದು ಅನಂತರ ಒಳಿತನ್ನೆ ಅನುಭವಿಸುವುದು ಪಾಪಕ್ಕೆ ವಿರುದ್ಧವಾದುದು; ಪುಣ್ಯವೆನ್ನಿ.

ಋತವನ್ನು ಬಿಟ್ಟದ್ದು ಅನೃತ. ಅನೃತಕ್ಕೆ ಎಂದಿಗೂ ಗೆಲುವೆಂಬುದು ಇಲ್ಲ. ಋತಕ್ಕೆ ಹೊಂದಿಕೊಂಡದ್ದು ಸತ್ಯ; ಗೆಲುವು ಅದಕ್ಕೇ (ಸತ್ಯಮೇವ ಜಯತೇ ನಾನೃತಂ)

ಇದೊಂದು ತತ್ತ್ವ ವೈದಿಕಋಷಿಗಳು ಕಂಡುಕೊಂಡದ್ದು.

ಋಷಿ-ಋಷಿಣಿ

ಋಷಿಯೆನ್ನುವುದು ಪುಲ್ಲಿಂಗ ಶಬ್ದ. ವಾಡಿಕೆಯಲ್ಲಿ ಋಷಿಗಳೆಲ್ಲ ಗಂಡಸರೇ. ಸಪ್ತರ್ಷಿಗಳು, ಗೋತ್ರಕಾರ ಋಷಿಗಳು, ಮಹರ್ಷಿಗಳು ಎಲ್ಲರೂ ಗಂಡಸರೆ. ಹೆಂಗಸರು ಋಷಿಗಳಾದರೆ 'ಋಷಿಣಿ' ಎಂಬ ಮಾತಿದೆಯೆ? ಇಲ್ಲ. ಎಂದರೆ ಹೆಂಗಸರು ಋಷಿಗಳಾಗುವ ಸಂಭವವೇ ಇಲ್ಲ ಎನ್ನಬಹುದೆ? ಹೀಗೂ ಹೇಳಲಾಗದು.

ಋಗ್ವೇದದಲ್ಲೆ ವಾಗಂಭ್ರಣೀ, ಅಪಾಲಾ ಮೊದಲಾಗಿ ಇಪ್ಪತ್ತಕ್ಕೂ ಮೀರಿ ಹೆಂಗಸರು ಋಷಿಗಳಿದ್ದಾರೆ. 'ಋಷಿ' ಎನ್ನುವ ಮಾತಿಗೆ ಮೂಲ ಋಷ್, ಎಂದರೆ ಜ್ಞಾನ, ಕಾಣ್ಕೆ, ದರ್ಶನ.

ನೇರವಾದ, ಪರಾತ್ಪರವಾದ ಅನುಭವವಿದ್ದು ಅದನ್ನು ಮಾತಿನಲ್ಲಿ ತಿಳಿಯ ಹೇಳುವ ಸಾಮರ್ಥ್ಯವಿದ್ದವನು ಋಷಿ. ಇಲ್ಲಿ ಮುಖ್ಯವಾದುದು ದರ್ಶನ, ಕಾಣ್ಕೆ ಮತ್ತು ಪ್ರತಿಭೆ. ಇದು ಗಂಡಸಿನದೆ ಹಕ್ಕು ಎಂದೇನು ಯಾರೂ ಹೇಳಿಲ್ಲ. ಹೆಂಗಸರಿಗೂ ಇದು ಒದಗಬಹುದು; ಒದಗಿಬಂದಿದೆ.

ನಿರುಕ್ತಕಾರರು ಋಷಿ ಎನ್ನುವ ಮಾತನ್ನು ವಿಶ್ಲೇಷಿಸುತ್ತ ಇದರಲ್ಲಿ ಲಿಂಗಭೇದ ಇರದು; ಋಷಿ ಎಂದರೆ ಗಂಡೂ ಆಗಬಹುದು, ಹೆಣ್ಣೂ ಆಗಬಹುದು ಎಂದು ಹೇಳಿದರು. ಅನುಭವದಲ್ಲಾಗಲಿ, ಪ್ರತಿಭೆಯಲ್ಲಾಗಲಿ ಗಂಡು-ಹೆಣ್ಣು ಎಂಬ ಭೇದವಿರದ ಕಾರಣ, ಋಷಿಣಿ ಎಂಬ ಸ್ತ್ರೀವಾಚಕ ಶಬ್ದ ಇಲ್ಲ, ಇಬ್ಬರಿಗೂ ಋಷಿ ಯೆನ್ನುವುದೇ ಸರಿ. ವಿಶ್ವಾಮಿತ್ರನೂ ಋಷಿಯೇ, ವಾಗಂಭ್ರಣಿಯೂ ಋಷಿಯೇ. ಮಾತು ಪುರುಷಪ್ರಧಾನವಾದುದೇನೋ ದಿಟ. ಅಷ್ಟೇಕೆ, ಈಗಿನ ಎಲ್ಲ ಸಂಸ್ಕೃತಿಗಳೂ ಪುರುಷಪ್ರಧಾನವಾದುವೇ! ಆದುದರಿಂದ ಋಷಿಗಳಲ್ಲಿ ಗಂಡಸರು ಹೆಚ್ಚಾಗಿ ಎಣಿಕೆಗೆ ಬಂದರು; ಹೆಣ್ಣು ಋಷಿಗಳ ಸಂಖ್ಯೆ ಬೆಳೆಯಲಿಲ್ಲ, ಅಷ್ಟೆ. ಆದರೆ ಋಷಿಯೆಂಬ ಮಾತಿನ ಹಿರಿಮೆಯನ್ನು ಮನವರಿಕೆ ಮಾಡಿಕೊಳ್ಳಬಹುದು.

'ಋಷಿಕಾ' ಎಂಬ ಇನ್ನೊಂದು ಮಾತೇನೋ ಇದೆಯೆನ್ನಿ, ಹೆಣ್ಣುಋಷಿಯನ್ನು ನಿರ್ದೇಶಿಸಲು. ಆದರೆ ಇದರ ಬಳಕೆ ಹೆಚ್ಚಾಗಿಲ್ಲ. ಹೆಂಗಸಾಗಲಿ ಗಂಡಸಾಗಲಿ ಋಷಿಯೇ ಒಪ್ಪಾದ ಮಾತು.

ನಂಬಿಕೆ-ಶ್ರದ್ಧೆ

ನಾವು ಮಾತನಾಡುವಾಗ ನಂಬಿಕೆ, ಶ್ರದ್ಧೆಗಳೆಂಬ ಎರಡು ಪದಗಳನ್ನೂ ಸಮಾನಾದ ಅರ್ಥವುಳ್ಳವು ಎಂಬಂತೆಯೇ ಬಳಸಿಬಿಡುತ್ತೇವೆ, ಅಲ್ಲವೆ? ಆದರೆ ಅವುಗಳಲ್ಲಿ ಅಂತರವುಂಟು. ನಂಬಿಕೆಯೆಲ್ಲವೂ ಆಚಾರದಲ್ಲಿ ಇಳಿಯಬೇಕಾದುದಿಲ್ಲ, ನಂಬಿದಂತೆಯೇ ನಡೆಬೇಕೆನ್ನುವ ನಿರ್ಬಂಧವೂ ಇರದು. ಆದರೆ ಆಚರಣೆಯಲ್ಲಿ ಇಳಿಯದಿದ್ದರೆ ಶ್ರದ್ಧೆಗೆ ಬೆಲೆಯಿಲ್ಲ. ದೇವರಿದ್ದಾನೆಂದು ನಂಬಿದವರು ಬಹುಮಂದಿ. ಅವರ ನಡೆ-ನುಡಿಗಳನ್ನು ನೋಡಿದರೆ ಈ ನಂಬಿಕೆ ಮೈಮೇಲಿನ ಒಂದು ಹೊದಿಕೆಯಂತೆ ಅಷ್ಟೆ ಎಂಬುದು ತಿಳಿಯುತ್ತದೆ. ಅದೇನು ಆಳಕ್ಕೆ ಇಳಿದು, ಎದೆಯಲ್ಲಿ ಗರಿಕೆದರಿ ನಿಂತದ್ದಲ್ಲ. ಇಂಗ್ಲೆಂಡಿನಲ್ಲಿ ರಾಣಿಯೊಬ್ಬಳಿದ್ದಾಳೆ ಎಂಬ ನಂಬಿಕೆಯಂತೆಯೇ ಜಗತ್ತಿಗೆ ದೇವರೊಬ್ಬನಿದ್ದಾನೆಂಬ ನಂಬಿಕೆ. ಆ ರಾಣಿಗೂ ನಮಗೂ ಎಷ್ಟರಮಟ್ಟಿನ ನಂಟೋ, ದೇವರಿಗೂ ನಮಗೂ ಅಷ್ಟೆ.

ವಿಜ್ಞಾನ ತಿಳಿಸುವ ಹಲವಾರು 'ಸತ್ಯ'ಗಳಂತೆಯೇ, ಧರ್ಮವೂ ದೇವರನ್ನು ಧರ್ಮವನ್ನು ತಿಳಿಸುತ್ತದೆ ಎಂದು ಬಗೆಯುವವರೇ ಬಹುಮಂದಿ. ಧರ್ಮ ತಿಳಿಸುವುದು ಇಂಥ ದೇವರಲ್ಲ. ಧರ್ಮದಲ್ಲಿ ಶ್ರದ್ಧೆಯುಳ್ಳವನು ದೇವರಿದ್ದಾನೆಂದು ಮಾತ್ರ ನಂಬುವುದಿಲ್ಲ. ದೇವರನ್ನು ಬಿಟ್ಟರೆ ತನ್ನ ಬಾಳುವೆಯೇ ಇರದು ಎನ್ನುವ ಅರಿವು ಅವನದ್ದು; ಇದು ಬರಿಯ ನಂಬಿಕೆಯ ಮಾತಲ್ಲ. ಬದುಕುವ ಬಗೆ ಅದು. ಅದರಲ್ಲಿ ನೋಟ, ಅನಿಸಿಕೆ, ವಿಚಾರ, ಯುಕ್ತಿ ಇವೆಲ್ಲ ಮುಖ್ಯವಲ್ಲ. ಬಾಳಿನ ಊರುಗೋಲಾಗಿ, ದಾರಿದೀಪವಾಗಿ ನಿಲ್ಲಬಲ್ಲ ವಿಶ್ವಾಸ ಮುಖ್ಯ. ನಂಬಿಕೆ ಹುಟ್ಟುವುದು ಕಷ್ಟವಲ್ಲ. ಅದು ಕೆಡದೆ ಉಳಿಯುವುದು ಕಷ್ಟ. ಅದು ಬದಲಾಗುವುದೂ ಸುಲಭವೆ. ವಯಸ್ಸಾದಂತೆ, ವಿಚಾರ ಮಾಡಿದಂತೆ, ಅನುಭವ ಬಂದಂತೆ ನಂಬಿಕೆಗಳೂ ಬದಲಾಗುತ್ತವೆ.

ಶ್ರದ್ಧೆಯಾದರೆ ಹೀಗಲ್ಲ. ಅದು ಒಳಗೆ ಹರಿಯುವ ನದಿಯಂತೆ ನೆಮ್ಮದಿಯಾಗಿ ಸಾಗುತ್ತಲೆ ಇದ್ದು, ಬದುಕನ್ನೇ ನಡೆಸಬಲ್ಲುದು. ನಂಬಿಕೆಯೇನೋ ಒಮ್ಮೊಮ್ಮೆ ಶ್ರದ್ಧೆಯಾಗಿ ಮಾರ್ಪಡುವುದುಂಟು. ಆದರೆ ತಾನಾಗಿ ಅದು ಹಾಗೆ ಆಗುತ್ತದೆ ಎನ್ನುವಂತಿಲ್ಲ. ಹಾಗಾಗುವುದು ವಿರಳವೂ ಹೌದು.

ಆಸ್ತಿಕತೆ, ಒಳ್ಳೆಯತನ

ಆಸ್ತಿಕತೆಗೂ ಒಳ್ಳೆಯತನಕ್ಕೂ ಎಡೆಬಿಡದ ಸಂಬಂಧವಿಲ್ಲ. ಆಸ್ತಿಕ ಒಳ್ಳೆಯವನಾಗಿಯೇ ಇರುತ್ತಾನೆಂಬ ನಂಬಿಕೆಯಿಲ್ಲ, ನಾಸ್ತಿಕ ಕೆಟ್ಟವನೆಂಬುದೂ ಸರಿಯಲ್ಲ.

ಆಸ್ತಿಕ ಯಾರು? ದೇವರನ್ನು ನಂಬುವವನು ಎಂಬ ಅರ್ಥ ಈಚಿನದು. ಮೊದಲಿಗೆ ಪರಲೋಕವನ್ನು ನಂಬುವವನು ಆಸ್ತಿಕ. ಈ ಲೋಕವಷ್ಟೇ ಇರುವುದು; ಇದನ್ನು ಮೀರಿ ಇನ್ನೇನು ಲೋಕವೂ ಇರದು ಎಂದು ಬಗೆಯುವವ ನಾಸ್ತಿಕ. ಪರಲೋಕವೆಂದರೆ ನಾವು ಈ ಲೋಕದಲ್ಲಿ ಮಾಡುವ ಕೆಲಸಗಳ ಫಲವಾಗಿ ಪುಣ್ಯ-ಪಾಪಗಳನ್ನು ಗಳಿಸಿ, ಅದರಿಂದ ಸಿದ್ಧವಾದ ಮತ್ತೊಂದು ನೆಲೆ. ಜನ್ಮಾಂತರದಲ್ಲಿ ನಂಬಿಕೆಯಿದ್ದವರಿಗೆ ಕರ್ಮ, ಪುನರ್ಜನ್ಮಗಳು ವಿಹಿತವೇ ತಾನೆ? ಆಸ್ತಿಕರಿಗೆ ಪುಣ್ಯ-ಪಾಪಗಳಲ್ಲಿ ವಿಶ್ವಾಸವುಂಟು. ಅದಕ್ಕಂಜಿಯೇ ನೇರವಾಗಿ ನಡೆದುಕೊಳ್ಳಬೇಕೆಂಬ ಬಯಕೆ ಅವರಿಗೆ. ಮಾಡುವ ಕೆಲಸದಿಂದ ಪಾಪ ಬಂದಿತೆಂಬ ಬೆದರಿಕೆಯಿದ್ದರೆ ಸರಿಯಾಗಿ ನಡೆದುಕೊಳ್ಳುತ್ತಾರೆ. ಆದರೆ ಈ ಲೋಕದ ಒತ್ತಾಸೆಗಳು ಅತಿಯಾಗಿದ್ದವರಿಗೆ ಪುಣ್ಯ-ಪಾಪಗಳ ಕಳವಳ ಅಷ್ಟಾಗಿ ಇರದು. ಆಸ್ತಿಕರಾದರೂ ಪಾಪಪರಿಹಾರಕ್ಕೆ ಪುಣ್ಯ ಸಂಪಾದನೆಗೆ ಸುಲಭವಾದ ದಾರಿಗಳನ್ನು ಹಿಡಿದರಾಯಿತು. ಪಾಪವೆಂದು ಅಂಜುವುದೇಕೆ? ಆಮೇಲೆ ದಾನ, ಧರ್ಮ, ಭಕ್ತಿ, ಪೂಜೆ, ಯಾತ್ರೆ ಮೊದಲಾದುವಿದ್ದೆ ಇವೆಯಲ್ಲ? ಪುಣ್ಯವೂ ಬಂದೀತು, ಪಾಪವೂ ಹೋದೀತು! ಆಸ್ತಿಕ ಕೆಟ್ಟ ಕೆಲಸ ಮಾಡುವುದಿಲ್ಲ ಎಂಬ ನಿಯಮವೇನಿಲ್ಲ. ಆದರೆ ಒಳ್ಳೆಯತನವೆನ್ನುವುದು ಮನುಷ್ಯರು ಸುಖವಾಗಿ, ನೆಮ್ಮದಿಯಿಂದ ಅನ್ಯೋನ್ಯವಾಗಿ ಬಾಳುವ ಬಗೆ. ಪುಣ್ಯದ ಆಸೆಯಿಂದಾಗಲಿ. ಪಾಪದ ಭೀತಿಯಿಂದಾಗಲಿ ಯಾರೂ ಒಳ್ಳೆಯವರಾಗುವುದಿಲ್ಲ. ಸ್ವಭಾವ, ಸಂಸ್ಕಾರ, ಆಲೋಚನೆ, ಪರೋಪಕಾರ ಬುದ್ಧಿ ಇವೆಲ್ಲ ಇಲ್ಲಿ ಕೆಲಸ ಮಾಡುತ್ತವೆ. ಸಮಾಜ ಚಿಂತನೆಯೂ ಒಂದು ವಿವರ; ಆಧ್ಯಾತ್ಮಪ್ರವೃತ್ತಿ ಇನ್ನೊಂದು ವಿವರ.

ನಾಸ್ತಿಕನಾಗಿದ್ದರೂ, ಎಂದರೆ ಪರಲೋಕದ ಗೊಡವೆ ಏನೂ ಇರದಿದ್ದರೂ, ಅವನು ಒಳ್ಳೆಯವನಾಗಿರಲು ಅಡ್ಡಿಯೇನು? ಅಥವಾ, ಆಸ್ತಿಕನಾಗಿದ್ದರೆ ಸಾಕು, ಒಳ್ಳೆಯವನಾಗಿರಬೇಕಾದುದಿಲ್ಲ ಎಂದು ಹೇಳಬಹುದೇ? ಆಸ್ತಿಕತೆಯ ಉದ್ದೇಶವೇ ಒಳ್ಳೆಯತನ; ಆದರೆ ಒಳ್ಳೆಯನತಕ್ಕೆ ಆಸ್ತಿಕತೆಯೊಂದೇ ದಾರಿಯಲ್ಲ.

ಧ್ಯಾನದ ಬಲ

ಒಣಹುಲ್ಲಿನ ಬಣವೆಯಲ್ಲಿ ಕಬ್ಬಿಣದ ಸೂಜಿ ಅಡಗಿದೆಯೆನ್ನಿ. ಅದನ್ನು ಹೊರತೆಗೆಯುವುದು ಹೇಗೆ? ಎರಡು ಉಪಾಯಗಳು ಇವೆ. ಒಂದು, ಹುಲ್ಲಿನ ಬಣವೆಗೆ ಬೆಂಕಿಯಿಡುವುದು, ಹುಲ್ಲೆಲ್ಲ ಉರಿದು ಬೂದಿಯಾಗುತ್ತದೆ. ಗಾಳಿ ಬೀಸಿದಾಗ ಬೂದಿಯೆಲ್ಲ ತೂರಿಹೋಗಿ ಸೂಜಿ ಕಾಣಿಸಿಕೊಳ್ಳುತ್ತದೆ. ಇನ್ನೊಂದು, ಬಣವೆಯ ಒಂದೊಂದು ಹುಲ್ಲುಕಡ್ಡಿಯನ್ನೂ ಎತ್ತಿ, ಮುಟ್ಟಿ ನೋಡಿ ಇನ್ನೊಂದೆಡೆ ಹಾಕುತ್ತ ಬಂದರೆ, ಕಡೆಗೆ ಗಟ್ಟಿಯಾದ ಸೂಜಿ ಸಿಗದೆ ಇರುತ್ತದೆಯೆ? ಎರಡು ಉಪಾಯಗಳೂ ಸರಿಯೆ. ಆದರೆ ಮೊದಲನೆಯದರಲ್ಲಿ ಅಷ್ಟು ಹುಲ್ಲು ದಂಡ ಆಯಿತಲ್ಲ? ಎರಡನೆಯದಕ್ಕೆ ಸಮಯ, ಶ್ರಮ ಎಷ್ಟು?

ಇನ್ನೊಂದು ಉಪಾಯವೇ ಇರದೆ?

ಬಲವುಳ್ಳ ಆಯಸ್ಕಾಂತಮಣಿಯನ್ನು ದಾರಕ್ಕೆ ಕಟ್ಟಿ ಬಣವೆಯ ಸುತ್ತ ಸಾವಧಾನವಾಗಿ ತಿರುಗಿಸಿದರೆ, ಸೂಜಿ ತಾನಾಗಿ ಹೊರಬಂದು ಅಯಸ್ಕಾಂತಮಣಿಗೆ ಅಂಟಿಕೊಳ್ಳುತ್ತದೆ. ನಮ್ಮ ಬದುಕಿನಲ್ಲಿ ನೆಮ್ಮದಿಯನ್ನು ಅರಸುವುದೂ ಹುಲ್ಲಿನ ರಾಶಿಯಲ್ಲಿ ಸೂಜಿಯನ್ನು ಹುಡುಕಿದಂತೆಯೇ. ಮೊದಲನೆಯದು ವಿರಕ್ತಿಯದು. ಒಣಹುಲ್ಲಿಗೆ ಬೆಂಕಿಯಿಟ್ಟಂತೆ, ಸಂಸಾರದ ವಿಷಯಗಳನ್ನೆಲ್ಲ ವೈರಾಗ್ಯದ ಕಾವಿನಿಂದ ಸುಟ್ಟು, ಪ್ರಪಂಚದಿಂದ ದೂರವಾಗಿ ನೆಮ್ಮದಿಯನ್ನು ಪಡೆದುಕೊಳ್ಳುವುದು. ಆದರೆ ಇದಕ್ಕೆ ಧೈರ್ಯ, ಸಾಹಸ ಅಗತ್ಯ. ಇಲ್ಲದಿದ್ದರೆ ಸಂಸಾರವೂ ಹೋಯಿತು, ನೆಮ್ಮದಿಯೂ ಸಿಗಲಿಲ್ಲ. ಎರಡನೆಯದು ವೇದಾಂತಿಗಳ ದಾರಿ. ಸಂಸಾರದ ಒಂದೊಂದು ವಿವರವನ್ನೂ ತತ್ತ್ವದ ಬೆಳಕಿನಲ್ಲಿ ವಿಚಾರ ಮಾಡಿ, ಪರಾಮರ್ಶೆ ಮಾಡಿ, ಜಳ್ಳಾದುದನ್ನು ಬಿಸುಟು ಗಟ್ಟಿಯಾದುದನ್ನು ಹಿಡಿದುಕೊಳ್ಳುವುದು. ಇದನ್ನೆ ನಿತ್ಯಾನಿತ್ಯ ವಸ್ತುವಿವೇಕವೆಂದು ಕರೆಯುತ್ತಾರೆ. ಮೇಲೆ ಹೇಳಿದ ಆಯಸ್ಕಾಂತಮಣಿಯನ್ನು ಬಳಸುವುದೆಂದರೆ ಧ್ಯಾನಮಾರ್ಗವನ್ನು ಹಿಡಿಯುವುದು. ಕಬ್ಬಿಣದ ಸೂಜಿಗೆ ಈ ಅಯಸ್ಕಾಂತಮಣಿಯ ಆಕರ್ಷಣೆ ಇರುತ್ತದೆಯಲ್ಲವೆ? ಹಾಗೆಯೆ ಮನುಷ್ಯನ ಮನಸ್ಸಿಗೂ ನೆಮ್ಮದಿಯ ಮೇಲೆ ಸಹಜ ಒಲವಿರುತ್ತದೆ.

ಅಯಸ್ಕಾಂತಮಣಿಗೆ ಕಬ್ಬಿಣವನ್ನು ತನ್ನೆಡೆಗೆ ಸೆಳೆದುಕೊಳ್ಳುವ ಸಾಮರ್ಥ್ಯ ವಿರುವಂತೆಯೇ ಧ್ಯಾನಕ್ಕೆ ಮನಸ್ಸನ್ನು ನೆಮ್ಮದಿಗೊಳಿಸುವ ಸಾಮರ್ಥ್ಯವಿರುತ್ತದೆ. ಧ್ಯಾನವೂ ನೆಮ್ಮದಿಯ ಸ್ವಭಾವವನ್ನು ಬಲಪಡಿಸುವ ದಾರಿಯೇ.

ಪ್ರಾರ್ಥನೆ

ದೇವರಿಗೆ ಹಲವರು ಪ್ರಾರ್ಥನೆ ಸಲ್ಲಿಸುತ್ತಾರೆ. ಪ್ರಾರ್ಥನೆಯನ್ನು ಬಾಯಿಮಾತಿನಿಂದಲೋ, ನಮಸ್ಕಾರದಿಂದಲೋ ಮಾಡಿದರೆ ಮುಗಿಯಿತು ಎಂಬ ಭಾವನೆಯೂ ಇದೆ.

ಆದರೆ ಪ್ರಾರ್ಥನೆಯ ಅರ್ಥವೇನು? ದೇವರು ದೊಡ್ಡವನು, ಸರ್ವಶಕ್ತ, ಸರ್ವಜ್ಞ, ಕರುಣಾಳು ಎಂಬ ಕಲ್ಪನೆಯೇನೋ ಪ್ರಾರ್ಥನೆಯ ಮೂಲವೇ. ಆದರೆ ಪ್ರಾರ್ಥನೆಯಲ್ಲಿ ಬಾಯಿಮಾತಿಗಿಂತ, ದೇಹದಂಡನೆಗಿಂತ ಮನಸ್ಸಿನ ಹದ ಮುಖ್ಯ. ಪ್ರಾರ್ಥನೆಯಲ್ಲಿ ಹೃದಯವನ್ನು ಮೇಲೆತ್ತಿ ದೇವರೆಡೆ ಒಯ್ಯಬೇಕು.

ಗೆರ್ಹಾರ್ಟ್ ಟೆರ್ಸ್ಟೀಗೆನ್ (1697-1769) ಎಂಬ ಸಂತನ ಪ್ರಕಾರ, ಪ್ರಾರ್ಥನೆಯಲ್ಲಿ ನಾವು ದೇವರನ್ನು ನೋಡುತ್ತೇವೆ ಮತ್ತು ದೇವರು ನಮ್ಮನ್ನು ನೋಡುವಂತೆ ಮಾಡುತ್ತೇವೆ.

ದೇವರನ್ನು ನಾವು ನೋಡುವುದು ನಮ್ಮ ಹೃದಯದೊಳಗೇ. ಅಲ್ಲಿ ದೇವರನ್ನು ಕಾಣುವಾಗ ಹೃದಯ ತೆರವಾಗಿರಬೇಕು. ಏನೊಂದು ಬಯಕೆಯಾಗಲಿ ಭಯವಾಗಲಿ ಇದ್ದುದಾದರೆ ಹೃದಯ ಮುದುಡಿಕೊಳ್ಳುತ್ತದೆ.

ನಮಗೆ ಅತ್ಯಂತ ಸಮೀಪದಲ್ಲಿರುವ ದೇವರನ್ನು ಕಾಣುವಾಗ ಅಂತಃಕರಣ ಶುದ್ಧವಾಗಿರಬೇಕು; ಬೇರೆಲ್ಲ ಭಾವನೆಗಳನ್ನೂ ಅಲ್ಲಿಂದ ಹೊರದೂಡಬೇಕು.

ಮತ್ತೆ ದೇವರು ನಮ್ಮನ್ನು ಕಾಣಬೇಕೆಂದರೆ, ನಾವು ದೇವರಿಗಾಗಿ ಕೊಡಲು ಏನೆಲ್ಲ ಭಾವನೆಗಳನ್ನು ತುಂಬಿಕೊಂಡಿರುವೆವೋ ಅವನ್ನು ದೇವರೆದುರು ನಿರ್ವಂಚನೆಯಿಂದ ಇರಿಸಬೇಕು.

ಪ್ರಾರ್ಥನೆಯಿಂದ ದೇವರನ್ನು ಹುಡುಕಬೇಕಾದುದಿಲ್ಲ. ಬರಮಾಡಿಕೊಳ್ಳಬೇಕಾಗಿಲ್ಲ. ಎಡೆಬಿಡದೆ ಒಳಗೇ ಇರುವ ದೇವರ ಹತ್ತಿರ ಸರಿದು ಎದುರಿಗೇ ನಿಲ್ಲುವುದು ಪ್ರಾರ್ಥನೆಯೆನಿಸಿಕೊಳ್ಳುತ್ತದೆ.

ನಾವು ದೇವರ ಬಳಿ ಒಂದು ಹೆಜ್ಜೆಯಿಟ್ಟು ಮುಂದುವರಿದರೆ, ದೇವರು ಎರಡು ಹೆಜ್ಜೆಯಿಟ್ಟು ನಮ್ಮ ಬಳಿ ಬರುತ್ತಾನೆ.

ತತ್ತ್ವದ ಅಂಜಿಕೆ

ತತ್ತ್ವಶಾಸ್ತ್ರವೆಂಬ ವಿಭಾಗವಿದೆಯಲ್ಲವೆ?

ಅದನ್ನು ಕಂಡು ಹೆದರುವವರಿದ್ದಾರೆ; ಅದಕ್ಕೆ ಹೇಸುವವರೂ ಇದ್ದಾರೆ. ಎರಡೂ ಇಲ್ಲದಿದ್ದರೂ ಅದರತ್ತ ಕಣ್ಣಾಡಿಸದೆ, ಅದರ ಗೊಡವೆ ನಮಗೇಕೆ ಎಂದು ತೆಪ್ಪಗಿರುವವರೇ ಬಹುಮಂದಿ. ವಯಸ್ಸಾದ ಮೇಲೆ, ನಿವೃತ್ತರಾದ ಮೇಲೆ, ಕೆಲಸ ಮಾಡಲಾಗದಿದ್ದಾಗ ಅದರ ಅಗತ್ಯವಿದ್ದೀತು; ಈಗಲೆ ತಲೆಕೆಡಿಸಿಕೊಳ್ಳಲೇಕೆ? ಆದರೆ ನಮ್ಮ ದಿನನಿತ್ಯದ ವ್ಯವಹಾರದಲ್ಲಿ ತತ್ತ್ವಶಾಸ್ತ್ರದ ವಿವರವಿರದು ಎನ್ನುವುದು ಸರಿಯಲ್ಲ. ನಮಗೆ ತಿಳಿಯದಂತೆಯೇ ತತ್ತ್ವಚಿಂತನೆ ನಡೆದೇ ಇರುತ್ತದೆ. ನಿದರ್ಶನಕ್ಕೆ 'ನನಗೆ ಇಂದು ತಲೆ ನೋಯುತ್ತಿರುವುದು ದಿಟ' ಎಂದು ಹೇಳಿದಿರೆನ್ನಿ. ಆ ಮಾತನ್ನು ನೀವೇ ವಿಶ್ಲೇಷಿದಾಗ ಈ ವಿವರಗಳು ಸ್ಪಷ್ಟವಾಗುತ್ತವೆ- ತಲೆನೋವು ಎಂಬುದು ಇರುವ ಸಂಗತಿ; ಅದು ಸತ್ಯ, ತತ್ತ್ವ. ಇರುವುದನ್ನು ಕಂಡುಕೊಳ್ಳಬಹುದು ಎನ್ನುವುದು ಎರಡನೆಯದು. ತಲೆನೋವು ಅರಿವಿಗೆ ಬಂದಾಗಲಲ್ಲವೆ ಆ ಮಾತು? ತತ್ತ್ವವು ಜ್ಞೇಯ ಎಂದಾಯಿತು. ತಲೆನೋವನ್ನು ಅರಿತುಕೊಳ್ಳುವ ಜೀವವೊಂದಿದೆ ಎನ್ನುವುದು, ಮೂರನೆಯದು; ತತ್ತ್ವವು ಜ್ಞಾತೃವನ್ನಪೇಕ್ಷಿಸುತ್ತದೆ ಎಂದಾಯಿತು. ಅದನ್ನೆ ತತ್ತ್ವಶಾಸ್ತ್ರದಲ್ಲಿ ಜೀವ ಎನ್ನುವರು. ಈ ಜೀವದಿಂದ ಬೇರೆಯಾಗಿ ದೇಹವಿದೆ; ಆದರೆ ಏನೋ ಒಂದು ನಂಟೂ ಅವೆರಡರ ನಡುವೆ ಇದೆ ಎಂಬುದು ನಾಲ್ಕನೆಯದು. ದೇಹಕ್ಕೇ ತಲೆಯಿರುವುದು, ತಲೆಯಲ್ಲೇ ನೋವಿರುವುದು, ನೋವನ್ನು ಅನುಭವಿಸುವುದು ಜೀವವೇ. ತಲೆನೋವಿದ್ದಾಗಲೂ ತಲೆಯಿರುತ್ತದೆ, ಇಲ್ಲದಾಗಲೂ ತಲೆಯಿರುತ್ತದೆ. ನೋವು ಇದೆಯೆಂದಾಗಲಿ ಇಲ್ಲವೆಂದಾಗಲೀ ಅರಿತುಕೊಳ್ಳುವುದು ಜೀವವೇ. ತಲೆನೋವು ಇದ್ದಾಗ ಅದನ್ನು ಅರಿತುಕೊಳ್ಳುವುದೂ ಇರುವ ಸಂಗತಿಯೇ ತಾನೆ? ಇದ್ದುದನ್ನು ಅರಿತುಕೊಳ್ಳಲಾರದೆಹೋದರೆ ಅದಕ್ಕೊಂದು ನಿಮಿತ್ತವಿರಬೇಕು. ಇದ್ದುದನ್ನು ತಿಳಿದುಕೊಳ್ಳುವುದು ಜ್ಞಾನ. ಇದನ್ನು ಇಂದ್ರಿಯಸಂವೇದನೆಯೆನ್ನಿ, ಮಾನಸಿಕ ವ್ಯಾಪಾರವೆನ್ನಿ. ಅದು ಏನಾದರೂ ತಿಳಿಯುವ ಜೀವದಿಂದ ಬೇರೆಯಾದದ್ದು, ತಿಳಿವಳಿಕೆಯ ವಿಷಯವಾದ ತಲೆಯಿಂದ ಬೇರೆಯಾದದ್ದು.

ಈಗ ನಿಮ್ಮ ತಲೆನೋವಿನಿಂದ ಜ್ಞಾತೃ, ಜ್ಞೇಯ, ಜ್ಞಾನ ಎಂಬ ಮೂರು ವಿವರಗಳು ಸ್ಪಷ್ಟವಾದುವಲ್ಲವೆ? ತತ್ತ್ವಶಾಸ್ತ್ರದ ವಿಚಾರವೆಲ್ಲ ಈ ಮೂರನ್ನು ಕುರಿತೇ ನಡೆಯುವುದು. ಅದಕ್ಕೆ ಅಂಜಬೇಕಾದ ಕಾರಣವೇನು?

ಈಗೇತಕೆ ಧರ್ಮಶ್ರವಣ?

ಅಯ್ಯೊ, ನಾವಿನ್ನೂ ಎಳೆಯ ವಯಸ್ಸಿನವರು, ಇಷ್ಟು ಬೇಗ ಧರ್ಮ, ವೇದಾಂತ ಇವೆಲ್ಲ ಯಾಕೆ? ವಯಸ್ಸಾಗಲಿ, ವೈರಾಗ್ಯ ಬರಲಿ, ಆಗ ನೋಡಿಕೊಳ್ಳೋಣ, ಈ ಅಭಿಪ್ರಾಯ ಹಲವರದ್ದು. ಇದರಲ್ಲಿ ತಪ್ಪೇನು ಇಲ್ಲ.

ಬದುಕಿನ ನೋವು-ನಲಿವುಗಳನ್ನು, ಸಿಹಿ-ಕಹಿಗಳನ್ನು, ಸೋಲು-ಗೆಲುವುಗಳನ್ನು ಅನುಭವಿಸದೆ ಬುದ್ಧಿ ಬೆಳೆಯುತ್ತದೆಯೆ? ವಯಸ್ಸಾದ ಮಾತ್ರಕ್ಕೆ ಬುದ್ಧಿ ಬಂದಿತು ಎಂದೇನು ನಿಯಮವಿಲ್ಲ!

ವಯಸ್ಸಾಗುವುದು ಪ್ರಕೃತಿಯ ವ್ಯವಸ್ಥೆ. ಗಡಿಯಾರ, ಕ್ಯಾಲೆಂಡರ್ ಇವನ್ನು ನೋಡಿದರೆ ತಿಳಿಯುತ್ತದೆ; ಮೈಯಲ್ಲಾಗುವ ಮಾರ್ಪಾಟುಗಳೂ ತಿಳಿಸುತ್ತವೆ.

ಬುದ್ಧಿ ಇವನ್ನೆಲ್ಲ ಅನುಸರಿಸಿ ಮುಂದರಿಯುತ್ತದೆ ಎನ್ನುವ ಹಾಗಿಲ್ಲ. ಬುದ್ಧಿ ತಾನಾಗಿಯೇ ಬೆಳೆಯುತ್ತದೆ ಎನ್ನುವಂತೆಯೂ ಇಲ್ಲ. ವಿದ್ಯೆಯೇನೋ ಬುದ್ಧಿ ಬೆಳೆಯಲು ನೆರವಾಗುತ್ತದೆ.

ಆದರೆ ಶಾಲೆಯಲ್ಲಿ ಕಲಿತದ್ದೇ ವಿದ್ಯೆಯಲ್ಲ. ಮನೆಯೊಳಗೆ ಹೊರಗೆ ಕಲಿಯುವುದೂ ವಿದ್ಯೆಯೆ. ವಿದ್ಯೆಯ ಮುಖ್ಯಭಾಗವೇ ಅದು.

ಓರಗೆಯವರಿಂದ ಹಿರಿಯರಿಂದ ಓದಿನಿಂದ ಕಲಿತದ್ದನ್ನು ತಾವೇ ವಿಚಾರಮಾಡಿ ಅರಗಿಸಿಕೊಂಡರೆ ಅದೀಗ ವಿದ್ಯೆ. ಧರ್ಮವೆನ್ನುವುದೂ ವಿದ್ಯೆಯ ಅಂಗವೇ. ಬದುಕಿನ ತಾತ್ಪರ್ಯವನ್ನೂ ಸ್ವಾರಸ್ಯವನ್ನೂ ಅರಿತುಕೊಳ್ಳುವುದೇ ಧರ್ಮ. ಇದೇ ಬದುಕಿಗೆ ಊರುಗೋಲಾಗಬೇಕು.

ಅದಕ್ಕೆ ಮುಪ್ಪಡರುವವರೆಗೆ ಕಾಯಬೇಕಾದುದಿಲ್ಲ. ಮುಪ್ಪಿನಲ್ಲಿ ಅದು ದಕ್ಕುವುದೂ ಇಲ್ಲವೆನ್ನಿ. ಧರ್ಮವೆಂದರೆ ವೈರಾಗ್ಯವೆಂದೇನು ಅರ್ಥವಲ್ಲ. ಬದುಕಿನ ನೋವು-ನಲಿವುಗಳ ಆಸರೆಯಾಗುವುದು ಧರ್ಮ.

ಬದುಕಿಗೆ ಬೀಳ್ಕೊಡುಗೆ ಕೊಡುವ ಮುನ್ನ ಮಾತ್ರ ಧರ್ಮದ ಗೀಳಿರುವುದರಿಂದಲೆ ಧರ್ಮದ ಪ್ರಯೋಜನ ಅಷ್ಟಾಗಿ ಕಾಣುತ್ತಿಲ್ಲ.

ಕಾಮದಲ್ಲಿ ಸ್ವಾತಂತ್ರ್ಯ

ಕಾಮವೆಂದರೆ ಸಾಮಾನ್ಯವಾದ ಅರ್ಥ ಬಯಕೆ. ಯಾವುದರ ಬಯಕೆಯೂ ಕಾಮವೇ. ಹಣವನ್ನು ಬಯಸಿದರೆ ಅರ್ಥಕಾಮ; ಧರ್ಮವನ್ನು ಬಯಸಿದವನು ಧರ್ಮಕಾಮ; ಇನ್ನು ಮೋಕ್ಷದ ಬಯಕೆಯೂ ಬಯಕೆಯೇ ತಾನೆ? ಅದನ್ನು ಬಯಸುವುದು ಮೋಕ್ಷಕಾಮ.

ಹೀಗೆ ನಾಲ್ಕು ಪುರುಷಾರ್ಥಗಳು ಮೂಲದಲ್ಲಿ ಕಾಮಗಳೇ.

ಹೀಗೆಂದು ವಾತ್ಸ್ಯಾಯನ ಕಾಮಸೂತ್ರದ ಸೂಚನೆ. ಕಾಮವೊಂದೇ ದಿಟವಾಗಿ ಪುರುಷಾರ್ಥವೆಂದರೂ ತಡೆಯುತ್ತದೆ ಎನ್ನುವುದು ಧ್ವನಿ. ವಿಶೇಷವಾದ ಅರ್ಥದಲ್ಲಿ ಹೆಣ್ಣು-ಗಂಡುಗಳು ಕೂಡಿಕೊಳ್ಳುವ ಬಯಕೆ ಕಾಮವೆನಿಸಿಕೊಳ್ಳುತ್ತದೆ; ಲೈಂಗಿಕ ಪ್ರವೃತ್ತಿಗೆ ಎಡೆ ಮಾಡಿಕೊಡುವ ಬಯಕೆ, ಕಾಮಸೂತ್ರದಲ್ಲಿ ಮುಖ್ಯವಾಗಿ ವಿಚಾರಕ್ಕೆ ಬರುವುದು ಇದೇ ಎನ್ನಿ. ವಾತ್ಸ್ಯಾಯನನ ಪ್ರಕಾರ ಮನುಷ್ಯರಲ್ಲಿ ಕಾಮ ಉಳಿದ ಪ್ರಾಣಿಗಳ ಕಾಮಕ್ಕಿಂತ ಒಂದು ದೃಷ್ಟಿಯಲ್ಲಿ ಹೆಚ್ಚು ಸ್ವತಂತ್ರ; ಮತ್ತು ಇನ್ನೊಂದು ದೃಷ್ಟಿಯಲ್ಲಿ ಪ್ರಾಣಿಗಳಲ್ಲಿನ ಕಾಮವೇ ಹೆಚ್ಚು ಸ್ವತಂತ್ರ. ಪ್ರಾಣಿವರ್ಗದಲ್ಲಿ ಕೂಡಿಕೊಳ್ಳುವ ಋತು ನಿಯತವಾದುದು; ಉಳಿದ ವೇಳೆಯಲ್ಲಿ ಅವು ಕಾಮಕ್ಕೆ ವಶವಾಗುವುದಿಲ್ಲ. ಈ ನಿರ್ಬಂಧ ಮನುಷ್ಯರಿಗಿರದು. ವರ್ಷದ ಎಲ್ಲ ಋತುಗಳೂ ಅವನ ಕಾಮಕ್ಕೆ ತಕ್ಕುವೇ. ಕೂಡಿಕೆಗೆಂದು ಪ್ರತ್ಯೇಕವಾದ ಋತುವೇನಿರದು. ಆದರೆ ಪ್ರಾಣಿವರ್ಗದಲ್ಲಿ ಕೂಡಿಕೆಗೆ ಗಂಡು-ಹೆಣ್ಣಾದರೆ ಸಾಕು; ಮತ್ತಾವ ನಿರ್ಬಂಧವೂ ಇಲ್ಲ. ಮನುಷ್ಯರಲ್ಲಾದರೋ ರೂಪ, ಗುಣ, ಕುಲ, ಗೋತ್ರ, ಭಾಷೆ, ವಯಸ್ಸು, ಆರ್ಥಿಕ ಸ್ಥಿತಿ, ಓದು, ಉದ್ಯೋಗ ಎಲ್ಲವೂ ಕೆಲಸ ಮಾಡುತ್ತವೆ. ಕಾಮುಕತೆಯಷ್ಟೇ ಇದ್ದರೆ ಸಾಲದು. ಹೀಗೆ ಪ್ರಾಣಿವರ್ಗದ ಕಾಮ ಮನುಷ್ಯರಲ್ಲಿನ ಕಾಮ ಎರಡೂ ಮೂಲಭೂತ ವಾಗಿ ಕಾಮವೇ ಆದರೂ, ಅವುಗಳಲ್ಲಿ ಅಂತರವಿದೆ. ವಾತ್ಸ್ಯಾಯನರು ಹೇಳುವುದು ಇದನ್ನು. ಕಾಮಕ್ಕೆ ಅರ್ಥದ ಅಗತ್ಯವಿದೆ. ಧರ್ಮದ ಕಟ್ಟುಪಾಡಿದೆ. ಹೀಗೆ ಪುರುಷಾರ್ಥ ಗಳ ತ್ರಿವರ್ಗವೂ ಒಂದು ನೆಲೆಯಲ್ಲಿ ಸೇರಬೇಕು. ಮೋಕ್ಷದ ಮಾತನ್ನು ಬಿಡಿ.

ಮನುಷ್ಯರ ಕಾಮ ಅರ್ಥಕ್ಕೆ ಅಡ್ಡಿಯಾಗಬಾರದು, ಧರ್ಮವನ್ನು ಕೈಬಿಡಬಾರದು. ಹಾಗೆಯೇ ಅರ್ಥವಾಗಲಿ ಧರ್ಮವಾಗಲಿ ಕಾಮದ ಕರೆಯನ್ನು ನಿರಾಕರಿಸಬಾರದು.

'ಸುಖವಿಲ್ಲದೆ ಮನುಷ್ಯ ಇರಬಾರದು' ಎಂದು ಶಾಸ್ತ್ರವೇ ಹೇಳುತ್ತದೆ. ಕಾಮವಿರದೆ ಅದೆಂಥ ಬದುಕು? ಆದರೆ ಧರ್ಮಸಮ್ಮತವಾದ ಕಾಮವಲ್ಲವಾದರೆ ಅದು ಪಶು ಸಹಜವಾದ ಕಾಮವಾದೀತು.

ಮೂರ್ತಿಪೂಜೆ

ಮೂರ್ತಿಪೂಜೆ ಮಾಡುವವರಿದ್ದಾರೆ; ಮೂರ್ತಿಪೂಜೆ ಮಾಡದವರಿದ್ದಾರೆ. ಮಾಡುವವರೂ ಮಾಡದವರೂ ಹಟ ಹಿಡಿದರೆ ಅವರ ನಡುವೆ ಹಗರಣವೇನು ತಪ್ಪಿದ್ದಲ್ಲ.

ಆದರೆ ಹಾಗೆ ಹಟ ಹಿಡಿಯಬೇಕಾದ ಕಾರಣವೇನು ಕಾಣುವುದಿಲ್ಲ. ದೇವರಿಗೆ ಪ್ರತಿರೂಪ ಅಥವಾ ಪ್ರತಿಮೆಯೆಂಬುದಿರದು ಎಂದು ವೇದವೆ ಹೇಳಿದೆ. ಕಣ್ಣಿಗೆ ಕಾಣುವ ಪದಾರ್ಥ ದೇವರೆಂದು ಬಗೆಯದಿರು; ಯಾವ ಶಕ್ತಿಯಿಂದ ಕಣ್ಣು ನೋಡಬಲ್ಲುದೊ ಅದೀಗ ದೇವರು ಎಂದು ಉಪನಿಷತ್ತು ಹೇಳಿತು. ಮನುಷ್ಯ ಮಾಡಿದ ಕಲ್ಲು ಗೊಂಬೆಯೊ ತಾಮ್ರದ ಪುತ್ಥಳಿಯೊ ಚಿತ್ರಪಟವೊ ಅದೆ ದೇವರು ಎಂದು ಯಾವ ಮೂರ್ತಿಪೂಜಕನೂ ಭಾವಿಸುವುದಿಲ್ಲ, ದೇವರ ಒಂದು ಪ್ರತೀಕವಷ್ಟೆ ಅದು ಎಂದು ಎಣಿಕೆ. ಎಲ್ಲೆಲ್ಲಿಯೂ ಇರುವ ದೇವರು ಈ ಪ್ರತಿಮೆಯಲ್ಲೂ ಇರಲೊಲ್ಲನೇಕೆ? ಎಲ್ಲೆಲ್ಲಿಯೂ ದೇವರಿದ್ದಾನೆಂದು ಕಣ್ಣಿಗೆ ಕಾಣುವ, ಕೈಗೆ ಸಿಗುವ ಯಾವುದೆ ವಸ್ತುವನ್ನು ಪೂಜೆ ಮಾಡಲು ಮನಸ್ಸು ಒಪ್ಪುವುದೆ? ಪೂಜೆಗೊಳ್ಳುವುದು ಗೊಂಬೆಯೆ ಆದರೂ, ಅದರಲ್ಲೊಂದು ಪೂಜ್ಯಭಾವನೆ ಇರಬೇಕಾದದ್ದು ಮುಖ್ಯ. ಪೂಜ್ಯಭಾವನೆಯಿದ್ದಿತಾದರೆ ಯಾವ ವಸ್ತುವಾದರೂ ಸರಿಯೆ.

ಹಲವು ದೊಡ್ಡ ದೊಡ್ಡ ಗುಡಿಗಳಲ್ಲಿ ಗರ್ಭಗುಡಿಯಲ್ಲಿ ಪೂಜೆಗೊಳ್ಳುವ ದೇವರು ಬರಿಯ ಬಂಡೆಯೊ, ಕಲ್ಲುಗುಂಡೊ, ಸಣ್ಣ ಕಂಬವೊ ಆಗಿರುವುದುಂಟು. ವಸ್ತು ಏನಾದರಿರಲಿ, ನಮ್ಮ ಪಾಲಿಗೆ ಅದು ದೇವರೆ ತಾನೆ? ಮತ್ತೆ, ಮೂರ್ತಿಪೂಜಕರಿಗೂ ದೇವರು ನಿರಾಕಾರ, ನಿರ್ಗುಣ, ಅಪ್ರಮೇಯ ಎಂಬ ಅರಿವಿಲ್ಲದೆ ಇಲ್ಲ. ತಮ್ಮೆದುರಿಗಿರುವ ಗೊಂಬೆಯೆ ದೇವರು, ದೇವರಿರುವುದು ಅಲ್ಲಿಯಷ್ಟೆ ಎಂದೇನು ಅವರು ಭಾವಿಸುವುದಿಲ್ಲ. ಆದರೆ ಮೂರ್ತಿಪೂಜೆಯ ಪ್ರಯೋಜನವಿರುವುದು ಮನಸ್ಸನ್ನು ಒಂದೆಡೆ ನಿಲ್ಲಿಸಲು ನೆರವಾಗುವುದರಲ್ಲಿ. ಅದು ಆಯಿತೆಂದರೆ ಪ್ರತಿಮೆಯ ಅಗತ್ಯವೇನು ಇರಲಾರದು. ಅದೊಂದು ಮೆಟ್ಟಿಲು ಅಷ್ಟೆ. ಹಲವರು ಮೂರ್ತಿ ಪೂಜೆಯ ಚೌಕಟ್ಟಿನಿಂದ ಮೇಲೆದ್ದು ತಾತ್ತ್ವಿಕವಾದ ಉಪಾಸನೆಗಳನ್ನು ಮುಂದರಿಸುತ್ತಾರೆ. ಉಳಿದವರು ಅಷ್ಟು ಸೌಲಭ್ಯ, ಸಾಮರ್ಥ್ಯ ಇರದವರು ಮೂರ್ತಿಪೂಜೆಯಲ್ಲೆ ತೊಡಗುತ್ತಾರೆನ್ನಿ.

ಮೇಲಾಗಿ, ದೇವರ ಕಲ್ಪನೆಯಾಗಲಿ ಆರಾಧನೆಯ ವಿಧಾನವಾಗಲಿ ವ್ಯಕ್ತಿಗೆ ಬಿಟ್ಟಿದ್ದು.

ಓಡಾಡುವ ಗುಡಿ

ದೇವರಿಗೊಂದು ರೂಪಕೊಟ್ಟು, ಪೂಜೆ ಮಾಡಲನುಕೂಲವಾಗಿ ಗುಡಿಯನ್ನು ಕಟ್ಟುವರು, ಗುಡಿಯಲ್ಲಿ ದೇವರಿರುವನೆಂದು ನಂಬುವರು. ಇದೇನು ತಪ್ಪಲ್ಲ. ಎಲ್ಲೆಲ್ಲೂ ಇರುವ ದೇವರು ಗುಡಿಯಲ್ಲಿರಬಾರದೇಕೆ? ಎಲ್ಲ ಆಕಾರಗಳನ್ನೂ ತಳೆದಿರುವ ದೇವರು ನಾವು ಕೊಟ್ಟ ರೂಪದಲ್ಲಿರಬಾರದೇಕೆ?

ಆದರೆ ದೇವರಿಗೆ ಇದೊಂದೇ ರೂಪವೆಂದಾಗಲಿ, ಗುಡಿಯಲ್ಲಷ್ಟೇ ದೇವರಿರುವುದು ಎಂದಾಗಲಿ ಹಟಮಾಡುವುದು ತಪ್ಪು. ದೇವರ ಯಾವುದೇ ರೂಪವಾಗಲಿ, ಯಾವುದೇ ಪಂಥದ ಎಂಥ ಗುಡಿಯೇ ಆಗಲಿ ಅದು ನಮ್ಮ ಅನುಕೂಲಕ್ಕೆ ನಾವು ಮಾಡಿಕೊಂಡದ್ದು ಎಂಬ ವಿವೇಕವಿರಬೇಕು.

ನಮ್ಮ ಪ್ರಾಚೀನರು ಒಂದು ಕಿವಿಮಾತನ್ನು ಹೇಳಿದರು-

ಮನುಷ್ಯನ ದೇಹವೇ ಒಂದು ಗುಡಿ; ಹೃದಯದಲ್ಲಿ ಆಳವಾಗಿರುವ ಅರಿವೇ ದೇವರು.

ಕಲ್ಲು ಮಣ್ಣುಗಳಿಂದ ಕಟ್ಟಿದ ಗುಡಿಯಾಗಲಿ, ಕಲ್ಲು ಮರಗಳಿಂದ ಮಾಡಿದ ಮೂರ್ತಿಯಾಗಲಿ ದಿಟವಾಗಿ ಆಧ್ಯಾತ್ಮಿಕ ಸಾಮಗ್ರಿಗಳಲ್ಲ. ಅವು ಮನಸ್ಸನ್ನು ನಿಲ್ಲಿಸಲು ನೆರವಾಗುವುದೇನೋ ನಿಜ. ಅವು ಅಗತ್ಯವೂ ಹೌದು. ಆದರೆ ದೇವರ ಹಂಬಲ ಹೆಚ್ಚಿ ಹಾತೊರೆಯುವವನಿಗೆ ಇಂಥ ಗುಡಿಯಲ್ಲಿನ ಮೂರ್ತಿಯಿಂದ ಸಮಾಧಾನ ಇರದು. ತನ್ನ ಹೃದಯದಲ್ಲೇ ದೇವರ ಇರವನ್ನು ಕಂಡುಕೊಳ್ಳುವುದು ಅವನು ಹಿಡಿಯುವ ದಾರಿ. ಇಂಥವನ ಮೈಯೇ ನಡೆದಾಡುವ ಗುಡಿಯೆಂದು ಒಂದು ಸುಭಾಷಿತ ಹೇಳುತ್ತದೆ;

'ಜಂಗಮಶ್ರೀವಿಮಾನಾನಿ ಹೃದಯಾನಿ ಮನೀಷಿಣಃ'

ಅವನ ನಡೆ-ನುಡಿ, ಆಚಾರ-ವಿಚಾರಗಳೆಲ್ಲವೂ ದೇವರ ಇರವನ್ನು ತೋರಿಸುತ್ತವೆ. ಅಂಥವರ ಸಂಪರ್ಕದಲ್ಲಿ ಸೇರಿದವರಿಗೆ ದೇವರ ಸಾನ್ನಿಧ್ಯವು ಗುಡಿಯಲ್ಲಾಗುವುದಕ್ಕಿಂತ ಸ್ಪಷ್ಟವಾಗಿ ಆಗುತ್ತದೆ.

ಹೊರಗಣ ಗುಡಿಯ ಬಾಗಿಲು ತೆರೆಯುತ್ತಾರೆ, ಮುಚ್ಚುತ್ತಾರೆ. ಒಳಗಿನ ಗುಡಿಗಾದರೆ ಯಾವಾಗಲೂ ತೆರೆದ ಬಾಗಿಲೇ!

ಭಕ್ತನು ಒಳಗೆ ಹೋಗುವುದು ಹೊರಗೆ ಬರುವುದು ಎಂಬುದೂ ಇರದು; ಯಾವಾಗಲೂ ಅವನು ದೇವರ ಎದುರೇ ಇರುವವನು ತಾನೆ?

ಪೂಜೆಗೆ ಅಲಂಕಾರವೇಕೆ?

ಗುಡಿಯ ಸ್ವಾರಸ್ಯ, ತಾತ್ಪರ್ಯ ಇರುವುದು ಅಲ್ಲಿರಬಹುದಾದ ದೇವರಲ್ಲಿ ಅಲ್ಲವೆ?

"ದೇವರಿಲ್ಲದ ಗುಡಿಯು ಹಾಳು ಬಿದ್ದಂಗಡಿಯು"

ಗರ್ಭಗುಡಿಯಲ್ಲಿ ದೇವರ ವಿಗ್ರಹವೂ ಇರುವುದೆನ್ನಿ, ಅದರಲ್ಲಿ ದೇವರ ಸಾನ್ನಿಧ್ಯ ಇರಬೇಕಲ್ಲವೆ? ಇಲ್ಲವಾದರೆ ಬರಿಯ ಕಲ್ಲಿನ ಗೊಂಬೆ! ಸಾನ್ನಿಧ್ಯ ಬರುವುದು ಹೇಗೆ? ಶಿಲ್ಪಿಯ ಜಾಣತನದಿಂದ, ಅರ್ಚಕನ ತಪಸ್ಸಿನಿಂದ, ಪೂಜೆಯ ಅಚ್ಚುಕಟ್ಟಿನಿಂದ. ಪೂಜೆಗೊಳ್ಳಬೇಕಾದ ಪುತ್ಥಳಿಯನ್ನು ಶಿಲ್ಪಿ ಸುಂದರವಾಗಿ ಕಡೆಯಬೇಕೆಂದು ಆಗಮದ ವಿಧಿ. ಮೂರ್ತಿ ಚೆಲುವಾಗಿದ್ದರೆ ಕಣ್ಣು ಅದರ ಮೇಲೆ ನಿಲ್ಲುತ್ತದೆ; ಮನಸ್ಸು ಅದರಲ್ಲಿ ಮುಳುಗುತ್ತದೆ. ಇದು ಸ್ವಲ್ಪ ಕಾಲವೇ ಆದರೂ, ಅದರಿಂದ ಪ್ರಯೋಜನವಿದೆ. ಕಣ್ಮನಗಳಿಗೆ ಚೆಲುವಿನ ಅರಿವಾದರೆ ಅದು ಧ್ಯಾನವೇ. ಈ ಕಾರಣದಿಂದಲೇ ಪೂಜೆಗೊಳ್ಳುವ ಮೂರ್ತಿಯನ್ನು ಸಿದ್ಧಮಾಡಲು ಶಿಲ್ಪಶಾಸ್ತ್ರದಲ್ಲಿ ಹಲವಾರು ನಿಯಮಗಳು; ತಾಳಮಾನ, ಮುದ್ರೆ, ಭಂಗಿ, ಆಯುಧ, ಆಭರಣ ಮೊದಲಾದವು. ಶಿಲ್ಪಿಯು ಮೂರ್ತಿಯನ್ನು ಕಡೆಯುವಾಗ ಎಲ್ಲ ಆಭರಣಗಳನ್ನೂ ಸೇರಿಸಿಯೇ ಇರುತ್ತಾನೆ. ಕಿರೀಟ, ಹಾರ, ಕಿವಿಯೋಲೆ, ಕಂಕಣ, ಕಟಿಬಂಧ, ಕಾಲುಸರ ಹೀಗೆ ಎಲ್ಲ ಆಭರಣಗಳನ್ನೂ ಕಲ್ಲಿನಲ್ಲೇ ಕಡೆದು ದಿವ್ಯಮಂಗಳ ವಿಗ್ರಹವನ್ನಾಗಿ ಮಾಡುತ್ತಾನೆ.

ಹೀಗಿರುವಾಗ ಅದನ್ನು ಮತ್ತೆ ಅಲಂಕರಿಸುವ ಅಗತ್ಯವೆಲ್ಲಿ? ಭಕ್ತರ ಸಲುವಾಗಿ ಅರ್ಚಕರು ಬೇರೆ ಕಿರೀಟ, ಹಾರ, ಕಂಕಣ, ಕವಚ, ವಸ್ತ್ರ ಮೊದಲಾದುವನ್ನೆಲ್ಲ ಮೂರ್ತಿಯ ಮೇಲೆ ಹೇರುವುದು ವಾಡಿಕೆ. ಇದರಿಂದ ಮೂರ್ತಿಯ ಮೂಲರೂಪ ದಲ್ಲಿನ ಚೆಲುವು ಮರೆಯಾಗಿ, ಶಿಲ್ಪಿಯ ಜಾಣತನ ವ್ಯರ್ಥವಾಗುತ್ತದೆ. ಯಾವ ಆಗಮದಲ್ಲಾಗಲಿ ಹೀಗೆ ಮಾಡಬೇಕೆಂದು ಸೂಚನೆಯಿರದು.

ಆದರೆ ಅರ್ಚಕನ ನಿಷ್ಠೆ ಮೂರ್ತಿಗೆ ಅಲಂಕಾರ ಮಾಡವುದರಲ್ಲಿ ಇರಬಾರದು; ಅರ್ಚನೆಯ ಅಚ್ಚುಕಟ್ಟಿನಲ್ಲಿರಬೇಕು. ಅಲಂಕಾರದಿಂದ ಆಧ್ಯಾತ್ಮಿಕ ಕಳೆಯೇನು ಮೂಡಿಬರುವುದಿಲ್ಲ. ಶಿಲ್ಪಿಯ ಕೈಕೆಲಸವೇ ಎಲ್ಲರಿಗೂ ತೋರುವಂತೆ ಮೂರ್ತಿಯನ್ನು ಹಾಗೆಯೇ ಬಿಟ್ಟರೆ ಒಳಿತು.

ಮರದ ದೇವರು

ಶಿಲ್ಪಿಯಾದವನು ದೇವತಾಬಿಂಬಗಳನ್ನು ಕಂಡರಿಸಲೆಂದು ಮರಗಳನ್ನು ಆರಿಸಿಕೊಳ್ಳುವಾಗ ಕೆಲವೊಂದು ನಿಯಮಗಳನ್ನು ಆಗಮಗ್ರಂಥಗಳು ತಿಳಿಸುತ್ತವೆ. ದಾರಿಯ ಬದಿಯಲ್ಲಿ, ಕೊಳಗಳ ದಡದಲ್ಲಿ, ನದಿಯ ಕಟ್ಟೆಯ ಮೇಲೆ, ಊರ ನಡುವೆ ನಾಲ್ಕು ದಾರಿಗಳು ಕಲೆಯುವಲ್ಲಿ, ಸುಡುಗಾಡಿನಲ್ಲಿ ಇರುವ ಮರಗಳನ್ನು ಕಡಿಯಬಾರದಂತೆ.

ಪಕ್ಷಿಗಳ ಗೂಡು ಇರುವ ಮರವಾಗಲಿ, ಪ್ರಾಣಿಗಳಿಗೆ ಆಸರೆಯಾಗಿರುವ ಮರವಾಗಲಿ, ದನಕರುಗಳ ಮೇವಿಗೂ, ನೆರಳಿಗೂ ಒದಗುವ ಮರವಾಗಲಿ ದಾರಿಹೋಕರು ದಣಿವಾರಿಸಿಕೊಳ್ಳುವ ಮರವಾಗಲಿ ದೇವತಾಮೂರ್ತಿಗೆ ತಕ್ಕದ್ದಲ್ಲವಂತೆ. ಆ ಮರಗಳೇ ದೇವರು! ಎಳೆಯ ಮರಗಳನ್ನಾಗಲಿ, ಹೂವು-ಹಣ್ಣುಗಳಿಂದ ತುಂಬಿರುವ ಮರಗಳನ್ನಾಗಲಿ, ಬಳ್ಳಿಗಳಿಗೆ ಆಸರೆಯಾಗಿರುವ ಮರಗಳನ್ನಾಗಲಿ ಕಡಿಯಬಾರದಂತೆ. ಮರಗಳನ್ನು ಆರಿಸಿಕೊಳ್ಳುವಾಗ ಹೀಗೆ ಹಲವಾರು ವಿಧಿ-ನಿಷೇಧಗಳನ್ನು ಶಾಸ್ತ್ರ ಹೇಳಿರುವುದರ ಉದ್ದೇಶವೇನು? ಉದ್ದೇಶ ಸ್ಪಷ್ಟವಾಗಿಯೆ ಇದೆ. ದೇವತಾ ಮೂರ್ತಿಯ ಅಗತ್ಯ ಪೂಜೆ ಮಾಡುವ ಮಂದಿಗಿದೆ. ಆದರೆ ಜೀವಂತವಾದ ಮರ ಎಲ್ಲರಿಗೂ ನೆರವನ್ನು ನೀಡುವಂಥದು. ಅದನ್ನು ಕಡಿದು, ಅದರ ದಿಮ್ಮಿಯಲ್ಲಿ ದೇವರ ಬಿಂಬವನ್ನು ಕಡೆದರೆ ದೇವರಿಗೇನು ಸಂತೋಷವಿರದು. ಧರ್ಮದ ಹರವಿನಲ್ಲಿ ಗಿಡಮರಗಳ ಆರೈಕೆಯೂ ಸೇರುತ್ತದೆ. ಮೂರ್ತಿಪೂಜೆಯ ಸಂದರ್ಭದಲ್ಲಿ, ನಿಸರ್ಗಪ್ರೀತಿ ಬಲಿಯಾಗಬಾರದು. ದೇವಾಲಯದ ನೆರೆಯಲ್ಲಿ ಉದ್ಯಾನವಿರಬೇಕೆಂದು ಆಗಮ ಗ್ರಂಥಗಳು ಹೇಳುತ್ತವೆ; ಊರ ಸುತ್ತ ದೊಡ್ಡ ದೊಡ್ಡ ಮರಗಳಿರಬೇಕೆಂದೂ ವಿಧಿಸುತ್ತವೆ.

ದೇವತಾಮೂರ್ತಿಯನ್ನು ಕಂಡರಿಸಲು ಮರವೊಂದನ್ನು ಆರಿಸಿಕೊಂಡಮೇಲೂ, ಶಿಲ್ಪಿಯೂ ಯಜಮಾನನೂ ಪುರೋಹಿತರೂ ಕೂಡಿ ಆ ಮರಕ್ಕೆ ಪೂಜೆ ಮಾಡಿ, ಕ್ಷಮೆಯನ್ನು ಯಾಚಿಸಬೇಕೆಂದು ವಿಧಿಯಿದೆ. ಈ ಸಂದರ್ಭದಲ್ಲಿ ಹೇಳುವ ಮಂತ್ರ "ನನ್ನ ಸ್ವಂತ ಉಪಯೋಗಕ್ಕೆಂದು ನಿನ್ನನ್ನು ಕಡಿಯುತ್ತಿಲ್ಲ; ನಿನಗೆ ಗಾಸಿ ಮಾಡಬೇಕೆಂಬ ಬಯಕೆಯೂ ನನಗಿಲ್ಲ, ದೇವತೆಯ ಬಿಂಬ ನಿನ್ನಿಂದ ಒದಗಿಬರುವುದೆಂಬ ಒಂದೇ ಕಾರಣಕ್ಕಾಗಿ ನಿನ್ನ ಮೇಲೆ ಕೊಡಲಿಯ ಪೆಟ್ಟನ್ನು ಹಾಕುತ್ತಿದ್ದೇನೆ, ಮನ್ನಿಸು" ಎಂಬ ಭಾವನೆಯನ್ನು ಒಡಮೂಡಿಸಿಕೊಳ್ಳುತ್ತದೆ.

ರಾಧಾಕೃಷ್ಣ

ರಾಧೆಯೊಂದಿಗೆ ಕೃಷ್ಣನನ್ನು ಸೇರಿಸುವುದು ವಾಡಿಕೆಯಷ್ಟೆ? ಇದೊಂದು ಸೋಜಿಗ.

ರಾಧೆ ಯಾರು? ಮಹಾಭಾರತದಲ್ಲಿಯಾಗಲಿ, ಭಾಗವತದಲ್ಲಿಯಾಗಲಿ, ಹರಿವಂಶದಲ್ಲಾಗಲಿ, ವಿಷ್ಣುಪುರಾಣದಲ್ಲಾಗಲಿ ರಾಧೆಯ ಉಲ್ಲೇಖವೇ ಇಲ್ಲ. ಕೃಷ್ಣನ ಹೆಂಡತಿ ರುಕ್ಮಿಣಿ; ಸತ್ಯಭಾಮೆ ಮೊದಲಾದ ಇತರ ಏಳುಮಂದಿ ಹೆಂಗಳೆಯರೂ ಕಾಣಿಸಿಕೊಳ್ಳುತ್ತಾರೆನ್ನಿ. ಈ ರಾಧೆ ಎಲ್ಲಿಂದ ಬಂದಳು? ರಾಧೆಯ ಪ್ರಸ್ತಾಪ ಮೊಟ್ಟ ಮೊದಲಿಗೆ ಕಾಣಿಸಿಕೊಳ್ಳುವುದು ಬ್ರಹ್ಮವೈವರ್ತವೆಂಬ ಪುರಾಣದಲ್ಲಿ. ಇದು ಅಂಥ ಪ್ರಾಚೀನವಾದ ಗ್ರಂಥವೂ ಅಲ್ಲವೆನ್ನಿ.

ಈ ಪುರಾಣದ ಪ್ರಕಾರ ಗೋಕುಲದಲ್ಲಿ ವೃಷಭಾನು-ಕಲಾವತಿ ಎಂಬುವರ ಮಗಳಾಗಿ ಹುಟ್ಟಿದ ರಾಧೆ, ಆಗಲೆ ಮದುವೆಯಾಗಿದ್ದವಳು, ಕೃಷ್ಣನ ಪ್ರೇಯಸಿ ಯಾದಳು. ಕೃಷ್ಣನ ಒಂದು ಶಕ್ತಿಯೇ ಎನ್ನಿಸಿದಳು; ಕೃಷ್ಣನ ಮನಸ್ಸಾದಳು.

ಈ ಕತೆಗೆ ಕಾಲಿಲ್ಲ. ಹಿನ್ನೆಲೆಯಿಲ್ಲ. ಆದರೂ ರಾಧಾ-ಕೃಷ್ಣರ ಪ್ರಣಯವು ಶೃಂಗಾರಕ್ಕೊಂದು ವಸ್ತುವಾಯಿತು. ಇವೆಲ್ಲ ಕ್ರಿಸ್ತಾಬ್ದ ಹನ್ನೆರಡು-ಹದಿಮೂರನೆ ಶತಮಾನದನಂತರ ಮೈದಳೆದ ಕೃತಿಗಳು. ಆದರೆ ಇದರಿಂದಾಗಿ ಕೃಷ್ಣನ ಚರಿತ್ರೆಗೂ ಚಾರಿತ್ರ್ಯಕ್ಕೂ ಒಂದು ಕಳಂಕವನ್ನು ಅಂಟಿಸಿದಂತಾಯಿತಲ್ಲವೆ? ಮಹಾಭಾರತದಲ್ಲಿ ಬರುವ ಕೃಷ್ಣ ಧೀರೋದಾತ್ತ ನಾಯಕ; ಸಚ್ಚಾರಿತ್ರ್ಯವುಳ್ಳವನು. ಭಗವದ್ಗೀತೆಯ ಜಗದ್ಗುರುವೆಂದಾದವನಲ್ಲಿ ಗಾಂಭೀರ್ಯ, ಲೋಕೋತ್ತರ ವೃತ್ತಗಳಿಲ್ಲದಿದ್ದರೆ ಹೇಗೆ? ಭಾಗವತದಲ್ಲೇನೋ ಕೃಷ್ಣ ಸ್ಪಷ್ಟವಾಗಿ ದೇವರೇ. ಅತಿಮಾನುಷವಾದ ವೃತ್ತಗಳೇ ಇವೆ. ಆದರೂ ಗಾಂಭೀರ್ಯಕ್ಕೇನು ಕುಂದಿಲ್ಲ. ವಿಷ್ಣುಪುರಾಣದಲ್ಲೂ ಹರಿವಂಶ ದಲ್ಲೂ ಇದೇ ಬಗೆಯ ಒಕ್ಕಣೆಯನ್ನು ಕಾಣಬಹುದು. ಇಲ್ಲೆಲ್ಲ ರಾಧೆಯ ಸಂಪರ್ಕವಿರದಿದ್ದರೂ ಕೃಷ್ಣನ ಪರಿಪೂರ್ಣತೆಗೇನು ಅಡ್ಡಿಯಿರದು. ಆದರೆ ಬ್ರಹ್ಮವೈವರ್ತಪುರಾಣದಲ್ಲಿ ಕಾಣಿಸಿಕೊಳ್ಳುವ ರಾಧೆ ಅರಸಿಕವೆನ್ನಬಹುದಾದ ಕಲ್ಪನೆಯ ಕೂಸು; ಆಧ್ಯಾತ್ಮಿಕತೆಯ ಆರೋಪವೇನೋ ಇದೆ, ದಿಟ. ಆದರೆ ನೀತಿಯ ನೆಲೆಗಟ್ಟು ಶಿಥಿಲ.

ಅದು ಹೇಗೆ ರಾಧೆಯನ್ನು ಭಕ್ತಿಯ ಸಂಪ್ರದಾಯ ಗ್ರಹಿಸಿತೋ ಒಳಮಾಡಿ ಕೊಂಡಿತೋ ಅದೊಂದು ಒಗಟು.

ಮಹಾವೀರ

ವೀರನೆಂದರೆ ಯಾರು? ಕಾಳಗದಲ್ಲಿ ಎದುರಾಳಿಗಳಲ್ಲಿ ಸದೆಬಡಿದು, ಹಗೆಗಳ ಪಾಳೆಯದ ಮೆಲೆ ದಾಳಿಯಿಕ್ಕಿ ಗೆದ್ದವನು ವೀರನಲ್ಲವೆ? ಎದುರಾಗಿ ಬರುವ ಅಡೆ-ತಡೆಗಳನ್ನೆಲ್ಲ ತೊಲಗಿಸಿ ಮುನ್ನುಗ್ಗಿ ನಡೆಯುವವನೂ ವೀರನೇ. ನೂರು ಜನರನ್ನು ಗಾಯಗೊಳಿಸಿ ಅವರೆಲ್ಲರ ಕೋಟೆಕೊತ್ತಲಗಳನ್ನು ವಶಪಡಿಸಿಕೊಂಡು ಮೆರೆಯುವವನು ವೀರನೆ.

ಜೈನರ ಇಪ್ಪತ್ತನಾಲ್ಕನೆಯ ತೀರ್ಥಂಕರನಾದ ವರ್ಧಮಾನಸ್ವಾಮಿಯನ್ನು ಮಹಾವೀರನೆಂದೇ ಕರೆಯುತ್ತಾರೆ. ಆದರೆ ಅವನೇನು ರಣರಂಗದಲ್ಲಿ ಶತ್ರುಸೇನೆಯನ್ನು ಸೋಲಿಸಿದವನಲ್ಲ; ಸಾವಿರಾರು ಮಂದಿ ಎದುರಾಳಿಗಳನ್ನು ಸಾಯಿಸಿದವನಲ್ಲ. ಅವನ ವೀರಾವೇಶವನ್ನಾಗಲಿ, ಶೌರ್ಯ-ಕ್ರೌರ್ಯಗಳನ್ನಾಗಲಿ, ಸಾಹಸಗಳನ್ನಾಗಲಿ ಸೂಚಿಸುವ ಪ್ರಸಂಗಗಳೇನು ಇರವು. ಮತ್ತೆ ಅವನು ಮಹಾವೀರನೆಂದೇಕೆ? ದಿಟವಾದ ವೀರ ಕಾದಾಡುವುದು ಹೊರಗಣ ಹಗೆಗಳೊಂದಿಗೆ ಎನ್ನಲಾಗದು. ನಮ್ಮೊಳಗೇ ಅಡಗಿದ್ದು ಒಂದೊಂದು ಗಳಿಗೆಯಲ್ಲೂ ನಮ್ಮ ಶೀಲ-ಪ್ರಜ್ಞೆ-ಸಮಾಧಿಗಳನ್ನೂ, ಸದಾಚಾರವನ್ನೂ ಗಾಸಿಗೊಳಿಸುವ ಶತ್ರುಗಳಿರುವುದನ್ನು ನಾವು ಅರಿಯೆವು.

ಅರಿ-ಷಡ್ವರ್ಗ ಎಂಬ ಮಾತಿದೆಯಲ್ಲವೆ? ಮದ, ಮೋಹ, ಲೋಭ, ಮಾತ್ಸರ್ಯ, ಕಾಮ, ಕ್ರೋಧ ಇವೇ ನಮಗೆ ದಿಟವಾದ ಶತ್ರುಗಳು! ಹೊರಗೆ ಸಾವಿರ ಮಂದಿಯನ್ನು ಎದುರಿಸುವವನು ತನ್ನ ಒಳಗೇ ಇರುವ ಈ ಆರು ಎದುರಾಳಿಗಳನ್ನು ಗೆದ್ದುಕೊಳ್ಳದಿದ್ದರೆ ಅವನೆಂಥ ವೀರ? ವರ್ಧಮಾನ-ಸ್ವಾಮಿ ತನ್ನನ್ನೇ ತಾನು ಗೆದ್ದುಕೊಂಡನಾಗಿ ಮಹಾವೀರ. ಒಡಲೊಳಗಿನ ಹಗೆಗಳನ್ನೆಲ್ಲ ಹತ್ತಿಕ್ಕಿ, ಕೊಳೆಗಳನ್ನೆಲ್ಲ ತೊಲಗಿಸಿಕೊಂಡು, ಎಡರು - ತೊಡರುಗಳನ್ನೆಲ್ಲ ತೊಡೆದು ಹಾಕಿ ಬದುಕಿನ ಹಗರಣದಲ್ಲಿ ಗೆಲುವನ್ನು ಸಾಧಿಸಿಕೊಂಡವನು ಮಹಾವೀರನಲ್ಲವೆ?

ನಿನ್ನನ್ನು ನೀನು ಗೆದ್ದುಕೋ, ಅದೀಗ ನಿಜವಾದ ಗೆಲವು ; ಜಗತ್ತನ್ನೆಲ್ಲ ಗೆದ್ದು ನಿನ್ನೊಳಗೇ ನೀನು ಸೋತರೆ ಅದೇನು ಚೆನ್ನು ? ಎಂದು ಮಹಾವೀರನ ಕರೆ.

ಅರ್ಹಂತರು

ಜೈನಧರ್ಮದಲ್ಲಿ ತೀರ್ಥಂಕರರ ಕಲ್ಪನೆಯಿದೆಯಷ್ಟೆ: ಅವರಲ್ಲಿ ಕಡೆಯವನು ವರ್ಧಮಾನ-ಮಹಾವೀರ. ಭಾರತದೇಶದ ಮಹಾಪುರುಷರಲ್ಲಿ ಅಗ್ರಪಂಕ್ತಿಗೆ ಸೇರಿದವನು.

ಇವನನ್ನು ವೀರ, ಮಹಾವೀರ ಎಂದೇ ನಿರ್ದೇಶಿಸುವುದು ವಾಡಿಕೆ.

ಇದರ ಔಚಿತ್ಯವೇನು? ಅವನೇನು ಯುದ್ಧ ಮಾಡಿದಂತೆ ಎಲ್ಲೂ ಉಲ್ಲೇಖವಿಲ್ಲ; ಯಾರನ್ನೂ ಕೊಲ್ಲಲಿಲ್ಲ. ಎಲ್ಲರ ಕಣ್ಣು ಕುಕ್ಕುವಂತೆ ಯಾವ ಲೌಕಿಕ ಸಾಹಸವನ್ನೂ ಕೈಗೊಳ್ಳಲಿಲ್ಲ. ಅಷ್ಟಲ್ಲದೆ, ಹೇಳಿ ಕೇಳಿ ಅವನು ಅಹಿಂಸಾವಾದಿ, ತ್ಯಾಗಶೀಲ, ಯಾವೊಂದು ಜೀವಿಯನ್ನೂ ಹಿಂಸೆಮಾಡದವನು. ಹಾಗಾದರೆ ಅವನು ಮಹಾವೀರ ನಾದದ್ದು ಹೇಗೆ? ಅದಕ್ಕೆ ಉತ್ತರ ಅವನ ಬದುಕಿನಲ್ಲೇ ಇದೆ, ಅವನ ಮಾತಿನಲ್ಲೆ ಸಿಗುತ್ತದೆ. ಸಮರದಲ್ಲಿ ನೂರಾರು ಎದುರಾಳಿಗಳನ್ನು ಗಾಸಿಪಡಿಸಿ ಕೊಲ್ಲುವುದು ಸುಲಭ. ತನ್ನಲ್ಲಿರುವ ದೋಷಗಳನ್ನು ಸದೆ ಬಡಿಯುವುದು, ತನ್ನೊಳಗೇ ಇರುವ ಕಾಮ, ಕ್ರೋಧ, ಮದ, ಮಾತ್ಸರ್ಯ ಮೊದಲಾದ ಶತ್ರುಗಳನ್ನು ಎದುರಿಸುವುದು ಕಷ್ಟ. ತನ್ನನ್ನು ತಾನು ಗೆದ್ದುಕೊಂಡವನೇ ದಿಟವಾಗಿ ವೀರ. ಲೋಕವನ್ನೆಲ್ಲ ಜಯಿಸಿ, ತಮ್ಮನ್ನು ತಾವು ಗೆಲ್ಲಲಾರದೆ ಹೋದರೆ ಎಂಥ ವೀರರು ಅವರು? ಯುದ್ಧದಲ್ಲಿ ಕಾದಾಡುವವರು ಬಹಳ ಮಂದಿ ಇದ್ದಾರೆ. ದೇಶಗಳನ್ನು ಆಕ್ರಮಿಸಿಕೊಳ್ಳುವವರು ಇತಿಹಾಸದುದ್ದಕ್ಕೂ ಸಿಗುತ್ತಾರೆ; ಸಾಹಸ ಕಾರ್ಯಗಳನ್ನು ಮಾಡಿ ಸೈ ಎನಿಸಿಕೊಂಡವರು ಸಾವಿರಾರು ಮಂದಿ. ಆದರೆ ತನ್ನ ಮೇಲೆ ತಾನು ಹೋರಾಟ ನಡೆಸಿ, ತನ್ನ ಒಳಗೆ ಅಡಗಿಕೊಂಡಿರುವ ಬಲಿಷ್ಠ ಶತ್ರುಗಳಾದ ಬಯಕೆ, ಮುನಿಸು, ದುರಾಸೆ, ಜಿಪುಣತನ, ಹಗೆತನ ಇತ್ಯಾದಿಗಳ ಹುಟ್ಟಡಗಿಸಿ, ಅವನ್ನು ಮೆಟ್ಟಿ ನಿಲ್ಲುವ ವೀರ ವರ್ಧಮಾನ; ಅರಿ-ಹಂತ, ಶತ್ರುಗಳನ್ನು ಕೊಂದವನು. ಬೇರೆಯವರೊಂದಿಗೆ ಕಾದಾಟವೇಕೆ? ನಿನ್ನನ್ನು ಹಾಳು ಮಾಡುವ ಹಗೆಗಳು ನಿನ್ನೊಳಗೇ ಇದ್ದಾರೆ. ನಿನ್ನೊಂದಿಗೇ ನಿನ್ನ ಸೆಣಸಾಟ ನಡೆಯಲಿ. ನಿನ್ನನ್ನು ನೀನು ಗೆದ್ದುಕೋ. ಇದು ಮಹಾವೀರ ಎಲ್ಲರಿಗೂ ಮಾಡಿದ ಉಪದೇಶ.

ಹಾಗೆಂದೇ ಇಂಥ ತೀರ್ಥಂಕರರನ್ನು 'ಜಿನ'ರೆಂದೂ ಕರೆಯುವುದು. ತಮ್ಮನ್ನು ತಾವು ಜಯಿಸಿಕೊಂಡವರು ಎಂದರ್ಥ. ಹೀಗೆ ಮಾಡಿದ್ದರಿಂದಲೇ ಅವರು ಅರ್ಹಂತರು; ಲೋಕ ಪೂಜ್ಯರು.

ಇರುಳಲ್ಲಿ ದೀಪ

ಒಬ್ಬ ಯೋಗಿಗೆ ಕತ್ತಲಲ್ಲೂ ಕಾಣುವುದೆಂದು ಜನ ಹೇಳುತ್ತಿದ್ದರು. ಆದರೆ ಇರುಳಲ್ಲಿ ದೀಪವೊಂದನ್ನು ಕೈಯಲ್ಲಿ ಹಿಡಿದು ಹೋಗುತ್ತಿದ್ದ. ಇದನ್ನು ಕಂಡವನೊಬ್ಬ ಅವನನ್ನು ತಡೆದು 'ಅಯ್ಯಾ ಯೋಗಿ, ಕತ್ತಲಲ್ಲೂ ನಿನಗೆ ಕಾಣುವುದೆಂದು ಹೇಳುತ್ತಾರೆ. ಹಾಗಾದರೆ ಈ ದೀಪವನ್ನೇಕೆ ಹಿಡಿದು ನಡೆದಾಡುತ್ತಿದ್ದೀ?' ಎಂದು ಕೇಳಿದ.

ಯೋಗಿ ನಸುನಗತ್ತ ಹೇಳಿದ - 'ಅಯ್ಯಾ ದಣಿ, ಈ ದೀಪ ನನ್ನ ಸಲುವಾಗಿ ಎಂದುಕೊಂಡೆಯಾ? ದಾರಿಯಲ್ಲಿ ಬರುವ ಇತರರಿಗೆ ನಾನು ಕಾಣಿಸದಿದ್ದರೆ ನನಗೆ ಡಿಕ್ಕಿ ಹೊಡೆದಾರಲ್ಲ? ನನಗೇನೋ ಇರುಳು, ಹಗಲು ಒಂದೆ. ಆದರೂ ಇತರರಿಗೆ ಇರುಳಿನಲ್ಲಿ ಏನೂ ಕಾಣಿಸದಲ್ಲ?' ಎಂದು.

ಯೋಗಿಗೆ ಕತ್ತಲಲ್ಲಿ ಏನು ಕಾಣಿಸುತ್ತಿದ್ದಿತೋ ಇಲ್ಲವೊ; ಆದರೆ ನಡೆದಾಡುವಾಗ ಇತರರಿಗೆ ತಾನು ಕಾಣಿಸಬೇಕಾಗುದುದು ಮುಖ್ಯ. ಇಲ್ಲವಾದರೆ ತನಗೇ ತೊಂದರೆಯಲ್ಲವೆ? ಯೋಗಿಗಳಲ್ಲದವರಿಗೆ ದಾರಿ ಕಾಣಲು ದೀಪ ಬೇಕು. ಕತ್ತಲೆಯಲ್ಲಿದ್ದವರಿಗೆ, ಕತ್ತಲೆಯಲ್ಲೇ ನಡೆದಾಡುತ್ತಿರುವವರಿಗೆ ಕೈದೀಪವಿರದಿದ್ದರೆ, ತೊಂದರೆ. ಹಗಲಲ್ಲಾದರೆ ಸೂರ್ಯನ ಬೆಳಕಿರುತ್ತದೆ. ಆದರೆ ಇರುಳಲ್ಲಿ ದೀಪ ಬೇಕಾಗುತ್ತದೆ. ಯೋಗಿಯಾದರೆ ಹಗಲು ಕಂಡದ್ದನೆಲ್ಲ ಇರುಳು ಗುರುತಿಟ್ಟುಕೊಳ್ಳುತ್ತಾನೆ; ಅವನು ದಾರಿಯಲ್ಲಿ ನಡೆಯಲು ದೀಪ ಬೇಕಾಗಿಲ್ಲ. ಆದರೆ ಅವನ ಎದುರಾಗಿ ಬಂದವರಿಗೆ ಇವನು ಕಾಣಬೇಕಲ್ಲ? ಬೇರೆಯವರು ಕತ್ತಲಲ್ಲಿರುವವರು; ಸಂಸಾರದ ಯಥಾರ್ಥವನ್ನು ತಿಳಿಯದವರು, ನಿತ್ಯಾನಿತ್ಯ ವಿವೇಕವಿಲ್ಲದವರು. ಅವರು ಯೋಗಿಯನ್ನು ಕಂಡುಕೊಳ್ಳುವುದು ಹೇಗೆ? ಯೋಗಿಯ ನೆರವಿಲ್ಲದೆ ಅಧ್ಯಾತ್ಮದತ್ತ ಹಾದಿಯನ್ನು ಹಿಡಿಯುವುದು ಹೇಗೆ ? ಹಾಗೆ ಹಿಡಿಯದಿದ್ದರೆ ಅವರ ಇರುಳು ಬೆಳಗುವುದೇ ಇಲ್ಲವಲ್ಲ? ಯೋಗಿ ತನ್ನನ್ನು ಬೇರೆಯವರೆದುರು ತೋರಿಸಿಕೊಳ್ಳುವ ಉದ್ದೇಶ ತನ್ನ ಹಿರಿಮೆಯನ್ನು ಸಾರುವುದಲ್ಲ; ಅಧ್ಯಾತ್ಮದಲ್ಲಿ ಆಸಕ್ತಿಯಿದ್ದವರು ಯೋಗದ ದಾರಿ ಹಿಡಿಯುವಂತಾಗಲೆಂಬ ಉಪಕಾರ ಬುದ್ಧಿ. ಯೋಗಿಯಾದವನು ಲೋಕವನ್ನು ಬಿಟ್ಟು, ಕಾಡಿಗೆ ಹೋಗಿ ಒಂಟಿಯಾಗಿರಬೇಕೆಂದು ಭಾವಿಸಲೇಕೆ? ಜನರ ನಡುವೆ ಇದ್ದು ಜನರಿಗೆ ನೆರವಾಗಬೇಕಾದ ಕರ್ತವ್ಯವೂ ಇದೆಯಲ್ಲ?

ಆದರೆ ಹಗಲಲ್ಲೂ ದೀಪ ಹಿಡಿಸಿಕೊಳ್ಳುವ ಢೋಂಗಿ ಯೋಗಿಗಳೂ ಇರುತ್ತಾರೆನ್ನಿ. ಅವರ ಮಾತು ಬೇರೆ.

ಪುಣ್ಯ - ಪ್ರಯೋಜನ

ಗಂಗೆಯೊಳಗೆ ಮೀಯುವಾಗ ತಂಬಿಗೆಯ ಚಿಂತೆ ಇರಬಹುದೆ?

ಶೌಚಾದಿಗಳಿಗೆ ತಂಬಿಗೆ ಬೇಕು; ನದಿಯಲ್ಲಿ ಮುಳುಗಿ ಸ್ನಾನ ಮಾಡುವಾಗ ತಂಬಿಗೆಯೇತಕ್ಕೆ? ತಂಬಿಗೆಯನ್ನು ದಡದ ಮೇಲಿಟ್ಟು ನದಿಗೆ ಇಳಿದು ತಾನೆ ಮೀಯಬೇಕು? ಇವನು ಮುಳುಗು ಹಾಕುವಾಗ ತಂಬಿಗೆಯನ್ನು ಯಾರಾದರೂ ಕದ್ದೊಯ್ದರೆ ಮಾಡುವುದೇನು? ತಂಬಿಗೆ ದಡದ ಮೇಲಿದ್ದರೂ ಅದರ ಚಿಂತೆ ಇವನ ಮನಸ್ಸನ್ನು ಬಿಡದು. ಕೈಯಲ್ಲಿರದ ತಂಬಿಗೆ ಎದೆಯಾಳದಲ್ಲಿರಬಹುದು. ಗಂಗಾಸ್ನಾನ ಎಲ್ಲ ಸ್ನಾನಗಳಂತಲ್ಲ; ಪಾಪಹಾರಿ, ಪುಣ್ಯಪ್ರದ ಎಂಬ ನಂಬಿಕೆಯಿದೆ. ಅದಕ್ಕೆ ಸಂಕಲ್ಪವುಂಟು, ವಿಧಿಗಳುಂಟು. ಭಕ್ತಿಯಿಂದ, ಆದರದಿಂದ ಮೀಯಬೇಕೆಂಬ ಬಯಕೆ ಎಲ್ಲರಿಗೆ. ಹೀಗೆ ಮೀಯಬೇಕೆಂದರೆ ಗಂಗೆಯನ್ನೇ ಏಕಾಗ್ರಚಿತ್ತದಿಂದ ಭಾವಿಸುತ್ತಿರಬೇಕು. ಬೇರೆ ಯಾವ ಯೋಚನೆಗೆಡೆ ಮಾಡಿಕೊಡಬಾರದಲ್ಲವೆ?

ಆದರೆ ನಮ್ಮ ತಂಬಿಗೆಯ ಬಂಟನಿಗೆ ಇರುವುದೊಂದೇ ತಂಬಿಗೆ; ಅದು ಕಳುವಾದರೆ ಕೈ ಮುರಿದ ಹಾಗೆ. ಯಾವ ಧೈರ್ಯದಿಂದ ದಡದ ಮೇಲಿರಿಸಿ ಬರುವುದು? ಗಂಗೆಯೇನೋ ಪವಿತ್ರಳೇ, ಆದರೆ ತಂಬಿಗೆಯ ಅಗತ್ಯವೂ ಇದೆಯಲ್ಲ? ಪರವೇನೋ ಸರಿಯೆ; ಬಂದರೆ ಯಾರು ಬೇಡವೆನ್ನುತ್ತಾರೆ? ಆದರೆ ಪರವನ್ನರಸುತ್ತ ಇಹವೇ ಹೋದರೆ ಹೇಗೆ? ಇಹದೊಂದಿಗೆ ಪರವೂ ಇದ್ದರೆ ಒಳಿತು. ಮೋಕ್ಷವೇನೋ ಬೇಕು; ಆದರೆ ಸಂಪತ್ತಿನ ಬಯಕೆ ಬಿಡಬಹುದೆ? ಮೋಕ್ಷ ಬರುವುದೋ ಇಲ್ಲವೋ ತಿಳಿಯದು. ಬಂದರೂ ಅದು ಹೇಗಿರುವುದೋ ಬಲ್ಲವರಾರು? ಸಂಪತ್ತಿನ ಅಗತ್ಯ, ಸ್ವಾರಸ್ಯವಂತೂ ನಮಗೆ ತಿಳಿದದ್ದೇ. ಕೈಯಲ್ಲಿರುವುದನ್ನು ಬಿಟ್ಟು ಕಾಣದ್ದಕ್ಕೆ ಹಂಬಲಿಸುವುದು ಜಾಣತನವೆ? ಗಂಗಾಸ್ನಾನದಿಂದ ಪುಣ್ಯ; ತಂಬಿಗೆಯಿಂದ ಪ್ರಯೋಜನ. ಪುಣ್ಯಕ್ಕೂ ಪ್ರಯೋಜನಕ್ಕೂ ಪೈಪೋಟಿ ಬಿದ್ದರೆ ಗೆಲ್ಲುವುದು ಪ್ರಯೋಜನವೇ, ಪುಣ್ಯವಲ್ಲ.

ಹರಿಕಥೆಗೆ ಹೋದವರು ಚಪ್ಪಲಿಯ ಚಿಂತೆಯನ್ನು ಬಿಟ್ಟಾರೆ? ಗುಡಿಗೆ ಹೋಗುವಾಗ ಕಿಸೆಯನ್ನು ಜೋಪಾನ ಮಾಡಿಕೊಳ್ಳದೆ ಇರುವುದೆ? ಸರಕಾರದ ಸೇವೆ ಮಾಡುವಾಗ ಸ್ವಂತ ಲಾಭವನ್ನು ಮರೆಯುತ್ತಾರೆಯೆ? ಸಮಾಜದ ಉದ್ಧಾರಕ್ಕೆಂದು ಹೊರಟವರು ತಮ್ಮ ಏಳ್ಗೆಯನ್ನು ಕೈ ಬಿಡುತ್ತಾರೆಯೆ?

ಮಂಜಿನ ಮನೆ

'ಮಂಜಿನ ಶಿವಾಲಯಕ್ಕೆ ಬಿಸಿಲ ಕಳಶವುಂಟೆ?'— ಅಲ್ಲಮಪ್ರಭುಗಳು ಈ ಮಾತನ್ನು ಹೇಳಿದ ಸಂದರ್ಭವೇನಾದರೂ ಇರಲಿ. ಅದರ ಸ್ವಾರಸ್ಯ ಹಲವು ಸಂದರ್ಭಗಳಿಗೆ ಹೊಂದಿಕೊಳ್ಳುತ್ತದೆ.

ನೀರು ಚಳಿಯಲ್ಲಿ ಹೆಪ್ಪುಗಟ್ಟಿದರೆ ಮಂಜು; ಅದರಿಂದ ಗೂಡನ್ನು ಕಟ್ಟುವುದೇನು ಕಷ್ಟವಲ್ಲ; ಆದರೆ ಕಟ್ಟಿದ ಗೂಡು ಶಿವಾಲಯವಾಗಬೇಕೆಂಬ ಬಯಕೆಯಿದ್ದರೆ, ಎಚ್ಚರಿಕೆಯಿರಬೇಕು. ಆಲಯಕ್ಕೊಂದು ಕಲಶವಿರಬೇಕು. ಕಲಶವೂ ಮಂಜಿನದೇ ಆದರೆ ಚಿಂತೆಯಿಲ್ಲ. ಆದರೆ ಕಲಶ ಬಿಸಿಲಿನದಾದರೆ ಆಲಯ ಉಳಿಯಲಾರದು. ಪೂಜೆ, ವ್ರತ, ನೇಮ, ಉಪವಾಸ, ತೀರ್ಥಯಾತ್ರೆ ಮೊದಲಾದುವೆಲ್ಲ ನಮ್ಮ ಲೌಕಿಕ ಪ್ರವೃತ್ತಿಯ ಮಂಜಿನ ಉದ್ಯಮಗಳೇ. ಕಷ್ಟದ ಕಾವು ಅದಕ್ಕೆ ತಾಕುವವರೆಗೆ ಅವು ಸುರಕ್ಷಿತವಾಗಿರುತ್ತವೆ. ಸಂಕಟದ ಸೂರ್ಯ ಅದರ ಮೇಲೆ ಒಮ್ಮೆ ಎರಗಿದನೆಂದರೆ, ನಾವು ಕಷ್ಟಪಟ್ಟು ಕಟ್ಟಿಕೊಂಡ ಧರ್ಮದ ನೆಲೆ ಕರಗಿ ನೀರಾಗುತ್ತದೆ; ನಮ್ಮ ನೆರವಿಗೆ ಬರುವುದಿಲ್ಲ. ಅಧ್ಯಾತ್ಮದ ಕಾವಿರದೆ, ಪ್ರಾಪಂಚಿಕ ಪ್ರವೃತ್ತಿಯೇ ಹೆಪ್ಪುಗಟ್ಟಿ ಧರ್ಮದ ಆಕಾರವನ್ನು ತಳೆದರೆ ಅದು ಮಂಜಿನ ಶಿವಾಲಯವೇ. ಕತ್ತಲಲ್ಲಿ, ಚಳಿಯಲ್ಲಿ ಕಟ್ಟಿದ್ದು. ಬಿಸಿಲಿದ್ದರೆ ಬೆಳಕು, ಕಾವು ಎರಡೂ ತಾವಾಗಿಯೆ ಇರುತ್ತವೆ. ನಮ್ಮನ್ನು ಬಂದಡರುವ ಕಷ್ಟಗಳೂ ಬಿಸಿಲ ಕಲಶಗಳೇ; ನಮ್ಮ ಮೇಲೆ ಒದಗುವ ದೈವಾನುಗ್ರಹವೂ ಬಿಸಿಲ ಕಲಶವೇ.

ಒಮ್ಮೊಮ್ಮೆ ಬಂದಡರುವ ಕಷ್ಟಗಳು ದಿಟವಾಗಿ ದೈವಾನುಗ್ರಹದ ಜಾಡನ್ನೇ ಹಿಡಿದು ಬರುವುವು. ಅದನ್ನರಿತುಕೊಳ್ಳುವ ವಿವೇಕ ಇರಬೇಕಷ್ಟೆ. ಸಾಮಾನ್ಯವಾದ ಧಾರ್ಮಿಕ ವ್ಯವಹಾರಗಳು, ಸಾಧಾರಣವಾದ ದೈವಭಕ್ತಿ ಇವೂ ನಾವು ಕಟ್ಟಿಕೊಂಡ ಮಂಜಿನ ಮನೆಗಳೇ; ಆಧ್ಯಾತ್ಮಿಕ ಪ್ರವೃತ್ತಿ ಆಳವಾದಾಗ, ಸಾಕ್ಷಾತ್ಕಾರದ ಹೊಸಿಲಲ್ಲಿ ನಿಂತಾಗ ಇವೂ ಕರಗಿ ಹೋಗುತ್ತವೆ. ಸಂತನಿಗೆ ದೇವನೊಲಿದ ಮೇಲೆ ಧರ್ಮಾಧರ್ಮದ ಗೊಡವೆಯೇಕೆ? ಒಡಲಲ್ಲೇ ಶಿವನನ್ನು ಕಂಡುಕೊಂಡವನಿಗೆ ಹೊರಗಣ ಶಿವಾಲಯವೇಕೆ? ಯಾರೇ ಕಟ್ಟುವ ಆಲಯ ಕಡೆಗೆ ಮಂಜಿನದೇ; ಒಂದಲ್ಲ ಒಂದು ದಿನ ಕರಗಬೇಕಾದುದೇ.

ಆದರೆ ಬಿಸಿಲ ಕಲಶ ದೊರಕುವವರೆಗೆ ಶಿವಾಲಯ ಉಳಿದಿರಬೇಕಲ್ಲವೆ?

ಗುರಿ - ಗರಿ

ಮಡಿವಾಳ ಮಾಚಯ್ಯನ ಮಾತುಗಳು ಸ್ವಾರಸ್ಯವಾದುವು. ಅಲ್ಲಿ ಅವನ ಲೋಕಾನುಭವ, ಆಧ್ಯಾತ್ಮಿಕ ಪ್ರಶಸ್ತಿಗಳೆರಡೂ ಎದ್ದು ಕಾಣುತ್ತವೆ.

'ಗರಿ ಕಟ್ಟದ ಕೋಲು ಗುರಿಯ ತಾಕಬಲ್ಲುದೆ?' ಇದೊಂದು ಅವನ ಮಾತು.

ಕೋಲೆಂದರೆ ಬಾಣ. ಅದನ್ನು ಯಾವುದಾದರೊಂದು ದೂರದ ಗುರಿಯೆಡೆಗೆ ಕೈಯಿಂದಲೋ ಬಿಲ್ಲಿನಿಂದಲೋ ಎಸೆಯಬೇಕೆಂದರೆ, ಮುಂಬದಿಯಲ್ಲಿ ಚೂಪಾಗಿರುವ ತುದಿಯಿರಬೇಕು, ಹಿಂಬದಿಯಲ್ಲಿ ಗರಿಯಿರಬೇಕು. ಚೂಪಾದ ತುದಿಯಿರದಿದ್ದರೆ, ಅದು ತಾಕಿದ ಪ್ರಾಣಿಯನ್ನು ಗಾಯ ಪಡಿಸಲಾರದು; ಕೊಲ್ಲಲಾರದು. ಗರಿಯಿಲ್ಲದಿದ್ದರೆ ಬಾಣ ಅಷ್ಟು ದೂರ ಹಾರಲೇ ಆಗುವುದಿಲ್ಲ. ಪ್ರಾಣಿಗೆ ಗಾಸಿಯಾಗುವುದಿರಲಿ, ಬಾಣ ಗುರಿಯಿಟ್ಟ ಕಡೆಗೆ ಹೋಗಿ ತಲುಪುವುದಾದರೂ ಹೇಗೆ? ಎಂದರೆ ಮುಂದಿನ ತುದಿಗಿಂತ ಹಿಂದಿನ ಗರಿ ಮುಖ್ಯ. ಮಡಿವಾಳ ಮಾಚಯ್ಯ ಇದನ್ನು ಆಧ್ಯಾತ್ಮಿಕ ಸಾಧನೆಗೆ ಬಳಸಿಕೊಳ್ಳುತ್ತಾನೆ. ಮುಕ್ತಿಯನ್ನು ಬಯಸುವ ಸಾಧಕನು ಒಂದು ದಾರಿಯನ್ನು ಹಿಡಿಯುತ್ತಾನೆ. ಗುರಿ ಮುಕ್ತಿ; ದಾರಿ ಬಾಣ. ತುದಿಯೆನ್ನುವುದು ನಿಶ್ಚಯ ಬುದ್ಧಿ, ಮುಕ್ತಿಯನ್ನು ಸೇರುವ ಬಯಕೆಯ ಹಿನ್ನೆಲೆಯಲ್ಲಿ ಮುಕ್ತಿಯ ಖಚಿತವಾದ ತಿಳಿವಳಿಕೆ ಇರಬೇಕಲ್ಲವೆ ? ಸಾಧನೆ ನಡೆಯದಿದ್ದರೆ ಹಿಡಿದ ದಾರಿ ಸವೆಯುವುದಿಲ್ಲ. ಗುರಿ ಮುಟ್ಟುವುದಂತೂ ದೂರ ಉಳಿಯಿತು. ಗುರಿಯತ್ತ ಸಾಗುವುದೂ ಸಾಧ್ಯವಿಲ್ಲ. ಸಾಧನೆ ಮಾಡಿದರೇನೆ ಬಯಕೆಗೆ ಗರಿ ಕಟ್ಟಿ ಸಾಧಕನು ಮುಂದೆ ಮುಂದೆ ಹೋದಾನು. ಮುಂದಿನ ತುದಿಯನ್ನು ಬೇಕಿದ್ದರೆ ಸಿದ್ಧಾಂತವೆನ್ನಿ, ಜ್ಞಾನವೆನ್ನಿ. ಹಿಂದಿನ ಗರಿಯೇನೋ ಸಾಧನೆ, ಕ್ರಿಯೆಯೆಂದಾದೀತು. ಮೈಯಿಂದ, ಮನಸ್ಸಿನಿಂದ, ಮಾತಿಂದ ನಡೆಯುವ ಕೆಲಸಗಳೆಲ್ಲ ಕ್ರಿಯೆಯೆ; ಅವೆಲ್ಲವೂ ಸಾಧನೆಯಲ್ಲಿ ಒಳಗೊಳ್ಳುತ್ತವೆ. ಸಿದ್ಧಾಂತಕ್ಕಿಂತ ಸಾಧನೆ ಮುಖ್ಯವೆಂದು ಮಾಚಯ್ಯನ ಎಣಿಕೆ. ಸಿದ್ಧಾಂತದ ಬಲವಿದ್ದರೆ ಸಾಧನೆ ಅಚ್ಚುಕಟ್ಟಾಗಿ ನಡೆದೀತು ದಿಟ; ಆದರೆ ಸಾಧನೆಯ ಒತ್ತಾಸೆ ಇರದಿದ್ದರೆ ಸಿದ್ಧಾಂತ ನಿಲ್ಲುವುದಾದರೂ ಸಾಧ್ಯವೆ?

ಆಧ್ಯಾತ್ಮಿಕ ಪ್ರಪಂಚದಲ್ಲಿ ಸಿದ್ಧಾಂತಕ್ಕೇ ಅಗ್ರಪಟ್ಟ ಕಟ್ಟಿದಾಗ ಸಾಧನೆ ಸೊರಗುತ್ತದೆ. ಸಾಧನೆಯು ಮುಖ್ಯವೆಂದಾಗ ಸಿದ್ಧಾಂತವೂ ಉಳಿದುಕೊಳ್ಳುತ್ತದೆ.

ಆಳವಾದ ಸಮಸ್ಯೆಗಳು

ದೇವರು ಇದ್ದಾನೆಯೆ? ಇಲ್ಲವೆ? ಇರುವುದಾದರೆ ಅವನು ಸಾಕಾರನೆ? ಅವನಿಗೂ ಜಗತ್ತಿಗೂ ಇರುವ ಸಂಬಂಧವೇನು? ಜೀವನಿಗೂ ದೇವರಿಗೂ ಇರುವ ನಂಟು ಯಾವ ಬಗೆಯದು?

ಇವೇ ಮೊದಲಾದ ಸಮಸ್ಯೆಗಳು ಬಹುಕಾಲದಿಂದ ಮನುಷ್ಯನ ಮೆದುಳನ್ನು ಮುತ್ತಿವೆಯಷ್ಟೆ? ಆದರೆ ಮೆದುಳು ಬಗೆಹರಿಸಬಲ್ಲ ಸಮಸ್ಯೆಗಳಲ್ಲ ಇವು. ಆದ್ದರಿಂದಲೇ ಇಂದಿಗೂ ಇವು ಸಮಸ್ಯೆಗಳಾಗಿಯೆ ಉಳಿದಿವೆ. ಮೆದುಳಿಗೂ ಒಂದು ಮಿತಿಯಿದೆ. ಕಣ್ಣು ಎಷ್ಟು ದೂರ ಕಾಣಬಲ್ಲುದು? ಕಿವಿ ಎಷ್ಟು ದೂರ ಕೇಳಬಲ್ಲುದು? ಮೆದುಳೂ ಒಂದು ಇಂದ್ರಿಯವೇ: ಒಳಗಿನ ಇಂದ್ರಿಯ ಅಷ್ಟೆ. ಅದರ ವ್ಯಾಪ್ತಿಯೇನೋ ವಿಶಾಲವಾದುದು. ಆದರೆ ಅದರ ಸಾಮರ್ಥ್ಯ ಅಪರಿಮಿತ ಎನ್ನಲಾಗದು. ಮೆದುಳು ಮುಟ್ಟಲಾರದ್ದನ್ನೂ ಒಡಲು ಮುಟ್ಟೀತು. ಬಹುಮಟ್ಟಿಗೆ ಮೆದುಳನ್ನೇ ಬಳಸುವವರು ಒಡಲ ಕರೆಯನ್ನು ಮರೆಯುವುದು ಸಹಜ. ಭಾವಕ್ಕಿಂತ ಬುದ್ಧಿ ಅವರಿಗೆ ಪ್ರಬಲ. ಮೆದುಳಿಗೂ ಒಡಲಿಗೂ ಸೆಣಸಾಟ ಎಂಬುದಿರಬೇಕಾಗಿಲ್ಲ. ಆದರೆ ನಾಗರಿಕತೆಯ ಮುನ್ನೋಟದಲ್ಲಿ ಇದು ಒದಗಿದೆ. ಮೆದುಳು ಬೆಳೆಯುತ್ತಿದೆ; ಒಡಲು ಸೊರಗುತ್ತಿದೆ! ನಿತ್ಯಜೀವನದಲ್ಲಿಯಾದರೋ ಒಡಲಿನ ಒತ್ತಡವನ್ನು ಅಸಡ್ಡೆ ಮಾಡುವಂತಿಲ್ಲ, ಮೆದುಳು ಅರಿಯಲಾರದ್ದನ್ನು, ಅರಗಿಸಿಕೊಳ್ಳಲಾರದ್ದನ್ನು ಒಡಲು ಅರಿಯಬಲ್ಲುದು, ಅರಗಿಸಿಕೊಳ್ಳಬಲ್ಲುದು ಎಂಬುದನ್ನು ಎಲ್ಲರೂ ಬಲ್ಲರು. ಆದರೆ ಅತ್ತಕಡೆ ಬಹುಜನರ ಗಮನ ಹರಿಯುವುದಿಲ್ಲ. ಸಾಧು - ಸಂತರು ಒಡಲಿನ ಕರೆಗೆ ಓಗೊಟ್ಟು ತಮ್ಮ ಮಟ್ಟಿಗೆ ಈ ಸಮಸ್ಯೆಗಳನ್ನು ಪರಿಹರಿಸಿಕೊಂಡವರು. ಅವರ ಬಳಿ ಬಂದವರಿಗೆ, ಅವರ ಬಳಿ ನಿಂತವರಿಗೆ ಈ ಸಮಸ್ಯೆಗಳ ಪರಿಹಾರ ನೇರವಾಗಿ ದೊರಕುವುದು ಸಾಧ್ಯ. ಸಾಧು - ಸಂತರ ಮಾತು ಮೆದುಳನ್ನು ಮುಟ್ಟುವುದಿಲ್ಲ; ಮುಟ್ಟಬೇಕಾದುದಿಲ್ಲ. ಅದು ಒಡಲಿಗೆ ಅಂಟಿಕೊಂಡರೆ ಸಾಕು.

ಇದು ಬರಿಯ ನಂಬಿಕೆಯ ಪ್ರಶ್ನೆಯಲ್ಲ. ತಂತಮ್ಮ ಒಡಲಿಗೆ ಒದಗುವ ಸಮಾಧಾನದ ಪ್ರಶ್ನೆ. ಮೇಲೆ ಕಾಣಿಸಿದಂಥ ಪ್ರಶ್ನೆಗಳು ಒದಗಿದಾಗ ಒಬ್ಬೊಬ್ಬರ ಅಂತರಂಗದಲ್ಲಿಯೂ ಬೇರೆ ಬೇರೆಯಾಗಿಯೇ ಬಗೆಹರಿಯಬೇಕು. ಎಲ್ಲರಿಗೂ ಒಂದೇ ತೆರನಾದ ಪರಿಹಾರವೆಂಬುದೂ ಇಲ್ಲ. ಹಾಗೆ ನೋಡಿದರೆ ಎಲ್ಲರ ಸಮಸ್ಯೆಗಳೂ ಒಂದೇ ಎನ್ನುವಂತೆಯೂ ಇಲ್ಲ.

ಗುರು - ಶಿಷ್ಯ ಸಂವಾದ

ಒಬ್ಬ ಗುರುಗಳನ್ನು ಬಹುಕಾಲದ ನಂತರ ಅವರ ಒಬ್ಬ ಶಿಷ್ಯ ಭೇಟಿಯಾದ. ಶಿಷ್ಯನೂ ಗುರುಗಳಂತೆಯೇ ದೊಡ್ಡ ಪಂಡಿತ; ಬ್ರಹ್ಮಸೂತ್ರವನ್ನು ಇತರರಿಗೆ ಪಾಠ ಹೇಳುತ್ತಿದ್ದನು.

ಗುರುಗಳು ಅವನನ್ನು "ಏನು? ಪಾಠಪ್ರವಚನಗಳು ಸಾಗುತ್ತಿವೆಯೋ? ಎಂದು ಕೇಳಿದರು.

ಶಿಷ್ಯ "ನಡೆಸುತ್ತಿದ್ದೇನೆ, ಮಹಾಸ್ವಾಮಿ" ಎಂದನು.

ಗುರುಗಳು "ಉಪಾಸನೆಯೂ ಸಾಗುತ್ತಿದೆಯೋ? ಔಪಾಸನೆಯನ್ನು ನಡೆಸುತ್ತಿದ್ದೀರಷ್ಟೆ?" ಎಂದು ಕೇಳಿದರು. ಔಪಾಸನೆಯೆಂದರೆ ದಿನವೂ ಅಗ್ನಿಗೆ ಸಲ್ಲಿಸುವ ಪೂಜೆ.

ಶಿಷ್ಯ "ಅದು ಸಾಧ್ಯವಾಗುತ್ತಿಲ್ಲ, ಸ್ವಾಮಿ" ಎಂದನು.

ಗುರುಗಳು "ಅದೇಕೆ?" ಎಂದು ಕೇಳಲು, ಶಿಷ್ಯ "ನಾನಿರುವುದು ಬೆಂಗಳೂರಿನಲ್ಲಿ, ಅಲ್ಲಿ ಬೆರಣಿ ಸಿಗುವುದು ಕಷ್ಟ" ಎಂದು ನೆವ ಹೇಳಿದರು.

ಗುರುಗಳು- "ಓಹೋ, ಬೆಂಗಳೂರಿನಲ್ಲಿ ಹಸುಗಳು ಕಾಫಿಗಾಗಿ ಹಾಲು ಕರೆಯುತ್ತವೆ ಅಷ್ಟೆ. ಬೆರಣಿಗಾಗಿ ಸೆಗಣಿ ಹಾಕುವುದಿಲ್ಲ ಅಲ್ಲವೆ?" ಎಂದರು.

ಪ್ರವಚನಕ್ಕಿಂತ ಅನುಷ್ಠಾನ ಮುಖ್ಯ ಎಂದು ಗುರುಗಳ ಅಭಿಪ್ರಾಯ. ವೇದಾಂತ ಇರುವುದು ಪಾಠ ಹೇಳುವುದಕ್ಕಲ್ಲ; ಅದರಲ್ಲಿ ತರ್ಕವೇ ಪ್ರಧಾನ ಎಂದು ಎಣಿಸುವುದು ತಪ್ಪು. ವೇದಾಂತದಲ್ಲಿ ಬರುವ ವಿಚಾರವೆಲ್ಲ ಉಪಾಸನೆಗೆ ನೆರವಾಗಲೆಂದೇ.

ಇದನ್ನು ತಿಳಿಯದೆ ಕೇವಲ ಕುತೂಹಲಕ್ಕಾಗಿಯೋ, ವಾದವಿವಾದಗಳ ಪ್ರಸಕ್ತಿಯಿಂದಲೋ, ಧನಾರ್ಜನೆಯ ದೃಷ್ಟಿಯಿಂದಲೋ, ಯಶಃಕಾಮನೆ ಯಿಂದಲೋ ವೇದಾಂತದ ಅಧ್ಯಯನದಲ್ಲಿ ತೊಡಗುವವರೇ ಬಹುಮಂದಿ.

ಬರಿಯ ಅಧ್ಯಯನ, ಪ್ರವಚನಗಳಿಂದ ಯಾವ ಪ್ರಯೋಜನವೂ ಇರದು. ಮೋಕ್ಷದ ಮಾತಿರಲಿ, ಬದುಕಿನಲ್ಲಿ ನೆಮ್ಮದಿಯಾದರೂ ದೊರತೀತೆಂದರೆ ಉಪಾಸನೆಯನ್ನು ಮಾಡಬೇಕು.

ಭಯ-ಭಕ್ತಿ

ಸುಮಾರು ಆರು ನೂರು ವರ್ಷಗಳ ಹಿಂದೆ ಕನ್ನಡದಲ್ಲಿ ಸೊಗಸಾದ ಪುಸ್ತಕವೊಂದು ಬೆಳಕನ್ನು ಕಂಡಿತು. ಅದು 'ಸೊಬಗಿನ ಸೋನೆ'. ಹೆಸರೇ ಎಷ್ಟು ಮುದ್ದಾಗಿದೆ? ಅದನ್ನು ಬರೆದವನು ದೇಪರಾಜ. ಅದರಲ್ಲಿ ಮುತ್ತಿನಂಥ ಮಾತುಗಳ ಸುರಿಮಳೆಯೇ ಇದೆ.

ಒಂದು ಮಾತು - 'ಬಡಿದು ಭಕ್ತಿಯ ಮೂಡಿಸಬೇಡ' ಎಂಬುದು. ಇದು ಅಂದಿಗೂ ದಿಟ, ಇಂದಿಗೂ ದಿಟ, ಮುಂದೆಯೂ ದಿಟ. ಬಡಿದರೆ ಭಯವುಂಟಾದೀತು, ಭಕ್ತಿ ಬಾರದು. ಭಕ್ತಿಯ ಸ್ವರೂಪವೇ ಬೇರೆ; ಅದು ಬರುವ ದಾರಿಯೇ ಬೇರೆ. ಅದು ಮುಖ್ಯವಾಗಿ ಪ್ರೀತಿ, ಸ್ನೇಹ. ಅದರಲ್ಲಿ ಭಯದ ಅಂಶ ಎಳ್ಳಷ್ಟೂ ಇರದು.

ವಾಡಿಕೆಯಾಗಿ 'ಭಯ-ಭಕ್ತಿ' ಎಂದು ಕೂಡಿಸಿಯೇ ಹೇಳುತ್ತೇವಲ್ಲ? ಆದರೆ ಅವರೆಡೂ ಒಂದೇ ವರ್ಗಕ್ಕೆ ಸೇರಿದ ವಿವರಗಳಲ್ಲ. ಭಯವಿದ್ದಲ್ಲಿ ಭಕ್ತಿಯಿರದು; ಭಕ್ತಿಯಿದ್ದಲ್ಲಿ ಭಯವಿರದು. ಭಕ್ತಿ 'ಪಾಸಿಟಿವ್', ಭಯ 'ನೆಗೆಟಿವ್'. ಈ ಗುಟ್ಟನ್ನರಿಯದೆ ಹಿರಿಯರು ಹಲವರು ಮಕ್ಕಳಲ್ಲಿಯೋ ಶಿಷ್ಯರಲ್ಲಿಯೋ ಭಕ್ತಿಯನ್ನು ಹುಟ್ಟಿಸಲೆಂದು ಭಯದ ದಾರಿಯನ್ನು ಅನುಸರಿಸಿ ವಿಫಲರಾಗುತ್ತಾರೆ. ನರಕದ ಭಯ, ದುರ್ಗತಿಯ ಭೀತಿ, ಕರ್ಮವಿಪಾಕದ ಕಲ್ಪನೆ, ಗುರುಭಕ್ತಿಯೆಂಬ ಯೋಜನೆ, ಮಠದಿಂದ ಬಹಿಷ್ಕಾರ, ಜಾತಿಯಿಂದ ಮುಟ್ಟುಗೋಲು, ತಪ್ಪುಕಾಣಿಕೆ, ಪ್ರಾಯಶ್ಚಿತ್ತ ಮೊದಲಾಗಿ ಹಲವು ದಾರಿಗಳು ಉಂಟಷ್ಟೆ? ಆದರೆ ಈ ಬಗೆಯ ಶಿಕ್ಷೆಗೆ ಹೆದರಿ ಯಾರಾಗಲಿ, ಯಾವ ಕಾಲದಲ್ಲಾಗಲಿ ಭಕ್ತಿಯನ್ನು ಮಾಡಿದುದಕ್ಕೆ ನಿದರ್ಶನವಿಲ್ಲ. ಭಯದ ಒಡಲಿಂದ ಭಕ್ತಿ ಎದ್ದು ಬಂದೀತು ಎನ್ನುವುದು ಭ್ರಾಂತಿ. ಭಕ್ತಿ ತಾನೇ ತಾನಾಗಿ ಒದಗಿಬರುವಂಥದು. ಬೇರೆಯವರ ಒತ್ತಾಯದಿಂದ, ಉಪದೇಶದಿಂದ, ಆಗ್ರಹದಿಂದ ಬರಲಾರದು. ಬರಿಯ ವಿಚಾರವಾಗಲಿ ಅದಕ್ಕೆ ದಾರಿಯಾಗಲಾರದು. ಕೆಲವೊಂದು ಪ್ರಭಾವಶಾಲಿ ಅನುಭವಗಳ ಫಲವಾಗಿ, ಸಂಸ್ಕಾರದ ಪರಿಪಾಕವಾಗಿ, ಭಾವ ತುಂಬಿ ಬಂದಾಗ ಭಕ್ತಿ ನೈಜವಾಗಿ ಹೊರಹೊಮ್ಮುತ್ತದೆ.

ಭಕ್ತಿಯನ್ನು ಯಾವುದು ಒದಗಿಸುವುದೋ ಅದರಲ್ಲಿ ಎಡೆಬಿಡದೆ ಮಿಗಿಲೆನಿಸದ ಪ್ರೇಮ ತೋರಿಕೊಳ್ಳುತ್ತದೆ. ಭಕ್ತಿ ಒಮ್ಮೆ ಮೂಡಿಬಂದಿತೆಂದರೆ, ಬೇರೆ ಯಾವ ಲಾಭದ ಕಡೆ ಗಮನವಿರದು, ಬೇರೆ ಯಾವ ಭಾವನೆಗಳಿಗೆ ಎಡೆಯಿರದು.

ಭಕ್ತಿ ಕೈಗೂಲಿಯೆ?

'ಭಕ್ತಿ ಕೈಗೂಲಿಯೆ? ಬೇಡುವವ ಭಕ್ತನೆ?' ಇದು ರಾಘವಾಂಕನ ಸೋಮನಾಥ ಚಾರಿತ್ರದಲ್ಲಿ ಬರುವ ಮಾತು.

ರಾಘವಾಂಕ ಚಾರಿತ್ರವುಳ್ಳ ಕವಿ. ಚಾರಿತ್ರವನ್ನೆ ದೊಡ್ಡದೆಂದು ಎಣಿಸಿದ ಕವಿ; ತನ್ನ ಕಾವ್ಯ ನಾಯಕರಲ್ಲೆಲ್ಲ ಚಾರಿತ್ರವನ್ನೆ ಗುರುತಿಸಿದ ಕವಿ. ಚಾರಿತ್ರವೆಂದರೆ ನಡತೆ. ಜನರು ಹೇಗೆ ಬದುಕಬೇಕೆಂಬುದನ್ನು ತಿಳಿಯಪಡಿಸಲು ನೆರವಾಗಬೇಕಾದುದು ಕವಿಯ ಕರ್ತವ್ಯವೆಂದು ನಂಬಿದ್ದವನು ರಾಘವಾಂಕ. ತಾನೂ ಹಾಗೆಯೇ ಬದುಕಿದ್ದುದು ಅವನ ವೈಶಿಷ್ಟ್ಯ.

ನಿದರ್ಶನಕ್ಕೆ ಮೇಲಿನ ಮಾತು.

ಭಕ್ತಿ ಮಾಡುವವರು ಬಹುಮಂದಿ ಇದ್ದಾರೆ. ಆದರೆ ಅವರು ಮಾಡುವ ಭಕ್ತಿ ಎಂಥಾದ್ದು? ಕೆಲಸವನ್ನು ಮಾಡುವವರು ಕೂಲಿಯನ್ನು ಬಯಸಿಯೇ ಮಾಡುವಂತೆ ಅವರ ಭಕ್ತಿ. ಕೂಲಿಯ ಸೊಲ್ಲು ಇರದಿದ್ದರೆ, ಕೆಲಸ ಮಾಡುವವರು ಯಾರು ? ಮೇಲಾಗಿ, ಕೂಲಿಗೆ ತಕ್ಕ ಕೆಲಸ. ಕೂಲಿ ಆಕರ್ಷಕವಾಗಿದ್ದರೆ ಕೆಲಸವೂ ಅಚ್ಚುಕಟ್ಟು. ಕೂಲಿ ಕಡಮೆಯೆಂದಾದರೆ ಕೆಲಸವೂ ತೋರುಗಾಣಿಕೆಯಷ್ಟೆ. ದೇವರಿಗೆ ನಮ್ಮ ಭಕ್ತಿಯ ಅಗತ್ಯವಿದೆಯೆಂದು ಬಗೆದು, ದೇವರಿಗಾಗಿ ನಾವು ಭಕ್ತರಾಗುವೆವು. ದೇವರ ಅಗತ್ಯವನ್ನು ಪೂರಯಿಸುವಾಗ ನಮ್ಮ ಅಗತ್ಯವೂ ತೀರಬೇಕಲ್ಲವೆ? ನಮಗೆ ಬೇಕಾದ್ದು ಹಣ, ಲಾಭ, ಜಯ, ಆರೋಗ್ಯ, ಯಶಸ್ಸು - ಹೀಗೆ ಹತ್ತಾರು. ಅವೆಲ್ಲವನ್ನು ಪಡೆದುಕೊಳ್ಳಲು ದೇವರನ್ನಷ್ಟೆ ಅವಲಂಬಿಸಿ ನಾವೇನು ಕೂಡುವುದಿಲ್ಲ. ನಮ್ಮ ಕೈಲಾದದ್ದನ್ನೆಲ್ಲ ಮಾಡಿಯೇ ತೀರುತ್ತೇವೆ. ದೇವರನ್ನೂ ನೆರವಾಗುವಂತೆ ಒಲಿಸಿಕೊಳ್ಳಲು ಯತ್ನಿಸುತ್ತೇವೆ. ಈ ಸಂದರ್ಭದಲ್ಲಿ ಭಕ್ತಿಯ ವ್ಯವಹಾರ ಸಿದ್ಧವಾಗುತ್ತದೆ. ಆದರೆ ಕವಿ ಕಾಣಿಸುವುದು ಇದು ಸರಿಯಾದ ಭಕ್ತಿಯಲ್ಲವೆಂದು. ದೇವರಿಗೆ ನಮ್ಮ ಭಕ್ತಿಯಿಂದ ಆಗಬೇಕಾದುದೇನು? ನಮ್ಮ ಪ್ರಯೋಜನಕ್ಕೆಂದು ದೇವರನ್ನು ಬಳಸಿಕೊಳ್ಳುವುದಾದರೂ ಏತಕ್ಕೆ?

ಭಕ್ತನಿಗೆ ಭಕ್ತಿಯೆಂಬುದು ಸಹಜವಾಗಿ ಬರಬೇಕು ; ಅದರಲ್ಲಿ ಯಾವ ಲೌಕಿಕ ಉದ್ದೇಶವೂ ಇರಬಾರದು. ಇದಕ್ಕೆ ನೆರವಾಗುವುದು ದೇವರನ್ನು ಕುರಿತ ಸರಿಯಾದ ಅರಿವು : ದೇವರಿಗೂ ನಮಗೂ ಇರುವ ನಂಟಿನ ತಿಳಿವಳಿಕೆ.

ಹರಿಕಥೆ - ಬರಿಗಾಲು

ಹರಿಕಥೆ ಕೇಳಲು ಹೋಗಿ ಚಪ್ಪಲಿ ಕಳೆದುಕೊಂಡ ಅನುಭವ ಹಲವರಿಗಿದ್ದೀತು. ಚಪ್ಪಲಿಯನ್ನು ಕೊಂಡೊಯ್ದವರು ಹರಿಕಥೆಗಾಗಿ ಅಲ್ಲಿ ಬಂದವರಲ್ಲ; ಚಪ್ಪಲಿಗಾಗಿಯೇ ಬಂದವರು.

ಹರಿಕಥೆಯನ್ನು ಕೇಳಿ ಹೊರಗೆ ಬಂದ ಮೇಲೆ ಬರಿಗಾಲಲ್ಲಿ ಮನೆಗೆ ಹೋಗಬೇಕಾದವರು ಮತ್ತೆ ಹರಿಕಥೆಗೆ ಬರುವುದೆ ಇಲ್ಲ; ಬಂದರೂ ಚಪ್ಪಲಿಯನ್ನು ಜೋಪಾನ ಮಾಡಿಕೊಂಡ ಮೇಲೇ ಮುಂದಿನ ಕಥೆ! ಇಲ್ಲವಾದರೆ ಹರಿಕಥೆಯನ್ನು ಕೇಳುತ್ತಿರುವಾಗಲೂ ಚಪ್ಪಲಿಯದೆ ಚಿಂತೆ! ಬಸವಣ್ಣನವರ ಲೋಕಾನುಭವದಲ್ಲಿ ಹಾಗ (ಎಂದರೆ ಹಣ) ಕೊಟ್ಟು ಕೆರವನ್ನು ಕೊಂಡವನು ಗುಡಿಗೆ ಹೋದದ್ದು ಬಂದಿದೆ. ಕೆರ (ಎಂದರೆ ಚಪ್ಪಲಿ) ಗುಡಿಯ ಹೊರಗೆ; ಭಕ್ತ ಒಳಗೆ. ಆದರೆ ಅವನ ಧ್ಯಾನವೆಲ್ಲ 'ಕೆರಹಿನ ಧ್ಯಾನವಲ್ಲದೆ ದೇವಧ್ಯಾನವಿಲ್ಲ'! ಕಣ್ಣ ಮುಂದೆ ದೇವರು; ಮನಸ್ಸು ಕೆರದ ಕಡೆಗೇ. ಈ ದೃಷ್ಟಾಂತದಿಂದ ಬಸವಣ್ಣನವರು ತಿಳಿಯಪಡಿಸುವ ತತ್ವ ಇನ್ನೂ ಮಹತ್ತ್ವದ್ದು-

"ಎಲೆಲೆ ಮಾನವಾ, ಧನವ ಇರಿಸದಿರಾ, ಇರಿಸಿದರೆ ಭವ ಬಪ್ಪುದು ತಪ್ಪದು!"

ಹಣದ ಮೇಲೆ, ಅಥವಾ ಹಣಕೊಟ್ಟು ಕೊಂಡದ್ದರ ಮೇಲೆ, ಕೊಳ್ಳಬಹುದಾದ್ದರ ಮೇಲೆ ನಮ್ಮ ಅಭಿಮಾನವೆಲ್ಲ ಇದ್ದುದಾದರೆ ಅದೇ ಭವವೆನಿಸಿಕೊಳ್ಳುವುದು. ಸಂಸಾರ ಇರುವುದು ವಸ್ತುಗಳಲ್ಲಲ್ಲ, ವ್ಯಕ್ತಿಗಳಲ್ಲಲ್ಲ; ವಸ್ತುಗಳ ಮೇಲೆ, ವ್ಯಕ್ತಿಗಳ ಮೇಲೆ ನಮಗಿರುವ ಅಭಿಮಾನದಲ್ಲಿ. ಹರಿಕಥೆಗೆ, ಗುಡಿಗೆ ಹೋಗುವ ಮಂದಿಗೆ ಬಸವಣ್ಣನವರ ಕಿವಿಮಾತು ನೀರಿಳಿಯದ ಬಾಯಲ್ಲಿ ಕಡುಬನ್ನು ತುರುಕಿದಂತೆಯೆ ಸರಿ. ಹರಿಕಥೆಯನ್ನಾದರೂ ಕೇಳದೆ ಇರಬಹುದು. ಚಪ್ಪಲಿಯಿಲ್ಲದೆ ಇರುವುದು ಹೇಗೆ? ಗುಡಿಗೆ ಹೊರಗಿಂದಲೆ ಅಡ್ಡಬಿದ್ದಾರು. ಒಳಗೆ ಹೋಗಿ ಕೆರವನ್ನು ಕಳೆದು ಕೊಳ್ಳಲೇಕೆ? ಕೆರದ ಕಳುವು ಒಂದು ದೃಷ್ಟಾಂತ ಅಷ್ಟೆ. ಅದರ ಅನ್ವಯ ಬದುಕಿನ ಹಲವು ವಿವರಗಳಲ್ಲಿ ಇದ್ದೀತು. ವಿರಕ್ತಿಯಾಗಲಿ ಭಕ್ತಿಯಾಗಲಿ ಅಷ್ಟು ಬೇಗ ಕೈಗೂಡು ವುದಿಲ್ಲ; ಮನಸ್ಸು ಮಾಗಬೇಕು, ಬುದ್ಧಿ ಬಲಿಯಬೇಕು. ಹರಿಕಥೆಗೆ ಹೋಗಿ ಚಪ್ಪಲಿ ಯನ್ನು ಕಳಕೊಂಡವರು, ಹರಿಕಥೆಯನ್ನೇ ದೂರಬಾರದು, ದೂರಮಾಡಲೂಬಾರದು.

ಕೆರದ ಬೆಲೆ ಹಾಗವಾದರೆ, ಭಕ್ತಿಯದು ಮುಪ್ಪಾಗ.

ಮಹಾ ಪಾಪಗಳು

ಮಹಾತ್ಮಾ ಗಾಂಧಿಯವರ ಎಣಿಕೆಯಲ್ಲಿ ಏಳು ಮಹಾ ಪಾಪಗಳು.

ದುಡಿಮೆಯಿರದೆ ಹಣದ ಗಳಿಕೆ ಮೊದಲನೆಯದು. ಕಷ್ಟಪಡದೆ ಬಂದ ಸಂಪತ್ತು ಬಂದ ಮೇಲೆ ಕಷ್ಟವನ್ನು ತರುತ್ತದೆ!

ಅಂತಃಕರಣದ ಸಮಾಧಾನವಿರದೆ ಸುಖಪಡುವುದು ಎರಡನೆಯದು. ಸುಖವನ್ನು ಅನುಭವಿಸಿದಾಗ ಮನಸ್ಸು ತಿಳಿಯಾಗಿರಬೇಕು; ತಪ್ಪು ಮಾಡುತ್ತಿರುವ ಭಾವನೆಯಿದ್ದರೆ ಸುಖವಲ್ಲ ಅದು. ಶೀಲವಿಲ್ಲದ ವಿದ್ಯೆ ಮೂರನೆಯದು. ವಿದ್ಯೆಯ ಪ್ರಯೋಜನವೇ ಶೀಲಶುದ್ಧಿ; ಶೀಲವನ್ನ ಬೆಳೆಸಿಕೊಳ್ಳದೆ ವಿದ್ಯೆಯಿಂದ ಮಾಡುವುದಾದರೂ ಏನು?

ನೀತಿಯಿಲ್ಲದ ಉದ್ಯಮ ನಾಲ್ಕನೆಯದು. ಧರ್ಮ, ನೀತಿ ಎಂಬ ನಿಯಮಗಳಿಗೆ ತಲೆಬಾಗಿ ಉದ್ಯಮವನ್ನು ಹಿಡಿದು ಹಣವನ್ನು ಗಳಿಸಿದರೇ ಆ ಹಣ ಊರ್ಜಿತ ವಾದೀತು; ಉದ್ಯಮಕ್ಕೆ ಬೆಲೆ ಬಂದೀತು. ಮಾನವೀಯತೆಗೆ ಗಮನ ಕೊಡದ ವಿಜ್ಞಾನ ಐದನೆಯದು. ವಿಜ್ಞಾನವೆಂಬ ಪ್ರಕಾರ ಮನುಷ್ಯನ ಹಿತವನ್ನು ಸಾಧಿಸಲೆಂದೇ ಸಿದ್ಧವಾದುದು. ಭೂಮಿಯ ಮೇಲೆ ಚೆನ್ನಾಗಿ ಬಾಳಲು ನೆರವಾಗಬೇಕು ವಿಜ್ಞಾನ ಮತ್ತು ಅದಕ್ಕಂಟಿಕೊಂಡು ಬಂದ ತಂತ್ರ. ಮನುಷ್ಯನ ಹಿತವನ್ನೆ ಮರೆತು, ಅವನ ಬಾಳ್ವೆಗೆ ಅಡ್ಡಿ - ಆತಂಕಗಳನ್ನು ಒದಗಿಸುವ ವಿಜ್ಞಾನದಿಂದೇನು ಮಾಡುವುದು? ತ್ಯಾಗ ಬುದ್ಧಿಯಿರದ ದೇವತಾರ್ಚನೆ ಆರನೆಯದು. ದೇವರ ಹಿರಿಮೆ ಮನದಟ್ಟಾದರೆ, ನೆರೆಯವರಿಗೆ ಉಪಕಾರ ಮಾಡಬೇಕೆಂಬ ಮನಸ್ಸಾಗುತ್ತದೆ. ತನ್ನಲ್ಲಿ ಇರುವ ಸಂಪತ್ತಿನ ಒಂದು ಭಾಗವನ್ನು ಬೇರೆಯವರ ಅನುಕೂಲಕ್ಕೆ ವೆಚ್ಚ ಮಾಡುವುದು ದೇವತಾರ್ಚನೆಯ ಒಂದು ಪ್ರಕಾರವೆ. ನೀತಿ ಸೂತ್ರವನ್ನರಿಯದ ರಾಜಕಾರಣ ಏಳನೆಯದು. ನೀತಿ ನಿಯಮ ಗಳನ್ನೆಲ್ಲ ಕಾಡಿಗಟ್ಟಿದವನೆ ರಾಜಕಾರಣಿ ಎನ್ನುವ ಕಲ್ಪನೆ ಈಗ ಎಲ್ಲರಲ್ಲಿದೆಯಷ್ಟೆ? ಆದರೆ ಮಾನವ ಸಮುದಾಯದಲ್ಲಿ ರಾಜಕಾರಣವೆಂಬುದಕ್ಕೆ ಅಗತ್ಯವಿದ್ದಿತಾದರೆ, ಅದಕ್ಕೊಂದು ಬೆಲೆಯಿದ್ದಿತಾದರೆ ನೀತಿಯ ತಳಹದಿಯಿದ್ದೇ ತೀರಬೇಕು. ನೀತಿಯನ್ನು ಕೈಯ ಬಿಡದೆ ರಾಜಕಾರಣದಲ್ಲಿ ತೊಡಗಿದವನು ಕಷ್ಟವನ್ನನುಭವಿಸಬೇಕಾದೀತು, ಸೋಲನ್ನು ಅನುಭವಿಸಬೇಕಾದೀತು. ಆದರೆ ತಾನು ನೀತಿಭ್ರಷ್ಟನಾಗಲಿಲ್ಲವೆಂಬ ಸಮಾಧಾನವಂತೂ ಇರುತ್ತದೆ. ಇದು ಮುಖ್ಯವಲ್ಲವೆ?

ಅದರಿಂದ ಈ ಘಳಿಗೆಗಲ್ಲದಿದ್ದರೂ ನಿಡುಗಾಲದ ಪ್ರಯೋಜನವಿದ್ದೇ ಇರುತ್ತದೆ.

ನೀತಿ

ನೀತಿಯೆನ್ನುವ ಮಾತಿಗೆ ನಡೆಯುವುದು, ನಡೆಸುವುದು ಎಂಬೆರಡು ಅರ್ಥಗಳೂ ಇವೆ.

ನೀತಿಯ ನೆಲೆಗಟ್ಟು ಇಲ್ಲಿನ, ಇಂದಿನ ವ್ಯವಹಾರ. ಅದೇನು ಪರಲೋಕಕ್ಕೆ ಸೇರಿದುದಲ್ಲ; ಮುಂದೆ ಎಂದೋ ಒದಗಬಹುದಾದ ಫಲಕ್ಕೆ ಸೇರಿದುದಲ್ಲ. ಇಂದು, ಇಲ್ಲಿ ನಮಗೆ ನೆಮ್ಮದಿಯಿರಬೇಕು, ನಮ್ಮಿಂದ ಇತರರಿಗೆ ನೆಮ್ಮದಿಯಾಗಬೇಕು, ಎನ್ನುವ ಬಯಕೆಯೇ ನೀತಿ. ಈ ಬಯಕೆ ಬೇರೂರಿದಾಗ ನಮ್ಮ ನಡವಳಿಕೆ, ನಂಬಿಕೆಗಳು, ಆಲೋಚನೆಗಳು, ಅನಿಸಿಕೆಗಳೂ ಎಲ್ಲವೂ ನೀತಿಯ ನೆಲೆ ಯಲ್ಲಿರುತ್ತವೆ.

ನೀತಿಗೂ ಪಾಪ-ಪುಣ್ಯಗಳಿಗೂ ಸಂಬಂಧವಿರದು. ದಾನ ಮಾಡಿದರೆ ಪುಣ್ಯ ಬರುತ್ತದೆ ಎಂದು ದಾನ ಮಾಡುವವನು ಸ್ವಾರ್ಥಿಯೇ; ಅದರಲ್ಲೇನು ನೀತಿಯಿದ್ದೀತು? ತನ್ನ ಪಾಪವನ್ನು ಪರಿಹರಿಸಿಕೊಳ್ಳಲೆಂದು ಗುಡಿ ಕಟ್ಟಿಸಿದರೆ, ದೇವರ ಸೇವೆ ಮಾಡಿದರೆ, ತೀರ್ಥಯಾತ್ರೆ ಮಾಡಿದರೆ ಅದೂ ಸ್ವಾರ್ಥವೇ; ನೀತಿಯ ನಂಟು ಎಷ್ಟುಮಾತ್ರಕ್ಕೂ ಇರದು.

ನೀತಿಯಲ್ಲೇನೋ ಸ್ವಾರ್ಥ, ಪರಾರ್ಥ ಎಂದು ವಿಭಾಗ ಮಾಡುವುದಿದೆ. ತನ್ನ ಪಾಡಿಗೆ ತಾನು ನೀತಿಯ ದಾರಿಯನ್ನು ಹಿಡಿದು ನಡೆದರೆ ಅದು ಸ್ವಾರ್ಥ; ಬೇರೆಯವರ ಗೊಡವೆ ತನಗೇಕೆ? ಬೇರೆಯವರು ನೀತಿವಂತರಾಗಲಿ ಎಂದು ಉಪದೇಶ ಮಾಡುವುದಾಗಲಿ ಪುಸ್ತಕ ಬರೆಯುವುದಾಗಲಿ ಪ್ರಚಾರ ಮಾಡುವುದಾಗಲಿ ಪರಾರ್ಥವೆನಿಸಿಕೊಳ್ಳುತ್ತದೆ.

ಸ್ವಾರ್ಥವನ್ನು ಸಾಧಿಸಿಕೊಂಡ ಮೇಲೇ ಪರಾರ್ಥಕ್ಕೆ ಅಧಿಕಾರ ಬರುವುದು.

ತಾನೇ ಅನುಸರಿಸದ ನೀತಿಯನ್ನು ಬೇರೆಯವರ ಮೇಲೆ ಹೇರಲೇಕೆ? ಅದಕ್ಕೇನು ಬೆಲೆ ಬಂದೀತು?

ಅರ್ಚಕನು ತನ್ನ ಮನೆಯಲ್ಲಿ ಆತ್ಮಾರ್ಥಪೂಜೆಯನ್ನು ಮುಗಿಸಿದ ಮೇಲೇ ದೇವಾಲಯದಲ್ಲಿ ಪರಾರ್ಥಪೂಜೆಗೆ ಹೊರಡಬೇಕೆಂದು ಆಗಮಶಾಸ್ತ್ರದ ವಿಧಿಯಿದೆ. ಇದು ನೀತಿಗೂ ಅನ್ವಯಿಸುತ್ತದೆ. ಮೊದಲು ತನಗೆ, ಅನಂತರ ಬೇರೆಯವರಿಗೆ. ಮಾಡುವ ಉಪದೇಶ ತನ್ನ ಅನುಭವದಲ್ಲಿರಬೇಕು.

ನೀತಿಯ ನೆಲೆ

ಸಾಮಾನ್ಯವಾಗಿ, ನೇರವಾಗಿ ಬಾಳುವ ಮಂದಿಗೇ ತೊಂದರೆಗಳು ಮೇಲೆರಗಿ ಬೀಳುವುದು. ನಾಯಕನ ಶೀಲ ಉತ್ತಮವಾಗಿದ್ದರೆ ಅವನು ನಾಯಕನಾಗಿ ಉಳಿಯುವುದು ಕಷ್ಟವಲ್ಲವೆ?

ಇದೇನು ವಿಪರ್ಯಾಸ? ಎಂದು ಹಲವು ವೇಳೆ ಅನಿಸುವುದುಂಟು. ಒಳ್ಳೆಯ ವರಿಗೇ ಕೆಡುಕು ತಟ್ಟುವುದಾದರೆ ಒಳ್ಳೆಯವರಾಗಿರಲು ಯಾರು ತಾನೆ ಒಡಂಬಡುವರು? ಎಲ್ಲ ಬಗೆಯ ದುರ್ಗುಣಗಳನ್ನೂ ಮೆರೆಸುವವರು ಶ್ರೀಮಂತರಾಗುತ್ತಾರೆ, ಹೆಸರು ಮಾಡುತ್ತಾರೆ, ಸುಖವಾಗಿರುತ್ತಾರೆ. ಇಂಥವರನ್ನು ನಾವು ನೋಡಿಲ್ಲವೆ? ಅವರನ್ನು ಅನುಕರಿಸಿದರಾಯಿತು ಎಂದೆನಿಸುವುದಿಲ್ಲವೆ? ಬಿರುಗಾಳಿ ಬೀಸುವಾಗ ಕಡಿದು ಬೀಳುವುದು ನೆಟ್ಟಗೆ ನಿಂತ ಮರವೇ; ಡೊಂಕುಡೊಂಕಾಗಿ ಬೆಳೆದ ಮರಕ್ಕೆ ಈ ಅಪಾಯವಿರದು. ಹಾಗೆಯೇ, ನೇರವಾಗಿ ನಡೆದುಕೊಳ್ಳುವಾತನಿಗೆ ಸಮಾಜದ, ರಾಜಕೀಯದ, ಆಡಳಿತದ ಉಪದ್ರವ ಇರುವುದನ್ನು ಕಾಣುತ್ತೇವೆ. ನೀತಿ ಬಿಟ್ಟವನಿಗಾದರೆ ಇಂಥ ಉಪದ್ರವ ತಟ್ಟಲಾರದು ತಾನೆ? ಒತ್ತಡ ಹೇಗೆ ಬಂದರೆ ಹಾಗೆ ಅವನೂ ಬದಲಾಗುತ್ತಾನೆ; ಡೊಂಕುಡೊಂಕಾಗಿ ಬೆಳೆದ ಮರದಂತೆ! ಅವನು ಏನನ್ನಾದರೂ ಮಾಡಿಯಾನು; ಯಾರನ್ನಾದರೂ ಒಲಿಸಿಕೊಂಡಾನು; ಯಾವ ಬಣ್ಣವಾಗಲಿ ಬದಲು ಮಾಡಿಯಾನು; ಯಾವ ವೇಷವನ್ನಾಗಲಿ ತೊಟ್ಟಾನು. ಅವನಿಗೆ ಏತರ ಹೆದರಿಕೆ? ಯಾರ ಅಂಜಿಕೆ? ಮೇಲೇರುವುದೇ ಗುರಿಯೆಂದ ಮೇಲೆ ನೆಟ್ಟಗಿರಬೇಕೆಂಬ ನಿಯಮವೇಕೆ? ಬೇರೆಯವರು ದೂರಿಯಾರು ಎಂದು ಬೆದರುವುದೇಕೆ? ಈ ಬಗೆಯ ಧೈರ್ಯ ಇದ್ದವನು ಯಾವ ಕಾಲದಲ್ಲಾದರೂ ಬದುಕಿ ಕೊಂಡಾನು; ಎಷ್ಟು ಅಡ್ಡಿ - ಆತಂಕಗಳಿದ್ದರೂ ಉಳಿದುಕೊಂಡಾನು; ಯಾರ ಅಕ್ರಮವನ್ನಾಗಲಿ ಎದುರಿಸಿಯಾನು. ನೀತಿಗೆ ಕಟ್ಟುಬಿದ್ದವನಿಗಾದರೆ ಹೊರಗಣ ಅಂಜಿಕೆಯಂತೂ ಇದ್ದದ್ದೇ; ಅಪವಾದ, ಅಪಕೀರ್ತಿ ಬಂದೀತೆಂಬ ಭೀತಿ; ತನ್ನಿಂದ ಬೇರೆಯವರಿಗೆ ತೊಂದರೆಯಾದೀತೆಂಬ ಅಳುಕು.

ಇದಕ್ಕಿಂತ ಹೆಚ್ಚಾಗಿ ಒಳಗಣ ಅಂಕೆಗೂ ಅವನು ಬೆದರುತ್ತಾನೆ. ತಪ್ಪು ಮಾಡುವುದೆಂದರೆ ಅವನ ಮನಸ್ಸು ಸುಮ್ಮನಿರುವುದಿಲ್ಲ. ಒಳಗೇ ಈಟಿಯಂತೆ ತಿವಿಯುತ್ತದೆ, ಭೂತದಂತೆ ಕಾಡುತ್ತದೆ.

ಅಂತಃಸಾಕ್ಷಿ ಎಂಬುದರ ಕಾಟ ಅವನಿಗೆ. ನೀತಿ ತಪ್ಪಿದವನಿಗೆ ಇದರ ಉಪದ್ರವವೂ ಇರದು!

ನೀತಿ - ನಿರಾಶೆ

ಕೆಲವರು ನೀತಿವಂತರು ನಿರಾಶರಾಗುತ್ತಿದ್ದಾರೆ. ಮೌಲ್ಯಗಳಿಗೆ ಬೆಲೆಯೆ ಇಲ್ಲವಲ್ಲ ಎಂದು ಅವರ ಅಳಲು. ಎಲ್ಲೆಲ್ಲೂ ಲಂಚದ ಸೊಲ್ಲು. ಅಧಿಕಾರಿಗಳಿಗೆ ಕರ್ತವ್ಯಪ್ರಜ್ಞೆ ಇಲ್ಲ. ಉದ್ಯಮಿಗಳಿಗೆ ದೇಶದ ಹಿತವೆಂಬ ಕಲ್ಪನೆಯೇ ಇರದು. ಸಾಮಾನ್ಯರಿಗೆ ಸಂಸ್ಕೃತಿಯ ಅಗತ್ಯವೇ ಮರೆಯಾಗುತ್ತಿದೆ.

ಪರಿಸ್ಥಿತಿಯನ್ನು ನೋಡಿದಾಗ ಯಾರಿಗಾದರೂ ಹೀಗೆ ಬೆದರಿಕೆಯುಂಟಾಗುವುದು ಸಹಜವೇ. ಮುಂದೇನು ಎಂಬ ಆತಂಕವೂ ಒದಗೀತು. ನೀತಿಯ ನೆಲೆಯೇ ಕುಸಿಯುತ್ತಿದೆ ಎಂಬ ದಿಗಿಲು ನೀತಿವಂತರಿಗೆ. ಅವರು ನಂಬಿರುವುದು ನೀತಿಯನ್ನೆ ; ಅದಕ್ಕೇ ಬೆಲೆಯಿಲ್ಲವಾದರೆ ಅವರ ಗತಿಯೇನು? ಆದರೆ ನೀತಿಯ ನೆಲೆಯೇ ಬೇರೆ. ನೀತಿವಂತನಾದವನಿಗೆ ತನ್ನ ನೀತಿಯ ಕಡೆ ಗಮನವಿರಬೇಕಷ್ಟೇ. ಊರವರ ನೀತಿಯನ್ನು ಕಟ್ಟಿಕೊಂಡು ಅವನೇನು ಮಾಡಿಯಾನು? ಅವನು ನಿರಾಶನಾದನೆಂದರೆ ಅವನಿಗೆ ನೀತಿಯ ಮೇಲೆ ದಿಟವಾದ ಒಲವಿಲ್ಲ ಎಂದೇ ಅರ್ಥ.

ನೀತಿಯನ್ನು ತಮ್ಮ ಪ್ರಯೋಜನಕ್ಕೆ ಬಳಸಿಕೊಳ್ಳುವವರೇ ಹೆಚ್ಚು ಮಂದಿ. ನೀತಿಯಿಂದ ತಮಗೇನು ಲಾಭವಾಗಲಿಲ್ಲವೆಂದರೆ ಅಳಲು ತಾನೆ? ನೀತಿ ವ್ಯಕ್ತಿಗತವಾದುದು; ಒಂದೊಂದು ಸಂದರ್ಭದಲ್ಲೂ ಪ್ರಸ್ತುತವಾದುದು.

ನೀತಿಯ ಬೆಳಕಲ್ಲಿ ನಡೆಯುವವನಿಗೆ ತನ್ನ ದಾರಿಯಷ್ಟೇ ಮುಖ್ಯ. ತಾನು ನೇರವಾಗಿ ನಡೆಯುವುದೇ ಅವನ ಉದ್ದೇಶ. ಲೋಕವನ್ನು ತಿದ್ದುವೆನೆಂಬ ಹಮ್ಮು ಅವನಿಗಿರದು; ನೆರೆಯವರು ನೀತಿವಂತರಲ್ಲವೆಂಬ ದುಗುಡವೂ ಇರದು. ನೀತಿಯ ನೆಲೆಯನ್ನರಿತವನಿಗೆ ನೆಮ್ಮದಿಯೆ ಫಲ. ನೀತಿಯಿಂದ ಹೊರಬರಬೇಕಾದುದು ಆಂತಕವಲ್ಲ, ಸಮಾಧಾನ.

ನೀತಿಗೆಟ್ಟವನಿಗೆ ನೆಮ್ಮದಿಯೆಲ್ಲಿಯದು? ಎಲ್ಲ ಮೌಲ್ಯಗಳೂ ನೆಮ್ಮದಿಯತ್ತಲೇ ನಡೆಯುತ್ತವೆ ತಾನೆ?

ಸಹಜ ಮಾರ್ಗ

ಅಲ್ಲಮಪ್ರಭುದೇವರಿಗೊಂದು ಸಮಸ್ಯೆ-

'ಒತ್ತಿ ಮಾಡಿದ ಹಣ್ಣು, ಅದೆತ್ತಣ ರುಚಿಯಪ್ಪುದೋ?'

ಮರದ ಮೇಲಿನ ಕಾಯಿ ಅಲ್ಲಿಯೆ ಇದ್ದು ನಿಧಾನವಾಗಿ ಮಾಗಿ ತಾನಾಗಿ ಹಣ್ಣಾದರೆ ಅದರ ರುಚಿ ಸೊಗಸಾಗಿರುತ್ತದೆ. ಹಾಗಲ್ಲದೆ ಕಾಯನ್ನು ಮಾಗುವ ಮೊದಲೆ ಕಿತ್ತು ಹಬೆಯಲ್ಲಿಯೋ ಹುಲ್ಲಿನಲ್ಲಿಯೋ ಇರಿಸಿ ಬಲಾತ್ಕಾರದಿಂದ ಹಣ್ಣು ಮಾಡಿದರೆ, ಹಣ್ಣಿನ ಮೇಲಣ ಆಕಾರ ಇದ್ದೀತು. ಬಣ್ಣವೂ ಬರಬಹುದು. ಆದರೆ ರುಚಿ ಬೇರೆಯಾಗದೆ? ಅವಸರದಲ್ಲಿ ಮಾಗಿದ್ದು, ಗಿಡದ ಸಂಪರ್ಕವಿಲ್ಲದೆ ಹಣ್ಣಾದದ್ದು ತನಗೆ ಸಹಜವಾದ ರುಚಿಯನ್ನು ಕಳೆದುಕೊಳ್ಳುತ್ತದೆ. ಅಲ್ಲಮರ ಮನಸ್ಸಿನಲ್ಲಿದ್ದ ಸಮಸ್ಯೆ ಇದು. ಮನುಷ್ಯನ ಗುರಿಯೇನೋ ಅಧ್ಯಾತ್ಮದ ಉನ್ನತಿ. ಅದಕ್ಕಾಗಿ ಯೋಗ ವನ್ನೋ ಮತ್ತೊಂದನ್ನೋ ಕೈಗೊಂಡು ಬಲವಂತವಾಗಿ ಚೇತನವನ್ನು ಹಣ್ಣು ಮಾಡುವುದು ಬಳಕೆಯಲ್ಲಿದೆಯಲ್ಲವೆ? ಅಧ್ಯಾತ್ಮಿಕ ಹಂಬಲ ಇರುವ ಮಂದಿ ಶ್ವಾಸನಿರೋಧ, ಕಾಯಕ್ಲೇಶ, ವಿಚಿತ್ರ ಹಠಯೋಗದ ಆಸನಗಳು, ತುಂಬ ಶ್ರಮಸಾಧ್ಯವಾದ ಪೂಜೆ ಪುನಸ್ಕಾರಗಳು ಇವೆಲ್ಲವನ್ನೂ ಕೈಗೊಳ್ಳುತ್ತಾರೆಯಲ್ಲವೆ? ದೇಹದಂಡನೆ ಮಾಡಿದರೆ ಮನಸ್ಸು ಮಾಗಿ ಅಧ್ಯಾತ್ಮದ ಸಹಜರುಚಿಯನ್ನು ಒಳಗೊಂಡೀತೆ? 'ಹುತ್ತ ಬಡಿದರೆ ಹಾವು ಸತ್ತೀತೆ?' ಬಲವಂತವಾಗಿ ಅದುಮಿ ಹಿಡಿದ ಇಂದ್ರಿಯಗಳಾಗಲಿ, ಮನಸ್ಸಾಗಲಿ ಸ್ವಲ್ಪ ಒತ್ತಡ ಸಡಿಲವಾದರೆ ಮತ್ತೆ ಮೊದಲಿನ ದಾರಿ ಹಿಡಿಯುವುದಿಲ್ಲವೆ? ಇಂದ್ರಿಯ ನಿರೋಧ, ಮನೋನಿಗ್ರಹ ಎಂಬ ಮಾತು ಗಳಲ್ಲೇ ಬಲಾತ್ಕಾರದ ಧ್ವನಿಯಿದೆ. ದೇಹದಂಡನೆ, ಕಾಯಕ್ಲೇಶ, ಇವು ಸಹಜ ಪ್ರವೃತ್ತಿಗಳೆಂದು ಯಾರು ಹೇಳಿಯಾರು? ಇವುಗಳಿಗೆ ಬದಲಾಗಿ, ಸಂಸಾರದಲ್ಲೇ ಇರುತ್ತ, ಸಹಜವಾದ ಪ್ರವೃತ್ತಿಗಳಲ್ಲೇ ತೊಡಗಿ, ಬಂದ ಕಷ್ಟ -ಸುಖಗಳನ್ನೆಲ್ಲ ಅನುಭವಿಸಿ, ಎಚ್ಚರದಿಂದ ಬದುಕಿದೆವಾದರೆ, ತಾನಾಗಿ ಸಂಸ್ಕಾರ ಬಲಿಯುತ್ತದೆ. ಅಧ್ಯಾತ್ಮದ ಕಡೆ ಮನಸ್ಸು ಒಲಿಯುತ್ತದೆ. ಇದು ಸಹಜ ಮಾರ್ಗ.

ಆದರೆ ಒಳಗಿನ ವಾಸನೆಗಳು ಕಳಚಿ, ಚೇತನ ಪಕ್ವವಾಗಬೇಕೆಂದರೆ ಎಚ್ಚರ ಇರಬೇಕು, ವಿವೇಕ ಇರಬೇಕು, ಇದು ತಾನೇ ಮೂಡಿಬರಬೇಕು.

ಇದಕ್ಕೆ ಗುರುವಿನ ಅನುಗ್ರಹ ನೆರವಾದೀತು; ಆದರೆ ಒಳಗಿನ ಅನುಕೂಲವಿದ್ದರೆ ತಾನೆ ಗುರುವಿನ ಕರುಣೆ ಕೆಲಸ ಮಾಡೀತು?

ತಪಸ್ಸು

ಸೂರ್ಯನ ಕಿರಣಗಳು ಹರಡಿಕೊಂಡಿರುವಾಗ ಕಾವು ಹೆಚ್ಚಿರುವುದಿಲ್ಲ. ಕಿರಣಗಳನ್ನು ಸಂಗ್ರಹಿಸುವುದಾದಾಗ ಶಾಖ ಒದಗುತ್ತದೆ; ಪದಾರ್ಥವನ್ನು ಸುಡುವಷ್ಟು ಬೇಗೆ ಬರುವುದಿಲ್ಲವೆ?

ಹಾಗೆಯೆ ನಮ್ಮ ಉದ್ಯಮವಾಗಲಿ ಗಮನವಾಗಲಿ ಹರಡಿ ಹಂಚಿಹೋದಾಗ ಅದರಿಂದ ಒದಗುವ ಸಿದ್ಧಿ ಕಡಮೆ. ಅದನ್ನು ಕೇಂದ್ರೀಕರಿಸಿದಾಗಲೇ ಸಿದ್ಧಿ ತೋರಿಕೊಳ್ಳುವುದು. ಸಂಸ್ಕೃತದಲ್ಲಿ ತಪಸ್ಸೆನ್ನುವ ಮಾತಿದೆಯಷ್ಟೆ? ಆ ಮಾತಿನ ಮೂಲಾರ್ಥ ಸುಡುವುದು, ಬೇಯುವುದು, ಶಾಖವಾಗಿಸುವುದು. ದೇಹದಲ್ಲಿ ಕೃತಕವಾಗಿ ಬೇಗೆಯನ್ನು ಉಂಟುಮಾಡಿಕೊಳ್ಳಲು ಉಪವಾಸ, ವ್ರತ, ಕೃಚ್ಛ್ರ, ಚಾಂದ್ರಾಯಣ ಮುಂತಾದ್ದನ್ನು ಮಾಡುವುದು ತಪಸ್ಸೆಂದು ಕಲ್ಪನೆಯಷ್ಟೆ? ಹಾಗೆ ಕಾವು ಬರದಿದ್ದರೆ ಪಾಪಗಳು ಸುಡುವುದಿಲ್ಲ, ಉತ್ಸಾಹ ತೋರುವುದಿಲ್ಲ, ಸಿದ್ಧಿ ಒದಗುವುದಿಲ್ಲ, ಸ್ವಭಾವ ಮಾರ್ಪಡುವುದಿಲ್ಲ. ಲೌಕಿಕ ವ್ಯವಹಾರದಲ್ಲಿ ನಾನಾ ಕಡೆ ಹರಿದು ಹೋಗುವ ಗಮನವನ್ನೂ ಆಸಕ್ತಿಯನ್ನೂ ಒಂದೆಡೆ ನಿಲ್ಲಿಸುವುದು, ಒಮ್ಮುಖವಾಗಿ ಹರಿಯುವಂತೆ ಮಾಡುವುದು ತಪಸ್ಸಿನ ಸ್ವಾರಸ್ಯ. ಸ್ವಾಧ್ಯಾಯವೂ ತಪಸ್ಸೆಂದು ನಾಕ ಮೌದ್ಗಲ್ಯಾಯನನ ಮತವಂತೆ. ಉಪನಿಷತ್ತಿನಲ್ಲಿ ಈ ಮಾತು ಬರುತ್ತದೆ. ಈ ಕಾಲದಲ್ಲಿ ಸ್ವಾಧ್ಯಾಯನವನ್ನು ತಾನು ಮಾಡುವ ಅಧ್ಯಾಯ, ಅಧ್ಯಯನ ಎಂದು ಅರ್ಥಮಾಡಿಕೊಂಡರೆ ತಪ್ಪಾಗದು. ವಿದ್ಯಾರ್ಥಿಯು ತನ್ನ ವೇಳೆಯನ್ನೆಲ್ಲ ಓದಿಗೇ ಮೀಸಲಾಗಿಟ್ಟರೆ, ಉಪಾಧ್ಯಾಯನು ತನ್ನೆಲ್ಲ ಶಕ್ತಿಯನ್ನೂ ಪಾಠ ಹೇಳಲು ವಿನಿಯೋಗಿಸಿದರೆ, ಅದು ತಪಸ್ಸೇ. ತಪಸ್ಸು ಯಾವ ಪ್ರಯೋಜನಕ್ಕಾಗಿ ಎಂಬ ವಿಚಾರದಲ್ಲಿ ವೈವಿಧ್ಯವಿದ್ದರೂ, ತಪಸ್ಸಿನ ಆಕಾರದಲ್ಲಿ ಹೆಚ್ಚೂ ಕಡಮೆ ಇದ್ದರೂ, ತಪಸ್ಸಿನ ಸಂವಿಧಾನ ಒಂದೇ. ಬೇರೆ ಯಾವುದರ ಕಡೆಗೂ ಮನಸ್ಸನ್ನು ಹರಿಸದೆ, ಹಿಡಿದ ಪಟ್ಟನ್ನು ಬಿಡದೆ, ಕೈಗೊಂಡ ಕೆಲಸದಲ್ಲೇ ತನ್ನೆಲ್ಲ ಕಾಲ, ಶಕ್ತಿ ಉತ್ಸಾಹಗಳನ್ನೂ ಪ್ರಯೋಗ ಮಾಡುವುದೇ ತಪಸ್ಸಿನ ದಾರಿ.

ಬರುವ ಅಡ್ಡಿ ಆತಂಕಗಳನ್ನು ಗಮನಿಸದೆ, ಎಡರು-ತೊಡರುಗಳಿಗೆ ಅಂಜದೆ, ಹಿಡಿದ ಕೆಲಸವನ್ನು ಒಂದೇ ಮನಸ್ಸಿನಿಂದ ನೆರವೇರಿಸಿದರೆ ಅದು ತಪಸ್ಸೇ.

ದುರ್ಜನತಾಪಸ

ಷಡಕ್ಷರಿ ಕವಿಯು ತನ್ನ ರಾಜಶೇಖರ ವಿಳಾಸದಲ್ಲಿ 'ದುರ್ಜನತಾಪಸನೇಂ ಕೃತಾರ್ಥನೋ' ಎಂದು ಅಚ್ಚರಿಪಟ್ಟಿದ್ದಾನೆ.

ತಪಸ್ಸೆಂದರೆ ಒಂದೇ ನಿಟ್ಟಿನಲ್ಲಿ ಶ್ರಮ ಪಡುವುದು; ಬೇರೆ ಯಾವುದಕ್ಕೂ ಗಮನ ಹರಿಸದೆ, ತನಗೆ ಒಲಿದ ವಿಷಯವನ್ನೇ ಎಡೆಬಿಡದೆ ಚಿಂತಿಸುತ್ತಿರುವುದು. ತನಗೆ ಎಷ್ಟಾದರೂ ಕಷ್ಟವಾಗಲಿ ಅದನ್ನು ಲೆಕ್ಕಿಸದೆ, ಹಿಡಿದ ಪಟ್ಟನ್ನು ಬಿಡದೆ, ಬಯಕೆಯನ್ನು ತೀರಿಸಿಕೊಳ್ಳುವ ಹಟ. ತಪಸ್ಸಿನ ಗುರಿ ಒಳ್ಳೆಯದಾದರೂ ಇರಬಹುದು; ಕೆಟ್ಟದ್ದಾದರೂ ಇರಬಹುದು. ದೇವತೆಗಳೂ ತಪಸ್ಸು ಮಾಡುತ್ತಾರೆ; ದಾನವರೂ ಮಾಡುತ್ತಾರೆ. ಒಳಿತಾಗಲೆಂದು ಮಾಡುವ ತಪಸ್ಸಿದೆ; ಕೇಡಿಗಾಗಿಯೇ ಮಾಡುವುದೂ ಇದೆ. ತಪಸ್ಸು ಮುಖ್ಯವಾಗುವುದು ಗುರಿಯಲ್ಲಲ್ಲ, ಸಂವಿಧಾನದಲ್ಲಿ; ಹಿಡಿದ ದಾರಿಯಲ್ಲಿ. ತಪಸ್ಸಿನಲ್ಲಿ ಹಟವಿರಬೇಕು, ಏಕಾಗ್ರತೆಯಿರಬೇಕು, ಛಲವಿರಬೇಕು. ಗುರಿ ಒಳ್ಳೆಯದಾದರೆ ಸಜ್ಜನತಾಪಸಿ, ಕೆಟ್ಟದ್ದಾದರೆ ದುರ್ಜನ ತಾಪಸಿ. ಇಬ್ಬರೂ ತಾಪಸಿಗಳೇ: ತಪಸ್ಸು ಇಬ್ಬರಿಗೂ ಸಮನೇ.

ಷಡಕ್ಷರಿಯ ತಾಪಸಿ ದುರ್ಜನತಾಪಸಿ.

ಅವನ ಪರಿಯನ್ನು ಕವಿ ಬಣ್ಣಿಸಿದ್ದಾನೆ.

ಬೇರೆಯವರನ್ನು ದೂರಿ ಬಯ್ದಾಡುವುದೇ ಅವನ ಜಪವಂತೆ.

ಬೇರೆಯವರ ಮನಸ್ಸೆಂಬ ಹೂವನ್ನು ಬಾಡಿಸಿ ಕೊರಗಿಸುವುದೇ ಅವನ ತಪಸ್ಸು.

ಬೇರೆಯವರ ಬದುಕನ್ನು ಹಾಳುಮಾಡಲು ಉತ್ಸಾಹದಿಂದ ಹೊರಡುವುದೇ ದುರ್ಜನ ತಾಪಸಿಯ 'ಪರತರಶೀಲ'ವಂತೆ. ಸಾಮಾನ್ಯವಾಗಿ ಶೀಲವೆಂದರೆ ನಮ್ಮ ಕಾಮ, ಕ್ರೋಧ, ಲೋಭ ಮುಂತಾದ ಶತ್ರುಗಳನ್ನು ಗೆಲ್ಲುವುದು; ಗೆಲ್ಲಲು ಮಾಡುವ ಉದ್ಯಮ. ದುರ್ಜನ ತಾಪಸಿಯು ಗೆಲ್ಲಲು, ಹಾಳು ಮಾಡಲು ಹವಣಿಸುವುದು ಇವನ್ನಲ್ಲ; ಬೇರೆಯವರ ನೆಮ್ಮದಿಯನ್ನು, ಬಾಳನ್ನು. ಜನರನ್ನು ಮರುಳುಮಾಡಿ ಅವರ ಗುಟ್ಟನ್ನೆಲ್ಲ ಅರಿತುಕೊಂಡು, ಅದರಿಂದ ಲಾಭವನ್ನು ಗಿಟ್ಟಿಸಿಕೊಳ್ಳುವುದು ಹೇಗೆಂಬುದೇ ಅವನು ಮಾಡುವ ಧ್ಯಾನ. ಯಾರನ್ನು ಮರಳುಮಾಡಲಿ, ಯಾರ ಮರ್ಮವನ್ನು ಭೇದಿಸಲಿ ಇದೇ ಅವನ ಎಡೆಬಿಡದ ಚಿಂತನೆ.

ತಪಸ್ಸಿನ ಫಲ ಕೃತಾರ್ಥತೆಯಲ್ಲವೆ? ಗುರಿಯನ್ನು ಮುಟ್ಟಿದರೆ ಅವನು ಕೃತಾರ್ಥ. ಸಜ್ಜನ ತಾಪಸಿಯದು ದೇವತಾದರ್ಶನವೋ, ಆತ್ಮ ಸಾಕ್ಷಾತ್ಕಾರವೋ, ಲೋಕಹಿತವೋ ಆದರೆ ದುರ್ಜನ ತಾಪಸಿಯದು ಏನೆಂದು ಹೇಳೋಣ?

ತ್ರಿಕರಣ ಶುದ್ಧಿ

ಕೆಲವರು ಮಾರುದ್ದ ಮಾತಾಡುತ್ತಾರೆ. ಕೆಲವರು ಕೆಲಸ ಮಾಡುತ್ತಲೇ ಇರುತ್ತಾರೆ.

ಆಡಿದ ಮಾತು ನಿಲ್ಲುವುದಿಲ್ಲ; ಗಾಳಿಗೆ ತೂರಿ ಹೋಗುತ್ತದೆ. ಮಾಡಿದ ಕೆಲಸ ಕೈಗೂಡುವುದಿಲ್ಲ; ಹೇಳಹೆಸರಿಲ್ಲದೆ ಮರೆಯಾಗುತ್ತದೆ. ಕೆಸರಿನಲ್ಲಿ ನೆಟ್ಟ ಕಂಬ ಹೇಗೆ ನಿಂತೀತು? ಹಾಗೆಯೆ ಆಡಿದ ಮಾತು ಗಟ್ಟಿಯಾದ ಮನಸ್ಸಿನಿಂದ ಹೊರಬಂದುದಾದರೆ ಉಳಿದೀತು; ಹಾರಿಕೆಯ ಮಾತಾದರೆ ಉಳಿಯುವುದು ಹೇಗೆ? ಶ್ರದ್ಧೆಯಿಂದ ಮಾಡಿದ ಕೆಲಸವಾದರೆ ಕೈಗೂಡುವುದು ಸಾಧ್ಯ. ತೋರಿಕೆಯ ಕೆಲಸವಾದರೆ, ಅದು ನಿಲ್ಲುವುದು ಹೇಗೆ? ಆಡುವ ಮಾತು ತೂಕದ್ದಾಗಿರಬೇಕು; ಮಾಡಿದ ಕೆಲಸ ಅಚ್ಚುಕಟ್ಟಾಗಿರಬೇಕು. ಆಗ ಅದರಿಂದ ಇತರರಿಗೆ ಪ್ರಯೋಜನವುಂಟು. ತಾತ್ಪರ್ಯವೇ ಇರದಂತೆ ಆಡಿದ ಮಾತು, ಉದ್ದೇಶವೇ ಇಲ್ಲದೆ ಮಾಡಿದ ಕೆಲಸ ಕೆಸರಿನಲ್ಲಿ ನೆಟ್ಟ ಕಂಬದಂತೆ ಕೆಳಗೆ ಬೀಳುತ್ತದೆ. ಅಂಥ ಮಾತನಾಡಿದವರು, ಅಂಥ ಕೆಲಸ ಮಾಡಿದವರು ತಾವೂ ಬೀಳುವರೆಂಬುದನ್ನು ತಿಳಿದಿರುವುದಿಲ್ಲ. ಕೆಸರಿನಲ್ಲಿ ಕಾಲಿಟ್ಟರೆ ಕಾಲು ಒಳಗೆ ಹೋಗುತ್ತದೆ, ಮೇಲೇಳಲಾಗದು. ಇದೊಂದು ಸ್ವಾರಸ್ಯ. ನೆಟ್ಟ ಕಂಬ ಕೆಳಗೆ ಬೀಳುತ್ತದೆ, ಇಟ್ಟ ಕಾಲು ಒಳಗೆ ಇಳಿಯುತ್ತದೆ. ಎಷ್ಟಾದರೂ ಕೆಸರಿನ ಸ್ವಭಾವವೇ ಅದಲ್ಲವೆ? ಕಾಲು ಹೊರಗಿದ್ದು ಕಂಬ ಒಳಗೆ ಇಳಿದರೆ ಸರಿ, ಕಂಬ ನೆಡಬೇಕಾದದ್ದು ಹಾಗೆಯೇ. ನೆಲ ಗಟ್ಟಿಯಿರಬೇಕು; ಶ್ರಮವಹಿಸಿ ಗುಳಿ ತೋಡಬೇಕು; ಅದರಲ್ಲಿ ಕಂಬ ನಿಲ್ಲಿಸಬೇಕು. ಯಾವ ಪೂರ್ವಸಿದ್ಧತೆಯೂ ಇಲ್ಲದೆ ಆಡಿದ ಮಾತು, ಮಾಡಿದ ಕೆಲಸ ಬೇರೆಯವರ ಪ್ರಯೋಜನಕ್ಕೆ ಬರುವುದಿಲ್ಲವೆಂಬುದು ಒಂದು ಪಕ್ಷವಾದರೆ, ಆಡಿದವರಿಗೂ ಮಾಡಿದವರಿಗೂ ಅದು ಕುತ್ತಾಗಿ ಪರಿಣಮಿಸುವುದೆಂಬುದು ಇನ್ನೊಂದು. ಮನಸ್ಸು ಒಳ್ಳೆಯದಾದರೆ ಮಾತಿಗೆ ಮೆರುಗು, ಕೆಲಸಕ್ಕೆ ಕವಚ. ಮನಸ್ಸು ಕೆಟ್ಟದ್ದಾದರೆ ಮಾತು ಮಿತ್ತು, ಕೆಲಸ ಕಪ್ಪು.

ಮನಸ್ಸೊಂದು, ಮಾತು ಇನ್ನೊಂದು, ಕೆಲಸ ಮತ್ತೊಂದು ಎಂದು ಮೂರು ದಾರಿ ಹಿಡಿದರೆ ಮುಂದುವರಿಯುವುದಾದೀತೆ?

ಮೂರು ಒಂದಾಗಿದ್ದರೆ ಮಾತ್ರ ಅದನ್ನು 'ತ್ರಿಕರಣ ಶುದ್ಧಿ' ಎನ್ನುವರು. ಮಾತು, ಮೈ (ಕೆಲಸ) ಮತ್ತು ಮನಸ್ಸು ಇವು ಮೂರು ಹೊಂದಿಕೊಂಡಿರುವುದೇ ಶುದ್ಧಿ. ಶುದ್ಧಿಯಲ್ಲೆ ಬಲ ಇರುವುದು.

ದಾನಿ-ದಾನ

ಹಿತೋಪದೇಶದಲ್ಲಿ ಅರ್ಜುನನಿಗೆ ಯಾರೋ ಹೇಳಿದ ಮಾತೊಂದಿದೆ. ಯಾರು ಹೇಳಿದ್ದೆಂಬುದಾಗಲಿ, ಯಾವ ಸಂದರ್ಭವೆಂದಾಗಲಿ ತಿಳಿಯುವುದಿಲ್ಲ. ಆದರೆ ಮಾತು ಸ್ವಾರಸ್ಯವಾಗಿದೆ.

ಅದು ದಾನವನ್ನು ಕುರಿತದ್ದು. ನಮ್ಮಲ್ಲಿ ಹಲವರಿಗೆ ದಾನ ಮಾಡಬೇಕೆಂಬ ಬುದ್ಧಿಯಿರುತ್ತದೆ; ದಾನ ಮಾಡಿದರೆ ಪುಣ್ಯ ಬರುವುದೆಂಬ ನಂಬಿಕೆಯೂ ಉಂಟು. ಇತರ ಪ್ರಯೋಜನಗಳೂ ಉಂಟೆನ್ನಿ! ಆದರೆ ದಾನಕ್ಕಾಗಿ ಯಾರನ್ನು ಆರಿಸಿ ಕೊಳ್ಳುತ್ತೇವೆ? ಬಹುವೇಳೆ ನಮಗೆ ತಿಳಿದ ಮಂದಿಯನ್ನೇ. ಅವರಿಗೆ ನಮ್ಮ ದಾನದ ಅಗತ್ಯವಿದ್ದೀತೆ ಎನ್ನುವ ಚಿಂತೆ ನಮ್ಮನ್ನು ಕಾಡುವುದಿಲ್ಲ. ನಾವು ನೀಡಿದ ದಾನವನ್ನು ಹೇಗೆ ಬಳಸಿಕೊಂಡಾರು ಎಂಬ ಕುತೂಹಲವೂ ನಮಗಿರುವುದಿಲ್ಲ.

ನಮಗೆ ತಿಳಿದವರೆಂದರೆ ಹೆಚ್ಚು ಕಡಮೆ ನಮ್ಮ ಆರ್ಥಿಕ ನೆಲೆಯಲ್ಲೇ ಇರುವವರು. ಅವರಿಗೆ ಯಾರ ದಾನದ ಅಗತ್ಯವೂ ಬಹುಮಟ್ಟಿಗೆ ಇರುವುದಿಲ್ಲ. ನಮ್ಮ ಕೊಡುಗೆಯನ್ನು ಕುರಿತು ಅವರಿಗೆ ಅಷ್ಟಾಗಿ ಆದರವೂ ಇರಲಾರದು.

ಇಂಥ ಸಂದರ್ಭದಲ್ಲಿ ಅರ್ಜುನನಿಗೆ ಹೇಳಿದ ಮಾತು ಇದು -

ದರಿದ್ರಾನ್ ಭರ ಕೌಂತೇಯ
ಮಾ ಪ್ರಯಚ್ಛೇಶ್ವರೇ ಧನಂ ।
ವ್ಯಾಧಿತಸ್ಯೌಷಧಂ ಪಥ್ಯಂ
ನೀರುಜಸ್ಯ ಕಿಮೌಷಧ್ಯೈಃ ॥

ಅದರ ಅರ್ಥ ಇಷ್ಟೆ - ಬಡಬಗ್ಗರಿಗೆ ದಾನಮಾಡು, ಅವರನ್ನು ಎತ್ತಿ ನಿಲ್ಲಿಸು, ಹಣವಂತರಿಗೆ ದಾನಮಾಡಬೇಡ, ರೋಗವಿದ್ದವನಿಗೆ ಔಷಧದ ಅಗತ್ಯವಿದೆ, ರೋಗವಿಲ್ಲದವನಿಗೆ ಔಷಧದ ಹಂಗೇಕೆ? ಅದನ್ನು ಕಟ್ಟಿಕೊಂಡು ಅವನು ಏನು ತಾನೆ ಮಾಡಿಯಾನು?

'ಪಾತ್ರಾಪಾತ್ರವನರಿತು ದಾನವ ಮಾಡು' ಎನ್ನುವಾಗಲೂ ಇದೇ ತಾತ್ಪರ್ಯವೇ ಇದೆ. ಪಾತ್ರತೆಯೆಂದರೆ ಯೋಗ್ಯತೆಯೆಂದಷ್ಟೇ ಅರ್ಥವಲ್ಲ; ದಾನದ ಅಗತ್ಯವಿರುವುದು ಎಂದೂ ಅರ್ಥ.

ಲೋಭಿ-ದಾನಿ

ಇದೇನು ದಾನಿಯನ್ನು ಲೋಭಿಯೆನ್ನಬಹುದೆ? ಲೋಭದ ಬುದ್ಧಿಯಿದ್ದರೆ ದಾನ ಮಾಡುವುದು ಹೇಗೆ?

ದಾನ ಮಾಡುವಾಗ ತನಗೆ ಒಳ್ಳೆಯದಾಗಲಿ ಎಂಬ ಬಯಕೆಯೇ ಇರುವುದು ವಾಡಿಕೆ. ತಾನು ನೀಡಿದ ದಾನದಿಂದ ಇತರರಿಗೆ ಒಳ್ಳೆಯದಾಗಲೆಂದು ಗಮನ ವಿಡುವವರು ಕಡಮೆ ಮಂದಿ. ಬಿರುದಿಗಾಗಿ ಆಸೆಪಟ್ಟು ಸತ್ರ ಕಟ್ಟಿಸುವವರಿದ್ದರು. ಕೀರ್ತಿಯನ್ನು ಬಯಸಿ ಆಸ್ಪತ್ರೆಯನ್ನು ಏರ್ಪಡಿಸುವವರಿಲ್ಲವೆ? ಲೋಕೋಪಕಾರವೆಂಬ ನೆಪದಿಂದ ದಾನ ಮಾಡುವವನು ದಿಟವಾದ ದಾನಿಯೇನಲ್ಲ; ಅವನ ದಾನದಿಂದ ಆರ್ಥಿಕ ಅನುಕೂಲಗಳು ಅವನಿಗೇ ಹೆಚ್ಚುವುದುಂಟು. ಈ ಕಾಲದಲ್ಲಿ ವಿದ್ಯಾದಾನಿಗಳು, ಆರೋಗ್ಯ ದಾನಿಗಳು, ಉದ್ಯೋಗ ದಾನಿಗಳು, ಸೌಲಭ್ಯ ದಾನಿಗಳು ಎಂದು ಬಗೆ ಬಗೆಯ ದಾನಿಗಳಿದ್ದಾರಲ್ಲವೆ? ಅವರಿಂದ ಇತರರಿಗೆ ಅಷ್ಟಿಷ್ಟು ಅನುಕೂಲವಾಗದೆ ಇಲ್ಲ. ಆದರೆ ಪ್ರಧಾನವಾಗಿ ಅನುಕೂಲ ತಮಗೇ. ಬಿರುದಿಗಾಗಿ ಸತ್ರ ಕಟ್ಟಿಸಿದನೆನ್ನಿ. ಬಿರುದು ಬಂದ ಮೇಲೆ ಸತ್ರ ಹೇಗೆ ನಡೆಯುವುದೆಂಬ ಚಿಂತೆ ಅವನಿಗಿರದು. ಆಸ್ಪತ್ರೆಯನ್ನು ಏರ್ಪಡಿಸಿ ಕೀರ್ತಿ ಬಂದಿತು. ಮುಂದೆ ಆಸ್ಪತ್ರೆಯಿಂದ ಜನರಿಗೆ ಅನುಕೂಲಕ್ಕಿಂತ ಹೆಚ್ಚಾಗಿ ತೊಂದರೆಯೇ ಆದರೆ ಅವನಿಗೇನು ದುಃಖವಿಲ್ಲ. ದಾನ ಮಾಡುವುದರ ಉದ್ದೇಶವೇನು ಎಂಬುದರ ಮೇಲೆ ದಾನದ ಸ್ವರೂಪ ನಿರ್ಧಾರವಾಗುತ್ತದೆ.

ಇನ್ನು ಸಂಪ್ರದಾಯದಂತೆ ಕೆಲವು ದಾನಗಳನ್ನು ಮಾಡುವವರಿದ್ದಾರೆ; ಪುಣ್ಯಕ್ಕಾಗಿ ಅಥವಾ ಪಾಪ ಪರಿಹಾರಕ್ಕಾಗಿ.

ದಾನ ತೆಗೆದುಕೊಳ್ಳುವವರಿಗೆ ಅದರ ಅಗತ್ಯವಿದೆಯೆ, ಅದರಿಂದ ಅವರಿಗೆ ಪ್ರಯೋಜನವಾದೀತೆ, ಇನ್ನಷ್ಟು ಕಷ್ಟವೇ ಆಗಬಹುದೋ ಎಂಬುದನ್ನು ಅವರು ಪರಿಗಣಿಸುವುದಿಲ್ಲ. ಗೋದಾನಕ್ಕೆ ಗೊಡ್ಡು ಆಕಳಾದರೂ ಆದೀತು; ಭೂದಾನಕ್ಕೆ ಬಂಜರು ಭೂಮಿಯೂ ನಡೆದೀತು; ಸುವರ್ಣ ದಾನಕ್ಕೆ ತಾಮ್ರ ಚಿಕ್ಕಾಸಾದರೂ ಸಾಕು.

ದಾನ ದಾನವೆ ಎಂದವರ ಎಣಿಕೆ!

ತ್ಯಾಗ

ತ್ಯಾಗ ಎಂದರೆ ಬಿಡುವುದು. ಬರಿಯ ಬಿಡುವುದಷ್ಟೇ ತ್ಯಾಗವಾದೀತೆ? ನಮಗೆ ಬೇಡವೆನಿಸಿದುದನ್ನು ಬಿಡುತ್ತೇವೆ. ಅದೇನು ತ್ಯಾಗವೆ? ತ್ಯಾಗ ಎಂಬ ಮಾತಿನ ವಿಶೇಷಾರ್ಥದಲ್ಲಿ ಬಿಡುವುದರ ಸಂದರ್ಭ, ಅದರ ಹಿಂದಿರುವ ಮನೋಧರ್ಮ, ಉದ್ದೇಶ - ಇವು ಮುಖ್ಯವಾಗುತ್ತವೆ.

ನದಿಯಲ್ಲಿ ಒಬ್ಬ ಕಾಲುಜಾರಿ ಬಿದ್ದನೆನ್ನಿ. ಅದನ್ನು ನೋಡಿದ ಇನ್ನೊಬ್ಬ ಒಡನೆಯೆ ನದಿಗೆ ಹಾರಿ, ಮೊದಲನೆಯವನನ್ನು ಎತ್ತಿ ದಡಕ್ಕೆ ಹಾಕುತ್ತಾನೆ. ಜನರೆಲ್ಲ ಅವನನ್ನು ಕೊಂಡಾಡುತ್ತಾರೆ. ಅಲ್ಲವೆ? ಕೊಂಡಾಡುವ ಕಾರಣವಾದರೂ ಏನು? ಸ್ವಾರ್ಥವನ್ನು ತ್ಯಾಗ ಮಾಡಿ, ತನ್ನ ಬದುಕನ್ನೂ ಲೆಕ್ಕಿಸದೆ ಇನ್ನೊಬ್ಬನ ಪ್ರಾಣವನ್ನು ಉಳಿಸಿದವನೆಂಬುದೇ ಕಾರಣ. ತಿಳಿಯದ ಯಾರನ್ನೊ ನೀರಿನಿಂದ ಮೇಲೆತ್ತಿ, ಬದುಕಿಸಿದರೆ ಇವನಿಗಾಗುವ ಪ್ರಯೋಜನವೇನು? ಲಾಭವೇನು? ಆ ಗಳಿಗೆಯಲ್ಲಿ ಆತನಿಗೆ ಇಂಥದೇನಾದರೂ ಯೋಚನೆ ಒದಗುವುದೂ ಇಲ್ಲ. ಕಡೆಗೆ ಜನರು ತನ್ನನ್ನು ಮೆಚ್ಚಿಕೊಳ್ಳಲಿ, ಕೊಂಡಾಡಲಿ ಎಂಬ ಬಯಕೆಯಾಗಲಿ ಇರುವುದಿಲ್ಲ. ತನ್ನ ಕೆಲಸದಿಂದ ತನಗೇ ಪ್ರಾಣಾಪಾಯವಿದ್ದೀತು ಎಂಬ ಕಲ್ಪನೆಯೂ ಆ ಹೊತ್ತಿನಲ್ಲಿ ಮೇಲೆದ್ದು ನಿಲ್ಲುವುದಿಲ್ಲ.

ಅಂಥ ಭಯವಿದ್ದರೂ, ಅದನ್ನು ಮುಂದೆ ಬರಲು ಬಿಡದೆ, ಮುಳುಗುವವನನ್ನು ಮೇಲೆತ್ತಲು ತೊಡಗುವನೆಂದರೆ ಅದು ತ್ಯಾಗವಲ್ಲದೆ ಮತ್ತೇನು?

ತ್ಯಾಗದಲ್ಲಿ ತನ್ನ ಲಾಭದ ಕಡೆ ಗಮನವಿರದು; ತನಗೊದಗುವ ತೊಂದರೆ ಹೆಚ್ಚೆನಿಸದು. ಬೇರೆಯವರ ಒಳಿತು ಎಂಬುದೇ ಮುಖ್ಯವಾಗಿ, ಅದಕ್ಕಾಗಿ ತನ್ನ ಅನುಕೂಲವನ್ನೂ ಕೈ ಬಿಡಲು ಸಿದ್ಧನಾಗಿರುವವನು ತ್ಯಾಗಿ. ಅದಕ್ಕೆ ಸಂಕಲ್ಪ ಶುದ್ಧಿಯಿರಬೇಕು. ಸ್ಥೈರ್ಯವಿರಬೇಕು, ಮನೋಬಲವಿರಬೇಕು. ತ್ಯಾಗದಲ್ಲಿ ಆಡಂಬರ ಇರಲಾರದು. ದಾನಗಳಲ್ಲಿ ಗುಪ್ತದಾನವೇ ಶ್ರೇಷ್ಠವೆಂದು ಹೇಳುವುದಿಲ್ಲವೆ?

ಕರ್ತವ್ಯ

ಮನುಷ್ಯನ ಜೀವನದಲ್ಲಿ ಕರ್ತವ್ಯಗಳ ಕಲ್ಪನೆಯಿದೆ. ತನ್ನ ಕುಟುಂಬಕ್ಕಾಗಿ ತಾನು ಮಾಡಬೇಕಾದುದು; ನೆರೆಹೊರೆಯವರಿಗಾಗಿ, ಸಮಾಜಕ್ಕಾಗಿ, ಮುಂದಿನ ತಲೆಮಾರಿಗಾಗಿ ಮಾಡಬೇಕಾದುದು ಇವೆಲ್ಲ ಕರ್ತವ್ಯಗಳೇ.

ಹೆಂಡತಿ - ಮಕ್ಕಳನ್ನು ಕಾಪಾಡುವ ಹೊಣೆಯೆಂಬುದಂತೂ ಎಲ್ಲರಿಗೂ ಒದಗುವ ಬವಣೆಯೇ. ಈ ಕರ್ತವ್ಯ ನಿರ್ವಹಣೆಗಾಗಿ ತಮ್ಮ ಬಾಳನ್ನೆಲ್ಲ ಏಕಾಗ್ರಚಿತ್ತರಾಗಿ ಸವೆಸುವ ಗೃಹಸ್ಥರು ವಿರಳವೇನಲ್ಲ. ಅವರಿಗೆ ಗೃಹಕೃತ್ಯವೇ ಬದುಕಿನ ಪರಮಪ್ರಯೋಜನ; ಅದನ್ನು ಬಿಟ್ಟು ಬೇರೆ ಯಾವ ಹವ್ಯಾಸವಾಗಲಿ, ಅಭಿರುಚಿಯಾಗಲಿ ಅವರಿಗಿರದು. ಇದು ಸರಿಯೆ, ಇಷ್ಟು ಸಾಕೆ ಎಂಬ ಸಂಶಯವೂ ಅವರನ್ನು ಕಾಡುವುದಿಲ್ಲ. ನೆರೆಹೊರೆಗೆ, ಸಮಾಜಕ್ಕೆ, ಕುಟುಂಬಕ್ಕೆ ತನ್ನಿಂದ ಸಲ್ಲಬೇಕಾದ ಕರ್ತವ್ಯದ ಜೊತೆಗೆ ಇನ್ನೊಂದು ಕರ್ತವ್ಯವೂ ಇದೆಯೆಂಬುದನ್ನು ಅವರು ಅರಿಯರು. ಅದು ಉಳಿದದ್ದೆಲ್ಲಕ್ಕಿಂತ ಮುಖ್ಯವಾದುದು ಎಂಬುದನ್ನಂತೂ ಅವರು ಕನಸಿನಲ್ಲಿಯೂ ಕಾಣರಿಯರು. ಯಾರಿಗಾಗಲಿ ತನ್ನ ಕುರಿತಂತೇ ತನಗೊಂದು ಕರ್ತವ್ಯ ವಿದೆಯಲ್ಲವೆ? ತನ್ನ ದೇಹ, ಇಂದ್ರಿಯಗಳು, ಮನಸ್ಸು ಇವೆಲ್ಲವನ್ನೂ ಕೂಡಿಸಿ ಕೊಂಡು, ಅನುಭವಗಳನ್ನು ಪಡೆದುಕೊಂಡು, ಸಂಸ್ಕಾರಗಳನ್ನು ಮೂಡಿಸಿಕೊಂಡು ಮುಂದೆ ಸಾಗುತ್ತಿರುವ ಈ ಬದುಕಿಗೊಂದು ಅರ್ಥವಿದೆಯೆ? ತಾನಿರುವ ಜಗತ್ತಿ ನೊಂದಿಗೆ ತನ್ನ ಸಂಬಂಧ ವಿಶೇಷದ ತಾತ್ಪರ್ಯವೇನು? ತನ್ನ ಸ್ವರೂಪ ಸ್ವಭಾವಗಳನ್ನೂ ಗೊತ್ತು ಗುರಿಗಳನ್ನು ಕುರಿತು ಕೊಂಚ ಆಲೋಚನೆ ನಡೆಸಬೇಡವೆ? ಈ ತೆರನಾದ ಚಿಂತನೆ ನಡೆಯುವುದು ಆಧ್ಯಾತ್ಮಿಕ ಪ್ರವೃತ್ತಿಯೆನಿಸಿಕೊಳ್ಳುತ್ತದೆ. ಹಲವರು ಈ ಪ್ರವೃತ್ತಿಯನ್ನು ಮುಪ್ಪಡರುವವರೆಗೂ ಬೆಳೆಯಗೊಡುವುದಿಲ್ಲ. ಗೃಹಕೃತ್ಯದ ಅಗತ್ಯಗಳೆಲ್ಲ ಮೊದಲು ತೀರಲಿ, ಅನಂತರ ಆಧ್ಯಾತ್ಮಿಕ ಚಿಂತನೆಗೆ ತೊಡಗೋಣ ಎಂದು ಅದನ್ನು ಮುಂದೂಡುವರು.

ಸಮುದ್ರ ಸ್ನಾನಕ್ಕೆಂದು ಹೋಗಿ, ಮೊದಲು ಅಲೆಗಳ ಸದ್ದೆಲ್ಲ ಅಡಗಲಿ, ಆಮೇಲೆ ನೀರಿಗಿಳಿಯುತ್ತೇನೆ ಎಂದು ಹೇಳಿದಂತೆ!

ಗೃಹಕೃತ್ಯದ, ಸಮಾಜಕಾರ್ಯದ, ಲೋಕಸಂಗ್ರಹದ ನಡುವೆಯೆ ಅಧ್ಯಾತ್ಮಿಕ ಚಿಂತನೆಯೂ ನಡೆಯಬೇಕು.

ರಕ್ತಿ-ವಿರಕ್ತಿ

ರಕ್ತಿಯೆಂದರೆ ಬದುಕಿನ ಆಸೆ. ವಿರಕ್ತಿಯೆಂದರೆ ಬದುಕಿನ ಬಗೆಗೆ ಅಸಮಾಧಾನ ಪಟ್ಟು, ಅದರಿಂದ ಹಿಂದೆಗೆಯುವ ಮನೋವೃತ್ತಿ. ಇವೆರಡೂ ಪರಸ್ಪರ ವಿರೋಧಿಗಳಲ್ಲವೆ? ರಕ್ತಿಯಿದ್ದವನು ಬಾಳಬಯಸುತ್ತಾನೆ. ಲೋಕದ ಭೋಗಗಳನ್ನು ಅನುಭವಿಸತೊಡಗುತ್ತಾನೆ; ಸುಖ ದುಃಖಗಳಿಂದ ಓಡುವುದಿಲ್ಲ. ವಿರಕ್ತನಾದರೋ ಬದುಕಿನ ದುಃಖಗಳಿಗೆ ಬೆದರಿ, ಕಷ್ಟಕಾರ್ಪಣ್ಯಗಳಿಗೆ ಹೇಸಿ, ಲೋಕದ ಸುಖವೂ ಬೇಡ ಎಂದು ಓಡಿಹೋಗುತ್ತಾನೆ.

ವಿರಕ್ತನೆಂದರೆ ಸಂನ್ಯಾಸಿ; ರಕ್ತಿಯಿರುವವನು ಭೋಗಿ. ದಿಟವಾಗಿ ನೋಡಿದರೆ ಇವೇನು ವಿರುದ್ಧವಾದುವಲ್ಲ. ರಕ್ತಿಯೂ ವಿರಕ್ತಿಯೂ ಬೆರೆತುಕೊಂಡಾಗಲೆ ಜೀವನದಲ್ಲಿ ಸ್ವಾರಸ್ಯ ಕಾಣಿಸಿಕೊಳ್ಳುವುದು. ಏಕಾಂತವಾಗಿ ರಕ್ತಿಯಾಗಲಿ ವಿರಕ್ತಿಯಾಗಲಿ ಇರುವ ವ್ಯಕ್ತಿ ಯಾವ ಪುರುಷಾರ್ಥವನ್ನೂ ಪಡೆದುಕೊಳ್ಳಲಾರ. ಬದುಕಿನಲ್ಲಿ ಬರುವ ಬವಣೆಗಳನ್ನೂ ಸುಖಗಳನ್ನೂ ನಗುನಗುತ್ತಲೇ ಅನುಭವಿಸುವಾಗ ಮನಸ್ಸಿಗೊಂದು ಸಂಸ್ಕಾರವಿರಬೇಕು. ಇದಿಲ್ಲದೆ ರಕ್ತಿ ಮುಂದುವರಿಯುವುದಿಲ್ಲ, ಬೇರೂರುವುದಿಲ್ಲ. ಸಂಯಮವಿಲ್ಲದ ರಕ್ತಿ ಅನರ್ಥಕ್ಕೆಡೆಮಾಡಿಕೊಟ್ಟೀತು. ಸಂಯಮವೆಂದರೆ ವಿರಕ್ತಿಯ ಮನೋಧರ್ಮವೇ.

ಭೋಗಗಳನ್ನು ಅನುಭವಿಸುವಾಗ ಎಚ್ಚರವಿರಬೇಕು; ಭೋಗ ಮಿತಿ ಮೀರಬಾರದು. ಈ ಎಚ್ಚರಕ್ಕೇ ಸಂಯಮವೆಂದು ಹೆಸರು. ವೈರಾಗ್ಯವೆಂದರೆ ಬದುಕಿನ ಎಲ್ಲ ಸುಖಗಳನ್ನೂ ಸ್ವಾರಸ್ಯವನ್ನೂ ತೊರೆದು, ಹೋಗುವುದಲ್ಲ. ಸುಖ ಬಂದಾಗ ಎಚ್ಚರ ತಪ್ಪದೆ, ಕಷ್ಟ ಬಂದಾಗ ಕಳವಳಪಡದೆ, ಸಮಚಿತ್ತವನ್ನು ಸಾಧಿಸಿಕೊಳ್ಳುವುದು ವಿರಕ್ತಿಯ ಉದ್ದೇಶ. ರಕ್ತಿಯಾಗಲಿ ವಿರಕ್ತಿಯಾಗಲಿ ಅದೇ ಮನುಷ್ಯನ ಮುಖ್ಯ ಪ್ರಯೋಜನವಲ್ಲ; ಗುರಿಯಲ್ಲ; ಅದೊಂದು ದಾರಿ ಅಷ್ಟೆ.

ಅದೊಂದು ಸಾಧನ; ಒಂದು ಮಾಧ್ಯಮ. ಬದುಕಿನ ತಾತ್ಪರ್ಯವೇ ರಕ್ತಿಯೆಂದಾಗಲಿ ವಿರಕ್ತಿಯೆಂದಾಗಲಿ ಹೇಳುವುದಾಗದು.

ಸಂತೃಪ್ತಿ

ಸಂತೋಷಕ್ಕೂ ಸಂತೃಪ್ತಿಗೂ ಒಂದು ವ್ಯತ್ಯಾಸವಿದೆ. ಸಂತೋಷವೆಂದರೆ ಹಿತವೆನಿಸುವ ವಸ್ತುವೊಂದನ್ನೊ ಅನುಭವವೊಂದನ್ನೊ ಪಡೆದುಕೊಂಡದ್ದರಿಂದ ಒದಗುವುದು. ಸಂತೃಪ್ತಿಯಲ್ಲಿ ಇದ್ದುದೇ ಇದ್ದಷ್ಟೇ ಸಾಕೆಂಬ ಮನೋಭಾವ.

ಸಂತೋಷದಲ್ಲಿ ಮೇಲಾಟವೊಂದಿರುವುದು ಸಾಧ್ಯ. ಇದನ್ನು ಪಡೆದುಕೊಳ್ಳ ಬೇಕೆಂಬ ಬಯಕೆಯಿದ್ದು ಅದನ್ನು ಪಡೆದುಕೊಂಡನಂತರ ಬರುವುದು ಸಂತೋಷ.

ಪಡೆದುಕೊಳ್ಳುವ ಪದಾರ್ಥಗಳಲ್ಲಿ ತಾರತಮ್ಯ ಇರುವಂತೆಯೇ ಬಯಕೆಯಲ್ಲೂ ತಾರತಮ್ಯ ಇದ್ದೀತು.

"ಇಷ್ಟು ದೊರೆತರೆ ಇನ್ನಷ್ಟರಾಶೆ." ಎಂದರಲ್ಲವೆ ದಾಸರು? ಆಶೆಯಿದ್ದಲ್ಲಿ ಸಂತೋಷದ ಕೊರತೆಯೇ, ಇಷ್ಟನ್ನು ಪಡೆದುಕೊಂಡ ಸಂತೋಷ ಇನ್ನಷ್ಟರ ಆಶೆಯಲ್ಲಿ ಹಾರಿಹೋಗುತ್ತದೆ.

ತೃಪ್ತಿ ಹಾಗಲ್ಲ, ಅದರಲ್ಲಿ ಇನ್ನಷ್ಟರ ಆಶೆಯಿಲ್ಲ.

ಪಾಲಿಗೆ ಬಂದದ್ದು ಪರಮಾನ್ನ ಎನ್ನುವ ಮನೋಧರ್ಮ ಇರುವಾತನಿಗೆ ಪರಮಾನ್ನವೇ ತನಗೆ ಪುಷ್ಕಳವಾಗಿ ದೊರೆಯಬೇಕು ಎಂಬ ಬಯಕೆಯಿರದು.

ದೊರೆತಷ್ಟು ತನಗೆ ಸಾಕು ಎನ್ನುವುದು ವೈರಾಗ್ಯದ ಮಾತೇನು ಅಲ್ಲ.

ಸಾಹಸಿಯಲ್ಲದವನ ಪ್ರವೃತ್ತಿಯೂ ಅಲ್ಲ.

ಹೆಚ್ಚು ಬೇಕೆಂಬ ಆಶೆ ಮಾಡದಿರಲು ಧೈರ್ಯ ಬೇಡವೆ?

ಕಂಡುದಕ್ಕೆಲ್ಲ ಬಾಯಿಬಿಡುತ್ತ, ಮುಗಿಲಿಗೆ ಕೈ ಚಾಚಿ ಬೆವರು ಸುರಿಸುವುದನ್ನು ಸಾಹಸವೆನ್ನಬಹುದೆ? ಅದು ತಿಳಿಗೇಡಿತನ ಅಷ್ಟೆ.

ತೃಪ್ತಿಯಿರುವಾಗ ಅದರಿಂದ ಸಂತೋಷವೂ ಇರುವುದು ಸಾಧ್ಯ. ಸಂತೋಷವಿರುವಾಗ ತೃಪ್ತಿಯಿರಬೇಕೆಂಬ ನಿಯಮವೇನಿಲ್ಲ.

ತೃಪ್ತಿಯ ಸುಖವನ್ನು ಅನುಭವಿಸಿದವನಿಗೆ ಮತ್ತೆ ಅದರಿಂದಲೇ ತೃಪ್ತಿಯಾಗುತ್ತದೆ.

ಅದಕ್ಕಿಂತ ಹೆಚ್ಚಿನದೇನನ್ನೂ ಅವನು ಬಯಸುವುದಿಲ್ಲ.

ತೃಪ್ತಿಯಲ್ಲಿಯೆ ತೃಪ್ತ ಅವನು.

ಸೌಜನ್ಯ, ಸಂತೋಷ

ರಾಬರ್ಟ್ ಲೂಯಿ ಸ್ಟಿವನ್‌ಸನ್ ಒಮ್ಮೆ ಹೇಳಿದ- ನಮ್ಮ ನಿತ್ಯ ಜೀವನಕ್ಕೆ ಬೇಕಾದ ಧರ್ಮವೆಂದರೆ ಇಷ್ಟೆ- ಸೌಜನ್ಯ (amiability) ಸಂತೋಷ (cheerfulness)ಗಳಿಂದ ಬಾಳುವುದು. ಪ್ರಪಂಚದಲ್ಲಿ ಧರ್ಮಗಳಿಗೇನು ಕೊರತೆ? ನೂರಾರು ಧರ್ಮಗಳಿವೆ. ಅವನ್ನು ನಂಬಿಕೊಂಡು ನಡೆಯುವವರೂ ಇದ್ದಾರೆ. ತಮ್ಮ ಧರ್ಮವನ್ನು ಎಲ್ಲೆಡೆ ಹರಡಬೇಕೆಂದು ಹಾತೊರೆಯುವವರೂ ಇದ್ದಾರೆ.

ಆದರೆ ಧರ್ಮಗಳಿಂದ ಜನರಿಗೆ ಪ್ರಯೋಜನವಾಗಿರುವುದಕ್ಕಿಂತ ಹೆಚ್ಚಾಗಿ ಈ ಧರ್ಮಗಳು ಹಗರಣಗಳಿಗೆ ಕಾರಣವಾಗಿವೆ. ಒಂದೊಂದು ಮತಧರ್ಮ ಒಂದೊಂದು ಗುಂಪಿಗೆ ಮೆಚ್ಚು; ಬೇರೆಯ ಗುಂಪುಗಳಿಗೆ ಕಿಚ್ಚು. ಉದಾತ್ತ ತತ್ತ್ವಗಳೇನೇ ಇರಲಿ. ಅವು ಆಚಾರದಲ್ಲಿ ಮೂಡಿ ಬರುವಾಗ ಒಡಕಿಗೆ ದಾರಿ ಅಷ್ಟೆ. ಧರ್ಮದ ಉಪದೇಶ ಒಂದು. ಅದರ ಅನ್ವಯ ಇನ್ನೊಂದು. ಸತ್ಯ, ಅಹಿಂಸೆ, ಭೂತದಯೆ, ದಾನ, ಸಂಯಮ, ಕ್ಷಮೆ ಇವನ್ನೆಲ್ಲ ಬೋಧಿಸದ ಧರ್ಮ ಯಾವುದಿದೆ? ಆದರೆ ಇವೆಲ್ಲವನ್ನೂ ಉಳಿಸಿಕೊಂಡು ಯಾವುದಾದರೂ ಧರ್ಮ ಬಂದಿದೆಯೆ? ಮನುಷ್ಯನ ಸ್ವಭಾವದಲ್ಲಿ ಸ್ವಾರ್ಥವಿದೆ. ಅದನ್ನವಲಂಬಿಸಿ ಕ್ರೌರ್ಯ, ಹಿಂಸೆ, ಮೋಸ, ಅಸೂಯೆ, ರಾಗ, ದ್ವೇಷ ಮೊದಲಾದವು ಕಾಣಿಸಿಕೊಳ್ಳುತ್ತವೆ. ಇವನ್ನು ತಪ್ಪಿಸಲೆಂದು ಸಿದ್ಧವಾಗಿರುವುದು ಧರ್ಮ. ಆದರೆ ಧರ್ಮದ ಹೆಸರಿನಲ್ಲಿ ಇದೇ ದುರ್ಗುಣಗಳು ತೋರಿಕೊಳ್ಳುತ್ತವೆ; ಇನ್ನಷ್ಟು ಸೇರಿಕೊಳ್ಳುತ್ತವೆ. ಆಚಾರ ಕೆಟ್ಟರೂ ಆಕಾರ ಕೆಡಬಾರದೆಂದು, ತಿರುಳು ಹೋದರೂ ಸಿಪ್ಪೆಯಾದರೂ ಉಳಿಯಬೇಕೆಂದು, ಧರ್ಮವನ್ನು ಉಳಿಸಿಕೊಳ್ಳುವ ಕಾತರ ಕಾಣುತ್ತಿದೆ. ಇಂಥ ಧರ್ಮವಾದರೂ ಎಷ್ಟು ಕಾಲ ಉಳಿದೀತು? ಅದಕ್ಕೆಷ್ಟು ಬಲ ಇದ್ದೀತು? ಸ್ಟಿವನ್‌ಸನ್ ಪ್ರಕಾರ, ನಮ್ಮ ಇಂದಿನ ಬದುಕಿಗೆ ಯಾವುದೊಂದು ಮತ ಧರ್ಮವೂ ಬೇಕಾದುದಿಲ್ಲ. ಒಂದನ್ನು ಮೇಲೆತ್ತಿ ಇನ್ನೊಂದನ್ನು ಅಲ್ಲಗಳೆದು ಕೆಳಗೆ ಕುಕ್ಕಿದಾಗ ಮೇಲೆತ್ತಿದ ಧರ್ಮವೂ ಕೆಳಗೆ ತಾನೆ ಬರಬೇಕು?

ಸಾಮಾನ್ಯ ಜನರಿಗೆ ಅಗತ್ಯವಾದ ಧರ್ಮಸಂಹಿತೆ-

ನೆರೆಹೊರೆಯವರೊಂದಿಗೆ ಮತ್ತು ಮನೆಯವರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳುವುದು. ಮತ್ತು ತಮ್ಮ ಪಾಲಿಗೆ ಬಂದುದನ್ನು ನಗುಮೊಗದಿಂದ ಅನುಭವಿಸುವುದು.

ಅಸಹನೆ, ಅಸಮಾಧಾನ ಎರಡನ್ನು ಹೋಗಲಾಡಿಸಿಕೊಂಡವನೆ ಧರ್ಮನಿಷ್ಠ.

ನೆಮ್ಮದಿ

ಲೋಕದ ಮಂದಿ ಸುಖವನ್ನು ಬಯಸುವರಷ್ಟೆ.

ದುಃಖ ಯಾರಿಗೆ ಬೇಕು? ದುಃಖವನ್ನು ಬರಮಾಡಿಕೊಳ್ಳಲು ಯಾರು ತೊಡಗುತ್ತಾರೆ?

ಆದರೆ ದುಃಖ ತಾನಾಗಿ ಬಂದೊದಗುತ್ತದೆ; ಅದು ಯಾರ ಕರೆಯನ್ನೂ ಕಾಯುವುದಿಲ್ಲ! ಬಂದ, ಬರಲಿರುವ ದುಃಖವನ್ನು ನೀಗಿಸಿಕೊಳ್ಳುವುದರಲ್ಲೇ ಹಲವರ ಆಯಸ್ಸು ಮುಗಿಯುತ್ತದೆ. ದುಃಖ ತೊಲಗಿದರೆ ಅದೇ ಸುಖ ಎನ್ನುವುದೂ ಉಂಟು.

ಆದರೆ ದುಃಖವಿದ್ದಂತೆ ಸುಖವೂ ಇರಬಹುದಲ್ಲ? ಸುಖದ ನೆಲೆಯೇನು ಎಂದು ಬಹುಮಂದಿ ವಿಚಾರಮಾಡುವುದಿಲ್ಲ; ಸುಖ ಬಂದರೆ ಸಾಕು ಎನ್ನುವರು. ಇದನ್ನು ವಿಚಾರ ಮಾಡಿರುವ ಹಿರಿಯರು ದುಃಖವನ್ನೂ ಸುಖವನ್ನೂ ಮೀರಿದ ಇನ್ನೊಂದು ಸ್ಥಿತಿಯಿದೆ, ಅದನ್ನರಸುವವರು ಬುದ್ಧಿವಂತರು ಎಂದು ಹೇಳುತ್ತಾರೆ.

ಇದು ನೆಮ್ಮದಿ; ಶಾಂತಿ.

ಸುಖವಿದ್ದಲ್ಲಿ ದುಃಖವಿದೆ; ದುಃಖವಿದ್ದಲ್ಲಿ ಸುಖವೂ ಇದೆ. ಹಾಗೆಂದೇ ಇವೆರಡನ್ನು 'ದ್ವಂದ್ವ' (ಜೋಡಿ) ಎನ್ನುವರು. ಒಂದನ್ನು ಎಂದೂ ಬಿಟ್ಟು ಮತ್ತೊಂದು ಇರಲಾರದು. ಒಂದರ ಹಿಂದೆ ಇನ್ನೊಂದು ಸಿದ್ಧವಾಗಿರುತ್ತದೆ. ಸುಖವಾಗಲಿ, ದುಃಖವಾಗಲಿ ಹೊರಗಣ ವಸ್ತುಗಳನ್ನು ಅವಲಂಬಿಸಿಯೇ ಇರುವಂಥವು. ಬೇಕಾದುದು ಬಾರದಿದ್ದರೆ ದುಃಖ; ಬೇಡವಾದುದು ಬಂದರೂ ದುಃಖವೇ.

ಬೇಡವಾದುದು ಹೋದರೆ ಸುಖ; ಬೇಕಾದುದು ಬಂದರೆ ಸುಖ. ಬಯಕೆ ತೀರಿದರೆ ಸುಖ; ಭಯ ಒದಗಿದರೆ ದುಃಖ.

ನೆಮ್ಮದಿಯೆಂದರೆ ತನ್ನಲ್ಲಿ ತಾನು ನೆಲೆಗೊಳ್ಳುವುದು. ಅದರಲ್ಲಿ ಬಯಕೆಯ ಪರಾಟವೇನಿರದು; ಭಯದ ಭೀತಿಯೂ ಇರದು! ನೆಮ್ಮದಿಗೂ ಸುಖಕ್ಕೂ ಇರುವ ಅಂತರವನ್ನು ಅರಿತುಕೊಂಡರೆ ಸುಖಕ್ಕಿಂತ ನೆಮ್ಮದಿಯೇ ಹಿತವೆನಿಸುತ್ತದೆ.

ದಿಟವಾದ ಸುಖ ನೆಮ್ಮದಿಯಿಂದಲೇ ಒದಗಿಬರುತ್ತದೆ ಎಂಬ ತಿಳಿವಳಿಕೆ ಮೂಡುತ್ತದೆ.

ಶಿಸ್ತು

ಶಿಸ್ತಿನ ನೆರವಿಲ್ಲದೆ ಯಾರು ಯಾವ ಸಾಧನೆಯನ್ನೂ ಮಾಡಲಾರರು. ಶಿಸ್ತು ಎನ್ನುವ ಮಾತಿಗೆ ಸಂಯಮ ಎಂಬರ್ಥವಿದೆ. ಕೆಲವು ನಿಯಮಗಳನ್ನು ಒಪ್ಪಿಕೊಂಡು ಅವುಗಳಿಗನುಸಾರವಾಗಿ ನಡೆದುಕೊಳ್ಳುವುದು; ಮನಸ್ಸಿಗೆ ಬಂದಂತೆ ಮಾಡದಿರುವುದು. ಶಿಸ್ತಿನ ಮುಖ್ಯ ವಿಚಾರ ಕಟ್ಟುಪಾಡು. ಕಚೇರಿಯಲ್ಲಿ, ಶಾಲೆಯಲ್ಲಿ, ಸಭೆಯಲ್ಲಿ, ಮನೆಯಲ್ಲಿ ಎಲ್ಲೆಡೆಯೂ ಶಿಸ್ತಿದ್ದರೆ ಚೆನ್ನು. ಅದರಿಂದ ಹಿತವೂ ಉಂಟು. ಶಿಸ್ತುಗೆಟ್ಟರೆ ಎಲ್ಲರಿಗೂ ತೊಂದರೆಯೆ.

ತನಗೆ ತೋರಿದಂತೆ ನಡೆದುಕೊಳ್ಳಬೇಕೆಂಬ ಬಯಕೆ ಎಲ್ಲರಿಗೂ ಇರುತ್ತದೆ. ತಮ್ಮ ಬಯಕೆಗಳನ್ನೂ, ಸ್ವಾರ್ಥವನ್ನೂ ಚಪಲವನ್ನೂ ತಡೆಹಿಡಿದುಕೊಂಡು, ಬೇರೆಯವರ ಮನಸ್ಸಿಗೆ ಗಾಸಿಯಾಗದಂತೆ ನಡೆದುಕೊಳ್ಳುವುದು ಅಗತ್ಯವಲ್ಲವೆ? ತನ್ನ ಚಪಲವನ್ನು ಅಂಕೆಯಲ್ಲಿಟ್ಟುಕೊಳ್ಳಲು ಹೊರಗಣ ಕಟ್ಟುಪಾಡು ಬೇಕು. ಹಾಗೆಂದೇ ಕಚೇರಿಯಲ್ಲಿ, ಶಾಲೆಯಲ್ಲಿ, ಉದ್ಯಮದಲ್ಲಿ, ರಸ್ತೆಯಲ್ಲಿ, ಸಭೆಯಲ್ಲಿ ಶಿಸ್ತನ್ನು ವಿಧಿಸುತ್ತಾರೆ. ಶಿಸ್ತಿಗೆಂದೇ ಸಿಬ್ಬಂದಿ ಇರುತ್ತದೆ. ಪೋಲೀಸರಿಗೆ ಹೆದರಿ, ಲೋಕಾಪವಾದಕ್ಕೆ ಹೆದರಿ ಕೆಟ್ಟ ಕೆಲಸಕ್ಕೆ ತೊಡಗದವರ ಸಂಖ್ಯೆ ಹೆಚ್ಚಿನದು. ಉಸ್ತುವಾರಿ ಇರದಿದ್ದರೆ ಇವರ ನಡತೆ ಹೇಗೋ! ಹೊರಗಿನ ಕಟ್ಟುಪಾಡು ಶಿಸ್ತನ್ನು ಕಾಪಾಡುತ್ತದೆ. ದಿಟ, ಆದರೆ ದಿಟವಾದ ಶಿಸ್ತು ಹೊರಗಿನ ಅಂಕೆಯನ್ನು ನಿರೀಕ್ಷಿಸುವುದಿಲ್ಲ. ಒಳಗಿನ ಕಟ್ಟುಪಾಡು ಶಿಸ್ತಿಗೆ ಭೂಷಣ. ಪೋಲೀಸರ ಪಡೆ ಮನಸ್ಸಿನೊಳಗಿರಬೇಕು. ಕಾನೂನಿನ ಚೌಕಟ್ಟು ಮನಸ್ಸಿನದಾಗಬೇಕು. ಹೊರಗಿನ ಶಿಸ್ತನ್ನು ಮುರಿಯುವ ಆಸೆ ಇದ್ದರೂ, ಶಿಕ್ಷೆಗೆ ಬೆದರಿ ತೆಪ್ಪಗಿರುತ್ತೇವೆ. ಅದೆಂಥ ಸಂಯಮ? ಅದೆಂಥ ಶಿಸ್ತು? ಒಳಗಿನ ನಿಯಂತ್ರಣ ಈ ಬಗೆಯದಲ್ಲ. ಅದನ್ನು ಕಡೆಗಣಿಸುವ ಅಥವಾ ಅದರ ಕಣ್ಣುತಪ್ಪಿಸುವ ಯೋಜನೆಯೂ ಇರುವುದಿಲ್ಲ.

ದಿಟವಾದ ಶಿಸ್ತೆಂದರೆ ಸ್ವಯಂ ಶಿಸ್ತು.

ಶೀಲಶುದ್ಧಿ

ತಂತಿಯಿಲ್ಲದೆ ವೀಣೆ ನುಡಿಯುವುದೆ? ಗಾಲಿಯಿಲ್ಲದೆ ಚಕ್ರ ತಿರುಗುವುದಾದರೂ ಹೇಗೆ? ಶೀಲವಿಲ್ಲದೆ ಬದುಕು ಮೇಲೇರಲು ಸಾಧ್ಯವಿಲ್ಲ. ಉಳಿದೆಲ್ಲ ಪರಿಕರಗಳಿದ್ದರೂ ಶೀಲವಿಲ್ಲದಿದ್ದರೆ ಅವು ಪ್ರಯೋಜನಕಾರಿಯಾಗವು. ಶೀಲದ ಅಗತ್ಯ ತಟ್ಟನೆ ಅರಿವಿಗೆ ಬರುವುದಲ್ಲ. ಎಡವಿದರೆ ತಾನೆ ಮಟ್ಟಸವಾದ ನೆಲದ ಅಗತ್ಯ ತೋರಿಕೊಳ್ಳುವುದು? ಹಲ್ಲು ಹುಳುಕು ಬಿದ್ದಾಗಲೆ ಹಲ್ಲಿನ ಇರವು ಕಾಣಿಸಿಕೊಳ್ಳುವುದು.

ಬದುಕಿನಲ್ಲಿ ಆರೋಗ್ಯ, ಸಂಪತ್ತು ಯಶಸ್ಸು, ಸುಖ, ಸ್ಥಾನ, ಮಾನ - ಎಲ್ಲವೂ ಬೇಕೆಂದು ಜನ ಅವುಗಳ ಬೆನ್ನು ಹಿಡಿದು ಓಡುತ್ತಾರೆ; ಅವನ್ನು ಪಡೆದುಕೊಳ್ಳಲು ಹಾತೊರೆಯುತ್ತಾರೆ; ಹೆಣಗಾಡುತ್ತಾರೆ. ಅವೆಲ್ಲ ದೊರಕಿತೆನ್ನಿ. ಬಂದದ್ದು ಉಳಿಯಬೇಕಲ್ಲ? ಬೆಳೆಯಬೇಕಲ್ಲ? ಯೋಗ್ಯತೆಯಿಲ್ಲದೆಡೆ ಯಾವುದು ಬಂದರೂ ತೋರಿ ಮರೆಯಾಗುವುದಷ್ಟೆ ಅದರ ಕತೆ. ಈ ಎಲ್ಲ ವಿವರಗಳೂ ಬರಿಯ ಗಾಳಿಯಲ್ಲಿ ಇರಲಾರವು. ಅವು ಬೇರೂರಿ ನಿಲ್ಲಲು ನೆಲ ಗಟ್ಟಿಯಾಗಿರಬೇಕು; ಮೇಲೆ ಮೇಲೆ ನೀರೆರೆಯಬೆಕು. ಕಳೆ ಕಾಣಿಸಿಕೊಂಡೊಡನೆ ತೆಗೆಯಬೇಕು.

ಎಲ್ಲಕ್ಕೂ ಶೀಲಶುದ್ಧಿಯೇ ಆಸರೆ. ಸ್ವಭಾವದಲ್ಲಿ ಕಪಟ, ಸುಳ್ಳು, ಸುಲಿಗೆ, ಬಿರುಸುಮಾತು, ಕಾಮುಕತೆ, ದೌರ್ಜನ್ಯ, ಚಪಲಗಳು, ಆಸೆ - ಮೊದಲಾದುವೆಲ್ಲ ಮನೆ ಮಾಡಿರಲು ಯಾವ ಸಂಪತ್ತು ಊರ್ಜಿತವಾದೀತು? ಯಶಸ್ಸು ಎಷ್ಟು ದಿನ ಉಳಿದೀತು? ಏನು ಸುಖ ಗಟ್ಟಿಯಾಗಿ ನಿಂತೀತು? ಶೀಲಕ್ಕೂ ಅಭ್ಯುದಯಕ್ಕೂ ಕಾರಣ - ಕಾರ್ಯ ಸಂಬಂಧವಿದೆ ಎಂಬುದನ್ನು ಬಹುಮಂದಿ ಅರಿಯರು. ಅದೃಷ್ಟವೊಂದಿದ್ದರೆ ಅಭ್ಯುದಯ ಕಟ್ಟಿಟ್ಟದೇ ಎಂದು ಬಗೆಯುವವರೂ ಇದ್ದಾರೆ. ಇನ್ನು ಅದೃಷ್ಟವನ್ನೂ ನಂಬದೆ ತಮ್ಮ ಪ್ರಯತ್ನದಿಂದಲೇ ಎಲ್ಲವನ್ನೂ ಪಡೆದುಕೊಳ್ಳುವ ಹವಣಿಕೆ ಹಲವರದ್ದು. ಅದಕ್ಕಾಗಿ ನೀತಿಯನ್ನೇ ಬಲಿಗೊಟ್ಟು ಏನನ್ನಾದರೂ ಮಾಡಲು ಅವರು ಸಿದ್ಧ.

ಮರದ ಮೇಲೆ ಮಲಗಿ ನಿದ್ದೆ ಮಾಡುವವನು ಎಚ್ಚರಗೊಳ್ಳುವುದು ಯಾವಾಗ? ಕೆಳಗೆ ಬಿದ್ದಮೇಲೆ ತಾನೆ ?

ಶೀಲವನ್ನು ಬದಿಗೊತ್ತಿ ಬದುಕಿನಲ್ಲಿ ಮುಂದೆ ಬರಲು ವಿಶ್ವ ಪ್ರಯತ್ನ ಮಾಡುವವರ ಪಾಡು ಇಂಥದೇ.

ವೃತ್ತ-ವಿತ್ತ

ಮಹಾಭಾರತದಲ್ಲೊಂದು ಕಿವಿಮಾತು-

'ವೃತ್ತಂ ಯತ್ನೇನ ಸಂರಕ್ಷೇತ್'

ಮನುಷ್ಯನಾದವನು ತನ್ನ ಶೀಲವನ್ನು ಎಚ್ಚರದಿಂದ ಕಾಪಿಟ್ಟುಕೊಳ್ಳಬೇಕು. ಮನುಷ್ಯನನ್ನು ಎಲ್ಲ ಕಾಲದಲ್ಲೂ ಹಿಡಿದೆತ್ತಿ ನಿಲ್ಲಿಸುವುದು ಅದೇ. ಹಣಕ್ಕೂ ಶೀಲಕ್ಕೂ ಹಗರಣವೇರ್ಪಡುವುದು ವಾಡಿಕೆ. ಹಣವನ್ನು ಗಳಿಸುವಾಗ ಶೀಲದ ಕಟ್ಟುಪಾಡಿದ್ದರೆ ಕಷ್ಟ. ಶೀಲಗೆಟ್ಟರೆ ಸಿರಿ ದೊರಕುವುದು ಸುಲಭ. ಹಾಗೆಂದು ಶೀಲವನ್ನು ಕೈ ಬಿಡುವುದು ಎಲ್ಲರಿಗೂ ಸಮ್ಮತವಲ್ಲ. ಶೀಲಗೆಟ್ಟು ಸಂಪತ್ತು ಬಂದಿತೆನ್ನಿ. ಅದು ಎಷ್ಟು ಕಾಲ ಉಳಿದೀತು. ಕನ್ನಡದ ಕವಿಯೊಬ್ಬ ಹೇಳಿದ ಮಾತು, 'ಸಿರಿಯೆಂಬುದು ಸಂಜೆಗೆಂಪು' ಹೊತ್ತು ಮುಳುಗುವಾಗ, ಆಕಾಶದಲ್ಲಿ ಕೆಂಪಡರುತ್ತದೆ; ನೋಡಲು ಬಲು ಚೆನ್ನು. ಆದರೆ ಆ ಕೆಂಪು ಎಷ್ಟು ಹೊತ್ತು ಇದ್ದೀತು? ನೋಡುತ್ತಿರುವಂತೆಯೇ ಮರೆಯಾಗಿ ಕತ್ತಲೆ ಕವಿಯತೊಡಗುತ್ತದೆ. ಅದನ್ನು ನಂಬಿ ಶೀಲ ಕಳೆದುಕೊಳ್ಳುವುದೆ?

'ವಿತ್ತಮಾಯಾತಿ ಯಾತಿ ಚ'

ಹಣ ಬರುತ್ತದೆ, ಹೋಗುತ್ತದೆ. ಬರುವಾಗ ಹಿಗ್ಗು, ಹೋಗುವಾಗ ಕುಗ್ಗು, ಹೋಗದೆ ಇರುವುದಂತೂ ಅದರ ಸ್ವಭಾವವೇ ಅಲ್ಲ. ಶೀಲವಾದರೆ ಹಾಗಲ್ಲ. ನಾವು ಅದನ್ನು ಕಾಪಾಡಿಕೊಂಡರೆ, ಅದು ನಮ್ಮನ್ನು ಕಾಪಾಡುತ್ತದೆ. ಹಣ ಹೋದರೂ ನೆಮ್ಮದಿ ಕದಡುವುದಿಲ್ಲ.

'ಅಕ್ಷೀಣೋ ವಿತ್ತತಃ ಕ್ಷೀಣಃ'— ಶೀಲವಂತನಾದವನು ಬಡವಾದರೂ ಅದರಿಂದ ಅವನಿಗೇನು ಕೆಡುಗಾಲ ಇರದು. ಹಣವಿಲ್ಲವೆಂದು ಅವನೇನು ಕೊರಗುವುದಿಲ್ಲ.

'ವೃತ್ತತಸ್ತು ಹತೋ ಹತಃ'— ಹಣಕ್ಕೆ ಆಸೆಪಟ್ಟು ಶೀಲವನ್ನು ಕಳೆದುಕೊಳ್ಳಲು ಸಿದ್ಧನಾದರೆ, ಮುಖ್ಯವಾದ ಶೀಲವೂ ಹೋಯಿತು, ಮುಖ್ಯವಲ್ಲದ ಹಣವೂ ಬಂದರೆ ಬಂತು. ಇಲ್ಲವಾದರೆ ಇಲ್ಲ. ಅದು ಬಂದೇಬರುವುದೆಂಬ ನೆಚ್ಚಿಕೆ ಇಲ್ಲ. ಒಂದು ವೇಳೆ ಹಣ ಬಂದರೂ, ಶೀಲವಿಲ್ಲದವನ ಬಳಿ ಅದು ಬಹುಕಾಲ ನಿಲ್ಲುವುದಿಲ್ಲ. ಶೀಲವೂ ಹೋಯಿತು. ಹಣವೂ ಹೋಯಿತು!

ಹಣ ಹೋದರೂ ಶೀಲವನ್ನೂ ಬಿಡಬಾರದು. ಶೀಲವೇ ಹೋದರೆ ಎಲ್ಲವೂ ಕೈ ಬಿಟ್ಟಂತೆ, ಮನುಷ್ಯ ಮತ್ತೆ ತಲೆಯೆತ್ತಲಾರ.

ಅರಿವು-ಆಚಾರ

"ಅರಿತು ಆಚಾರವನು ನಡೆಸದಾತನೆ ಹೊಲೆಯ"

-ಎಂದು ಪುರಂದರದಾಸರದ್ದೊಂದು ಮಾತು. ಜಾತಿಯಿಂದಲೆ ಹೊಲೆತನವನ್ನು ಗುರುತಿಸುವವರಿಗೆ ಸವಾಲು ಇದು. ಸಮಾಜದಲ್ಲಿ ಹುಟ್ಟು, ವಿದ್ಯೆ, ವೃತ್ತಿ, ಸಂಪತ್ತು ಮೊದಲಾದ ಎಣಿಕೆಗಳಿಂದ ಮೇಲೆ -ಕೆಳಗೆ ಎಂದು ವಿಂಗಡಿಸಿಕೊಳ್ಳುವುದು ವಾಡಿಕೆ. ಆದರೆ ವ್ಯಕ್ತಿಯೇ ಪ್ರಧಾನವಾದ ನಮ್ಮ ಸಂಸ್ಕೃತಿಯಲ್ಲಿ ವ್ಯಕ್ತಿಯ ನಡತೆಯೇ ಮುಖ್ಯವಾಗಬೇಕಲ್ಲವೆ? ಕೆಳಗೆ ಎಂದು ಎಣಿಸಲ್ಪಟ್ಟವರು ಮೇಲಿನವರಿಗೆ ಇರುವ ಅವಕಾಶದಿಂದ ವಂಚಿತರಾಗುತ್ತಾರೆ. ಹಾಗಾಗಿ ಅವರು 'ಅರಿತುಕೊಳ್ಳುವುದು' ಕಷ್ಟ. ಸಮಾಜದಲ್ಲಿ ಇರಬೇಕಾದ ಜಾಣತನವಾಗಲಿ, ಅಧ್ಯಾತ್ಮದಲ್ಲಿರಬೇಕಾದ ಎಚ್ಚರವಾಗಲಿ ಅವರ ಪಾಲಿಗೆ ದೊರಕುವುದು ಕಡಮೆ. ಆದರೆ ಮೇಲಿನವರಿಗೆ ಅರಿತುಕೊಳ್ಳುವ ಅವಕಾಶವಿದ್ದು ಅವರು ಅರಿತುಕೊಳ್ಳದಿದ್ದರೆ? ಅರಿತುಕೊಂಡು ಅದರಂತೆ ನಡೆಯದಿದ್ದರೆ? ಅವರಿಗಿರಬಹುದಾದ ವಿದ್ಯೆಯಾಗಲಿ, ವೃತ್ತಿಯಾಗಲಿ, ಸಂಪತ್ತಾಗಲಿ ಯಾವ ಪ್ರಯೋಜನಕ್ಕೆ? ಅವರು ಮೇಲೆಂದು ಹೇಗೆ ತಾನೆ ಆದಾರು?

ಏನು ಮಾಡಬೇಕು, ಏನು ಮಾಡಬಾರದು; ಧರ್ಮ ಯಾವುದು, ಅಧರ್ಮ ಯಾವುದು; ಏನಿರಬೇಕು, ಎಷ್ಟಿರಬೇಕು; ಇವೆಲ್ಲ ಅರಿತುಕೊಳ್ಳುವುದರ ಅರ್ಥ; ಇದೇ ಆಚಾರ ಅಥವಾ ನಡತೆ. ಅರಿವೆಂದರೆ ಇದೇ. ಸರಿಯಾಗಿ ಬದುಕುವ ಬಗೆಯ ತಿಳವಳಿಕೆ. ನಡತೆಗೆ ದಾರಿ ಮಾಡಿಕೊಡುವುದು ಈ ಬಗೆಯ ಅರಿವು. ಓದಿಯೋ, ಅನುಭವ ದಿಂದಲೋ, ಉಪದೇಶದಿಂದಲೋ ಒಬ್ಬ ಅರಿವನ್ನು ಪಡೆದುಕೊಂಡನೆನ್ನಿ. ಇತರರು ಈ ಅರಿವನ್ನು ಗುರುತಿಸುವುದು ಹೇಗೆ? ಅರಿವಂತೂ ನೇರವಾಗಿ ನೋಡಲಾಗದು. ಅರಿವು ನಡತೆಯಲ್ಲಿ ಮೂಡಿಬಂದಾಗಲೆ ಅದು ಇತರರ ಅರಿವಿಗೆ ಬರುವುದು. ನಡತೆಯಲ್ಲಿ ಕಾಣದ ಅರಿವು ಇದ್ದರೇನು? ಬಿಟ್ಟರೇನು? ಆಚಾರವಂತನಾಗಿ ನಡೆದುಕೊಳ್ಳುವುದು ಅರಿವಿನ ಪ್ರಯೋಜನ.

ನಾಲ್ಕು ಜನರ ನಡುವೆ, ನೀತಿಯನ್ನು ಬಿಡದೆ, ಹಿತಮಿತವಾದ ಪ್ರವೃತ್ತಿಗಳನ್ನು ಹಿಡಿದು ಬದುಕುವುದೇ ಆಚಾರ. ಬೇಕಿದ್ದರೆ ಶಿಷ್ಟಾಚಾರವೆನ್ನಿ.

ಹುಟ್ಟಿನಿಂದ ಬಂದ ಜಾತಿಗೂ ಇದಕ್ಕೂ ಸಂಬಂಧವಿಲ್ಲ. ವಿದ್ಯೆಯಾಗಲಿ ವೃತ್ತಿಯಾಗಲಿ ಸಂಪತ್ತಾಗಲಿ ಇದನ್ನು ನಿರ್ಧರಿಸಲಾರದು.

ಆಚಾರ-ಆಕಾರ

ಕನ್ನಡದಲ್ಲಿ ಒಂದು ಕಿವಿಮಾತು -"ಆಚಾರ ಕೆಟ್ಟರೂ ಆಕಾರ ಕೆಡಬಾರದು" ಎಂದು!

ಇದು ಸರಿಯಲ್ಲವೆಂಬುದು ಸ್ಪಷ್ಟವೇ. ಆದರೆ ಇದನ್ನು ನಂಬಿರುವವರು ಬಹುಮಂದಿ: ಇದರಂತೆ ನಡೆಯುವವರು ಇನ್ನೂ ಹೆಚ್ಚು ಮಂದಿ. ಆಚಾರ - ಆಕಾರ ಎರಡೂ ಬೇರೆ ಬೇರೆ ಎಂಬ ಅರಿವೂ ಹಲವರಿಗಿರುವುದಿಲ್ಲ, ಆಕಾರವಷ್ಟೇ ಆಚಾರ ಎಂದು ಬಗೆಯುವವರೂ ಇದ್ದಾರೆ.

ಆಕಾರ ಹೊರಗೆ ತೋರಿಕೊಳ್ಳುವ ಬಗೆ; ಬೇರೆಯವರ ಸಲುವಾಗಿ ತೊಡುವ ಮುಖವಾಡ. ನೋಡಿದವರು ಮೆಚ್ಚುವಂತಿರಬೇಕಾದುದು ಆಕಾರದ ಅಗತ್ಯ. ಪರರ ಪಾಲಿಗೆ ಆಕಾರವೇ ಎದ್ದು ಕಾಣುವುದು.

ಆಚಾರವೆಂಬುದು ಮಾತು, ಮೈ, ಮನಸ್ಸು ಮೂರೂ ವಿವರಗಳು ಕೂಡಿದ ನಡವಳಿಕೆ, ಬೇರೆಯವರು ಗಮನಿಸಲಿ ಬಿಡಲಿ. ಜನರ ನಡುವೆ ಇರಲಿ ಏಕಾಂತ ದಲ್ಲಿಯಾಗಲಿ, ಮನೆಯೊಳಗಾಗಲಿ ಹೊರಗಾಗಲಿ ನಾವು ಮಾಡುವ ಕೆಲಸ ಆಡುವ ಮಾತು, ಆಲೋಚನೆ ಮಾಡುವ ಬಗೆ ಇವು ಆಚಾರವೆನಿಸಿಕೊಳ್ಳುತ್ತವೆ.

ಆಚಾರದಲ್ಲಿ ಸದಾಚಾರ, ದುರಾಚಾರ ಎಂಬೆರಡು ಬಗೆಗಳು. ನಮಗೆ ಒಳಿತನ್ನು ಮಾಡಿ, ನಮ್ಮಿಂದ ಇತರರಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಂಡರೆ ಅದು ಸದಾಚಾರ. ನಮಗಾಗಲಿ, ಬೇರೆಯವರಿಗಾಗಲಿ ಅದರಿಂದ ಕೆಡುಕಾದರೆ ಅದು ದುರಾಚಾರ.

ಸದಾಚಾರವನ್ನು ಶಾಸ್ತ್ರವೂ ಸಮಾಜವೂ ಸಂಸ್ಕೃತಿಯೂ ವಿಧಿಸುತ್ತವೆ; ದುರಾಚಾರವನ್ನು ನಿಷೇಧಿಸುತ್ತವೆ. ಆದರೆ ಸದಾಚಾರವೆಂಬಲ್ಲಿ ಸಂಯಮ ಇರಬೇಕು. ವಿವೇಕ ಇರಬೇಕು. ಇವು ಇರದಿದ್ದಾಗ ದುರಾಚಾರವೆಂಬುದು ಇರದಿದ್ದರೂ ಸದಾಚಾರವಂತೂ ಇರಲಾರದು. ದುರಾಚಾರದ ಹಿನ್ನೆಲೆಯಲ್ಲಿ ಕೇಡಿಗತನವೇ ಇರಬೇಕಷ್ಟೆ.

ಹಲವಾರು ಕಾರಣಗಳಿಂದ ಸದಾಚಾರ ಸಾಧ್ಯವಿಲ್ಲದೆ ಹೋದಾಗ. ಅಥವಾ ಕೆಟ್ಟಾಗ. ಅದರ ಆಕಾರವೂ ಇಲ್ಲದಿರುವುದು ಅಥವಾ ಕೆಡುವುದು ಸಹಜವೆ. ಆದರೆ ಆಚಾರವಿಲ್ಲದಿದ್ದರೂ, ಒಳ್ಳೆಯ ಆಕಾರವಾದರೂ ಇರಲೆಂದು ಬಗೆದರೆ ಅದು ಬೂಟಾಟಿಕೆ, ಮೋಸ.

'ಮಾಡುವುದು ಅನಾಚಾರ. ಮನೆಯ ಮುಂದೆ ಬೃಂದಾವನ'.

ಪ್ರಕೃತಿ-ಸಂಸ್ಕೃತಿ

ಕೆಲವು ಪ್ರಾಣಿಗಳು ಸಹಜವಾಗಿ ಸೌಮ್ಯವಾದರೂ ಕೆಲವೊಮ್ಮೆ ಕೆರಳಿರುತ್ತವೆ. ನೀರನ್ನು ಕುಡಿಯುತ್ತಿರುವ ಕುದುರೆ ಬಳಿ ಹೋಗಬಾರದಂತೆ. ಬೆದೆಗೆ ಬಂದ ಹಸುವಿನ ಬಳಿ ಸುಳಿಯಬಾರದಂತೆ; ಮದವೇರಿದ ಆನೆಯಂತೂ ಸರಿಯೇ ಸರಿ. ಉಳಿದ ವೇಳೆ ಅವುಗಳಿಂದ ತೊಂದರೆಯಿರದು. ಆದರೆ ಮನುಷ್ಯ ಸುಸಂಸ್ಕೃತನಾಗಿರದಿದ್ದರೆ ಅವನೊಡನೆ ಒಡನಾಟ ಎಂದೂ ಅಪಾಯಕರವೇ.

ಸುಸಂಸ್ಕೃತನಾಗುವುದೆಂದರೆ ಹೇಗೆ? ಓದಿನಿಂದ, ವಿಚಾರದಿಂದ, ಸತ್ಸಂಗದಿಂದ. ಇವಿರದಿದ್ದರೆ, ಹೃದಯ ಮಾಗುವುದು ಕಷ್ಟ; ಸರಿಯಾದ ದಾರಿಗೆ ಸೇರಿಕೊಳ್ಳುವುದಾಗದು. ಹುಟ್ಟುವಾಗ ಪ್ರಕೃತಿ; ಬೆಳೆಯುತ್ತ ಬಂದಂತೆ ಸಂಸ್ಕೃತಿ. ಈ ಮಾತಿನ ಮೂಲಾರ್ಥ 'ಚೆನ್ನಾಗಿ (ಸಂ) ಮಾಡುವುದು (ಕೃತಿ)' ಎಂದು. ಹುಟ್ಟಿದಾಗ ಇದ್ದಂತೆಯೇ ಎಂದಿಗೂ ಇದ್ದುಬಿಟ್ಟರೆ ಅದು ಸಂಸ್ಕೃತಿಯಾಗುವುದಿಲ್ಲ. ಹುಟ್ಟಿದ ಗುಣಗಳು ಮಾರ್ಪಡಬೇಕು; ಪ್ರಯತ್ನದಿಂದ, ಶ್ರಮದಿಂದ, ವಿವೇಕದಿಂದ ಬದುಕಿನ ದಾರಿಯನ್ನು ಸರಿಯಾಗಿ ರೂಪಿಸಿಕೊಳ್ಳುವುದೇ 'ಚೆನ್ನಾಗಿ' ಎಂಬುದರ ತಾತ್ಪರ್ಯ. ಹುಟ್ಟಿನಿಂದ ಇರುವ ದೋಷಗಳು ಹೋಗುವುದು (ದೋಷಾಪನಯನ), ಯೋಗ್ಯವೆನಿಸುವ ಗುಣಗಳನ್ನು ಹೊಸದಾಗಿ ಪಡೆದುಕೊಳ್ಳುವುದು (ಗುಣಾಂತರೋಪಜನನ). ಇವೆರಡೂ ಸಂಸ್ಕಾರದ ಪ್ರಯೋಜನಗಳು. ಸಂಸ್ಕಾರವೆಂದರೆ ಇದೇ.

ತನ್ನ ಪರಿಸರದಲ್ಲಿ ತನಗೆ ಹಿತವಾಗುವಂತೆ, ಇತರರಿಗೆ ಏನೊಂದೂ ಗಾಸಿಯಾಗದಂತೆ ಬದುಕುವುದು ಗುರಿಯಾದರೆ ಅವನು ಸಂಸ್ಕಾರವುಳ್ಳವನು; ಸುಸಂಸ್ಕೃತನಾದವನು. ಸಮಾಜದಲ್ಲಿ ಇಂಥವರ ಸಂಖ್ಯೆಯೇ ಹೆಚ್ಚು ಇದ್ದರೆ ಆ ಸಮಾಜವೂ ಸುಸಂಸ್ಕೃತವಾದುದೇ. ಅವನನ್ನು ಸುಸಂಸ್ಕೃತನನ್ನಾಗಿ ಮಾಡುವ ಹೊಣೆಗಾರಿಕೆ ಅವನ ಕುಟುಂಬಕ್ಕೆ ಮಾತ್ರವಲ್ಲ, ಸಮಾಜಕ್ಕೂ ಇದೆ. ಹಾಗೆಂದೇ ಓದು, ವಿದ್ಯೆ ಮುಂತಾದವು ಸಮಾಜದ ಅಗತ್ಯಗಳೆಂದು ಕಲ್ಪನೆಯಿರುವುದು. ಆದರೆ ವಿಚಾರವಂತಿಕೆ, ಸತ್ಸಂಗ, ಸದಾಚಾರದ ಕಡೆ ಒಲವು ಇವನ್ನು ಮೂಡಿಸಬೇಕಾದುದು ಕುಟುಂಬ; ಮಕ್ಕಳ ತಂದೆತಾಯಿಯರು, ಹಿರಿಯರು. ಈ ಪ್ರಯೋಜನಗಳು ದಕ್ಕದಿದ್ದರೆ ವಿದ್ಯೆಯಿಂದಲೂ ಅಪಾಯವಿದೆ, ವೃತ್ತಿಯಿಂದಲೂ ಕೆಡುಕಾಗುವ ಸಂಭವವಿದೆ.

ಲೋಕೋಪಕಾರ

ದಿಲ್ಲಿಯ ಹತ್ತಿರ, ಸಾರವಲ ಎಂಬ ಹಳ್ಳಿಯಿದೆ. ಅದು ಮೊದಲಿಗೆ ಇಂದ್ರಪ್ರಸ್ಥ ವೆಂಬ ಭಾಗಕ್ಕೆ ಸೇರಿದ್ದು. ಅಲ್ಲೊಂದು ಬಾವಿ. ಬಾವಿಯ ನೆರೆಯಲ್ಲೊಂದು ಶಾಸನ. ಅದರ ಒಕ್ಕಣೆ ಹೀಗಿದೆ-

'ಚಿರಂ ತಿಷ್ಠತು ಕೂಪೋಽಯಂ ಕಾರಕಶ್ಚ ಸಬಾಂಧವಃ'

ಇದರ ಅರ್ಥ- "ಈ ಬಾವಿ ಅನುಗಾಲ ಇರಲಿ; ಇದನ್ನು ಮಾಡಿಸಿದವನು ತನ್ನ ನೆಂಟರಿಷ್ಟರೊಂದಿಗೆ ಬಹುಕಾಲ ಬಾಳಲಿ" ಎಂದು. ಈ ಶಾಸನವನ್ನು ಬರೆಸಿದವನು ಬಾವಿಯನ್ನು ತೋಡಿಸಿದವನಲ್ಲ; ಬಾವಿಯ ನೆರವನ್ನು ಪಡೆದುಕೊಂಡವನು. ಅವನ ಕೃತಜ್ಞತಾಬುದ್ಧಿ ಹೀಗೊಂದು ಶಾಸನವನ್ನು ಬರೆಸಬೇಕೆಂದು ಪ್ರೇರೇಪಿಸಿತು. ಬಾವಿಯನ್ನು ತೋಡಿಸಿದ ಪುಣ್ಯಾತ್ಮ ಯಾರೆಂಬುದೂ ಅವನಿಗೆ ತಿಳಿಯದು; ಅವನ ಹೆಸರಿನ ಉಲ್ಲೇಖ ಶಾಸನದಲ್ಲಿಲ್ಲ. ಯಾರಾದರಾಗಲಿ, ಈ ಉಪಕಾರವನ್ನು ಮಾಡಿರುವ ಅವನು ಸುಖವಾಗಿರಲಿ ಎಂಬುದು ಶಾಸನವನ್ನು ಅಲ್ಲಿ ನಿಲ್ಲಿಸಿದವನ ಮನಸ್ಸಿನಲ್ಲಿ ತೋರಿಕೊಂಡ ಸದ್ಭಾವನೆ. ಬಾವಿಯನ್ನು ತೋಡಿಸುವುದು ಎಲ್ಲರ ಹಿತಕ್ಕೆಂದು ತಾನೆ? ಯಾರು ಯಾವಾಗ ಬಾವಿಯ ನೀರನ್ನು ಬಳಸಿಕೊಳ್ಳುವರೋ ಎಂಬುದು ಬಾವಿಯನ್ನು ತೋಡಿಸುವಾಗ ಯಾರ ಊಹೆಗೂ ಸಿಗುವುದಿಲ್ಲ. ತಾನು ಮಾಡುವ ದಾನ-ಧರ್ಮ ಹೀಗೆ ಯಾರೊಬ್ಬರನ್ನೂ ಗಮನದಲ್ಲಿರಿಸಿಕೊಳ್ಳದೆ ಇರುವುದೇ ಲೋಕೋಪಕಾರವೆನಿಸಿಕೊಳ್ಳುತ್ತದೆ. ಬಾವಿಯನ್ನು ತೋಡಿಸುವುದು, ಕೆರೆಯನ್ನು ಕಟ್ಟಿಸುವುದು, ಸಾಲುಮರಗಳನ್ನು ನೆಡುವುದು, ಅರವಟ್ಟಿಗೆಗಳನ್ನು ಏರ್ಪಡಿಸುವುದು- ಇವೆಲ್ಲ ಯಜ್ಞಯಾಗಾದಿಗಳನ್ನು ನಡೆಸುವುದಕ್ಕಿಂತ ಹೆಚ್ಚು ಪುಣ್ಯಪ್ರದವಾದುವು ಎಂದು ಸ್ಮೃತಿಗಳಲ್ಲೇ ಹೇಳಿದೆ. ಗುಡಿಗಳನ್ನು ಕಟ್ಟಿಸುವುದಕ್ಕಿಂತ ಧರ್ಮಛತ್ರಗಳನ್ನು ಏರ್ಪಡಿಸುವುದು ಒಳ್ಳೆಯದೆಂದು ಒಂದು ಸ್ಮೃತಿ ಹೇಳುತ್ತದೆ. ಹಸಿದು ಬಂದವರಿಗೆ ಅನ್ನ, ಬಿಸಿಲಲ್ಲಿ ಬಳಲಿದವರಿಗೆ ನೆರಳು, ಇರಳು ತಂಗಲು ಎಡೆ ಇವನ್ನು ಒದಗಿಸಿದಲ್ಲೆ ದೇವರು ತೋರಿಕೊಳ್ಳುವನೆಂದು ಈ ಸ್ಮೃತಿ ವಿವರಿಸುತ್ತದೆ.

ಹೀಗೆ, ಬಾವಿ, ಕೆರೆ, ಸಾಲುಮರ, ಅರವಟ್ಟಿಗೆ, ಛತ್ರ ಮೊದಲಾದುವುಗಳ ನೆರವನ್ನು ಪಡೆದುಕೊಂಡವರಲ್ಲಿ ಉಪಕಾರ ಸ್ಮರಣೆ ಇದ್ದೇ ಇರುತ್ತದೆ. ಮೇಲೆ ಕಾಣಿಸಿದ ಶಾಸನದ ಒಕ್ಕಣೆಯಂತೆ ಪ್ರಕಟಪಡಿಸದಿದ್ದರೂ, ಇದು ಸುಸಂಸ್ಕೃತರಾದ ಎಲ್ಲರಲ್ಲೂ ಇರುವುದರಿಂದಲೆ ನಮ್ಮ ಸಂಸ್ಕೃತಿ ಉಳಿದಿರುವುದು; ಅದಕ್ಕೊಂದು ಹಿರಿಮೆ ಒದಗಿ ಬಂದಿರುವುದು.

ದೇಶಪ್ರೇಮ

ದೇಶಪ್ರೇಮ ಇರಬೇಕಾದುದೆ. ಬೇಡವೆಂದರೆ ದೇಶದ್ರೋಹವಾದೀತು ಅಲ್ಲವೆ? ಆದರೆ ದೇಶವೆಂದರೇನು? ನೆಲವೆ, ಜನವೆ, ಜನರ ಊಟ ಉಪಚಾರವೆ, ಕಟ್ಟಡಗಳೆ, ಭಾಷೆಯೆ, ವೇಷವೆ?

ಆದರೆ ನೆಲವೆಂದರೆ ಜಡವಲ್ಲವೆ? ಕಲ್ಲು, ಮಣ್ಣು, ಗಾಳಿ, ಬೆಳಕು, ನೀರು, ನೆರಳು ಇಷ್ಟಿದ್ದರೆ ಆಯಿತೆ? ಜನ ಇಷ್ಟರಿಂದಲೆ ಬದುಕಿ ಬಾಳಿಯಾರೆ? ನೆಲದ ಮೇಲೆ ಒಲವು ಮೂಡುವುದು ಅಲ್ಲಿನ ಜನ ಅಲ್ಲಿ ಬೆಳೆಸಿದ ಸಂಸ್ಕೃತಿಯಿಂದ, ಆ ಸಂಸ್ಕೃತಿಗೆ ತಾನು ಸೇರಿದವನು ಎಂಬ ಅಭಿಮಾನದಿಂದ. ಸಂಸ್ಕೃತಿ ಎನ್ನುವ ಮಾತಿಗೆ ಚೆನ್ನಾಗಿ ಮಾಡುವುದು ಎಂದೇ ಅರ್ಥ. ನೆಲವನ್ನು ಅನುಕೂಲವಾಗಿ ಮಾಡಿಕೊಳ್ಳುವುದು ಸಂಸ್ಕೃತಿಯೆ; ಬಾಳಲು ನೆರವಾಗುವಂತೆ ಮನೆಯನ್ನು ಕಟ್ಟಿಕೊಳ್ಳುವುದೂ ಸಂಸ್ಕೃತಿಯೆ; ನೋಡಲು ಚೆನ್ನಾಗಿರುವಂತೆ ಉಡುಗೆ-ತೊಡುಗೆಗಳೂ ಸಂಸ್ಕೃತಿಯೆ. ಆಡುವ ಭಾಷೆ, ರೂಢಿಸಿಕೊಂಡ ಆಚಾರ, ಮೂಡಿಸಿಕೊಂಡ ವಿಚಾರ, ಸಂಗೀತ, ಸಾಹಿತ್ಯ, ಧರ್ಮ, ಕಲೆ, ಆಟ, ಪಾಟ ಇವೆಲ್ಲ ಸಂಸ್ಕೃತಿಯ ವಿವರಗಳೆ; ಕುಟುಂಬ ಜೀವನ, ಕುಲವ್ಯವಸ್ಥೆ, ವರ್ಗವ್ಯವಹಾರಗಳೂ ಸೇರುತ್ತವೆ. ದೇಶವೆಂದರೆ ಒಂದು ಸಾಂಸ್ಕೃತಿಕ ಘಟಕ ಎನ್ನಬಹುದು. ಜನರೆಲ್ಲ ಒಂದೆಡೆ ನೆಲಸಿ, ಒಟ್ಟಾಗಿ ಬಾಳಿ, ತಲೆಮಾರುಗಳಲ್ಲಿ ಉಳಿದು ಬಂದಾಗಲೆ ದೇಶವೆಂಬ ಕಲ್ಪನೆ ಕಾಣಿಸಿಕೊಳ್ಳುವುದು. ಸಂಸ್ಕೃತಿಯ ಹೊರಗಣ ರೂಪ ದೇಶ. ಸಂಸ್ಕೃತಿ ನೇರವಾಗಿ ಹೊರಗೆ ಕಾಣಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಒಬ್ಬೊಬ್ಬ ವ್ಯಕ್ತಿಯ ಒಳಗೇ ಇರುವ ವಿವರ. ಸುಸಂಸ್ಕೃತನಾದ ಮನುಷ್ಯನೆಂದರೆ ಅವನ ವೇಷ-ಭೂಷಣ, ಉದ್ಯೋಗ ಉತ್ಪತ್ತಿ, ಮನೆ-ಮಠ ಇವುಗಳಲ್ಲ; ಸಂಸ್ಕೃತಿಯ ಮುಖ್ಯವಾಗಿ ಅವನ ಮನಸ್ಸು ಹೃದಯಗಳನ್ನು ಕುರಿತದ್ದು.

ಹಾಗೆಯೆ, ದೇಶವೆಂದರೆ ಒಬ್ಬೊಬ್ಬನ ಒಳಗೆ ಮೂಡಿಕೊಂಡಿರುವ ಒಂದು ಅಭಿಮಾನ. ತಾನು ಹುಟ್ಟಿದ್ದು ಇಲ್ಲಿ, ಬೆಳೆದದ್ದು ಇಲ್ಲಿ, ಬದುಕಿ ಬಾಳಿದ್ದು ಇಲ್ಲಿ, ಕಷ್ಟವೊ ಸುಖವೊ ಪಡಕೊಂಡದ್ದು ಇಲ್ಲಿ, ಕಡೆಗೆ ಮಣ್ಣಾಗಬೇಕಾದುದು ಇಲ್ಲಿ ಎಂಬ ಅನಿಸಿಕೆ.

ದಿಟವಾಗಿ ದೇಶಪ್ರೇಮವೆಂದರೆ ತಮ್ಮ ಸಂಸ್ಕೃತಿಯ ಮೇಲಣ ಒಲವು. ಅದು ತಾನಾಗಿ ಒಳಗಿಂದ ಎದ್ದು ಬರಬೇಕು. ಬೇರೆಯವರ ಒತ್ತಾಯದಿಂದ ತೋರಿ ಕೊಳ್ಳುವುದಲ್ಲ.

ಹಾಳುಬಿದ್ದ ಗುಡಿ

ಈಚೆಗೆ ಹೊಸ ಗುಡಿಗಳನ್ನು ಕಟ್ಟಿಸುವ ಹವ್ಯಾಸ ಹೆಚ್ಚುತ್ತಿದೆ. ಗುಡಿಗಳನ್ನು ಕಟ್ಟಿಸಿದ ಮಾತ್ರಕ್ಕೆ ಜನರಲ್ಲಿ ಭಕ್ತಿ ಹೆಚ್ಚುತ್ತಿದೆಯೆಂದೇನು ಅರ್ಥವಲ್ಲ. ಅದೊಂದು ಚಪಲವಷ್ಟೆ! ಹಣವುಳ್ಳವರು ಭಯದಿಂದಲೋ ಭಕ್ತಿಯಿಂದಲೋ ಗುಡಿಗಳನ್ನು ಕಟ್ಟಿಸುತ್ತಾರೆ. ಕೆಲವು ಸಂಸ್ಥೆಗಳೂ ಈ ಹವಣಿಕೆಯನ್ನು ಹಮ್ಮಿಕೊಂಡಿರುತ್ತವೆ. ಅದರಿಂದ ಸಂಸ್ಥೆಗೊಂದು ಕೋಡು ಮೂಡಿದಂತೆ!

ಹೊಸ ಗುಡಿಗಳನ್ನು ಕಟ್ಟುವುದಕ್ಕಿಂತ ಹಳೆಯ ಗುಡಿಗಳನ್ನು ಸರಿಪಡಿಸಿ ಬಳಸುವುದುತ್ತಮವೆಂದು ಕೆಲವರ ಅನಿಸಿಕೆ. ಇದು ಸರಿಯೆಂದು ತೋರುತ್ತದೆ. ಎಷ್ಟೋ ಪ್ರಾಚೀನ ಕಾಲದ ಗುಡಿಗಳು ಹೇಳಿಕೇಳುವವರಿಲ್ಲದೆ ಪಾಳುಬಿದ್ದು ಮೂಲೆಗುಂಪಾಗಿವೆ. ಅವುಗಳಲ್ಲಿ ಶಿಲ್ಪ, ವಾಸ್ತು ಎರಡೂ ಉತ್ತಮ ಮಟ್ಟದ್ದಾಗಿರುವುದುಂಟು. ಪ್ರಾಕ್ತನ ಇಲಾಖೆಯ ಕಣ್ಣಿಗೂ ಬೀಳದೆ, ಬಿದ್ದರೂ ಅದರ ಗಮನಕ್ಕೆ ಬಾರದೆ ನಶಿಸುತ್ತಿರುವ ಇಂಥ ಗುಡಿಗಳೆಷ್ಟೊ ಇವೆ.

ಅವುಗಳನ್ನು ಕಟ್ಟಿದ ಸಮಯದಲ್ಲಿ ಭೂಶೋಧ, ವಾಸ್ತುಶಮನ, ಆಗಮೋಕ್ತವಾಗಿ ಕುಂಭಾಭಿಷೇಕ, ಪ್ರತಿಷ್ಠೆ ಇವನ್ನೆಲ್ಲ ಮಾಡಿರುವುದುಂಟು. ಹೀಗೆ ಮಾಡಿದ ಮೇಲೆ ಅವುಗಳಲ್ಲೊಂದು ಅಲೌಕಿಕವಾದ ಶಕ್ತಿಯಿದ್ದೀತೆಂದು ಭಾವಿಸಬೇಕು. ಜೀರ್ಣೋದ್ಧಾರ, ಪುನಃಪ್ರತಿಷ್ಠೆಗಳನ್ನು ಮಾಡಿ ವಿಧಿಯಂತೆ ಪೂಜೆ ಉತ್ಸವಗಳನ್ನು ನಡೆಸಿದರೆ ಆ ಶಕ್ತಿ ಮತ್ತೆ ತೋರಿಕೊಳ್ಳುವ ಸಾಧ್ಯತೆಯಿದೆ.

ಏನಿಲ್ಲದಿದ್ದರೂ ಅದಕ್ಕೊಂದು ಹೊಸಕಳೆ ಮೂಡಿ ಬರುತ್ತದೆ. ಜನ ಅಲ್ಲಿಗೆ ಹೋಗಿ ಬರಲು ಆರಂಭಿಸಿದರೆ ಅದರ ಸುತ್ತಮುತ್ತ ಒಂದು ಒಳ್ಳೆಯ ವಾತಾವರಣ ವೇರ್ಪಡುತ್ತದೆ. ಹಳೆಯ ಗುಡಿಗಳನ್ನು ಸರಿಪಡಿಸುವಾಗ ಈಗೀಗ ಹೊಸ ಸಂವಿಧಾನಗಳನ್ನೇ ಬಳಸಿಕೊಂಡು ಹಳೆಯ ಕಳೆಯನ್ನು ಮರೆಮಾಚಿಬಿಡುವ ಉತ್ಸಾಹವೂ ಕೆಲವರಿಗಿದೆ. ಗುಡಿಗಿಂತ ಮುಖ್ಯವಾದದ್ದು ಅದರ ಕಳೆ. ಹಳೆಯದಾಗಿದ್ದರಂತೂ ಹಳೆಯ ಕಳೆಯೇ ಸ್ಮಾರಕವಾಗಿ ಉಳಿಯಬೇಕು.

ಅದನ್ನೇ ಕೆಡಿಸಿಬಿಟ್ಟರೆ ಸಂಸ್ಕೃತಿಗೆ ಅಪಚಾರವೆನಿಸೀತು. ಈ ವಿಚಾರವಾಗಿ ವಿವೇಕ ಔಚಿತ್ಯಗಳಿರಬೇಕು, ಇದು ಮುಖ್ಯ.

ಪ್ರತಿಭೆ

ಶ್ರವಣಬೆಳ್ಗೊಳದ ಗೊಮ್ಮಟಮೂರ್ತಿಯನ್ನು ನೋಡಿದ್ದೀರಷ್ಟೆ?

ಪ್ರಪಂಚದ ಕೌತುಕಗಳಲ್ಲೊಂದೆಂದು ಅದರ ಖ್ಯಾತಿ.

ಬೆಟ್ಟದ ತುದಿಯಲ್ಲಿ ಬೋಳು ಬಂಡೆಯೊಂದನ್ನು ಐವತ್ತೆಂಟು ಅಡಿ ಎತ್ತರದ ಅದ್ಭುತ ಶಿಲ್ಪವನ್ನಾಗಿಸಿದ ಶಿಲ್ಪಿಯ ಸಾಹಸವನ್ನೇನನ್ನೋಣ? ಅದನ್ನು ನೋಡಿದ ಕವಿ ಅದರಲ್ಲಿ ಔನ್ನತ್ಯವೂ, ಸೌಂದರ್ಯವೂ, ಅತಿಶಯವೂ ಒಂದಾಗಿರುವುದನ್ನು ಕಂಡು ಬೆರಗಾದ. ಅಷ್ಟೆತ್ತರದ ಮನುಷ್ಯಾಕೃತಿಯನ್ನು ಬಂಡೆಯಲ್ಲಿ ಕಡೆಯುವ ಕನಸು ಕಂಡದ್ದೇ ಒಂದು ಅತಿಶಯ. ಶಿಲ್ಪಿಯ ಕಲ್ಪನೆಗೆ ಕಲ್ಲು ಮಣಿದದ್ದು ಇನ್ನೊಂದು ಅತಿಶಯ. ಇವೆರಡೂ ಹಾಗಿರಲಿ. ಉನ್ನತವಾಗಿದ್ದ ಮಾತ್ರಕ್ಕೆ ಅತಿಶಯ ವೆಂದಾಗುವುದಿಲ್ಲ. ಅಷ್ಟೆತ್ತರ ಮೂರ್ತಿ ದೈತ್ಯಾಕಾರವಾಗಿ ತೋರಿಕೊಳ್ಳುವುದು ಸಹಜ; ನೋಡಿದವರು ಬೆದರುವುದೂ ಸಾಧ್ಯ! ಆದರೆ ನಮ್ಮ ದೊಡ್ಡ ಬೆಟ್ಟದ ಗೊಮ್ಮಟ ಹಾಗಲ್ಲ. ಅವನು ಚೆಲುವ. ಎಷ್ಟಾದರೂ ಮನ್ಮಥನಲ್ಲವೆ? ಮಗುವಿನ ಮುಖ. ಅವನ ಕಿರುನಗೆ ನೋಡಿದವರಿಗೆ ನೆಮ್ಮದಿಯನ್ನು ತರುವಂಥದು. ಅವನ ನಿಲುವು ಧೀರಗಂಭೀರ. ಭಾವಪ್ರಶಾಂತ. ಇದು ದಿಟವಾಗಿ ಅತಿಶಯ. ಅಂಗೋಪಾಂಗಗಳು ಸರಿಯಾಗಿರುವುದು; ಮೂರ್ತಿಯ ಮಾನ, ಉನ್ಮಾನ, ಪ್ರಮಾಣಗಳು ಸಮರ್ಪಕ ವಾಗಿರುವುದು; ಮೂರ್ತಿ ಲಕ್ಷಣದಲ್ಲಿ ಔಚಿತ್ಯವಿರುವುದು ಇವೆಲ್ಲ ಶಿಲ್ಪದ ಸೌಂದರ್ಯಕ್ಕೆ ಸಾಧನೆಗಳು. ಹಲವರು ಶಿಲ್ಪಿಗಳು ಈ ಮೂರ್ತಿಯನ್ನು ಕಡೆಯಲು ನೆರವಾಗಿದ್ದಾರು. ಆದರೆ ಒಬ್ಬ ಶಿಲ್ಪಿಯ ಮಾರ್ಗದರ್ಶನದಲ್ಲಿಯೇ ಇದ್ದಿರಬೇಕು. ಅದರ ವಿಷಯ ನಮಗೇನೂ ತಿಳಿಯದು. ಒಬ್ಬ ಶಿಲ್ಪಿಯೇ ಎಂದುಕೊಳ್ಳೋಣ. ಅವನು ಸಾಹಸಿ, ಜಾಣ, ಶಾಸ್ತ್ರವನ್ನು ತಿಳಿದವನು ಎಂಬುದರಲ್ಲಿ ಸಂದೇಹವೇ ಇಲ್ಲ. ಇಷ್ಟರಿಂದ ಔನ್ನತ್ಯವನ್ನೂ ಸೌಂದರ್ಯವನ್ನೂ ಸಾಧಿಸಿದ ಹಾಗಾಯಿತು. 'ಮತ್ತತಿಶಯಂ ತಾನಾಗದದರೊಳ್' ಇದು ಹೇಗೆ? ಅತಿಶಯಕ್ಕೆ ಕಾರಣವಾಗುವುದನ್ನು ಪ್ರತಿಭೆ ಯೆನ್ನುತ್ತೇವೆ. ಧ್ಯಾನದಿಂದ, ತಪಸ್ಸಿನಿಂದ ಬರುವ ಶಕ್ತಿ ಅದು.

ಶಿಲ್ಪಿಯ ವ್ಯಕ್ತಿತ್ವ ಗೊಮ್ಮಟನೆತ್ತರಕ್ಕೆ ಬೆಳೆಯದಿದ್ದರೆ ಆ ಗೊಮ್ಮಟನ ಔನ್ನತ್ಯದ, ಸೌಂದರ್ಯದ ಅನುಭವ ಅವನಿಗಾದೀತೆ?

ಮುಖವಾಡದ ಸ್ವಾರಸ್ಯ

ನಾಟಕದಲ್ಲಿ ಮುಖವಾಡಗಳನ್ನು ತೊಡುವ ಪದ್ಧತಿಯು ಒಂದು ಕಾಲದಲ್ಲಿದ್ದಿತು. ನಮ್ಮಲ್ಲಿ ಮಾತ್ರವಲ್ಲ ಗ್ರೀಸ್, ರೋಮ್ ಮುಂತಾದ ಪ್ರಾಚೀನ ಸಂಸ್ಕೃತಿಗಳಲ್ಲೂ ಇದ್ದಿತು.

ಹಾಗೆ ನೋಡಿದರೆ ಇಂಗ್ಲೀಷಿನ 'ಪರ್ಸನಾಲಿಟಿ' ಎಂಬ ಮಾತಿನ ಮೂಲ 'ಪರ್ಸೋನ' ಎಂದರೆ ಮುಖವಾಡವೇ. ಗ್ರೀಕ್ ನಟರು ರಂಗಭೂಮಿಯ ಮೇಲೆ ಬರುವಾಗ ತೊಡುತ್ತಿದ್ದುದು 'ಪರ್ಸೋನ'. ದೇವತೆಗಳನ್ನು ಕುರಿತ ನಾಟಕಗಳಲ್ಲಿ, ಮನುಷ್ಯ ನಟರು ದೇವತೆಗಳಂತೆ ಕಾಣಿಸಿಕೊಳ್ಳುವುದು ಹೇಗೆ? ಮುಖವಾಡವನ್ನು (ಮಾಸ್ಕ್) ತೊಟ್ಟರಾಯಿತು. ಒಂದೊಂದು ದೇವತೆಗೆ ಒಂದೊಂದು ಮುಖವಾಡ. ಅದನ್ನು ಕಂಡೊಡನೆ ಸಭೆಯವರಿಗೆ ಯಾವ ದೇವತೆಯೆಂದು ತಿಳಿಯುವುದು. ದೇವತೆಯ ಸ್ವಭಾವವೂ ಮನವರಿಕೆಯಾಗುವುದು. ಮುಖವಾಡದ ಗುಣ ಅಲೌಕಿಕ, ಅವಾಸ್ತವವಾದದ್ದರ ಸೂಚನೆಯಷ್ಟೇ ಅಲ್ಲ. ವಾಸ್ತವವಾದ್ದನ್ನು ಮರೆಯಿಸಲೂ ಬೇಕು. ಹಳ್ಳಿಯ ನಾಟಕದಲ್ಲಿ ಗುಂಡಪ್ಪ ರಾಮನ ವೇಷ ಹಾಕಿದ್ದನೆನ್ನಿ. ಗುಂಡಪ್ಪನನ್ನು ಬಲ್ಲವರಿಗೆ ಅವನ ಗುಣಕ್ಕೂ ರಾಮನ ಗುಣಕ್ಕೂ ಹೋಲಿಕೆಯಿಲ್ಲವೆಂಬುದು ತಿಳಿದಿದೆ. ಗುಂಡಪ್ಪನೇ ನಾಟಕದ ರಾಮ ಎಂದು ಕಾಣುವಂತಾದರೆ ನಾಟಕದ ಸ್ವಾರಸ್ಯವೇ ಮಾಯವಾಗಿಬಿಡುತ್ತದೆ. ನಾಟಕ ನಡೆಯುತ್ತಿರುವಾಗ, ಗುಂಡಪ್ಪನನ್ನು ಮರೆಯುವಂತಾಗಬೇಕು; ರಾಮ ಕಣ್ಣಿಗೆ ಕಟ್ಟಿದಂತಿರಬೇಕು. ಇದನ್ನು ಮಾಡುವುದು 'ವೇಷ'; ಮುಖವಾಡ ತೊಡುವುದು ಇದಕ್ಕಾಗಿಯೇ. 'ಪರ್ಸನಾಲಿಟಿ' ಎಂದೆವಲ್ಲ? ವ್ಯಕ್ತಿತ್ವವೆಂಬರ್ಥ ಈ ಮಾತಿಗೆ. ಪ್ರತಿಯೊಬ್ಬ ವ್ಯಕ್ತಿಯೂ ಇದನ್ನು ಬೆಳೆಸಿಕೊಳ್ಳುತ್ತಾನೆ. ಆ ಮೇಲೆ ಅದನ್ನು ಉಳಿಸಿಕೊಳ್ಳಲು ಹೆಣಗಾಡುತ್ತಾನೆ. ಸಮಾಜದಲ್ಲಿ ಬೇರೆಯವರ ಸಲುವಾಗಿ, ಅವರು ನಿರೀಕ್ಷಿಸುವಂತೆ, ಅವರು ಮೆಚ್ಚುವಂತೆ ನಾವು ಒಬ್ಬೊಬ್ಬರೂ ಒಂದೊಂದು ಮುಖವಾಡ ತೊಡಬೇಕಾಗುತ್ತದೆ, ವೇಷ ಕಟ್ಟಬೇಕಾಗುತ್ತದೆ.

ಬದುಕೇ ಒಂದು ನಾಟಕ ಎಂದು ಶೇಕ್ಸ್‌ಪಿಯರ್ ಹೇಳಿದ. ಅಲ್ಲಿ ನಾವೆಲ್ಲ ನಟರೇ. ನಟರೆಂದ ಮೇಲೆ ವೇಷ ಕಟ್ಟದೆ ಆಗುತ್ತದೆಯೆ?

ನಾಟ್ಯಧರ್ಮಿ

ಭರತನ ನಾಟ್ಯಶಾಸ್ತ್ರದಲ್ಲಿ ಬರುವ ಒಕ್ಕಣೆಗಳಲ್ಲಿ ಒಂದು, ಲೋಕಧರ್ಮಿ-ನಾಟ್ಯಧರ್ಮಿ ಎಂಬ ವಿಂಗಡಣೆ.

ಲೋಕಧರ್ಮಿಯೆಂದರೆ ಸಾಮಾನ್ಯ ಜನರು ದಿನನಿತ್ಯದ ಬದುಕಿನಲ್ಲಿ ನಡೆಸುವ ವ್ಯವಹಾರ, ಆಡುವ ಮಾತು, ತಳೆಯುವ ಧೋರಣೆ. ನಾಟಕದಲ್ಲಿಯೋ ಕಾವ್ಯದಲ್ಲಿಯೋ ಬರುವುದು ನಾಟ್ಯಧರ್ಮಿ. ನಾಟಕವಾಗಲಿ ಕಾವ್ಯವಾಗಲಿ ವಸ್ತುನಿಷ್ಠವಾಗಿರಬೇಕು, ವಾಸ್ತವ ಪ್ರಪಂಚದ ಪ್ರತಿಕೃತಿಯಾಗಿರಬೇಕು ಎಂಬುದೊಂದು ವಾದ. ಬದುಕಿಗೆ ನಾಟಕ, ಕಾವ್ಯ ದೂರವಾಗಿದ್ದರೆ ರುಚಿಸಲಾರದು. ಅಲ್ಲಿನ ಪಾತ್ರಗಳೂ ಪ್ರಸಂಗಗಳೂ ಭಾವಗಳೂ 'ಸಹಜ'ವಾಗಿರಬೇಕು. ಸಹಜವೆಂದಾಗ ಲೋಕಕ್ಕೆ ಸಹಜವೆಂದು ಇವರ ಅರ್ಥ. ನಾಟಕ ಅಥವಾ ಕಾವ್ಯ ಲೋಕದ ಅನುಕರಣೆಯೆಂದು ಭರತ ಒಪ್ಪುತ್ತಾನೆ; ಅರಿಸ್ಟಾಟಲ್ ಹೇಳಿದ್ದೂ ಇದನ್ನೆ. ಆದರೆ ಅನುಕರಣೆ ಯಥಾವತ್ತಾಗಿ, ಕಂಡುದನ್ನು ಕಂಡಂತೆಯೆ ಪಡಿಮೂಡಿಸುವುದಲ್ಲ; ಹೀಗೆ ಮಾಡಿದರೆ ನಾಟಕದಲ್ಲಿ, ಕಾವ್ಯದಲ್ಲಿ ಸ್ವಾರಸ್ಯವೇನಿದ್ದೀತು? ನಾಟಕ, ಕಾವ್ಯಗಳೇನು ಇತಿಹಾಸವಲ್ಲ. ಕವಿ ಕಂಡದ್ದನ್ನು ತಾನು ಕಂಡಂತೆ, ತನ್ನ ಅನುಭವದ ಮೂಸೆಯಲ್ಲಿ ಅದು ಪುಟಗೊಂಡಂತೆ, ತನ್ನದೇ ಆದ ರೀತಿಯಲ್ಲಿ ತಿಳಿಸುತ್ತಾನೆ. ಲೋಕ ಮೂಲವಸ್ತುವಾದರೂ ಕಾವ್ಯದಲ್ಲಿ ಕಾಣುವುದು ಲೋಕವನ್ನಲ್ಲ; ಲೋಕವನ್ನು ಕವಿ ಕಂಡುಕೊಂಡಂತೆ. ಭರತನ ಮಾತಿನಲ್ಲಿ ಇದು ಭಾವಾನುಕೃತಿ; ಅಭಿನವಗುಪ್ತ ಇದನ್ನೆ ಅನುವ್ಯವಸಾಯವೆಂದು ಕರೆದಿದ್ದಾನೆ. ಕಾವ್ಯದಲ್ಲಿ ಸರಿಯೆಂದಾದುದು ಲೋಕದಲ್ಲೂ ಸರಿಯೆನಿಸಬೇಕಾದುದಿಲ್ಲ; ಲೋಕದಲ್ಲಿ ಒಪ್ಪಾದುದು ಕಾವ್ಯದಲ್ಲೂ ಒಪ್ಪು ಎನ್ನುವಂತಿಲ್ಲ. ಕಾವ್ಯವನ್ನು ಓದುವಾಗ, ನಾಟಕವನ್ನು ನೋಡುವಾಗ ನಾವು ಈ ಲೋಕವನ್ನು ಮರೆತು ಕವಿಯೋ, ನಾಟಕಕಾರನೋ, ನಟನೋ ನಮ್ಮೆದುರು ಸೃಷ್ಟಿಸುವ ಇನ್ನೊಂದು ಲೋಕದಲ್ಲಿ ಪಾಲ್ಗೊಳ್ಳುತ್ತೇವೆ. ಈ ಹೊಸಲೋಕಕ್ಕೆ ಸಂಗತವಾದುದು ನಾಟ್ಯಧರ್ಮಿ.

ಅದರಲ್ಲಿ ಸ್ವಾರಸ್ಯವನ್ನು ಕಾಣಬಲ್ಲವರು ಸಹೃದಯರು, ರಸಿಕರು.

ಎಲ್ಲರಿಗೂ ಒಗ್ಗುವ ಸರಕಲ್ಲ ಇದು. ಇದಕ್ಕೊಂದು ಪೂರ್ವಸಿದ್ಧತೆ ಬೇಕು, ಸಂಸ್ಕಾರವಿರಬೇಕು.

ಕವಿ-ಕಾವ್ಯ

ಕಾವ್ಯವೆಂದರೇನು?

ಇದಕ್ಕೆ ಆಲಂಕಾರಿಕರ ಉತ್ತರ - ಕವಿಯ ಕೆಲಸ (ಕವೇಃ ಕರ್ಮ) ಎಂದು. ಎಂದರೆ ಕಾವ್ಯಕ್ಕಿಂತ ಮಿಗಿಲಾದ ಬೆಲೆ ಕವಿಗೆ. ಕವಿಯಲ್ಲಿ ಹಿರಿಮೆಯಿದ್ದರೆ, ಕಾವ್ಯದ ಹೆಗ್ಗಳಿಕೆ. ಕವಿಯ ಶೀಲ ಎಂತಾದರೂ ಇರಲಿ, ಕಾವ್ಯದಲ್ಲಿ ಸೊಗಸಿರಬಹುದಲ್ಲ ಎನ್ನುವಂತಿಲ್ಲ. ಕಾವ್ಯ ಸೊಗಯಿಸಲು 'ಪ್ರತಿಭೆ' ಮೂಲಸಾಮಗ್ರಿ. ಪ್ರತಿಭೆಯೋ ನಿಸರ್ಗಸಿದ್ಧವಾದುದು. ಬೇಡಿ ಕಾಡಿ, ಕಷ್ಟಪಟ್ಟು ಪಡೆದುಕೊಳ್ಳುವುದಲ್ಲ. ಹುಟ್ಟುತ್ತಲೆ ಒದಗಿಬರಬೇಕು. ಹಳೆಯ ಮಾತಿನಲ್ಲಿ 'ದೈವದತ್ತ' ಎನ್ನುತ್ತಾರೆ. ಸಂಸ್ಕಾರದಿಂದ ಬಂದದ್ದು ಎನ್ನುತ್ತಾರೆ. ಇದರ ಹಿಂದಿರುವ ತಾತ್ಪರ್ಯ ಇಷ್ಟೇ-ನಮ್ಮ ಪ್ರಯತ್ನದಿಂದ ಕೈಗೂಡಿದುದಲ್ಲ. ಪ್ರತಿಭೆ ಮೂಲಸಾಮಗ್ರಿ ಅಷ್ಟೆ. ಕಾವ್ಯದಲ್ಲಿ ಅದೊಂದೇ ಇದ್ದರೆ ಸಾಲದು. ಪ್ರತಿಭೆಗೊಂದು ದಾರಿ ತೋರಿಸದಿದ್ದರೆ ಅದು ಮರೆಯಾದರೂ ಆದೀತು. ಎರ್ರಾಬಿರ್ರಿಯಾದರೂ ಆದೀತು!

ಇದನ್ನು 'ಅಭ್ಯಾಸ' ಎನ್ನುತ್ತಾರೆ. ಇದು ಪ್ರಯತ್ನದ ಮಾತು; ಬೆವರು ಸುರಿಸುವ ಮಾತು. ಅಭ್ಯಾಸವಿರದೆ ಮಾತುಗಳಲ್ಲಿ ಹಿತಮಿತವಿಲ್ಲ; ನಿರೂಪಣೆಯಲ್ಲಿ ಕಳೆಯಿಲ್ಲ; ಒಕ್ಕಣೆಯಲ್ಲಿ ಏಕಾರ್ಥವಿಲ್ಲ. ಕವಿಯಾದವನು, ಕವಿಯಾಗಬಯಸುವವನು ಕಾವ್ಯಪದ್ಧತಿಯನ್ನು ಕೈಗೂಡಿಸಿಕೊಳ್ಳುವುದು ಅಭ್ಯಾಸದಿಂದ. ಇದು ಪ್ರತಿಭೆಗೆ ನೆರವಾಗಿ ನಿಲ್ಲಬಲ್ಲುದು.

ಮೂರನೆಯದು 'ವ್ಯುತ್ಪತ್ತಿ', ಲೋಕಾನುಭವ, ಶಾಸ್ತ್ರವ್ಯಾಸಂಗ, ದೇಶಪರಿಚಯ, ಚಿಂತನೆ ಇವೆಲ್ಲ ಇದರಲ್ಲಿ ಸೇರುತ್ತವೆ. ಕಾವ್ಯವೆಂದರೆ ಸಂತೋಷವನ್ನುಂಟು ಮಾಡುವುದಷ್ಟೇ ಅಲ್ಲದೆ ಮನಸ್ಸಿಗೊಂದು ಸಂಸ್ಕಾರವನ್ನೂ ಒದಗಿಸಬೇಕು. ಬರಿಯ ಪ್ರತಿಭೆಯಿಂದ ಇದು ಆಗದು. ಉಳಿದೆರಡು ವಿವರಗಳೂ ಕೆಲಸಮಾಡಬೇಕು.

ಮೂರೂ ಕೂಡಿದಾಗಲೆ ಕವಿಯ ಕೆಲಸ. ಮೂರನ್ನೂ ಹದವರಿತು ಕೂಡಿಸಿ ಕೊಳ್ಳುವವನು ಕವಿ.

ಕವಿಯ ಕೊಡುಗೆ

ಸಾಹಿತ್ಯವು ಸಹೃದಯನಿಗೆ ಮೂರನೆಯ ಕಣ್ಣು ಎಂದು ಹೇಳುವುದುಂಟು. ನಮ್ಮೆಲ್ಲರಿಗೆ ಇರುವ ಎರಡು ಕಣ್ಣುಗಳಿಂದ ಹೊರಗಣ ವಿಷಯಗಳನ್ನು ಅರಿತುಕೊಂಡು ಅನುಭವವನ್ನು ಪಡೆದುಕೊಳ್ಳುತ್ತೇವೆ, ಹೆಚ್ಚಿಸಿಕೊಳ್ಳುತ್ತೇವೆ.

ಬದುಕೆಂದರೆ ಹೊಟ್ಟೆ ಹೊರೆದುಕೊಳ್ಳುವುದು, ಬಟ್ಟೆ ತೊಡುವುದು, ಹಣ ಸಂಪಾದಿಸುವುದು, ಕಾಮಕೇಳಿಯಲ್ಲಿ ತೊಡಗುವುದು, ನಾಲ್ಕು ಜನರ ನಡುವೆ ಹೇಗೋ ಬಾಳುವದು, ಯಾವುದಾದರೊಂದು ಬಗೆಯ ಗೀಳನ್ನು ಅಂಟಿಸಿಕೊಳ್ಳುವುದು ಇಷ್ಟೇ ಎಂದರೆ ಎರಡೇ ಕಣ್ಣು ಸಾಕು. ಇಷ್ಟರಲ್ಲೇ ಬದುಕು ಮುಗಿಯಬಾರದು ಎನ್ನುವ ಮಂದಿಯೂ ಸುಮಾರು ಸಂಖ್ಯೆಯಲ್ಲಿದ್ದಾರಲ್ಲ? ಹೊಟ್ಟೆ ತುಂಬಿದರೂ ಮನಸ್ಸಿನ ಹಸಿವು ಇನ್ನೂ ಉಳಿದುಕೊಂಡಿರುವವರಿಗೆ ಬೇರೆ ಬಗೆಯ ಆಹಾರದ ಅಗತ್ಯವಿದೆ. ಅಂಥವರಿಗೆ ಸಾಹಿತ್ಯ ನೆರವಿಗೆ ಬರುತ್ತದೆ. 'ರವಿ ಕಾಣದ್ದನ್ನು ಕವಿ ಕಂಡ' ಎನ್ನುವ ಮಾತಿದೆಯಷ್ಟೆ? ಕವಿಯ ಒಳಗಣ್ಣಿಗೆ ಕಾಣಿಸಿಕೊಳ್ಳುವ ಭಾವನೆಗಳು ನಮ್ಮ ಹೊರಗಣ್ಣುಗಳಿಗೆ ಕಾಣಿಸುವುದಿಲ್ಲ.

ನಮ್ಮೆರಡು ಕಣ್ಣುಗಳಿಗೆ ಕಾಣುವುದು ಬದುಕಿನ ಮೇಲುಪದರಗಳಷ್ಟೆ. ಸಾಹಿತ್ಯದ ಕಣ್ಣಿನಿಂದ ನಾವು ಪಡೆದುಕೊಳ್ಳುವುದು ಬದುಕಿನ ಒಳಹೊಕ್ಕ ನೋಟ. ಕವಿ ಮೇಲೆ ಮೇಲೆ ಈಜಾಡುವುದಿಲ್ಲ, ಮುಳುಗಿ ತಳ ಮುಟ್ಟುತ್ತಾನೆ. ಅಲ್ಲಿ ತಾನು ಕಂಡದ್ದನ್ನು ನಮಗೆ ತಿಳಿಸಿಕೊಡುತ್ತಾನೆ.

ತಿಳಿಸಿಕೊಡುವಾಗಲೂ ಅವನ ಮಾತಿಗಿರುವ ಸೊಬಗು, ಬೆಡಗು, ಬಲ ಇವೆಲ್ಲ ನಮ್ಮ ಮನ ಮುಟ್ಟುತ್ತವೆ, ಹೃದಯವನ್ನು ತಟ್ಟುತ್ತವೆ. ಸಾಹಿತ್ಯವನ್ನು ನಾವು ಸವಿಯುವಾಗ ಕವಿಯ ಪ್ರತಿಭೆಯಲ್ಲಿ ನಾವು ಪಾಲುಗೊಳ್ಳುತ್ತೇವೆ. ಅವನ ಕಣ್ಣನ್ನು ನಮ್ಮದಾಗಿಸಿಕೊಳ್ಳುತ್ತೇವೆ. ಅವನ ಅನುಭವದ ಬೆಳಕು ನಮ್ಮ ಒಳಗಿನ ಕತ್ತಲೆಯನ್ನು ನೀಗುತ್ತದೆ.

ಹಾಗೆಂದೇ ಅವನ ಕೃತಿ ನಮಗೆ ಮೂರನೆಯ ಕಣ್ಣು, ಒಳಗಣ್ಣು.

ಕವಿಯ ಕಾಣ್ಕೆ

ಕವಿಗೂ ನಮಗೂ ಒಂದಂತರವುಂಟು.

ನಮಗೆಲ್ಲ ಇರುವುದು ಎರಡು ಕಣ್ಣುಗಳು; ಇದ್ದುದನ್ನು ಇದ್ದಂತೆಯೆ ಕಾಣಬಲ್ಲ ಕಣ್ಣುಗಳು. ಕವಿಗೆ ಮೂರನೆಯ ಕಣ್ಣೂ ಒಂದಿದೆ. ನಮಗೆ ಕಾಣದುದು ಕವಿಯ ಆ ಕಣ್ಣಿಗೆ ಕಾಣಿಸಿಕೊಳ್ಳುತ್ತದೆ. ಕವಿಯು ತನ್ನ ಕಾಣ್ಕೆಯನ್ನು, ತಾನು ಕಂಡುದನ್ನು, ನಮಗೆ ತಿಳಿಸುವಾಗ ಅವನ ಪ್ರತಿಭೆ ಬಯಲಾಗುತ್ತದೆ. ಕಾಣುವುದು ಸಹಜವಾಗಿಯೇ ನಡೆಯುತ್ತದೆ; ಆದರೆ ತಿಳಿಸುವಾಗ ಸ್ವಲ್ಪ ತಿಣುಕಾಡಬೇಕು. ಅವನಿರುವುದು ಒಂದು ಕಲ್ಪನಾಲೋಕ; ಅಲ್ಲಿಗೆ ನಮ್ಮನ್ನು ಕೊಂಡೊಯ್ಯುವಾಗ ಪ್ರಯತ್ನ ಬೇಡವೆ? ಪ್ರಯಾಸವಲ್ಲವೆ? ಇದ್ದುದನ್ನು ಇಲ್ಲವಾಗಿಸಿ, ಇರದುದನ್ನು ಇರುವಂತೆ ಮಾಡಿ ನಮ್ಮನ್ನು ಮರುಳುಮಾಡಬೇಕಾಗುತ್ತದೆ ಅವನು.

ಲೋಕದ ಕಣ್ಣಿಂದ ನೋಡಿದಾಗ ದಿಟವಲ್ಲ; ಅದನ್ನೇ ಕವಿಯು ತನ್ನ ಕಣ್ಣಿಂದ ಕಂಡು ನಮಗೆ ತೋರಿಸುವಾಗ ಸ್ವಾರಸ್ಯವಾಗಿ ಕಾಣುತ್ತದೆ. ಇದನ್ನು 'ಕವಿಸಮಯ'ವೆಂದು ಹೇಳುವುದುಂಟು.

ಚಕೋರವೆಂಬ ಹಕ್ಕಿ ಬೆಳದಿಂಗಳನ್ನೇ ಕುಡಿಯುವುದಂತೆ, ನಾವು ನೀರು ಕುಡಿದಂತೆ, ಹಾಲು ಕುಡಿದಂತೆ. ಚಾತಕವೆಂಬ ಇನ್ನೊಂದು ಹಕ್ಕಿ ಮಳೆನೀರಿಗಾಗಿಯೇ ಬಾಯಿಬಿಟ್ಟುಕೊಂಡು ಕಾದಿರುವುದಂತೆ; ಇದು ಬೇರೆ ಯಾವ ನೀರನ್ನೂ ಕುಡಿಯದಂತೆ. ಸ್ವಾತಿಯ ಮಳೆಯ ಹನಿಗಳು ಸಮುದ್ರದಲ್ಲಿ ಬಿದ್ದಾಗ ಮುತ್ತುಗಳಾಗುವುವಂತೆ. ಕನ್ನಡನಾಡಿನ ಕವಿಗೆ ಸಮುದ್ರವು ದೂರವಾದರೆ ತಾಮ್ರಪರ್ಣಿ ನದಿಯೇ ಆಯಿತು!

ಅರಸಿಕರು ಇದನ್ನೆಲ್ಲ ಕೇಳಿದರೆ 'ಇದೇನು ಸುಳ್ಳುಗಳು!' 'ಇವನ್ನೆಲ್ಲ ಯಾರು ನಂಬಿಯಾರು?' ಎಂದು ಮೂಗೆಳೆಯುವರು.

ಆದರೆ ಕವಿಯು ಅರಸಿಕರನ್ನು ಕಟ್ಟಿಕೊಂಡು ಮಾಡುವುದೇನು? ಅರಸಿಕರಿಗಾದರೂ ಕವಿಯಿಂದ ಕೆಲಸವೇನು?

ಲೋಕದಲ್ಲಿ ಇರುವುದನ್ನು ಹಾಗೆಯೇ ಹೇಳಿದರೆ ಸ್ವಾರಸ್ಯವೇನು ಬಂತು?

ಕವಿಗಳು ಪರಂಪರೆಯಿಂದ ಏರ್ಪಡಿಸಿಕೊಂಡ ಕೆಲವೊಂದು ನಿಯಮಗಳು ಅವರ ಕಾಣ್ಕೆಯನ್ನು ನಮಗೆ ಸಲ್ಲಿಸಲು ನೆರವಾಗುವುವು.

ಕವಿಯ ಮನಸ್ಸು

ಶೇಕ್ಸ್‌ಪಿಯರ್ ಒಮ್ಮೆ ಹೇಳಿದ:

ಉನ್ಮತ್ತ, ಕಾಮುಕ, ಕವಿ ಇವರೆಲ್ಲರೂ ಕಲ್ಪನೆಯಲ್ಲಿ ಒಡನಾಡಿಗಳು ಎಂದು.

ಉನ್ಮತ್ತನ ಕಲ್ಪನೆಯಲ್ಲಿ ಕಾಣುವ ಪಿಶಾಚಿಗಳೋ ದೈವಗಳೋ ಎಷ್ಟೆಂದು ಎಣಿಕೆಮಾಡಬಹುದೆ? ಹೊರಗಣ ಜಗತ್ತು ಅವನಿಗೆ ಕಾಣುವುದೇ ಬೇರೊಂದು ಬಗೆಯಲ್ಲಿ, ಮತ್ತು ವಿಚಿತ್ರವಾಗಿ.

ಕಾಮುಕನ ಕಣ್ಣಿಗಂತೂ ಎಲ್ಲವೂ ಕಾಮವ್ಯಾಪಾರಕ್ಕೆಂದೇ ಇರುವುವು. ಕುರೂಪಿಯೂ ಅವನಿಗೆ ಸುಂದರಿಯೆ; ಇವರ ಸಾಲಿನಲ್ಲಿ ಕವಿಗೂ ಎಡೆ ಮಾಡಿ ಕೊಟ್ಟಿದ್ದೇಕೆ? ಉನ್ಮತ್ತನು ಕಲ್ಪನೆಗೆ ಅಡಿಯಾಳು; ಕಾಮುಕನೂ ಕಲ್ಪನೆಗೆ ಪರವಶನಾದವನೇ. ಇರುವುದಕ್ಕಿಂತ ಅವರಿಗೆ ಸ್ಪಷ್ಟವಾಗಿ, ಮುಖ್ಯವಾಗಿ ಕಾಣುವುದು ಇಲ್ಲದಿರುವುದೇ.

ಕವಿಯ ಕಲ್ಪನಾಲೋಕವೂ ಇಂಥದೇ. ಬುವಿಯಿಂದ ಮುಗಿಲಿಗೆ, ಮುಗಿಲಿಂದ ಬುವಿಗೆ ಅವನ ನೋಟ ಹರಿಯುತ್ತದೆ; ಬೇರೆ ಯಾರಿಗೂ ಕಾಣದುದು ಅವನ ಕಣ್ಣಿಗೆ ತೋರಿಕೊಳ್ಳುತ್ತದೆ. ಇಲ್ಲದೇ ಇರುವ ವಸ್ತುವಿಗೊಂದು ಸೊಗಸಾದ ರೂಪ ಕೊಡುತ್ತಾನೆ. ಅದಕ್ಕೊಂದು ವಸತಿ ನಿರ್ಮಿಸುತ್ತಾನೆ. ಅದಕ್ಕೆ ನಾಮಕರಣ ಮಾಡಿ, ಅದನ್ನು ಬಗೆಬಗೆಯಾಗಿ ಬಣ್ಣಿಸುತ್ತಾನೆ. ಅದು ದಿಟವಾಗಿ ಇರುವಂತೆಯೇ ಅವನ ಎಣಿಕೆ. ಕಲ್ಪನೆಯಲ್ಲಿ ಉನ್ಮತ್ತನಂತೆಯೇ, ಕಾಮುಕನಂತೆಯೇ ಇಲ್ಲದಿರುವುದನ್ನು ಇರುವಂತೆ ಕಂಡುಕೊಳ್ಳುತ್ತಾನೆ. ಆದರೆ ಉನ್ಮತ್ತನಿಗಾಗಲಿ, ಕಾಮುಕನಿಗಾಗಲಿ ಇರದ ಸಾಮರ್ಥ್ಯ ಕವಿಗಿದೆ. ತಾನು ಕಂಡುಕೊಂಡುದನ್ನು, ನಂಬಿದುದನ್ನು ಬೇರೆಯವರಿಗೆ (ಎಂದರೆ ಸಹೃದಯರಿಗೆ) ಮನವರಿಕೆ ಮಾಡಿಕೊಡುವ ಶಕ್ತಿ ಅವನದ್ದು. ಅವನ ಮಾತಿನಲ್ಲಿ ಕಾವ್ಯಗುಣವಿರುವುದರಿಂದ ಅದು ಪ್ರಾಮಾಣಿಕವಾಗಿ ಬಿಡುತ್ತದೆ ! ಕವಿಯ ಕೃತಿಯನ್ನು ಓದಿ ಮೆಚ್ಚಿಕೊಳ್ಳುವಾಗ, ಇದು ದಿಟವೇ, ವಾಸ್ತವವೇ ಎಂಬ ಸಮಸ್ಯೆ ನಮಗೆ ತೋರಿಕೊಳ್ಳುವುದಿಲ್ಲ. ಉನ್ಮತ್ತ ಹೇಳಿದರೆ ನಾವು ನಂಬುವುದಿಲ್ಲ. ಕಾಮುಕ ಹೇಳಿದರೆ ನಕ್ಕು ಬಿಡುತ್ತೇವೆ. ಅದೇ ಮಾತನ್ನು ಕವಿ ಹೇಳಿದರೆ ಹೊಗಳುತ್ತೇವೆ.

ಕವಿ ಹೇಳುವುದೆಲ್ಲ ವ್ಯವಹಾರ ದೃಷ್ಟಿಯಿಂದ ಸುಳ್ಳೇ. ಆದರೆ ಅವನ ಮಾತು ಹೃದಯವನ್ನು ಮುಟ್ಟುತ್ತದೆ; ಮನಸ್ಸಿನ ವಿಮರ್ಶೆ ಆಗ ಮುಖ್ಯವಲ್ಲ. ಆದುದರಿಂದ ಸುಳ್ಳೆನಿಸುವುದಿಲ್ಲ; ನಂಬುತ್ತೇವೆ.

ಕವಿತೆಯ ಇಮ್ಮುಖ

ವಿಷಯವೇ ಇರದೆ ಬರಿದೆ ಕವಿತೆಗಳನ್ನು ಹೊಸೆಯುವುದರಲ್ಲಿ ಗಟ್ಟಿಗರಾದ ಕವಿಗಳು ಕುರಿಗಳಂತೆ (ಅವಯಃ ಕೇವಲ ಕವಯಃ).

ಲೋಕಾನುಭವವೂ ಇರದು; ಶಾಸ್ತ್ರಪಾಂಡಿತ್ಯವೂ ಇರದು; ಕವಿಗಿರಬೇಕಾದ ಕ್ರಾಂತಿ ದೃಷ್ಟಿಯಂತೂ ಮೊದಲೇ ಇರದು. ಇತರರ ಕವಿತೆಗಳ ಜಾಡು ಮಾತ್ರ ಅವರ ಮುಂದಿದ್ದು ಅದರ ಅನುಕರಣೆಯಷ್ಟೆ ಇವರಿಗೆ ಸಾಧ್ಯ. ಪಾಂಡಿತ್ಯವಷ್ಟೆ ಇದ್ದು ಕವಿ ಹೃದಯವಾಗಲಿ ಕವಿಯ ಕಾಣ್ಕೆಯಾಗಲಿ ಇರದಿದ್ದರೆ ಅವರ ಕವಿತೆ ಗಿಣಿಯ ಪಾಠವಷ್ಟೆ (ಕೇವಲ ಧೀರಾಸ್ತು ಕೇವಲಂ ಕೀರಾಃ). ಶಾಸ್ತ್ರದಲ್ಲಿ ಪ್ರಸಕ್ತಿಯಿಲ್ಲದವರು ಕವಿಗಳಾಗುತ್ತಾರೆ ಎಂಬುದೊಂದು ಮಾತಿದೆ (ಶಾಸ್ತ್ರೇಷು ಹೀನಾಃ ಕವಯೋ ಭವಂತಿ). ಶಾಸ್ತ್ರದ್ದು ಕಷ್ಟದ ದಾರಿ. ಬಾಯಿಗೆ ಬಂದಂತೆ ಪದ್ಯ ರಚಿಸುವುದು ಸುಲಭ ತಾನೆ? ಮಾತಿನ ಮೋಡಿಯ ಸೌಲಭ್ಯ ಒಂದಿದ್ದರೆ ಸಾಕು; ಕವಿತೆಯಲ್ಲಿ ತಿರುಳಿರಬೇಕು, ಹುರುಳಿರಬೇಕು, ಸಂದೇಶವಿರಬೇಕು ಎಂಬ ಹಟ ಏಕೆ? ಅವೆಲ್ಲ ಗದ್ಯ ಪ್ರಬಂಧಗಳ ಪಾಲಿಗಿರಲಿ. ಕವಿಯ ಕೆಲಸ ಬಣ್ಣದ ಮಾತಿನ ಅಲೆಗಳನ್ನೇರಿ ಸರಿಯುವುದು; ಅರ್ಥದ ಒರಟು, ಬಿಗುವು ಇದರ ಗೊಡವೆಯೇಕೆ? ಇದು ಕೆಲವರ ಎಣಿಕೆ. ಕವಿಗಳಲ್ಲಿ ದಿಟವಾಗಿ ಮಾತಿನ ಮಲ್ಲರೇ ಹೆಚ್ಚು ಮಂದಿ. ಅವರ ಮಾತಿನ ಮುಸುಕನ್ನು ಅತ್ತ ಸರಿಸಿದರೆ ಒಳಗೆ ಟೊಳ್ಳೇ! ಆದರೆ ಇಂಥ ಕವಿತೆಯಿಂದ ಲೋಕೋಪಕಾರವೂ ಇಲ್ಲ, ಹೃದಯ ರಂಜನೆಯೂ ಇಲ್ಲ. ಕವಿತೆ ಕಿವಿಗೆ ಮಾತ್ರ ಹಿತವಾಗಿದ್ದರೆ ಸಾಲದು; ಮನಸ್ಸಿಗೆ ಅದು ಬರಬೇಕು, ಎದೆಯೊಳಕ್ಕೆ ಇಳಿಯಬೇಕು. ಮಾತು ಹಿತವಾಗಿದ್ದು ಅದರ ಬೆನ್ನ ಹಿಂದೆ ಅರ್ಥವೂ ಗಂಭೀರವಾಗಿದ್ದರೆ ಅದು 'ಪಂಡಿತ ಕವಿತೆ'ಯಂತೆ. ನಿಜವಾಗಿ ಕವಿಗಳೆಂದರೆ ಇಂಥವರೇ ಎಂದು ಹಳೆಯ ವಿಮರ್ಶಕರ ಎಣಿಕೆ (ಕವಯಃ ಪಂಡಿತಕವಯಃ). ಅವರ ಮಾತು 'ಆಪಾತಮಧುರ' ಕೇಳಿದೊಡನೆ ರಂಜನೆಯನ್ನು ಒದಗಿಸುತ್ತದೆ. ಕವಿತೆಯ ಶರೀರವೂ ಸುಂದರವಾಗಿರಬೇಕು ಅಲ್ಲವೆ? ಆದರೆ ಇದಕ್ಕಿಂತ ಮಿಗಿಲಾಗಿ ಮಾತಿನ ಅರ್ಥ ನಮ್ಮನ್ನು ಮೀಟಬೇಕು; ಹೊಸ ಹೊಸ ಭಾವನೆಗಳಿಗೆ ಎಡೆ ಮಾಡಿಕೊಡಬೇಕು; ಬಾಳಿಗೆ ಬೆಳಕನ್ನು ನೀಡಬೇಕು. ದಾರಿಯನ್ನು ತೋರಬೇಕು.

ಇದು 'ಆಲೋಚನಾಮೃತ' ಎನಿಸಿಕೊಳ್ಳುತ್ತದೆ. ಉತ್ತಮವಾದ ಕವಿತೆಗೆ ಎರಡು ಮುಖಗಳು. ಒಂದು ಆಪಾತ ಮಧುರ. ಇನ್ನೊಂದು ಆಲೋಚನಾಮೃತ.

ರಸಿಕನ ಪರಿ

ನಮ್ಮ ಆಲಂಕಾರಿಕನೊಬ್ಬ ಹೇಳುತ್ತಾನೆ -

ಕವಿಯು ಶೃಂಗಾರಿಯಾಗಿದ್ದರೆ, ಅವನ ಕಾವ್ಯದಲ್ಲಿ ಕಾಣುವ ಲೋಕವೆಲ್ಲ ರಸಮಯವಾಗಿರುತ್ತದೆ. ಅವನು ಶೃಂಗಾರಿಯಾಗಿರದಿದ್ದರೆ ಅವನು ಕಾಣಿಸುವುದೆಲ್ಲ ನೀರಸವೆ. ಶೃಂಗಾರಿಯೆಂದರೆ ರಸಿಕ. ರಸಿಕನಿಗೆ ಎಲ್ಲೆಲ್ಲೂ ಕಾಣುವುದು ಸ್ವಾರಸ್ಯವಾಗಿಯೇ ಇರುತ್ತದೆ. ಅವನ ಪಾಲಿಗೆ ಬದುಕು ಬರಡಾಗುವುದು ಸಾಧ್ಯವೇ ಇರದು. ಲೋಕದಲ್ಲಿ ಎಲ್ಲಿ ನೋಡಿದರೂ ಚೆಲುವು; ಆದರೆ ಅದನ್ನು ಕಾಣುವ ಕಣ್ಣಿರಬೇಕಷ್ಟೆ! ಅಂಥ ಕಣ್ಣಿದ್ದವನು ರಸಿಕ; ಶೃಂಗಾರಿ. ಅವನು ಬರೆಯುವ ಕಾವ್ಯದಲ್ಲೋ, ಬಿಡಿಸುವ ಚಿತ್ರದಲ್ಲೋ, ಕಡೆಯುವ ಶಿಲ್ಪದಲ್ಲೋ ಈ ಕಾಣ್ಕೆ ಬಂದೇ ಬರುತ್ತದೆ; ಚೆಲುವಿನ ನೋಟ ಆ ಕಾವ್ಯವನ್ನು ಓದುವವರಿಗೆ, ಚಿತ್ರ- ಶಿಲ್ಪಗಳನ್ನು ನೋಡುವವರಿಗೆ ದೊರೆಯುತ್ತದೆ. ಕವಿಯಾಗಲಿ ಕಲಾವಿದನಾಗಲಿ ರಸಿಕನಾಗಿರದಿದ್ದರೆ ಬದುಕಿನ ಬವಣೆಗಳೇ ಅವನಿಗೆ ಎದ್ದು ತೋರಿಕೊಳ್ಳುತ್ತವೆ. ಎಲ್ಲೆಲ್ಲೂ ಇರುವ ಚೆಲುವನ್ನು ಅವನು ಗುರುತಿಸಲಾರ! ತಾನೇ ಕಾಣದ ಚೆಲುವನ್ನು ತನ್ನ ಕೃತಿಯಲ್ಲಿ ಅವನು ಕಾಣಿಸುವುದಾದರೂ ಹೇಗೆ?

ಅರಸಿಕನಾದವನಿಗೆ ಪ್ರಕೃತಿಯೆಂದರೇನು?

ಬರಿಯ ಕಾಡು-ಮೇಡು, ಬೆಟ್ಟ-ಗುಡ್ಡ, ಗಿಡ-ಮರ, ನೀರು-ನೆಲ.

ಮನುಷ್ಯನ ಬದುಕೆಂದರೇನು? ಊಟ-ಉಡುಗೆ, ಕೂಟ-ಕೆಲಸ, ನಿದ್ರೆ-ಎಚ್ಚರ, ಬಯಕೆ-ತೀರಿಕೆ, ಅಷ್ಟೆ.

ಇದರಲ್ಲಿ ಸ್ವಾರಸ್ಯವೇನಿದ್ದೀತು? ಜನ ಮರುಳಾಗುವುದಾದರೂ ಏತಕ್ಕೆ? ಎಂದು ಅವನ ಸಮಸ್ಯೆ. ರಸಿಕನ ಪರಿ ಬೇರೆ.

ಕಸದಲ್ಲೂ ರಸವನ್ನು ಕಂಡಾನು; ನೋವಿನಲ್ಲೂ ನಲಿವನ್ನು ಕಂಡುಕೊಂಡಾನು; ಸೋಲಿನಲ್ಲೂ ಗೆಲುವನ್ನು ಗುರುತಿಸಿಯಾನು.

ಚೆಲುವನ್ನು ಕಂಡಾಗ ಉಬ್ಬುತ್ತಾನೆ, ಸ್ವಾರಸ್ಯವನ್ನರಿತುಕೊಂಡಾಗ ಹಿಗ್ಗುತ್ತಾನೆ!

ಬದುಕು ಬರಡಾಗುವುದು ಹೇಗೆ?

ಹಣ-ಹೆಸರು

ಕವಿಯು ಕಾವ್ಯ ಬರೆಯುವುದೇತಕ್ಕೆ?

ಕಲಾವಿದನು ಕಲಾಕೃತಿಗಳನ್ನು ರಚಿಸುವುದೇತಕ್ಕೆ?

ಕವಿಗಳಲ್ಲದವರಿಗೆ, ಕಲಾವಿದರಲ್ಲದವರಿಗೆ ಈ ಸಮಸ್ಯೆ ಎಂದಿಗೂ ಇದ್ದದ್ದೇ.

ಎಲ್ಲ ಕವಿಗಳಿಗೂ ಎಲ್ಲ ಕಲಾವಿದರಿಗೂ ಒಂದೇ ತೆರನಾದ ಉದ್ದೇಶವಿದ್ದೀತೆಂದು ಹೇಳಲಾಗದು. ಅವರವರ ಬಯಕೆಗಳು ಅವರವರವು.

ಆದರೆ ನಮ್ಮ ಆಲಂಕಾರಿಕನೊಬ್ಬ ಕವಿಗಳ ವಿಚಾರ ಹೇಳುತ್ತ ಅವರು ಬಯಸುವ ಪ್ರಯೋಜನಗಳಲ್ಲಿ ಕೆಲವನ್ನು ಪಟ್ಟಿ ಮಾಡಿದ್ದಾನೆ. ಈ ಪಟ್ಟಿಯ ಮೊದಲಲ್ಲೇ ಬರುವುದು ಯಶಸ್ಸು, ಎಂದರೆ ಹೆಸರು ಮಾಡಿಕೊಳ್ಳುವುದು. ಅನಂತರ ಅರ್ಥ, ಹಣ ಮಾಡಿಕೊಳ್ಳುವುದು. ಇವೆರಡನ್ನು ಮೊಟ್ಟಮೊದಲು ಕಾಣಿಸಿದುದೇಕೆಂದರೆ ಅವು ಬಹುಮಟ್ಟಿಗೆ ಕವಿಗಳು ಬಯಸುವ ಪ್ರಯೋಜನಗಳೆಂದು. ಪಟ್ಟಿಯ ಕಡೆಯಲ್ಲಿ ಬರುವುದು 'ಸದ್ಯಃಪರನಿರ್ವೃತಿ', ಎಂದರೆ ಒಡನೆಯೇ ರಸಿಕರಿಗೆ ಸಂತೋಷವನ್ನುಂಟು ಮಾಡುವುದು. ಬೇರೆಯವರ ಸಂತೋಷಕ್ಕಾಗಿ ಕಾವ್ಯರಚನೆ ಮಾಡುವವರ ಮತ್ತು ಕಲಾಕೃತಿಗಳನ್ನು ರಚಿಸುವವರ ಸಂಖ್ಯೆ ಸಣ್ಣದೆಂದು ಅರ್ಥ. ಯಾವುದೋ ಕಾಲದಲ್ಲಿ ಆಲಂಕಾರಿಕನು ಮಾಡಿದ ಈ ಎಣಿಕೆ ಮೊದಲೆರಡು ಬಯಕೆಗಳನ್ನು ಕುರಿತಂತೆ ಇಂದಿಗೂ ದಿಟ. ಕಾಳಿದಾಸನಂಥವನೇ 'ಕವಿಯಶಃ ಪ್ರಾರ್ಥಿ'ಯೆಂದು ಹೇಳಿ ಕೊಂಡಿದ್ದಾನಲ್ಲವೆ? ಕವಿಯೆಂಬ ಹೆಸರಿನಲ್ಲಿ ಏನೋ ಮೋಡಿ ಇದೆ; ಆ ಹೆಸರನ್ನು ಪಡೆದುಕೊಳ್ಳಲು ಹೆಣಗಾಡುವ ಮಂದಿಯನ್ನು ನೋಡಿ. ಅವರಿಗೆ ಅಭ್ಯಾಸವಾಗಲಿ, ವ್ಯುತ್ಪತ್ತಿಯಾಗಲಿ, ಪ್ರತಿಭೆಯಾಗಲಿ ಏನೂ ಇರದಿದ್ದರೂ ಕವಿಯೆನಿಸಿಕೊಳ್ಳುವ ಕಾತರವೇನೋ ಇರುತ್ತದೆ! ಕವಿತೆಯಂತೆ ಕಾಣುವ ಸಾಲುಗಳನ್ನು ಹೊಸೆಯಲು ತಿಣುಕಾಡುತ್ತಾರೆ; ಕವಿಯಂತೆ ಕಾಣಬೇಕೆಂದು ಚಡಪಡಿಸುತ್ತಾರೆ. ಕೆಲವರಿಗೆ ಅದೃಷ್ಟವಿದ್ದರೆ ಕವಿಯೆಂಬ ಹೆಸರೂ ದಕ್ಕುತ್ತದೆಯೆನ್ನಿ. ಬರಿಯ ಹೆಸರಿನಲ್ಲಿ ಪುರುಷಾರ್ಥವೇನಿದೆ? ಇಷ್ಟಾಗಿ ಅದು ನೀರಮೇಲಣ ಗುಳ್ಳೆಯಂತೆ; ತೀರ ಕ್ಷಣಿಕ ವಾದುದು.

ಅದು ಹಣವಾಗಿ ಮಾರ್ಪಟ್ಟರೀಗ ಪ್ರಯೋಜನ! ಹಣ ಬಂದರೆ ಕೊಂಚ ಕಾಲವಾದರೂ ಅನುಭವಕ್ಕೆ ಬರುತ್ತದೆ; ಕವಿಯಾದದ್ದು 'ಸಾರ್ಥಕ'ವಾಯಿತು.

ಬರಹಗಾರರ ಕೊರಗು

ಸಾಹಿತ್ಯ, ವಿಜ್ಞಾನ, ಕಲೆ, ದರ್ಶನ ಈ ಕ್ಷೇತ್ರಗಳಲ್ಲಿ ಎಷ್ಟೊಂದು ಹೊಸ ಪುಸ್ತಕಗಳು ಹೊರಬರುತ್ತಿವೆ. ಇವನ್ನು ಓದುವ, ಕೊಳ್ಳುವ ಜನರೇ ಇಲ್ಲವಲ್ಲ. ಇದು ಬರಹಗಾರರ ಕೊರಗು.

ಜನರಲ್ಲಿ ಓದುವ ಅಭಿರುಚಿ ಬೆಳೆದಿಲ್ಲವೆಂದು ದೂರು. ಕೊಳ್ಳುವ ಸಾಮರ್ಥ್ಯ ಬೆಳೆದಿಲ್ಲವೆಂಬುದು ಬೇರೆ ಮಾತು! ಕಾದಂಬರಿಗಳು ಹಾಗೂ ಹೀಗೂ ಹೋಗುತ್ತವೆ. ಕವಿತೆಗಳೋ, ವಿಚಾರ ಪ್ರಬಂಧಗಳೋ, ವಿಮರ್ಶೆಯೋ, ವಿಜ್ಞಾನದ ಬರಹವೋ ಆದರೆ ಅವನ್ನು ಬರೆದವನಿಗೂ ನಿರಾಸೆ, ಮಾರುವವನಿಗೂ ಆತಂಕ. ಲೇಖಕರೂ ಪ್ರತಿಭಾಶಾಲಿಗಳೇ ಆಗಿರಬಹುದು, ಪರದೇಶದ ಅನುಭವವನ್ನು ಪಡೆದು ಉತ್ತಮ ರಾಗಿರಬಹುದು, ಸಂಶೋಧನೆಯನ್ನು ನಡೆಸಿರಬಹುದು; ಅವರ ಬರವಣಿಗೆಯೂ ಮೇಲಿನ ಮಟ್ಟದ್ದೇ ಇರಬಹುದು, ಆದರೆ ಜನಸಾಮಾನ್ಯರಿಗೆ ಅದು ಹಿಡಿಸಬೇಕಾದರೆ ಬೇರೆಯ ತಂತ್ರವನ್ನು ಅವರು ಅನುಸರಿಸಬೇಕಾಗುತ್ತದೆ.

ಉದ್ಗ್ರಂಥಗಳು ಕೆಲವರಿಗೆ ರುಚಿಸುವುದು; ಅವುಗಳ ಪ್ರಯೋಜನವನ್ನೂ ಅವರು ಪಡೆದುಕೊಳ್ಳಬಹುದು. ಆದರೆ ಇಂಥವನ್ನು ಆಶಿಸಲು ಒಂದು ಸಂಸ್ಕಾರವೂ ಇರಬೇಕು. ಅದು ಹಲವರಲ್ಲಿ ಕಾಣಸಿಗುವುದಿಲ್ಲ. ಅದು ಅವರ ಲೋಪವೆಂದು ಹೇಳುವುದೂ ತಪ್ಪು. ನಿತ್ಯಜೀವನದ ವ್ಯವಹಾರವೇ ಸಾಕಾಗುತ್ತದೆ; ಇನ್ನು ಉದಾತ್ತ ವಿಚಾರಗಳ ಕಡೆಗೆ ಗಮನ ಹರಿಸುವ ವ್ಯವಧಾನವಾಗಲಿ, ಅನುಕೂಲವಾಗಲಿ ಎಲ್ಲಿ? ಹಾಗೆ ಗಮನ ವನ್ನು ಹರಿಸಬೇಕಾದ ಅಗತ್ಯವಾದರೂ ಏನು? ಉದ್ಗ್ರಂಥಗಳನ್ನು ಬರೆಯುವವರೂ ಕೆಲವರ ಸಲುವಾಗಿಯೇ ಬರೆಯುವುದೆನ್ನಿ. ಹಾಗೆ ಬರೆದು, ಎಲ್ಲರ ಮನಸ್ಸನ್ನೂ ಸೂರೆಗೊಳ್ಳಬೇಕೆಂದರೆ ಹೇಗೆ? ಬರೆಯುವವರು ಎಲ್ಲರ ಅನುಕೂಲಕ್ಕೆ, ರುಚಿಗೆ, ಶಿಕ್ಷಣಕ್ಕೆ ಬರೆದರೆ ಈ ದೂರಿಗೊಂದು ಬೆಲೆಯಿದೆ. ಕ್ಲಿಷ್ಟವಾದ ಬರಹಗಳನ್ನು ಓದುವ, ಓದಿದರೂ ಅರ್ಥ ಮಾಡಿಕೊಳ್ಳುವ, ಮಾಡಿಕೊಂಡರೂ ಮೆಚ್ಚುವ ಜನ ಎಷ್ಟಿದ್ದಾರೆ? ಬರೆಯುವವರು ತಮ್ಮ ಸಂತೋಷಕ್ಕೆ ಬರೆದುಕೊಳ್ಳುತ್ತಾರೆ. ಇದರಿಂದ ಎಲ್ಲರಿಗೂ ಸಂತೋಷವಾಗಬೇಕು ಎಂದರೆ ಬರೆಯುವ ವಿಧಾನವೂ ಅದಕ್ಕೆ ಅನುಕೂಲ ವಾಗಿರಬೇಕು.

ಪ್ರಸಕ್ತವಾದ ವಿಷಯ, ಸರಳವಾದ ಬರಹ, ಸಣ್ಣದಾದ ಪ್ರಮಾಣ ಇದ್ದರೆ ಜನಪ್ರೀತಿ ದುರ್ಲಭವೇನಲ್ಲ.

'ಕ್ಲಾಸಿಕ್'

ಹಲವು ಪದಾರ್ಥಗಳು ಹಳತಾದರೆ ಕೆಡುತ್ತವೆ, ಬಳಸಲು ಬರುವುದಿಲ್ಲ. ಆದರೆ ಕೆಲವು ಹಳತಾದಷ್ಟೂ ಒಳಿತೆನಿಸುತ್ತವೆ. ಹುಣಿಸೆ ಮರ ಹಳೆಯದಾದಷ್ಟೂ ಹುಳಿ ಹೆಚ್ಚು.

ಹಾಗೆಯೇ ಕೆಲವು ಹಳೆಯ ಲೇಖಕರೂ ಹೆಚ್ಚು ಸಂತೋಷ ನೀಡುವುದುಂಟು. ಕಾಳಿದಾಸ, ಭಾಸ, ಶೇಕ್ಸ್‌ಪಿಯರ್, ಗೋಲ್ಡ್‌ಸ್ಮಿತ್, ಪಂಪ, ರನ್ನ, ಇಂಥವರ ಕೃತಿಗಳಲ್ಲಿ ಕಾಣುವ ಸೊಗಸು ಇಂದಿನವರ ಕೃತಿಗಳಲ್ಲಿ ಕಾಣುವುದು ಕಷ್ಟವಲ್ಲವೆ?

ಇಂಗ್ಲೀಷಿನಲ್ಲಿ 'ಕ್ಲಾಸಿಕ್' ಎಂಬ ಪದ ಬಳಸುತ್ತಾರೆ, ಶ್ರೇಷ್ಠವಾದುದು, ಪ್ರಮಾಣ ಭೂತವಾದುದು ಎಂಬರ್ಥದಲ್ಲಿ. ಆದರೆ ಹಳೆಯದು ಎಂಬ ಧ್ವನಿಯೂ ಇದರಲ್ಲಿದೆ. ಈ ಪದದ ಲ್ಯಾಟಿನ್ ಮೂಲವಾದ 'ಕ್ಲಾಸಿಸ್' ಎಂಬ ಮಾತಿಗೆ ಅಗ್ರಪಂಕ್ತಿ, ಶ್ರೇಷ್ಠ ಎಂದರ್ಥ. ಹಳೆಯ ಆಂಗ್ಲ, ಫ್ರೆಂಚ್, ಜರ್ಮನ್ ಬರಹಗಾರರಿಗೆ ಇನ್ನೂ ಪ್ರಾಚೀನ ವಾದ ಗ್ರೀಕ್, ಲ್ಯಾಟಿನ್ ಸಾಹಿತ್ಯ ಮೇರುಕೃತಿಗಳು 'ಕ್ಲಾಸಿಕಲ್' ಎನಿಸಿದುವು. ಸುಸಂಸ್ಕೃತರು ಅವನ್ನೇ ಓದಿ ಆನಂದ ಪಡುತ್ತಿದ್ದುದುಂಟು. ಲೇಖಕರು ಅವನ್ನೇ ಅನುಕರಣ ಮಾಡುತ್ತಿದ್ದುದೂ ಉಂಟು. ನಮ್ಮಲ್ಲಿಯೂ ಪ್ರಾಚೀನಕವಿಗಳು ರಾಮಾಯಣ, ಮಹಾಭಾರತಗಳಿಂದ ಪ್ರಭಾವಿತರಾದವರಲ್ಲವೆ? ಆದರೆ ನಮ್ಮ ರಾಷ್ಟ್ರಕವಿ ಕಾಳಿದಾಸ ಹೇಳಿದಂತೆ, ಹಳೆಯದೆಂದು ಎಲ್ಲವೂ ಒಳ್ಳೆಯದೇನಲ್ಲ; ಹೊಸತೆಂದು ಹೀನಾಯವೂ ಬೇಡ. ಬುದ್ಧಿವಂತರಾದವರು ಪರೀಕ್ಷೆ ಮಾಡಿ ಯಾವುದು ಒಳಿತೋ ಅದನ್ನು ಇರಿಸಿಕೊಳ್ಳುತ್ತಾರೆ. ಹಳೆಯದೆಲ್ಲವೂ 'ಕ್ಲಾಸಿಕ್' ಆಗುವುದಿಲ್ಲ. ಎಲ್ಲ ಕಾಲಕ್ಕೂ ಮೌಲ್ಯಗಳ ದೃಷ್ಟಿಯಿಂದ ಮಾನ್ಯವಾಗಿದ್ದರೆ ಮಾತ್ರ 'ಕ್ಲಾಸಿಕ್'. ಇಂಥ ಕೃತಿಗಳು ಹಳೆಯಕಾಲದಲ್ಲಿ ಕಾಣಿಸಿಕೊಂಡುವು. ಆದರೆ ಇಂದಿನ ಕಾಲಕ್ಕೂ ಅವುಗಳ ಪ್ರಸ್ತುತತೆ ಕಡಮೆಯೇನಾಗಿಲ್ಲ. ಮೌಲ್ಯವಿರದ ಸಾವಿರಾರು ಕೃತಿಗಳು ಹಳೆಯ ಕಾಲದಲ್ಲೂ ಇದ್ದುವು, ಈಗಲೂ ಇರುವಂತೆ. ಅವೆಲ್ಲ ಹೇಳಹೆಸರಿಲ್ಲದಂತೆ ಅಳಿಸಿಹೋದುವು. ಸತ್ತ್ವವಿರುವುವು ಮಾತ್ರ ಉಳಿದುಕೊಂಡುವು.

ಮುಂದಿನವರಿಗೆ ನಮ್ಮ ಕಾಲದ ರಚನೆಗಳು ಹೀಗೆಯೇ. ಸತ್ತ್ವವಿದ್ದವು ಕ್ಲಾಸಿಕ್‌ಗಳಾಗಿ ಉಳಿದುಕೊಳ್ಳುತ್ತವೆ. ಇಲ್ಲದವು ಗಾಳಿಗೆ ತೂರಿಹೋಗುತ್ತವೆ.

ಓದು-ಬರಹ

ಲೋಕದಲ್ಲಿ ಎರಡು ಬಗೆ ಜನ :

ಬರೆಯುವವರು ಬರೆಯುತ್ತಾರೆ. ಓದುವವರು ಓದುತ್ತಾರೆ.

ಬರೆದದ್ದನ್ನೆಲ್ಲ ಓದಲೇಬೇಕೆಂಬ ನಿಯಮವೇನಿಲ್ಲ. ಹಾಗೆಯೇ, ಓದಲೆಂದೇ ಬರೆಯಬೇಕೆಂಬ ನಿಯಮವೂ ಇಲ್ಲವೋ?

ಈಗ ಹೊರಬರುತ್ತಿರುವ ಹಲವು ಪುಸ್ತಕಗಳನ್ನು ನೋಡಿದರೆ ಇದು ದಿಟವೆಂದೇ ತೋರುತ್ತದೆ. ಬರೆಯುವ ಚಪಲ ಇದ್ದವರು ಬರೆಯುತ್ತಾರೆ, ಯಾರೋ ವೆಚ್ಚಮಾಡಿ ಅಚ್ಚೂ ಹಾಕಿಸುತ್ತಾರೆ; ಮಾರಾಟಕ್ಕೂ ಬರುತ್ತದೆ. ಆದರೆ ಓದಲೇಬೇಕೆಂದು ಶಾಸನ ಮಾಡುವುದು ಹೇಗೆ? ಪುಸ್ತಕವನ್ನು ಕೊಳ್ಳಲೇಬೇಕೆಂಬ ವಿಧಿಯೂ ಸದ್ಯ ಇಲ್ಲವಲ್ಲ! ಓದುವವರೇನು ಹೆಡ್ಡರಲ್ಲ. ಓದಬೇಕಾದದನ್ನು ಓದುತ್ತಾರೆ, ಓದಬಹು ದಾದುದನ್ನು ಓದುತ್ತಾರೆ. ಕೆಲವೊಮ್ಮೆ ಓದಬಾರದುದನ್ನೂ ಓದುತ್ತಾರೆನ್ನಿ! ಓದಿದರೆ ಅರ್ಥವಾಗದುದನ್ನು ಅರ್ಧದಲ್ಲೇ ಕೈಬಿಡುತ್ತಾರೆ. ಓದಲು ಸಾಧ್ಯವೇ ಆಗದುದನ್ನು ಮೂಸಿಯೂ ನೋಡುವುದಿಲ್ಲ! ಏನೋ ಎಡವಿ ಪುಸ್ತಕವನ್ನು ಕೊಂಡರೂ, ಒಂದೆರಡು ಹಾಳೆ ಮಗುಚುವುದರೊಳಗೆ ಅದರ ಬಂಡವಾಳ ತಿಳಿದುಬಿಡುತ್ತದೆ. ಇದು ಓದಲೆಂದು ಬರೆದ ಪುಸ್ತಕವಲ್ಲ ಎಂಬುದು ಮನದಟ್ಟಾಗಿಬಿಡುತ್ತದೆ. ಕೊಂಡ ತಪ್ಪಿಗೆ ಓದಲೇಬೇಕೆಂದು ಯಾರೂ ಮತ್ತೊಂದು ತಪ್ಪನ್ನು ಮಾಡಲಾರರು. ಆದರೆ ಯಾರೂ ಓದಲಾರದ ಪುಸ್ತಕವನ್ನು ಬರೆಯುವುದಾದರೂ ಏತಕ್ಕೆ?

ಕೆಲವರಿಗೆ ಓದುವ ಹುಚ್ಚಿರುವಂತೆಯೇ, ಮತ್ತೆ ಕೆಲವರಿಗೆ ಬರೆಯುವ ಹುಚ್ಚು ಎಂಬುದಷ್ಟೇ ಕಾರಣ. ಏನನ್ನಾದರೂ ಬರೆದಲ್ಲದೆ ಅವರಿಗೆ ಉಂಡದ್ದು ಅರಗದು. ತಾವು ಬರೆದುದನ್ನು ಬೇರೆಯವರು ಓದಲೆಂಬ ಆಸೆ ಅವರಿಗಿರುವುದು ಸಹಜ; ಓದಿದರೇನೋ ಸಂತೋಷವೇ. ಆದರೆ ಯಾರೂ ಓದಲಿಲ್ಲವೆಂದರೆ ಮರುಕವೇನಿಲ್ಲ! ತಾನು ಬರೆದು ಧನ್ಯನಾದೆ; ಓದದೆ ಅವರು ಕೆಟ್ಟರೆ ಕೆಡಲಿ. ತಾನೇನು ಮಾಡು ವುದಕ್ಕಾಗುತ್ತದೆ? ಒಬ್ಬ ಒಂದು ಕುದುರೆಯನ್ನು ನೀರಿಗೆ ಒಯ್ಯಬಹುದು; ಹತ್ತು ಜನ ಸೇರಿ ಅದು ನೀರು ಕುಡಿಯುವಂತೆ ಮಾಡಿಯಾರೆ?

ಹೀಗೆ, ಬರೆಯುವ ಬಯಕೆಯನ್ನು ತಡೆಯಲಾರದೆ ಬರೆದು ಹೊರತಂದ ಪುಸ್ತಕಗಳು ಈಗೀಗ ಹೆಚ್ಚಾಗುತ್ತಿವೆ;

ಆದರೆ ಅವನ್ನು ಓದುವವರ ಸಂಖ್ಯೆಯೂ ಹೆಚ್ಚದೆ ಇರುವುದು ಕ್ಷೇಮ!

ಓದಲು ಪುಸ್ತಕ

ಜಿ. ಕೆ. ಚೆಸ್ಟರ್‌ಟನ್ ಎಂಬ ಆಂಗ್ಲ ಬರಹಗಾರ ಒಮ್ಮೆ ಹೀಗೆ ಹೇಳಿದ -

"ಪುಸ್ತಕವನ್ನು ಓದಲು ಹಾತೊರೆಯುವವನಿಗೂ, ಬೇಸರವನ್ನು ಕಳೆಯಲೆಂದು ಓದಲು ಪುಸ್ತಕ ಬೇಕೆನ್ನುವವನಿಗೂ ವ್ಯತ್ಯಾಸವಿದೆ."

ಮೊದಲನೆಯವನಿಗೆ ಪುಸ್ತಕ ಮುಖ್ಯ; ಅದನ್ನು ಓದಬೇಕೆನ್ನುವ ಕಾತುರ. ಎರಡನೆಯವನಿಗೆ ಓದು ಮುಖ್ಯ; ಪುಸ್ತಕ ಯಾವುದಾದರೂ ಆಯಿತು.

ಪುಸ್ತಕವನ್ನು ಓದಬೇಕು, ಓದಲು ಪುಸ್ತಕ ಬೇಕು ಎಂಬೆರಡು ಬಗೆಗಳಲ್ಲಿ ಅಂತರವಿರದೆ ಹಲವರು ಓದುತ್ತಾರೆ. ಓದುತ್ತಲೇ ಇರುತ್ತಾರೆ. ಅವರಿಗೆ ಅದೊಂದು ಕಾಲಕ್ಷೇಪ ವಿಧಾನ ಅಷ್ಟೆ. ಅದೊಂದು ಗೀಳು ಎಂದರೂ ಸರಿಯೆ.

ಓದಿದ್ದು ತನಗೆ ನೆರವಾಗಬೇಕು, ಓದಿದ್ದರಿಂದ ತನ್ನ ತಿಳಿವಳಿಕೆ ಹೆಚ್ಚಬೇಕು ಎನ್ನುವ ಬಯಕೆಯೇನಿರುವುದಿಲ್ಲ. ಇನ್ನು ಪುಸ್ತಕದ ಮೌಲ್ಯ (ಮಾರಾಟದ ಬೆಲೆಯಲ್ಲ, ಅದರ ಅಂತಃಸತ್ತ್ವ) ಅವರ ಗಮನಕ್ಕೆ ಬಾರದು. ಪುಸ್ತಕದ ಮೌಲ್ಯವನ್ನು ಅರಿತುಕೊಂಡು, ಅದನ್ನು ಓದಬೇಕೆನ್ನುವ ಕಾತರವಿದ್ದರೆ ಅದು ಬೇರೆಯ ಮಾತು.

ಅದೇನು ಕಾಲ ಕಳೆಯುವ ವಿಧಾನವಲ್ಲ. ಸಮಯ ಇರದಿದ್ದರೂ, ಹೇಗಾದರೂ ಓದುವ ಬಯಕೆಯಿರುತ್ತದೆ. ಓದುವ ಚಪಲವೆಂದಲ್ಲ; ಓದಿದ್ದರಿಂದ ತನಗೊಂದು ಪ್ರಯೋಜನವಾದೀತು ಎನ್ನುವ ಆಸೆ.

ಇದನ್ನು ವಿವೇಕವೆನ್ನಬಹುದು. ಬರಿಯ ಓದುವ ಗೀಳು ಇದ್ದವರಿಗೆಲ್ಲ ಈ ಬಗೆಯ ವಿವೇಕ ಇರುವುದಿಲ್ಲ.

ಏನನ್ನು ಓದಬೇಕು ಎಂದು ಮೊದಲೇ ನಿರ್ಧರಿಸಿಕೊಂಡು, ಅದರ ಅಗತ್ಯವನ್ನು ಕಂಡುಕೊಂಡವರು ವಿವೇಕಿಗಳು.

ಅವರು ಪುಸ್ತಕವನ್ನು ಓದುವರು, ಓದಿಗೆಂದು ಪುಸ್ತಕವನ್ನು ಹಿಡಿಯುವುದಿಲ್ಲ.

ಎಂಥ ಸಾಹಿತ್ಯ ಬೇಕು?

ಓದುವ ಮಂದಿ ಹೆಚ್ಚುತ್ತಿದ್ದಾರೆ.

ಆದರೆ ಪತ್ರಿಕಾ ಪ್ರಪಂಚದಲ್ಲೂ ಪುಸ್ತಕ ಪ್ರಕಾಶನದಲ್ಲೂ ಮೌಲ್ಯಗಳ ಕಡೆ ಗಮನ ಹರಿಸುವುದು ಕಡಮೆಯಾಗುತ್ತಿದೆ.

ಇಂದಿನ ಮೋಜು ನಾಳಿನ ಒಳಿತಿಗಿಂತ ಹೆಚ್ಚು ಗಮನವನ್ನು ಸೆಳೆಯುತ್ತಿದೆ.

ಪತ್ರಿಕೆಗಳಲ್ಲಿ ರಾಜಕಾರಣಿಗಳ ವೃತ್ತಾಂತದ್ದೇ ಮೇಲುಗೈ.

ಅದಿಲ್ಲದಿದ್ದರೆ ದಂಗೆ, ದೌರ್ಜನ್ಯ, ಅಪಘಾತ, ದರೋಡೆ; ಜಾಹೀರಾತುಗಳ ಜಮಾವಣೆ ಬೇರೆ. ಜಗತ್ತಿನಲ್ಲಿ ಏನೇನು ನಡೆಯುತ್ತಲಿದೆಯೆಂಬ ಅರಿವೇನೋ ನಮಗೆ ಬೇಕಾದುದೇ; ಆದರೆ ಇದರಲ್ಲೂ ಔಚಿತ್ಯವಿರಬೇಡವೆ? ಇನ್ನು ಮಾರಾಟಗೊಳ್ಳುವ ಪುಸ್ತಕಗಳನ್ನು ನೋಡಿ— ಕಾಮಕೇಳಿ, ಅತ್ಯಾಚಾರ, ಪತ್ತೇದಾರಿ, ಕುಹಕ, ವ್ಯಂಗ್ಯ ಇಂಥ ವಿಚಾರಗಳು.

ತಪ್ಪಿದರೆ, ಢೋಂಗಿ ಸಾಧುಸಂತರನ್ನು ಕುರಿತವು; ರಾಜಕಾರಣಿಗಳ ಒಳಸಂಚನ್ನು ತೆರೆದು ತೋರಿಸುವಂಥವು. ಸಾಹಿತ್ಯದ ಉದ್ದೇಶ ಮೈಗೂಡಿಬರಬೇಕೆಂದರೆ, ಪ್ರಕಟಗೊಳ್ಳುವ ಬರಹಗಳಲ್ಲಿ ಮೂರು ಮೌಲ್ಯಗಳು ಸೇರಿಬರಬೇಕು— ಹಿತ, ಮಿತ, ಸತ್ಯ.

ಸಾಮಾನ್ಯ ಜನ ತಾವು ಓದುವ ಸಾಹಿತ್ಯದಿಂದ ಮನಸ್ಸಿನ ಅಥವಾ ಹೃದಯದ ಸಂಸ್ಕಾರವನ್ನು ಪಡೆದುಕೊಳ್ಳುವಂತಿರಬೇಕು. ಸಾಹಿತ್ಯಕ್ಕೆ ನಮ್ಮನ್ನು ಮೇಲೆತ್ತಿ ನಿಲ್ಲಿಸುವ ಶಕ್ತಿಯಿದೆ. ವಿವಿಧವಾದ, ವಿಶಾಲವಾದ ತಿಳಿವಳಿಕೆಯ ಜೊತೆಗೆ ಮೌಲ್ಯಗಳ ಅರಿವೂ ಕೂಡಿಕೊಂಡರೆ ಅದು ಒಳ್ಳೆಯ ಸಾಹಿತ್ಯ.

ಸಾಹಿತಿಗೆ, ಲೇಖಕನಿಗೆ ಸ್ವಾತಂತ್ರ್ಯವಿರಬೇಕು ದಿಟ; ಅವನ ಅಭಿವ್ಯಕ್ತಿಗೆ ಯಾವೊಂದು ನಿರ್ಬಂಧವೂ ಇರಬಾರದು.

ಆದರೆ ತನ್ನೊಳಗಿಂದಲೇ ಏರ್ಪಟ್ಟ ಸಂಯಮವೂ ಇದ್ದರೆ ಸಾಹಿತ್ಯಕ್ಕೆ ಮೆರಗು ಬರುತ್ತದೆ ಬರೆದದ್ದು ಸಾರ್ಥಕವಾಗುತ್ತದೆ.

ಸಂಯಮವಿರದ ಸ್ವಾತಂತ್ರ್ಯ ಅನರ್ಥಕ್ಕೆ ಕಾರಣವಾದೀತು.

ಸಂಯಮದ ಮೂರು ಕಾಲುಗಳು ಹಿತ, ಮಿತ, ಸತ್ಯ ಎಂಬುವೇ.

ಈ ಮುಕ್ಕಾಲುಮಣೆಯ ಮೇಲೆ ನಿಂತ ಪತ್ರಿಕಾಸಾಹಿತ್ಯ, ಪುಸ್ತಕಸಾಹಿತ್ಯ ನಮಗಿಂದು ಬೇಕಾಗಿದೆ.

ಓದುವ ಗೀಳು

ಓದಿ ಓದಿ ಕೂಚುಭಟ್ಟ ಮರುಳಾದನಂತೆ.

ಆ ಕೂಚುಭಟ್ಟ ಯಾರೋ, ಅವನು ಓದುತ್ತಿದ್ದುದು ಏನೋ ಯಾರೂ ಅರಿಯರು. ಮರಳಾದದ್ದಂತೂ ತಿಳಿದಿದೆ.

ಓದುತ್ತಲೇ ಇರುವವರು ಮರುಳಾಗುವ ಸಂಭವ ಇದೆ ಎಂದು ಇಲ್ಲಿ ತಾತ್ಪರ್ಯ. ಓದುವುದೇ ತಪ್ಪು ಎಂದಲ್ಲ, ಓದಿದವರೆಲ್ಲ ಮರುಳಾಗುವರು ಎಂದೂ ಅಲ್ಲ. ಓದದಿದ್ದವರು ಮರುಳಾಗುವುದೆ ಇಲ್ಲ ಎಂದೂ ಅಲ್ಲ! ಓದಿಗೂ ಮರುಳಿಗೂ ಅಂಥ ನಿಕಟವಾದ ನಂಟೇನೂ ಕಾಣುವುದಿಲ್ಲ. ಒಂದರ ಬೆನ್ನ ಹಿಂದೆ ಇನ್ನೊಂದು ಬಂದೀತೆಂದು ಬೆದರಬೇಕಾದುದಿಲ್ಲ.

ಆದರೆ ಕೂಚುಭಟ್ಟ ಓದುವುದನ್ನು ಬಿಟ್ಟು ಬೇರೇನನ್ನೂ ಮಾಡಿರಲಾರ. ಅದೇ ಒಂದು ಗೀಳು ಇದ್ದಿರಬೇಕು ಅವನಿಗೆ! ಎಲ್ಲ ಕೆಲಸಗಳನ್ನೂ ಮಾಡಿಕೊಳ್ಳುತ್ತ, ಬಿಡುವಿನ ವೇಳೆಯಲ್ಲಿ ಮಾತ್ರ ಓದುತ್ತಿದ್ದರೆ ಯಾರು ಮರುಳಾಗುತ್ತಾರೆ? ಓದುವ ಅಗತ್ಯ ಇರುವ ಸಂದರ್ಭಗಳು ಹಲವಿರುತ್ತವೆ. ವಿದ್ಯಾರ್ಥಿಗಳು, ಉಪಾಧ್ಯಾಯರು, ವಕೀಲರು, ವೈದ್ಯರು ಮುಂತಾದವರು ಓದದಿದ್ದರೆ ಹೇಗೆ? ಅಗತ್ಯವನ್ನು ಪೂರಯಿಸಲು ಓದು ಇರಲೇಬೇಕು. ಆದರೆ ಓದುವುದೇ ಒಂದು ಅಗತ್ಯವಾಗಿಬಿಡಬಾರದು. ಕೆಲವರಿಗೆ ಓದುವುದರಿಂದ ಮನೋರಂಜನೆಯಾಗುತ್ತದೆ. ಕಾಲಕ್ಷೇಪವಾಗುತ್ತದೆ. ಕೆಲವರಿಗೆ ಕುತೂಹಲವೂ ತಣಿದೀತು. ಶಾಸ್ತ್ರಾಧ್ಯಯನ, ಕಾವ್ಯಾಭ್ಯಾಸಗಳಿವೆಯಲ್ಲ? ಮನಸ್ಸು ಹಿಗ್ಗಬೇಕು, ಬಗ್ಗಬೇಕು, ಬಲವಾಗಬೇಕು ಎನ್ನುವವರು ಓದಬೇಕು. ಆದರೆ ಅಗತ್ಯವಿಲ್ಲದೆ, ಉದ್ದೇಶವಿರದೆ, ಕೈಗೆ ಸಿಗುವುದನ್ನೆಲ್ಲ ಓದುವವರಿರುತ್ತಾರೆ. ಅವರಿಗೆ ಯಾವುದರಲ್ಲಾಗಲಿ ಅಂಥ ಆಸಕ್ತಿಯೇನು ಇರುವುದಿಲ್ಲ. ಇಂಥ ಪುಸ್ತಕಗಳನ್ನೆ ಓದಬೇಕು ಎಂಬ ನೇಮವೂ ಅವರಿಗಿರುವುದಿಲ್ಲ. ಓದಿದ ಮೇಲೆ ಓದಿದ್ದನ್ನು ಕುರಿತು ಆಲೋಚಿಸಬೇಕು ಎಂಬ ಅಭಿಪ್ರಾಯವೂ ಇರುವುದಿಲ್ಲ. ಬರಿಯ ಓದಿಗಾಗಿ ಓದು ಅಷ್ಟೆ; ಒಂದು ಹವ್ಯಾಸ.

ಅದರಿಂದ ಬೇರೆಯವರಿಗೇನು ತೊಂದರೆಯಿಲ್ಲ ಎಂಬುದು ದಿಟ. ಆದರೆ ಓದುತ್ತಲೇ ಇರುವವರು ಸ್ವತಂತ್ರವಾಗಿ ಆಲೋಚಿಸುವ ಶಕ್ತಿಯನ್ನೂ, ಅವಕಾಶವನ್ನೂ, ಸೌಲಭ್ಯವನ್ನೂ ಕಳೆದುಕೊಂಡಾರು.

ಅವರಿವರ ಆಲೋಚನೆಗಳನ್ನೇ ತಮ್ಮ ತಲೆಯ ತುಂಬ ತುಂಬಿಕೊಂಡರೆ ಅದೇ ಮರುಳು ಎನಿಸಿಕೊಳ್ಳುತ್ತದೆ. ಅಲ್ಲವೆ?

ಪುಸ್ತಕ ಶುಶ್ರೂಷೆ

ಪುಸ್ತಕ ಶುಶ್ರೂಷೆಯೆಂದರೆ ಪುಸ್ತಕಗಳಿಗೆ ನಾವು ಮಾಡುವ ಸೇವೆ; ನಾವು ಕೊಡುವ ಆದರ; ಬಿಡುವಿನ ವೇಳೆಯಲ್ಲೆಲ್ಲ ಪುಸ್ತಕವನ್ನೇ ಹಿಡಿದು ಕೂಡುತ್ತಿದ್ದರೆ ಅದು ಪುಸ್ತಕ ಶುಶ್ರೂಷೆ.

ಅದನ್ನು ವ್ಯಸನಗಳಲ್ಲಿ ಒಂದು ಎಂದು ಬಗೆದಿದ್ದಾರೆ. ವ್ಯಸನವೆಂದರೆ ಗೀಳು, ಚಟ, ಚಾಳಿ. ಕೆಟ್ಟ ಅರ್ಥದಲ್ಲೇ ಈ ಮಾತಿನ ಬಳಕೆ, ಜೂಜು, ಕುಡಿತ, ಎಡೆಬಿಡದ ಆಟ, ಉದ್ದೇಶವಿಲ್ಲದ ಅಲೆತ, ಕಾಮುಕತೆ, ನಸ್ಯ-ಬೀಡಿ ಮುಂತಾದ ದುರಭ್ಯಾಸಗಳು ಇವೆಲ್ಲ ವ್ಯಸನಗಳೇ. ಓದನ್ನು ಇದರಲ್ಲಿ ಸೇರಿಸಬಹುದೆ? ಯಾವುದಾದರೊಂದು ಪ್ರಯೋಜನವನ್ನು ಸಾಧಿಸಲು ಓದುವುದಾದರೆ ಅದು ವ್ಯಸನವಾಗುವುದಿಲ್ಲ. ಅದರ ಪರಿಣಾಮ ಒಳ್ಳೆಯದಾದರೆ ಅದನ್ನು ಗೀಳು, ಚಟ ಎದು ಬಗೆಯಬಾರದು. ಆದರೆ ಕೆಲವರು ಓದುತ್ತಲೇ ಇರುತ್ತಾರೆ; ಸಿಕ್ಕ ಪುಸ್ತಕಗಳನ್ನೆಲ್ಲ ಓದುತ್ತಾರೆ; ಕಂಡ ಪುಸ್ತಕಗಳನ್ನೆಲ್ಲ ಕೊಳ್ಳುತ್ತಾರೆ, ಎರವಲು ಪಡೆಯುತ್ತಾರೆ. ಅವರಿಗೆ ವಿಷಯದ ಮೇಲಾಗಲಿ, ಗ್ರಂಥಕರ್ತರ ಮೇಲಾಗಲಿ ವಿಶೇಷವಾದ ಒಲವೇನಿರದು. ಹೊತ್ತು ಕಳೆಯಲು ಪುಸ್ತಕ ಕೈಲಿರಬೇಕಷ್ಟೆ! ಕುಡಿತದ ಚಟವಿದ್ದವರಿಗೆ ಹೊತ್ತಿಗೆ ಸರಿಯಾಗಿ ಹೆಂಡ ಸಿಗದಿದ್ದರೆ ವಿಲಿವಿಲಿ ಒದ್ದಾಡುವರಂತೆ. ಹಾಗೆಯೇ ಪುಸ್ತಕದ ಗೀಳಿದ್ದವರಿಗೆ ಪುಸ್ತಕವಿರದಿದ್ದರೆ ಬದುಕೇ ಬೇಸರ; ಏನೊಂದೂ ರುಚಿಸದು, ಮನಸ್ಸು ಬೇರೆ ಯಾವ ಕಡೆಗೂ ಓಡದು. ಓದದಿದ್ದರೆ ಉಂಡದ್ದು ಅರಗದು; ಏನೋ ಮುಜುಗರ.

ಓದುವ ಗೀಳಿದ್ದವರಿಗೆ ಓದಿದ್ದೆಲ್ಲ ಒಳಗೆ ಹೋಗುತ್ತದೆ ಎಂಬ ನಿಯಮವಿಲ್ಲ. ಒಂದು ವೇಳೆ ಹೋದರೂ, ತಾತ್ಕಾಲಿಕವಾದ ತಿಳಿವಳಿಕೆ ಅಷ್ಟೆ. ಒಂದು ಪುಸ್ತಕದಿಂದ ಒದಗಿದ್ದು ಇನ್ನೊಂದರಿಂದ ಮರೆಯಾಗುತ್ತದೆ. ಮನನಕ್ಕೆ ಅವಕಾಶ ಇದ್ದರೆ ತಾನೆ?

ವಿಷಯದ ಕಟ್ಟುಪಾಡಿರದಿದ್ದರೆ, ಓದು ಎತ್ತೆತ್ತಲೋ ಸಾಗುತ್ತದೆ. ಪುಸ್ತಕಗಳಲ್ಲಿ ತೋರಿಕೊಂಡ ಅಭಿಪ್ರಾಯಗಳ ಕಲಸುಮೇಲೋಗರ ಓದುಗನ ತಲೆಯಲ್ಲಿ! ತನ್ನದೇ ಎಂಬ ನಿಶ್ಚಿತ ಅಭಿಪ್ರಾಯ ಅವನ ಪಾಲಿಗೆ ಮೂಡುವುದಿಲ್ಲ. ಓದು ಹೆಚ್ಚಿದರೆ ಸ್ವಂತ ಆಲೋಚನೆಗೆ ಸಂಚಕಾರ.

ಪುಸ್ತಕ-ಪಿಶಾಚಿ

ಕೆಲವರಿಗೆ ಪುಸ್ತಕಗಳ ಸಂಗ್ರಹವೆಂದರೆ ಆಸೆ. ಅವರಿಗೆ ಅದೊಂದು ವ್ಯಸನ. ಅದಕ್ಕಾಗಿ ಹಣದ ವೆಚ್ಚ, ದೇಹಶ್ರಮ, ದಾಕ್ಷಿಣ್ಯ ಏನನ್ನೂ ಅವರು ಎಣಿಸರು.

ಮನೆಯಲ್ಲಿ ಉಳಿದೆಲ್ಲ ಕೆಲಸಗಳಿಗೂ ತೀರ ಸಂಕೋಚವಾದರೂ ಗ್ರಂಥ ಭಂಡಾರಕ್ಕೆ ಮಾತ್ರ ಸ್ಥಳವುಂಟು. ಎಲ್ಲೆಲ್ಲಿ ನೋಡಿದರೂ ಪುಸ್ತಕಗಳೇ; ಕಸ ಗುಡಿಸುವುದಾಗದು, ಧೂಳು ಹೊಡೆಯುವುದಾಗದು, ಓಡಿಯಾಡಲು ತೆರಪಿಲ್ಲ; ಕೂಡಲು ಎಡೆಯಿರದು. ಇರುವ ಪುಸ್ತಕಗಳನ್ನೆಲ್ಲ ಈ ಪುಣ್ಯಾತ್ಮರು ಓದುವರೋ? ಅದು ಅನುಮಾನವೇ! ತನ್ನಲ್ಲೆ ಪುಸ್ತಕವಿದ್ದರೆ ಎಂದಾದರೂ ಓದಿದರಾಯಿತು ಎಂದು ಅವರ ವಿಶ್ವಾಸ. ಅಷ್ಟು ಬಿಡುವು ಮಾತ್ರ ಬಾರದು! ಓದದಮೇಲೆ ಪುಸ್ತಕವಾದರೂ ಯಾಕೆ ಎಂದರೆ, ಅದೊಂದು ಗೀಳು ಅವರಿಗೆ. ಹಣವನ್ನು ಕೂಡಿಡುವವರೆಲ್ಲ ಅದನ್ನು ಅನುಭವಿಸುತ್ತಾರೆಯೇ? ಹಣದ ಗಳಿಕೆಯಲ್ಲಷ್ಟೆ ಅವರಿಗೆ ಆದರ. ಹಾಗೆಯೆ ಪುಸ್ತಕಗಳ ಸಂಗ್ರಹವೂ. ಓದಿದಮೇಲೆ ಆ ಪುಸ್ತಕವನ್ನು ಇರಿಸಿಕೊಳ್ಳಲೇಕೆ, ಅದರ ಪ್ರಯೋಜನ ತೀರಿತಲ್ಲ ಎಂದು ಕೇಳಬೇಡಿ. ಓದುವುದು ಬಿಡುವುದು ಅವರಿಗೆ ಮುಖ್ಯವಲ್ಲ; ಪುಸ್ತಕಗಳು ಎದುರಿಗಿರಬೇಕು. ರಾಶಿರಾಶಿ ಪುಸ್ತಕ ಮುಂದಿದ್ದರೆ ಅವರಿಗೇನೋ ತೃಪ್ತಿ, ಸುಖ. ಗ್ರಂಥಭಂಡಾರವೆಂದಮಾತ್ರಕ್ಕೆ ಜ್ಞಾನಭಂಡಾರ ಎಂದಾಗುವುದಿಲ್ಲ. ಗ್ರಂಥವೆಂಬುದು ಒಂದು ಜಡಪದಾರ್ಥ ಅಷ್ಟೆ. ಅದನ್ನು ಓದಿ ಅರಗಿಸಿಕೊಂಡಾಗಲೇ ಜ್ಞಾನ ಒದಗಿಬರುವುದು. ಒಂದೊಂದು ಪುಸ್ತಕದಿಂದಲೂ ಒಂದಿಷ್ಟು ಜ್ಞಾನವನ್ನು ಪಡೆದುಕೊಂಡು ಹಲವಾರು ಪುಸ್ತಕಗಳಿಂದ ಸಂಪೂರ್ಣಜ್ಞಾನವನ್ನು ಗಳಿಸಿಕೊಳ್ಳಬಹುದೆಂದು ಯಾರಾದರೂ ತಿಳಿದರೆ ಅದು ಭ್ರಾಂತಿ. ಪುಸ್ತಕಗಳಲ್ಲಿ ಪುನರಾವರ್ತನೆಯಿರುತ್ತದೆ; ವಿರುದ್ಧಾಂಶಗಳಿರುತ್ತವೆ; ಬರಿಯ ಚರ್ಚೆಯಿರುತ್ತದೆ; ಕಡೆಗೆ ಏನೂ ಇರದಿರುವುದೂ ಉಂಟು!

ಬರುವ ಜ್ಞಾನ ಒಂದೇ ಪುಸ್ತಕದಿಂದಲೇ ಬರಬಹುದು; ಅದರ ಒಂದು ಪುಟವೇ ಸಾಕು! ಇಷ್ಟಾಗಿ ಪುಸ್ತಕಕ್ಕೂ ಜ್ಞಾನಕ್ಕೂ ನೇರವಾದ ಸಂಬಂಧವೇನಿಲ್ಲ! ಜ್ಞಾನಾರ್ಜನೆಗಾಗಿ ಪುಸ್ತಕಸಂಗ್ರಹಣೆ ಎಂಬುವುದೂ ಸರಿಯಾಗದು. ಅದೊಂದು ಹವ್ಯಾಸ ಎಂದರೆ ಸಮ.

ನಮ್ಮ ಭಾಷೆ

ಕನ್ನಡ ಲಲಿತವಾದ ಭಾಷೆ; ಅದು ಸುಲಭವೂ ಹೌದು. ಹೇಗೆಂದರೆ ಸುಲಿದ ಬಾಳೆಯ ಹಣ್ಣಿನಂತೆ. ಕಳೆದ ಸಿಗುರಿನ ಕಬ್ಬಿನಂತೆ, ಅಳಿದ ಉಷ್ಣದ (ಎಂದರೆ ಬೆಚ್ಚಗಿರುವ) ಹಾಲಿನಂತೆ.

ಕನ್ನಡಿಗರಿಗೆ ಇದು ಸರಿಯೇ; ನಮ್ಮ ಅನುಭವದಲ್ಲೂ ಇರುವ ಮಾತೇ ಸರಿ. ಆದರೆ ಇದನ್ನು ಎಲ್ಲರೂ ಒಪ್ಪಿಯಾರೆ? ಎಳವೆಯಲ್ಲಿ ಕಲಿತ ಮಾತು, ಬೆಳೆಯುವಾಗ ಸುತ್ತ ಮುತ್ತಲೆಲ್ಲ ಕೇಳಿದ ಮಾತು. ಮನೆಯಲ್ಲಿ ಆಟಪಾಠಗಳ ನಡುವೆ ಬೆರೆತುಕೊಂಡು ಬಂದ ಮಾತು ಯಾರಿಗಾದರೂ ಪ್ರಿಯವೇ. ಕನ್ನಡಿಗರಿಗೆ ಕನ್ನಡವಲ್ಲದೆ ಮತ್ತೇನುಂಟು? ಆದರೆ ಇದೇ ಮಾತು ಎಲ್ಲ ನುಡಿಗಳಿಗೂ ಅನ್ವಯಿಸುತ್ತದೆ. ತಮಿಳರಿಗೆ ತಮಿಳು ಎಂಬ ಸೊಲ್ಲಿಗೇ ಇನಿತಾದುದು ಎಂಬರ್ಥವಿದೆ; ತೆಲುಗರಿಗಂತೂ ತೆಲುಗು ತೇನೆ (ಜೇನುತುಪ್ಪ); ಮಲಯಾಳದವರಿಗೆ ಮಲಯಾಳಕ್ಕಿಂತ ಸೊಗಸಾದ ಭಾಷೆ ಇನ್ನೊಂದಿರದು. ಇದು ಸಹಜವಾದ ಅಭಿಮಾನವೇ. ಮತ್ತು ಕವಿಯು ಹೇಳುವಂತೆ 'ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಳ್ಳಲು' ತನ್ನ ಭಾಷೆಯೇ ತನಗೆ ಸರಿಯಾದುದು ; ಬೇರೆ ಭಾಷೆಗೆ ಇದರಷ್ಟು ಸೌಕರ್ಯವಿರದು. 'ತನ್ನ ಮಟ್ಟಿಗೆ' ಎಂಬ ಒಕ್ಕಣೆಯನ್ನು ಈ ಮಾತಿಗೆ ಸೇರಿಸಬೇಕು. ನಮ್ಮ ಪಾಲಿಗೆ ನಮ್ಮ ಭಾಷೆಯೇ ಸರ್ವಸಾರ್ಥಕ. ಹಾಗೆಯೇ ಅವರವರಿಗೆ ಅವರವರ ಭಾಷೆ ನೆರವಾಗಬೇಕು. ತೊಂದರೆಯಿರುವುದು ಭಾಷಾಭಿಮಾನ ದುರಭಿಮಾನವಾದಾಗ. ನಮ್ಮ ನುಡಿಯನ್ನು ಒಲ್ಲದವರ ಮೇಲೆ ಹೇರುವಾಗ ಅದು ಹೊರೆಯಾಗುತ್ತದೆ, ಭಾರವೆನಿಸುತ್ತದೆ. ನಮ್ಮ ಒಲುಮೆಗೆ ಅವರ ಹಗೆತನ ಮರುಮಾತಾಗುತ್ತದೆ. ವ್ಯವಹಾರದಲ್ಲಿನ ಮಾತು ಬೇರೆ. ಕನ್ನಡದ ನೆಲ ಎಂದ ಮೇಲೆ ಕನ್ನಡ ನುಡಿಗೇ ಅಗ್ರಪಟ್ಟ ಇರಬೇಕಾದ್ದುದು ಸಹಜ. ತಮಿಳುನಾಡಿನಲ್ಲಿ ತಮಿಳಿಗಿದ್ದಂತೆ, ಆಂಧ್ರ ಪ್ರದೇಶದಲ್ಲಿ ತೆಲುಗಿಗಿದ್ದಂತೆ, ಮಹಾರಾಷ್ಟ್ರದಲ್ಲಿ ಮರಾಠಿಗಿದ್ದಂತೆ. ಇಲ್ಲಿರುವ ಬೇರೆಯವರು ಇಲ್ಲಿನ ಮಾತನ್ನು ಕಲಿಯಬೇಕು; ಕಲಿತರೆ ಅವರಿಗೇ ಅನುಕೂಲ. ಆದರೆ ಅಷ್ಟರಿಂದ ಕನ್ನಡ ಭಾಷೆಗೇನು ಕೋಡು ಮೂಡುವುದಿಲ್ಲ. ಭಾಷೆಯ ಸ್ವಾರಸ್ಯವನ್ನು ಅರಿತುಕೊಳ್ಳಲು ವ್ಯವಹಾರದ ನಿರ್ಬಂಧ ಕೆಲಸ ಮಾಡುವುದಿಲ್ಲ. ಒತ್ತಾಯ ಮಾಡಿದಾಗ ಉದ್ದೇಶವೇ ವಿಫಲವಾಗುತ್ತದೆ. ನಮ್ಮ ಅಭಿಮಾನವನ್ನು ನಾವು ಕಾಪಾಡಿಕೊಂಡರೆ ಅದು ಮೊದಲ ಹೆಜ್ಜೆ.

ಸುಲಿದ ಬಾಳೆಯ ಹಣ್ಣು

ಮಹಲಿಂಗರಂಗ ಕವಿಯ 'ಅನುಭವಾಮೃತ'ದಲ್ಲಿ ಕನ್ನಡವನ್ನು ಕುರಿತಂತೆ ಬರುವ ಮಾತು ಇದು.

ಕನ್ನಡ ಲಲಿತವಾದ ನುಡಿಯಂತೆ - ಸುಲಿದ ಬಾಳೆಯ ಹಣ್ಣಿನಂತೆ. ಕಳೆದ ಸಿಗುರಿನ (ಎಂದರೆ ಸಿಪ್ಪೆ ತೆಗೆದ) ಕಬ್ಬಿನಂತೆ, ಅಳಿದ ಉಷ್ಣದ ಹಾಲಿನಂತೆ (ಎಂದರೆ ಬಾಯಿಗೆ ಹಿತವಾಗಿರುವಂತೆ ಕಾದಾರಿಸಿದ ಹಾಲಿನಂತೆ). ಕನ್ನಡ ಅಷ್ಟು ಸುಲಭ ಎಂದು ತಾತ್ಪರ್ಯ. ಎಳವೆಯಲ್ಲಿ ಕಲಿತ ಮಾತು, ಬೆಳೆಯುವಾಗ ಸುತ್ತಮುತ್ತ ಆಡಿ ಕೇಳಿದ ಮಾತು. ಮನೆಯಲ್ಲಿ ಮೊದಲಾಗಿ ಒದಗಿಬಂದ ಮಾತು ಸುಲಭವಲ್ಲದೆ ಏನು? ಸುಲಭವಾದ ಮೇಲೆ ಪ್ರಿಯವೂ ಆಗುವುದೋ? ಕನ್ನಡಿಗರಿಗೆ ಕನ್ನಡವೇನೋ ಸುಲಭವೆ; ಆದರೆ ಅಷ್ಟೇನು ಪ್ರಿಯವಾಗಿರುವಂತೆ ಕಾಣುವುದಿಲ್ಲ, ಕಾರಣವೇನು? ಸಂಸ್ಕೃತವನ್ನು ಕನ್ನಡಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಕನ್ನಡಿಗರನ್ನು ಕುರಿತು ಕವಿ ಹೇಳಿದ ಮಾತು ಮೇಲಿನದು. ಇದನ್ನು ಹೇಳಿ 'ಸಂಸ್ಕೃತದೊಳಿನ್ನೇನು?' ಎಂದು ಕೇಳಿದ್ದಾನೆ. ಈಗ ಇಂಗ್ಲಿಷಿಗೆ ಆ ಸ್ಥಾನ ದೊರೆತಿದೆ. ಇಂಗ್ಲಿಷ್ ಕಲಿಯದೆ ಮುಂದೆ ಬರಲು ಸಾಧ್ಯವಿಲ್ಲ ಎಂಬ ನಂಬಿಕೆ ಬೇರೂರಿದೆ; ಇದು ದಿಟವಲ್ಲ ಎಂದು ತಳ್ಳಿಹಾಕಲೂ ಸಾಧ್ಯವಿಲ್ಲವೆನ್ನಿ. ಭಾಷಾಭಿಮಾನ ಕುರುಡಾಗಬಾರದು; ಪ್ರಸ್ತುತ ಪರಿಸ್ಥಿತಿಯಲ್ಲಿ ಇಂಗ್ಲಿಷನ್ನು ಕೈಬಿಡುವುದು ಹೇಗೆ? ಕವಿಯ ಒಕ್ಕಣೆ 'ತಿಳಿದು, ತನ್ನೊಳು ತನ್ನ ಮೋಕ್ಷವ ಗಳಿಸಿಕೊಳ್ಳಲು' ಕನ್ನಡವೇ ಸಾಕು, ಸಂಸ್ಕೃತವೇಕೆ ಬೇಕು? ಅದು ದಿಟ. ಅಧ್ಯಾತ್ಮದ ಹಂಬಲ ಇರುವವರಿಗೆ ಈ ಮಾತು ಸರಿ. ಕನ್ನಡದಲ್ಲಿ ತತ್ವವಿಚಾರವಿದ್ದರೆ ಕನ್ನಡಿಗರಿಗೆ ಸುಲಭವೆನಿಸುತ್ತದೆ; ಕನ್ನಡ ಪ್ರಿಯವೂ ಆದೀತು. ಆದರೆ ಉದ್ಯಮ, ಶಿಕ್ಷಣ, ಸಂಪರ್ಕ, ಪ್ರವಾಸ ಇವೆಲ್ಲ ಅಗತ್ಯಗಳು ತೋರಿಕೊಂಡಾಗ ಕನ್ನಡ ಸುಲಭವೆನಿಸುವುದು ಕಷ್ಟ; ಇಂಗ್ಲಿಷಿನ ನೆರವು ಬೇಡ ಎನ್ನಲಾದೀತೆ? ಬೇರೊಂದು ಭಾಷೆ ಸುಲಭವೇನಲ್ಲ; ಆದರೆ ಅದು ಪ್ರಿಯವೆನಿಸೀತು. ಕನ್ನಡದ ನೆಲ ಎಂದ ಮೇಲೆ ಕನ್ನಡಕ್ಕೆ ಅಗ್ರಪಟ್ಟ ಇರಬೇಕಾದುದು ಸಹಜ. ಕನ್ನಡವನ್ನು ಉಳಿಸುವುದು, ಬೆಳೆಸುವುದು ನಮ್ಮ ಹೊಣೆಯೇ. ಆದರೆ ಪ್ರಯೋಜನಕ್ಕೆ ಬರುವ ಬೇರೊಂದು ಭಾಷೆಯನ್ನು ಕಾಡಿಗಟ್ಟಿದರೆ ಹೇಗೆ?

ಕನ್ನಡದ ಮೇಲೆ ಪ್ರೀತಿ ಬೇರೂರಬೇಕಾದುದು ಸದ್ಯದ ಅಗತ್ಯ. ಆ ಪ್ರೀತಿ ಇದ್ದಿತೆಂದರೆ ಇಂಗ್ಲಿಷೂ ಇರಲಿ, ತೊಂದರೆಯೇನು?

ಗಾದೆಯ ಗೊತ್ತುಗುರಿ

'ಗಾದೆ ವೇದಕ್ಕೆ ಸಮ' ಎನ್ನುವುದೊಂದು ಗಾದೆ. ಆದರೆ ವೇದಕ್ಕೆ ಮಿಗಿಲಾದುದೋ ಎಂದು ಒಮ್ಮೊಮ್ಮೆ ಅನಿಸುತ್ತದೆ.

ವೇದವಾದರೆ ಕೆಲವು ಋಷಿಗಳ ಕಾಣ್ಕೆ ; ಗಾದೆಯಾದರೋ ಹತ್ತು ಸಮಸ್ತರ ಅನುಭವ. ವೇದದ ತಾತ್ಪರ್ಯವನ್ನು ಅರಿತುಕೊಳ್ಳಲು ಹೆಣಗಾಡಬೇಕು. ಗಾದೆಯ ಮಾತಾದರೋ ತಟ್ಟನೆ ತಿಳಿಯುತ್ತದೆ.

ನಿದರ್ಶನಕ್ಕೆ ಈ ಗಾದೆಯನ್ನು ನೋಡಿ –

'ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ'.

ಇದು ಎಷ್ಟು ದಿಟವೆಂಬುದನ್ನು ಕಂಡುಕೊಳ್ಳಲು ಏನೂ ಕಷ್ಟಪಡಬೇಕಾಗಿಲ್ಲ. ಒಮ್ಮೆ ಮಿತಿ ಮೀರಿ ಉಂಡರೆ ಒಡನೆಯೆ ತಿಳಿಯುತ್ತದೆ; ಹದಮೀರಿ ಮಾತನಾಡಿದರಂತಲೂ ಇನ್ನೂ ಬೇಗನೆ ತಿಳಿಯುತ್ತದೆ.

ಎಲ್ಲರ ಅನುಭವದ ಮೂಸೆಯಲ್ಲಿ ಸಿದ್ಧವಾದ ಮಾತು ಗಾದೆ. ಅದನ್ನು ಅಲ್ಲಗಳೆಯುವವರು ಯಾರೂ ಇರರು.

ಹಾಗೆಂದು, ಗಾದೆಯ ಮಾತನ್ನು ಜನರೆಲ್ಲ ಅನುಸರಿಸುತ್ತಾರೆ ಎಂದಲ್ಲ, ಗಾದೆ ಎಲ್ಲರಿಗೂ ತಿಳಿದಿದ್ದರೂ, ಅದರ ಅನ್ವಯ ಕಡಮೆಯೆ. ಕೆಟ್ಟ ಕೆಲಸ ಮಾಡುವಾಗ ಗಾದೆಯ ಹಿತನುಡಿ ಮರೆತುಹೋದರೂ 'ಅಟ್ಟ ಮೇಲೆ ಬುದ್ಧಿ ಬಂತು' ಎಂದಾಗುತ್ತದೆ. ಆಗಲೇ ಗಾದೆಯ ಸ್ವಾರಸ್ಯ ಮನದಟ್ಟಾಗುವುದು.

ಊಟದಲ್ಲಿ ಮಿತವಿರಬೇಕು. ಮಾತಿನಲ್ಲಿ ಹಿತವಿರಬೇಕು ಎಂಬುದನ್ನು ಯಾರರಿಯರು? ಆದರೆ ವೈದ್ಯರ ಸಿರಿತನವನ್ನು ನೋಡಿದಾಗ, ಪೊಲೀಸರ ಪ್ರಾಬಲ್ಯವನ್ನು ನೋಡಿದಾಗ ಈ ಅರಿವು ಕೇಳ್ಮೆಯಿಂದ ಕೆಳಗಿಳಿದಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಒಂದು ತಲೆಮಾರಿನಿಂದ ಜಾಣತನ ಇನ್ನೊಂದು ತಲೆಮಾರಿಗೆ ಸಾಗಿ ಹೋಗುವಾಗ ಗಾದೆಯಂಥ ಸಾಧನ ಬೇಕಾಗುತ್ತದೆ. ಬದುಕಿನಲ್ಲಿ ಬುದ್ಧಿವಂತರಾಗಿ ಬಾಳಲು ಗಾದೆಯ ನೆರವು ಬಹಳವಿದೆ.

ನಿತ್ಯ ಜೀವನದಲ್ಲಿ ಜನ ಬಳಸುವ ಗಾದೆಗಳಿಂದಲೆ ಜನಸಾಮಾನ್ಯರ ತಲೆ ಕೆಡದೆ ಇರುವುದು.

ಕನ್ನಡದಲ್ಲಿ ವಿಜ್ಞಾನ

ವಿಜ್ಞಾನ ಬೆಳೆಯುತ್ತಿದೆ; ಅದರ ಪಾರಿಭಾಷಿಕ ಪದಗಳೂ ಹೆಚ್ಚುತ್ತಿವೆ. ವಿದ್ಯಾರ್ಥಿಗಳು ವಿಜ್ಞಾನವನ್ನು ಕಲಿಯುವಾಗ ಈ ಪಾರಿಭಾಷಿಕ ಪದಗಳು ಮುಖ್ಯವಾಗುತ್ತವೆ.

ಕನ್ನಡದಲ್ಲಿ ವಿಜ್ಞಾನವನ್ನು ಕಲಿಸುವಾಗ ಐರೋಪ್ಯ ದೇಶಗಳಲ್ಲಿ ಸಿದ್ಧವಾದ ಪಾರಿಭಾಷಿಕ ಪದಗಳನ್ನೇ ಬಳಸುವುದೋ? ಅಥವಾ ಅವಕ್ಕೆ ಸಮನಾದ ಕನ್ನಡ ಅನುವಾದಗಳನ್ನು ಮಾಡಿಕೊಳ್ಳುವುದೋ? ಎಂಬುದು ಸಮಸ್ಯೆ.

ನಮ್ಮ ಸಂಸ್ಕೃತಿಯಲ್ಲಿ ದರ್ಶನಕ್ಕಾಗಲಿ, ಕಲೆಗಾಗಲಿ ಪಾರಿಭಾಷಿಕ ಪದಗಳ ಅಭಾವ ತೋರಿಕೊಳ್ಳುವುದಿಲ್ಲ. ಇವೆಲ್ಲ ನಮ್ಮಲ್ಲಿ ಹುಟ್ಟಿಬೆಳೆದವುಗಳೇ ಆದ ವಿದ್ಯಾ ವಿಭಾಗಗಳು. ಅವುಗಳಲ್ಲಿ ಬಳಸುವ ಪಾರಿಭಾಷಿಕ ಪದಗಳು ಇದ್ದೇ ಇವೆ. ಆದರೆ ವಿಜ್ಞಾನ, ಉದ್ಯಮ ಮುಂತಾದ ಕ್ಷೇತ್ರಗಳು ಹೇಳಿಕೇಳಿ ಪಾಶ್ಚಾತ್ಯರ ಕೊಡುಗೆಗಳು; ನಮ್ಮಲ್ಲಿ ಹುಟ್ಟಿಬೆಳೆದವಲ್ಲ. ಈ ವಿದ್ಯಾವಿಭಾಗಗಳ ಅಂಗವಾಗಿ ಪಾರಿಭಾಷಿಕ ಪದಗಳನ್ನು ಅವರು ಸಿದ್ಧಪಡಿಸಿಕೊಂಡಿದ್ದಾರೆ. ಅವು ಎಲ್ಲೆಲ್ಲಿಯೂ ಮಾನ್ಯವಾಗಿಯೂ ಇವೆ. ನಾವು ಆ ವಿದ್ಯೆಗಳನ್ನು ಕಲಿಯುವಾಗ ಅವನ್ನು ಬಳಸದೆ ವಿಧಿಯಿಲ್ಲ. ಕನ್ನಡದಲ್ಲೇ ಅಧ್ಯಯನ ಮಾಡಿದರೂ ಆ ಪಾರಿಭಾಷಿಕಗಳನ್ನು ಹಾಗೆಯೇ ಉಳಿಸಿಕೊಳ್ಳುವುದು ಮೊದಲಿಗೆ ಇದ್ದ ರೂಢಿ. ಅನಂತರ ಕೆಲವರು ಸಾಹಸಿಗಳು ಆ ಪಾರಿಭಾಷಿಕ ಪದಗಳಿಗೆ ಕನ್ನಡದಲ್ಲಿ ಸಮನಾದ ಪದಗಳನ್ನು ಸೃಷ್ಟಿಮಾಡತೊಡಗಿದರು.

ಕೆಲವು ಪದಗಳೇನೋ ಆಗಬಹುದು ಎನ್ನಿಸಿದುವು. 'ಬೆಲ್-ಜಾರ್' ಎನ್ನುವುದಕ್ಕೆ ಘಂಟಾಪಾತ್ರೆ ಎಂದಂತೆ. ಆದರೆ ಬಹುಮಟ್ಟಿಗೆ ಕನ್ನಡದ ಜಾಯಮಾನಕ್ಕೆ ಹೊಂದಿಕೊಳ್ಳದೆ ವಿಚಿತ್ರವಾಗಿ ಕಾಣುವ, ಕ್ಲಿಷ್ಟವಾದ ಮಾತುಗಳೇ ಆಗಿವೆ. ಮೂಲವನ್ನೆ ಉಳಿಸಿಕೊಂಡರೆ ಒಳ್ಳೆಯದೇನೋ ಎನಿಸುತ್ತದೆ.

ಶಾಸ್ತ್ರ ಪ್ರಕ್ರಿಯೆಯಲ್ಲಿ ಪ್ರಯೋಜನಕ್ಕೆ ಬರುವ ಪಾರಿಭಾಷಿಕ ಪದಗಳನ್ನು ಕನ್ನಡದಲ್ಲಿ ರೂಪಾಂತರಗೊಳಿಸುವಾಗ ಉಪಯೋಗದ ಕಡೆ ಗಮನವಿರಬೇಕು, ಔಚಿತ್ಯದ ಅರಿವಿರಬೇಕು. ಅಗತ್ಯವೆಂದು, ಅನುಕೂಲವೆಂದು ಕಂಡಾಗ ಮಾತ್ರ ಈ ಬಗೆಯ ಅನುವಾದ ಸಾರ್ಥಕವಾದೀತು. ಇಲ್ಲವಾದರೆ ಅದೊಂದು ಬೇಡದ ಹೊರೆ.

ಶಿಕ್ಷೆ, ಶಿಕ್ಷಣ

ಶಿಕ್ಷೆ, ಶಿಕ್ಷಣ ಎರಡೂ ಬೇರೆ ಬೇರೆ ಶಬ್ದಗಳೇ; ಅರ್ಥಗಳೂ ಬೇರೆಬೇರೆಯೆ.

ಆದರೆ ಶಿಕ್ಷೆಯಲ್ಲಿ ಶಿಕ್ಷಣದ ಅಂಶವಿದೆ; ಶಿಕ್ಷಣದಲ್ಲೂ ಶಿಕ್ಷೆಯ ಪಾತ್ರ ವಿರುವುದುಂಟು. ಶಿಕ್ಷೆಯನ್ನು ವಿಧಿಸುವಾಗ ತಪ್ಪು ಮಾಡಿದವನ ಮನಸ್ಸನ್ನು ಮಾರ್ಪಡಿಸುವ ಉದ್ದೇಶವೂ ಸೇರುತ್ತದೆ. ಮೊದಲಿಗಿಂತ ಹೆಚ್ಚು ಉಪಯುಕ್ತತೆ ವ್ಯಕ್ತಿಯಲ್ಲಿ ಒದಗಬೇಕಾದರೆ ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕಷ್ಟೆ? ತಪ್ಪನ್ನು ತಿದ್ದುವಾಗ ವ್ಯಕ್ತಿಯಲ್ಲಿ ಬೆಳವಣಿಗೆ ಒದಗಲಿ ಎಂಬ ಕಲ್ಪನೆಯಿದ್ದರೆ ಶಿಕ್ಷೆಯೂ ಶಿಕ್ಷಣದ ಒಂದು ಬಗೆಯೆ ಆದೀತು. ಎಳೆಯ ಅಪರಾಧಿಗಳ ವಿಚಾರದಲ್ಲಂತೂ ಶಿಕ್ಷಣದ ಅಗತ್ಯ ಇದ್ದದ್ದೇ. ಶಿಕ್ಷಣದ ಮೂಲಕವೆ ಅವರಿಗೆ ಶಿಕ್ಷೆಯನ್ನು ವಿಧಿಸಬೇಕೆಂಬ ಮಾತೂ ಇದೆ. ಹೀಗೆಯೇ ಶಿಕ್ಷಣದಲ್ಲೂ ಶಿಕ್ಷೆಯ ಅಗತ್ಯವಿದೆಯೆಂದು ಹೇಳಬಹುದೆ? ಈ ವಿಚಾರ ನಿರ್ಧರಿಸುವುದು ಅಷ್ಟು ಸುಲಭವಲ್ಲ. ಮನುಷ್ಯನ ಬೆಳವಣಿಗೆಯಲ್ಲಿ ಶಿಕ್ಷಣದ ಪಾತ್ರ ಮುಖ್ಯವಾದುದು ಎಂದು ಎಲ್ಲರೂ ಒಪ್ಪುತ್ತಾರೆ. ಶಿಕ್ಷಣ ಮನೆಯಲ್ಲೆ ಮೊದಲಾಗಬೇಕಾದುದೂ ಸರಿಯೆ; ಶಾಲೆಯಲ್ಲಿ ಅದು ಮುಂದುವರಿಯಬೇಕಷ್ಟೆ. ಶಿಕ್ಷಣದಲ್ಲಿ ಶಿಸ್ತು ಇದ್ದೇ ಇರಬೇಕು. ಶಿಸ್ತು ಇರದಿದ್ದರೆ ಕಲಿಕೆ ಕಷ್ಟವಾಗುತ್ತದೆ. ಆದರೆ ಶಿಸ್ತು ಎಂಬುದು ಶಿಕ್ಷೆಯಾಗಿಯೆ ತೋರಿಕೊಳ್ಳ ಬೇಕಾದುದಿಲ್ಲ. ಶಿಕ್ಷೆಯೆಲ್ಲವೂ ಶಿಸ್ತಿನ ಸಾಧನಗಳೆ ಎನ್ನುವಂತೆಯೂ ಇಲ್ಲ. ಶಿಸ್ತು ಕೂಡ ಕೆಲವು ಮಕ್ಕಳಿಗೆ (ದೊಡ್ಡವರಿಗೆ ಕೂಡ) ಅಹಿತವೆನಿಸೀತು; ಶಿಸ್ತಿಗೆ ಬೇಗ ಮಕ್ಕಳು ಒಗ್ಗಿಕೊಳ್ಳುವುದಿಲ್ಲ. ಆದರೆ ಒಮ್ಮೆ ಶಿಸ್ತಿನ ಅಗತ್ಯ ಮನವರಿಕೆಯಾದರೆ ಅದರ ಸ್ವಾರಸ್ಯ ಕಂಡುಬರುತ್ತದೆ. ಶಿಕ್ಷೆಯ ವಿಚಾರದಲ್ಲಿ ಈ ಮಾತನ್ನು ಹೇಳುವಂತಿಲ್ಲ.

ಶಿಕ್ಷೆಯೆಂದರೆ ಯಾರಿಗಾಗಲಿ ಎಂದಾದರೂ ಇಷ್ಟವಾಗದು. ಯಾವುದೇ ಬಗೆಯ ಶಿಕ್ಷೆಯಾದರೂ ಶಿಕ್ಷೆಯೆಂಬ ಅರಿವಾದೊಡನೆ ಅದರ ಬಗ್ಗೆ ಮುನಿಸು ಮೂಡುವುದು ಸಹಜವೇ. ಶಿಕ್ಷಣದಲ್ಲಿ ಶಿಕ್ಷೆಯ ಅಗತ್ಯವೇ ಇರದು ಎನ್ನುವುದು ತಪ್ಪು; ಶಿಕ್ಷೆಯಿಂದ ಪ್ರಯೋಜನವನ್ನು ಪಡೆದುಕೊಳ್ಳುವವರಿರುತ್ತಾರೆ. ಶಿಸ್ತಿನ ಅಂಗವಾಗಿ ಶಿಕ್ಷೆಯ ಪಾತ್ರವೂ ಇರುತ್ತದೆ.

ಆದರೆ ಶಿಕ್ಷೆಯ ಬಗೆಯಲ್ಲಿ ಶಿಕ್ಷಕರಿಗೆ ಒಂದು ಎಚ್ಚರಿಕೆಯಿರಬೇಕು. ಅದರ ಅಗತ್ಯವನ್ನೂ ಉಪಯೋಗವನ್ನೂ ಶಿಕ್ಷೆಪಡೆದುಕೊಂಡವರು ಅರಿತುಕೊಳ್ಳು ವಂತಿರಬೇಕು.

ಬೆತ್ತ-ಬುದ್ಧಿ

'ಬೆತ್ತ ಬೀಸುವುದನ್ನು ಬಿಟ್ಟರೆ ಭೀಮನೂ ಬೆಪ್ಪನಾದಾನು' ಹಳೆಯ ಕಾಲದ ಶಾಲಾಮಾಸ್ತರರ ನಡುವೆ ವಾಡಿಕೆಯಲ್ಲಿದ್ದ ಒಂದು ಗಾದೆಯಿದು.

ಬಕಾರ ಪ್ರಾಸವೇನೋ ಸರಿಯೆ; ಆದರೆ ಅರ್ಥ ಎಷ್ಟರಮಟ್ಟಿಗೆ ಸಾಧು? ಬುದ್ಧಿ ಬರಲು ಬೆತ್ತವೇ ಕಾರಣ ಎನ್ನಬಹುದೊ? ಭೀಮನ ಉಲ್ಲೇಖವೇನೋ ಕವಿಸಮಯವೆನ್ನಿ; ಅಥವಾ ಪ್ರಾಸದ ಅಗತ್ಯ. ಕುಂತಿಯೇನು ಭೀಮನನ್ನು ಹೊಡೆದು ಬಡಿದೇ ಬೆಳೆಸಿದಳೆಂದು ಭಾರತದಲ್ಲಿ ಎಲ್ಲಿಯೂ ಇಲ್ಲ. ಭೀಮನಾಗಲಿ ಬುದ್ಧಿವಂತನೆಂದು ಪ್ರಸಿದ್ಧನೂ ಅಲ್ಲ.

ಮಕ್ಕಳ ಬೆಳವಣಿಗೆಯಲ್ಲಿ ಶಿಕ್ಷೆಯ ಪಾತ್ರ ಎಷ್ಟು ಎಂಬುದು ಇಲ್ಲಿ ಪ್ರಸಕ್ತವಾದ ವಿಚಾರ. ಶಿಕ್ಷೆಯ ಅಗತ್ಯವನ್ನು ಕುರಿತು ಇಂಗ್ಲಿಷ್ ಗಾದೆಯೂ ಒಂದಿದೆಯಲ್ಲವೆ? Spare the rod and spoil the child. ಆದರೆ ಶಿಕ್ಷಣಕ್ಷೇತ್ರದಲ್ಲಿ ನಡೆದಿರುವ ಸಂಶೋಧನೆ ಈ ನಿಲುವಿಗೆ ನೆರವಾಗುವುದಿಲ್ಲ. ಎಳವೆಯಲ್ಲಿ ಪಡೆದುಕೊಂಡ ಶಿಕ್ಷೆ ಮಗುವಿನ ಮನಸ್ಸಿನ ಮೇಲೆ ಎಷ್ಟು ಗಾಸಿಯನ್ನು ಒದಗಿಸಬಲ್ಲುದು, ಮುಂದೆ ಮೈದಳೆಯುವ ವ್ಯಕ್ತಿತ್ವದ ಓರೆಕೋರೆಗಳಿಗೆ ಹೇಗೆ ಕಾರಣವಾದೀತು ಎಂಬುದು ಈಗೀಗ ತಿಳಿದುಬರುತ್ತಿದೆ. ಎಂದರೆ ಮಕ್ಕಳನ್ನು ಸ್ವೇಚ್ಛೆಯಾಗಿ ಬಿಡಬೇಕು, ಅವರ ಮೊಂಡಾಟಕ್ಕೆ ಮಣಿಯಬೇಕು ಎಂದರ್ಥವಲ್ಲ. ಶಿಸ್ತಿಗೂ ಶಿಕ್ಷೆಗೂ ಇರುವ ಅಂತರವನ್ನು ಶಿಕ್ಷಕರೂ ತಂದೆತಾಯಿಯರೂ ಅರಿತುಕೊಳ್ಳಬೇಕು. ಶಿಸ್ತಿನಿಂದ ಬೆಳೆಯುವ ಮಕ್ಕಳ ಪರಿಯೇ ಬೇರೆ; ಶಿಕ್ಷೆಯಿಂದಲೆ ಬೆಳೆದವರ ರೀತಿಯೇ ಬೇರೆ. ಶಿಸ್ತಿನಲ್ಲಿ ಪ್ರೀತಿಯ ಅಂಶ ಇರುವುದು ಸಾಧ್ಯ; ಶಿಕ್ಷೆಯಲ್ಲಿ ಇರಲಾರದು. ಬೆಳೆಯುವ ಮಗುವಿಗೆ ಪ್ರೀತಿ ಅಗತ್ಯವೆಂದು ಯಾರರಿಯರು? ಮಕ್ಕಳ ಹಿತಕ್ಕಲ್ಲವೆ ಶಿಕ್ಷೆ ಮಾಡುವುದು ಎಂದು ಕೇಳುವವರಿದ್ದಾರೆ. ಆದರೆ ಶಿಕ್ಷೆ ಮಾಡುವವರ ಮನಸ್ಸಿನಲ್ಲಿರುವುದು ಶಿಕ್ಷೆ ಪಡೆದುಕೊಳ್ಳುವವರಿಗೆ ತಿಳಿಯಬೇಕಲ್ಲ? ಪೆಟ್ಟು ಅದನ್ನು ತಿಳಿಸಲಾರದು ತಾನೆ? ಪ್ರೀತಿ ಒಳಗಿರಬೇಕು, ಹೊರಗೆ ತೋರಬಾರದು ಎನ್ನುವವರೂ ಇದ್ದಾರೆ. ಇರದ ಪ್ರೀತಿಯನ್ನು ಇರುವಂತೆ ತೋರಿಸುವುದು ಎಷ್ಟು ತಪ್ಪೋ, ಇರುವ ಪ್ರೀತಿಯನ್ನು ತೋರಿಸದೆ ಇರುವುದೂ ಅಷ್ಟೇ ತಪ್ಪು.

ಪ್ರೀತಿಗೂ ಒಂದು ಶಿಸ್ತಿರಬೇಕು; ಶಿಸ್ತಿನಲ್ಲಿ ಪ್ರೀತಿಯಿರಬೇಕು. ಆಗಲೇ ಮಗು ನೇರವಾಗಿ ಬೆಳೆದೀತು.

ವೃತ್ತಿಗಾಗಿ ಶಿಕ್ಷಣ

'ಅಕ್ಕರವು ಲೆಕ್ಕಕ್ಕೆ ತರ್ಕ ತಾ ವಾದಕ್ಕೆ। ಮಿಕ್ಕೆಲ್ಲ ಓದುಗಳು ತಿರುಪೆಗೆ'

ಹೀಗೊಬ್ಬ ಕವಿ ತನ್ನ ನಿಲುವನ್ನು ತಿಳಿಯಹೇಳಿದ್ದಾನೆ.

ಶಿಕ್ಷಣವನ್ನು ಕುರಿತ ಮಾತು ಇದು. ಅವನ ಕಾಲದಲ್ಲಿ ತೋರಿಕೊಂಡ ಸಮಸ್ಯೆಯೇ ಇಂದಿಗೂ ಶಿಕ್ಷಣದಲ್ಲಿ ಮುಂದುವರಿದಿದೆ. ಶಿಕ್ಷಣದ ಗೊತ್ತು-ಗುರಿಗಳೇನು ಎಂದು ತಲೆಕೆಡಿಸಿಕೊಳ್ಳುವವರು ಕೆಲವರಾದರೂ ಅಂದಿಗೂ ಇಂದಿಗೂ ಇರುತ್ತಾರೆ. ಶಿಕ್ಷಣ ಬದುಕಿಗೆ ಬೇಕಾದುದು ದಿಟ. ಆದರೆ ಬದುಕಿನ ಯಾವ ಬಗೆಗೆ ಅದು ನೆರವಾಗಬೇಕು? ಶಿಕ್ಷಣದಿಂದ ನೇರವಾಗಿ, ಬಳಸಾಗಿ ನಾವು ಪಡೆಯ ಬೇಕಾದುದೇನು? ಕವಿ ಹೇಳುವಂತೆ, ಶಾಲೆಗೆ ಹೋಗಿ ಕಲಿಯುವ 'ಅಕ್ಷರವಿದ್ಯೆ' ನಮ್ಮ ವ್ಯವಹಾರದ ಲೆಕ್ಕಾಚಾರಕ್ಕೆ ಆಗಿಬಂದೀತು. ಶಾಲೆಯಲ್ಲಿ ಕಲಿಕೆ ಇದಕ್ಕೆ ನೆರವಾಗ ಬಹುದು. ತರ್ಕವೆಂದರೆ ಬುದ್ಧಿಶಕ್ತಿ ಹರಿತವಾಗಿರುವುದು. ಶಿಕ್ಷಣದಿಂದ ಬುದ್ಧಿಯ ಹರವು, ಆಳ, ಗುಣ ಎಲ್ಲವೂ ಹೆಚ್ಚಬೇಕು. ಇದಕ್ಕಾಗಿ ಸ್ವಂತವಾಗಿ ವಿಮರ್ಶೆ ಮಾಡುವ, ವಿಚಾರ ಮಾಡುವ ಸಾಮರ್ಥ್ಯ ಬೆಳೆಯಬೇಕು.

ಇನ್ನು ವೃತ್ತಿಪರವಾದ ಶಿಕ್ಷಣದ ಮಾತು. ಶಾಲೆಗೆ ಹೋಗಿ ಕಲಿಯುವುದೇ ಯಾವುದಾದರೊಂದು ಕೆಲಸ ಹಿಡಿದು ಹಣ ಸಂಪಾದಿಸುವುದಕ್ಕೆ ಎನ್ನುವುದು ಸಾಮಾನ್ಯ ಅಭಿಪ್ರಾಯ. ಆದರೆ ಅಷ್ಟಕ್ಕೆ ಶಿಕ್ಷಣ ಮೀಸಲಾಗಿರಬೇಕೆ? ವೃತ್ತಿಯೆನ್ನುವುದನ್ನೇ ಕವಿ ಸ್ವಲ್ಪ ಕಟುವಾಗಿ 'ತಿರುಪೆ'ಯೆಂದ. ವೃತ್ತಿ ಯಾವುದಾದರಾಗಲಿ, ಉದ್ಯೋಗ ಏನಾದರಿರಲಿ, ಅದು ದಿಟವಾಗಿ ತಿರುಪೆಯೇ ತಾನೆ? ಹೊಟ್ಟೆ ಹೊರೆದುಕೊಳ್ಳುವ ಒಂದು ಹವಣಿಕೆ; ಅದನ್ನೇ ವೃತ್ತಿಯೆನ್ನಿ, ತಿರುಪೆಯೆನ್ನಿ.

ಶಿಕ್ಷಣವು ವೃತ್ತಿಗಾಗಿ ಮಾತ್ರ ಎಂದಿದ್ದರೆ, ಮನುಷ್ಯನಿಗಿರುವ ನಾಲ್ಕು ಪುರುಷಾರ್ಥಗಳಲ್ಲಿ ಒಂದನ್ನು (ಎಂದರೆ 'ಅರ್ಥ'ವನ್ನು) ಮಾತ್ರ ಸಾಧಿಸಿದಂತಾಯಿತು. ಉಳಿದ ಮೂರು ಪುರುಷಾರ್ಥಗಳ (ಧರ್ಮ, ಕಾಮ, ಮೋಕ್ಷಗಳ) ಪಾಡೇನು? ಶಿಕ್ಷಣಕ್ಕೂ ಅವಕ್ಕೂ ನಂಟಿಲ್ಲವೆ? ಮೋಕ್ಷವನ್ನು ಎಲ್ಲರ ಪುರುಷಾರ್ಥಗಳ ಗುಂಪಿಗೆ ಸೇರಿಸದಿದ್ದರೂ, ಮಿಕ್ಕ ಮೂರಾದರೂ ದಕ್ಕಬೇಕಲ್ಲ?

ಶಿಕ್ಷಣವನ್ನು ಸಮಗ್ರ, ಸಾರ್ಥಕ ಎನ್ನಬೇಕಾದರೆ ವೃತ್ತಿಗಾಗಿ ಮಾತ್ರ ಕಲಿಕೆ ಎನ್ನುವ ಹಟವನ್ನು ಬಿಡಬೇಕು. ಬದುಕಿನ ಚೌಕಟ್ಟನ್ನು ಸಿದ್ಧಪಡಿಸಬೇಕಾದುದು ಶಿಕ್ಷಣದ ಉದ್ದೇಶ. ಅದರಲ್ಲಿ ವೃತ್ತಿ ಒಂದು ವಿವರ ಅಷ್ಟೆ. ಅದೇ ಶಿಕ್ಷಣವನ್ನೆಲ್ಲ ನುಂಗಿಬಿಟ್ಟರೆ ಹೇಗೆ?

ಚೂರುಪಾರು ವಿದ್ಯೆ

ವಿದ್ಯೆ ಒಂದೆಂದು ಹೇಳುವ ಕಾಲವೊಂದಿದ್ದಿತು. ಬದುಕಿಗೆ ಒಂದು ನೆಲೆ, ಒಂದು ಬಗೆ, ಒಂದು ಗುರಿ ಎಂದಿದ್ದಾಗ.

ಬರುಬರುತ್ತ ಬದುಕಿನಲ್ಲಿ ವೈವಿಧ್ಯ ಮೂಡಿಕೊಂಡಾಗ, ಅದಕ್ಕೆ ಅನುಕೂಲ ವಾಗಲೆಂದು ವಿದ್ಯೆಯೂ ಬಗೆಬಗೆಯದಾಯಿತು. ಆದರೆ ಒಬ್ಬ ವ್ಯಕ್ತಿಯ ಕೈಮೀರಿ ಹೋಗದಷ್ಟು ಅಡಕವಾಗಿದ್ದಿತು. ವಿದ್ಯೆಯಲ್ಲಿ ಹಲವಾರು ಶಾಖೆಗಳು ಏರ್ಪಟ್ಟುವು. ಹತ್ತಾರು ಶಾಸ್ತ್ರಗಳು ಒದಗಿಬಂದವು. ಇನ್ನೂ ಮುಂದೆ, ಬದುಕು ಜಟಿಲವಾಗಿ ನೂರಾರು ವಿವರಗಳಲ್ಲಿ ಒಡೆದು ನಿಂತಾಗ, ವಿದ್ಯೆಯೂ ಒಡೆದು ಚೂರುಚೂರಾಗ ಬೇಕಾಯಿತು. ಒಂದು ಶಾಸ್ತ್ರದಲ್ಲೇ ಹತ್ತಾರು ಕವಲುಗಳೊಡೆದುವು. ಒಂದು ಶಾಖೆಯಲ್ಲೇ ಹಲವಾರು ಉಪಶಾಖೆಗಳು ತಲೆದೋರಿದುವು. ವಿದ್ಯೆಯನ್ನು ಅರಸುವವರು ತಮ್ಮ ಗಮನವನ್ನೆಲ್ಲ ಯಾವುದಾದರೊಂದು ಉಪಶಾಖೆಯಲ್ಲಿ, ಉಪೋಪಶಾಖೆಯಲ್ಲಿ, ಯಾವುದಾದರೊಂದು ಸಂಕುಚಿತವಾದ ಶಾಸ್ತ್ರಭಾಗದಲ್ಲಿ ಅಡಗಿಸಿಕೊಳ್ಳಬೇಕಾಗಿ ಬಂದಿತು. ಅದರ ಅಕ್ಕಪಕ್ಕದ ಶಾಖೆಗಳ, ಶಾಸ್ತ್ರಭಾಗದ ಸ್ಥೂಲಪರಿಚಯವಷ್ಟೆ ಅವರಿಗೆ ದಕ್ಕುತ್ತಿದ್ದುದು. ಈ ಪ್ರವೃತ್ತಿ ಬೆಳೆದು ಬಂದು, ಈಗ ಯಾವುದೋ ಒಂದು ತೀರ ಸಣ್ಣದಾದ ಶಾಸ್ತ್ರಭಾಗದಲ್ಲಿ ಪರಿಣತಿಯನ್ನು ಪಡೆದುಕೊಳ್ಳಲೆಂದು ಹೆಣಗಾಡುವವರು ಬಹು ಮಂದಿ. ಅವರ ಪ್ರತಿಭೆ, ಪ್ರಯತ್ನ, ಪ್ರಯಾಸ, ಸಮಯ ಎಲ್ಲವೂ ಈ ಸಣ್ಣ ಕ್ಷೇತ್ರಕ್ಕಷ್ಟೆ ಮುಡಿಪು. ಅದರಾಚೆ ಇರುವ ವಿದ್ಯೆಯ ಹರವು ಇವರ ಪಾಲಿಗೆ ಸೊನ್ನೆ. ತಾವು ಆಳವಾಗಿ ಅಧ್ಯಯನ ಮಾಡಿದ ಶಾಸ್ತ್ರಭಾಗ ಯಾವ ಶಾಸ್ತ್ರದ ಅಂಗ ಎಂಬುದೂ ಹಲವು ವೇಳೆ ಅವರ ಪರಿಚಯಕ್ಕೆ ಬರುವುದಿಲ್ಲ!

ಈ ಸಂಕುಚಿತ ವಿದ್ಯೆಯ ತುಣುಕಿಗೆ ಯಾವ ಪ್ರಯೋಜನವಿದ್ದೀತು? ಎಷ್ಟರ ಮಟ್ಟಿಗೆ ಅದು ವಿದ್ಯೆಯ ನೆಲೆಗೆ ನೆರವಾಗಬಲ್ಲದು? ಹಲವಾರು ಇಂಥ ತುಣುಕು ಗಳನ್ನು ಸೇರಿಸಿದರೆ ಇಡೀ ವಿದ್ಯೆಯ ತಾತ್ಪರ್ಯ ಕೈಗೂಡುವುದೆ? ತುಣುಕುಗಳಿಗೆ ತಮ್ಮದೇ ಆದ ಗೊತ್ತುಗುರಿಗಳಿವೆಯೆ?

ಇಂಥ ಪ್ರಶ್ನೆಗಳು ಅವರನ್ನು ಕಾಡುವುದಿಲ್ಲ.

ಸಾಕ್ಷರ-ರಾಕ್ಷಸ

ಸಾಕ್ಷರತೆಯ ಕರೆ ಬಹುಕಾಲದಿಂದ ಇದೆ.

ಶಾಲೆಗೆ ಸೇರಬೇಕು, ಓದಲು ಬರೆಯಲು ಕಲಿಯಬೇಕು ಎಂದು ಶಾಲೆಗೆ ಸೇರಿದವರು, ಓದಲು ಬರೆಯಲು ಕಲಿತವರು ಉಪದೇಶ ಮಾಡುತ್ತಾ ಬಂದಿದ್ದಾರೆ.

ಅಕ್ಷರಗಳನ್ನು ಅರಿತವರು ಸಾಕ್ಷರರು; ಓದು-ಬರಹವೆಲ್ಲವೂ ಅಕ್ಷರಗಳ ಮೂಲಕವಾಗಿಯೇ ತಾನೆ? ಆದರೆ ಸಾಕ್ಷರತೆಯೇ ವಿದ್ಯೆಯಲ್ಲವೆಂದು ಬಹುಮಂದಿ ಅರಿಯರು. ಸಾಕ್ಷರತೆಯೆನ್ನುವುದು ವಿದ್ಯೆಗೊಂದು ಹೆಬ್ಬಾಗಿಲು; ಬಾಗಿಲನ್ನು ದಾಟಿ ಒಳಹೊಕ್ಕರೇ ವಿದ್ಯೆಯಲ್ಲವೆ? ಬಾಗಿಲಲ್ಲೇ ನಿಂತರೆ ಹೇಗೆ? ವಿದ್ಯೆಗಾಗಿ ಶಾಲೆ ಎಂಬುದು ಉದ್ದೇಶವಾದರೂ, ಸಾಕ್ಷರತೆಯಷ್ಟೇ ಶಾಲೆಯಿಂದ ಮಕ್ಕಳಿಗೆ ದಕ್ಕುತ್ತಿರುವುದು. ಸಾಕ್ಷರತೆಯ ಪ್ರಚಾರದಲ್ಲೂ ವಿದ್ಯೆಯ ಗಾಳಿಗಂಧವೇನಿರದು. ವಿದ್ಯೆಯ ಹೂರಣವಿಲ್ಲದೆ ಸಾಕ್ಷರತೆಯ ಹೊದಿಕೆಯಷ್ಟರಿಂದ ಏನು ರುಚಿಯಿದ್ದೀತು? ಏನು ಪುಷ್ಟಿಯಿದ್ದೀತು? ಕೇವಲ ಸಾಕ್ಷರತೆಯಿಂದ ಒಂದು ತೊಂದರೆಯೂ ಇದೆ. ವಿದ್ಯೆಯ ಪ್ರಯೋಜನ ಸಂಸ್ಕಾರವನ್ನು ಒದಗಿಸುವುದು; ಮನಸ್ಸನ್ನು ತಿದ್ದುವುದು; ಹೃದಯವನ್ನು ಶೋಧಿಸುವುದು.

ಈ ಪ್ರಯೋಜನಕ್ಕೆ ಸಾಕ್ಷರತೆ ನೆರವಾಗಬೇಕು.

ಸಂಸ್ಕಾರದ ಆಲೋಚನೆಯೇ ಇಲ್ಲದೆ ಸಾಕ್ಷರತೆಯಷ್ಟೆ ಗುರಿಯಾದರೆ, ಸ್ವಲ್ಪ ಏರುಪೇರಾದರೂ ಸಾಕ್ಷರರು ತಿರುವು ಮುರುಗಾಗಿ ರಾಕ್ಷಸರಾಗಿಬಿಡುತ್ತಾರೆ! ಹೀಗಾಗುವುದನ್ನು ನೋಡುತ್ತಿದ್ದೇವೆ. ಓದಲು ಬರುವುದಷ್ಟೇ ಮುಖ್ಯವಲ್ಲ. ಏನನ್ನು ಓದಬೇಕು ಎಂಬ ವಿವೇಕವನ್ನು ಬೆಳೆಸಿಕೊಳ್ಳುವುದೂ ಮುಖ್ಯವೇ. ಓದಿದ್ದನ್ನು ವಿಚಾರ ಮಾಡದೆ ನಂಬಿಬಿಡಬಾರದು ಎಂದು ಕಲ್ಪನೆಯಿಲ್ಲದವನು ಓದದೇ ಇರುವುದೇ ಮೇಲು. ವಿಚಾರವಂತಿಕೆಯನ್ನು ಬೆಳೆಸದೆ ಸಾಕ್ಷರತೆಯನ್ನು ಮಾತ್ರ ಹರಡಿದರೆ ಜನರಲ್ಲಿ ಅತೃಪ್ತಿ, ಅಶಿಸ್ತು, ಆತಂಕ, ದ್ವೇಷ, ಕ್ರೌರ್ಯ, ಕಾಮುಕತೆಗಳಿಗೆ ಕರೆ ಕೊಟ್ಟಂತೆ. ವ್ಯಕ್ತಿಯ ಬದುಕಿನಲ್ಲೂ ನೆಮ್ಮದಿಯಿಲ್ಲ, ಸಮುದಾಯ ಜೀವನದಲ್ಲೂ ನೆಲೆಯಿರದು.

ಸಾಕ್ಷರತೆಯೇ ವಿದ್ಯೆಯೆಂದು ಬಗೆದಾಗ ಆಗುವ ಅನಾಹುತ ಇದು.

ಕತ್ತೆ-ಕಸ್ತೂರಿ

'ಕತ್ತೆಯು ಕಸ್ತೂರಿಯನ್ನು ಹೊತ್ತಹಾಗೆ' ಎಂದು ಹೇಳುವುದುಂಟು.

ಸಂಸ್ಕೃತದಲ್ಲಿ ಕತ್ತೆಯು ಶ್ರೀಗಂಧದ ಹೊರೆಯನ್ನು ಹೊತ್ತಂತೆ ಎನ್ನುವ ಮಾತಿದೆ.

ಹೇಳಿ ಕೇಳಿ ಕತ್ತೆ; ಅದಕ್ಕೆ ಕಸ್ತೂರಿಯ ಪರಿಮಳವೇನು ತಿಳಿಯುತ್ತದೆ? ಶ್ರೀಗಂಧದ ಬೆಲೆಯೇನು ತಿಳಿಯುತ್ತದೆ? ಬೆನ್ನಮೇಲಿನ ಭಾರ ಮಾತ್ರವೇ ಅದಕ್ಕೆ ತಿಳಿಯುವುದು!

ಈ ಸಾಮತಿಯು ಪ್ರಸಕ್ತವಾಗುವುದು ವೇದಪಾಠದ ವಿಚಾರದಲ್ಲಿ. ವೇದಮಂತ್ರಗಳನ್ನೆಲ್ಲ ಕಂಠಪಾಠ ಮಾಡಿ ಅದರ ಅರ್ಥ ತಿಳಿಯದಿದ್ದರೆ ಕತ್ತೆಯು ಚಂದನವನ್ನು ಹೊತ್ತಂತೆ ಎಂದು ಹಿಂದಿನ ಭಾಷ್ಯಕಾರರ ಒಕ್ಕಣೆ. ಯಾಸ್ಕರು ಹೊರೆಯನ್ನು ಇರಿಸುವ ಗೂಟ ಅಥವಾ ಮರದ ಕೊಂಟು ಎನ್ನುವ ದೃಷ್ಟಾಂತವನ್ನು ಕೊಡುತ್ತಾರೆ. ಗಂಟಿನ ಬೆಲೆ, ಹೊತ್ತ ಗೂಟಕ್ಕೆ ತಿಳಿಯುವುದೆ? ಹೀಗೆ ವೇದವನ್ನು ಅಧ್ಯಯನ ಮಾಡಿ ವೇದಾರ್ಥವನ್ನು ಅರಿತುಕೊಳ್ಳದಿದ್ದವನು ಗೂಟದಂತೆ (ಸ್ಥಾಣುಃ ಭಾರಹರಃ) ಎಂದು ಅವರ ಎಣಿಕೆ. ಶಾಲಾ ಕಾಲೇಜುಗಳಲ್ಲಿ ಹುಡುಗರು ಹಲವಾರು ಪ್ರಕಾರಗಳ ವಿದ್ಯೆಯನ್ನೇನೋ ಕಲಿಯುತ್ತಾರೆ. ಆದರೆ ವಿದ್ಯೆಯ ತಾತ್ಪರ್ಯವಾಗಲಿ ವಿನಿಯೋಗವಾಗಲಿ ಅವರಿಗೆ ಮನದಟ್ಟಾಗುವುದು ಕಡಮೆ. ಪದವೀಧರರಾಗುತ್ತಾರೆ; ಉದ್ಯೋಗವನ್ನೂ ಪಡೆದುಕೊಳ್ಳುತ್ತಾರೆ. ಆದರೆ ಕಲಿತ ವಿದ್ಯೆಯಿಂದ ಬದುಕನ್ನು ನೇವರಿಸಿಕೊಳ್ಳುವ ಹದವನ್ನು ಅರಿಯರು. ಮುಖ್ಯವಾಗಿ ವಿದ್ಯೆಯಿರುವುದು ಬದುಕಿಗಾಗಿ; ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕಾಗಿ; ಮೇಲ್ತರದ ಸಂಸ್ಕೃತಿಯನ್ನು ಸಾಧಿಸಿಕೊಳ್ಳುವುದಕ್ಕಾಗಿ. ಉದ್ಯೋಗಕ್ಕಾಗಿ ವಿದ್ಯೆ ಎನ್ನುವಾಗ ವಿದ್ಯೆಯ ಮೂಲಭೂತವಾದ ಪ್ರಯೋಜನವನ್ನೆ ಕೈಬಿಡಬೇಕಾಗುತ್ತದೆ. ಮುಂದೆ ಹಿಡಿಯುವ ವೃತ್ತಿಗೆ ಇದೊಂದು ತರಬೇತಿ. ಎಳೆತನದಲ್ಲಿ ಕಲಿಯುವುದೆಲ್ಲ ಇಷ್ಟಕ್ಕೇ ಎಂದರೆ ಮಾನವ ಸಮಾಜದಲ್ಲಿ ವಿದ್ಯೆಗಿರುವ ಸ್ಥಾನ-ಮಾನ ನಿರರ್ಥಕವಾದುದು ಎಂದಾಗಿಬಿಡುತ್ತದೆ. ಮನುಷ್ಯನೆಂಬ ಪ್ರಾಣಿಗೆ ಹುಟ್ಟುವಾಗ ಸಾಮಾಜಿಕವಾದ ಸಾಂಸ್ಕೃತಿಕವಾದ ಮೌಲ್ಯಗಳ ಪರಿಚಯವಾಗಲಿ ಪ್ರವೃತ್ತಿಯಾಗಲಿ ಎಳ್ಳಷ್ಟೂ ಇರುವುದಿಲ್ಲ. ಉಳಿದ ಪ್ರಾಣಿಗಳಿಗಿಂತ ಮನುಷ್ಯನ ಬಾಲ್ಯ ದೀರ್ಘಕಾಲದ್ದು; ಹತ್ತಿಪ್ಪತ್ತು ವರ್ಷಗಳಷ್ಟು ಕಲಿಯುವುದರಲ್ಲೇ ಕಳೆಯುತ್ತದೆ.ತನಗೂ ಹಿತವಾಗಿ, ನೆರೆಯವರ ಹಿತಕ್ಕೂ ಅಡ್ಡಿಬರದಂತೆ ಬದುಕುವ ಬಗೆಯನ್ನು ವಿದ್ಯೆಯಿಂದಲೇ ಅರಿತುಕೊಳ್ಳಬೇಕು.

ಅದನ್ನು ಕೈಬಿಟ್ಟರೆ ವಿದ್ಯೆಗೇನು ಬೆಲೆ!

ಕಸ್ತೂರಿಯೋ ಕಸವೋ

'ಕತ್ತೆ ಕಸ್ತೂರಿ ಹೊತ್ತ ಹಾಗೆ' ಎಂಬುದೊಂದು ಗಾದೆ. ಕತ್ತೆಗೆ ತಾನು ಹೊರುವ ಪದಾರ್ಥದ ಬೆಲೆಯೇನು ತಿಳಿದೀತು? ಅದರ ಭಾರ ಮಾತ್ರ ತಿಳಿಯುತ್ತದೆ.

ಇದು ಕತ್ತೆಯ ವರ್ಣನೆಯೆಂದು ತಿಳಿಯಬಾರದು - ಕತ್ತೆಯಂಥ ಮನುಷ್ಯರನ್ನು ಕುರಿತು ಆಡಿದ ಮಾತು. ವಿದ್ಯಾವಂತರಿರುತ್ತಾರೆ; ಪದವಿಗಳನ್ನು, ಪ್ರಶಸ್ತಿಗಳನ್ನು ಪಡೆದವರಿರುತ್ತಾರೆ. ಆದರೆ ಅವರು ಕಲಿತದ್ದು ಎದೆಯಾಳಕ್ಕೆ ಇಳಿದಿದೆಯೋ ಎಂದರೆ ಹೌದೆಂದು ಹೇಳಲಾಗದು. ವಿದ್ಯೆಯಿಂದ ಅವರ ಸಂಸ್ಕಾರವಾಗಿದೆಯೋ ಇಲ್ಲವೋ ಹೇಳವುದಾಗದು. ಬಾಯಿಯಿಂದ ವಿದ್ಯೆ ಹೊರಹೊಮ್ಮಿ ಕಾಣಿಸಿಕೊಳ್ಳುತ್ತದೆ; ವಾದ ಮಾಡಿಯಾರು, ತರ್ಕವನ್ನು ಬಳಸಿಯಾರು, ಎದುರಾಳಿಯ ಬಾಯಿ ಕಟ್ಟಿಯಾರು, ಉದ್ಗ್ರಂಥಗಳನ್ನು ರಚಿಸಿಯಾರು. ವಿದ್ಯೆಯ ಬೆಲೆ ಇರುವುದು ಇವುಗಳಲ್ಲಲ್ಲ. ತಮ್ಮ ಬದುಕನ್ನು ತಿದ್ದಿಕೊಳ್ಳಲು, ನೇರ್ಪಡಿಸಿಕೊಳ್ಳಲು, ತಮ್ಮ ಬದುಕಿನಲ್ಲಿ ಅಗತ್ಯವಾದ ಮೌಲ್ಯಗಳನ್ನು ಕಂಡುಕೊಳ್ಳಲು, ಬದುಕಬೇಕಾದ ದಾರಿಯನ್ನು ಗುರುತಿಸಿಕೊಳ್ಳಲು ವಿದ್ಯೆ ನೆರವಾಗಬೇಕು. ಇದಾಗದಿದ್ದರೆ, ವಿದ್ಯೆಯೊಂದು ಹೊರೆಯೇ. ಪ್ರಯಾಣ ಮಾಡುವಾಗ ಬುತ್ತಿಯನ್ನು ಒಯ್ಯುವ ವಾಡಿಕೆಯಿದ್ದ ಕಾಲದಲ್ಲಿ 'ಪಾಥೇಯವತ್' ಎಂಬುದೊಂದು ನ್ಯಾಯ. ಪಾಥೇಯವೆಂದರೆ ದಾರಿಗೆ ಬೇಕಾದ ಆಹಾರ ಸಾಮಗ್ರಿ. ಇದನ್ನು ಹೊತ್ತು ಹೋಗುವಾಗ ಭಾರವೇ. ಆದರೆ ದಾರಿಯಲ್ಲಿ ನಡುವೆ ಕೂತು ಅದನ್ನು ತಿಂದಾಗ ಅದರ ಭಾರವೇನು ಎಲ್ಲಿಯೂ ಹೋಗುವುದಿಲ್ಲ. ಬುತ್ತಿಯ ಚೀಲದಲ್ಲಿದ್ದದ್ದು ಹೊಟ್ಟೆಗೆ ಬಂದಿಳಿಯಿತು ಅಷ್ಟೆ. ಆದರೆ ಉಂಡು ಮತ್ತು ಮುಂದೆ ನಡೆದಾಗ ಬುತ್ತಿಯು ಭಾರವೆನಿಸುವುದಿಲ್ಲ. ದೇಹದೊಂದಿಗೆ ಸೇರಿಕೊಂಡುಬಿಟ್ಟಿತು. ಬೇರೆಯಿದ್ದಾಗ ಭಾರ; ಅದನ್ನು ಉಂಡು ಅರಗಿಸಿಕೊಂಡಾಗ ಭಾರವೆಲ್ಲಿ ಬಂತು? ಅಷ್ಟು ಮಾತ್ರವಲ್ಲ, ಉಂಡಮೇಲೆ ಮೈಗೆ ಬಲವೂ ಬಂದಿತು, ನಡೆಯಲು ಹುರುಪೂ ಬಂದಿತು. ಭಾರವಾಗಿದ್ದುದು ನೆರವಾಯಿತು. ವಿದ್ಯೆಯ ವಿಚಾರವೂ ಹೀಗೆಯೆ. ನಮ್ಮ ಬದುಕಿನಲ್ಲಿ ಅದನ್ನು ಸೇರಿಸಿಕೊಳ್ಳದಿದ್ದರೆ, ಅದು ಹೊರಗೇ ಇರುವುದಾದರೆ ಭಾರವೇ; ಅದೊಂದು ಹೊರೆಯೆ. ಅದನ್ನು ಹೊತ್ತ ಮನುಷ್ಯನು ಕತ್ತೆಯೆ. ಹೊತ್ತದ್ದು ಕಸ್ತೂರಿಯೇ ಇರಬಹುದು, ಕಸವೇ ಇರಬಹುದು. ಕತ್ತೆಗೆ ಎರಡೂ ಒಂದೇ.

ಹೊತ್ತಿರುವುದು ಕಸ್ತೂರಿಯೆಂದೂ ಬೆಲೆ ಬಾಳುವುದೆಂದೂ ಅರಿತುಕೊಂಡವನು ಮನುಷ್ಯ.

ಹೋಗದೂರಿನ ದಾರಿ ಕೇಳಬೇಕೆ ?

ಮದ್ದನ್ನು ತಿಳಿದಮಾತ್ರಕ್ಕೆ ಬೇನೆ ತೊಲಗಿಹೋದೀತೆ? ತಿಳಿದ ಮದ್ದನ್ನು ಬಳಸಬೇಕಾದ ಅಗತ್ಯವಿಲ್ಲವೆ?

ತಿಳಿವಳಿಕೆಯ ಭಾಗ ಒಂದು; ಬಳಕೆಯ ಭಾಗ ಇನ್ನೊಂದು. ಯಾವುದು ಹೆಚ್ಚು ಯಾವುದು ಕಡಮೆ ಎಂದೇನು ಗುದ್ದಾಡಬೇಕಾದುದಿಲ್ಲ. ಬಳಕೆಯ ಹಿನ್ನೆಲೆಯಲ್ಲಿ ತಿಳಿವಳಿಕೆಯಿರಬೇಕು; ತಿಳಿವಳಿಕೆ ಬಳಕೆಯಲ್ಲಿ ಬರಬೇಕು. ಎರಡೂ ಕಲೆತಾಗಲೆ ಕೆಲಸ ಕೈಗೂಡುವುದು. ಆದರೆ ಸಿದ್ಧಾಂತಕ್ಕೂ ಪ್ರಯೋಗಕ್ಕೂ ಅಂತರವನ್ನು ಕಾಣಿಸುವ ಹವಣಿಕೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಮೊದಲಿನಿಂದಲೂ ಬೇರೂರಿ ಬಂದಿದೆ. ಬಳಸುವ ಸಾಧ್ಯತೆಯಾಗಲಿ ಅಗತ್ಯವಾಗಲಿ ಇಲ್ಲದುದನ್ನು ತಿಳಿದುಕೊಂಡು ಮಾಡುವುದೇನು? ತಿಳುವಳಿಕೆಗಾಗಿ ತಿಳಿವಳಿಕೆ ಎಂಬುದಿದೆಯೆ? 'ಕಲೆಗಾಗಿ ಕಲೆ' ಎಂಬಂತೆ? ಶಾಲೆಗಳ ಪಠ್ಯ ಪದ್ಧತಿಯಲ್ಲಿ ಅನುಪಯುಕ್ತ ಅಪ್ರಸ್ತುತ ಅನಪೇಕ್ಷಿತ ಎಂಬ ಭಾಗವೇ ಎದ್ದುಕಾಣುವುದೆಂದು ಬಲ್ಲವರು ಹೇಳುತ್ತಾರೆ. ಒಡನೆಯೆ ಬಳಕೆಗೆ ಬಾರದಿದ್ದರೂ, ಕಾಲಾನುಕ್ರಮದಲ್ಲಿ ಬಳಸಿಕೊಳ್ಳುವ ವಿದ್ಯೆಯಾದರೆ ಚಿಂತೆಯಿಲ್ಲ, ವೃತ್ತಿಗೆ ಅನುಕೂಲವಾಗುವುದಾದರೂ ಸರಿಯೆ. ಯಾವುದಕ್ಕೂ ಬರದ ಕಲಿಕೆ ಅದೇತಕ್ಕೆ? ವಿದ್ಯೆಯ ಗೊತ್ತು-ಗುರಿ ಇತ್ಯರ್ಥವಾಗಿಲ್ಲದಿರುವುದೊಂದು ಕೊರತೆ. ವೃತ್ತಿಗಾಗಿ ವಿದ್ಯೆ ಎಂದರೆ ಒಂದು ಬಗೆಯಲ್ಲಿ ಸರಿಯೆನ್ನಬೇಕು. ಆಗ ವಿದ್ಯೆ ಸಂಪೂರ್ಣವಾಗಿ ವೃತ್ತಿಪರವಾಗಿರಬೇಕು. ಸಂಪಾದನೆಗಾದರೂ ದಾರಿಯಾಯಿತು. ಬದುಕಿನ ತಾತ್ಪರ್ಯವನ್ನು ಕಂಡುಕೊಳ್ಳಲು, ಸಾರ್ಥಕ್ಯವನ್ನು ಸಾಧಿಸಿಕೊಳ್ಳಲು ವಿದ್ಯೆ ಎಂದರೂ ಸರಿಯೆ. ದಿಟವಾಗಿ ವಿದ್ಯೆ ಮಾಡಬೇಕಾದುದು ಅದನ್ನೇ. ಕುತೂಹಲವನ್ನು ತಣಿಸುವ ಭಾಗವೂ ವಿದ್ಯೆಯಲ್ಲಿರಬೇಕೆನ್ನಿ. ಆದರೆ ಬದುಕಿಗಾಗಲಿ, ವೃತ್ತಿಗಾಗಲಿ ಏನೇನೂ ನಂಟಿರದ ವಿದ್ಯೆಯನ್ನೇ ವಿತರಣೆ ಮಾಡುವುದೆ ಈಗ ಹೆಚ್ಚುತ್ತಿದೆಯಲ್ಲವೆ? ಆದುದರಿಂದಲೆ, ವಿದ್ಯೆಯಿಂದ ಮನುಷ್ಯರ ಸಮಸ್ಯೆಗಳು ಪರಿಹಾರವಾಗುವುದಿರಲಿ, ಮಿತಿಮೀರಿ ಏರಿಕೊಳ್ಳುತ್ತಿವೆ. ಶಾಸ್ತ್ರ, ವೇದಾಂತ, ತರ್ಕ ಇವುಗಳ ಪಾಡೂ ಇದೇ. ಶಾಸ್ತ್ರವನ್ನು ತಿಳಿದ ಮಾತ್ರಕ್ಕೆ ಬಾಳು ಹಸನಾಗುವುದೆ? ವೇದಾಂತ ಇರುವುದು ಪ್ರವಚನಕ್ಕಾಗಿ ಅಲ್ಲ, ಅನುಷ್ಠಾನಕ್ಕೆ. ಅಧ್ಯಯನ ಮಾಡಿದ ತರ್ಕ ದಿನಬಳಕೆಯಲ್ಲಿ ಬಾರದಿದ್ದರೆ ಹೇಗೆ?

ಇಂಥವರನ್ನು ನೋಡಿಯೇ ದಾಸರು ಕೇಳಿದರು - 'ಹೋಗದೂರಿನ ದಾರಿ ಕೇಳಿ ಮಾಡುವುದೇನು?'

ಗಿಡವಾಗಿ ಬಗ್ಗದ್ದು

ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ? ಬಗ್ಗುವುದು ಕಷ್ಟ; ಬಗ್ಗಲಾರದು ಎಂದೇನು ಇಲ್ಲ.

ಗಿಡ ಬೆಳೆಯುತ್ತಿರುವಂಥದು; ಮರ ಬೆಳೆದು ನಿಂತದ್ದು. ಗಿಡ ಹಸಿಯಾಗಿರುವುದರಿಂದ ಬಗ್ಗಿಸಿದರೆ ತಡೆಯುತ್ತದೆ. ಮರ ಒಣಗಿರುವುದರಿಂದ ಬಗ್ಗಿಸಲು ಯತ್ನಿಸಿದರೆ ಮುರಿದು ಬೀಳುತ್ತದೆ. ಮಕ್ಕಳನ್ನು ದಾರಿಗೆ ತರುವುದು ಸುಲಭ; ಬೆಳೆದವರನ್ನು ಬೇರೆ ಕಡೆ ತಿರುಗಿಸುವುದು ಕಷ್ಟ ಎಂಬುದು ಸೂಚನೆ. ಮಕ್ಕಳು ಬೆಳೆಯುವವರು; ಯಾವ ಪ್ರಭಾವ ಹೇಗೆ ಬಂದರೆ ಹಾಗೆ ಅವರು ತಿರುಗುತ್ತಾರೆ. ಹದಿಹರೆಯ ದಾಟಿದ ಮೇಲೆ ಇದು ಸಾಧ್ಯವಾಗದು. ಇದಕ್ಕೆ ಕಾರಣ ಮಕ್ಕಳ ಮನಸ್ಸು ತೆರೆದದ್ದು; ಅದರಲ್ಲಿ ಪೂರ್ವಗ್ರಹಗಳು ಇರುವುದಿಲ್ಲ. ಮನೆಯಲ್ಲಿ ಹಿರಿಯರ ಅನುಕರಣೆ, ಅನುಸರಣೆ; ಶಾಲೆಯಲ್ಲಿ ಶಿಕ್ಷಕರ ಮತ್ತು ಓರಗೆಯವರ ಮೇಲ್ಪಂಕ್ತಿ, ವಾತಾವರಣದ ಬೇಕು-ಬೇಡಗಳು ಇವೆಲ್ಲ ಮಕ್ಕಳ ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ. ಅವರು ಹರೆಯ ಮುಟ್ಟುವಷ್ಟರಲ್ಲಿ ಅವರ ಮನೋವೃತ್ತಿಗಳು ಹೆಚ್ಚು ಕಡಮೆ ಮೈದಳೆದು ಮೂಡಿಕೊಂಡು ನಿಲ್ಲುತ್ತವೆ. ಕುದುರೆಯ ಕಣ್ಣಿಗೆ ಕವಾಟ ಹಾಕಿದಂತೆ ಮಕ್ಕಳ ಮನಸ್ಸೂ ಮುಂದೆ ಈ ಚೌಕಟ್ಟಿನಲ್ಲೆ ಎಲ್ಲವನ್ನೂ ನೋಡಬೇಕಾಗುತ್ತದೆ. ಎಳೆತನದಲ್ಲಿ ಸಿದ್ಧವಾದ ಧೋರಣೆಗಳು, ಅಭ್ಯಾಸಗಳು, ರುಚಿಗಳು ಬೇರೂರಿಕೊಳ್ಳುವುದು ಸುಲಭ; ಸಹಜ. ಮುಂದೆ ಅವನ್ನು ಮಾರ್ಪಡಿಸಬೇಕೆಂದರೆ ತುಂಬ ಪ್ರಬಲವಾದ ಪ್ರಭಾವವೋ ಅಗತ್ಯವೋ ಸಂದರ್ಭವೋ ಬೇಕಾಗುತ್ತದೆ.

ಆದ್ದರಿಂದ ಎಳೆಯರ ಮನಸ್ಸನ್ನು ಸರಿಯಾದ ದಾರಿಯಲ್ಲಿ ತೊಡಗಿಸುವುದು ಶಿಕ್ಷಣದಲ್ಲಿ ಮುಖ್ಯ. ಇದನ್ನು ಎಲ್ಲರೂ ಬಲ್ಲರಾದರೂ ಶಿಕ್ಷಣದ ಹೊಣೆಯನ್ನು ಹೊತ್ತಿರುವ ಅಧಿಕಾರಿಗಳೂ, ಸಂಸ್ಥೆಗಳೂ, ಶಿಕ್ಷಕರೂ ಈ ಕಡೆ ಅಷ್ಟಾಗಿ ಗಮನ ಹರಿಸುವುದಿಲ್ಲವಲ್ಲ?

ಕಡೆಗೆ ಮಕ್ಕಳ ತಾಯಿ ತಂದೆಯರಿಗಾಗಲಿ ಇದರ ಅರಿವು ಇರುವುದು ಅಷ್ಟಕ್ಕಷ್ಟೆ. ಬದುಕಿನ ಜಂಜಡದಲ್ಲೆ ಅವರ ಉತ್ಸಾಹವೆಲ್ಲ ಇಂಗುತ್ತದೆ. ಇನ್ನು ಮಕ್ಕಳ ಪಾಡು ಮಕ್ಕಳಿಗೇ ಎನ್ನಬೇಕಾದೀತೋ ಏನೋ!

'ಮಕ್ಕಳಿಸ್ಕೂಲ್'

ಕೈಲಾಸಂ ಒಮ್ಮೆ ಹೇಳಿದರು, ಅಥವಾ ಕೇಳಿದರು-

"ಮಕ್ಕಳಿಸ್ಕೂಲ್ ಮನೇಲಲ್ವೆ?"

ಮಕ್ಕಳು ಕಲಿಯುವ ಮಟ್ಟವನ್ನು ಮುಟ್ಟಿದಾಗ ಶಾಲೆಗೆ ಅವರನ್ನು ಅಟ್ಟುವುದು ವಾಡಿಕೆ; ಕೆಲವರಿಗೆ ಅದು ಅಗತ್ಯವೂ ಹೌದೆನ್ನಿ! ಆದರೆ ಶಾಲೆಯಲ್ಲಿ ಎಲ್ಲವನ್ನೂ ಕಲಿಸುವ ವ್ಯವಧಾನವಿದೆಯೆ? ಶಾಲೆಯಲ್ಲಿ ಪಠ್ಯಪದ್ಧತಿಯಿದೆ. ಅಲ್ಲೊಂದು ನಿಯಮಾವಳಿ ಕೆಲಸ ಮಾಡುತ್ತದೆ; ಅಲ್ಲಿಯದೇ ಒಂದು ಆಚಾರಸಂಹಿತೆಯಿರುತ್ತದೆ. ಅಲ್ಲಿನ ನಡಾವಳಿ ಎಲ್ಲ ವಿದ್ಯಾರ್ಥಿಗಳಿಗೆ ಸಮನಾಗಿಯೇ ಅನ್ವಯವಾಗುವಂತೆ. ಆದರೆ ಎಲ್ಲ ವಿದ್ಯಾರ್ಥಿಗಳೂ ಸಮನಾಗಿರುತ್ತಾರೆಯೆ? ಸ್ವಭಾವ, ಸಾಮರ್ಥ್ಯ; ಪ್ರವೃತ್ತಿ, ನಿವೃತ್ತಿ; ಒಲವು. ನಿಲುವು, ಓರಣ, ಒಪ್ಪ; ಹಿನ್ನೆಲೆ, ಬೆಂಬಲ ಎಲ್ಲದರಲ್ಲಿಯೂ ಹೆಚ್ಚೋ ಕಡಮೆಯೋ ವ್ಯತ್ಯಾಸವಿದ್ದೇ ಇರುತ್ತದೆ. ಇವೆಲ್ಲವನ್ನೂ ಬದಿಗೊತ್ತಿ, ಶಿಕ್ಷಣದ ಕಟ್ಟಿನಲ್ಲಿ ಅವರೆಲ್ಲರನ್ನೂ ಕೂಡಿಸುವ ಪ್ರಯತ್ನ ಶಾಲೆಯದು. ಇದು ಎಷ್ಟರ ಮಟ್ಟಿಗೆ ಯಶಸ್ವಿಯಾದೀತೋ ಆ ಮಾತು ಬೇರೆ. ಹೀಗೆ ಒಟ್ಟಿಗೆ ಕೂಡಿಸುವಾಗ, ಒಬ್ಬ ವಿದ್ಯಾರ್ಥಿಯ ವ್ಯಕ್ತಿತ್ವಕ್ಕೂ ಒದಗುವ ಘಾಸಿ ಏನೆಂಬುದನ್ನು ಯಾರೂ ಗಮನಿಸುವುದಿಲ್ಲ. ಶಾಲೆಯಲ್ಲಿ ಮಗು ಮಾಡಬೇಕಾಗುವ ಕಸರತ್ತಿಗೆ ಪೂರ್ವಸಿದ್ಧತೆ ಇರಬೇಡವೆ? ಮೇಲೆರಗಿ ಬರುವ ಶಿಕ್ಷಣವೆಂಬ ಬರಸಿಡಿಲಿಗೆ ಮಗು ಏಕಾಏಕಿ ಮೈಯೊಡ್ಡಿ ನಿಲ್ಲಬಲ್ಲುದೆ? ಶಾಲೆಯಲ್ಲಿ ಓರಗೆಯವರೊಂದಿಗೋ, ಹಿರಿಯರೊಂದಿಗೋ ಪಳಗಬೇಕೆಂದರೆ, ಸೆಣಸಬೇಕೆಂದರೆ ಸುಲಭವೆ? ಶಾಲೆಗೆ ಸೇರುವ ಮುನ್ನ ಮನೆಯಲ್ಲಿ ತಂದೆ-ತಾಯಿಯರಿಂದ, ಸೋದರ ಸೋದರಿಯರಿಂದ, ಉಳಿದವರಿಂದ ಮಗು ಏನನ್ನು ಪಡೆದುಕೊಳ್ಳುತ್ತದೆ, ಹೇಗೆ ಪಡೆದುಕೊಳ್ಳುತ್ತದೆ, ಯಾವ ಮೇಲ್ಪಂಕ್ತಿಯನ್ನು ಕಂಡುಕೊಳ್ಳುತ್ತದೆ ಮೊದಲಾದುವೆಲ್ಲ ಪೂರ್ವಸಿದ್ಧತೆಗಳು.

ಒಂದೊಂದು ಮಗುವೂ ಬೆಳೆಯಲು ಮನೆಯೇ ಒದಗಿಸುವ ಮೂಲಸಾಮಗ್ರಿ ತುಂಬ ಮುಖ್ಯವಾದುದು. ಕೈಕಾಲಾಡಿಸಲು ಚೆನ್ನಾಗಿ ಬಲ್ಲವನು ನೀರಿಗೆ ಬಿದ್ದರೆ ಚಿಂತೆಯಿಲ್ಲ; ಪಾರಾಗಿ ಬಂದಾನು.

ಸ್ಕೂಲು ಮನೆಯಾಗಲು ಸಾಧ್ಯವಿಲ್ಲ; ಮನೆ ಸ್ಕೂಲಾಗಬಹುದು.

ಹೊರೆ-ಹೊಣೆ

ಮಕ್ಕಳ ಶಿಕ್ಷಣದ ಹೊಣೆಗಾರಿಕೆ ಮನೆಯವರ ಮೇಲೆ ಎಂಬುವ ಕಾಲವೊಂದಿದ್ದಿತು. ಅದು ತುಂಬ ಹಿಂದಿನ ಮಾತಾಯಿತು.

ಈಗ ಶಿಕ್ಷಣ ಸರಕಾರದ ಕರ್ತವ್ಯಗಳಲ್ಲೊಂದೆಂಬ ಕಲ್ಪನೆ ಬೇರೂರುತ್ತಿದೆ. ಆದರೆ ಅದರ ಪೂರ್ಣ ಹೊಣೆಗಾರಿಕೆಯನ್ನು ಸರಕಾರ ವಹಿಸುವುದಕ್ಕೆ ಅಂಜಿ ಖಾಸಗಿ ಸಂಸ್ಥೆಗಳ ನೆರವನ್ನು ಬಯಸುತ್ತಿದೆ. ಖಾಸಗಿ ಸಂಸ್ಥೆಗಳು ಪ್ರಣಾಳಿಕೆಯಲ್ಲೇನೋ ವಿದ್ಯಾ ಪಕ್ಷಪಾತಿಗಳೇ; ಆದರೆ ವ್ಯವಹಾರದಲ್ಲಿ ಉದ್ಯಮಗಳು. ಎಲ್ಲವೂ ಹೀಗೇ ಎನ್ನುವಂತಿಲ್ಲ; ಬಹುಮಟ್ಟಿಗೆ ಈ ಮಾತು ದಿಟ ಎನ್ನಬಹುದು. ವಿದ್ಯಾವಿತರಣೆ ಈ ಸಂಸ್ಥೆಗಳ ಉದ್ದೇಶ. ನಮ್ಮ ನಡುವೆ ಇದ್ದ ದೊಡ್ಡ ಕೊರತೆಯೊಂದನ್ನು ಈ ಸಂಸ್ಥೆಗಳು ನೀಗಿಸಿವೆ ಎಂದು ಒಪ್ಪಿಕೊಳ್ಳಬೇಕು. ನಾನಾ ಬಗೆಯ ತಾಂತ್ರಿಕ ಶಿಕ್ಷಣವನ್ನೆಲ್ಲ ಸರಕಾರವೇ ನಿರ್ವಹಿಸಲು ಎಂದಿಗೂ ಸಾಧ್ಯವಾಗದು. ಅದು ನಿರ್ವಹಿಸಿದರೂ ಸಮರ್ಪಕವಾಗದು. ಆದರೆ ಸಂಸ್ಥೆಯೊಂದು ಖಾಸಗಿ ಸಂಘಟನೆ ತಾನೆ? ಅದು ಉಳಿಯಬೇಕು, ಬೆಳೆಯಬೇಕು, ನಿಜ; ಅಷ್ಟು ಮಾತ್ರವಲ್ಲದೆ, ಸಂಸ್ಥೆಯನ್ನು ಕಟ್ಟಿದವರೂ ಉಳಿಯಬೇಕು, ಬೆಳೆಯಬೇಕು; ಅವರ ಕುಟುಂಬದವರೂ ಉಳಿಯಬೇಕು. ಬೆಳೆಯಬೇಕು!

ಇದಕ್ಕೆ ಆರ್ಥಿಕ ಆಲಂಬನೆಯಿರದೆ ಇದ್ದೀತೆ? ಆಸೆಯೆಂಬುದು ಕೆಲಸ ಮಾಡದೆ? ಆಸೆ ಇಷ್ಟು ಕೈಗೂಡಿದರೆ ಮತ್ತಷ್ಟರ ಆಸೆ ತೋರಿಕೊಳ್ಳದೆ ಇದ್ದೀತೆ? ಅತ್ಯಾಸೆ, ದುರಾಸೆಗಳು ಆಸೆಯ ಸಹಜ ವಿಕಾರಗಳು ತಾನೆ? ಹೀಗಾಗಿ ವಿದ್ಯಾವಿತರಣೆಯ ಹೊಣೆಯನ್ನು ಹೊತ್ತ ಸಂಸ್ಥೆಗಳು ವಿದ್ಯಾರ್ಥಿಗಳಿಗೂ ಅವರ ಮನೆಯವರಿಗೂ ಹೊರೆಯಾಗಿ ಮಾರ್ಪಟ್ಟಿವೆ. ಸೇರಲು ಹಣ, ಕಲಿಯಲು ಹಣ, ಪರೀಕ್ಷೆಗೆ ಹಣ ಅಷ್ಟಾದರೆ ಸಾಲದು, ಸಂಸ್ಥೆಯ ಕಟ್ಟಡಕ್ಕೆ ಕಾಣಿಕೆ, ಸಂಸ್ಥೆಯ ನಿರ್ವಹಣೆಗೆ ಮಿತಿಮೀರಿದ ತಲೆಗಂದಾಯ (ಕೇಪಿಟೇಷನ್ ಫೀ) ವ್ಯವಸ್ಥೆಗೆ ಕೊಡುಗೆ (ಡೊನೇಷನ್) ಹೀಗೆ ಹಲವಾರು ನೆಪಗಳಲ್ಲಿ ಸುಲಿಗೆ. ಶ್ರೀಮಂತರಾದರೇನೋ ಹೊರೆ ತೀರ ಭಾರವಾಗದು; ಉಳಿದವರ ಪಾಡೇನು? ಮಕ್ಕಳಿಗೆ ವಿದ್ಯೆ ಕಲಿಸಿ ಮನೆಯನ್ನೆ ತೊಳೆದುಕೊಳ್ಳುವ ಪರಿಸ್ಥಿತಿ ಮಧ್ಯಮವರ್ಗದವರಿಗೆ ಬರುತ್ತಿದೆ.

ಸರಕಾರಕ್ಕೊಂದು ಹೊಣೆಗಾರಿಕೆಯ ಅರಿವು ಇದ್ದಿತಾದರೆ ಖಾಸಗಿ ಸಂಸ್ಥೆಗಳು ಕಟ್ಟುಪಾಡಿನಲ್ಲಿರುವುದು ಕಷ್ಟವಲ್ಲ.

ಕಂಠಪಾಠ

ಹಿಂದಿನ ಕಾಲದಲ್ಲಿ ಹಲವು ಗ್ರಂಥಗಳನ್ನು ಕಂಠಪಾಠ ಮಾಡುವ ಪದ್ಧತಿಯಿದ್ದಿತು. ಈಗ ಅದು ಮರೆಯಾಗುತ್ತಿದೆ.

ಪುಸ್ತಕಗಳು ದೊರೆಯುವುದು ಕಷ್ಟವಾಗಿದ್ದಾಗ, ಪುಸ್ತಕಗಳನ್ನು ಉಳಿಸಿಕೊಳ್ಳಲು ಕಂಠಪಾಠವೇ ದಾರಿ. ಪುಸ್ತಕಗಳ ಮುದ್ರಣ, ಪ್ರಕಾಶನ, ವಿತರಣೆ ಎಲ್ಲವೂ ಸುಲಭವಾಗಿರುವ ಈ ಕಾಲದಲ್ಲಿ ಅದರ ಅಗತ್ಯವಿಲ್ಲ. ಪುಸ್ತಕವನ್ನು ಕೈಯಲ್ಲಿ ಹಿಡಿದರೆ ಆಯಿತು; ಅದನ್ನೆಲ್ಲ ನೆನಪಿನಲ್ಲಿ ತುಂಬಿಟ್ಟುಕೊಳ್ಳುವುದೇಕೆ? ಮೆದುಳಿಗೆ ಆಯಾಸ ವಲ್ಲವೆ? ಮತ್ತೆ ಯಾವ ಪುಸ್ತಕ ಯಾವಾಗ ನೆರವಿಗೆ ಬಂದೀತು. ಅದರ ಅಗತ್ಯ ವೇನಿದ್ದೀತು ಎಂದು ಹೇಳುವುದು ಹೇಗೆ? ಇದು ಸರಿಯೆ, ಹಿಂದೆ ಅಮರಕೋಶ, ಕಾವ್ಯಗಳು, ಸ್ತೋತ್ರಗಳು, ಕಡೆಗೆ ವೇದಾಂತ ಗ್ರಂಥಗಳೂ ನೆನಪಿನಲ್ಲಿಯೆ ಉಳಿದಿರುತ್ತಿದ್ದುವು. ವೇದಮಂತ್ರಗಳ ಮಾತನ್ನು ಬಿಡಿ; ವೇದವು ಪುಸ್ತಕ ರೂಪದಲ್ಲಿ ಬಂದದ್ದೇ ಈಚೆಗೆ. ಉಳಿದಂತೆ ಪುಸ್ತಕಗಳಿರುತ್ತಿದ್ದುವು. ಅಚ್ಚೂ ಆಗುತ್ತಿದ್ದುವು. ಆದರೂ ಕಂಠಪಾಠದ ಗೀಳು ತಪ್ಪಲಿಲ್ಲ. ವೇದಾಂತ ಶಾಸ್ತ್ರದಲ್ಲಿ ಪರಿಣತನಾದವನೂ ಚಿಕ್ಕಂದಿನಲ್ಲಿ ಅಮರಕೋಶವನ್ನು ಕಂಠಪಾಠ ಮಾಡಿದ್ದ; ಆದರೆ ಮುಂದೆ ಅದರ ಉಪಯೋಗವೇನು? ಕಂಠಪಾಠ ಮಾಡಿದ ಸಾಮಗ್ರಿ ಬುದ್ಧಿ ಬೆಳೆಯಲು ನೆರವಾಗುತ್ತದೆ ಎನ್ನುವ ಹಾಗಿಲ್ಲ. ಆದರೆ ಕಂಠಪಾಠದ ಅಭ್ಯಾಸದಿಂದ ಪ್ರಯೋಜನವಿದೆ. ಕಂಠಪಾಠ ದಿಂದ ಒಂದು ಸಾಹಿತ್ಯ ಭಾಗವನ್ನೋ, ಶಾಸ್ತ್ರ ಭಾಗವನ್ನೋ ಧರ್ಮದ ಒಂದಂಶ ವನ್ನೋ ಮನಸ್ಸಿನಲ್ಲಿರಿಸಿಕೊಂಡಾಗ, ಮನಸ್ಸಿಗೊಂದು ಪೂರ್ವಸಿದ್ಧತೆ. ಕಂಠಪಾಠವೆಂದರೆ ಓದಿದ್ದನ್ನೋ ಕೇಳಿದ್ದನ್ನೋ ಮನಸ್ಸಿನಲ್ಲಿ ಉಳಿಸಿಕೊಳ್ಳುವುದು; ನೆನಪಾಗಿ ಮಾರ್ಪಡಿಸಿಕೊಳ್ಳುವುದು. ಸಮಯಕ್ಕೆ ಒದಗುವುದು ಓದಿದ್ದಲ್ಲ, ನೆನಪಿನಲ್ಲಿ ಉಳಿದದ್ದು ಮಾತ್ರ ನೆರವಾಗುವುದು. ಪುಸ್ತಕದಲ್ಲಿರುವ ಬದನೇಕಾಯಿ ತಿನ್ನಲು ಬರುತ್ತದೆಯೆ? ಪುಸ್ತಕದ ವಿವರ ಮನಸ್ಸಿನಲ್ಲಿ ಹೊಕ್ಕರೆ ಅದಕ್ಕೊಂದು ಬೆಲೆ.

ಎಳವೆಯಲ್ಲಿ ಮಾಡಿಕೊಂಡ ಕಂಠಪಾಠದ ಅಭ್ಯಾಸ ಮನಸ್ಸಿಗೊಂದು ವ್ಯಾಯಾಮ ವಾಗಿ, ಬಲ ಕೊಡುತ್ತದೆ. ಸೊಗಸಾದ, ಸ್ವಾರಸ್ಯವಾದ, ಪ್ರಯೋಜಕವಾದ, ಉತ್ತೇಜಕ ವಾದ ಭಾವನೆಗಳು ಮನಸ್ಸಿನಲ್ಲಿದ್ದಾಗಲೆ ಅವನ್ನು ಸವಿಯಬಹುದು, ಅವುಗಳಿಂದ ಉಪಯೋಗ ಪಡೆದುಕೊಳ್ಳಬಹುದು. ಪುಸ್ತಕದಲ್ಲಿರುವುದು ದೂರ, ನೆನಪಿನಲ್ಲಿ ರುವುದು ಹತ್ತಿರ.

ಆತ್ಮಗೌರವ

ಈಚೀಚೆಗೆ ವಿದ್ಯಾರ್ಥಿಗಳು ಅಧ್ಯಾಪಕರಿಗೆ ತಕ್ಕ ಗೌರವವನ್ನು ಸಲ್ಲಿಸುತ್ತಿಲ್ಲ ವೆಂಬ ದೂರು ಬರುತ್ತಿದೆ. ಅಧ್ಯಾಪಕರಿಂದಲೆ ಈ ದೂರು; ಅವರು ವಿದ್ಯಾರ್ಥಿ ಗಳಾಗಿದ್ದಾಗ ತಮ್ಮ ಅಧ್ಯಾಪಕರಿಗೆ ಸಲ್ಲಿಸುತ್ತಿದ್ದ ಗೌರವದ ನೆನಪು ಇದ್ದೀತು. ಆದರೆ ಆಗಿನ ಕಾಲದ ಅಧ್ಯಾಪಕರಂತೆ ತಾವೂ ಗೌರವಾರ್ಹರೋ ಅಲ್ಲವೋ ಎಂಬ ವಿಚಾರವೂ ಇರಬೇಕಲ್ಲವೇ? ಹಲವು ಅಧ್ಯಾಪಕರನ್ನು ಈಗಲೂ ವಿದ್ಯಾರ್ಥಿಗಳು ಗೌರವದಿಂದಲೇ ಕಾಣುತ್ತಾರೆ ಎಂಬುದಂತೂ ದಿಟ. ಗೌರವ ಸಲ್ಲಿಸಲು ಒತ್ತಡ ಇರಬೇಕೆ? ಅದಕ್ಕೊಂದು ಕಾನೂನಿನ ಅಗತ್ಯವಿದೆಯೆ? ಶಾಲೆಯ ನಿಯಮಾವಳಿಯಲ್ಲಿ ಸೇರಿಸಬೇಕೆ?

ಗೌರವ ಬುದ್ಧಿ ತಾನೇತಾನಾಗಿ ಹೊರಹೊಮ್ಮಬೇಕು; ಬಲಾತ್ಕಾರದಿಂದ ಯಾರು ಯಾರನ್ನೂ ಗೌರವಿಸಲಾರರು. ಇಂಗ್ಲೀಷಿನಲ್ಲಿ 'ಕಮಾಂಡ್' ಮತ್ತು 'ಡಿಮಾಂಡ್' ಎಂಬ ಎರಡು ಮಾತುಗಳಿವೆಯಷ್ಟೆ. ಗೌರವವನ್ನು 'ಡಿಮಾಂಡ್' ಮಾಡಲಾಗದು; 'ಕಮಾಂಡ್' ಮಾಡುವುದು ಅಧ್ಯಾಪಕರಿಗೆ ಬಿಟ್ಟಿದ್ದು. ಅಧ್ಯಾಪಕ ನೆಂಬ ಹುದ್ದೆಯಲ್ಲಿ ನೇಮಕವಾದೊಡನೆ ಎಲ್ಲ ವಿದ್ಯಾರ್ಥಿಗಳೂ ಅವನನ್ನು ಅಟ್ಟಕ್ಕೆ ಏರಿಸಲಾರರು. ಅವನ ವಿದ್ವತ್ತು, ಪ್ರವಚನ ಸಾಮರ್ಥ್ಯ, ಶಿಸ್ತು, ಶೀಲ, ಸಂಯಮ ಎಲ್ಲವೂ ವಿದ್ಯಾರ್ಥಿಗಳ ಗಮನಕ್ಕೆ ಬರುತ್ತವೆ. ಅವನ ಯೋಗ್ಯತೆಯನ್ನು ದಿನದಿನವೂ ಪರೀಕ್ಷೆ ಮಾಡುವ ಅವಕಾಶ ವಿದ್ಯಾರ್ಥಿಗಳಿಗಿರುತ್ತದೆ. ವಿದ್ಯಾರ್ಥಿಗಳಿಗಾದರೆ ಪರೀಕ್ಷೆ ಆಗೊಮ್ಮೆ ಈಗೊಮ್ಮೆ! ಗೌರವದ ನಿರೀಕ್ಷೆಯಲ್ಲಿರುವ ಅಧ್ಯಾಪಕರು ಆತ್ಮವಿಮರ್ಶೆಯನ್ನು ಮಾಡಿಕೊಂಡರೆ ಒಳಿತು. ತಾನು ಅಧ್ಯಾಪಕನಾಗಿ ತನ್ನ ಹೊಣೆಯನ್ನು ಸರಿಯಾಗಿ ನಿರ್ವಹಿಸುವ ಕಾತರ ಮೊದಲು ಮೂಡಬೇಕು. ತನ್ನಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುತ್ತಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಕಾಲ ಕೆಟ್ಟಿತು ಎಂಬ ಕನವರಿಕೆಗೆ ಅರ್ಥವಿಲ್ಲ. ಹಿಂದೆಯೂ ಎಲ್ಲ ಅಧ್ಯಾಪಕ ರಿಗೂ ಗೌರವವೇನು ಸಲ್ಲುತ್ತಿರಲಿಲ್ಲ. ಈಗಲೂ ಯಾವ ಅಧ್ಯಾಪಕರಿಗೂ ಗೌರವ ಸಲ್ಲುವುದಿಲ್ಲ ಎಂದೇನು ಇಲ್ಲ. ವಿದ್ಯಾರ್ಥಿಗಳ ಮನೋಧರ್ಮ ಮಾರ್ಪಟ್ಟಿರುವುದು ದಿಟ; ಅಧ್ಯಾಪಕರ ಮನೋಧರ್ಮವೇನು ಏಕಪ್ರಕಾರವಾಗಿದೆಯೆ?

ಅಧ್ಯಾಪಕರಲ್ಲಿ ಮೂರು ತೆರ

ಶಾಲಾ ಕಾಲೇಜುಗಳಲ್ಲಿ ಅಧ್ಯಾಪಕರಿರುತ್ತಾರೆ.

ಅವರಲ್ಲಿ ಮೂರು ವರ್ಗಗಳಂತೆ. ಪಠ್ಯ ಪುಸ್ತಕ ಹಿಡಿದು ನಿಗದಿಯಾದ ವಿಷಯವನ್ನು ತಿಳಿಯಹೇಳುವ ಅಧ್ಯಾಪಕರಿರುತ್ತಾರೆ. ಇದನ್ನು ಮಾಡುವುದರ ಜೊತೆಗೆ ವಿಷಯದಲ್ಲಿ, ಆ ವಿದ್ಯಾವಿಭಾಗದಲ್ಲಿ ಆಸಕ್ತಿ ಕುದುರುವಂತೆ ಪಾಠ ಹೇಳುವವರು ಎರಡನೆಯ ವರ್ಗದವರು. ಇವರು ಕಲಿಸುವಾಗ ಪಠ್ಯಪುಸ್ತಕ ನೆಪಕ್ಕಷ್ಟೆ. ಪಾಠವನ್ನು ಮೀರಿ ವಿಷಯಗಳನ್ನು ತಿಳಿಸುವರು. ಇನ್ನು ಮೂರನೆಯ ವರ್ಗದವರು. ವಿದ್ಯಾರ್ಥಿಗಳಿಗೆ ಕಲಿಯಲು ಸ್ಫೂರ್ತಿಯನ್ನು ನೀಡುವವರು. ತಾವು ಹೇಳುವುದರಿಂದ ವಿದ್ಯಾರ್ಥಿಗಳು ತಾವೇ ಕಲಿಯಲು ಉತ್ಸುಕರಾಗುವಂತೆ ಮಾಡುವುದು ಅವರ ಉದ್ದೇಶ. ಮೂರನೆಯ ವರ್ಗದವರೇ ಉತ್ತಮರೆಂದು ಬೇರೆ ಹೇಳಬೇಕೆ? ವಿದ್ಯಾರ್ಜನೆ ಮಾಡುವಾಗ ಶಾಲೆಯ ಪಾತ್ರವಿದೆ, ಪಠ್ಯಕ್ರಮದ ಪಾತ್ರವಿದೆ, ಉಪಾಧ್ಯಾಯರ ಪಾತ್ರವಿದೆ. ವಿದ್ಯಾರ್ಥಿಯು ದಿಟವಾಗಿ ವಿದ್ಯೆಯನ್ನು ಬಯಸುವವನೇ ಆದರೆ ಮೂರರಿಂದಲೂ ಅಷ್ಟಷ್ಟು ಪ್ರಯೋಜನವನ್ನು ಪಡೆದುಕೊಳ್ಳಬಹುದು. ಶಾಲೆಯ ಮಟ್ಟ ಎಂಥದೆಂಬುದು, ಪಠ್ಯ ಪುಸ್ತಕಗಳ ಅಚ್ಚುಕಟ್ಟು ಎಷ್ಟೆಂಬುದು ವಿದ್ಯಾರ್ಥಿಯ ವಶದಲ್ಲಿಲ್ಲದ ವಿವರಗಳು. ಅವುಗಳಿಂದ ಇವನು ಪಡೆದುಕೊಳ್ಳಬಹುದಾದ ಲಾಭ ಕಡಮೆಯೇ ಎನ್ನಿ. ಮತ್ತೆ ವಿದ್ಯಾರ್ಥಿಯ ಉದ್ದೇಶ ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದಷ್ಟೇ ಆದರೆ ಶಾಲೆ, ಪಠ್ಯಪುಸ್ತಕ, ಮೊದಲೆರಡು ವರ್ಗಗಳ ಅಧ್ಯಾಪಕರು ಇಷ್ಟಿದ್ದರೆ ಸಾಕು. ಆದರೆ ವಿದ್ಯಾರ್ಥಿಯ ದೃಷ್ಟಿ ದಿಟವಾಗಿ ವಿದ್ಯಾರ್ಜನೆಯ ಕಡೆಗೇ ಇರುವುದಾದರೆ ಶಾಲೆ, ಪಠ್ಯಪುಸ್ತಕ, ಕ್ರಮಬದ್ಧವಾದ ಪಾಠ ಇಷ್ಟರಿಂದ ಪೂರೈಸುವುದಿಲ್ಲ. ವಿದ್ಯೆಯಲ್ಲಿ ಒಲವು ಮೂಡಬೇಕು, ವಿಷಯ ಸಂಗ್ರಹಣದಲ್ಲಿ ಉತ್ಸಾಹ ಇರಬೇಕು. ಕಲಿಕೆಯೆನ್ನುವುದು ಬದುಕಿನ ಒಂದು ಅಂಗವಾಗಬೇಕು ಎನ್ನುವ ವಿದ್ಯಾರ್ಥಿಗಳಿಗೆ ಲಾಭವಾಗುವುದು ಮೂರನೆಯ ವರ್ಗದ ಅಧ್ಯಾಪಕರಿಂದ.

ಮೊದಲೆರಡು ವರ್ಗಗಳ ಅಧ್ಯಾಪಕರು, ವಿದ್ಯಾರ್ಥಿದೆಶೆಯನ್ನಾಗಲೆ ದಾಟಿ ಬೋಧನೆಯ ಹವ್ಯಾಸವನ್ನು ಹಚ್ಚಿಕೊಂಡಿರುವವರು. ಆದರೆ ಮೂರನೆಯ ವರ್ಗದ ಅಧ್ಯಾಪಕರು ಇನ್ನೂ ವಿದ್ಯಾರ್ಥಿಗಳಾಗಿಯೇ ಉಳಿದಿರುವವರು; ವಿದ್ಯಾರ್ಥಿಗಳಿಗೆ ಕಲಿಸುವಾಗಲೆ ತಾವೂ ಕಲಿಯಬೇಕೆಂದು ಕಾತರರಾಗಿರುವರು. ವಿದ್ಯೆಯನ್ನು ಕುರಿತಂತೆ ತಮಗೇ ಅಕ್ಕರೆಯಿರುವಾಗ, ಕಲಿಯಲು ಬರುವ ಎಳೆಯರಿಗೆ ಪ್ರೇರಣೆಯನ್ನೊದಗಿಸುವುದು ಅವರಿಗೆ ಕಷ್ಟವಾಗದು.

ನಮ್ಮ ಬದುಕು

ನಮ್ಮ ಹಳೆಯ ಗ್ರಂಥಗಳಲ್ಲಿ ರಥರೂಪಕವೆಂಬುದಿದೆ. ನಮ್ಮ ಬದುಕನ್ನು ರಥಕ್ಕೆ, ಎಂದರೆ ಗಾಡಿಗೆ, ಹೋಲಿಸಿದ್ದಾರೆ.

ಒಬ್ಬೊಬ್ಬ ವ್ಯಕ್ತಿಯೂ ರಥಿಕನೇ. ಎಂದರೆ ಬಂಡಿಯ ಒಡೆಯ. ಶರೀರವೇ ಗಾಡಿ, ಬಂಡಿ. ಬಂಡಿಯನ್ನು ನಡೆಸುವವನು ಯಾರು? ಬುದ್ಧಿ. ಅವನು ಕೈಯಲ್ಲಿ ಹಿಡಿದಿರುವ ಹಗ್ಗ ಯಾವುದು? ಮನಸ್ಸು.

ಗಾಡಿಗೆ ಕಟ್ಟಿರುವ ಕುದುರೆಗಳು ನಮ್ಮ ಇಂದ್ರಿಗಳು. ಕಣ್ಣು, ಕಿವಿ, ಮೂಗು, ನಾಲಗೆ ಮೊದಲಾದುವು ತಾನೆ ಶರೀರದ ಕೆಲಸವನ್ನು ನಿರ್ವಹಿಸುವುವು? ಅವಿಲ್ಲದೆ ಶರೀರವೆಂಬ ಗಾಡಿ ಅಡ್ಡಾಡುವುದೇ ಆಗದು. ಇಂದ್ರಿಯಗಳು ತಾವಾಗಿ ಏನನ್ನೂ ಹಿಡಿಯಲಾರವು, ಮಾಡಲಾರವು. ಮನಸ್ಸು ಇಂದ್ರಿಯದೊಂದಿಗೆ ಸೇರಿಕೊಂಡರೆ ಮಾತ್ರ ಅದು ಸಾಧ್ಯ. ಹಾಗೆಂದೆ ಮನಸ್ಸನ್ನು ಹಗ್ಗ, ಕುದುರೆಗಳನ್ನು ಹಿಡಿದೋಡಿಸುವ ಕಡಿವಾಣ ಎನ್ನುವುದು. ಇನ್ನು ಶರೀರವೆಂಬ ಗಾಡಿ ಹರಿದಾಡುವ ಎಡೆ ಯಾವುದು? ಈ ಜಗತ್ತಿನ ವಿಷಯಗಳೆಲ್ಲ ಆ ಎಡೆ. ರೂಪದೊಂದಿಗೆ ಕಣ್ಣು, ಶಬ್ದದೊಂದಿಗೆ ಕಿವಿ, ವಾಸನೆಯೊಂದಿಗೆ ಮೂಗು ಸೇರಿದಾಗ ಇಂದ್ರಿಯವ್ಯಾಪಾರದ ದಾರಿ ಸಿದ್ಧವಾಗುತ್ತದೆ. ಇಂದ್ರಿಯವೆಂಬ ಕುದುರೆ ಓಡುವ ದಾರಿ ಅದು.

ಈ ರೂಪಕದಲ್ಲಿ ಜೀವ, ಬುದ್ಧಿ, ಮನಸ್ಸು, ಇಂದ್ರಿಯಗಳು, ವಿಷಯಗಳು ಎಲ್ಲವೂ ಕೂಡಿದರೆ ಬದುಕು. ದಾರಿಯ ಮೇಲೆ ಗಾಡಿ ಸೊಗಸಾಗಿ ಓಡುತ್ತಿದೆ ಎಂದರೆ ಜಗತ್ತಿನಲ್ಲಿ ನಮ್ಮ ಬದುಕು ನೆಮ್ಮದಿಯಿಂದ ಸಾಗುತ್ತಿದೆ ಎಂದರ್ಥ.

ಇದರಲ್ಲಿ ಬುದ್ಧಿಯ ಜಾಣತನವೇ ಮುಖ್ಯವಾದುದು. ಬಂಡಿ ಎಲ್ಲಿ ಓಡಬೇಕು, ಹೇಗೆ ಸಾಗಬೇಕು, ಕುದುರೆಗಳನ್ನು ಹಿಡಿಯುವುದು, ಬಿಡುವುದು ಹೇಗೆ ನಡೆಯಬೇಕು, ಬಂಡಿ ಮುಟ್ಟಬೇಕಾದ ನೆಲೆ ಯಾವುದು ಇವೆಲ್ಲವನ್ನೂ ಬುದ್ಧಿ ನಿರ್ಧರಿಸಬೇಕು.

ಮನಸ್ಸು ಬುದ್ಧಿಯ ನಿರ್ದೇಶನದಂತೆ ಕೆಲಸ ಮಾಡಬೇಕು. ಬಂಡಿಯನ್ನು ನಡೆಸುವವನ ಕೈಯಲ್ಲಿ ಕಡಿವಾಣವಿದ್ದರೆ ಕುದುರೆಗಳು ದಾರಿಯಲ್ಲೇ ನಡೆದಾವು. ಕುದುರೆಗಳ ವಶದಲ್ಲೇ ಹಗ್ಗವಿದ್ದರೆ ಕುದುರೆಗಳನ್ನು ಹಿಡಿಯುವುದು ಹೇಗೆ? ಹಳ್ಳ-ಕೊಳ್ಳಕ್ಕೆ ಬೀಳುವುದು ತಪ್ಪಿದ್ದಲ್ಲ; ಬಂಡಿ ಮುರಿದು ಬೀಳುವುದೂ ಸಾಧ್ಯ.

ಯೋಗದಲ್ಲಿ ಇಂದ್ರಿಯಜಯ ಎನ್ನುವಾಗ ಮನಸ್ಸನ್ನು ಹಿಡಿತದಲ್ಲಿ ಇರಿಸಿಕೊಳ್ಳುವುದು (ಸಂಯಮ) ಎಂದೇ ಅರ್ಥ.

ಬದುಕಿನ ಬಂಡಿ

ಬದುಕೆಂಬುದೊಂದು ಬಂಡಿ. ನಡೆಯುತ್ತದೆ, ಮುಂದೆ ಸಾಗುತ್ತದೆ.

ಆದರೆ ಅದು ಸರಿಯಾದ ದಾರಿ ಹಿಡಿದು, ನೆಟ್ಟಗೆ ಸಾಗಬೇಕೆಂದರೆ, ನಡೆಸುವಾತನಿಗೆ ವಿವೇಕವಿರಬೇಕು, ಎಚ್ಚರವಿರಬೇಕು. ಬಂಡಿಯ ಪ್ರಯೋಜನವಿರುವುದು ಅದನ್ನು ನಡೆಸುವವನಿಗೆ, ಬಂಡಿಯ ಒಡೆಯನಾದವನಿಗೆ. ಬಂಡಿಯು ಜಡ; ಅದಕ್ಕೆ ಯಾವ ಬಯಕೆ, ಆಸೆ, ಗುರಿ ಇದ್ದೀತು? ಬಂಡಿಯ ಒಡೆಯನು ಚೇತನವುಳ್ಳವನು; ಚೇತನಕ್ಕೆ ಒಳಪಟ್ಟು ಜಡದ ಕೆಲಸ. ಇದನ್ನು ತಿಳಿಸುವ ರೂಪಕವೊಂದಿದೆ. ಜೀವವು ಬಂಡಿಯ ಒಡೆಯ; ಬಂಡಿಯೆಂಬುದು ಶರೀರವೇ. ಈ ಬಂಡಿಗೆ ಹೂಡಿರುವ ಕುದುರೆಗಳು ನಮ್ಮ ಇಂದ್ರಿಯಗಳು. ಇಂದ್ರಿಯಗಳ ನೆರವಿಲ್ಲದೆ ಶರೀರ ಏನು ತಾನೆ ಮಾಡೀತು? ಈ ಕುದುರೆಗಳ ಕಡಿವಾಣ ಹಿಡಿದು ಸರಿಯಾಗಿ ನಡೆಸುವುದು ನಮ್ಮ ಬುದ್ಧಿ; ಬುದ್ಧಿಯೇ ಸಾರಥಿ. ಇನ್ನು ಕುದುರೆಯನ್ನು ಕಟ್ಟಿರುವ ಕಡಿವಾಣವೆಂದರೆ ಯಾವುದು? ಮನಸ್ಸು, ಕುದುರೆಯನ್ನು ಬಂಡಿಗೆ ಕಟ್ಟಿರುವ ಹಗ್ಗ ಅದು. ಇದನ್ನು ಬುದ್ಧಿ ತನ್ನ ಕೈಯಲ್ಲಿ ಹಿಡಿದಿರಬೇಕು. ಬುದ್ಧಿಗೆ ಒಳಪಟ್ಟು ಮನಸ್ಸು ಕೆಲಸ ಮಾಡುತ್ತದೆ; ಮನಸ್ಸಿಗೆ ಒಳಪಟ್ಟು ಇಂದ್ರಿಯಗಳು ಕೆಲಸ ಮಾಡುತ್ತವೆ. ಇಂದ್ರಿಯಗಳೆಂದರೆ ಕುದುರೆಗಳು ತಾನೆ ? ಅವು ಓಡಲು ಹಾದಿ ಬೇಡವೆ? ಯಾವಾಗ ಸಡಿಲ ಬಿಡಬೇಕು, ಯಾವಾಗ ಬಿಗಿಹಿಡಿಯಬೇಕು, ಯಾವ ಕಡೆ ಕುದುರೆಗಳನ್ನು ತಿರುಗಿಸಬೇಕು, ಎಲ್ಲಿ ನಿಲ್ಲಿಸಬೇಕು— ಇವನ್ನೆಲ್ಲ ಬುದ್ಧಿಯೇ ನಿರ್ಧರಿಸಬೇಕು. ಈ ಕುದುರೆಗಳು ಓಡುವ ದಾರಿಯೆಂದರೆ ಹೊರಗಣ ವಿಷಯಗಳೆ. ಯಾವುದರೊಂದು ರೂಪ, ಶಬ್ದ, ಗಂಧ, ಸ್ಪರ್ಶ, ರುಚಿ ಇದ್ದೆಡೆ ಇಂದ್ರಿಯಗಳು ಹರಿಹಾಯುತ್ತವೆ. ಇಂದ್ರಿಯಗಳಿಗೂ ಅವುಗಳ ವಿಷಯಗಳಿಗೂ ಸಹಜವಾದ ನಂಟು ಇರುತ್ತದೆ. ದಾರಿಯಲ್ಲೂ ವಿಷಯಗಳಿರುತ್ತವೆ; ದಾರಿಯ ಹೊರಗೂ ಇರುತ್ತವೆ. ಕುದುರೆಯು ದಾರಿಯಲ್ಲೆ ನಡೆದರೆ ಒಳಿತು; ದಾರಿ ಬಿಟ್ಟು ಹಳ್ಳ-ಕೊಳ್ಳದಲ್ಲಿ ಅಡಿಯಿಟ್ಟರೆ, ಕೊರಕಲಲ್ಲಿ ಜಾರಿದರೆ ಕುದುರೆಗಳಿಗೂ ಗಾಸಿ, ಬಂಡಿಗೂ ಪೆಟ್ಟು, ನಡೆಸುವಾತನಿಗೂ ಕಷ್ಟ. ಇಂಥ ತೊಂದರೆ ಬರದಂತೆ ಸಾರಥಿಯು ಎಚ್ಚರದಿಂದಿರಬೇಡವೆ? ಅವನಿಗಷ್ಟು ವಿವೇಕ ಇರಬೇಕಲ್ಲವೆ? ಬುದ್ಧಿಯ ಕೆಲಸವೇ ಇದೆ.

ಬದುಕಿನ ಬಂಡಿ ಸುಸೂತ್ರವಾಗಿ ನಡೆಯುವುದು ಬುದ್ಧಿವಂತಿಗೆಯಿಂದಲೇ, ತಿಳಿವಳಿಕೆ ತಪ್ಪಿದರೆ ಬಂಡಿ ಹಳ್ಳಕ್ಕೆ ಬೀಳುತ್ತದೆ.

ಬದುಕು-ಬಿಲ್ಲು

ಬಿಲ್ಲನ್ನು ಬಾಗಿಸಿದಾಗಲೇ ಅದರ ಉಪಯೋಗ ತಿಳಿಯುವುದು. ಬಾಗಿಸಲು ಬಾರದ, ಗಟ್ಟಿಯಾಗಿ ನಿಲ್ಲುವ ಕೋಲನ್ನು ಬಿಲ್ಲಾಗಿ ಮಾಡಬಹುದೆ? ಬಾಗಿಸಿದೊಡನೆ ಮುರಿದುಹೋಗುವ ಕೋಲಾದರೂ ಏನು ಪ್ರಯೋಜನ? ಬಾಗಿಯೇ ಇದ್ದರೂ ಆಗದು, ಬಾಗದೆ ಇದ್ದರೂ ಆಗದು. ಬಿಲ್ಲಿಗೆ ತಕ್ಕ ಕೋಲೆಂದರೆ ಬೇಕಾದಾಗ ಬಾಗಬೇಕು. ಬೇಡದಿದ್ದಾಗ ನೆಟ್ಟಗೆ ನಿಲ್ಲಬೇಕು. ಅಂಥ ಕೋಲನ್ನು ಪರೀಕ್ಷೆ ಮಾಡಿ ಆಯ್ದುಕೊಳ್ಳುವರಷ್ಟೆ? ಪರೀಕ್ಷೆ ಮಾಡುವಾಗಲೂ ಎಚ್ಚರದಿಂದಿರಬೇಕು. ಎಷ್ಟು ಬಾಗೀತು ಎಂದು ನೋಡುವಾಗ ಮಿತಿಮೀರಿ ಬಾಗಿಸಿದರೆ ಅದು ಮುರಿದೇ ಹೋದೀತು! ಒಂದು ಒಳ್ಳೆಯ ಕೋಲು ಹಾಳಾಯಿತು. ಬದುಕೇ ಒಂದು ಬಿಲ್ಲು, ನಾವೆಲ್ಲರೂ ಅದಕ್ಕೆ ತಕ್ಕ ಕೋಲುಗಳೇ; ಆದರೆ ನಮ್ಮಲ್ಲಿ ತಾರತಮ್ಯವಿದೆ. ಕೆಲವರು ಅತ್ಯುತ್ತಮ ಕೋಲುಗಳು. ಕೆಲವರು ಅಲ್ಲ. ಎಷ್ಟು ಯೋಗ್ಯತೆವುಳ್ಳವರೆಂದು ಪರೀಕ್ಷೆ ನಡೆಯುತ್ತಲೇ ಇದೆಯೆನ್ನಿ. ಹಲವರು ಪರೀಕ್ಷೆಯ ಹಂತದಲ್ಲೇ ಬಿದ್ದುಹೋಗುತ್ತಾರೆ! ಕೋಲು ಬಾಗುವುದು ಎನ್ನುವುದನ್ನು ಹಣ ಸಂಪಾದಿಸುವುದು ಎಂದಿಟ್ಟುಕೊಳ್ಳಿ, ಹಣವಿಲ್ಲದೆ ಬದುಕುವುದು ಹೇಗೆ? ಎಂಥವರಿಗಾದರೂ ಹಣ ಬೇಕೇ ಬೇಕು. ಅದೇನು ತಾನಾಗಿ ಬರುವುದೂ ಇಲ್ಲ, ತಾನಾಗಿ ಬಂದದ್ದಕ್ಕೆ ಬೆಲೆಯೂ ಇಲ್ಲ; ಉಳಿಗಾಲವೂ ಇಲ್ಲ. ನಾವು ಕಷ್ಟಪಟ್ಟು ಪಡೆದುಕೊಂಡ ಹಣವೇ ಬದುಕಿಗೆ ಬರುವುದು. ಕಷ್ಟಪಡುವಾಗ ಬದುಕು ಬಾಗುತ್ತದೆ, ಬೀಗುತ್ತದೆ.

ಹಣದ ಬಯಕೆ ಬದುಕಿನಲ್ಲಿ ಇರಬೇಕಾದುದೇ. ಆದರೆ ಅದು ಹಣದ ಗೀಳಾಗ ಬಾರದು. ಅದು ಗೀಳೆಂದಾಗಿಬಿಟ್ಟರೆ ಅದರಿಂದ ಗೋಳು ತಪ್ಪಿದ್ದಲ್ಲ! ಶರೀರ ವನ್ನಾಗಲೀ, ಮನಸ್ಸನ್ನಾಗಲಿ, ಮನೆಯವರನ್ನಾಗಲಿ, ಪರಿಜನರನ್ನಾಗಲಿ ತೀರ ಬಳಲಿಸ ಬಾರದು. ತಾನು ಬಾಗುವಾಗ ಬಾಗಬೇಕು; ನೆಟ್ಟಗಿರಬೇಕಾದಾಗ ನೆಟ್ಟಗೇ ಇರಬೇಕು. ಅದೀಗ ಸರಿಯಾದ ಬಿಲ್ಲಿನಂತೆ ಬದುಕು.

ನಮ್ಮ ಸುತ್ತಮುತ್ತ ನೋಡಿದಾಗ, ಹಲವರು ಬಾಗಬೇಕಾದಾಗ ನೆಟ್ಟಗಿರುತ್ತಾರೆ; ನೆಟ್ಟಗಿರಬೇಕಾದಾಗ ಬಾಗುತ್ತಾರೆ; ಅವರಿಗೆ ಬದುಕಿನ ಹದ ತಿಳಿಯದು; ಬಿಲ್ಲು ಅವರ ಕೈಲಿದ್ದರೂ ಅದನ್ನು ಹೆದೆಯೇರಿಸುವುದು ಹೇಗೆಂದು ಅವರು ಅರಿಯರು.

ಅವರ ಬದುಕೆಲ್ಲ ಕೋಲಾಗಿಯೇ ಕಳೆಯುತ್ತದೆ; ಬಿಲ್ಲಾಗಿ ಮಾರ್ಪಡುವುದೇ ಇಲ್ಲ!

ಬದುಕು-ಕಲೆ

ಕಲೆಗಾಗಿ ಕಲೆ ಎಂದವರುಂಟು. ಬದುಕಿಗಾಗಿ ಕಲೆ ಎನ್ನುವವರಂತೂ ಇದ್ದೇ ಇರುತ್ತಾರೆ: ಕಲೆಗಾಗಿಯೇ ಬದುಕು ಎನ್ನುವವರೂ ಇಲ್ಲದೇ ಇಲ್ಲ. ಆದರೆ ಬದುಕೇ ಒಂದು ಕಲೆ ಎನ್ನುವವರು ವಿರಳ. ಕಲೆಯೆನ್ನುವ ಮಾತಿಗೆ ಮೂಲದಲ್ಲಿ, 'ಇರುವುದನ್ನು ಹೆಚ್ಚಿಸುವುದು' ಎಂಬರ್ಥವಿದೆ. ಮಾತನಾಡಬಲ್ಲವನು ಹಾಡುವುದಾದರೆ, ನಡೆದಾಡಬಲ್ಲವನು ಕುಣಿಯುವುದಾದರೆ, ಕೈಯಾಡಿಸಬಲ್ಲವನು ಶಿಲ್ಪ ಕಡೆಯುವುದಾದರೆ, ಬೆರಳಾಡಿಸಬಲ್ಲವನು ಚಿತ್ರ ಬಿಡಿಸುವುದಾದರೆ ಕಲೆಯಾಗುತ್ತದೆ.

ಬದುಕಿಗೆ ಬೇಕಾದ ಮಾತು, ನಡಿಗೆ, ಕೈಯಾಟ, ಬೆರಳಾಟಗಳೆ ಅಗತ್ಯ ಮೀರಿ ಆದರೆ ಔಚಿತ್ಯವನ್ನು ಮೀರದೆ, ಹೆಚ್ಚಿದರೆ ಕಲೆ ಕಾಣಿಸಿಕೊಳ್ಳುತ್ತದೆ. ಅಗತ್ಯವನ್ನು ಮೀರಿದರೆ ಮಾತ್ರ ಸಾಲದು. ಚೆಲುವಿನ ಕಡೆ ಕಣ್ಣೂ ಇರಬೇಕು. ಬದುಕಿನ ಯಾವುದೇ ಪ್ರಕಾರವಾಗಲಿ, ವಿವರವಾಗಲೀ ಕಲೆಯ ಮಟ್ಟವನ್ನು ಮುಟ್ಟಬಹುದು. ಕಲೆಗೆ ವಸ್ತು ಮುಖ್ಯವಲ್ಲ. ಸಂವಿಧಾನ ಮುಖ್ಯ. ಊಟವೂ ಕಲೆಯಾಗಬಲ್ಲುದು. ಕಲೆಯಲ್ಲಿ ಎದ್ದು ನಿಲ್ಲುವುದೆಂದರೆ ಚೆಲುವನ್ನು ಕಾಣುವ ಕಣ್ಣು, ಮಾಡುವ ಮಾಟ. ಕಾಣುವ ಕಣ್ಣಿದ್ದವನು ರಸಿಕ, ಸಹೃದಯ. ಮಾಡಬಲ್ಲವನು ಕವಿಯೋ, ಶಿಲ್ಪಿಯೋ, ಚಿತ್ರಗಾರನೋ, ನರ್ತಕನೋ ಆದಾನು. ಕಾಣುವವನಿಗೆ ಮಾಡುವ ಬಲ್ಮೆ ಇಲ್ಲದಿರಬಹುದು. ಆದರೆ ಮಾಡುವವನಿಗೆ ಕಾಣುವ ಕಣ್ಣಂತೂ ಇರಲೇಬೇಕು.

ಚೆಲುವಿನ ಗುಣ ಸಂತೋಷವನ್ನು ಒದಗಿಸುವುದು. ತಾನು ಕಂಡುಕೊಂಡ ಚೆಲುವನ್ನು, ಅನುಭವಿಸಿದ ಸಂತೋಷವನ್ನು ಹೊರಹೊಮ್ಮಿಸಿ ಬೇರೆಯವರೆದುರು ಕಾಣಿಸಿದರೆ ಕಲೆಯಾಗುತ್ತದೆ. ಅದನ್ನು ಬೇರೆಯವರೊಂದಿಗೆ ಹಂಚಿಕೊಂಡಾಗಲೇ ಅದರ ಸಾರ್ಥಕತೆ.

ಸಾರ್ಥಕತೆಯಿಂದ ಚೆಲುವೂ ಹೆಚ್ಚುತ್ತದೆ. ಸಂತೋಷವೂ ಹೆಚ್ಚುತ್ತದೆ. ತನ್ನ ಸಂತೋಷವನ್ನೋ ಪ್ರಯೋಜನವನ್ನೋ ಮೀರಿ, ಸುತ್ತಮುತ್ತಲವರ ಸಂತೋಷ, ಪ್ರಯೋಜನಗಳನ್ನು ಸಾಧಿಸುವುದಾದರೆ ಅದರಲ್ಲಿ ಹೆಚ್ಚುಗಾರಿಕೆಯಿದೆ.

ಬದುಕೇ ಒಂದು ಕಲೆಯಾಗುವುದು ಈ ಬಗೆಯ ಹೆಚ್ಚುಗಾರಿಕೆಯಿಂದ.

ತವೊ ಎಂಬ ದಾರಿ

ಚೀಣೀಯರಲ್ಲಿ ತವೊ ಎಂಬುದೊಂದು ಮಾತಿದೆ. ಅದನ್ನು ಮಾತು ಎನ್ನುವುದಕ್ಕಿಂತ ಕಲ್ಪನೆ ಎಂದರೆ ಹೆಚ್ಚು ಸರಿಯೋ ಏನೋ. ಕಲ್ಪನೆಯೆಂದರೂ ಯಾರೊಬ್ಬರ ಅಥವಾ ಕೆಲವರ ಕಲ್ಪನೆಯೆಂದಲ್ಲ. ಎಲ್ಲ ಜನರ ಒಡಲೊಳಗೆ ಅಡಗಿರುವ ಕಲ್ಪನೆ ಅದು-ನಮ್ಮಲ್ಲಿ ಧರ್ಮ ಎಂಬುದಿರುವಂತೆ.

ಇದು ಅಲ್ಲಿ ಎಲ್ಲರ ಅರಿವಿನಲ್ಲುಂಟು ಎಂದೇನು ಅಲ್ಲ. ಅವರ ನಡೆ-ನುಡಿಗಳಲ್ಲಿ ಮತ್ತೆ ಮತ್ತೆ ತಲೆಯೆತ್ತಿಕೊಂಡು ತೋರಿಕೊಳ್ಳುತ್ತದೆ. ಸಂಸ್ಕೃತಿಯ ಮೇಲಾಟದಲ್ಲಿ ತೊಳಲುತ್ತಿರುವವರ ಪಾಲಿಗೆ ಇದು ಅಷ್ಟಾಗಿ ಇರದು. ಆದರೆ ಜನಸಾಮಾನ್ಯರ ಬದುಕಿನಲ್ಲಿ ಇದರ ಪ್ರಭಾವ ಬಹು ಕಾಲದಿಂದ ಒದಗಿಬಂದಿದೆ. ನಮ್ಮಲ್ಲಿ ಧರ್ಮ ಇರುವಂತೆಯೇ ಎನ್ನಿ! ತವೊ ಎಂಬ ಮಾತಿಗೆ ಚೀಣೀ ಭಾಷೆಯಲ್ಲೂ ಬೇರೊಂದು ಸರಿಸಮಾನವಾದ ಮಾತಿಲ್ಲ; ಎಂದಮೇಲೆ ಇತರ ಭಾಷೆಗಳಲ್ಲಿ ಹೇಗೆ ಇದ್ದೀತು? ಅದನ್ನು 'ದಾರಿ', 'ಸುಳುಹಾದಿ', 'ಬದುಕಿನ ಬಗೆ', 'ವಸ್ತುಸ್ಥಿತಿ', 'ಪರಮಾರ್ಥ' ಎಂದೆಲ್ಲ ಬಣ್ಣಿಸುವುದಿದೆ. ಆದರೆ ಇವೆಲ್ಲ ತವೋದ ತಾತ್ಪರ್ಯವನ್ನು ನೇರವಾಗಿ ತಿಳಿಸಲಾರವು. ಆದರೆ ತವೋದ ದಾರಿ ಕತ್ತಲೆಯಲ್ಲಿರುವ ದಾರಿ ಎಂದು ತವೋಪಂಥದವರ ವಿವರಣೆ. ಬದುಕಿನ ಬೆಳಕಿನಲ್ಲಿ ಆ ದಾರಿ ಕಾಣದು; ಕಣ್ಣು ತೆರೆದಿದ್ದಾಗಲೂ ಅದನ್ನು ಅರಿಯ ಲಾರೆವು. ನಮ್ಮ ಬುದ್ಧಿಗೆ ನಿಲುಕದ ಆ ಸುಳುಹಾದಿಯ ಮೇಲೆ ನಡೆದುಹೋಗುವ ಹಾಗಿಲ್ಲ. ನಾವು ಇರುವುದೇ ಆ ದಾರಿ! ನಮ್ಮ ಪ್ರಾಣ ನಿಂತಿರುವುದೇ, ನಡೆಯು ತ್ತಿರುವುದೇ ಆ ಸುಳುಹಾದಿಯನ್ನು ಹಿಡಿದು! ತವೊ ತತ್ತ್ವವನ್ನು ಅರಿತವರು ಇಲ್ಲದೆ ಇಲ್ಲ. ಆದರೆ ಅವರು ಇತರರೆದುರು ತೋರಿಕೊಳ್ಳುವುದಿಲ್ಲ; ಇತರರಂತೆ ಕೆಲಸ ಹಚ್ಚಿಕೊಳ್ಳುವುದಿಲ್ಲ, ನಮ್ಮ ಉದ್ಯೋಗ ಉದ್ವೇಗಗಳು ಅವರಿಗಿಲ್ಲ; ಆಸೆ, ಆತಂಕ ಗಳೂ ಅವರನ್ನು ಕಾಡುವುದಿಲ್ಲ. ಒಂಟಿಯಾಗಿರುವುದೆಂದರೆ ಅವರಿಗೆ ಮೆಚ್ಚು. ಬಡತನಕ್ಕೆ ಮನಸಾರೆ ಒಲಿಯುವವರು. ದುಡಿದು ನೆಮ್ಮದಿಯನ್ನು ಕೆಡಿಸಿಕೊಳ್ಳಲೇಕೆ? ಹಗರಣದಲ್ಲಿ ಸಿಕ್ಕು ಪೇಚಾಡಲೇಕೆ? ಸಿರಿವಂತರ ತಲೆಬೇನೆ ಅವರಿಗೇ ಇರಲಿ! ಕಾಡಿನ ಗಿಡ ಬೆಳೆದಂತೆ ಅವರ ಬದುಕು; ಹಕ್ಕಿ ಹಾರಿದಂತೆ ಅವರ ಇರವು.

ಹಾರುವ ಹಕ್ಕಿ ಹಿಡಿಯುವ ಹಾದಿ ಹಕ್ಕಿಗೇ ಗೊತ್ತು, ನೆಲದ ಮೇಲೆ ನಡೆಯುವ ಮಂದಿ ಅದನ್ನು ಹೇಗೆ ಅರಿತಾರು?

ನೆಲ-ಮುಗಿಲು

'ನೆಲ ನೋಡಿ ನಡಿ' ಎಂದು ಹೇಳುವುದುಂಟು.

ಆಕಾಶ ನೋಡುತ್ತ ನಡೆದರೆ ಎಡವಬಹುದು, ಮುಗ್ಗರಿಸಬಹುದು, ಹಳ್ಳಕ್ಕೆ ಬೀಳಬಹುದು. ದಾರಿಯನ್ನು ಅರಿತುಕೊಳ್ಳದೆ ನಡೆಯುವುದು ಹೇಗೆ?

ಬದುಕಿಗೆ ಅನ್ವಯಿಸುವುದು ಉದ್ದೇಶ. ದಿನನಿತ್ಯದ ಅಗತ್ಯಗಳ, ಆತಂಕಗಳ ಕಡೆ ಕಣ್ಣಿರಬೇಕು. ತನ್ನ ಇತಿ-ಮಿತಿಯೇನು, ಸಾಧ್ಯಾಸಾಧ್ಯತೆಗಳೇನು ಎಂಬುದರ ಕಡೆ ಗಮನವಿರಬೇಕು. ಬದುಕಿನಲ್ಲಿ ಎಚ್ಚರವಿರಬೇಕಾದುದೇನೋ ಸರಿಯೆ. ನಡೆಯುವಾಗ ನೆಲವನ್ನು ನೋಡಬೇಕೆಂಬುದೂ ಸರಿಯೆ. ಆದರೆ ಈ ಎಚ್ಚರಿಕೆಯೆ ಒಂದು ಗೀಳಾಗಿ ಬಿಟ್ಟರೆ ಕಷ್ಟ; ಬದುಕು ಬರಡಾದೀತು, ಹೊರೆಯೆನಿಸೀತು. ನೆಲವನ್ನೇ ನೋಡುತ್ತ ನಡೆಯುವವನಿಗೆ ಮೇಲಿನ ಆಕಾಶದ ಸೊಗಸು, ದೂರದ ಬೆಟ್ಟದ ಚೆಲುವು, ಪಕ್ಕದ ಗಿಡ -ಮರಗಳ ಐಸಿರಿ ಇವೆಲ್ಲ ಕಾಣಲಾರವು. ಅವನು ಎಡವದೆ ಇದ್ದಾನು, ಮುಗ್ಗರಿಸದೆ ಇದ್ದಾನು, ಹಳ್ಳಕ್ಕೆ ಬೀಳದೆ ಇದ್ದಾನು, ಆದರೆ ಇಷ್ಟಾಗಿಬಿಟ್ಟರೆ ಸಾಕೆ? ನಡೆಯುವ ಕಾಲೇನೋ ನೆಲದ ಮೇಲಿರಬೇಕು; ಆಗಾಗ ಕಣ್ಣೂ ಅತ್ತ ಹರಿದರಾಯಿತು. ತಲೆ ಇರಬೇಕಾದುದು ಮೇಲೆ ತಾನೆ ? ಆಕಾಶದೊಡನೆ ನಮ್ಮ ನಂಟಿಲ್ಲವೆ? ಬೆಟ್ಟವಾಗಲಿ ಗಿಡಮರಗಳಾಗಲಿ ನಮಗೆ ಬೇಡವೆ?

ಕಣ್ಣು ನೆಲದ ಮೇಲೆ ದಿಟ್ಟಿಸಿ ಒರಗಬೇಕಾದುದಿಲ್ಲ; ನೋಟ ಸುತ್ತಲೂ ಹರಿದಾಡಬೇಕು. ಹಿಂದೇನಿದೆ, ಮುಂದೇನು ಬಂದೀತು ಎಂಬ ಪರಿವೆಯಿಲ್ಲದಿದ್ದರೆ ಹೇಗೆ? ಬದುಕಿನಲ್ಲೂ ಇದು ದಿಟವೆ. ಅಗತ್ಯಗಳ ಕಡೆಗೇ ನಮ್ಮ ಗಮನವೆಲ್ಲ ಇದ್ದಿತಾದರೆ ಆದರ್ಶಗಳ ಗತಿಯೇನು? ಹೊಟ್ಟೆಬಟ್ಟೆಗಳದ್ದೇ ಚಿಂತೆಯಾಗಿಬಿಟ್ಟರೆ 'ಸುಖಸಂಕಥಾವಿನೋದ' ಎಲ್ಲಿಯದು? ಬದುಕೆಂದರೆ ಉಸಿರಾಡುವುದಷ್ಟೆ ಎಂದು ಹೇಳಬಹುದೆ? ಬದುಕು ನಡಿಗೆಯೆಂದಾದರೆ ನೆಲವನ್ನೂ ನೋಡಬೇಕು, ಮುಗಿಲನ್ನೂ ನೋಡಬೇಕು; ಕಾಲಿಗೆ ಆಯವೂ ದೊರಕಬೇಕು, ತಲೆಗೆ ಹುರುಪೂ ಇರಬೇಕು.

ನಡೆಯುವ ದಾರಿ ಸವೆದ ಮೇಲೆ ಕಾಣಿಸಿಕೊಳ್ಳುವ ತಾಣ ಯಾವುದು ಎಂಬ ಅರಿವಿದ್ದರೆ ನಡಗೆಯಲ್ಲಿ ಲವಲವಿಕೆ ಬಂದೀತು. ನೆಲದಿಂದ ಕಾಲನ್ನು ಮೇಲೆತ್ತದೆ ನಡೆಯುವುದಾದರೂ ಹೇಗೆ?

ಗಳಿಗೆಯ ಬದುಕು

ಮಕ್ಕಳು ಆರೋಗ್ಯವಾಗಿದ್ದರೆ ಖುಷಿಯಾಗಿರುತ್ತಾರೆ.

ಕಿಲಿಕಿಲಿ ನಗುತ್ತ, ಅಳಿಲಂತೆ ಹಾರಾಡುತ್ತ, ಗಾಳಿಯಂತೆ ಸುಳಿದಾಡುತ್ತ. ಕೂತೆಡೆ ಕೂಡದೆ, ನಿಂತೆಡೆ ನಿಲ್ಲದೆ ಓಡಿಯಾಡುವುದು ಮಕ್ಕಳ ಪ್ರವೃತ್ತಿ. ದೊಡ್ಡವರು ಯಾಕೆ ಹೀಗಿರುವುದಿಲ್ಲ ಎಂದು ಒಮ್ಮೊಮ್ಮೆ ಅನಿಸೀತು. ಆರೋಗ್ಯವಿದ್ದರೂ ಈ ಬಗೆಯ ಖುಷಿ ಕಾಣುವುದಿಲ್ಲವಲ್ಲ? ಹೀಗೆ ನಿರಾಳವಾಗಿರುವುದಿಲ್ಲವಲ್ಲ? ಇದಕ್ಕೆ ಕಾರಣವೂ ತಟ್ಟನೆ ಹೊಳೆದೀತು. ಮಕ್ಕಳಿಗೆ ಏನು ಯೋಚನೆ? ಯಾವ ಹೊಣೆ? ಯಾವ ಸಮಸ್ಯೆ ಅವರನ್ನು ಕಾಡುತ್ತದೆ? ಆಟವಷ್ಟೆ ಅವರ ಉದ್ಯೋಗ, ಹಸಿದಾಗ ಊಟ; ಇನ್ನೇನಿಲ್ಲದಿದ್ದರೆ ಕಣ್ಣುತುಂಬ ನಿದ್ರೆ! ದೊಡ್ಡವರಿಗಾದರೆ ಬದುಕೊಂದು ಹಗರಣ; ಹತ್ತಾರು ಸಮಸ್ಯೆಗಳು, ನೂರಾರು ಯೋಚನೆಗಳು, ಸಾವಿರಾರು ಅಡಚಣೆಗಳು, ತೂಗುಹಗ್ಗದ ಮೇಲೆ ನಡೆಯುವಂತೆ ದಿನದಿನದ ಬದುಕು. ಇದಕ್ಕೂ ಒಂದು ಕಾರಣ ವಿದೆಯೆಂದು ನಮಗೆ ತಟ್ಟನೆ ಹೊಳೆಯುವುದಿಲ್ಲ. ದೊಡ್ಡವರ ಧೋರಣೆಗೂ ಮಕ್ಕಳ ಧೋರಣೆಗೂ ಇರುವ ಮುಖ್ಯ ಅಂತರವೆಂದರೆ ಇದು - ಮಕ್ಕಳ ಬದುಕೆಲ್ಲ ದಿನದಿನದ್ದು; ಆ ಗಳಿಗೆಯಷ್ಟೆ ಅವರ ಗಮನವನ್ನು ಸೆಳೆಯುವುದು. ಹಿಂದಿನ ನೆನಪು, ಮುಂದಿನ ಯೋಚನೆ ಅವರ ಪಾಲಿಗೆ ಇರದು. ವರ್ತಮಾನ ಕಾಲವೊಂದೆ ಅವರಿಗೆ. ದೊಡ್ಡವರ ಪಾಡು ಹೀಗಿಲ್ಲ, ಹಿಂದೆ ನಡೆದುದರ ನೆನಪು ಬೆಂಬಿಡದೆ ಕಾಡುತ್ತದೆ; ಮುಂದೆ ಏನಾಗಬಹುದು, ಏನಾಗಬೇಕು ಎಂಬುದರ ಆಲೋಚನೆ ಈಗಲೇ ಬಂದಡರುತ್ತದೆ. ಭೂತ-ಭವಿಷ್ಯತ್ತುಗಳ ನಡುವೆ ವರ್ತಮಾನ ಸೊರಗುತ್ತದೆ. ಈಗಿನ ಅಗತ್ಯವೇನು ಎಂಬುದನ್ನಷ್ಟೆ ಗಮನಿಸದೆ ಹಿಂದೆ, ಮುಂದೆ ಎಂಬ ಇಬ್ಭಾಗದ ಸೆಣಸಾಟದಲ್ಲಿ 'ಈಗ' ಎಂಬುದು ಇದ್ದರೂ ಇಲ್ಲದಂತೆ! ಭೂತದಿಂದ ವರ್ತಮಾನ, ವರ್ತಮಾನದಿಂದ ಭವಿಷ್ಯ-ಎಂಬುದೇನೋ ಕಾಲಮಾನದ ದೃಷ್ಟಿಯಿಂದ ಸರಿಯೆ. ಪ್ರಸಂಗಗಳ ನಡಾವಳಿಯ ದೃಷ್ಟಿಯಿಂದಲೂ ಸರಿಯಿದ್ದೀತು. ಆದರೆ ನಮ್ಮ ಬದುಕು ದಿನದಿನದ್ದೆ. ನೆನ್ನೆ ಈ ದಿನ ಇರದು, ಇಂದು ನಾಳೆಯಿರದು.

ಬದುಕೆಲ್ಲವೂ 'ಈಗ' ಎಂಬುದರ ನೆಲೆಯಲ್ಲೆ ನಿಂತಿರುವುದು. ಹಿಂದೆ ಎಂಬುದು ಸತ್ತಿತು; ಮುಂದೆಯೆಂಬುದು ಇನ್ನೂ ಹುಟ್ಟಿಲ್ಲ.

ಮಕ್ಕಳ ಬದುಕು ಆಯಾ ಗಳಿಗೆಗೆ ಮಾತ್ರ ಸಲ್ಲುವುದರಿಂದಲೆ ಅವರ ಸಂತೋಷ.

ಮನುಷ್ಯರಲ್ಲಿ ಮೂರು ತೆರ

ಸುಂದರ ಪಾಂಡ್ಯನೆಂಬ ಪ್ರಾಚೀನ ಸಂಸ್ಕೃತ ಕವಿ ಕೆಲವು ಆರ್ಯೆಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಒಂದರ ಪೂರ್ವಾರ್ಧ ಮಾತ್ರ ದೊರೆತಿದೆ.

ಅದರಲ್ಲಿ ಮನುಷ್ಯರನ್ನು ಉತ್ತಮರು, ಮಧ್ಯಮರು, ಅಧಮರು ಎಂದು ಮೂರು ತೆರನಾಗಿ ವಿಭಾಗ ಮಾಡಿ, ಕ್ರಮವಾಗಿ ಹಲಸಿನಮರ (ಪನಸ), ಮಾವಿನ ಮರ (ಆಮ್ರ), ಪಾದರಿ ಮರ (ಪಾಟಲ)ಗಳಿಗೆ ಅವರನ್ನು ಹೋಲಿಸಿದ್ದಾನೆ. ವಿಭಜನೆಯ ಹಿನ್ನೆಲೆಯಾಗಿ ಕವಿಯ ಮನಸ್ಸಿನಲ್ಲಿ ಏನಿದ್ದಿತೋ ಅದು ತಿಳಿದುಬಂದಿಲ್ಲ; ಆರ್ಯೆಯ ಉತ್ತರಾರ್ಧ ದೊರೆತಿದ್ದರೆ ತಿಳಿಯುತ್ತಿತ್ತು. ಈಗ ಪೂರ್ವಾರ್ಧ ಮಟ್ಟಿಗೆ ಇರುವುದರಿಂದ, ಒಂದು ಸಮಸ್ಯಾಪೂರಣದ ಸಂದರ್ಭ ಒದಗಿ ಬಂದಿದೆ. ಬಹುಶಃ ಅದರ ತಾತ್ಪರ್ಯ ಹೀಗಿರಬಹುದು. ಹಲಸಿನ ಮರದ ಕೊಡುಗೆ ಹಲಸಿನ ಹಣ್ಣು, ಹೊರಗೆ ಅದರ ಆಕರ್ಷಣೆಯೇನೂ ಇರದು. ಮೇಲಾಗಿ ಮುಳ್ಳು ಮುಳ್ಳು; ಮುಟ್ಟುವುದೇ ಕಷ್ಟ; ಹಿಡಿಯುವುದು ಕಷ್ಟ; ಶ್ರಮವಹಿಸಿ ಬಗೆದಾಗಲೆ ಒಳಗಿನ ಹಣ್ಣು ಸಿಗುವುದು. ಹಣ್ಣು ರುಚಿಯೂ ಹೌದು, ಹಿತವೂ ಹೌದು. ಉತ್ತಮರಾದ ಜನ ಹೀಗೆಯೇ ಇರುತ್ತಾರೆ. ಅವರ ಸದ್ಗುಣಗಳು ಬೇಗ ಪ್ರಕಟವಾಗುವುದಿಲ್ಲ; ಹೊರಗಿನ ನೋಟಕ್ಕೆ ಗಡುಸೆಂದು ಕಾಣುವುದೂ ಉಂಟು. ಒಡನಾಟವಾದ ಮೇಲೇ ಅವರ ಹಿರಿಮೆಯ ಅರಿವಾಗುವುದು. ಮಾವಿನ ಮರದ ಸಾರ್ಥಕತೆ ಇರುವುದು ಮಾವಿನ ಹಣ್ಣಿನಲ್ಲಿ, ಹಣ್ಣು ಬಿಡುವ ಮೊದಲು ಚಿಗುರು ಚೆಲುವು; ಅದರ ಆಕರ್ಷಣೆ ಹೆಚ್ಚಿನದು. ಹಣ್ಣಿನ ಬಣ್ಣ, ವಾಸನೆ, ಗಾತ್ರ ಎಲ್ಲವೂ ಹಣ್ಣಿನ ಗುಣವನ್ನು ಎತ್ತಿ ಸಾರುತ್ತದೆ. ಹಣ್ಣು ರುಚಿಯೂ ಹೌದು, ಹಿತವೂ ಹೌದು. ಮಧ್ಯಮರಾದ ಜನ ಹೀಗೆಯೇ. ಅವರ ಗುಣಗಳು ಒಡನೆಯೇ ಪ್ರಕಟವಾಗುತ್ತವೆ. ಅದನ್ನು ಒಳಗೇ ಇರಿಸಿಕೊಳ್ಳುವ ತವಕವಾಗಲಿ ವಿನಯವಾಗಲಿ ಇರುವುದಿಲ್ಲ. ಮತ್ತೆ ಅವರಿಂದ ಪ್ರಯೋಜನ ಪಡೆದುಕೊಳ್ಳಲು ಇತರರು ಕಷ್ಟ ಪಡಬೇಕಾಗಿಯೂ ಇಲ್ಲ.

ಇನ್ನು ಅಧಮರಾದ ಜನ ತುತ್ತೂರಿಯ ಆಕಾರದ ನಸುಗೆಂಪು ಹೂವಿನ ಮರದಂತೆ. ಅದರಲ್ಲೇನು ಹಣ್ಣಿಲ್ಲ, ಕಾಯಿಲ್ಲ; ಅಧಮರಾದ ಜನರಿಂದ ಒದಗ ಬಹುದಾದ ಪ್ರಯೋಜನವೇನೂ ಇರದು. ಆದರೂ ಹೂವಿನ ಬಣ್ಣ, ಆಕಾರ ತಟ್ಟನೆ ಮನ ಸೆಳೆಯುತ್ತವೆ. ಹೂವಿಗೆ ವಾಸನೆಯೂ ಇಲ್ಲ, ಮುಡಿಯಲೂ ಬಾರದು. ಬೇಗ ಗಿಡದಿಂದ ಬಿದ್ದು ಕಸವಾಗುತ್ತದೆ. ಅಧಮರಾದ ಜನಕ್ಕೆ ಆಡಂಬರ ಹೆಚ್ಚು, ಸತ್ತ್ವ ಕಡಮೆ.

ಸಿಹಿ-ಕಹಿ

ಬಗೆಬಗೆಯ ಜನರು. ಆದರೆ ಇವರಲ್ಲಿ ಮುಖ್ಯವಾಗಿ ಎರಡು ರೀತಿಯ ಜನ ಇರುತ್ತಾರೆ.

ಒಂದು ರೀತಿಯ ಜನ ಗೊಣಗುಟ್ಟುತ್ತಲೆ ಇರುತ್ತಾರೆ; ಕಳವಳಪಡುತ್ತಲೆ ಇರುತ್ತಾರೆ. ಸಣ್ಣ ಸಣ್ಣ ವಿಚಾರಕ್ಕೆಲ್ಲ ಸಿಡಿದೇಳುತ್ತಾರೆ. ತಾವು ದೊಡ್ಡವರು. ತಮಗೆ ಸರಿಯಾದ ಆದರ ದೊರಕಲಿಲ್ಲ ಎಂದು ದುಗುಡ. ತಾನಿಷ್ಟು ತ್ಯಾಗ ಮಾಡಿ ಸೇವೆ ಸಲ್ಲಿಸಿದ್ದೇನೆ. ಕೇಳುವವರೆ ಇಲ್ಲವಲ್ಲ ಎಂಬ ಅಸಮಾಧಾನ. ಬೇರೆ ಯಾರಾಗಲಿ ಮೇಲಕ್ಕೆ ಬಂದರೆ, ಹೆಸರು ಮಾಡಿಕೊಂಡರೆ ಇವರ ಅಸೂಯೆ ಸಿದ್ಧವೆ; ತಮಗೆ ಅನ್ಯಾಯವಾಯಿತು ಎಂಬ ಅಬ್ಬರವೂ ಕೆಲವೊಮ್ಮೆ ಇದ್ದದ್ದೆ. ಕಾಲ ಕೆಟ್ಟಿತು; ನ್ಯಾಯಾನ್ಯಾಯಗಳ ವಿವೇಕ ಮರೆಯಾಯಿತು; ಯೋಗ್ಯರ ತಿರಸ್ಕಾರ, ಅಯೋಗ್ಯರಿಗೆ ಪುರಸ್ಕಾರಗಳೆ ಹೆಚ್ಚುತ್ತಿವೆ; ನೀತಿ ನಿಯಮಗಳ ಎಣಿಕೆ ಯಾರಿಗೂ ಬೇಡವಾಯಿತು ಎಂದು ಬೊಬ್ಬೆಯಿಡುವರು. ಇನ್ನೊಂದು ರೀತಿಯ ಜನ ಹೀಗೆ ಮಾಡದೆ ತಮ್ಮ ಪಾಡಿಗೆ ತಾವು ನೆಮ್ಮದಿಯಿಂದಿರುವುದೆ ಮುಖ್ಯವೆನ್ನುವರು. ಕಹಿಯನ್ನು ಬಿಟ್ಟು ಸಿಹಿಯನ್ನು ಮಾತ್ರ ನೋಡುವರು. ಬಂದದ್ದು ಬರಲಿ; ಬಾರದಿದ್ದುದರ ಬಯಕೆ ಬೇಡ ಎನ್ನುವವರು ಅವರು. ಕಷ್ಟವೊ, ಸುಖವೊ, ಲಾಭವೊ, ಹಾನಿಯೊ ಇದನ್ನು ಹೆಚ್ಚಾಗಿ ತಲೆಗೇರಿಸಿಕೊಳ್ಳುವವರಲ್ಲ. ಸುಖ ಬಂದಾಗ ಮಿತಿ ಮೀರಿ ಹಿಗ್ಗದೆ. ಕಷ್ಟ ಬಂದಾಗ ಕೊರಗದೆ, ಏನೋ ಬಂದಿತು ಅನುಭವಿಸೋಣ ಎನ್ನುವ ಧೋರಣೆ ಅವರದ್ದು, ಸಣ್ಣಸಣ್ಣದಕ್ಕೆಲ್ಲ ತಲೆ ಕೆಡಿಸಿಕೊಳ್ಳುವವರಲ್ಲ. ಯಾವುದಾದರೂ ಒಳ್ಳೆಯ ಕೆಲಸ ಯಾರಿಂದ ನಡೆದರೂ ದಿಟವಾಗಿ ಸಂತೋಷ ಅವರಿಗೆ. ಪ್ರಪಂಚದಲ್ಲಿ ಕೆಟ್ಟದೆನಿಸಿಕೊಳ್ಳುವುದು ಇದ್ದರೂ ಅವರ ಗಮನವೆಲ್ಲ ಒಳ್ಳೆಯದರ ಮೇಲೆಯೆ. ಯಾವ ವ್ಯಕ್ತಿಯಾಗಲಿ ಹದಿನಾರಾಣೆ ಯೋಗ್ಯನೆಂಬುವುದು ಸಾಧ್ಯವಿಲ್ಲ, ಎಷ್ಟೆ ಎಚ್ಚರವಿದ್ದರೂ ಕಾಲು ಜಾರುವುದುಂಟು. ಕಾರಣವಿಲ್ಲದೆ, ಯಾವ ಉದ್ದೇಶವೂ ಇರದೆ, ಕೆಡುಕು ನಡೆಯುವುದುಂಟು. ಇದನ್ನು ಅರಿತುಕೊಂಡವರು ತಮ್ಮ ಮನಸ್ಸನ್ನು ಹುಳಿ ಮಾಡಿಕೊಳ್ಳದೆ ಹೃದಯದಲ್ಲಿ ಕಹಿಯನ್ನು ಸೇರಿಸಿಕೊಳ್ಳದೆ ಔದಾರ್ಯದಿಂದ ಬಾಳುವರು.

ಇಂಥವರೊಂದಿಗೆ ಬಾಳುವುದು ಯಾರಿಗಾದರೂ ತುಂಬ ಸುಲಭ. ಅವರೊಂದಿಗೆ ಕಾಲ ಕಳೆಯುವಾಗ ಸಂತೋಷವೆ.

ಅನ್ಯೋನ್ಯಾಶ್ರಯ

ತಿಳಿಯಾದ ತಲೆ, ಒಳಿತಾದ ಒಡಲು ಎರಡೂ ಇದ್ದರೆ ಬದುಕಿನಲ್ಲಿ ಬೇಸರವಿಲ್ಲ, ಎಡರು-ತೊಡರುಗಳಿಲ್ಲ. ಆದರೆ ತಲೆಯಲ್ಲಿ ತಿಳಿವು ಮೂಡಿಬರುವುದು ಕಷ್ಟವೇ. ಒಡಲಲ್ಲಿ ಒಳ್ಳೆಯತನ ಬೇರೂರುವುದೂ ದುಸ್ತರವೇ. ಎರಡೂ ಒಟ್ಟಿಗೆ ಇರುವುದಂತೂ ವಿರಳವೇ!

ತಲೆಯಲ್ಲಿ ಕೆಸರಿನ ರಾಡಿ ಹರಡಿಕೊಂಡಿದ್ದಾಗ, ಒಡಲಲ್ಲಿ ಕಾವುನೋವುಗಳ ತುಯ್ದಾಟ ಇದ್ದಾಗ ನೋಟ ನೇರವಾಗಿರದು, ಮಾತು ಸರಳವಾಗಿರದು. ಕಾಣುವ ಕಣ್ಣು ಕದಡಿದ್ದಾಗ ಕಂಡದ್ದು ನೆಲೆಯಾಗಿರುವುದು ಹೇಗೆ ? ಒಡಲೊಳಗೆ ಉರಿ ಇರುವಾಗ ಆಡುವ ಮಾತು ಮೆದುವಾಗಿರುವುದು ಹೇಗೆ? ನಮ್ಮ ಕಣ್ಣು ಅನಿಷ್ಟಗಳನ್ನೇ ಒದಗಿಸುತ್ತಿರುವಾಗ ತಲೆಯಲ್ಲಿ ತಿಳಿವು ಇರುವುದು ಸಾಧ್ಯವೆ ಎಂದು ಕೆಲವರ ವಾದ. ಕಣ್ಣು ಇಷ್ಟವನ್ನಾಗಲಿ ಅನಿಷ್ಟವನ್ನಾಗಲಿ ತಾನಾಗಿ ಒದಗಿಸಲಾರದು; ನೋಡುವ ಕಣ್ಣ ಹಿಂದೆ ನೋಡಿಸುವ ಮನಸ್ಸು ಇದ್ದರಷ್ಟೆ ಇಷ್ಟ, ಅನಿಷ್ಟಗಳು? ಕಣ್ಣು ಕದಡುವುದು ಹೊರಗಣ ನೋಟದಿಂದಲ್ಲ, ಒಳಗಣ ಬಯಕೆ-ಬಿಂಕಗಳಿಂದ! ಸಂಸ್ಕಾರದಿಂದಲೋ, ಸತ್ಸಂಗದಿಂದಲೋ, ಅನುಭವದಿಂದಲೋ, ಶಿಕ್ಷಣದಿಂದಲೋ, ಸಾಧನೆಯಿಂದಲೋ ತಲೆ ತಿಳಿಯಾಯಿತೆಂದರೆ ನೋಡುವ ನೋಟ ನೇರವಾಗುತ್ತದೆ. ಹೊರಗಿನ ಜಗತ್ತು ನಮ್ಮನ್ನು ಬವಣೆಗೀಡುಮಾಡದು. ಆದರಿಂದ ಕಾವು-ನೋವುಗಳು ಹುಟ್ಟಿಕೊಳ್ಳ ಲಾರವು. ಒಡಲು ಒಳಿತಾಗಿರುವುದೂ ಸಂಸ್ಕಾರದಿಂದ, ಸತ್ಸಂಗದಿಂದ, ಸಾಧನೆಯಿಂದ. ತಲೆಯಲ್ಲಿ ತಿಳಿವು ಇರದ ಹೊರತು ಒಡಲಿನ ಬೇಗೆ ಇಳಿಯಲಾರದು. ಎರಡರ ನಡುವೆ ಅನ್ಯೋನ್ಯಾಶ್ರಯ. ಸಾಮಾನ್ಯವಾಗಿ ಎರಡಕ್ಕೂ ಇರುವ ನಂಟನ್ನು ಜನ ಗಮನಿಸುವುದಿಲ್ಲ, ಒಂದನ್ನು ಬಿಟ್ಟು ಇನ್ನೊಂದನ್ನು ಪಡೆದುಕೊಳ್ಳಲು ಯತ್ನಿಸುತ್ತಾರೆ: ಯತ್ನದಲ್ಲಿ ವಿಫಲರಾಗುವುದು ಕಟ್ಟಿಟ್ಟದ್ದೇ. ಯಾವುದೇ ಧರ್ಮವಾಗಲಿ, ಅದರಲ್ಲಿರುವ ಸಾಧನಾಭಾಗವೆಂದರೆ ತಲೆ-ಒಡಲುಗಳೆರಡನ್ನೂ ನೆಮ್ಮದಿಯಾಗಿರಿಸಿ, ಒಟ್ಟಿಗೆ ಸೇರಿಸುವ ಪ್ರಯತ್ನ; ಒಂದರ ದೋಷದಿಂದ ಇನ್ನೊಂದು ದುಷ್ಟವಾಗದಂತೆ ಎಚ್ಚರ ವಾಗಿರುವ ಹವಣಿಕೆ; ಒಂದರ ನೆರವಿನಿಂದ ಇನ್ನೊಂದನ್ನು ಮೇಲು ಮಟ್ಟಕ್ಕೆ ಒಯ್ಯುವ ಯೋಜನೆ.

ಎರಡರ ದಾರಿ ಬೇರೆಯಾದರೇ ಆತಂಕ; ಎರಡೂ ಕದಡಿದ್ದರಂತೂ ಭಯಂಕರವೇ. ಎರಡೂ ಹದವರಿತು ಕೂಡಿಕೊಂಡರೆ ಬದುಕಿನಲ್ಲಿ ಸ್ವಾರಸ್ಯ, ಸಾರ್ಥಕ್ಯ.

ನೆರವಿಗೆ ಬರುವ ಕೈ

ತೊಂದರೆಯಿರುವಾಗ ಯಾರಾದರೂ ನೆರವಿಗೆ ಬಂದಾರೊ ಎಂದು ಕಾದು ನೋಡುವ ಚಾಳಿ ಕೆಲವರಿಗೆ. ಬೇರೆಯವರನ್ನು ನೆರವಿಗೆಂದು ಬೇಡುವ, ಕಾಡುವ ಮಂದಿಯೂ ಇದ್ದಾರೆನ್ನಿ!

ನಮಗೆ ತೊಂದರೆಯಾದಾಗ ಅದನ್ನು ಕಂಡು ಬೇರೆಯವರು ಮರುಗುವುದುಂಟು. ಆದರೆ ಮರುಗುವವರು ನೆರವಿಗೆ ಬರಲಿ ಎಂದು ಬಯಸುವುದು ಸರಿಯೆ? ಮರುಗುವುದೇ ಒಂದು ನೆರವು. ಅದಕ್ಕಿಂತ ಹೆಚ್ಚಾಗಿ ಮತ್ತೆ ಯಾವ ನೆರವನ್ನಾಗಲಿ ನೀಡುವ ಅನುಕೂಲ ಅವರಿಗಿಲ್ಲದಿರಬಹುದು. ಅನುಕೂಲವಿದ್ದರೂ ನಾವು ಅದಕ್ಕಾಗಿ ಆಸೆಪಟ್ಟು ಕೂಡಬಹುದೆ? ಸಮಾಜವೆಂದಮೇಲೆ, ನೆರೆಹೊರೆಯೆಂದ-ಮೇಲೆ ಇತರರ ನೆರವಿರದೆ ಬದುಕುವುದೇ ಆಗದು. ಸಂಪೂರ್ಣವಾಗಿ ಸ್ವಾವಲಂಬನೆ ಸಾಧ್ಯವಿಲ್ಲ. 'ಪರಸ್ಪರಂ ಭಾವಯಂತಃ' ಎನ್ನುವ ಮಾತು ನಿತ್ಯಜೀವನದಲ್ಲಿಯೂ ದಿಟವಾದುದು. ನಮ್ಮ ಊಟ, ಉಡುಗೆ, ಮನೆ, ಉದ್ಯೋಗ, ಹವ್ಯಾಸ, ವಿನೋದ ಎಲ್ಲದರಲ್ಲೂ ಬೇರೆಯವರ ಆಸರೆ ಇದ್ದೇ ಇದೆ. ನನಗೆ ಅಗತ್ಯವಾದುದನ್ನೆಲ್ಲ ನಾನೇ ಮಾಡಿ ಕೊಳ್ಳುತ್ತೇನೆ ಎಂದು ಯಾರಾಗಲಿ ಹೇಳಬಹುದೆ? ಆದರೆ ಹೀಗೆಂದು ಎಲ್ಲದಕ್ಕೂ ಬೇರೆಯವರ ನೆರವು ಇರಲಿ ಎನ್ನುವುದು ತಪ್ಪು. ಬೇರೆಯವರಿಂದ ನೆರವನ್ನು ಬಯಸುವವರು ಬೇರೆಯವರಿಗೂ ತಮ್ಮ ನೆರವನ್ನು ನೀಡುವವರಾಗಿರಬೇಕು. ನೆರವು ಪರಸ್ಪರವಾಗಿರಬೇಕಲ್ಲವೆ! ಸಾಧ್ಯವಾದಷ್ಟೂ ಇತರರ ನೆರವನ್ನು ಬಯಸದಿರುವುದೇ ನಾವು ಇತರರಿಗೆ ನೀಡುವ ನೆರವು ಎಂದೊಬ್ಬ ಮಹನೀಯ ಹೇಳಿದ್ದಾನೆ. ನನ್ನ ಪಾಡನ್ನು ನಾನು ನೋಡಿಕೊಂಡರೆ ಇತರರಿಗೆ ಆ ಕಷ್ಟ ತಪ್ಪಿತು ಎಂದುಕೊಳ್ಳಬೇಕು. ನನ್ನ ಮನೆ ಅಚ್ಚುಕಟ್ಟಾಗಿದ್ದರೆ, ನನ್ನ ದುಡಿಮೆ ಸರಿಯಾದುದಾದರೆ, ನನ್ನ ಆರೋಗ್ಯ ಚೆನ್ನಾಗಿದ್ದರೆ, ನನ್ನ ಕುಟುಂಬ ನೆಮ್ಮದಿಯಿಂದಿದ್ದರೆ ಊರಮಂದಿಗೆ ಎಷ್ಟೋ ಹಿತ. ನನಗಾಗಿ ಯಾರೂ ಬೇಸರಪಡಬೇಕಾದುದಿಲ್ಲವಷ್ಟೇ? ತೊಂದರೆ ವಹಿಸಿಕೊಳ್ಳಬೇಕಾಗಿಲ್ಲವಲ್ಲ?

ಬೇರೆಯವರ ನೆರವನ್ನು ಬಯಸದಿರುವುದು ನೆರೆಹೊರೆಯಲ್ಲಿ ಜಾಣತನ. ನಮ್ಮ ಕಾಲಮೇಲೆ ನಾವು ನಿಂತಾಗಲೆ ನಮಗೂ ಹಿತ. ಇತರರಿಗೂ ಸುಖ.

ನಮ್ಮ ನೆರವಿಗೆ ಬರುವ ಕೈ ನಮ್ಮ ತೋಳತುದಿಯಲ್ಲೇ ಇದೆ ಎಂಬುದನ್ನು ಕಂಡುಕೊಳ್ಳಬೇಕು.

ಪರವಾಲಂಬಿ ಬದುಕು

ಋಗ್ವೇದದಲ್ಲೊಂದು ಮಾತು (2, 28, 9). ಋಷಿಯು ವರುಣನನ್ನು ಕುರಿತು ಬೇಡಿಕೊಳ್ಳುವುದು ಹೀಗೆ - 'ಮಾಹಂ ರಾಜನ್ ಅನ್ಯಕೃತೇನ ಭೋಜಂ'.

'ರಾಜನಾದ ವರುಣನೇ, ಬೇರೆಯವರ ದುಡಿಮೆಯಿಂದ ನಾನು ಬದುಕುವುದು ಬೇಡ. ಇತರರು ಸಂಪಾದಿಸಿದ ಹಣದಿಂದ ನನ್ನ ಹೊಟ್ಟೆ ತುಂಬುವುದು ಬೇಡ, ನನ್ನ ಅನ್ನವನ್ನು ನಾನೇ ಸಂಪಾದಿಸಿಕೊಳ್ಳುವಂತೆ ಅನುಗ್ರಹಿಸು' ಎಂದು ತಾತ್ಪರ್ಯ.

ಋಷಿಯ ಸ್ವಾಭಿಮಾನವನ್ನು ಎತ್ತಿ ಹೇಳುವ ಮಾತು ಇದು. ಊಟಮಾಡುವುದು ದೇಹದ ಅಗತ್ಯವೇನೋ ಸರಿ; ಯಾರ ಅನ್ನವಾದರೂ ನಮ್ಮ ಹಸಿವನ್ನು ಇಂಗಿಸೀತು ದಿಟ. ಆದರೆ ದೇಹದ ಹಸಿವು ಹೋದರೆ ಸಾಲದು; ಮನಸ್ಸಿಗೆ ನೆಮ್ಮದಿಯೂ ಉಂಟಾಗಬೇಕು. ಆತ್ಮಗೌರವವಿರುವ ಯಾರಾದರೂ ಪರಾನ್ನ ಎಂದರೆ ಹೇಸುತ್ತಾರೆ. ದೈನ್ಯವಿಲ್ಲದ ಬದುಕು ತಮಗೆ ಬೇಕೆಂದೇ ದೇವರನ್ನು ಕೋರುತ್ತಾರೆ. ಬೇರೆಯವರ ದುಡಿಮೆಯಿಂದ ತಾನು ಹೊಟ್ಟೆ ಹೊರೆದುಕೊಳ್ಳುವುದು ಹೀನಾಯವಲ್ಲವೆ? ಇತರರ ಸ್ವತ್ತನ್ನು ಕದ್ದು, ವಂಚನೆಯಿಂದಲೋ ಹಿಂಸೆಯಿಂದಲೋ ಅಪಹರಿಸಿ, ತನ್ನದಾಗಿ ಮಾಡಿಕೊಂಡು ಸುಖವನ್ನನುಭವಿಸುವುದಾದೀತೆ? ತಾನು ಕಷ್ಟಪಟ್ಟು ಪಡೆದು ಕೊಂಡದ್ದೇ ನಿಲ್ಲುವುದು. ಆದರೆ ಬದುಕಿನಲ್ಲಿ ಬೇರೆಯವರನ್ನು ಅವಲಂಬಿಸದೆ ಇರಲು ಸಾಧ್ಯವಿಲ್ಲ; ನಾವು ಬದುಕುವಾಗ ಅಷ್ಟಿಷ್ಟು ಹಿಂಸೆಯನ್ನು ಇತರರಿಗೆ ಕೊಡಲೇ ಬೇಕಾಗುತ್ತದೆ. ಆದರೆ ಇದರ ಅರಿವಿರಬೇಕು. ಋಷಿಯೇ ಮೇಲಿನ ಮಾತಿನ ಹಿಂದೆ ಹೀಗೆ ಹೇಳಿದ್ದಾನೆ -

'ಪರಋಣಾ ಸಾವೀರಥ ಮತ್‌ಕೃತಾನಿ'— ನಾನು ಮಾಡಿರುವ ಸಾಲವನ್ನು ನೀಗಿಸುವಂತೆ ಕರುಣಿಸೆಂದು ವರುಣನಲ್ಲಿ ಬೇಡಿಕೆಯಿದು. ಇತರರಿಂದ ನಾವು ಪಡೆದುಕೊಂಡದ್ದೆಲ್ಲವೂ ಸಾಲವೇ. ಬೇರೊಬ್ಬರು ನಮ್ಮನ್ನು ಆದರದಿಂದ ಕಂಡರೆ, ನಮ್ಮ ಮೇಲೆ ಕರುಣೆ ತೋರಿದರೆ, ನಮ್ಮ ನೆರವಿಗೆ ಬಂದರೆ ಅದು ಸಾಲವೇ; ಋಷಿಯ ಮಾತಿನಲ್ಲಿ 'ಪರಋಣ'.

ಅದನ್ನು ತೀರಿಸುವುದು ಹೇಗೆ? ನಾವೂ ಇತರರಿಗೆ ಆದರವನ್ನು ತೋರಿಸಿ, ಕರುಣೆ ತೋರಿ, ಸಂತೋಷವುಂಟುಮಾಡಿ, ಅವರ ನೆರವಿಗೆ ಆದರೆ ಈ ಸಾಲ ನೀಗಿತು.

ಋಷಿಯು ಇಲ್ಲಿ ತೋರಿಸಿರುವುದು ಮರ್ಯಾದೆಯಿಂದ ಬಾಳುವ ಬಗೆಯನ್ನು, ನಮ್ಮ ಉದ್ಯಮಿಗಳೂ ರಾಜಕಾರಣಿಗಳೂ ಅಧಿಕಾರಿಗಳೂ ಇದನ್ನು ಮನಗಂಡರೆ ಮಾತ್ರ ನಮ್ಮ ಸಂಸ್ಕೃತಿ ಉಳಿದೀತು.

ಬೇಡುವ ಬವಣೆ

'ಹುಲ್ಲಿಗಿಂತ ಹತ್ತಿ ಹಗುರ, ಬೇಡುವವ ಹತ್ತಿಗಿಂತಲೂ ಹಗುರ' ಹೀಗೊಂದು ಮಾತು ಸಂಸ್ಕೃತದಲ್ಲಿದೆ. ಬೇಡುವವರ ಹೀನಾಯವನ್ನು ಮನವರಿಕೆ ಮಾಡಿಕೊಡುವ ಮಾತು.

ಮನುಷ್ಯನಿಗೆ ಬೇಡುವ ಅಗತ್ಯ ಒದಗಿಬಂತೆಂದರೆ ಅವನ ತೂಕ ಇಳಿಯುತ್ತದೆ. ಅವನ ಬೆಲೆ ಮರೆಯಾಗುತ್ತದೆ. ಯಾರ ಬಳಿ ಅವನು ಬೇಡುವನೋ ಅವರ ತೂಕ ಹೆಚ್ಚುತ್ತದೆ. ಅವರ ಬೆಲೆ ಏರುತ್ತದೆ. ಎಷ್ಟೆಂದರೂ ಬೇಡುವ ಕೈ ಕೆಳಗೆ, ನೀಡುವ ಕೈ ಮೇಲೆ ತಾನೆ? ಬೇಡುವಾಗ ಕೈಯೊಡ್ಡಬೇಕು; ನೀಡುವ ಕೈ ಇದ್ದಲ್ಲಿಯೇ ಇದ್ದರೂ ಆಯಿತು. ಬೇಡುವುದೆಂದರೆ ಬೇರೆಯವರ ಹಂಗಿಗೆ ಸಿಲುಕಿಕೊಳ್ಳುವುದು; ತನ್ನ ಕಾಲ ಮೇಲೆ ತಾನು ನಿಲ್ಲಲಾರದೆ, ಇನ್ನೊಬ್ಬರ ಆಸರೆಯನ್ನು ಬಯಸುವುದು. ನಾಲ್ಕೂ ಜನರ ನಡುವೆ ಬಾಳುವ ನಾವು ಎಲ್ಲದರಲ್ಲಿಯೂ ಸ್ವತಂತ್ರವಾಗಿರುವುದು ಹೇಗೆ? ಪರಾಶ್ರಯ, ಅನ್ಯೋನ್ಯಾಶ್ರಯಗಳಿದ್ದದ್ದೇ. ನಮ್ಮೆಲ್ಲ ಅಗತ್ಯಗಳನ್ನೂ ನಾವೇ ತೀರಿಸಿಕೊಳ್ಳುತ್ತೇವೆ. ಬೇರೆಯವರನ್ನು ಅವಲಂಬಿಸುವುದೇ ಇಲ್ಲ ಎಂದು ಯಾರು ಹಟ ಮಾಡಿಯಾರು? ಗಂಡ-ಹೆಂಡತಿ, ತಾಯಿತಂದೆ-ಮಕ್ಕಳು, ನೆರೆ-ಹೊರೆ, ಒಡೆಯ-ದುಡಿಯುವವ, ಗುರು-ಶಿಷ್ಯ, ಪ್ರಭು-ಪ್ರಜೆ ಎಲ್ಲದರಲ್ಲೂ ಪರಾಶ್ರಯವಿದ್ದೆ ಇದೆ. ಆದರೆ ಇಲ್ಲಿ ಬೇಡುವ ಮಾತು ಬಾರದು. ದುಡಿಮೆಗೆ ಪ್ರತಿಯಾಗಿ ಸಂಬಳವನ್ನು ಪಡೆದುಕೊಂಡರೆ ಅದು ಬೇಡುವುದಲ್ಲ. ಹೆಂಗಸು ಮನೆಯನ್ನು ನೋಡಿಕೊಳ್ಳುತ್ತ ಗಂಡ ಹೊರಗೆ ಹೋಗಿ ದುಡಿದುಬಂದರೆ, ಹೆಂಗಸೇನು ಬೇಡುವವಳಲ್ಲ. ಹೆಂಡತಿ ಯನ್ನು ಹಗುರಾಗಿ ಕಂಡ ಗಂಡನನ್ನು ದಂಡಿಸಬೇಕು. ತನ್ನ ಕಡೆಯಿಂದ ಯಾವ ದುಡಿಮೆಯೂ ಇಲ್ಲದೆ, ಯಾವ ಕೊಡುಗೆಯೂ ಇರದೆ, ಬೇರೆಯವರಿಂದ ಪಡೆದು ಕೊಳ್ಳಬಯಸುವವನೇ ಯಾಚಕ, ಅವನೇ ದಿಟವಾಗಿ ಬೇಡುವವ. ಬೇಡುವಾಗ ಸ್ವಾಭಿಮಾನ ಹೇಗಿದ್ದೀತು? ಮರ್ಯಾದೆ ಎಷ್ಟರಮಟ್ಟಿಗೆ ಉಳಿದೀತು? ಮಂಡಿ ಯೂರಿದರೆ ತಲೆ ಮೇಲೆತ್ತಿ ನಿಲ್ಲಲಾದೀತೆ?

ಆದರೆ ಕೆಲವೊಮ್ಮೆ ವಿಧಿಯ ವಿಕಟದಿಂದ ಕೆಲವರಿಗೆ ಬೇರೆ ದಾರಿ ತೋರುವುದಿಲ್ಲ. ಬೇಡಿಯೇ ಬಾಳಬೇಕಾಗುತ್ತದೆ. ಬದುಕಿನಲ್ಲಿ ಸೋತವರು ಮತ್ತೇನು ಮಾಡಿಯಾರು? ಆತ್ಮವಿಶ್ವಾಸವೇ ಹೋದಮೇಲೆ ಸ್ವಾಭಿಮಾನ ಹೇಗೆ ತಾನೆ ಉಳಿದೀತು.

ಬದುಕು-ಬವಣೆ

ರಾತ್ರಿ ನಿದ್ರೆಬಾರದವನಿಗೆ ಬೆಳಕು ಹರಿಯುವುದು ಯಾವಾಗಲೋ ಎನಿಸುತ್ತದೆ! ಬಳಲಿದವನಿಗೆ ಹರಿದಾರಿ ನಡೆಯುವುದು ಬಲುದೂರವೆ!

ಬುದ್ಧ ಹೇಳಿದ ಹಾಗೆಯೇ, ಧರ್ಮವನ್ನರಿಯದ ಹೆಡ್ಡನಿಗೂ ಸಂಸಾರ ಬಲು ಭಾರವಾದೀತು.

ರಾತ್ರಿಯೇನು ಬೆಳೆಯುವುದಿಲ್ಲ; ಕುಗ್ಗುವುದಿಲ್ಲ. ಅದು ಎಂದಿನಂತೆ ಇರುತ್ತದೆ. ಹರಿದಾರಿಯ ಉದ್ದ ಮಾರ್ಪಡುವುದುಂಟೆ?

ರಾತ್ರಿ ಕಳೆಯುವುದೇ ಇಲ್ಲವೇನೋ ಎಂದೆನಿಸುವುದು ಎಚ್ಚರವಾಗಿರುವವನಿಗೆ; ನಿದ್ರೆಯಲ್ಲಿರುವವನಿಗಲ್ಲ.

ಹರಿದಾರಿಯನ್ನು ನಡೆದು ದಾಟುವುದು ಹುರುಪಿದ್ದವನಿಗೆ, ಶಕ್ತಿಯಿದ್ದವನಿಗೆ ಏನೂ ಕಷ್ಟವಿರದು. ತಿಳಿವಳಿಕೆಯಿದ್ದವನಿಗೆ, ಮಾರ್ಗದರ್ಶನವನ್ನು ಪಡೆದುಕೊಂಡವನಿಗೆ ಸಂಸಾರವೇನು ದುಸ್ತರವೆನಿಸುವುದಿಲ್ಲ.

ನಮ್ಮ ಸಂಸ್ಕೃತಿಯಾಗಲಿ, ವಿದ್ಯಾಭ್ಯಾಸವಾಗಲಿ, ಅಧ್ಯಾತ್ಮ ಪ್ರಸಕ್ತಿಯಾಗಲಿ ನೆರವಾಗುವುದು ಇಲ್ಲಿಯೇ. ಬದುಕಿನ ಅರ್ಥವನ್ನೂ ಸ್ವಾರಸ್ಯವನ್ನೂ ಅರಿತು ಕೊಳ್ಳುವುದಾದರೆ ಬದುಕೇನು ಬೇಸರವೆನಿಸುವುದಿಲ್ಲ; ಬದುಕಲು ಬೆದರಬೇಕಾದುದೂ ಇಲ್ಲ. ಅರಿವಿಲ್ಲದಿದ್ದಾಗ ಭಯ ಬಂದೊದಗುವುದು ಸಹಜವೇ. ನಸುಗತ್ತಲೆಯಲ್ಲಿ ಹಗ್ಗವನ್ನೆ ಹಾವೆಂದು ತಿಳಿದು ಬೆದರುವುದಿಲ್ಲವೆ?

ಬದುಕಿನಲ್ಲಿಯೂ ದೀಪ ಬೇಕಾಗುತ್ತದೆ; ಬೆಳಕು ಬೇಕಾಗುತ್ತದೆ; ದಾರಿಯನ್ನು ತೋರುವವರು ಬೇಕಾಗುತ್ತಾರೆ; ಎಚ್ಚರ ಹೇಳುವವರ ಅಗತ್ಯವಿದೆ. ಇಂಥ ಆಸರೆ ಯಿಲ್ಲದಿದ್ದರೆ ಸಂಸಾರ ಬಲುಭಾರವೇ. ಈ ಆಸರೆಯನ್ನೊದಗಿಸಲೆಂದೇ ಸಂಸ್ಕೃತಿ, ಶಿಕ್ಷಣ, ಶಾಸ್ತ್ರಾಭ್ಯಾಸ, ಸತ್ಸಂಗ ಮೊದಲಾದುವು ಸಿದ್ಧವಾಗಿವೆ. ಅವುಗಳ ನೆರವನ್ನು ಪಡೆದುಕೊಳ್ಳದೆ ಬದುಕುವುದೆಂದರೆ ಅದೊಂದು ಬವಣೆಯೇ.

ಬದುಕಿನಲ್ಲಿ ಬರಸಿಡಿಲು

ಕೆಲವರಿಗೆ ಕಷ್ಟಗಳು ಸರಮಾಲೆಯಂತೆ ಬಂದೊದಗುತ್ತವೆ.

ಒಂದು ಕಳೆದರೆ ಇನ್ನೊಂದು; ಅದೂ ಹೋದರೆ ಮತ್ತೊಂದು.

ಇದೇನು ಪ್ರಕೃತಿ ವೈಚಿತ್ರ್ಯವೋ? ಅಥವಾ ಕೆಲವರಿಗೆ ಕಷ್ಟವನ್ನು ತಂದುಕೊಳ್ಳುವ ಪ್ರವೃತ್ತಿಯೇ ಇರುವುದೋ? ಇಲ್ಲವೇ ಆಕಸ್ಮಿಕವೋ?

ಕರ್ಮ ಕಾಡುತ್ತದೆ ಎಂದು ಕೆಲವರ ವಾದ, ಹಲವರ ನಂಬಿಕೆ. ಆದರೆ ಕರ್ಮದ ಗುಟ್ಟನ್ನು ತಿಳಿದವರಾರು? ಅದು ಅನುಸರಿಸುವ ದಾರಿಯನ್ನು ತಿಳಿದು ಹೇಳುವರಾರು? ಕರ್ಮದ ವಿಚಾರ ನಮಗೆ ತಿಳಿಯದು. ಆದರೆ ಕಷ್ಟವನ್ನು ಎಡೆಬಿಡದೆ ತಂದುಕೊಳ್ಳುವವರನ್ನು ನೋಡಿದ್ದೇವೆ. 'ಊರ ಉಸಾಬರಿಗೆ ಕಟ್ಟಿಕೊಂಡು ಉಣದೆ ಅತ್ತರು' ಎನ್ನುವ ಮಾತಿಗೆ ನಿದರ್ಶನವಾಗಿರುವವರೂ ಇದ್ದಾರೆನ್ನಿ. ಹೆರವರ ಕಷ್ಟವನ್ನು ತಮ್ಮ ಹೆಗಲಿಗೆ ಹಾಕಿಕೊಂಡು ಒದ್ದಾಡುವ ಮಂದಿಯಿಲ್ಲವೆ? ಇವರ ಕಷ್ಟವೇನೋ ತಾವಾಗಿ ತಂದುಕೊಂಡುದು ಎನ್ನೋಣ. ಆದರೆ ಕಷ್ಟವನ್ನು ಯಾರಾದರೂ ತಾವಾಗಿ ಬಯಸುವರೆ? ಅದು ತಾನಾಗಿ ಎರಗಿಬಂದರೆ ಮಾಡುವುದೇನು? ಅಗ್ಗಳನೆಂಬ ಕವಿ ತನ್ನ 'ಚಂದ್ರಪ್ರಭ ಪುರಾಣ'ದಲ್ಲಿ ಒಕ್ಕಣಿಸುವ ಬಗೆ ಹಲವರಿಗೆ ಅನ್ವಯಿಸುತ್ತದೆ.

"ಕುತ್ತಂ ಬಿಟ್ಟೊಡೆ ಪಗೆ ಬೆಂ-
ಬತ್ತುವನ್ ಅವನುಳಿಯೆ ಕೊಲ್ವುದಹಿಯದು ಮುಂ-
ತಪ್ಪಿತ್ತೆನೆ ಪೊಡೆವುದು ಬರಸಿಡಿಲ್".

ರೋಗ ಕಾಡುತ್ತದೆ. ಇನ್ನೇನು ಮದ್ದು ಮಾಡಿಕೊಂಡು ಗುಣವಾಯಿತು ಎನ್ನುವಾಗ, ಆಗದವರು ಎದುರಿಸುತ್ತಾರೆ. ಗಾಸಿ ಮಾಡಲು ತೊಡಗುತ್ತಾರೆ. ಇದನ್ನು ಹೇಗೋ ತೀರಿಸಿಕೊಂಡೆ ಎನ್ನುವಷ್ಟರಲ್ಲೇ ಎಲ್ಲಿಂದಲೋ ಹಾವು ಬಂದು ಕಾಡುತ್ತದೆ.

ಅದರ ಹಿಡಿತದಿಂದ ಸದ್ಯ ಪಾರಾದೆನೆಂದು ನಿಟ್ಟುಸಿರುಬಿಡುತ್ತಿರುವಾಗಲೇ, ಬರಸಿಡಿಲು ನೆತ್ತಿಯ ಮೇಲೆರಗುತ್ತದೆ!

ಕಷ್ಟಗಳು ಶರೀರದಿಂದಲೇ ಬರುತ್ತವೆ, ಹೊರಗಿನವರೂ ಕಷ್ಟಕೊಡುತ್ತಾರೆ; ಪರಿಸರದಿಂದಲೂ ಆತಂಕ ತಪ್ಪಿದ್ದಲ್ಲ.

ಇಷ್ಟನ್ನೆಲ್ಲ ತಡೆದುಕೊಂಡರೂ ವಿಧಿಯ ಹೊಡೆತ ಇದ್ದೇ ಇದೆಯಲ್ಲವೆ?

ಅಲ್ಲಾಡುವ ಹಲ್ಲು

ಮೊದಲೇ ಅಲ್ಲಾಡುವ ಹಲ್ಲು; ಅದರ ಮೇಲೆ ಹಲಗೆಕಲ್ಲು ಬಿದ್ದರೆ ಹೇಗೆ?

ಹಲ್ಲನ್ನು ಗಟ್ಟಿಯಾಗಿರಿಸಿಕೊಳ್ಳಬೇಕಾದುದು ಮೊದಲ ಕೆಲಸ; ಅದರ ಮೇಲೆ ಹಲಗೆಕಲ್ಲು ಬೀಳದಂತೆ ನೋಡಿಕೊಳ್ಳುವುದು ಎರಡನೆಯದು. ಹಲಗೆಕಲ್ಲು ಬಿದ್ದರೆ ಗಟ್ಟಿ ಹಲ್ಲಾದರೂ ಉಳಿಯುವುದಿಲ್ಲ; ಹಲಗೆಕಲ್ಲಿನಿಂದ ಹಲ್ಲನ್ನು ಕಾಪಾಡಿಕೊಳ್ಳುವುದೇ ಮುಖ್ಯ ಎಂದು ಕೆಲವರ ಎಣಿಕೆ. ಆದರೆ ಅಲ್ಲಾಡುತ್ತಿರುವ ಹಲ್ಲು ಚಕ್ಕುಲಿ ಅಗಿದರೂ ಮುರಿದೀತು ಅಲ್ಲವೆ? ಹಲಗೆ ಕಲ್ಲೇ ಬೀಳಬೇಕೆಂದಿದೆಯೆ? ಹಲಗೆಕಲ್ಲೋ ಚಕ್ಕುಲಿಯೋ, ಹಲ್ಲಿನ ಸ್ಥಿತಿ ತಾನೆ ಮುಖ್ಯ? ಚಕ್ಕುಲಿ ತಿನ್ನದಿದ್ದರೂ, ಹಲಗೆ ಕಲ್ಲು ಬೀಳದಿದ್ದರೂ, ಹಲ್ಲಂತೂ ಗಟ್ಟಿಯಾಗಿರಬೇಕು. ಬೇರು ಸಡಿಲವಾಗಿ ಹುಳುಕು ಹಲ್ಲಾದರೆ ಸುಮ್ಮನಿದ್ದರೂ ಸೌಖ್ಯವಿದೆಯೆ? ಹೊರಗಿನಿಂದ ಬಂದು ಯಾವುದೂ ಮೇಲಡರದಿದ್ದರೂ ಒಳಗಿನ ಬೇನೆಯೆ ಸಾಕಲ್ಲ? ಅಲ್ಲಾಡುವ ಹಲ್ಲೆಂದರೆ ಗೊತ್ತು-ಗುರಿಯಿರದ ಬದುಕು; ಗಾಳಿ ಬೀಸಿದಂತೆ ತೂರಾಡುವುದು. ಏನೊಂದು ಕಟ್ಟುಪಾಡೂ ಇರದೆ, ಬಯಕೆಗಳ ಬೇಟೆಯಲ್ಲೇ ಅಲೆದಾಡುವ ಬಾಳು. ಹಲಗೆ ಕಲ್ಲೆಂದರೆ ಬದುಕಿನ ಮೇಲೆರಗಿ ಬೀಳುವ ಕಷ್ಟನಿಷ್ಠುರಗಳು; ಆಪತ್ತು-ವಿಪತ್ತು; ಅಂಕೆ ಆತಂಕ; ಸೈರಿಸಲಾರದ ಬವಣೆ. ಬದುಕಿನಲ್ಲಿ ಸಣ್ಣ ಪುಟ್ಟ ಉಪದ್ರವಗಳೂ ಇರುತ್ತವೆ; ದೊಡ್ಡ ಆಘಾತಗಳೂ ಇರುತ್ತವೆ. ಇಲಿಗಳ ಹಾವಳಿಯೂ ಉಂಟು; ಒಮ್ಮೊಮ್ಮೆ ಹುಲಿಯೂ ಕಾಣಿಸಿಕೊಳ್ಳುವುದುಂಟು. ಆದರೆ ಹೆಚ್ಚಾಗಿ ಬಂದೆರಗುವುವು ಸಣ್ಣಪುಟ್ಟ ಕಿರುಕುಳಗಳೇ; ದೊಡ್ಡ ಆಘಾತಗಳಲ್ಲ. ತೊಂದರೆ ಸಣ್ಣದು ದೊಡ್ಡದು ಎನ್ನುವುದು ಅದನ್ನು ಅನುಭವಿಸುವವರ ಯೋಗ್ಯತೆಯನ್ನೇ ಅವಲಂಬಿಸುತ್ತದೆ. ತನಗೆ ತಾನೆ ಸಣ್ಣದೂ ಅಲ್ಲ, ದೊಡ್ಡದೂ ಅಲ್ಲ. ಸಣ್ಣವರಿಗೆ ಸಣ್ಣ ತೊಂದರೆಗಳೇ ದೊಡ್ಡವು; ದೊಡ್ಡವರಿಗೆ ದೊಡ್ಡ ತೊಂದರೆಗಳು ಬಂದರೂ ಸಣ್ಣವೇ! ಅಲ್ಲಾಡುತ್ತಿರುವ ಹಲ್ಲಿಗೆ ಚಕ್ಕುಲಿಯೂ ಅಪಾಯ. ಇನ್ನು ಹಲಗೆಕಲ್ಲಿನ ಮಾತು ಬಿಡಿ.

ಬದುಕು ದೊಡ್ಡದಾಗಿದ್ದರೆ, ಎಂದರೆ ಗಟ್ಟಿಯಾಗಿದ್ದರೆ ಯಾವುದೇ ಉಪದ್ರವವಾಗಲಿ ಅದನ್ನು ತಾಳಿಕೊಳ್ಳುತ್ತದೆ. ಬದುಕನ್ನು ನೇಮದಿಂದ, ನಿಷ್ಠೆಯಿಂದ, ವಿವೇಕದಿಂದ, ಎಚ್ಚರದಿಂದ ಗಟ್ಟಿ ಮಾಡಿಕೊಳ್ಳಬೇಕು.

ಕೂಡಿಟ್ಟ ಕಸ

ಕೂಡಿಡುವ ಪ್ರವೃತ್ತಿ ಮನುಷ್ಯನಿಗೆ ಮಾತ್ರ ಮೀಸಲಲ್ಲ. ಹಲವು ಹಕ್ಕಿಗಳಲ್ಲೂ, ಪ್ರಾಣಿಗಳಲ್ಲೂ ಇದನ್ನು ಕಾಣುತ್ತೇವೆ.

ಇರುವೆ ಗೂಡನ್ನು ನೋಡಿ, ಜೇನುಗೂಡನ್ನು ನೋಡಿ, ಇಲಿಯ ಬಿಲದಲ್ಲಿ ನೋಡಿ.

ಬದುಕಿಗೆ ನೆರವಾಗುವ ವಸ್ತುಗಳನ್ನು ಕೂಡಿಟ್ಟುಕೊಳ್ಳುವುದು ಮನುಷ್ಯನಿಗೆ ಸ್ವಾಭಾವಿಕವಾದದ್ದೇ. ಹಿಂದಿನ ಪ್ರಾಣಿಗಳಿಂದ ಬಂದ ಬಳುವಳಿ ಇದು. ಮುಂದೆ ಒದಗಬಹುದಾದ ಅಗತ್ಯಕ್ಕೆ ಈಗಲೇ ಸಿದ್ಧತೆ ಮಾಡಿಕೊಳ್ಳುವ ಹವಣಿಕೆ.

ಬಾಯಾರಿದಾಗ ಬಾವಿ ತೋಡುವುದು ಆದೀತೆ? ಆದರೆ ಪ್ರಾಣಿಗಳಲ್ಲಿ ಪಕ್ಷಿಗಳಲ್ಲಿ ಈ ಬಗೆಯ ಸಂಗ್ರಹಣೆ ದಿಟವಾಗಿ ನೆರವಾಗುತ್ತದೆ. ಮನುಷ್ಯನಿಗಾದರೋ ಇದರಿಂದ ತೊಂದರೆಯೇ ಆಗುವುದಿದೆ.

ಕೂಡಿಡುವುದು ಕಷ್ಟ, ಕೂಡಿಟ್ಟದ್ದನ್ನು ಕಾಪಾಡಿಕೊಳ್ಳುವುದು ಕಷ್ಟ; ಇನ್ನು ಕೂಡಿಟ್ಟಿದ್ದು ಕೈಬಿಟ್ಟು ಹೋದರಂತೂ ಕಷ್ಟವಿಲ್ಲವೆ?

ಸಂಗ್ರಹಣೆಯಲ್ಲಿ ಮನುಷ್ಯನಿಗೆ ಔಚಿತ್ಯಜ್ಞಾನವೂ ಹಲವು ವೇಳೆ ಇರುವುದಿಲ್ಲ. ತನ್ನ ಅಗತ್ಯದ ಕಲ್ಪನೆಯೂ ಇರದೆ ಸಂಗ್ರಹದ ಗೀಳೇ ಎದ್ದು ಕಾಣುವುದುಂಟು. ಕೆಲವರಂತೂ ಇರುವ ಯಾವುದನ್ನೂ, ಹಾಳಿರಲಿ ಮೂಳಿರಲಿ, ಕಸವಿರಲಿ ಕಡ್ಡಿಯಿರಲಿ, ಹೊರಗೆಸೆಯಲಾರರು!

ಉಪಯೋಗವಿಲ್ಲದ ವಸ್ತುವನ್ನು ಇರಿಸಿಕೊಳ್ಳಲೇಕೆ? ವಸ್ತುಗಳ ಬೆಲೆಯಿರುವುದು ಉಪಯೋಗದಲ್ಲಲ್ಲವೇ?

ಮನುಷ್ಯನಿಗೆ ಪ್ರಾಣಿಗಳಿಗಿಂತ ಪಕ್ಷಿಗಳಿಗಿಂತ ಹೆಚ್ಚು ಬುದ್ಧಿಶಕ್ತಿಯಿದೆ. ಆದರೆ ಅವುಗಳಿಗಿರುವ ವಿವೇಕ ಇವನಿಗಿರದು.

ಸಂಗ್ರಹಣೆಯೇ ಸ್ವತಂತ್ರವಾದ ಒಂದು ಪ್ರವೃತ್ತಿಯಾಗಿ ಮಾರ್ಪಟ್ಟು, ಅದರಲ್ಲಿ ಯುಕ್ತಾಯುಕ್ತ ವಿಮರ್ಶೆಗೆ ಎಡೆಯಿಲ್ಲವಾಗಿದೆ.

ಬೇಡದ ಹೊರೆಯನ್ನು ಹೊತ್ತುಕೊಂಡು ಮನುಷ್ಯ ಬವಣೆ ಪಡುವನು.

ಹೊಟ್ಟನ್ನು ಕುಟ್ಟುವುದು

"ಹೊಟ್ಟು ಕುಟ್ಟಿ ಕೈಯೆಲ್ಲಾ ಗುಳ್ಳೆ" ಎಂದನಂತೆ.

ಹೊಟ್ಟನ್ನು ಕುಟ್ಟಲೇಕೆ? ಕೈಗಾಸಿ ಮಾಡಿಕೊಳ್ಳಲೇಕೆ?

ಕಾಳನ್ನು ತೆಗೆದು ಜಳ್ಳನ್ನು ಹೊಟ್ಟೆಂದು ಬಿಸಾಡಿದಾಗ ಅದನ್ನು ಮತ್ತೆ ಎತ್ತಿಕೊಂಡು ಕುಟ್ಟುವುದು ಏನು ಜಾಣತನ? ಕಾಳನ್ನು ಕುಟ್ಟಿದರೆ ಹಿಟ್ಟಾದೀತು. ಆಹಾರಕ್ಕೆ ಅಣಿಯಾದೀತು. ಹೊಟ್ಟನ್ನು ಕುಟ್ಟಿದರೆ ಏನು ಬಂದೀತು? ಬರಿಯ ಹೊಟ್ಟಿನ ಹುಡಿ!

ಅದನ್ನು ಕುಟ್ಟುವುದೂ ಸುಲಭವೇನಲ್ಲವೆನ್ನಿ. ಹೊಟ್ಟು ಕುಟ್ಟಲು ಬರುವುದಿಲ್ಲ. ಕುಟ್ಟಲು ತೊಡಗುವುದು ಬೆಪ್ಪುತನ; ಯಾವ ಪುರುಷಾರ್ಥಕ್ಕೆ ಅದು?

ಬದುಕಿನಲ್ಲಿ ನಾವು ಮಾಡುವ ಹಲವು ಕೆಲಸಗಳು ಇಂಥವೇ. ಕಾಳನ್ನು ಕೈ ಬಿಡುತ್ತೇವೆ; ಹೊಟ್ಟನ್ನು ಇರಿಸಿಕೊಳ್ಳುತ್ತೇವೆ. ಬದುಕಿನಲ್ಲಿ ಸ್ವಾರಸ್ಯವನ್ನೊ ಅರ್ಥವನ್ನೊ, ರುಚಿಯನ್ನೊ, ಕಾಣುವುದನ್ನು ಬಿಟ್ಟು, ಪ್ರಯೋಜನಕ್ಕೆ ಬಾರದ ಹವ್ಯಾಸ, ಗೊಂದಲ, ಜಗಳ, ಮುನಿಸು, ಬೇಸರಿಕೆ, ಆಟ, ಪಾಠಗಳಲ್ಲೇ ತೊಡಗುತ್ತೇವೆ.

ಕೆಲವರಿಗೆ ಪುಸ್ತಕ ಓದುವುದೇ ಒಂದು ಗೀಳು; ಓದುತ್ತಲೇ ಇರುತ್ತಾರೆ. ಬಾಳಿನಲ್ಲಿ ಬೆಳಕನ್ನು ಕಂಡುಕೊಳ್ಳುವುದು ಪುಸ್ತಕದ ಪ್ರಯೋಜನ. ಇದು ಆಗದೆ ಬರಿದೆ ಪುಸ್ತಕಗಳನ್ನು ಓದುತ್ತಲೇ ಇರುವುದು ಹೊಟ್ಟನ್ನು ಕುಟ್ಟಿದಂತೆಯೆ. ಬದುಕಿನಲ್ಲೊಂದು ಹಿತ, ಸುಖ, ನೆಮ್ಮದಿ ಇರಬೇಕೆಂದು ತಾನೆ ಕೆಲಸವನ್ನು ಮಾಡುವುದು? ಕೆಲಸ ಮಾಡಿದರೆ ಹಣ, ಹಣದಿಂದ ಸುಖ ಅಥವಾ ಹಿತ. ಆದರೆ ಸುಖವಾಗಲಿ ಹಿತವಾಗಲಿ ಇರದಂತೆ ಕೆಲಸವನ್ನು ಮಾಡುತ್ತಲೆ ಇದ್ದರೆ, ಹಣವನ್ನು ಗಳಿಸುತ್ತಲೇ ಇದ್ದರೆ ಅದೂ ಹೊಟ್ಟನ್ನು ಕುಟ್ಟಿದಂತೆಯೇ. ಯಾವುದು ಸಾರ, ಯಾವುದು ಅಸಾರ ಎಂಬ ವಿವೇಕವಿಲ್ಲದೆ ಕಂಡದ್ದನ್ನೆಲ್ಲ ಬಾಚಿಕೊಂಡರೆ ಹೊಟ್ಟನ್ನು ಕುಟ್ಟುವ ಹವ್ಯಾಸವೇ. ಹೀಗೆ ಮಾಡುವಾಗ ಆಯಾಸ ತಪ್ಪುವುದಿಲ್ಲ, ಸಮಾಧಾನವೂ ಇರುವುದಿಲ್ಲ. ಒಂದು ಗಳಿಗೆ ಕೂಡದೆ, ಎಡೆಬಿಡದೆ ಸುತ್ತಾಡುವುದೇ ಆಯಿತು; ಕಡೆಗೆ ನಿರಾಸೆಯೇ. ಇರುವ ಆಯುಸ್ಸನ್ನು ಎರಡೂ ಕೈಗಳಿಂದ ನೂಕಿದ್ದೇ ಆಯಿತು; ಅಷ್ಟು ಆಯುಸ್ಸು ಇದ್ದುದಕ್ಕೆ ಪ್ರಯೋಜನವಾದರೂ ಏನು?

ಹೊಟ್ಟನ್ನೆ ಕಾಳೆಂದು ಬಗೆದು ಕುಟ್ಟುವವರು ಬಹುಮಂದಿ. ಕುಟ್ಟಿ ಕುಟ್ಟಿ ಕೈ ಸೋತ ಮೇಲೇ ಅದು ಕಾಳಲ್ಲ, ಹೊಟ್ಟು ಎಂಬ ಅರಿವಾಗುವುದು. ಕುಟ್ಟುವುದು ಅಭ್ಯಾಸವಾದ ಮೇಲೆ ನಿಲ್ಲಿಸಲಾರರು. ಕಾಳಾಗಲಿ ಹೊಟ್ಟಾಗಲಿ ಕುಟ್ಟುತ್ತಲೆ ಇರಬೇಕು! ಯಾರೇನು ಮಾಡಿಯಾರು?

ಭೋಗ-ರೋಗ

ಬದುಕಿನಲ್ಲಿ ಭೋಗಕ್ಕೇ ಅಗ್ರಪಟ್ಟ.

ಊಟ, ಉಡುಗೆ, ನೋಟ, ನಡಿಗೆ, ಆಟ, ಪಾಠ, ವಿರಾಮ, ವಿನೋದ, ಕಲೆ, ಕೆಲಸ ಎಲ್ಲವೂ ಭೋಗದ ಬೇರೆಬೇರೆ ಬಗೆಗಳೇ. ಭೋಗವಿಲ್ಲದ ಬದುಕು ಬೇಸರವನ್ನು ತಂದೀತು.

ಭೋಗಸಾಧನಗಳನ್ನು ಸಂಗ್ರಹ ಮಾಡುವುದರಲ್ಲೇ ಬಾಳನ್ನೆಲ್ಲ ಕಳೆಯುವವರನ್ನೂ ಕಂಡಿದ್ದೇವಲ್ಲವೆ? ಆದರೆ ಭೋಗಸಾಧನೆಯ ಸಂಗ್ರಹವೇ ಭೋಗಾನುಭವವೆಂದು ಅವರು ಬಗೆಯುವುದು ಸರಿಯಲ್ಲ. ಭೋಗಕ್ಕೆ ಸಾಧನವೇನೋ ಬೇಕು, ದಿಟ. ಸಾಧನವಿಲ್ಲದೆ ಭೋಗಿಸುವುದಾದರೂ ಏನನ್ನು? ಆದರೆ ಭೋಗವೇ ಗುರಿಯಾಗಿರಬೇಕು. ಭೋಗಸಾಧನೆ ಅದರ ದಾರಿಯಾಗಿರಬೇಕು ಅಷ್ಟೆ.

ಹಣವುಳ್ಳವನು ಜಿಪುಣನೂ ಆಗಿದ್ದರೆ, ಹಣ ಗಳಿಸುವುದರಲ್ಲೇ ಅಥವಾ ಉಳಿಸುವುದರಲ್ಲೇ ಅವನ ಸುಖ ಮುಗಿಯಿತು. ಇನ್ನು ಹಣದಿಂದ ಪಡೆದುಕೊಳ್ಳಬಹುದಾದ ಭೋಗಕ್ಕೆ ಅವಕಾಶವೆಲ್ಲಿಯದು?

ಭೋಗಸಾಧನೆಗಳಲ್ಲೇ ತೊಡಗಿದ್ದರೆ ತೊಂದರೆಯೂ ಒಂದಿದೆ. ಭೋಗದ ದಿಟವಾದ ಸ್ವರೂಪವು ಕಣ್ಮರೆಯಾಗುತ್ತದೆ. ನಿರ್ದಿಷ್ಟವಾದ ಯಾವುದೋ ಭೋಗಸಾಧನೆಯನ್ನು ಬಿಟ್ಟು ಭೋಗವೇ ಬಾರದು, ಇರದು ಎಂಬ ಭ್ರಮೆ ಒದಗಿಬರುತ್ತದೆ. ಇದರಿಂದಾಗಿ ಭೋಗಸಾಧನೆಗೇ ಹೆಚ್ಚುಹೆಚ್ಚಾಗಿ ಅಂಟಿಕೊಳ್ಳುವ ಗೀಳು ಕುದುರಿಕೊಳ್ಳುತ್ತದೆ. ಹಣವಿಲ್ಲದೆ ಸುಖವಿಲ್ಲವೆಂಬುದು ನಿಜ; ಆದರೆ ಹಣವಿದ್ದ ಮಾತ್ರಕ್ಕೆ ತಾನಾಗಿ ಸುಖ ಬಂದೊದಗುತ್ತದೆ ಎನ್ನಲಾದೀತೋ? ಭೋಗಸಾಧನೆಯಷ್ಟಕ್ಕೇ ಬಾಯಿಬಿಡುವುದು ವ್ಯಸನವೆನಿಸಿಕೊಳ್ಳುತ್ತದೆ! ವ್ಯಸನಿಯಾದವನಿಗೆ ಸುಖದ ಬದಲು ದುಃಖವೇ ಕಟ್ಟಿಟ್ಟ ಬುತ್ತಿ!

ಭೋಗದಿಂದ ರೋಗ ಒದಗುವುದು ಹೀಗೆಯೇ. ಸುಖದ ಮರ್ಮವನ್ನರಿಯದೆ ಸಾಧನೆಯಲ್ಲಿಯೇ ಸುಖವನ್ನು ಕಂಡುಕೊಳ್ಳುವ ಹೆಡ್ಡರು ಬಗೆಬಗೆಯ ರೋಗಗಳಿಗೆ ಪಕ್ಕಾಗುವುದು ಸಹಜ. ಭೋಗಸಾಧನೆಗೂ ಸುಖಕ್ಕೂ ನೇರವಾದ ನಂಟೇನು ಇರದು ಎಂದು ತಿಳಿದುಕೊಳ್ಳದಿದ್ದರೆ, 'ಭೋಗೇ ರೋಗಭಯಂ' ಎಂಬುದು ತಪ್ಪಿದ್ದಲ್ಲ.

ಹೋದದ್ದಕ್ಕೆ ದುಗುಡ

ನಮಗೆ ಬೇಕೆನಿಸಿದುದು ಬಾರದಿದ್ದರೆ, ಬೇಡವೆನಿಸಿದುದು ಬಂದರೆ ದುಃಖ. ಬೇಕಾದುದು ಬಂದರೆ, ಬೇಡವಾದುದು ಬಾರದಿದ್ದರೆ ಸುಖ.

ವಸ್ತು ಬರುವುದೂ, ಇರುವುದೂ, ಹೋಗುವುದೂ, ತನ್ನಷ್ಟಕ್ಕೆ ತಾನೆ ಸುಖವೂ ಅಲ್ಲ ದುಃಖವೂ ಅಲ್ಲ. ವಸ್ತುವನ್ನು ಕುರಿತು ನಮ್ಮಲ್ಲಿರುವ ಬಯಕೆ, ಭಯ, ಭಾವನೆ-ಇವೆಲ್ಲ ಸುಖದುಃಖಗಳ ಆಸರೆಯಾಗುತ್ತವೆ.

ಮತ್ತೆ ವಸ್ತು ಬರುವುದು, ಇರುವುದು, ಹೋಗುವುದು ನಮ್ಮ ಬಯಕೆ, ಭಯ, ಭಾವನೆಗಳನ್ನೇನು ಅವಲಂಬಿಸಿರುವುದಿಲ್ಲ. ನಮ್ಮ ಮನಸ್ಸಿನಂತೆ ವಸ್ತುಸ್ಥಿತಿ ಇದ್ದೀತೆ?

ಕಾಲ ಎನ್ನಿ, ಕರ್ಮ ಎನ್ನಿ, ಅದೃಷ್ಟ ಎನ್ನಿ, ನಿಯತಿ ಎನ್ನಿ, ಆಕಸ್ಮಿಕ ಎನ್ನಿ. ಅಂತೂ ವಸ್ತು ಬರುವಾಗ ಬರುತ್ತದೆ, ಇರುವಾಗ ಇರುತ್ತದೆ, ಹೋಗುವಾಗ ಹೋಗುತ್ತದೆ. ನಾವು ತಲೆಕೆಡಿಸಿಕೊಂಡರೆ ವಸ್ತುಸ್ಥಿತಿಯೇನು ಮಾರ್ಪಡುವುದಿಲ್ಲ.

ನಮಗೆ ಇಷ್ಟವಾದುದು, ಪ್ರಿಯವೆನಿಸಿದ್ದು ಕೈತಪ್ಪಿ ಹೋದರೆ, ಕಳುವಾದರೆ, ಹಾಳಾದರೆ, ದುಗುಡಬಾರದೆ ಉಂಟೆ? ಹೋದದ್ದು ಹೇಗಾದರೂ ಹಿಂದಕ್ಕೆ ಬಂದೀತೋ ಎಂದು ಪ್ರಯತ್ನಪಡುವುದೂ ಉಂಟು. ಆದರೆ ಹೋದದ್ದೆಲ್ಲ ಹಿಂದಕ್ಕೆ ಬರುವಂಥದಲ್ಲ ಎಂಬ ವಿವೇಕವೂ ಇರಬೇಕಾಗುತ್ತದೆ. ಸತ್ತವರು ನಮ್ಮ ಯಾವ ಪ್ರಯತ್ನದಿಂದ ತಾನೆ ಮತ್ತೆ ಬದುಕಿ ಬಂದಾರು? ಹಾಳಾದ ಪದಾರ್ಥ ಏನು ಮಾಡಿದರೆ ತಾನೆ ಮತ್ತೆ ಮೊದಲಿನಂತೆ ಆದೀತು? ಬದುಕಿನಲ್ಲಿ ವ್ಯರ್ಥವಾಗಿ ಕಳೆದ ಕಾಲವನ್ನು ನೆನಪಿಗೆ ತಂದುಕೊಂಡು ಕೆಲವರು ಮರುಗುವುದುಂಟು. ಆದರೆ ಮರುಕದಿಂದ ಕಾಲವೇನು ಮರಳಲಾರದು. ಆದದ್ದು ಆಯಿತು, ಹೋದದ್ದು ಹೋಯಿತು, ಮುಂದಾದರೂ ಎಚ್ಚರ ಇರಲಿ-ಎಂದು ಧೈರ್ಯತಂದುಕೊಳ್ಳುವುದು ಜಾಣತನ. ಹೋದುದು ಹೋಯಿತು. ಇದ್ದುದ್ದನ್ನು, ಇದ್ದವರನ್ನು ಬರಿದೆ ದುಗುಡದಲ್ಲಿ ತೊಡಗಿಸಬಾರದು. ನಮ್ಮ ಪ್ರಯತ್ನ ಪ್ರಯೋಜನಕಾರಿಯಾಗದು ಎನ್ನುವಲ್ಲಿ ದುಗುಡವೂ ಸರಿಯಲ್ಲ. ಪ್ರಯತ್ನಕ್ಕೆ ಪ್ರೇರಣೆಯಾದಾಗಲೆ ದುಗುಡ ಸಾರ್ಥಕ.

'ಕೊಟ್ಟವನು ಕೊಂಡುಹೋದರೆ ಕುಟ್ಟಿಕೊಂಡು ಅಳಲೇಕೆ?' ಅಳುವುದರಿಂದ ಅದೇನು ಹಿಂದಕ್ಕೆ ಬಂದೀತೆ?

ಸಮಾಧಾನವಾಗಿರುವುದು ಮುಖ್ಯ.

ಬೀದಿ-ಜಗಳ

ಬೀದಿಯ ಜಗಳ ಮೊದಲಾಗುವುದು ಹೇಗೆ, ಕೊನೆಮುಟ್ಟುವುದು ಹೇಗೆ-ಎಂಬುದನ್ನು ಪರಶಿವನೂ ಅರಿಯ!

ಬಹುಮಟ್ಟಿಗೆ ಸಣ್ಣ ಕಾರಣವೇ ಇರುತ್ತದೆ. ಕಾರಣವೇ ಇಲ್ಲದಿರುವುದೂ ಉಂಟು! ಮಾತಿಗೆ ಮಾತು ಬೆಳೆದು, ಕೈ ಮುಂದಾಗಿ ಬಂದಿತೆಂದರೆ ಆಯಿತು, ಯುದ್ಧಕಾಂಡ ಆರಂಭವೇ.

ಇನ್ನು ಬೀದಿಯ ಜಗಳ ಮನೋರಂಜನೆಯೆಂಬಂತೆ ಹಿಂಡು ಜನ ನೆರೆಯಲು ಕರೆ. ಊರಿನಲ್ಲಿ ಕೆಲಸವಿಲ್ಲದೆ ಹೀಗೆ ಕಾಲ ಕಳೆಯಬಲ್ಲವರು ಎಷ್ಟು ಮಂದಿ ಇದ್ದಾರೆ ಎಂಬುದನ್ನು ಕಂಡುಕೊಳ್ಳಲು ಬೇರೆ ಸಂವಿಧಾನ ಬೇಕಾದುದೇ ಇಲ್ಲ! ತಮಾಷೆಯನ್ನು ನೋಡುತ್ತ ಸುಮ್ಮನೆ ನಿಲ್ಲುವುದೂ ಇಲ್ಲ ಈ ಜನ. ಪಕ್ಷ ವಹಿಸಿ ಪ್ರೋತ್ಸಾಹಿಸುತ್ತಾರೆ; ವಾದಿ-ಪ್ರತಿವಾದಿಗಳಾಗುತ್ತಾರೆ; ನ್ಯಾಯಮೂರ್ತಿಗಳಾಗಿ ತೀರ್ಪನ್ನೂ ಕೊಡುತ್ತಾರೆ; ಆರಕ್ಷಕ ಪ್ರತಿನಿಧಿಗಳಾಗಿ ಶಿಕ್ಷೆಯನ್ನೂ ಮಾಡಿಬಿಡುತ್ತಾರೆ! ಇಬ್ಬರ ನಡುವೆ ಮೊದಲಾದ ಕಿರುಜಗಳ ಬೆಳೆದು ಕೇರಿಯಲ್ಲೆಲ್ಲ ಮೊಳಗುತ್ತದೆ; ಉಳಿದೆಲ್ಲರನ್ನೂ ಬಣಗಳಲ್ಲಿ ತೊಡಗಿಸುತ್ತದೆ; ಜನರ ಆವೇಗ- ಉದ್ವೇಗ, ದುಗುಡ-ದುಮ್ಮಾನಗಳನ್ನೆಲ್ಲ ಬಯಲು ಮಾಡುತ್ತದೆ. ಹಗರಣವನ್ನು ಸಾಕು ಮಾಡಿರೆಂದು ನೀತಿ ಹೇಳುವವರೂ ಇರುತ್ತಾರೆನ್ನಿ. ಆದರೆ ಬಿರುಸಿನ ವಾತಾವರಣದಲ್ಲಿ ಅವರ ಮೈ ಮುಕ್ಕಾಗದೆ ದೊಂಬಿಯಿಂದ ಅವರು ಪಾರಾಗಿ ಹೋಗುವುದಾದರೆ ಅವರ ಪುಣ್ಯ! ಎಷ್ಟೋ ವೇಳೆ, ಜಗಳ ಮೊದಲು ಮಾಡಿದವರು ಅಲ್ಲಿರುವುದೇ ಇಲ್ಲ. ಅವರು ಕಣ್ಮರೆಯಾದ ಮೇಲೂ ಜಗಳ ಮುಂದುವರೆಯುತ್ತದೆ; ಮತ್ತಷ್ಟು ಕಳೆಯೇರುತ್ತದೆ! ಹಗರಣಕ್ಕೆ ಕಾರಣ ಇರಲೇ ಬೇಕೆಂದಿಲ್ಲ. ಜಗಳವಾಡುವ ಪ್ರವೃತ್ತಿಯೊಂದಿದ್ದರೆ ಸಾಕು. ಈ ಪ್ರವೃತ್ತಿಯೂ ಹಲವರಲ್ಲಿ ಇರುತ್ತದೆ; ಅದಕ್ಕೆ ಸರಿಯಾದ ಅವಕಾಶ ದೊರೆಯದೆ, ಪಾಪ, ಕಷ್ಟಪಡುತ್ತಾರೆ. ಅವರಿಗೆ ಇದೊಂದು ಸುಸಂದರ್ಭ. ದನಿಯೇರಿಸಿ ಮಾತನಾಡಿ, ಸಭ್ಯತೆ ಆವರೆಗೆ ಅದುಮಿಟ್ಟ ಶಬ್ದಗಳು ಈಗ ಸ್ವತಂತ್ರವಾಗಿ ಹಾರಾಡಿ, ಅಭಿನಯದ ಸ್ವಾರಸ್ಯವನ್ನು ಎಲ್ಲರಿಗೂ ಮನದಟ್ಟು ಮಾಡಿಸಿ, ನಾಲ್ಕೂ ಜನರ ಕಣ್ಣಿಗೆ ಬಿದ್ದು, ದಿಗ್ವಿಜಯವನ್ನು ಸಾಧಿಸಿದಂತೆ ಸಮಾಧಾನಪಟ್ಟುಕೊಳ್ಳುವ ಜನ ಇದ್ದಾರಲ್ಲವೆ?

ಜಗಳದ ಉದ್ದೇಶವೇನು? ಬರಿಯ ಜಗಳ ಅಷ್ಟೆ.

ಇಲಿಯೋ ಹುಲಿಯೋ

ಇಲಿಗೆ ಹೆದರಿ ಹುಲಿಯ ಬಾಯಿಗೆ ಬೀಳುವರುಂಟೆ? ಇಲಿಗೆ ಹೆದರುವವರೇನೋ ಇರುತ್ತಾರೆ; ಹುಲಿಯ ಬಾಯಿಗೆ ಸಿಕ್ಕಿ ಬೀಳುವವರೂ ಇರುತ್ತಾರೆನ್ನಿ.

ಆದರೆ ಇಲಿಯಿಂದ ತಪ್ಪಿಸಿಕೊಂಡು ಹುಲಿ ಬಾಯಿಗೆ ಬೀಳುವುದೆಂದರೆ ಅರ್ಥವಿದೆಯೆ? ಹುಲಿಯಿರುವುದು ಕಾಡಿನಲ್ಲಿ; ಇಲಿ ಇರುವುದು ಮನೆಯಲ್ಲಿ, ಹೊಲಗದ್ದೆಗಳಲ್ಲಿ. ಒಂದರಿಂದ ತಪ್ಪಿಸಿಕೊಂಡು ಇನ್ನೊಂದಕ್ಕೆ ಬಲಿಯಾಗುವ ಸಂಭವವೆಲ್ಲಿಯದು? ಗಾದೆಯೇನೋ ಹಾಗಿದೆ. 'ಇಲಿಗೆ ಹೆದರಿ ಹುಲಿಯ ಬಾಯಿಗೆ ಬಿದ್ದಂತೆ' ಎಂದು ಅದರ ಒಕ್ಕಣೆ. ಅದು ಅನುಭವದ ಮಾತು. ಇದನ್ನು ಅರ್ಥಮಾಡಿ ಕೊಳ್ಳುವಾಗ ಇಲಿ, ಹುಲಿ ಎಂದಷ್ಟೆ ತಿಳಿದುಕೊಂಡರೆ ಸಾಲದು. ಇಲಿಯಿಂದ ಬರುವ ತೊಂದರೆ ಸಣ್ಣದು, ಹುಲಿಯಿಂದ ಬರುವ ಗಾಸಿ ದೊಡ್ಡದು. ಸಂಸಾರದ ಯಾವುದೋ ಸಣ್ಣ ಕಿರುಕುಳಕ್ಕೆ ಹೆದರಿ ಸಂನ್ಯಾಸವೇ ಸರಿಯೆಂದು ಮಠಕ್ಕೆ ಸೇರಿದರೆ, ಅಲ್ಲಿನ ಸುಳಿಯಲ್ಲಿ ಸಿಕ್ಕು ಸಾಯುವ ಸ್ಥಿತಿಯೇ ಒದಗಿಬಂದರೆ ಏನು ಮಾಡುವುದು? ಇಂಥ ಇಕ್ಕಟ್ಟಿನ ಪ್ರಸಂಗಗಳು ಹಲವಾರು ಬರುತ್ತವೆ. ಒಂದು ಸಣ್ಣ ಕಷ್ಟ ತಪ್ಪಲೆಂದು ಯಾವುದೋ ದೊಡ್ಡ ಚಟಕ್ಕೆ ಬಲಿಯಾದರೆ, ಅದೇ ಪೆಡಂಭೂತವಾಗಿ ಮೇಲೆ ಎರಗುತ್ತದೆ; ಎರಗುವವರೆಗೂ ತಿಳಿಯುವುದಿಲ್ಲ. ತಪ್ಪಿಸಿಕೊಳ್ಳುವ ಕಷ್ಟ ಸಣ್ಣದೆಂದು ಆಗ ತಿಳಿಯುವುದಿಲ್ಲ. ಅದಕ್ಕಿಂತ ದೊಡ್ಡ ಕಷ್ಟ ಎದುರಿಗೆ ಬಂದಾಗಲೇ ತಾನು ತಪ್ಪಿಸಿಕೊಂಡು ಬಂದದ್ದು ಸಣ್ಣದೆಂದು ಅರಿವಿಗೆ ಬರುವುದು. ನಮಗೆ ಯಾವ ಕಷ್ಟ ಬಂದರೂ, ಅದು ಎದುರಿಗಿದ್ದಾಗ ದೊಡ್ಡದಾಗಿಯೆ ಕಾಣಿಸಿಕೊಳ್ಳುತ್ತದೆ. ಇಲಿಯ ಹಲ್ಲು, ಕಾಲಿನ ಉಗುರುಗಳು ಮಾರಕಾಸ್ತ್ರಗಳಂತೆಯೇ ಕಾಣುತ್ತವೆ.

ಹಲ್ಲು ನೋವು ಬಂದವರಿಗೆ 'ಇನ್ನು ಏನನ್ನಾದರೂ ತಾಳಿಕೊಳ್ಳಬಹುದು; ಹಲ್ಲುನೋವು ಬರಬಾರದು' ಎನಿಸುತ್ತದೆ. ಅದು ತೀರಿದರೆ ಸಾಕೆಂಬ ಕಾತರ.

ದಿಟವಾಗಿ ಇಲಿಯೆ; ಅನುಭವಿಸುವಾಗ ಮಾತ್ರ ಹುಲಿಯೇ. ಒಂದು ಹೋಗಿ ಇನ್ನೊಂದು ಬಂದರೆ, ಅದು ಹಿಂದಿನದಕ್ಕಿಂತ ದೊಡ್ಡದು. ಹಿಂದಿನದು ಇಲಿ; ಈಗ ಬಂದಿರುವುದು ಹುಲಿ.

ವಾಸನೆಯ ಚೌಕಟ್ಟು

ಬಟ್ಟೆಯನ್ನು ಬಣ್ಣದ ನೀರಿನಲ್ಲಿ ಅದ್ದಿದಾಗ, ಬಟ್ಟೆಗೆ ಬಣ್ಣ ಅಂಟಿಕೊಳ್ಳುವುದು ಎಲ್ಲರಿಗೂ ತಿಳಿದದ್ದೇ. ಹಾಗೆಯೆ ಮನಸ್ಸು ಯಾವುದಾದರೊಂದು ವಿಷಯದಲ್ಲಿ ತೊಡಗಿದಾಗ, ಮನಸ್ಸಿಗೂ ವಿಷಯದ ಅನುಭವ ಅಂಟಿಕೊಳ್ಳುತ್ತದೆ.

ಇದನ್ನು ಸಂಸ್ಕೃತದಲ್ಲಿ ವಾಸನೆಯೆನ್ನುತ್ತಾರೆ. ಅನುಭವದ ನಂತರ ಮನಸ್ಸಿನಲ್ಲಿ ಉಳಿದುಕೊಳ್ಳುವ ಸಂಸ್ಕಾರ. ಮಣ್ಣಿನ ಮೇಲೆ ಗಾಡಿಯ ಚಕ್ರ ಹರಿದುಹೋದಾಗ ಚಕ್ರದ ಗುರುತು ಉಳಿದುಕೊಳ್ಳುವ ಹಾಗೆ. ವಾಸನೆಗಳಲ್ಲಿ ಶರೀರವಾಸನೆ, ಶಾಸ್ತ್ರವಾಸನೆ, ಲೋಕವಾಸನೆ ಎಂದು ಮೂರು ಬಗೆಗಳಂತೆ. ಮೈಯ, ಮನಸ್ಸಿನ ಬಯಕೆಗಳನ್ನು ತೀರಿಸಿಕೊಳ್ಳುವಾಗ, ಒದಗಿಬರುವ, ಉಳಿದುಕೊಳ್ಳುವ ಪ್ರೀತಿ, ಸಿಟ್ಟು, ಅಸೂಯೆ, ಉದ್ವೇಗಗಳೆಲ್ಲ ಮನಸ್ಸಿನ ತುಂಬ ತುಂಬಿಕೊಳ್ಳುತ್ತವೆ; ಮುಂದಿನ ಬದುಕಿನ ಬಯಕೆಗಳಿಗೆ ಚೌಕಟ್ಟನ್ನು ಒದಗಿಸುತ್ತವೆ. ಇದು ಶರೀರವಾಸನೆ. ಇನ್ನು ನಾವು ಓದಿದ್ದು, ಅಧ್ಯಯನ ಮಾಡಿದ್ದು, ಗ್ರಂಥವನ್ನು ಕುರಿತು ಮನನ ಮಾಡಿದ್ದು ಇವೂ ಮನಸ್ಸಿನ ಮೇಲೆ ಪರಿಣಾಮವನ್ನು ಮೂಡಿಸುತ್ತವೆ. ಹೆಚ್ಚು-ಹೆಚ್ಚು ಓದಿದ ಹಾಗೆಲ್ಲ ಸಂಶಯಗಳೂ ಹೆಚ್ಚುತ್ತವೆ; ಮನಸ್ಸು ನೆಲೆಗಾಣದೆ ಕಂಗೆಡುತ್ತದೆ. ಬಹುಶಾಸ್ತ್ರ ವ್ಯಾಸಂಗ ಬುದ್ಧಿಭ್ರಮಣ ಕಾರಣವೆಂದು ಹಿಂದಿನವರು ಹೇಳಿದರು. ಇದು ಶಾಸ್ತ್ರವಾಸನೆ. ಬದುಕಿನಲ್ಲಿ ನಮ್ಮೊಡನೆ ಸೇರುವ ಜನರು, ನಮಗೆ ಒದಗುವ ಪ್ರಸಂಗಗಳು; ನಾವು ಬೆಳೆಯುವಾಗ ದೊರಕುವ ಅನುಭವಗಳು, ನಮ್ಮನ್ನು ಕಾಡುವ ಸಮಸ್ಯೆಗಳು, ನಾವು ಪಡೆದುಕೊಳ್ಳುವ ಸಮಾಧಾನಗಳು ಇವೆಲ್ಲ ಲೋಕವಾಸನೆಗೆ ಕಾರಣಗಳು.

ಬದುಕಿನುದ್ದಕ್ಕೂ ಈ ಮೂರು ತೆರನಾದ ವಾಸನೆಗಳು ಕೆಲಸ ಮಾಡುತ್ತಲೇ ಇರುತ್ತವೆ. ನಾವು ಮಾಡುವ ಒಂದೊಂದು ಕೆಲಸದಲ್ಲೂ ಇವುಗಳ ಪ್ರಭಾವ ಇದ್ದೇ ಇರುತ್ತದೆ.

ಹೀಗಾಗಿ, ಯಾವೊಂದು ಗಳಿಗೆಯಲ್ಲಿ ನಾವು ಮಾಡುವ ಕೆಲಸವಾಗಲಿ ಆಲೋಚನೆಯಾಗಲಿ ಸಂದರ್ಭದಿಂದಲೇ ಸಿದ್ಧವಾದುದು ಎನ್ನುವ ಹಾಗಿಲ್ಲ; ಅದರಲ್ಲಿ ನಮ್ಮ ಸ್ವಾತಂತ್ರ್ಯವಿದೆ ಎನ್ನುವ ಹಾಗೂ ಇಲ್ಲ.

'ಶ್ರೇಯಾಂಸಿ ಬಹುವಿಘ್ನಾನಿ'

ಒಳ್ಳೆಯ ಕೆಲಸವನ್ನು ಮಾಡಹೊರಟರೆ ನೂರೆಂಟು ತೊಡಕುಗಳು ಎಂದು ಈ ಮಾತಿನ ಅರ್ಥ. ಹಲವರ ಅನುಭವದಲ್ಲಿ ಇದು ದಿಟವೆನಿಸುವುದೂ ಉಂಟು.

ಆದರೆ ಇದೇನು ಪ್ರಕೃತಿ ನಿಯಮವಲ್ಲ. ಒಳ್ಳೆಯ ಕೆಲಸಕ್ಕೆ ಕೈ ಹಾಕಲೇಬಾರದು ಎಂಬ ಸೂಚನೆಯೂ ಅಲ್ಲ. ಕೆಟ್ಟದ್ದು ಕೈಗೂಡುವಷ್ಟು ಸುಲಭವಾಗಿ ಒಳ್ಳೆಯದು ಕೈಗೂಡಲಾರದು ಎಂಬುದಷ್ಟೆ ತಾತ್ಪರ್ಯ. ಇದು ಲೋಕಾನುಭವವೂ ಹೌದು. ಒಳ್ಳೆಯದಾಗಲಿ ಕೆಟ್ಟದಾಗಲಿ ಮನಸ್ಸಿನಲ್ಲೆ ಮೊದಲು ಮೂಡಿಕೊಳ್ಳಬೇಕು. ಅದು ಬಯಕೆಯಾಗಿ ತೋರಿಕೊಳ್ಳುತ್ತದೆ. ಬಯಕೆಗೆ ಬಲ ಬರುವುದು ಅದು ಸಂಕಲ್ಪವೆಂದಾದಾಗ ಮಾತ್ರ. ಸಂಕಲ್ಪ ಅಷ್ಟು ಸುಲಭವಲ್ಲ. ಬಯಕೆಯೇನೋ ಸ್ವಭಾವಸಿದ್ಧವಾಗಿಯೆ ಒದಗಿಬಂದೀತು. ಅದಕ್ಕೇನು ಅಡ್ಡಿಯಿರದು. ಆದರೆ ಅದಕ್ಕೆ ತೊಡಗಿಸುವಾಗ ಗಟ್ಟಿ ಮನಸ್ಸು ಮಾಡಬೇಕು; ಪ್ರಯತ್ನ ಇರಬೇಕು. ಕೆಟ್ಟ ಕೆಲಸ ಮಾಡುವಾಗಲೂ ಸಂಕಲ್ಪ ಇರಬೇಕು; ಆದರೆ ಅದಕ್ಕೆ ಒತ್ತಾಸೆಯಾಗಿ ಸ್ವಾರ್ಥ ಇರುತ್ತದೆ. ಪರಿಸರದ ನೆರವೂ ಇದ್ದೀತು. ಹೊಳೆ ಹರಿದಂತೆ ಹರಿಗೋಲು ಸಾಗುವುದು ಸುಲಭ. ಪ್ರವಾಹಕ್ಕೆ ಎದುರಾಗಿ ಹೋಗುವುದೆಂದರೆ ಕಷ್ಟವೆ ತಾನೆ? ಅದನ್ನು ನಡೆಸುವವನು ಗಟ್ಟಿಗನಾಗಿರಬೇಕು. ಒಳ್ಳೆಯ ಕೆಲಸ ಮಾಡುವಾಗ ಸ್ವಾರ್ಥ ಇರುವುದಿಲ್ಲ; ಬೇರೆಯವರ ಹಿತವೇ ಮನಸ್ಸಿನಲ್ಲಿರುತ್ತದೆ. ಸ್ವಾರ್ಥದ ಬೆಂಬಲ ವಿರದಾಗ ಪ್ರಯತ್ನದ ಬಲ ಇರಬೇಕು. ಬರುವ ಅಡಚಣೆಗಳನ್ನೆಲ್ಲ ಎದುರಿಸುವ ಧೈರ್ಯವಿರಬೇಕು. ಮತ್ತೆ ಹಿಡಿದ ಕೆಲಸ ಅಡ್ಡಿ ಆತಂಕಗಳಿಲ್ಲದೆ ಸುಲಭದಲ್ಲಿ ಕೈಗೂಡಿದರೆ ಅದರಲ್ಲಿ ಸ್ವಾರಸ್ಯವೂ ಕಡಮೆಯೆ; ಅದರ ಸಾರ್ಥಕ್ಯವೂ ಅಷ್ಟಕಷ್ಟೇ.

ತೊಂದರೆಗಳು ಒದಗಿಬಂದು, ಕಷ್ಟನಿಷ್ಠುರಗಳನ್ನು ತಾಳಿಕೊಂಡು, ಅಡ್ಡಿಗಳನ್ನೆಲ್ಲ ತೊಡೆದು ಹಾಕಿದಮೇಲೆಯೆ ಬಯಕೆ ಕೈಗೂಡಿದಾಗ ಇರುವ ಸಮಾಧಾನ, ಸಂತೋಷ ಸಾಮಾನ್ಯವಾದುದೇನಲ್ಲ.

ಅದು ತೋರಿಯಡಗುವ ನೀರಗುಳ್ಳೆಯೂ ಅಲ್ಲ. ಶ್ರೇಯಸ್ಸು ಬದುಕಿನ ನೆಮ್ಮದಿಗೆ, ಕಾರಣವೂ ಹೌದು; ಫಲವೂ ಹೌದು.

ಯೋಗ್ಯತೆ - ಸಮಸ್ಯೆ

'ಝುಂಕಿಸದಿರು ತಕ್ಕರಾರುಮಂ' ಇದೊಬ್ಬ ಕವಿಯ ಕಿವಿಮಾತು.

ಯೋಗ್ಯತೆಯುಳ್ಳವರು ಯಾರಾದರಾಗಲಿ ಅವರನ್ನು ಹಳಿಯಬೇಡ ಎಂದು ಇದರ ಅರ್ಥ. ಯೋಗ್ಯತೆಯು ಅನೇಕ ವಿಧ. ಬುದ್ಧಿಯಲ್ಲಿ, ವಿದ್ಯೆಯಲ್ಲಿ, ಬಲದಲ್ಲಿ, ಕೈಕೆಲಸದಲ್ಲಿ ಇತ್ಯಾದಿ. ಕೊಟ್ಟ, ಅಥವಾ ಆರಿಸಿಕೊಂಡ, ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವುದು ಯೋಗ್ಯತೆಯ ಅಳತೆಗೋಲು. ಇಂಥವರಿಂದಲೇ ಸಮುದಾಯದ ಸಾಮರ್ಥ್ಯ ಸಲ್ಲುವುದು.

ಎಲ್ಲರೂ ಎಲ್ಲ ಕೆಲಸವನ್ನೂ ಸಮರ್ಪಕವಾಗಿ ನೆರವೇರಿಸುವುದು ಸಾಧ್ಯವೆ? ಅವರವರ ಶಕ್ತಿಗೆ, ಅಭಿರುಚಿಗೆ ತಕ್ಕಂತೆ ಆಯಾ ಕೆಲಸಗಳು ನಡೆಯಬೇಕು. ಇದರಲ್ಲಿ ಮೇಲು-ಕೀಳು ಎಂಬ ವಿಂಗಡಣೆಗೆ ಎಡೆಯಿರದು. ಚರ್ಮ ಹದಮಾಡುವವನೋ, ರಸ್ತೆ ದುರಸ್ತಿ ಮಾಡುವವನೋ, ರೋಗ ಗುಣಪಡಿಸುವವನೋ, ವಿದ್ಯೆ ಕಲಿಸುವವನೋ, ಯಾರಾದರಾಗಲಿ ಆಯಾ ವಿಭಾಗದಲ್ಲಿ ಯೋಗ್ಯತೆಯಿರಬೇಡವೆ? ಇದಿಲ್ಲದಿದ್ದರೆ ನಡೆಯುವ ಕೆಲಸ ಒಪ್ಪವಾಗಿ, ಓರಣವಾಗಿ, ಆಕರ್ಷಕವಾಗಿ ಇರಲಾರದು. ಪ್ರಪಂಚದಲ್ಲಿ ಬಾಳುವ ಮನುಷ್ಯನಿಗೆ ಬಟ್ಟೆ ಬೇಕು, ಮನೆ ಬೇಕು, ಆಹಾರ ಬೇಕು, ಮನೋರಂಜನೆ ಬೇಕು, ವಿದ್ಯೆ ಬೇಕು- ಹೀಗೆ ಹತ್ತಾರು ಅಗತ್ಯಗಳು. ಈ ಅಗತ್ಯಗಳನ್ನೆಲ್ಲ ಪೂರಯಿಸುವವರಿಗೆ ಯೋಗ್ಯತೆ ಇರಬೇಡವೆ?

ನಮ್ಮ ಬದುಕು ನೆಮ್ಮದಿಯಿಂದಿದೆಯೆಂದರೆ ಹಲವಾರು ಮಂದಿ ಯೋಗ್ಯರು, ಸಮರ್ಥರು ಅದಕ್ಕೆ ಕಾರಣರಾಗಿದ್ದಾರೆ, ಎಂದೇ ಅರ್ಥ. ಇದನ್ನು ಕಂಡುಕೊಂಡರೆ ನಾವು ಯಾರನ್ನೂ ಹಳಿಯಲಾರೆವು; ನಿಂದಿಸಲಾರೆವು. ಯೋಗ್ಯತೆಯಿಲ್ಲದಿದ್ದವರೂ ಇದ್ದಾರೆನ್ನಿ; ಆಡಳಿತ, ರಾಜಕಾರಣ, ಉದ್ಯಮ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಅವರನ್ನಾದರೂ ಹಳಿಯೋಣವೇ ಎಂದರೆ ಪ್ರಯೋಜನವೇನು? ಅವರೇ ಹೆಚ್ಚುತ್ತಿದ್ದಾರಲ್ಲ!

ಸಮಸ್ಯೆಯ ಪರಿಹಾರ

ಕುಮಾರವ್ಯಾಸನ ಜಾಣನುಡಿಗಳಲ್ಲೊಂದು - 'ನಾಲುವರ ನಡುವಣ ಹಾವು ಸಾಯದು' ಎಂಬುದು.

ನಾಲ್ಕು ಜನ ಸೇರಿದ್ದಾಗ ಹಾವೊಂದು ಕಂಡರೆ ಅದು ಸಾಯುವುದಿಲ್ಲವಂತೆ. ಕಾರಣವೇನು ? ಅದನ್ನು ಸಾಯಿಸಬೇಕೆಂದೇ ನಾಲ್ಕೂ ಜನರ ನಿಶ್ಚಯವಾದರೂ ಅದನ್ನು ಸಾಯಿಸಲು ಒಬ್ಬೊಬ್ಬನ ಸೂಚನೆಯೂ ಒಂದೊಂದು !

ಸಾಯಿಸುವ ಬಗೆಯನ್ನು ಕುರಿತು ಒಮ್ಮತ ಒದುಗುವುದು ಕಷ್ಟ. ಒದಗಿದರೂ ಒಡನೆಯೇ ಒದಗುವುದಿಲ್ಲ. ಒಂದಿಷ್ಟು ಚರ್ಚೆಯಾದ ಮೇಲೇ ಅದು ಅರೆಬರೆಯಾಗಿ ತೋರಿಕೊಂಡೀತು. ಅಷ್ಟರೊಳಗೆ ಹಾವು ಮರೆಯಾಗದೆ ಇರುತ್ತದೆಯೇ ? ಸಾರ್ವಜನಿಕವಾದ ಸಮಸ್ಯೆಯೋ ಕುಟುಂಬದ ತೊಡಕೋ ಹೀಗೆಯೆ, ಬಗೆಹರಿಯುವುದು ಕಷ್ಟ. ನಾಲ್ಕು ಜನರ ಅಭಿಪ್ರಾಯಗಳು ಬೇರೆ ಬೇರೆ, ಸಮಸ್ಯೆಯ ಒಂದೊಂದು ಮುಖವನ್ನು ಒಬ್ಬೊಬ್ಬರು ಕಾಣುವರು. ತಂತಮ್ಮ ಕಾಣ್ಕೆಗೆ ಅನುಗುಣವಾಗಿ ತಾನೆ ಪರಿಹಾರ ಕ್ರಮ? ಒಬ್ಬರ ಸಲಹೆ ಮತ್ತೊಬ್ಬರಿಗೆ ಸರಿಕಾಣುವುದೆಂಬ ನಿಶ್ಚಯವೇನು ? ಸಮಸ್ಯೆ ಎಲ್ಲರಿಗೂ ಒಂದೇ ಆದರೂ ಅದು ಪರಿಹಾರವಾಗಬೇಕಾದ ಬಗೆ ಒಂದೇ ಅಲ್ಲವಲ್ಲ ?

ಸಮಸ್ಯೆ ಪರಿಹಾರವಾಗದೆ ಹಾಗೆಯೆ ಉಳಿದುಕೊಳ್ಳಬೇಕೆಂಬುದೇನೋ ಯಾರ ಬಯಕೆಯೂ ಅಲ್ಲ. ಆದರೆ ತನಗೆ ಸರಿದೋರಿದ ಪರಿಹಾರವೇ ಎಲ್ಲರಿಗೂ ಒಪ್ಪಿಗೆಯಾಗಬೇಕು ಎಂದು ಒಬ್ಬೊಬ್ಬನೂ ಹಟ ಹಿಡಿದರೆ ತೊಡಕಾಗುತ್ತದೆ. ಮತ್ತೊಬ್ಬನ ಅಭಿಪ್ರಾಯಕ್ಕೆ ಬೆಲೆಯಿದೆ ಎನ್ನುವ ಔದಾರ್ಯ ತೋರುವುದು ಅನುಕೂಲಸಿಂಧು ಮಾತ್ರವಲ್ಲ, ನ್ಯಾಯವು ಹೌದು, ಸಭ್ಯತೆಯೂ ಹೌದು. ತಾನೊಬ್ಬನೇ ಬೃಹಸ್ಪತಿ ಎಂದು ಯಾರೊಬ್ಬನಾದರೂ ಎಣಿಸಿದರೆ, ಮತ್ತೊಬ್ಬನೂ ಅದೇ ಎಣಿಕೆಯನ್ನು ಮಾಡಿಕೊಳ್ಳಲು ಅಡ್ಡಿಯೇನು? ಅದರಲ್ಲಿ ತಪ್ಪಾದರೂ ಏನು?

ಇದರಲ್ಲಿ ಸ್ವಾಭಿಮಾನ, ಸ್ವಪ್ರತಿಷ್ಠೆ, ಸ್ವಾರ್ಥಗಳೇ ಮುಖ್ಯವಾಗಿಬಿಡುತ್ತವೆ. ಸಮಸ್ಯೆಯ ಪರಿಹಾರ ದೂರವಾಗಿಯೇ ಉಳಿದುಕೊಳ್ಳುತ್ತದೆ.

ಬಾರದುದು ಬೇಕೆಂಬ ಬಯಕೆ

"ಬಂದ ಸುಖವ ಬಿಡಬೇಡ, ಬಾರದುದು ಬೇಕೆಂದು ಬಯಸಬೇಡ'.

ಇದೊಂದು ಕಿವಿಮಾತು. ಕಾಲ-ದೇಶಗಳ ಗಡುವನ್ನು ದಾಟಿ ದಿಟವಾಗಿದೆ. ಎಲ್ಲರಿಗೂ ಎಲ್ಲ ಕಾಲಕ್ಕೂ ಸಲ್ಲುವ ಮಾತು ಇದು.

ಸುಖ ಬಂದಾಗ ಬೇಡವೆನ್ನುವ ಬುದ್ಧಿವಂತ ಯಾರಿದ್ದಾನು? ಬೇಡವೆನ್ನುವಾಗ ಸುಖದ ಹಿಂದೆ ದುಃಖ ಇದ್ದೀತೆಂಬ ಆತಂಕ ಇದ್ದರೆ ಸರಿಯೆ. ಅದಿಲ್ಲವಾದರೆ, ಸುಖ ಎಲ್ಲರೂ ಬಯಸುವುದೇ ಅಲ್ಲವೆ? ಈ ಉಪದೇಶ ಆಚರಣೆಗೆ ಅಷ್ಟೇನು ಕಷ್ಟವಲ್ಲ, ಉಪದೇಶದ ಅಗತ್ಯವೂ ಇರದೆನ್ನಿ! ಬಂದ ಸುಖವನ್ನು ಯಾರು ಬಿಡುತ್ತಾರೆ?

ಆದರೆ ಇನ್ನೊಂದು ಉಪದೇಶವಿದೆಯಲ್ಲ; ಅದು ಆಚರಣೆಗೆ ಅಷ್ಟು ಸುಲಭವಲ್ಲ, ಬಂದ ಸುಖಕ್ಕಿಂತ ಬಾರದ ಸುಖದ ಮೇಲೇ ಜನರ ಕಣ್ಣೆಲ್ಲ. ಬಯಕೆಯಿಲ್ಲದೆ ಸುಖವೆಲ್ಲಿ ಬಂತು?

ಸುಖವನ್ನು ಅನುಭವಿಸುತ್ತ ಇರುವಾಗ ಅದು ಸವೆಯುತ್ತ ಬಂದೀತೆಂಬ ಅರಿವು ಇದ್ದವರಿಗೆ ಬಂದ ಸುಖ ಸುಖವೇ ಅಲ್ಲ, ಅಥವಾ ತಮಗೆ ಒದಗಿಬಂದ ಸುಖಕ್ಕಿಂತ ಹೆಚ್ಚಿನ ಸುಖ ಬೇರೆಯವರಿಗೆ ಇದ್ದಾಗ ತಮ್ಮ ಸುಖ ಸುಖವೇ ಅಲ್ಲವೆನಿಸೀತು.

ಬಾರದ ಸುಖವನ್ನು ಬಯಸುವುದರಲ್ಲೇ ಒಂದು ಸುಖ ಇದ್ದರೂ ಇದ್ದೀತು. ಸೇರುವ ಗುರಿಗಿಂತ ನಡೆಯುವ ದಾರಿಯೆ ಒಮ್ಮೊಮ್ಮೆ ಹಿತವಾಗಿರುವುದುಂಟಷ್ಟೆ.

ಬಯಸುವುದರಲ್ಲೆ ಒಂದು ಸುಖ ಇದ್ದೀತು. ಆದರೆ ಬಯಸಿ ಬಯಸಿ, ಬಯಸಿದ್ದು ಬಾರದೆ ಇದ್ದರೆ ಬೇಸರವಾಗದೆ ಉಂಟೆ? ಬೇಸರದ ಜೊತೆಗೆ ದುಗುಡ, ಹೊಟ್ಟೆಯುರಿ, ನಿರಾಸೆ ಎಲ್ಲವೂ ಸೇರಿ ದುಃಖವನ್ನು ಹೆಚ್ಚಿಸುತ್ತವೆ.

ಬಯಸಲೇಬಾರದಾಗಿತ್ತು ಎನ್ನುವ ವಿವೇಕ ಆಗಲಾದರೂ ಬಂದೀತೋ? ಬರುವಂತಿರುವುದನ್ನು ಮಾತ್ರ ಅಷ್ಟನ್ನೆ ಬಯಸಿದರೆ ತೊಂದರೆಯಾಗದು. ಆದರೆ ಬಯಸುವವರಿಗೆ ಈ ಅಡ್ಡಿ ಎಲ್ಲಿಯದು? ಯಾತರ ಕಟ್ಟುಪಾಡು?

ಚಿಂತೆಯೆ ಮುಪ್ಪು

ಭರತೇಶವೈಭವದಲ್ಲಿ ಒಂದು ನಾಣ್ನುಡಿ-'ಚಿಂತೆಯೆ ಮುಪ್ಪು, ಸಂತೋಷವೆ ಯೌವನ'.

ಸಂಸ್ಕೃತದಲ್ಲೂ ಒಂದು ಮಾತು - 'ಚಿತಾ ದಹತಿ ನಿರ್ಜೀವಂ, ಚಿಂತಾ ದಹತಿ ಜೀವನಂ',— ಚಿತೆ ಹೆಣವನ್ನಷ್ಟೆ ಸುಡುತ್ತದೆ, ಚಿಂತೆಯಾದರೆ ಬಾಳನ್ನೆ ಸುಡುತ್ತದೆ.

ಚಿತೆಗೂ ಚಿಂತೆಗೂ ಅಕ್ಷರಗಳ ನಡುವೆ ಒಂದು ಬಿಂದುವಷ್ಟೆ ವ್ಯತ್ಯಾಸ. ಆದರೆ ಎಷ್ಟು ಅಂತರ ಎರಡರ ನಡುವೆ!

ಚಿಂತೆಯ ಹಿಂದೆ ಬಂದಡರಿದ ಆಪತ್ತೋ ಆತಂಕವೋ ಮಾತ್ರವಲ್ಲದೆ, ಅದನ್ನು ತಡೆಗಟ್ಟುವ ಬಲ ತನಗಿಲ್ಲವೆಂಬ ಅರಿವೂ ಇರುತ್ತದೆ. ಕಷ್ಟ ಬಂದಿತು ಎಂದೊಡನೆ ಚಿಂತೆ ಬಾರದು, ಕಷ್ಟವನ್ನು ನೀಗಿಸಿಕೊಳ್ಳಲಾರೆನೆಂದಾಗ ಚಿಂತೆ. ಚಿಂತೆಯಿಂದ ಮನಸ್ಸು ಮುದುರಿಕೊಳ್ಳುವುದು; ಉತ್ಸಾಹ ಆರುವುದು; ಮೈಯಲ್ಲಿ ಬೇನೆ ಮೂಡಿಕೊಳ್ಳುವುದು. ಚಿಂತೆಯಿಂದ ರಕ್ತದ ಒತ್ತಡ ಏರುವುದೆಂಬುದನ್ನು ಯಾರರಿಯರು? ಉಂಡದ್ದು ಅರಗದು, ವೀರ್ಯ ಕುಗ್ಗುವುದು ಎಂಬುದನ್ನೂ ಎಲ್ಲರೂ ಬಲ್ಲರಷ್ಟೆ. ಚಿಂತೆಯಲ್ಲಿ ಮುಳುಗಿದಾಗ ಯಾರೊಡನೆಯೂ ಸಂಗ ಬೇಡೆನಿಸುವುದು, ಪರಿಹಾರ ಹುಡುಕುವ ಕಾತರವೂ ತೋರಿಕೊಳ್ಳುವುದಿಲ್ಲ; ಬೇರೆಯವರನ್ನು ಸಲಹೆಗಾಗಿ ಅಥವಾ ನೆರವಿಗಾಗಿ ಕೇಳೋಣ ಎಂದೂ ಅನಿಸುವುದಿಲ್ಲ. ಹೀಗಾಗಿ ಚಿಂತೆ ಒಳಗೇ ಕುದಿಯುವ ಬೇಗೆ. ಅದು ಹೆಚ್ಚಾಗುತ್ತಲೆ ಬರುವುದು ಅದರ ಸ್ವಭಾವ. ಚಿಂತೆಗೆ ಕಾರಣವಾದ ಕಷ್ಟದ ಪರಿಹಾರಕ್ಕೆ ಚಿಂತೆಯೇ ಅಡ್ಡಿಯಾಗುತ್ತದೆ! ಪರಿಹಾರವನ್ನು ದೂರದೂರ ದೂಡುತ್ತದೆ. ಚಿಂತೆಗೆ ಆಲೋಚನೆಗಳು ಮಾತ್ರ ಆಹಾರವಲ್ಲ; ಮೈಯನ್ನೂ ತಿನ್ನುತ್ತ ಬರುತ್ತದೆ ಅದು! ಮುಖದಲ್ಲಿ ಕಳೆ ಕುಂದುತ್ತದೆ, ಬದುಕಿನಲ್ಲಿ ಗೆಲುವು ಸೊರಗುತ್ತದೆ. ಬಾಳ ಬೆಳಕು ಮರೆಯಾಗುತ್ತದೆ.

ಚಿಂತೆಯಲ್ಲಿ ತೊಡಗಿದವನು ಮುಪ್ಪಾಗುವುದು ಬೇಗ; ಬದುಕಿನಲ್ಲಿ ಬೇಸರ ಬಂದರೆ ಮುಪ್ಪು ತಾನೆ?

ಚಿಂತೆಯ ಸುಳಿ

'ಚಿಂತೆಯಿಲ್ಲದವನಿಗೆ ಸಂತೆಯಲ್ಲಿ ನಿದ್ದೆ ಬಂತಂತೆ!'— ಇದೊಂದು ಗಾದೆಯ ಮಾತು.

ಚಿಂತೆಯಿಲ್ಲದವನು ಸಂತೆಗೇಕೆ ಹೋದನೆಂದು ಕೇಳಬೇಡಿ! ಅಥವಾ ನಿದ್ದೆ ಮಾಡಲು ಸಂತೆ ಎಂಥ ಸ್ಥಳವೆಂದೂ ಕೇಳಬೇಡಿ!

ಸಂತೆಯೆಂದರೆ ಗದ್ದಲ ಇರುವುದಿಲ್ಲವೆ? ಜನ ನೆರೆದಿರುತ್ತಾರೆ; ಮಾರಾಟ, ಕೊಳ್ಳಾಟ ನಡೆಯುತ್ತಲೇ ಇರುತ್ತದೆ; ನೋಟ, ನಡೆದಾಟ ತಪ್ಪಿದ್ದಲ್ಲ; ಊಟ-ಆಟಗಳಿಗೂ ಎಡೆಯಿರುತ್ತದೆ. ಮೋಜು. ಇಷ್ಟೆಲ್ಲ ಸಂಭ್ರಮ- ಸಡಗರವಿದ್ದಾಗ ನಿದ್ದೆ ಮಾಡುವುದುಂಟೇ? ಬಳಲಿದ್ದರೂ ನಿದ್ದೆ ಮಾಡುವುದಾದೀತೆ? ಬಯಸಿದರೂ ಬಂದೀತೆ? ನಿದ್ದೆಗೆ ನೆಮ್ಮದಿ ಬೇಕು, ಏಕಾಂತಬೇಕು; ಶಾಂತತೆ ಬೇಕು. ಚಿಂತೆಯಿದ್ದರೆ ನಿದ್ದೆ ಬಾರದು. ಸಂತೆಯಲ್ಲದೆ, ಮನೆಯಲ್ಲೇ ಮಲಗಿದರೂ ನಿದ್ದೆ ಬಾರದವರು ಬಹುಮಂದಿ ಯಿಲ್ಲವೇ? ಮದ್ದು ನುಂಗಿ ನಿದ್ದೆ ಮಾಡಲು ಹವಣಿಸುವವರ ಸಂಖ್ಯೆ ದೊಡ್ಡದೇ! ಅದು ಹೆಚ್ಚುತ್ತಲೂ ಇದೆಯಂತೆ. ಇವರನ್ನೆಲ್ಲ ಚಿಂತೆ ಒಂದಲ್ಲ ಒಂದು ಬಗೆಯಲ್ಲಿ ಕಾಡುತ್ತದೆ. ಮನಸ್ಸು ತಿಳಿಯಾಗಿರುವುದಿಲ್ಲ, ಹೃದಯ ಹಗುರ ವಾಗಿರುವುದಿಲ್ಲ. ಇನ್ನು ನಿದ್ದೆ ಬರುವುದು ಹೇಗೆ? ಕೆಲವರು ಸ್ವಭಾವದಲ್ಲೇ ನಿಶ್ಚಿಂತರು: ಮತ್ತೆ ಕೆಲವರು ಕಷ್ಟಪಟ್ಟು ಮನಸ್ಸನ್ನು ಈ ನೆಲೆಗೆ ತಂದುಕೊಂಡಿರುತ್ತಾರೆ. ಕೆಲವರಲ್ಲಿ ತಿಳಿವಳಿಕೆ ಕೆಲಸ ಮಾಡುತ್ತದೆ. ಕೆಲವರ ಸಂಸ್ಕಾರ ಊರ್ಜಿತವಾಗಿರುತ್ತದೆ.

ಕೆಲವರು ಶ್ರದ್ಧಾಳುಗಳು, ಸಹನಶೀಲರು, ಧೈರ್ಯಶಾಲಿಗಳು, ಸಮಾಧಾನಿಗಳು, ಉತ್ಸಾಹಿಗಳು. ಇಂಥವರನ್ನು ಚಿಂತೆ ಕಾಡುವುದಿಲ್ಲ.

ಹೀಗೆ ಚಿಂತೆಯ ಸುಳಿಯಲ್ಲಿ ಸಿಲುಕದೆ ಇರುವವರು ನಿದ್ದೆಗಾಗಿ ಪರದಾಡಬೇಕಾದ ಅಗತ್ಯವಿಲ್ಲ. ತಲೆ ಕೆಡಿಸಿಕೊಳ್ಳಬೇಕಾದುದಿಲ್ಲ, ಜಾಗ ಹುಡುಕಬೇಕಾದುದಿಲ್ಲ. ಎಲ್ಲಿಯಾದರೂ ಮಲಗಿ ನಿದ್ದೆಯಲ್ಲಿ ಮೈ ಮರೆತಾರು! ಕಿವಿಗೆ ತಾಕಿದ ಗದ್ದಲ ಮನಸ್ಸಿನೊಳಗೆ ಇಳಿಯುವುದಿಲ್ಲ, ನಿದ್ದೆ ಬಂತೆಂದರೆ ಗದ್ದಲವೇನು ಮಾಡೀತು?

ಆದರೆ ಚಿಂತೆಯಿಲ್ಲದೆ ಇರುವ ಉಪಾಯವನ್ನು ಕಂಡುಕೊಳ್ಳುವುದು ಸುಲಭವಲ್ಲ, ದಾಸರೇ ಹೇಳಿದ್ದಾರಲ್ಲ- 'ಎಂತಾದರೂ ಚಿಂತೆ ಬಿಡದು!'

ನಿಶ್ಚಿಂತರಾದವರನೊಬ್ಬರನ್ನು ಅವರು ಕಾಣಲಿಲ್ಲ!

ಹೊಟ್ಟೆ ಕಿಚ್ಚು

ಸಂಸ್ಕೃತದಲ್ಲಿ 'ಅಸೂಯೆ', 'ಈರ್ಷ್ಯೆ' ಎಂಬೆರಡು ಮಾತುಗಳಿಗೆ ಒಂದೇ ಅರ್ಥವಲ್ಲ; ಆದರೆ ಒಂದೇ ಭಾವಕ್ಕೆ ಸೇರಿದ ಎರಡು ಮುಖಗಳು.

ಅಸೂಯೆಯೆಂದರೆ, ನಮಗೆ ಆಗದವರಲ್ಲಿ ಗುಣವನ್ನು ಗುರುತಿಸಿದಾಗಲೂ, ಅದನ್ನು ತೋರಗೊಡದೆ ಆ ಗುಣದಲ್ಲಿಯೂ ಯಾವುದಾದರೊಂದು ಕೊಂಕನ್ನು, ದೋಷವನ್ನು ಹುಡುಕಿ ಎತ್ತಿತೋರಿಸುವುದು (ಗುಣೇಷು ದೋಷಾವಿಷ್ಕರಣಂ) ಗುಣವನ್ನು ಗುಣವೆಂದು ಒಪ್ಪದಿರುವುದು.

ಈರ್ಷ್ಯೆಯೆಂದರೆ ಬೇರೆಯವರು ಮುಂದೆ ಬಂದರೆ, ಅಭಿವೃದ್ಧಿ ಹೊಂದಿದರೆ, ನಾಲ್ಕು ಜನರಿಂದ ಹೊಗಳಿಕೆ ಪಡೆದರೆ ನಮ್ಮ ಮನಸ್ಸು ಹುಳಿಹುಳಿಯಾಗುವುದು; ಒಡಲಲ್ಲಿ ಉರಿ ಕಾಣಿಸಿಕೊಳ್ಳುವುದು. (ಪರೋತ್ಕರ್ಷ ಅಸಹನಂ)

ಎರಡನ್ನೂ ಬೆರೆಸಿ ಕನ್ನಡದಲ್ಲಿ ಹೊಟ್ಟೆಕಿಚ್ಚು ಎಂಬ ಮಾತಿದೆ. ಹೊಟ್ಟೆಯಲ್ಲಿ ಕಿಚ್ಚು (ಅಥವಾ ಉರಿ) ಎಂಬುದು ಬಹುಮಟ್ಟಿಗೆ ಅಲಂಕಾರದ ಮಾತು. ಕಟ್ಟಿಗೆಯಿಂದ ಹುಟ್ಟಿದ ಕಿಚ್ಚು ಹೆತ್ತ ಕಟ್ಟಿಗೆಯನ್ನೇ ಉರಿಸಿ ಬೂದಿ ಮಾಡುವಂತೆ, ಒಡಲಲ್ಲಿ ಮೂಡಿಕೊಂಡ ಆ ಅಸೂಯೆಯ ಉರಿ ಒಡಲನ್ನೇ ಉರಿಸಿ ಮೈಮನಸ್ಸುಗಳಿಗೆ ಗಾಸಿ ಮಾಡುತ್ತದೆ. ಕಿಚ್ಚು ಮೊದಲು ತೊಂದರೆಗೀಡುಮಾಡುವುದು ತಾನು ತೋರಿಕೊಂಡಲ್ಲೇ. ಹೊಟ್ಟೆಕಿಚ್ಚುಪಡುವವನೇ ಮೊದಲು ಬಲಿಯಾಗುವವನು; ಯಾರನ್ನು ಕಂಡು ಅಸೂಯೆಪಡುವನೋ ಅವರಿಗೆ ತೊಂದರೆಯೇ ಆಗದಿರಬಹುದು. ಒಂದು ವೇಳೆ ತನ್ನಿಂದಲೇ ಅವರಿಗೆ ತೊಂದರೆಯಾಯಿತೆನ್ನಿ. ಆಗ ಇವನಿಗೆ ಎರಡು ಪಟ್ಟು ಗಾಸಿ; ಮೊದಲನೆಯದು ತನ್ನ ಅಸಹನೆಯಿಂದಲೇ, ಎರಡನೆಯದು ಬೇರೊಬ್ಬನಿಗೆ ಮಾಡಿದ ತೊಂದರೆಯಿಂದ. ಮಾಡಿದ ಕೆಲಸದ ಫಲ ಹೇಗೂ ಅನುಭವಿಸಲೇಬೇಕಲ್ಲ? ಅಸೂಯೆಪಡುವವನಿಗೆ ಏಳಿಗೆ ಇಲ್ಲ, ಮತ್ತೊಬ್ಬನಿಗೆ ಕೇಡು ಬಯಸಿದರೆ ತನ್ನ ಬುಡಕ್ಕೇ ಕೊಡಲಿ ಪೆಟ್ಟು. ತನ್ನ ಹಗೆಯೇ ಆಗಲಿ, ಅವನಿಗೆ ಒಳಿತಾದರೆ ಸಂತೋಷ ಪಡುವ ಮನೋಭಾವ ಇದ್ದವರು ಉತ್ತಮರು. ಬೇರೊಬ್ಬರಿಗೆ ಏಳಿಗೆಯಾದರೆ ಕರುಬದೆ ಇರುವವರು ಮಧ್ಯಮರು, ತಾನೊಬ್ಬನೇ ಸುಖವಾಗಿರಬೇಕೆಂದು ಆಶಿಸುವವ ಅಧಮ.

ಹೊಟ್ಟೆಕಿಚ್ಚಿನಿಂದ ಮನಸ್ಸು ಮಾತ್ರ ಮಲಿನವಾಗುವುದೆಂದಲ್ಲ; ಆರೋಗ್ಯವೂ ಕೆಡುತ್ತದೆ.

ಅಸೂಯೆ

ಕನ್ನಡದಲ್ಲಿ ಹೊಟ್ಟೆಕಿಚ್ಚೆಂದರೆ ಅಸೂಯೆಪಡುವುದು.

ಅದೇ ಸಂಸ್ಕೃತದಲ್ಲಿ ಜಾಠರಾಗ್ನಿಯೆಂದರೆ ಉಂಡದ್ದು ಅರಗಲು ನೆರವಾಗುವ ಜೀರ್ಣಶಕ್ತಿ.

ಅಸೂಯೆಯಾದರೆ ಅವಗುಣ; ಯಾರಿಗೂ ಬೇಡವಾದದ್ದು. ಜೀರ್ಣಶಕ್ತಿ ಯಾದರೆ ಎಲ್ಲರಿಗೂ ಬೇಕಾದದ್ದು. ಹೊಟ್ಟೆಯಲ್ಲಿ ಕಿಚ್ಚು ಎಂದೇಕೆ ಕರೆಯುತ್ತಾರೆ? ಕಿಚ್ಚೆಂದರೆ ಉರಿ, ಹೊಟ್ಟೆಯುರಿ ಎಂದೂ ಹೇಳುವುದುಂಟಷ್ಟೆ. ಅಸೂಯೆಯೂ ಒಂದು ಉರಿಯೆ. ಅದರ ಬೇಗೆಯಲ್ಲಿ ಮನಸ್ಸು ಬಾಡಿ ಮುದುಡಿಕೊಳ್ಳುತ್ತದೆ; ಹೃದಯ ಸೀದು ಕಪ್ಪಾಗುತ್ತದೆ. ಬೇಕಾದುದು ಬಾರದಿದ್ದರೆ ಉರಿಯಲ್ಲ; ಬೇರೆಯವರಿಗೆ ಅದು ಬಂದರೆ ಉರಿ. ತನಗಿಂತ ಬೇರೆಯವರು ಮೇಲಿದ್ದಾರೆ, ತನ್ನ ಸ್ಥಿತಿಗಿಂತ ನೆರೆಯವನ ಸ್ಥಿತಿ ಅನುಕೂಲವಾಗಿದೆ ಎಂದು ಕಂಡುಕೊಂಡಾಗ ಅಸೂಯೆ. ಸಂಸ್ಕೃತದಲ್ಲಿ ಈರ್ಷೆಯೆಂದೂ ಪದವಿದೆ. ಅದರ ನಿರ್ದೇಶನವನ್ನು ಪರೋತ್ಕರ್ಷ- ಅಸಹನೆಯೆಂದು ಮಾಡುತ್ತಾರೆ. ಬೇರೆಯವರ ಅಭ್ಯುದಯವನ್ನು ಸಹಿಸದೆ ಇರುವುದು. ಸಾಮಾನ್ಯವಾಗಿ ಈ ಬಗೆಯ ಅಸಹನೆ ನಮ್ಮ ನೆಂಟರು, ಪರಿಚಿತರು, ನೆರೆಹೊರೆಯವರು ಇವರಿಗೆ ಮಾತ್ರ ಸೀಮಿತವಾಗಿರುವುದುಂಟು. ಯಾರೋ ನಮಗೆ ತಿಳಿಯದಿದ್ದವರಿಗೆ ಐಶ್ವರ್ಯ ಬಂದಿತು, ಯಶಸ್ಸು ಬಂದಿತು, ಸೌಭಾಗ್ಯ ಒದಗಿತು ಎಂದರೆ ನಮಗೇನು ತಳಮಳ ಇರದು. ಅದೇ ನಮ್ಮ ಓರಗೆಯವರೋ, ನೆರೆಹೊರೆಯವರೋ, ನೆಂಟರೋ, ಸಹೋದ್ಯೋಗಿ ಗಳೋ ನಮಗಿಂತ ಜೋರಾಗಿದ್ದಾರೆ ಎನಿಸಿದರೆ ಹೊಟ್ಟೆಯಲ್ಲಿ ಕಸಿವಿಸಿ!

ಸವತಿ ಮತ್ಸರವಂತೂ ಇತಿಹಾಸ ಪ್ರಸಿದ್ಧವಾದುದು; ಪುರಾಣಪ್ರಸಿದ್ಧವಾದುದು; ಲೋಕಾನುಭವದಲ್ಲೂ ಇದೆಯೆನ್ನಿ.

ಅಸೂಯೆಯ ಹರವು ಹೆಚ್ಚಿನದು, ಅವಕಾಶ ದೊರೆತರೆ ಎಲ್ಲಿಯಾದರೂ ತೋರಿಕೊಂಡೀತು. ಮತ್ತೆ ಅದು ತೋರಿಕೊಳ್ಳುವ ಬಗೆಗಳೂ ನೂರಾರು; ಅದರಲ್ಲಿ ಮುಚ್ಚುಮರೆಯೂ ಬೇಕಾದಷ್ಟು.

ಆದರೆ ಉರಿಯಿದ್ದರೆ ಹೊಗೆಯಾಡದೆ ಉಂಟೆ?

ಕಿಡಿಯಿಂದ ಕಾಡು ಕಿಚ್ಚು

ಕಿಡಿಯಿಂದ ಕಾಡು ಸುಡಬಹುದು.

ಸುರುವಾಗುವುದು ಸಣ್ಣದೊಂದು ಕಿಡಿಯಿಂದಲೇ. ಆದರೆ ಕಿಡಿಯು ತರಗೆಲೆಗೆ ತಾಕಿದಾಗ, ಒಣರೆಂಬೆಗೆ ಸೋಕಿದಾಗ, ಬುಗ್ಗೆಂದು ಹೊತ್ತುಕೊಳ್ಳುತ್ತದೆ.

ಕಿಡಿಯಾದದ್ದು ಕೆಂಡವಾಗಿ, ಕೆಂಡವು ಹೊತ್ತಿಕೊಂಡು ಬೆಂಕಿಯಾಗಿ, ಬೆಂಕಿಯು ಬೆಳೆದು ಉರಿಯಾಗಿ, ಉರಿಯು ಹರಡಿಕೊಂಡು ಕಾಡುಕಿಚ್ಚಾಗಿ ಪರಿಣಮಿಸುವುದು ಸಹಜವಾಗಿಯೇ; ಅದಕ್ಕೆ ಯಾವ ಮನುಷ್ಯ ಪ್ರಯತ್ನವೂ ಬೇಕಾಗಿಲ್ಲ. ಕಿಡಿಯನ್ನು ಕಾಡೊಳಗೆ ಕಾಣುವಾಗ ಅದೊಂದು ತೀರ ಸಣ್ಣ ವಿಷಯವೇ; ಮುಂದೆ ಒದಗ ಬಹುದಾದ ಅನಾಹುತದ ಎಣಿಕೆ ಎಷ್ಟು ಮಾತ್ರಕ್ಕೂ ಇರಲಾರದು. ಹಾಗೆಂದು ಗಣನೆಗೆ ತಂದುಕೊಳ್ಳದೆ, ಕಿಡಿಯನ್ನು ಆರಿಸದೆ ಬಿಟ್ಟುಬಿಟ್ಟರೆ, ಅದು ಕಾಡನ್ನೇ ಸುಡಬಹುದು. ಕಾಡುಕಿಚ್ಚನ್ನು ಹತೋಟಿಗೆ ತಂದುಕೊಳ್ಳಲು ಏನೆಲ್ಲ ಕಷ್ಟವಾದೀತೋ ಯಾರು ಬಲ್ಲರು? ಇದೊಂದು ದೃಷ್ಟಾಂತ ಅಷ್ಟೆ. ಸಣ್ಣದೊಂದು ಮಾತು. ಬೇಕೆಂದೇ ಹೇಳಿದ್ದೋ ಬಾಯಿ ತಪ್ಪಿ ಆಡಿದ್ದೋ, ದೊಡ್ಡದಾಗಿ ಬೆಳೆಯಬಹುದು. ಸಣ್ಣದೊಂದು ಕೆಲಸ, ಉದ್ದೇಶಿಸಿದ್ದೋ, ಆಕಸ್ಮಿಕವಾದುದೋ, ಬೆಳೆದು ಪೆಡಂಭೂತವಾಗಬಲ್ಲದು; ರಗಳೆಗೆ ಕಾರಣವಾಗಬಹುದು. ಅದನ್ನು ಬೆಳೆಸಿ ಪೋಷಿಸುವ ವ್ಯಕ್ತಿಗಳೂ ಪ್ರಸಂಗಗಳೂ ಇದ್ದರಂತೂ ಕೇಳುವುದೇ ಬೇಡ. ಕಾಡಿನ ಕಿಡಿಯನ್ನು ಯಾರೂ ಗಮನಿಸದೆ ಇದ್ದಾಗ ತಾನಾಗಿ ಆರಿಹೋಗಬಹುದು. ಅದಕ್ಕೆ ಅನುಕೂಲವಾದ ಸಾಮಗ್ರಿ ದೊರೆಯದಿದ್ದರೂ ಅದರಿಂದ ಕೇಡು ಅಷ್ಟೇನಿರದು. ಆದರೆ ಮನುಷ್ಯರ ವ್ಯವಹಾರದಲ್ಲಿ ಕಿಡಿ ಇಷ್ಟು ದುರ್ಬಲವಾಗಿರುವುದಿಲ್ಲ. ಅದನ್ನು ಬೇಗನೆ ಕಂಡುಕೊಳ್ಳುವವರೂ ಇರುತ್ತಾರೆ; ಅದನ್ನು ಬಳಸಿಕೊಂಡು ಕಿಚ್ಚನ್ನುಂಟುಮಾಡುವವರೂ ಇರುತ್ತಾರೆ. ಆದುದರಿಂದ ಆಡುವ ಮಾತಿನಿಂದಾಗಲಿ, ಮಾಡುವ ಕೆಲಸದಿಂದಾಗಲಿ ಯಾವ ಸಣ್ಣ ಕಿಡಿಗೂ, ಕಿರಿಕಿರಿಗೂ ಅವಕಾಶ ಕೊಡದಂತೆ ಎಚ್ಚರ ವಹಿಸಿಬೇಕಾದ ಅಗತ್ಯವಿದೆ.

ಕಿಡಿಯಾಗುವಾಗ ಎಚ್ಚರತಪ್ಪಿತೆಂದು ಹೇಳುವವರು ಕೆಲವರಾದರೆ, ಉದ್ದೇಶ ಪೂರ್ವಕವೇ ಎಂದು ಬಗೆಯುವವರು ಬಹುಮಂದಿ. ಕಿಡಿಯಿಂದ ಕಿಡಿಕಿಡಿಯಾಗುವರು ಅವರು.

ಸಣ್ಣದೊಂದು ಚಿಂತೆಯೂ ಕಿಡಿಯೇ. ಒಡಲಲ್ಲಿ ಅದು ಮೂಡಿಕೊಂಡರೆ ಇಡೀ ಬದುಕನ್ನೇ ಸುಡಬಲ್ಲದು, ಕಿಡಿಯಾಗಿರುವಾಗಲೇ ಆರಿಸಿದರೆ ಕ್ಷೇಮ.

ಕಿಚ್ಚು - ಉರಿ

"ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು" ಎಂಬುದು ಶರಣರ ವಚನಗಳಲ್ಲಿ ಕಾಣಸಿಗುವ ಸೊಗಸಾದ ಹಲವು ಸೂಚನೆಗಳಲ್ಲಿ ಒಂದು.

ಇದು ಬಹುಜನರ ಗಮನಕ್ಕೆ ಬರಬೇಕು. ಒಬ್ಬನ ಒಡಲಲ್ಲಿ ಮೂಡಿಕೊಳ್ಳುವ ಕಿಚ್ಚು ಬೇರೆಯವರನ್ನು ಗಾಸಿಗೊಳಿಸೀತೆಂದು ನಮ್ಮ ಎಣಿಕೆಯಲ್ಲವೆ? ಅನೇಕ ವೇಳೆ ಗಾಸಿಗೊಳಿಸುವುದುಂಟು, ದಿಟ. ಆದರೆ ಯಾರ ಒಡಲಲ್ಲಿ ಅದು ಮೂಡಿ ಕೊಳ್ಳುವುದೋ ಅದರಿಂದ ಅವನಿಗೇ ಒದಗುವ ಗಾಸಿ ಹೆಚ್ಚಿನದು. ಇದನ್ನು ಬಹುಜನ ಅರಿಯರು, ಒಡಲಲ್ಲಿ ಮೂಡಿಕೊಳ್ಳುವ ಕಿಚ್ಚೆಂದರೆ ಹಗೆತನ, ಕೋಪ, ತಾಪ, ಅಸೂಯೆ, ದುರಾಸೆ ಮೊದಲಾದುವು. ಇವೆಲ್ಲದರ ಕಾವು ಮೊದಲು ತಟ್ಟುವುದು, ಎಲ್ಲಿ ಅದು ತೋರಿಕೊಳ್ಳುವುದೋ ಅಲ್ಲಿಯೇ. ಕಟ್ಟಿಗೆಯಿಂದ ಎದ್ದ ಬೆಂಕಿ ಸುಟ್ಟು ಬೂದಿಮಾಡುವುದು ಮೊದಲಲ್ಲಿ ಆ ಕಟ್ಟಿಗೆಯನ್ನೇ. ಅನಂತರವೇ ಅದರ ನಾಲಗೆ ಹೊರಚಾಚುತ್ತದೆ; ಬೇರೆಯದನ್ನೂ ಉರಿಯಲ್ಲಿ ಎಳಕೊಂಡೀತು. ಮನಸ್ಸು ಉದ್ವಿಗ್ನವಾದಾಗ ಶರೀರಕ್ಕೆ ಒದಗುವ ತೊಂದರೆಗಳನ್ನು ಯಾರರಿಯರು? ನಿದ್ರೆ ಕೆಡುವುದು, ಉಂಡದ್ದು ಅರಗದೆ ಇರುವುದು, ರಕ್ತದ ಒತ್ತಡ ಹೆಚ್ಚುವುದು, ತಲೆಶೂಲೆಯೋ ಮತ್ತೊಂದು ಬೇನೆಯೋ ತಲೆದೋರಿಕೊಳ್ಳುವುದು ಇತ್ಯಾದಿ ಇತ್ಯಾದಿ. ನಮ್ಮನ್ನು ಕಾಡುವ ರೋಗಗಳಲ್ಲಿ ಸುಮಾರು ಪಾಲು ಮಾನಸಿಕ ಮೂಲದ್ದು ಎಂಬ ಅರಿವು ಈಗೀಗ ಹರಡಿಕೊಳ್ಳುತ್ತಿದೆ. ವೈದ್ಯ ಕ್ಷೇತ್ರದಲ್ಲೇ 'ಸೈಕೊಜೆನಿಕ್' ಎಂಬ ಮಾತು ಹೆಚ್ಚುಹೆಚ್ಚಾಗಿ ಕೇಳಿಬರುತ್ತಿದೆ. 'ಸೈಕೊಸೊಮಾಟಿಕ್' ಎಂಬ ವೈದ್ಯ ವಿಭಾಗವೇ ಏರ್ಪಡುತ್ತಿದೆ.

ನಮ್ಮ ಮನಸ್ಸನ್ನು ಉದ್ವೇಗಕ್ಕೀಡುಮಾಡುವ ಭಾವಗಳಲ್ಲಿ ಸಿಟ್ಟು, ಅಸೂಯೆ, ದ್ವೇಷ ಇವುಗಳು ಪ್ರಧಾನವೆನಿಸಿಕೊಂಡಿವೆ. ಇವುಗಳ ಅಭಿವ್ಯಕ್ತಿಯಿಂದ ಬೇರೆಯವರಿಗೆ ತೊಂದರೆಯೇನೋ ಇರುತ್ತದೆ; ಆದರೆ ಅವರಿಗಿಂತ ಮೊದಲು ಇವು ಬಲಿ ತೆಗೆದು ಕೊಳ್ಳುವುದು ನಮ್ಮನ್ನೇ. ಆ ಭಾವಗಳ ಬೇಗೆಯಲ್ಲಿ ದಿಟವಾಗಿ ಸೊರಗುವವರು ನಾವೇ.

ವ್ಯಸನ

ಸಾಮಾನ್ಯವಾಗಿ ವ್ಯಸನವೆಂದರೆ, ದುಃಖ, ದುಗುಡ, ಆಪತ್ತು ಎಂದಲ್ಲವೆ ಅರ್ಥ?

ಸಂಸ್ಕೃತದ ಈ ಮಾತಿಗೆ ಇನ್ನೊಂದು ಅರ್ಥವೂ ಇದೆ- ಗೀಳು, ಚಟ, ತೀಟೆ, ಎಂಬುದು. ಸಂಸ್ಕೃತ ಗ್ರಂಥಗಳಲ್ಲಿ ಈ ಅರ್ಥವೇ ಹೆಚ್ಚು ಬಳಕೆಯಲ್ಲಿರುವುದು.

ಯಾವುದಾದರೊಂದು ವಿಚಾರವಾಗಿ ಯಾರಿಗಾದರೂ ಮಿತಿಮೀರಿದ ಒಲವಿದ್ದರೆ ಅದು ವ್ಯಸನವೆನಿಸಿಕೊಳ್ಳುತ್ತದೆ - 'ಏಕೈಕ ವಿಷಯಾಸಕ್ತಿ'.

ಅದನ್ನು ಬಿಟ್ಟು ಬೇರೇನೂ ಅವರಿಗೆ ರುಚಿಸದು, ಎಷ್ಟು ಪ್ರಯತ್ನಪಟ್ಟರೂ ಅದನ್ನು ಅವರು ಕೈ ಬಿಡಲಾರರು.

ಜೂಜಾಟ, ಕುಡಿತ, ಬೇಟೆ, ಪಂದ್ಯ, ಹಾದರ, ತಂಬಾಕು, ಭಂಗಿ ಇವೇ ಮೊದಲಾದುವನ್ನು ವ್ಯಸನಗಳೆಂದು ಕಾಣಿಸುವುದುಂಟು. ಕೆಲವು ಗ್ರಂಥಗಳಲ್ಲಿ ಹಾಡು, ಕುಣಿತ, ವಾದನಗಳೆಂಬ 'ತೌರ್ಯತ್ರಿಕ'ವನ್ನೂ ವ್ಯಸನವೆಂದೇ ಎಣಿಸಿದ್ದಾರೆ.

ಬಹುಮಟ್ಟಿಗೆ ಕೆಟ್ಟ ಚಟಗಳಿಗೇ ವ್ಯಸನವೆಂದು ಹೆಸರು. ಒಳಿತಿನ ದಾರಿಗೆ ಅಡ್ಡಲಾಗುವುದೆಂದು ಮಾತಿನ ಮೂಲಾರ್ಥ.('ವ್ಯಸ್ಯತಿ ಶ್ರೇಯೋಮಾರ್ಗಾತ್').

ಎಂದೂ ತಣಿಯದ ಭೋಗಾಸಕ್ತಿಯೂ ವ್ಯಸನವೇ. ಯಾವುದರಿಂದಲಾದರೂ ಸುಖ ಕಂಡರೆ ಮತ್ತೆ ಮತ್ತೆ ಅದೇ ಬೇಕೆಂಬ ಬಯಕೆ; ಅದನ್ನು ಪಡೆದುಕೊಳ್ಳಲು ಪರದಾಟ; ಅದು ಬಾರದಿದ್ದರೆ ಬದುಕೇ ಬರಡೆಂಬ ಭಾವನೆ. ವ್ಯಸನದಲ್ಲಿ ಆಲಸಿಕೆಯಿರದು, ಕೆಲಸವೇ ಇದೆ. ಆದರೆ ಇಲ್ಲಿನ ಶ್ರಮದಿಂದ ಲಾಭವೇನೂ ತೋರಿಕೊಳ್ಳುವುದಿಲ್ಲ. — 'ನಿಷ್ಫಲೋದ್ಯಮ'. ಮಾತಿನ ಅಚ್ಚುಕಟ್ಟಿನಲ್ಲಿ ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಬಿಡುವಿಲ್ಲದೆ ಅಲೆದಾಡುವುದು ವ್ಯಸನ ('ವಿ' ಉಪಸರ್ಗದೊಂದಿಗೆ 'ಅಸ್' ಧಾತು, ಲ್ಯುಟ್ ಪ್ರತ್ಯಯ). ಈ ಅಲೆದಾಟದಲ್ಲಿ ಗುರಿಯೆಂಬುದಿರದು. ಹಗಲಲ್ಲಿ ನಿದ್ರೆ ಮಾಡುವುದು (ದಿವಾಸ್ವಾಪ), ಬೇರೆಯವರ ವಿಚಾರ ಅನಗತ್ಯವಾಗಿ, ಹೀನಾಯ ವಾಗಿ ಮಾತನಾಡುವುದು (ಪರಿವಾದ), ಹಗಲುಗನಸು ಕಾಣುವುದು (ದಿವಾಸ್ವಪ್ನ) ಇವೆಲ್ಲವನ್ನೂ ವ್ಯಸನವೆಂದೇ ಗುರುತಿಸಿರುವುದಿದೆ. ಪ್ರಯೋಜನದ ದೃಷ್ಟಿಯಿಲ್ಲದೆ, ಪುಸ್ತಕಗಳನ್ನು ಓದುತ್ತಲೇ ಕಾಲ ಕಳೆಯುವವರು 'ಪುಸ್ತಕವ್ಯಸನಿ''ಗಳು.

ವ್ಯಸನವೂ ಹೀಗೆ ಅಪಾಯವಾಗುವ ಸಂಭವವಿದೆ.

ಹಣದ ಗೀಳು

ಚಾಣಕ್ಯನ ನೀತಿಸೂತ್ರದಲ್ಲಿ ಒಂದು ಕಿವಿಮಾತು-

'ಅರ್ಥೈಷಣಾ ನ ವ್ಯಸನೇಷು ಗಣ್ಯತೇ' ಎಂದು.

ಇದರ ಅರ್ಥ— 'ಹಣದ ಬಯಕೆ, ವ್ಯಸನಗಳಲ್ಲಿ ಒಂದೆಂದು ಯಾರೂ ಬಗೆಯುವುದಿಲ್ಲ'. ವ್ಯಸನವೆಂದರೆ ಸಂಸ್ಕೃತದಲ್ಲಿ ಕೆಟ್ಟ ಚಾಳಿ, ಚಟ, ದುರಭ್ಯಾಸ. ಕುಡಿಯುವುದು, ಜೂಜಾಟ, ಭಂಗಿ ಸೇದುವುದು, ಕಾಮುಕತೆ, ಪುಸ್ತಕಗಳ ಗೀಳು ಅತಿಯಾಗಿ ಸಿಂಗರಿಸಿಕೊಳ್ಳುವುದು ಇವೆಲ್ಲ ವ್ಯಸನಗಳಲ್ಲಿ ಸೇರುತ್ತವೆ.

ವ್ಯಸನದಿಂದ ವ್ಯಕ್ತಿಗೆ ಕೆಡುಕೇ ವಿನಾ ಒಳಿತಿಲ್ಲ. ಹಣವನ್ನು ಸಂಪಾದನೆ ಮಾಡಬೇಕೆಂಬ ಆಸೆ, ಚಟವೆನಿಸಿಕೊಳ್ಳುವುದಿಲ್ಲ. ಬದುಕಿನ ಅಗತ್ಯಗಳಲ್ಲಿ ಹಣ ಒಂದು ತಾನೆ? ಯಾವ ಅನುಕೂಲಕ್ಕಾದರೂ ಹಣ ನೇರವಾಗಿಯೋ ಬಳಸಾಗಿಯೋ ಬೇಕೇ ಬೇಕು.

ಹಣದ ಗಳಿಕೆ ಅಗತ್ಯಗಳಲ್ಲಿ ಒಂದು, ಎಂದಾಗ ವ್ಯಕ್ತಿ ಅದನ್ನು ಪಡೆದುಕೊಳ್ಳುವ ಪ್ರಯತ್ನ ಮಾಡಲೇಬೇಕು ಎಂದು ತಾತ್ಪರ್ಯ.

ಆದರೆ ಹಣದ ಬಯಕೆ ತನ್ನ ಇತರ ಆಸಕ್ತಿಗಳಿಗೆ, ಅಭಿರುಚಿಗಳಿಗೆ, ಶೀಲಕ್ಕೆ, ನೆಮ್ಮದಿಗೆ, ಬದುಕಿನ ಗೊತ್ತುಗುರಿಗಳಿಗೆ ಅಡ್ಡಿಯಾದರೆ ಅದು ದುಶ್ಚಟವೇ, ವ್ಯಸನವೇ. ಚಾಣಕ್ಯನ ಮಾತು 'ಹಿತಮಿತವಾದ ' ಎಂಬ ಒಕ್ಕಣೆಯಿಂದ ಕೂಡಿದ ಅರ್ಥೈಷಣೆಯೆಂದಾದರೆ ಸರಿ, ಎಲ್ಲರೂ ಒಪ್ಪತಕ್ಕದ್ದೇ.

ನಾವು ಮಾಡುವುದು ಎಲ್ಲವೂ ಅಗತ್ಯದ ಚೌಕಟ್ಟಿನಲ್ಲೇ ಎಂದು ಯಾರೂ ಹೇಳಲಾರರು. ಕಾಫಿ ಕುಡಿಯುವುದು, ಚಿತ್ರ ನೋಡುವುದು, ಸುಮ್ಮನೆ ಅಡ್ಡಾಡುವುದು, ಹರಟೆ ಹೊಡೆಯುವುದು ಇವೆಲ್ಲ ಅಗತ್ಯವೆಂದು ಯಾರು ಹೇಳುತ್ತಾರೆ? ಆದರೆ ಇಂಥದರಲ್ಲಿ ತೊಡಗಿದಾಗ ಅಷ್ಟಿಷ್ಟು ಸಂತೋಷವಾದರೆ ಅದನ್ನು ಬೇಡ ಎನ್ನುವುದೇಕೆ? ಆದರೆ ಇವೆಲ್ಲ ಸಂತೋಷದ ಮಿತಿಯನ್ನು ಮೀರಿ ಅಗತ್ಯ, ಅನಿವಾರ್ಯ ಎನಿಸಿಬಿಟ್ಟರೆ ವ್ಯಸನಗಳು!

ವ್ಯಸನದಲ್ಲಿ ಸಂತೋಷವಿರದು, ಒಳಗಿನ ಒತ್ತಡ ಹಲವು ವೇಳೆ ವಿವೇಕವನ್ನು ಹೊರದೂಡಿಬಿಡುತ್ತದೆ. ವಿವೇಕವನ್ನು ಕಳೆದುಕೊಂಡ ಯಾವ ಚಟವೂ ದುಶ್ಚಟವೇ, ಯಾವ ಅಭ್ಯಾಸವೂ ದುರಭ್ಯಾಸವೇ. ಅದರಿಂದ ಕೆಡುಕು ಕಟ್ಟಿಟ್ಟ ಬುತ್ತಿ.

ಆಸೆ-ದುರಾಸೆ

ಆಸೆಪಡಬಾರದೆಂದೂ, ಆಸೆಯೇ ಅನರ್ಥಕ್ಕೆ ಮೂಲವೆಂದೂ ಹೇಳುವವರಿದ್ದಾರೆ ಅಲ್ಲವೆ? ಆದರೆ ಆಸೆಪಡದಿರುವ ಮನುಷ್ಯ ಇದ್ದಾನೆಯೆ? ಬದುಕಿನಲ್ಲಿ ಆಸೆಗೊಂದು ಸ್ಥಾನವೇ ಇರದೆ?

ಆಸೆಯಿರದೆ ಉತ್ಸಾಹವಿರದು; ಉತ್ಸಾಹವಿರದೆ ಪ್ರಯತ್ನವಿರದು; ಪ್ರಯತ್ನವಿರದೆ ಯಾವ ಕೆಲಸ ತಾನೆ ಕೈಗೂಡೀತು? ಕೆಲಸವಿಲ್ಲದೆ ಬದುಕಾದರೂ ನಡೆಯುವುದು ಹೇಗೆ? ಆಸೆಯನ್ನು ಅನರ್ಥಮೂಲವೆಂದು ಬಣ್ಣಿಸುವಾಗ ದುರಾಸೆಯೇ ತಾತ್ಪರ್ಯ. ಆಸೆಗೂ ದುರಾಸೆಗೂ ಇರುವ ವ್ಯತ್ಯಾಸವನ್ನು ನಾವು ಎಣಿಸಬೇಡವೆ? ಆಸೆಯೆಂದರೆ ಇಲ್ಲದುದನ್ನು ಪಡೆದುಕೊಳ್ಳುವ ಬಯಕೆ; ಇದು ಸಾಮಾನ್ಯವಾಗಿ ಲೋಕವ್ಯವಹಾರಕ್ಕೆ ಸಂಬಂಧಿಸಿದುದೇ. ಮನೆ, ಮಠ, ಊಟ, ಉಪಚಾರ, ಉದ್ಯೋಗ, ಉಡುಗೆ, ವಾಹನ, ಮಕ್ಕಳು, ಮರಿ ಇವುಗಳ ಮೇಲೆಯೇ ಆಸೆ. ಮೋಕ್ಷವನ್ನು ಬಯಸಿದರೆ ಅದು ಆಸೆಯೆನಿಸಿಕೊಳ್ಳುವುದೇ? ಜಗತ್ತಿನ ಜಂಜಡದಿಂದ ದೂರಾಗಿ ನೆಮ್ಮದಿಯಿಂದ ಇರುವುದೂ ಆಸೆಯೆ? ದಿನನಿತ್ಯದ ಬದುಕಿಗೂ ಆಸೆಗೂ ನಂಟು, ಆಸೆಯಿಲ್ಲದೆ ಬದುಕುವುದು ಸಾಧ್ಯವಿರದು. ಆದರೆ ಅವರವರ ಅಗತ್ಯಗಳು ಅವರವರಿಗೇ ತಿಳಿಯಬೇಕು. ಇದನ್ನು ತಿಳಿಯಲಾರದೆ, ಅದು ಬೇಕು, ಇದು ಬೇಕು, ಇನ್ನಷ್ಟುಬೇಕು, ಮತ್ತೂ ಬೇಕು ಎಂದು ಬಯಸುತ್ತಲೇ ಇದ್ದರೆ ದುರಾಸೆ ಎನಿಸಿಕೊಳ್ಳುತ್ತದೆ. ಆಸೆಯ ಹಿನ್ನೆಲೆಯಲ್ಲಿ ಕೊರತೆಯ ಅರಿವಿದೆ; ಇದು ಇಲ್ಲ, ಇದು ಬೇಕು ಎಂಬ ಬಯಕೆಯಿರುವುದು ಸಹಜವೇ. ಆದರೆ, ಇದು ಇದೆ, ಇನ್ನೂ ಇದೇ ಬೇಕು, ಇಷ್ಟು ಸಾಲದು, ಇನ್ನಷ್ಟು ಬರಬೇಕು ಎಂದುಕೊಂಡಾಗ ದುರಾಸೆಯ ದಾರಿ ಸುಗಮ ವಾಗುತ್ತದೆ.

ದುರಾಸೆಯಿಂದ ವಸ್ತುವನ್ನು ಪಡೆದುಕೊಂಡರೂ ತೃಪ್ತಿಯೆನ್ನುವುದು ಇರಲಾರದು. ಆಸೆ ಕೊನೆಗೊಳ್ಳಬಹುದು; ದುರಾಸೆ ಬೆಳೆಯುತ್ತಲೇ ಹೋಗುತ್ತದೆ. ದುರಾಸೆಯ ದೆವ್ವ ಬೆನ್ನ ಮೇಲೇರಿದರೆ, ಓಡುತ್ತಲೇ ಇರಬೇಕು; ನಿಲ್ಲಲು ಅದು ಬಿಡುವುದಿಲ್ಲ.

ಆಸೆಯಿದ್ದು ನಿರಾಸೆಯಾದರೆ ಸಹಿಸಿಕೊಳ್ಳುವುದೂ ಸುಲಭವೇ; ದುರಾಸೆ ಯಿದ್ದಾಗ ಮಾತ್ರ ನಿರಾಸೆಯಾದರೆ ತಾಳಿಕೊಳ್ಳುವುದು ಕಷ್ಟ.

ಅಹಂಕಾರ

ಅಹಂಕಾರವೆಂದರೇನೆಂಬುದನ್ನು ಎಲ್ಲರೂ ಬಲ್ಲರು, ಅಹಂಕಾರವಿದ್ದವರಿಗೂ ಇದು ತಿಳಿದೆ ಇರುತ್ತದೆ!

ನಾನು ದೊಡ್ಡವನು, ನನ್ನನ್ನು ಮೀರಿಸುವವರು ಯಾರು? ನಾನಿಲ್ಲದೆ ಏನು ನಡೆದೀತು? ನನ್ನ ಪ್ರಭಾವ ಏನನ್ನಾದರೂ ಸಾಧಿಸೀತು ಎಂದೆಲ್ಲ ಬಗೆಯುವುದು ಅಹಂಕಾರ. ಅಹಂಕಾರವೆಂದರೆ ಹೆಮ್ಮೆಯಲ್ಲ, ನಾಲ್ಕುಜನ ಮೆಚ್ಚಿಕೊಳ್ಳುವ ಕೆಲಸವನ್ನು ಮಾಡಿದ ಮನುಷ್ಯ ಹೆಮ್ಮೆಪಡುವುದು ಸಹಜವೆ. ಒಳ್ಳೆಯ ಗಂಡನೋ, ಹೆಂಡತಿಯೋ, ಮಕ್ಕಳೋ, ಮನೆಯೋ ಇದ್ದರೆ ಹೆಮ್ಮೆಪಡುವುದರಲ್ಲಿ ತಪ್ಪೇನು? ಹೆಮ್ಮೆಯಲ್ಲಿ ಅಭಿಮಾನ ಬೇರೆಯವರನ್ನು, ಬೇರೆಯದನ್ನು ಅವಲಂಬಿಸುತ್ತದೆ. ಇರುವ ಅನುಕೂಲವೋ, ಮಾಡಿದ ಕೆಲಸವೋ ಇದಕ್ಕೆ ಕಾರಣವಾಗುತ್ತದೆ. ಅಹಂಕಾರದಲ್ಲಿ ಹಾಗಲ್ಲ; ತನ್ನನ್ನೇ ಕುರಿತದ್ದು ಅದು; ಮತ್ತೆ ತನ್ನಿಂದಲೆ ಎಲ್ಲವೂ ಎನ್ನುವ ಧೋರಣೆ ಬೇರೆ. ಅಹಂಕಾರಕ್ಕೆ ಕಾರಣ ಇರಲೇಬೇಕೆಂದಿಲ್ಲ. ಒಳ್ಳೆಯವನು 'ತಾನೆಂಥ, ಕೊಡುಗೈ ಕರ್ಣ, ತಾನೆಂಥ ಶ್ರದ್ಧಾಳು, ದೈವಭಕ್ತ, ಒಳ್ಳೆಯವನು' ಎಂದು ಬಗೆದುಕೊಂಡರೆ ಅದು ಅಹಂಕಾರವಲ್ಲವೆ? ತಾನು ಮಾಡಿದ ದಾನಧರ್ಮ, ತನ್ನ ಆಸ್ತಿಕತೆ, ತನ್ನ ವೈರಾಗ್ಯ, ತನ್ನಿಂದ ಆದ ಲೋಕೋಪಕಾರ ಇವನ್ನೇ ಹೇಳಿಕೊಳ್ಳುತ್ತ ತಿರುಗುವವನನ್ನು ಏನನ್ನುತ್ತೀರಿ? ಅಹಂಕಾರಿಯೆಂದಲ್ಲವೆ? ದಾನದಲ್ಲಿ ಗುಪ್ತದಾನ ಶ್ರೇಷ್ಠ ಎನ್ನುವುದಿದೆ. ಬಲಗೈ ಕೊಟ್ಟದ್ದು ಎಡಗೈಗೆ ತಿಳಿಯಬಾರದು ಎಂದು ಹೇಳುವುದಿದೆ. ಧರ್ಮಶ್ರದ್ಧೆ ರಹಸ್ಯವಾಗಿರಬೇಕು. ನಾಲ್ಕು ಜನರ ಕಣ್ಣನ್ನು ಕುಕ್ಕುವಂತಿರಬಾರದು ಎನ್ನುತ್ತಾರೆ. ಮಾಡಿದ ಒಳ್ಳೆಯ ಕೆಲಸವಾಗಲಿ, ಬೆಳಸಿಕೊಂಡ ಒಳ್ಳೆಯತನವಾಗಲಿ ಅಹಂಕಾರದಿಂದ ಸ್ವಲ್ಪಮಟ್ಟಿಗೆ ಕೆಡುವುದುಂಟು. ರುಚಿಯಾದ ಹಾಲಿಗೆ ಒಂದೆರಡು ಹನಿ ಹುಳಿ ಹಿಂಡಿದಂತೆ! ಅಹಂಕಾರವನ್ನು ಬೇರೆಯವರು ಯಾರೂ ಸಹಿಸರು ಎಂಬುದನ್ನು ಮರೆಯಬಾರದು.'ಅಹಂಕಾರಕ್ಕೆ ಉದಾಸೀನವೆ ಮದ್ದು' ಎಂಬ ಮಾತನ್ನು ಕೇಳಿಲ್ಲವೆ?

ಅಹಂಕಾರಿ ಜಾರಿ ಬಿದ್ದರೆ, 'ಆಗಬೇಕು ಹಾಗೆ!' ಎಂದು ನಗುವವರು ಬಹು ಮಂದಿ. ಅದೇ ಅಹಂಕಾರವಿಲ್ಲದವನು ಬಿದ್ದರೆ 'ಅಯ್ಯೋ ಪಾಪ' ಎಂದು ಮರುಗುವರು, ಅವನ ನೆರವಿಗೆ ಬರುವರು.

ಹಗೆತನ

ಸ್ನೇಹಿತರಿಲ್ಲದವರು ತೀರ ವಿರಳ.

ಸ್ನೇಹಿತರಿರುವುದಕ್ಕೆ ಕಾರಣ ಹುಡುಕಬೇಕಾಗಿಲ್ಲ. ಮನುಷ್ಯ ಜಾತಿಯಲ್ಲಿ ಸ್ನೇಹಪರತೆಗೊಂದು ಸ್ಥಾನವಿದೆ, ಪಾತ್ರವಿದೆ, ಪ್ರಯೋಜನವಿದೆ. ಸಂಘ ಜೀವಿಯೆಂದ ಮೇಲೆ ಸ್ನೇಹಿತರಿಲ್ಲದೆ ಹೇಗೆ? ಇದೇ ತರ್ಕವನ್ನು ಶತ್ರುಗಳಿಗೆ ಅನ್ವಯಿಸಬಾರದು, ಶತ್ರುಗಳಿಲ್ಲದವರು ತೀರ ವಿರಳ ಎನ್ನುವಂತಿಲ್ಲ. ಶತ್ರುಗಳಿಲ್ಲದವರ ಸಂಖ್ಯೆಯೇ ಹೆಚ್ಚು, ಮಿತ್ರರಿದ್ದರೆ ಶತ್ರುಗಳೂ ಇರಲೇಬೇಕು ಎಂಬ ನಿಯಮವೇನಿಲ್ಲ. ಶತ್ರುಗಳಿರ ಬೇಕೆಂದರೆ ದ್ವೇಷವಿರಬೇಕು; ಕೋಪವೋ, ಅಸೂಯೆಯೋ ಹೊಗೆಯಾಡುತ್ತಿದ್ದರೆ ಹಗೆತನ. ಸ್ನೇಹವೆಂಬುದು ಮನುಷ್ಯನಿಗೆ ಸಹಜವಾದುದು; ಸ್ನೇಹಜೀವಿಯಲ್ಲದವನು ಸುಖವಾಗಿರವುದು ಕಷ್ಟ. ದ್ವೇಷವೇನು ಸಹಜವೆನ್ನುವಂತಿಲ್ಲ. ನಮ್ಮ ಬಯಕೆ ಬಲವಾಗಿದ್ದು, ಅದು ಕೈಗೂಡಲು ಅಡ್ಡಿಯಾಗಲು ಯಾರಾದರೂ ನಿಂತರೆ ಮಾತ್ರ ಅವರ ಮೇಲೆ ದ್ವೇಷ ಒದಗುವುದು; ಅವರನ್ನು ಹಗೆಗಳೆಂದು ಬಗೆಯುವರು.

ನಮ್ಮ ಸುಖವನ್ನೋ, ಸುಖದ ಸಾಧನೆಯನ್ನೋ ನಮ್ಮಿಂದ ಯಾರಾದರೂ ಕಸಿದುಕೊಂಡರೆ ಅವರ ಮೇಲೆ ಸಿಟ್ಟಾಗುವುದುಂಟು.

ಆದರೆ ಇಂಥದು ಎಷ್ಟು ಜನರಲ್ಲಿ ಕಾಣಸಿಗುತ್ತದೆ?

ನಮಗೆ ಒದಗುವ ಕಷ್ಟಕ್ಕೆ, ನಿರಾಸೆಗೆ, ತೊಂದರೆಗೆ ಎಲ್ಲಕ್ಕೂ ಬೇರೆಯವರೇ ಕಾರಣವೆಂದು ಹೇಳಬಹುದೆ? ಹಾಗೆ ಹೇಳುವಷ್ಟು ಹೆಡ್ಡತನ ಬಹುಮಂದಿಗಿರದು.

ಒಂದು ಬಯಕೆ ಕೈಗೂಡದಿದ್ದರೆ ಆ ಬಯಕೆಯನ್ನೇ ಕೈ ಬಿಡುತ್ತಾರೆ; ಮತ್ತೊಂದು ಬಯಕೆಯನ್ನು ಮೇಲೇರಿಸಿಕೊಳ್ಳುತ್ತಾರೆ. ಅದರಿಂದ ಸುಖ ಪಡೆದುಕೊಳ್ಳಲು ಯತ್ನಿಸುತ್ತಾರೆ. ಇದು ಜನಸಾಮಾನ್ಯರ ದಾರಿ. ತಮ್ಮ ಬಯಕೆಗೆ ಅಡ್ಡಿಬಂದವರು, ತಮ್ಮ ಸುಖವನ್ನು ತಪ್ಪಿಸಿದವರು ಎಂದು ಯಾರ ಮೇಲೂ ಅವರು ಎರಗುವುದಿಲ್ಲ. ಆದರೆ ಕೆಲವರಲ್ಲಿ ಮೃಗಗಳ ವಾಸನೆ ಮುಂದುವರಿದಿರುತ್ತದೆ; ಕಾದಾಡಲು ಹವಣಿಸುತ್ತಲೇ ಇರುತ್ತಾರೆ ಅವರು. ಕಾರಣವಿರಲೇಬೇಕೆಂದೂ ಇಲ್ಲ; ಅಂಥವರಿಗೆ ಎಲ್ಲೆಲ್ಲೂ ಹಗೆಗಳೇ!

ಸದ್ಯ, ಇಂಥವರ ಸಂಖ್ಯೆ ತುಂಬ ಕಡಮೆ.

ತಿಳಿವಳಿಕೆ

ಎಲ್ಲರ ಬದುಕಿನಲ್ಲೂ ತಿಳಿವಳಿಕೆಗೆ ಬೆಲೆಯಿದೆ. ತಿಳಿವಳಿಕೆ ಇಲ್ಲದವನು (ಎಂದರೆ ಸಾಲದವನು) ಬದುಕಿನಲ್ಲಿ ಕಷ್ಟಪಟ್ಟಾನು, ಸುಖವನ್ನು ಕೈ ಬಿಟ್ಟಾನು ಎಂಬ ಭೀತಿ ಎಲ್ಲರಿಗೂ ಇದ್ದದ್ದೇ. ತಿಳಿವಳಿಕೆಯಿಂದ ಬದುಕು ನೇರವಾದೀತು, ಹಸನಾದೀತು, ಅನುಕೂಲವಾದೀತು ಎಂಬ ವಿಶ್ವಾಸ ಯಾರಿಗಿಲ್ಲ?

ತಿಳಿವಳಿಕೆಗಾಗಿ ಹಂಬಲಿಸಿದರೂ, ಅದಕ್ಕಾಗಿ ಹೆಣಗಾಡುವವರು ಕಡಮೆ. ವಯಸ್ಸಾದರೆ ತಿಳಿವಳಿಕೆ ತಾನಾಗಿ ಬರುತ್ತದೆ; ಶಾಲೆಗೆ ಮಣ್ಣು ಹೊತ್ತರೆ ತಿಳಿವಳಿಕೆ ಬರದೆ ಎಲ್ಲಿ ಹೋದೀತು ಎಂದು ಕೇಳುವವರೂ ಇದ್ದಾರೆ. ತಲೆತಾಕಬೇಕು, ಬುದ್ಧಿ ಬರಬೇಕು ಎಂದು ಅನುಭವದ ಕಡೆ ಬೆರಳು ತೋರಿಸುವವರೂ ಇಲ್ಲದೆ ಇಲ್ಲ. ಬಿಡುವಿನ ವೇಳೆ ಪುಸ್ತಕ ಶುಶ್ರೂಷೆ ಮಾಡಿ ತಿಳಿವಳಿಕೆಯನ್ನು ಪಡೆದುಕೊಳ್ಳುವ ಚಪಲ ಕೆಲವರಿಗೆ.

ಆದರೆ ನೆಮ್ಮದಿಯಿಂದ ಕೂತು ಸ್ವಂತ ವಿಚಾರ ಮಾಡಿ ತಿಳಿವಳಿಕೆಯ ಆಳ-ಅಗಲಗಳನ್ನು ಹಿಗ್ಗಿಸಿಕೊಳ್ಳುವ ಅನುಕೂಲ ಹಲವರಿಗೆ ಇರದು. ಅನುಕೂಲ ಇದ್ದರೂ ಸಾಮರ್ಥ್ಯ ಇರದು. ಪುಸ್ತಕಗಳಲ್ಲಿರುವ ತಿಳಿವಳಿಕೆ ಪುಸ್ತಕಗಳನ್ನು ಬರೆದವರದ್ದು; ಓದಿದ ಮಾತ್ರಕ್ಕೆ ಅದು ನಮ್ಮದಾಗುವುದು ಹೇಗೆ? ವಿಚಾರ ಮಾಡಿ, ಅನುಭವ ದೊಂದಿಗೆ ಹೋಲಿಸಿ, ಅಳೆದು ಸುರಿದು ವಿಮರ್ಶೆ ಮಾಡಿದಾಗಲೇ ಅದು ನಮ್ಮದಾಗುವುದು. ಅನುಭವದ ವಿಚಾರವೂ ಹೀಗೆಯೇ, ತಲೆಯೇನೋ ತಾಕಬಹುದು; ಆದರೆ ಬುದ್ಧಿ ಬಂದೇ ತೀರುತ್ತದೆ ಎಂಬ ನಿಶ್ಚಯವಿದೆಯೆ? ಬದುಕಿನಲ್ಲಿ ಪ್ರಸಂಗಗಳು ನಡೆದಾಗ ಅದರ ಕಾವೋ ಕಹಿಯೋ ಸಿಹಿಯೋ ಸ್ವಾರಸ್ಯವೋ ನಮಗೆ ತಾಕುತ್ತದೆ. ಆ ಗಳಿಗೆಗೆ ನಮ್ಮನ್ನು ಅವುಗಳತ್ತ ಸೆಳೆದುಕೊಳ್ಳುತ್ತದೆ. ಆದರೆ ಪ್ರಸಂಗ ಮರೆಯಾದರೆ ಅದರ ಪ್ರಯೋಜನವೂ ಹಾರಿಹೋದೀತು! ಅನುಭವದ ಹಿಂದೆಯೇ ವಿಚಾರವೂ ಇರದಿದ್ದರೆ ತಿಳಿವಳಿಕೆ ಬೇರೂರಲಾರದು. ತಿಳಿವಳಿಕೆ ತಾನಾಗಿ ಬರುವುದಿಲ್ಲ. ಅದಕ್ಕಾಗಿ ಕಷ್ಟಪಡಬೇಕಾದದ್ದಿದೆ. ಅದು ಬಾವಿ ಅಗೆಯುವಂತೆ. ತಿಳಿನೀರು ಬೇಕೆಂದರೆ ಆಳವಾಗಿ ಅಗೆಯಬೇಕು; ಎಡರು -ತೊಡರುಗಳನ್ನು ದಾಟಬೇಕು; ಮೈಬೆವರು ಕೈ ಕೆಸರು ಎಲ್ಲವನ್ನೂ ತಾಳಿಕೊಳ್ಳಬೇಕು; ಹಿಡಿದ ಪಟ್ಟನ್ನು ಬಿಡಬಾರದು.

ತಿಳಿವಳಿಕೆಯೂ ಹೀಗೆಯೇ, ಕಷ್ಟಪಟ್ಟು ಅದನ್ನು ಅರಸಿದರೆ ತಾನೇ ಮುನ್ನುಗ್ಗಿ ನಮ್ಮ ಕಡೆಗೆ ಸಾಗಿಬರುತ್ತದೆ. ಆದರೆ ಕಷ್ಟಪಡದಿದ್ದವರ ಬಳಿ ಅದು ಸುಳಿಯು ವುದೂ ಇಲ್ಲ; ಹೇಗೋ ಹತ್ತಿರ ಬಂದರೂ, ನೆಲೆಯಾಗಿ ನಿಲ್ಲುವುದಿಲ್ಲ.

ಸುಖ-ಹಿತ

ಅಲ್ಲಮ ಪ್ರಭುಗಳದ್ದೊಂದು ಮಾತು-

'ಇಂದು ಸುಖ, ಮುಂದೆ ಲೇಸು'

ಇಂದಿನ ಸುಖವೆಲ್ಲ ಮುಂದೆ ಲೇಸಾಗುವುದಿಲ್ಲ, ಸುಖದಿಂದ ದುಃಖ ಬರುವುದೇ ಹೆಚ್ಚು. ಸುಖ-ದುಃಖಗಳು ಜೊತೆಯಾಗಿಯೇ ಇರುತ್ತವೆ. ಸುಖ ಬೇಕೆಂದು ಜನ ಬಯಸುವುದು ಸಹಜವೇ. ಆದರೆ ಸಾಸಿವೆಯಷ್ಟು ಸುಖಕ್ಕೆ ಗಜ್ಜುಗದಷ್ಟು ದುಃಖವಾದರೆ ಹೇಗೆ? ಸುಖ ಅನುಭವಿಸುವಾಗ ದುಃಖದ ಕಡೆ ಗಮನ ಇರುವುದಿಲ್ಲ ದಿಟ. ಆದರೆ ಮುಂದಾಲೋಚನೆ ಎಂಬುದು ಇದೆಯಲ್ಲವೆ? ಈಗ ಅನುಭವಿಸುವ ಸುಖವೇ ಶಾಶ್ವತವಾಗಿ ಇರುವುದೆಂದು ಯಾರಾದರೂ ಅಂದುಕೊಂಡರೆ ಹೆಡ್ಡತನವಲ್ಲವೆ? ಸುಖದ ಸಾಧನೆಗಳು (ಐಶ್ವರ್ಯ, ಅಧಿಕಾರ, ಮಡದಿ, ಮಕ್ಕಳು ಇತ್ಯಾದಿ) ದೇಶ-ಕಾಲದ ಅಧೀನವಾದುವು; ಬರುತ್ತವೆ, ಹೋಗುತ್ತವೆ. ಬರುವುದು ನೆಚ್ಚಿಗೆಯಿರದಿದ್ದರೂ ಹೋಗುವುದಂತೂ ಖಂಡಿತ. ನಡೆದಷ್ಟು ದಿನ ಅದು ನಾಣ್ಯವೆಂಬ ಜಾಣತನವಿದ್ದರೆ ಆಯಿತು; ಕುಡಿಕೆಯಲ್ಲಿ ಕೂಡಿಟ್ಟಿದ್ದು ಕಡೆತನಕ ಬರುವುದಿಲ್ಲವೆಂಬ ವಿವೇಕವೂ ಇರಬೇಕು. ಸುಖವನ್ನು ಬಯಸುವುದೇ ತಪ್ಪೆಂದು ಯಾರೂ ಹೇಳುವುದಿಲ್ಲ. ಸುಖ ಬಂದಾಗ ಅದನ್ನನುಭವಿಸದೆ ದೂರ ತಳ್ಳಬೇಕೆಂದು ಯಾರು ಹೇಳುತ್ತಾರೆ? ಅಲ್ಲಮಪ್ರಭುಗಳ ಮಾತಿನ ಒಕ್ಕಣೆಯ ಇಂಗಿತವೇನೆಂದರೆ ಮುಂದೆ ಲೇಸಾಗುವಂಥ ಸುಖವನ್ನಿಂದು ನಾವು ಬಯಸಬೇಕು. ಇಂದು ಸುಖವನ್ನು ಬಯಸುವಾಗ, ಬರಮಾಡಿಕೊಳ್ಳುವಾಗ ಮುಂದೆ ಇದರ ಪರಿಣಾಮ ಏನಾದೀತೆಂಬ ಚಿಂತೆಯಿರಬೇಕು. ಸುಖ ಬಂದಿತೆಂದು ಹಿಗ್ಗಿ ಮೈಮರೆತು ಅದಕ್ಕೆ ನಮ್ಮನ್ನು ನಾವು ಒಪ್ಪಿಸಿ ಕೊಂಡೆವೆಂದರೆ, ಮುಂದಾಗುವ ಕಷ್ಟಕ್ಕೂ ಸಿದ್ಧರಾಗಿರಬೇಕು. ಲೇಸೆಂಬ ಮಾತಿಗೆ ಹಿತವೆಂದರ್ಥ. ಸುಖಕ್ಕೂ, ಹಿತಕ್ಕೂ ಅಂತರವಿರುವುದುನ್ನು ಮರೆಯಬಾರದು, ಸುಖ ತೋರಿಕೊಂಡು ಮರೆಯಾಗುವಂಥದ್ದು; ಹಿತವಾದರೋ ನಾಲ್ಕು ಕಾಲ ಉಳಿಯುವಂಥದ್ದು. ಮತ್ತೆ, ಸುಖದ ನಂತರ ದುಃಖ ಬರುವ ಸಂಭವವುಂಟು. ಆದರೆ ಹಿತವೆಂಬುದು ದೊರೆತ ಮೇಲೆ ದುಃಖ ಬಂದೊದಗುವುದು ಸಾಧ್ಯವಿಲ್ಲ.

ಹಿತವನ್ನು ಸಾಧಿಸುವುದೇ ಸುಖವೆಂಬ ತಿಳಿವಳಿಕೆಯಿರಬೇಕೆಂದು ಅಲ್ಲಮ ಪ್ರಭುಗಳ ಮಾತಿನ ಧ್ವನಿ.

ಮುನ್ನೆಚ್ಚರಿಕೆ

ಕವಿಯೊಬ್ಬನ ಪ್ರಶ್ನೆ-

"ನೀರಡಸೆ ಬಳಿಕ್ಕೆ ಬಾವಿಯನಗುಳ್ದಪರೆ?"

ಬಾಯಾರಿದೊಡನೆ ಬಾವಿಯನ್ನು ತೋಡಲು ತೊಡಗುವವರನ್ನು ಕುರಿತ ಮಾತು ಇದು. ಹೀಗೆ ಯಾರೂ ತೊಡಗುವುದಿಲ್ಲವೆನ್ನಿ. ಹಾಸ್ಯದ ಮಾತಾದರೂ ಅದರಲ್ಲಿ ನೀತಿಯ ಮೊನೆಯಿದೆ. ಬಾವಿಯನ್ನು ತೋಡಿ ಮುಗಿಸಿ, ನೀರು ಮೇಲೆಬಂದ ಮೇಲೆ ನೀರನ್ನು ಸೇದಿ ಎತ್ತಿಕೊಳ್ಳುವವರೆಗೂ ಬಾಯಾರಿಕೆ ಇಂಗದೆ ಇರಬೇಕೆ? ಮೊದಲೇ ಬಾವಿಯನ್ನು ತೋಡಿ ಸಿದ್ಧವಾಗಿರಿಸಿಕೊಂಡಿದ್ದರೆ, ನೀರಡಿಕೆಯಾದೊಡನೆ ನೀರನ್ನು ಕುಡಿಯಬಹುದು.ನೀರಿಗಾಗಿ ಆಗ ಪರದಾಡುವ ಅಗತ್ಯವಿರುವುದಿಲ್ಲ. ಬದುಕಿನಲ್ಲಿ ಎಲ್ಲರೂ ಹೀಗೆ ಮುಂಜಾಗ್ರತೆ ವಹಿಸುವುದಿಲ್ಲ. ಹೊಳೆಯ ಹತ್ತಿರ ಬಂದಾಗಲೇ ಅದನ್ನು ದಾಟುವ ಬಗೆ ಹೇಗೆಂದು ನೋಡಿಕೊಂಡರಾಯಿತು. ಈಗಿಂದ ಅದರ ವಿಚಾರವೇಕೆ ಎನ್ನುವರು. ಒಂದು ರೀತಿಯಿಂದ ಸರಿಯೆ. ಎಂದೋ ಬರಬಹುದಾದ ದುಃಖಕ್ಕೆ ಈ ಹೊತ್ತೇ ಅಳುವ ಅಗತ್ಯವೇನು? ಆದರೆ ಹೊಣೆಗಾರಿಕೆಯೆಂಬುದೊಂದಿದೆ ಯಲ್ಲವೆ? ಉದ್ಯೋಗದಲ್ಲಿ, ಕುಟುಂಬದಲ್ಲಿ, ವ್ಯವಹಾರದಲ್ಲಿ ಪೂರ್ವಸಿದ್ಧತೆ ಇರಬೇಕಲ್ಲವೆ?

ಮುಂದಿನ ಕೆಲಸಗಳಿಗೆ ಇಂದೇ ತಯಾರಾಗಿರಬೇಕಾದುದೂ ಉಂಟು.

ಅಧಿಕಾರದಲ್ಲಿರುವವರು ರಾಜಕಾರಣವನ್ನು ನಡೆಸುವವರು ಮುನ್ನೆಚ್ಚರಿಕೆಯ ಅಗತ್ಯವನ್ನು ಕಂಡುಕೊಂಡಿರಬೇಕು. ಬರಗಾಲ ಬಂದಡರಿದ ಮೇಲೆ ಅದರ ಪರಿಹಾರೋಪಾಯಕ್ಕೆ ಪರದಾಡುವುದು ಸಾಮಾನ್ಯವಲ್ಲವೆ?

ಬರಬಹುದಾದ ಆತಂಕ ಪರಿಸ್ಥಿತಿಯನ್ನು ಇಂದೇ ಮನವರಿಕೆ ಮಾಡಿಕೊಂಡು ಅದಕ್ಕೆ ಸಿದ್ಧವಾಗಿರುವುದು ಜಾಣತನ.

ಭವಿಷ್ಯವೆಲ್ಲ ನಿಶ್ಚಿತವೆಂದಲ್ಲ, ಬರುವ ಎಲ್ಲ ಆಕಸ್ಮಿಕಗಳಿಗೂ ತಯಾರಾಗಿದ್ದೇವೆ ಎಂದೂ ಅಲ್ಲ.

ಸಾಧ್ಯವಾದ ಮಟ್ಟಿಗೆ, ತಿಳಿಯುವಷ್ಟು ಮಟ್ಟಿಗೆ, ಮುಂಜಾಗ್ರತೆಯಿದ್ದರೆ ಒಳ್ಳೆಯದು.

ಮಾತಿನಲ್ಲಿ ಹಿತ-ಮಿತ

ಗಂಡಸರಿಬ್ಬರು ತಮ್ಮ ಹೆಂಡಂದಿರ ಪ್ರತಾಪ ಕೊಚ್ಚಿಕೊಳ್ಳುತ್ತಿದ್ದಂತೆ-

ಒಬ್ಬ ಹೇಳಿದ - "ನನ್ನ ಹೆಂಡತಿಗೆ ಯಾವುದಾದರೂ ವಿಷಯ ಕೊಡು. ಅದರ ಮೇಲೆ ಗಂಟೆಗಟ್ಟಲೆ ಮಾತನಾಡಬಲ್ಲಳು" ಎಂದು,

ಇನ್ನೊಬ್ಬ ಹೇಳಿದ- "ಅದೇನು ಮಹಾ! ನನ್ನ ಹೆಂಡತಿಗೆ, ಯಾವ ವಿಷಯವೂ ಬೇಡ. ಗಂಟೆಗಟ್ಟಲೆ ಮಾತನಾಡಿಯಾಳು!"

ಹಾಸ್ಯದ ಸಂದರ್ಭ ದಿಟ. ಆದರೆ, ಅದರಲ್ಲಿ ಸ್ವಾರಸ್ಯವೂ ಇದೆ. ಹೆಂಡಂದಿರನ್ನು ಕುರಿತು ಹಾಸ್ಯವೇ ಆದರೂ, ಗಂಡಸರಿಗೂ ಇದು ಧಾರಾಳವಾಗಿ, ಇನ್ನಷ್ಟು ಹೆಚ್ಚಾಗಿಯೆ, ಅನ್ವಯಿಸುತ್ತದೆ.

ವೇದಿಕೆಗಳ ಮೇಲೆ ಮಾತು ನಡೆಯುತ್ತಲೇ ಇರುತ್ತದೆಯಲ್ಲ— ಸ್ವಲ್ಪ ಕಿವಿಯಾಲಿಸಿ ಕೇಳಿ, ಎಷ್ಟು ಮಾತು ಪ್ರಸಕ್ತ? ಎಷ್ಟು ಬರಿಯ ಗಾಳಿಯಲ್ಲಿ ಗುದ್ದಾಟ?

ವೇದಿಕೆ ಸಿಕ್ಕರೆ ಸಾಕು, ಕೇಳುವ ಕಿವಿಗಳು ದೊರೆತರೆ ಸಾಕು, ಲಂಗು-ಲಗಾಮಿಲ್ಲದೆ ಅಡೆ-ತಡೆಯಿಲ್ಲದೆ ಮಾತಿನ ಹೊಳೆ ಹರಿಯತೊಡಗುತ್ತದೆ.! ಸಂದರ್ಭವೇನು, ವಿಷಯ ಯಾವುದು, ಸಮಯ ಎಷ್ಟು, ಯಾವುದರ ಪರಿವೆಯೂ ಇರುವುದಿಲ್ಲ. ಮಾತಿನಲ್ಲಿ ಹಿತ, ಮಿತ ಎಂಬುದರ ಕಲ್ಪನೆಯಂತೂ ಇರದೇ ಇರದು. ಮನುಷ್ಯನಿಗೆ ಮಾತಾಡುವ ಸಾಮರ್ಥ್ಯವೂ ಇದೆ. ಮಾತಾಡಿದುದನ್ನು ಕೇಳಿಸಿಕೊಳ್ಳುವ ಸಾಮರ್ಥ್ಯವೂ ಇದೆ. ಒಬ್ಬ ಮಾತಾಡುವಾಗ ಹಲವರು ಕೇಳಿಸಿಕೊಳ್ಳುತ್ತಿರಬೇಕು; ಕಣ್ಣುಮುಚ್ಚುವಂತೆ ಕಿವಿಯೇನು ಮುಚ್ಚಲಾರದಷ್ಟೆ!

ಕೇಳಿಸಿಕೊಳ್ಳುವುದೇ ಬಲಾತ್ಕಾರವಾಗಿಬಿಟ್ಟರೆ, ಅಸಹ್ಯ ಅಗತ್ಯವಾಗಿಬಿಟ್ಟರೆ, ಕಿವುಡಾಗಿದ್ದರೇ ಒಳಿತು ಎನಿಸುತ್ತದೆ.

ಇನ್ನೂ ಮುಂದವರಿದರೆ, ಮಾತನಾಡುತ್ತಿರುವವನು ಮೂಕನಾದರೂ ಆಗಿದ್ದರೆ ಚೆನ್ನಾಗಿರುತ್ತಿತ್ತಲ್ಲ ಎನಿಸೀತು!

ನಯ-ನಾಜೂಕು

ಮಾತನಾಡಿದರೆ ಮುತ್ತು ಪೋಣಿಸಿದಂತಿರಬೇಕು ಎಂದು ಹೇಳುತ್ತಾರಲ್ಲವೆ? ಮಾತೇ ಮುತ್ತು, ಮಾತೇ ಮೃತ್ಯು ಎಂದೂ ಹೇಳುವುದಿದೆ. ಅರ್ಥವೇನು? ಮಾತಿನಲ್ಲಿ ನಯ, ನಾಜೂಕು, ಒಪ್ಪ, ಓರಣ ಎಲ್ಲ ಇರಬೇಕು. ದಿಟ.

ಎಲ್ಲಕ್ಕಿಂತ ಹೆಚ್ಚಾಗಿ ಕೇಳಿದವರು ಮೆಚ್ಚಿಕೊಳ್ಳುವಂತಿರಬೇಕು. ಮಾತು ಮನಸ್ಸಿಗೆ ಕೈ ಗನ್ನಡಿ; ಕೇಳುವವರ ಮನಸ್ಸಿನಲ್ಲಿ ಅದು ತಕರಾರಿಲ್ಲದೆ ಕೂರಬೇಕು.

ಮುತ್ತಿನ ಸರವೆಂದರೆ ಆಕರ್ಷಣೆಯಿರದೆ?

ಬಿಡಿಬಿಡಿಯಾಗಿ ಹೊಳೆಯುವ ಮುತ್ತುಗಳನ್ನು ಕೋದು ಮಾಡಿದ ಮಾಲೆಗಿಂತ ಚೆಲುವಾದ ಆಭರಣವಿದೆಯೆ?

ಸುಸಂಸ್ಕೃತನಾದ ಮನುಷ್ಯನ ಮಾತೇ ಚೆನ್ನು.

ಕಿವಿಗೆ ಹಿತವಾಗಿರುತ್ತದೆ; ಒಡಲಿಗೆ ತಂಪಾಗಿರುತ್ತದೆ; ಮನಸ್ಸಿಗೆ ಸಮಂಜಸ ವೆನಿಸುತ್ತದೆ. ಜನರ ನಡುವೆ ಸಂಪರ್ಕಮೂಡಲು ಇರುವ ಸಾಧನಗಳಲ್ಲಿ ಮಾತು ಮುಖ್ಯವಾದುದು.

ಆದುದರಿಂದ ಆಡುವ ಮಾತಿನ ಕಡೆ ಗಮನ ಹರಿಸಬೇಡವೆ? ಹಲವರು ಹರಿಸುವುದಿಲ್ಲ,'ಮಾತು ಕಟುವಾದರೂ ಮನಸ್ಸು ಮೆದು' ಎಂದು ಕೆಲವರು ಹೇಳುವುದನ್ನು ಕೇಳಿದ್ದೀರಿ. ಇಲ್ಲಿ ಕಟುವೆಂದರೆ ಇದ್ದುದನ್ನು ಇದ್ದಂತೆಯೆ ತಿಳಿಸುವವನು, ಮುಚ್ಚುಮರೆಯರಿಯದವನು ಎಂದರ್ಥ. ಆದರೆ ಕೇಳುವವರಿಗೆ ಅಹಿತ ವಾದೀತೆಂಬುದನ್ನು ಆತ ಅರಿಯದಾದರೆ, ಅವನ ಮನಸ್ಸು ಹೇಗೆ ಮೆದು? ಮನಸ್ಸು ನೆಮ್ಮದಿಯಿಂದಿದ್ದರೆ ಮಾತೂ ಹಿತವಾಗಿಯೇ ಇರುತ್ತದೆ. ಇದ್ದುದನ್ನು ಇದ್ದಂತೆಯೆ ತಿಳಿಸುವುದರಲ್ಲೂ ಜಾಣತನ ಬೇಡವೆ?

ಆಡುವ ಮಾತು ಕೇಳಿದವನ ಒಡಲನ್ನು ಗಾಸಿಮಾಡಿದರೆ ಬೇರೆ ಕತ್ತಿಯ ಅಗತ್ಯವೇನು?

ಮಾತೇ ಹರಿತವಾದ ಆಯುಧ ಎಂಬಂತೆ ಮಾತನಾಡುವ ಮಂದಿ ಮುತ್ತಿನ ಮಾಲೆಯ ಚೆಲುವನ್ನು ಅರಿಯರು!

'ಸತ್ಯಂ ಬ್ರೂಯಾತ್'

'ದಿಟವನ್ನು ನುಡಿ' ಎಂದು ಹಿರಿಯರ ಆಣತಿ.

ನುಡಿಯಬೇಕಾದ ಸತ್ಯ ಅಪ್ರಿಯವಾದರೆ ಏನು ಮಾಡುವುದು? ಆಗಲೂ ಸತ್ಯವನ್ನೇ ನುಡಿದರೆ ಅದು ಕಟುವಾಗುತ್ತದೆ, ಅಹಿತವೆನಿಸುತ್ತದೆ. ಅಂಥ ಸತ್ಯವನ್ನು ನುಡಿದವರ ಮೇಲೆ ಮುನಿಸು ಮೂಡಿಕೊಳ್ಳುತ್ತದೆ. ಸತ್ಯ ನುಡಿದುದಕ್ಕೆ ಪ್ರಯೋಜನವೇನು? ಹಿರಿಯರು 'ಸತ್ಯಂ ಬ್ರೂಯಾತ್' ಎಂದಷ್ಟೇ ಹೇಳಿ ನಿಲ್ಲಿಸಲಿಲ್ಲ; ' ಪ್ರಿಯಂ ಬ್ರೂಯಾತ್' ಎಂದೂ ಒಡನೆಯೇ ಸೇರಿಸಿದರು. ಕೇಳುವವರಿಗೆ ಹಿತವೆನಿಸುವ ಮಾತಾಡಬೇಕು; ನಮ್ಮ ಮಾತಿನಿಂದ ಇತರರಿಗೆ ಸಂತೋಷವಾಗಬೇಕು, ಸಮಾಧಾನ ವಾಗಬೇಕು. ಮಾತಿನ ಪ್ರಯೋಜನ ಇದು. ಹಾಗೆಂದೇ ಮಾತು ಹಿತ, ಮಿತ, ಸಂಗತ ಎಂಬ ಮೂರು ಗುಣಗಳನ್ನು ಹೊಂದಿರಬೇಕೆನ್ನುತ್ತಾರೆ. ಮಾತು ಮುಳ್ಳುಚುಚ್ಚಿ ದಂತಿರಬಾರದು; ತಂಪನ್ನು ತಣಿವನ್ನು ತಂದು ಕೊಡಬೇಕು. ಇದು ಹಿತ. ಮತ್ತೆ, ಮಾತು ಮಾರುದ್ದ ಬೆಳೆದು ಬೇಸರವನ್ನು ತರುವಂತಿದ್ದರೆ ಯಾರು ಮಣಿಯುತ್ತಾರೆ? ಮಾತು ಮಿತವಾಗಿ ಇರಬೇಕು. ಎಷ್ಟು ಅಗತ್ಯವೋ ಅಷ್ಟೇ. ಸಂಗತವೆಂದರೆ ಸಂದರ್ಭಕ್ಕೆ ಒಪ್ಪುವಂಥ, ಪ್ರಸಂಗದಲ್ಲಿ ಸರಿಯಾದಂಥ ಮಾತು.

ಮಾತಿನಲ್ಲಿ ಮೂರೂ ಗುಣಗಳಿರಬೇಕು. ಕೇವಲ ಹಿತವೇ ಇದ್ದರೆ ಅದು ನಿಷ್ಪ್ರಯೋಜಕ; ಕೇಳುವವರು ಸಂತೋಷಗೊಳ್ಳಲೆಂದೇ ಮಾತನಾಡುವವರು ಇರುತ್ತಾರೆ; ಅಂಥ ಮಾತಿನಿಂದ ದಿಟವಾಗಿ ಕೇಳುವವರಿಗೂ ಪ್ರಯೋಜನವಿಲ್ಲ. ಹೇಳುವವರಿಗೂ ಪ್ರಯೋಜನವಿಲ್ಲ. ಮರುಳು ಮಾಡಲು, ಕಪಟದಿಂದ ಬೆಡಗಿನ ಮಾತುಗಳನ್ನೆ ಆಡುತ್ತ ಹೋದರೆ ಹೇಗೆ?

ಮಾತು ಅರ್ಥವತ್ತಾಗಬೇಕಾದರೆ, ಪ್ರಭಾವಶಾಲಿಯಾಗಬೇಕಾದರೆ ಸತ್ಯ ವೆಂಬುದೇ ನೆಲೆ; ಅದರ ಮೇಲೆ ಹಿತ, ಮಿತ, ಸಂಗತಗಳು ಮೆರುಗು ಕೊಡುವಂಥವು.

ಹಿರಿಯರು 'ನ ಬ್ರೂಯಾತ್ ಸತ್ಯಮಪ್ರಿಯಂ' (ಎಂದರೆ 'ಸತ್ಯವು ಅಹಿತವೆನಿಸು ವುದಾದರೆ ಅದನ್ನು ನುಡಿಯಬೇಡ') ಎಂಬ ಕಿವಿಮಾತನ್ನು ಹೇಳಿದರಲ್ಲವೆ? ಆದರೆ 'ಹಿತವಾಗುವಂತಿದ್ದರೆ ಅಸತ್ಯವನ್ನೂ ನುಡಿ' ಎಂದೇನೂ ಅವರು ಹೇಳಲಿಲ್ಲವಲ್ಲ?

ಹಿತಕ್ಕೆ ಬೆಲೆಯಿದೆಯೇ ವಿನಾ ಸಟೆಗಿಲ್ಲ!

ಮೌನದ ಸ್ವಾರಸ್ಯ

ನೆಂಟರಿಷ್ಟರು ಒಂದೆಡೆ ಕಲೆತಾಗ ಮಾತುಕತೆಗೆ ಕೊನೆಮೊದಲುಂಟೆ? ಎಡೆಬಿಡದೆ ಮಾತು ಸಾಗುತ್ತದೆ. ಒಂದು ವಿಷಯ ಮುಗಿದರೆ ಮತ್ತೊಂದು ಒಡನೆಯೆ ಮೊದಲಾಗುತ್ತದೆ. ಮಾತು ನಿಂತು ಮೌನ ಆವರಿಸಿದರೆ ಏನೋ ಅನಾಹುತವಾದೀತೆಂಬ ಭಯ ಇರುವಂತೆ!

ಮಾತನಾಡದೆ ಸುಮ್ಮನೆ ಕೂತವರಂತೂ ಎಲ್ಲರ ಕಣ್ಣನ್ನೂ ಕುಕ್ಕುತ್ತಾರೆ. ಇವನೇನು ಮುಸಂಡಿಯೆ, ಇವನಿಗೇನಾದರೂ ಮುನಿಸೊ, ಮೈಯಲ್ಲಿ ಜಡ್ಡೊ, ಮನಸ್ಸಿಗೆ ಬೇಸರವೊ, ಏನೆಂದು ಎಲ್ಲರ ಕುತೂಹಲ. ಒಟ್ಟಿಗೆ ಸೇರುವುದೆ ಮಾತನಾಡಲು ಎಂದು ಎಲ್ಲರ ನಂಬಿಕೆ. ಮಾತನಾಡದಿದ್ದರೆ ನಮ್ಮ ಭಾವನೆಗಳನ್ನು, ಪ್ರೀತಿಯನ್ನು, ಲೋಕಜ್ಞಾನವನ್ನು ತಿಳಿಯಪಡಿಸುವುದಾದರೂ ಹೇಗೆ? ಆದರೆ ನೆಂಟರಿಷ್ಟರು ಪ್ರೀತಿಯ ಸಲುವಾಗಿ ಸೇರಿದಾಗ ಮಾತಿನ ಹೊಳೆಯೆ ಹರಿಯಬೇಕಾಗಿಲ್ಲ. ಒಟ್ಟಿಗೆ ಇರುವುದೇ ಒಂದು ಸಂತೋಷವೆಂದಾಗ ಮಾತಿನ ಗೊಡವೆಯೇಕೆ? ಸುಮ್ಮನೆ ಕೂತು ಮೈಗಳು ಸನಿಹದಲ್ಲಿರುವುದನ್ನು ಎಷ್ಟು ಮಂದಿ ಅನುಭವಿಸಬಲ್ಲರು? ನಮಗೆ ಆಪ್ತರಾದವರು ಹತ್ತಿರ ಇರುವುದನ್ನು ಮೌನವಾಗಿ ಸವಿಯಬಲ್ಲವರು ಎಷ್ಟು ಮಂದಿ? ಮಾತಿನ ಮೋಡಿಗೆ ಮರುಳಾಗಿ, ಮಾತನ್ನೆ ಮುಖ್ಯವಾಗಿ ಮಾಡಿಕೊಂಡಿರುವ ಸಂಸ್ಕೃತಿ ಹರಡಿಕೊಂಡಿದೆ. ಸಭ್ಯರೂ, ಮಕ್ಕಳೂ, ಉದ್ಯಮಿಗಳೂ ಎಲ್ಲರೂ ಮಾತಿನ ಸಂಚಿ ಯನ್ನು ಬಗಲಿಗೇರಿಸಿಕೊಂಡಿರುವವರೇ. ಮೌನಕ್ಕೆ ಬೆಲೆಯಿಲ್ಲವಾಗಿದೆ! ಆಳವಾದ ಅನುಭವವನ್ನು ಯಾವ ಮಾತು ತಿಳಿಸಬಲ್ಲುದು? ದಿಟವಾದ ಪ್ರೀತಿ ಉಕ್ಕಿ ಹರಿದರೆ, ಮಾತಿಗೇನು ಕೆಲಸ? ನೀರವತೆಗೆ ಬೆದರುವ ಜನರೇ ಹೆಚ್ಚು! ಅವರಿವರ ಒಡನಾಟದಲ್ಲೆ ಮೈ ಮರೆಯುತ್ತ ಮಾತಿನ ಮುಸುಕನ್ನು ಮನಸ್ಸಿನ ಸುತ್ತ ಹರವಿಕೊಂಡು ತಮ್ಮ ಬೇಸರವನ್ನು ಮರೆಮಾಚುವ ಯತ್ನ ಅವರದ್ದು. ಅವರಿಗೆ ಏಕಾಂತವೆಂದರೆ ಸೇರದು; ಮೌನವೆಂದರೆ ಬೆದರುವರು. ತಮ್ಮನ್ನು ತಾವು ಇರುವಂತೆ ಕಂಡುಕೊಳ್ಳಲು ಅಂಜುವರು.

ಏನಾದರೊಂದು ಮುಖವಾಡ ಬೇಕು; ಯಾವುದಾದರೊಂದು ಉದ್ಯೋಗ ಇರಬೇಕು; ಮಾತಿನ ಚಪ್ಪರದಡಿಯಲ್ಲಿ ಕೂರಬೇಕು.

ಒಳಗಿನ ಖಾಲಿಯನ್ನು ಮುಚ್ಚಿಕೊಳ್ಳಲು ತೊಡಗುವ ಮಾತಿನಿಂದ ಯಾರಿಗೇನು ಪ್ರಯೋಜನವಿದೆ?

ದುಡಿಮೆಯೆ ಮದ್ದು

'ಕಾಯಕವೆ ಕೈಲಾಸ' ಎಂಬುದೊಂದು ಸಂತವಾಣಿ.

ಕಾಯಕವೆಂದರೆ ದುಡಿಮೆ; ಮೈಯಿಂದ ಮಾಡುವ ಕೆಲಸ, ಬಾಯಾರೆ ಮಾತನಾಡುವುದಲ್ಲ, ಮನಸ್ಸಿನ ಮಂಡಿಗೆಯಲ್ಲ. ಕೆಲಸಗಳಲ್ಲಿ ಕಾಯಾ, ವಾಚಾ, ಮನಸಾ ಎಂದು ಮೂರು ತೆರನಾಗಿ ವಿಭಾಗ ಮಾಡುವುದಿದೆಯಷ್ಟೆ. ಸಮಾಜದಲ್ಲಿಯೂ ಈ ಮೂರು ಬಗೆಯ ಕೆಲಸಗಳನ್ನು ಮಾಡುವವರು ಬೇರೆಬೇರೆಯಾಗಿಯೆ ಇರುತ್ತಾರಲ್ಲವೆ?

ಕೆಲವರ ಕೆಲಸ ಬರಿಯ ಮಾತಿನದು; ಮತ್ತೆ ಕೆಲವರು ಚಿಂತಕರು. ಉಳಿದವರು ಬೆವರು ಸುರಿಸಿ ದುಡಿಯುವವರು. ಸಮುದಾಯ ಜೀವನದಲ್ಲಿ ಮೂರೂ ಬಗೆಯ ಜನರು ಬೇಕಾಗುತ್ತಾರೆ. ಆದರೆ ಜನರ ಎಣಿಕೆಯಲ್ಲಿ, ದುಡಿಮೆ ಮಾಡುವ ಜನರು ಉಳಿದೆರಡು ಬಗೆಯವರಿಗಿಂತ ಕೆಳಗಿನ ನೆಲೆಯಲ್ಲಿರುವವರು ಎಂಬ ಕಲ್ಪನೆ ಹೇಗೋ ಒದಗಿಬಂದುಬಿಟ್ಟಿದೆ. ಆದರೆ ದುಡಿಮೆಯ ಅಗತ್ಯವನ್ನು ಯಾರೂ ನಿರಾಕರಿಸುವಂತಿಲ್ಲ, ಮಾತನಾಡುತ್ತಿದ್ದರೆ ಹೊಟ್ಟೆ ತುಂಬುವುದಿಲ್ಲ; ಮನಸ್ಸಿನ ಮಂಡಿಗೆ ಬಾಯೊಳಗೆ ಇಳಿಯದು, ನಿತ್ಯಜೀವನದ ಯಾವೊಂದು ವಿವರವೆ ಆಗಲಿ ದುಡಿಯುವವರ ಕೊಡುಗೆಯೆ. ಹಾಗೆಂದು ಮಾತಿನ, ಮನಸ್ಸಿನ ನೆರವು ಇರದೆಂದೇನು ಅರ್ಥವಲ್ಲ, ಯಾವ ದುಡಿಮೆಗಾಗಲಿ ಇವೆರಡರ ಅಗತ್ಯವಿದ್ದೇ ಇದೆ. ಆದರೆ ವಾಚಾಳಿಗಳು ದುಡಿಯದೆ ಹೊಟ್ಟೆಹೊರೆದುಕೊಳ್ಳಬಹುದಲ್ಲವೆ? ಚಿಂತಕರಂತೂ ದುಡಿಯಲು ಅಂಜುತ್ತಾರೆ, ಹೇಸುತ್ತಾರೆ ಅಲ್ಲವೆ? ತಾವು ದುಡಿಯದೆ, ದುಡಿಯುವವರನ್ನೆ ಕೀಳುಕಣ್ಣಿನಿಂದ ಕಾಣುವ ಮಂದಿಯನ್ನು ಕುರಿತು ಹೇಳಿದ ಮಾತು 'ಕಾಯಕವೆ ಕೈಲಾಸ' ಎಂಬುದು. ಕೈಲಾಸವೆಂದರೆ ಪರಮಪುರುಷಾರ್ಥ; ಇಲ್ಲಿಯೆ ಒದಗಿಬರುವ ನೆಮ್ಮದಿ; ಕುಟುಂಬದಲ್ಲಿ ಸಮುದಾಯದಲ್ಲಿ ಸುಖ-ಸಂತೋಷಗಳು.

ದುಡಿಯುವವರು ತಾವೂ ನೆಮ್ಮದಿಯಿಂದಿದ್ದು ಬೇರೆಯವರಿಗೂ ಸುಖವನ್ನು ಒದಗಿಸಿಯಾರೆಂಬುದು ಈ ಮಾತಿನ ಹಿಂದಿರುವ ಭಾವನೆ. ಮಾತನಾಡುವವರೂ, ಚಿಂತಕರೂ ಮೈ ಮುರಿದು ಕೆಲಸ ಮಾಡುವುದರ ಅಗತ್ಯವನ್ನೂ ಸ್ವಾರಸ್ಯವನ್ನೂ ಅರಿತುಕೊಳ್ಳಲೆಂದು ಈ ಮಾತಿನ ಆಶಯ.

ದುಡಿಮೆಯಲ್ಲಿ ಸ್ವಹಿತ ಪರಹಿತ ಎರಡರ ಸಾಧನೆಯೂ ಇರುವುದಲ್ಲದೆ, ಅದು ಆರೋಗ್ಯಕ್ಕೂ ಒಳ್ಳೆಯದು.

ಬಲ-ಧೈರ್ಯ

ದೇವರಿಗೆ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ಹಿಂದೆ ಇದ್ದಿತಷ್ಟೆ? ಈಗಲೂ ಅಲ್ಲಲ್ಲಿ ಇದೆಯಲ್ಲ?

ಯಾವ ಪ್ರಾಣಿಗಳನ್ನು ಬಲಿ ಕೊಡುತ್ತಾರೆ? ಹುಲಿಯನ್ನಾಗಲಿ ಸಿಂಹವನ್ನಾಗಲಿ ಹಿಡಿಹು ತಂದು ಬಲಿ ನೀಡುವುದುಂಟೆ? ಬಡಪಾಯಿ ಕುರಿಯನ್ನೊ, ಎಮ್ಮೆಯನ್ನೊ, ಕೋಳಿಯನ್ನೊ ಬಲಿಗೆಂದು ಆರಿಸಿಕೊಳ್ಳುತ್ತಾರೆ! ತನ್ನನ್ನು ತಾನು ಕಾಪಾಡಿಕೊಳ್ಳದ ಪ್ರಾಣಿಗಳೆಂದರೆ ದೇವರಿಗೂ ಪ್ರೀತಿಯೇನೊ! ತಿರುಗಿ ಬೀಳುವ ಪ್ರಾಣಿಯಾದರೆ ದೇವರಿಗೂ ಅಂಜಿಕೆಯಿದ್ದೀತು! 'ದೇವೋ ದುರ್ಬಲಘಾತಕಃ ' ಎಂಬುದೊಂದು ಮಾತುಂಟು. ಬಲವಿಲ್ಲದವರನ್ನು ಗಾಸಿಪಡಿಸಲು ದೇವರೂ ಮುಂದಾಗುವನಂತೆ. ಲೋಕದಲ್ಲಿ ಒಳ್ಳೆಯವರಿಗೇ ತೊಂದರೆ ಹೆಚ್ಚು. ದುಷ್ಟರನ್ನು ಕಂಡರೆ ದೂರ ಇರುತ್ತಾರೆ. ನಯ, ವಿನಯ, ಮಾನ, .ಮರ್ಯಾದೆ ಎಂದು ಅಂಜುವವರಾದರೆ ಯಾರಾದರೂ ಮೇಲೆ ಬಿದ್ದಾರು. ಎಲ್ಲವನ್ನೂ ಬಿಟ್ಟವರ ಗೊಡವೆಗೆ ಹೋಗಲು ಬಲಿಷ್ಠರೂ ಅಂಜುತ್ತಾರೆ. ಕೈಲಾಗದವರೆಂದು ತಿಳಿದರೆ ಅವರನ್ನು ಅಸಡ್ಡೆಯಿಂದ ಕಾಣುವರು; ಬಲವುಳ್ಳವರಾದರೆ ಎಲ್ಲರೂ ಅವರನ್ನು ಓಲೈಸುವವರೇ. ಕಡೆಗೆ ಅವರಿಂದ ತಮಗೆ ತೊಂದರೆಯಾಗದಿರಲಿ ಎಂಬ ಬಯಕೆಯಾದರೂ ಇರುತ್ತದೆ.

ಕೈಯಲ್ಲಿ ದೊಣ್ಣೆ ಹಿಡಿಯದವನನ್ನು ಕುರಿಯೂ ಕಚ್ಚಬಂದೀತು!

ಕೈಯಲ್ಲಿ ದೊಣ್ಣೆಯಿದ್ದರೆ ಬೇಟೆನಾಯಿಯೂ ಬೆದರಿ ಓಡಿಹೋದೀತು.

ಬಲವೆಂದರೆ ಮೈಯ ಬಲವೆಂದಷ್ಟೆ ಅಲ್ಲ. ಮನಸ್ಸಿನದೂ ಅಲ್ಲ. ಹಣ, ಪ್ರಭಾವ, ದೌರ್ಜನ್ಯ ಇವೆಲ್ಲವೂ ಬಲವೆ. ರಾಜಕಾರಣದ ಬೆಂಬಲವಿದೆಯೆಂದಾದರೆ ಅಂಥವನು ಯಾವ ಕಾನೂನಿಗೂ ಅಂಜುವುದಿಲ್ಲ; ಯಾರ ಅಂಕೆಯನ್ನೂ ಲೆಕ್ಕಿಸುವುದಿಲ್ಲ; ಏನನ್ನಾದರೂ ಮಾಡಿಯಾನು. ಕೋಳಿ ಕದ್ದವನಿಗೆ ಸಜ. ಆದರೆ ಕೊಲೆ ಮಾಡಿದವನನ್ನು ಕೆಲವೊಮ್ಮೆ ಕಾನೂನು ಮುಟ್ಟುವುದೂ ಕಷ್ಟವಾಗುತ್ತದೆ. ಕೆಲವರಿಗೆ ನೀತಿಯ ಮೇಲೆ ನಂಬಿಕೆ, ಧರ್ಮವನ್ನು ಕುರಿತಂತೆ ವಿಶ್ವಾಸ. ಅವರಿಗೂ ಧೈರ್ಯವೆ ಎನ್ನಬಹುದು. ತಮ್ಮ ಪಟ್ಟು ಬಿಡದಂತೆ ಬಾಳುತ್ತಾರೆ; ಹಿಡಿದ ದಾರಿಯಿಂದ ಸರಿಯುವುದಿಲ್ಲ, ಆದರೆ ಅವರಿಗೆ ತೊಂದರೆ ತಪ್ಪಿದ್ದಲ್ಲ.

ತೊಂದರೆಗೇನು ಅವರು ಅಂಜುವುದಿಲ್ಲವೆನ್ನಿ. ಆದರೆ ಇಂಥವರು ವಿರಳ.

ಅತಿಯಿರಬಾರದು

ಹಿಂದಿನ ತಲೆಮಾರಿನಲ್ಲಿ ಯಾರನ್ನಾದರೂ 'ಹೇಗಿದ್ದೀರಿ?' ಎಂದು ಕುಶಲಪ್ರಶ್ನೆ ಮಾಡಿದಾಗ 'ಇದ್ದೇನೆ, ಆರಕ್ಕೆ ಹೆಚ್ಚಿಲ್ಲ, ಮೂರಕ್ಕೆ ಕಡಮೆಯಿಲ್ಲ' ಎಂಬ ಉತ್ತರ ಬರುವುದು ವಾಡಿಕೆಯಾಗಿತ್ತು.

ಮೂರರಿಂದ ಆರರವರೆಗೆ ಮಿತಿ ಅನುಕೂಲಕ್ಕಾಗಲಿ ತೊಂದರೆಗಾಗಲಿ ಸಮನಾದದ್ದೆ, ಹೆಚ್ಚು ಅನುಕೂಲವೂ ಇರಬಾರದು; ಹೆಚ್ಚು ತೊಂದರೆಯೂ ಇರಬಾರದೆಂಬುದು ತಾತ್ಪರ್ಯ. ಕೆಲವರು 'ಚೆನ್ನಾಗಿದ್ದೇನೆ, ಹೇಳಿಕೊಳ್ಳುವಂಥ ತೊಂದರೆಯೇನಿಲ್ಲ' ಎಂದು ಹೇಳುವುದೂ ಇದ್ದಿತು. ತೊಂದರೆಗಳು ಯಾರಿಗಿರುವುದಿಲ್ಲ? ಕೆಲವು ಸಣ್ಣವು, ಕೆಲವು ದೊಡ್ಡವು. ಸಣ್ಣವನ್ನು ದೊಡ್ಡದು ಮಾಡುವ ಸ್ವಭಾವ ಕೆಲವರದ್ದು. ತಮ್ಮ ತೊಂದರೆಯನ್ನು ಎಲ್ಲರಿಗೂ ಮನವರಿಕೆ ಮಾಡಬೇಕೆಂಬ ಕಾತರ ಅವರದ್ದು. ಇಂಥವರು ಕುಶಲಪ್ರಶ್ನೆ ಕೇಳಿದವರ ತಲೆಯನ್ನೇ ತಿಂದುಬಿಡುತ್ತಾರೆ. ತಮ್ಮ ತೊಂದರೆಗಳ ಸರಮಾಲೆಯನ್ನು ಅವರ ಕೊರಳಿಗೆ ಹಾಕುತ್ತಾರೆ. ಆದರೆ ಬಹುಮಂದಿ, 'ತೊಂದರೆಗಳು ಬರುತ್ತವೆ ಹೋಗುತ್ತವೆ' ಎಂದು ತಮ್ಮ ಪಾಡಿಗೆ ತಾವು ತಮ್ಮ ಕೆಲಸವನ್ನು ನೋಡಿಕೊಳ್ಳುವರು. ಇಂಥವರಿಂದ ಬರುವ ಉತ್ತರ 'ಆರಕ್ಕೆ ಹೆಚ್ಚಿಲ್ಲ ಮೂರಕ್ಕೆ ಕಡಮೆಯಿಲ್ಲ' ಎಂಬುದು. 'ತೊಂದರೆಯ ತುಣುಕೂ ಇಲ್ಲ, ಎಲ್ಲ ವಿಧದಲ್ಲಿಯೂ ಅನುಕೂಲವಾಗಿದ್ದೇನೆ' ಎಂದು ಹೇಳಬಲ್ಲವರು ಕೂಡ ಮೇಲಿನ ಮಾತನ್ನೆ ಆಡುವರಲ್ಲ? ಎಂದರೆ ಅನುಕೂಲ ಅತಿಯಾದರೆ ತೊಂದರೆ ತಪ್ಪಿದ್ದಲ್ಲ ಎಂಬ ಅರಿವು ಅವರಿಗಿದ್ದು, 'ಆರಕ್ಕೆ ಹೆಚ್ಚು ಅನುಕೂಲವೂ ಇರಬಾರದೆಂದು' ಅವರ ಒಕ್ಕಣೆಯ ಇಂಗಿತ. ಮೂರಕ್ಕೆ ಕಡಮೆ ಅನುಕೂಲವಿದ್ದರೆ ತೊಂದರೆಯೆ. ಆರೋಗ್ಯವಾಗಲಿ ಐಶ್ವರ್ಯವಾಗಲಿ ಬೇರೆ ಯಾವ ಬಯಕೆಯೆ ಆಗಲಿ ಅಗತ್ಯಕ್ಕಿಂತ ಊನವಾಗಿದ್ದರೆ ನೆಮ್ಮದಿ ತಪ್ಪುತ್ತದೆ. ಅಗತ್ಯವನ್ನು ಮಿತಿಮೀರಿದರೂ ಅದೇ ಫಲ. ಯಾವುದೊಂದು ಹೆಚ್ಚಿದರೂ ಉಳಿದದ್ದರಲ್ಲಿ ಕೊರತೆ ಕಂಡುಕೊಳ್ಳುತ್ತದೆ. ಇದು ಲೋಕಸ್ವಭಾವ. ಐಶ್ವರ್ಯವಿದ್ದವರಿಗೆ ಆರೋಗ್ಯವಿಲ್ಲ; ಆರೋಗ್ಯವಿದ್ದವರಿಗೆ ಐಶ್ವರ್ಯವಿಲ್ಲ, ಆರ್ಥಿಕ ಅನುಕೂಲವಿದ್ದರೆ ಮಕ್ಕಳಿಲ್ಲ; ಮಕ್ಕಳು ಬಹುಮಂದಿ ಇದ್ದವರಿಗೆ ಅನುಕೂಲವಿಲ್ಲ.

ಹಲವಾರು ವಿವರಗಳು ಸಮತೂಕದಲ್ಲಿ ಇರಬೇಕೆಂದರೆ ಯಾವುದೊಂದೂ ತನ್ನ ಮಿತಿಯನ್ನು ಮೀರಬಾರದು, ಮೂರರಿಂದ ಕೆಳಗಿಳಿಯಬಾರದು; ಆರರಿಂದ ಮೇಲೇರಬಾರದು.

ಪ್ರಗತಿ

ಪ್ರಗತಿಯೆಂದರೆ ಮುಂದುವರಿಯುವುದು, ಮೇಲೇರುವುದು. ಸಂಸ್ಕೃತದಲ್ಲಿ ಅಭ್ಯುದಯವೆಂಬ ಮಾತಿರುವುದು ಇದೇ ಅರ್ಥದಲ್ಲಿ.

ಮನುಷ್ಯನು ನಿಂತಲ್ಲಿ ನಿಲ್ಲುವುದಿಲ್ಲ; ಇದ್ದಷ್ಟು ಸಾಕೆಂದು ಕೂಡುವುದಿಲ್ಲ. ಅಷ್ಟು ದೊರೆತರೆ ಮತ್ತಷ್ಟರಾಸೆ ಇದ್ದದ್ದೇ. ನಮ್ಮ ಪ್ರಯತ್ನವಿಲ್ಲದೆ ಸುಖವಾಗಲಿ ಸುಖಸಾಧನೆಗಳಾಗಲಿ ದೊರಕಲಾರವು. ಹಾಗೆಂದೇ ನಮ್ಮ ಪ್ರಯತ್ನ ಎಡೆಬಿಡದೆ ಸಾಗುತ್ತಿದೆ. ಪ್ರಯತ್ನವಿರದೆ ಪ್ರಗತಿಯಿಲ್ಲವೆಂದರೂ ಸರಿಯೆ. ಆದರೆ ನಮ್ಮ ಪ್ರಯತ್ನವೆಲ್ಲವೂ ಸುಖದ ಕಡೆಗೇ ನಮ್ಮನ್ನು ಒಯ್ಯುತ್ತವೆ ಎನ್ನುವುದಾಗದು. ಅವೆಲ್ಲವೂ ಪ್ರಗತಿಪರ ಎನ್ನುವುದೂ ಸರಿಯಲ್ಲ, ವಾಹನಗಳು ನಮ್ಮ ಸಂಚಾರಕ್ಕೆ ಅನುಕೂಲವಾದುವೇ? ಅಗತ್ಯವೆಂದರೂ ತಡೆಯುತ್ತದೆ. ಮನುಷ್ಯ ಪ್ರಯತ್ನಪಟ್ಟು ವಾಹನಗಳನ್ನು ಏರ್ಪಡಿಸಿಕೊಂಡ. ಅದರಿಂದ ಸುಖವೂ ಒದಗಿತು.

ಇನ್ನು ವಾಹನದಲ್ಲಿಯೂ ಪ್ರಗತಿ ಇರಬೇಡವೆ? ಒಂಟೆತ್ತಿನ ಬಂಡಿಯಿಂದ ವಿಮಾನದವರಗೆ ಪ್ರಗತಿಯನ್ನು ಸಾಧಿಸಿದ್ದೇವೆ. ಆದರೆ ಸುಖವೂ ಅಷ್ಟೆ ಹೆಚ್ಚಿದೆಯೆ? ವಾಹನದಲ್ಲಿ ವೇಗದ ಅಂಶ ಪ್ರಗತಿಗೊಂಡು ನಮ್ಮ ಬವಣೆ ಏನಾಗಿದೆಯೆಂಬುದು ಈಗೀಗ ತಿಳಿದುಬರುತ್ತದೆ. ಹೀಗೆಯೇ ಉಳಿದ ಸೌಕರ್ಯಗಳೂ, ಸುಖಸಾಧನೆಗಳೂ ಮಿತಿಯನ್ನು, ಔಚಿತ್ಯವನ್ನು, ಮೀರಿದರೆ ಅವು ಪ್ರಗತಿಪರ ಎನಿಸಿಕೊಳ್ಳಲಾರವು. ಇನ್ನೂ ಒಂದು ವಿಪರ್ಯಾಸವಿದೆ. ಸುಖಕ್ಕಾಗಿ ಪ್ರಗತಿ ಎಂಬುದೇನೋ ಸರಿಯೇ. ಸುಖಕ್ಕೆ ನಿಸರ್ಗಸಿದ್ಧವಾದ ಮಾನದಂಡವೊಂದಿದೆ.

ಪ್ರಗತಿಯ ಗತಿಯಲ್ಲಿ ಸಿಕ್ಕು ದಾರಿ ಕಾಣದವನು, ನಿಸರ್ಗಸಿದ್ಧವಾದ ಈ ಸುಖವನ್ನು ಮರೆತು ಪ್ರಗತಿಯಿಂದ ಒದಗಿದ್ದೇ ಸುಖವೆಂಬ ಭ್ರಮೆಗೆ ಪಕ್ಕಾಗುತ್ತಾನೆ. ಪ್ರಗತಿಯೆಂಬುದು ನಮಗೆ ನೆರವಾಗಬೇಕು ಎಂಬ ತತ್ತ್ವ ಮರೆಯಾಗಿ, ನಾವು ಪ್ರಗತಿಗೆ ನೆರವಾಗಬೇಕೆಂಬ ಗೀಳು ಉಳಿದುಕೊಳ್ಳುತ್ತದೆ. ಮೊದಲು ಸಾಧನವಾಗಿದ್ದುದು ಈಗ ಅದೇ ಗುರಿಯಾಗಿ ಪರಿಣಮಿಸಿರುವುದು ಇದರ ಹಿನ್ನೆಲೆ. ಇದರಲ್ಲಿ ಮೇಲೇರುವುದಾಗಲೀ, ಮುಂದುವರಿಯುವುದಾಗಲಿ ಅಷ್ಟೇ ಮುಖ್ಯ. ಪ್ರಯತ್ನದಲ್ಲೇ ಸುಖ; ಅದರ ಫಲದಲ್ಲಿ ಅಲ್ಲ.

'ಮುಂದ್ ಬರ್ಬೇಕು'

ಕೈಲಾಸಂ ಇದನ್ನು ಪಂಚಾಕ್ಷರಿ ಜಪವೆಂದು ಬಣ್ಣಿಸಿದರು. ಗಂಡು ಮಕ್ಕಳ ತಂದೆತಾಯಿಯರೆಲ್ಲ ಎಡೆಬಿಡದೆ ಮಾಡುವ ಜಪ.

ತಮ್ಮ ಹುಡುಗ ಓದು, ಬರಹ, ಆಟ, ಪಾಠ, ಎಲ್ಲದರಲ್ಲೂ ಮುಂದಾಗಿದ್ದು ಪರೀಕ್ಷೆಗಳನ್ನೆಲ್ಲ ಸಲೀಸಾಗಿ ದಾಟಿ, ಕೈತುಂಬ ಸಂಬಳ ಬರುವ ಹುದ್ದೆಯನ್ನು ಗಿಟ್ಟಿಸಿದರೆ ಮುಂದೆ ಬಂದ ಹಾಗೆ, ಅಲ್ಲವೇ ? ಮುಂದೆ ಬರುವುದು, ಹಿಂದೆ ಉಳಿಯುವುದು ಎಂಬುದರ ಮಟ್ಟಗೋಲು ಯಾವುದು? ಸಂಪಾದನೆ.

ಸಂಪಾದನೆಗೆ ತಕ್ಕಂತೆ ಸ್ಥಾನ, ಮಾನ ಮೊದಲಾದುವು. ಇತರರನ್ನು ಹಿಂದೆ ತಳ್ಳಿ ಮುಂದೆ ಬಂದುದಕ್ಕೆ ಮರ್ಯಾದೆ ಜನರಿಂದ. ಮುಂದೆ ಬರುವುದರಿಂದ ಲಾಭಗಳೇನೋ ಇವೆ. ಮುಂದೆ ಬರಬೇಕೆಂಬ ಬಯಕೆಯೂ ತಪ್ಪೇನಲ್ಲ. ಜಾಣತನ, ಸಾಮರ್ಥ್ಯ ಎಲ್ಲವೂ ಇದ್ದವರು ಹಿಂದೆ ಉಳಿಯುವುದೇಕೆ? ಆದರೆ ಮುಂದೆ ಬರುವುದೇ ಒಂದು ಪ್ರಯೋಜನವಾಗಬಲ್ಲುದೆ? ಎಷ್ಟು ಮುಂದೆ ಬಂದರೆ ಸಾಕು? ಅಥವಾ ಮುಂದೆ ಬರುತ್ತಲೇ ಇರಬೇಕೋ? ಮುಂದೆ ಬರುವುದಕ್ಕೂ ನೆಮ್ಮದಿಗೂ ನಂಟು ನಿಶ್ಚಿತವಾದದ್ದಲ್ಲ. ಸಂಪತ್ತಿದ್ದರೆ ಸುಖವೇ ಎಂದು ಯಾರು ಹೇಳಿಯಾರು ? ನಾಲ್ಕು ಜನರಿಂದ ಭಲೆ ಎನ್ನಿಸಿಕೊಂಡ ಮಾತ್ರಕ್ಕೆ ಏನು ಪುರುಷಾರ್ಥ ಸಾಧಿಸಿದಂತಾಯಿತು? ಬದುಕು ಎನ್ನುವುದೊಂದು ಪಂದ್ಯ ಎಂದು ಕೆಲವರ ಎಣಿಕೆ. ಅದರಲ್ಲಿ ಗೆಲವು ಎನ್ನುವುದೇ ಬದುಕಿನ ಗುರಿ, ಅದಕ್ಕಾಗಿ ಮುನ್ನುಗ್ಗಲು ಟೊಂಕ ಕಟ್ಟಿ ಸಿದ್ಧವಾಗಿರಬೇಕು. ಆದರೆ ಗೆದ್ದು ಮಾಡುವುದೇನು? ಮುಂದೆ ಬರುವಾಗ ಆದ ಆಯಾಸವನ್ನು ಕಳೆದುಕೊಳ್ಳುವುದು ಯಾವಾಗ? ಬದುಕೆಲ್ಲ ಓಡುವುದೇ ಆದರೆ, ಬಹುಮಾನ ಯಾರಿಗೆ? ಯಾವಾಗ?

ಮುಂದೆ ಬರುವುದೇ ಒಂದು ಗೀಳಾಗಬಾರದು. ಮುಂದೆ ಬಂದ ಮೇಲೂ, ಇಷ್ಟು ಸಾಕು ಎನ್ನುವ ವಿವೇಕವಿರಬೇಕು.

ಮೇಲಾಗಿ, ಮುಂದೆ ಬಾರದವರು ಸುಖವಾಗಿಲ್ಲ ಎಂದೂ ಹೇಳುವಂತಿಲ್ಲ, ಅಲ್ಲವೆ?

ಕಾರ್ಯಶೂರ

ಶೂರನೆಂಬ ಮಾತಿಗೆ ಎದೆಗೊಟ್ಟು ನಿಲ್ಲಬಲ್ಲವನು, ಎದುರಾಳಿಯನ್ನು ಗೆಲ್ಲಬಲ್ಲವನು ಎಂಬರ್ಥವಿದೆಯಷ್ಟೆ.

ಸಾಮಾನ್ಯವಾಗಿ 'ವೀರ', 'ಶೂರ', 'ಧೀರ' ಎಂಬ ಮಾತುಗಳನ್ನು ಸಮಾನಾರ್ಥ ದಲ್ಲಿಯೇ ಬಳಸುವುದಿದೆ.

ಸಂಸ್ಕೃತದಲ್ಲಿ 'ಶೂರ' ಎಂಬ ಮಾತನ್ನು 'ವಿಕ್ರಮ'ಎಂಬ ಮೂಲಾರ್ಥದಲ್ಲಿ ಪರಿಗ್ರಹಿಸುತ್ತಾರೆ; 'ವಿಕ್ರಮ'ಎಂಬ ಮಾತಿಗೆ ಉದ್ಯಮ ಎಂಬ ಅರ್ಥವಿದೆ.

ಶೌರ್ಯ ಕಾಣುವುದು ಕೆಲಸದಲ್ಲಿ ಎಂದು ತಾತ್ಪರ್ಯ.

ಇಲ್ಲಿ ಎದೆಗಾರಿಕೆ ಇರುವುದು ಎದುರಾಳಿಯ ವಿಚಾರದಲ್ಲಲ್ಲ.

ಮುನ್ನುಗ್ಗಿ ಎಲ್ಲರನ್ನೂ ಸದೆಬಡಿಯುತ್ತಾನೆ ಎಂಬರ್ಥದಲ್ಲಲ್ಲ.

ಕೈಗೊಂಡ ಕೆಲಸವನ್ನು ಅಂಜದೆ, ಅಳುಕದೆ ನಿರ್ವಹಿಸುತ್ತಾನೆ ಎಂಬರ್ಥದಲ್ಲಿ ಶೂರ. ಕೆಲಸಕ್ಕೆ ತೊಡಗಿ, ಎದುರುಬಿದ್ದ ಮೊದಲನೆಯ ಅಡಚಣೆಗೆ ಬೆದರಿ, ಕೆಲಸವನ್ನೆ ಕೈ ಬಿಡುವ ಹೇಡಿತನವನ್ನು ಹಲವರಲ್ಲಿ ನಾವು ಕಾಣುವುದಿಲ್ಲವೆ? ಶೂರನಾದರೆ ಏನೇ ಅಡ್ಡಿ ಬರಲಿ, ಎಷ್ಟೇ ಆತಂಕವಾಗಲಿ ತೊಡಗಿದ ಕೆಲಸದಿಂದ ಹಿಮ್ಮೆಟ್ಟುವುದಿಲ್ಲ. ಕೆಲಸ ಯಾವುದಾದರಿರಲಿ, ತಾನು ಮನವೊಪ್ಪಿ ಅದನ್ನು ಕೈಗೊಂಡನಂತರ ಅರ್ಧದಲ್ಲಿ ನಿಲ್ಲಸಲಾರ.

ಆದರೆ 'ಕಾರ್ಯಶೂರ' ಎಂಬ ಮಾತಿನಲ್ಲಿ ಕೆಟ್ಟ ಕೆಲಸವೇನು ಸೇರುವುದಿಲ್ಲ.

ನಾಲ್ಕು ಜನರಿಗೆ ಒಳಿತಾಗುವಂಥ ಕೆಲಸವನ್ನೇ ಇವನು ಕೈಗೊಳ್ಳುವುದು; ಇಂಥ ಕೆಲಸಕ್ಕೆ ಅಡ್ಡಿ-ಆತಂಕಗಳು ಹೆಚ್ಚು.

ಕೆಲಸ ಕೆಟ್ಟದ್ದಾದರೆ ಅದು ಸುಸೂತ್ರವಾಗಿ ನಡೆದು ಹೋಗುತ್ತದೆ; ಅಲ್ಲಿ ಯಾವ ಸಾಹಸವೂ ಬೇಕಾದುದಿಲ್ಲ!

ಕಾರ್ಯಶೌರ್ಯ ಗಮನಕ್ಕೆ ಬರುವುದು ಲೋಕೋಪಕಾರದ ಹಿನ್ನೆಲೆಯಲ್ಲೇ.

ವಿ-ಶ್ರಾಮ

ಶ್ರಮಪಟ್ಟವನಿಗೆ ವಿಶ್ರಾಂತಿಯ ಅಗತ್ಯವಿದೆ. ಶ್ರಮವೇ ಇಲ್ಲದವನಿಗೆ ವಿಶ್ರಾಂತಿಯ ಅಗತ್ಯವೇನು? ಅಥವಾ ವಿಶ್ರಾಂತಿಯ ಸುಖವಾದರೂ ಅವನಿಗೆ ತಿಳಿದೀತೆ?

ಹೋರಾಡಿದರೆ ಗೆಲುವಿನ ಅರ್ಥ ಅರಿವಿಗೆ ಬಂದೀತು. ಸುಮ್ಮನೆ ಕೂತವನಿಗೆ ಗೆಲುವೇನು?ಸೋಲೇನು? ದುಡಿಮೆ ಮಾಡಿ ಬಳಲಿದವನು ದುಡಿಮೆಯ ಫಲವನ್ನೂ ಅನುಭವಿಸುತ್ತಾನೆ. ದುಡಿಮೆ ಮುಗಿದ ಮೇಲೆ ಹಾಯಾಗಿ ಕೂಡುವ ಸುಖವನ್ನೂ ಪಡೆಯುತ್ತಾನೆ. ಹಾಗೆಯೇ ಯಾವುದಾದರೊಂದು ಉದ್ದೇಶ ಸಾಧನೆಗಾಗಿ ಮೈ ಮುರಿದು ಮನಸಾರೆ ಕೆಲಸ ಮಾಡಿದನಂತರ ಒದಗುವ ಸಮಾಧಾನ ಕೆಲಸ ಮಾಡಿದವನಿಗೆ ಮಾತ್ರ ತಿಳಿದೀತು. ವಿಶ್ರಾಂತಿಯೆಂದರೆ ಇನ್ನು ಕೆಲಸ ಮಾಡಬೇಕಾದದ್ದಿಲ್ಲ ಎಂದರ್ಥವಲ್ಲ; ಕೈಗೊಂಡ ಒಂದು ಕೆಲಸವೋ, ಅದರ ನಿರ್ದಿಷ್ಟವಾದ ಒಂದು ಭಾಗವೋ ಮುಗಿಯಿತು ಎಂದಷ್ಟೆ ಅರ್ಥ, ಆಯಾಸಗೊಂಡ ದೇಹಕ್ಕೆ ದಣಿವಾರಿಸಿಕೊಳ್ಳುವ ಒಂದು ಹವಣಿಕೆ ವಿಶ್ರಾಂತಿ. ಮನಸ್ಸಿನ ಕೆಲಸವನ್ನೇ ಮಾಡುವವರಿಗೆ ಮನಸ್ಸಿಗೂ ಒಂದು ಬಿಡುವು ಬೇಕಾಗುತ್ತದೆಯಲ್ಲವೆ? 'ವಿಶ್ರಾಂತಿಯೆಂದರೆ ಏನನ್ನೂ ಮಾಡದೆ ಸುಮ್ಮನೆ ಕೂತು, ಅಥವಾ ಮಲಗಿ ಕಾಲಕಳೆಯುವುದು ಎಂದೂ ಅಲ್ಲ, ಬೇರೆ ಬಗೆಯ ಕೆಲಸವನ್ನು ಎತ್ತಿಕೊಳ್ಳುವುದೂ ಒಮ್ಮೊಮ್ಮೆ ವಿಶ್ರಾಂತಿಯೇ ಆಗುತ್ತದೆ. ಮನಸ್ಸಿನ ಕೆಲಸವನ್ನು ಮಾಡುವವರು ದಣಿದಾಗ ಅಥವಾ ಬೇಸರಗೊಂಡಾಗ ತೋಟದ ಕೆಲಸ ಮಾಡಿದರೆ ಮನಸ್ಸಿಗೆ ಹರ್ಷವೆನಿಸುವುದಿಲ್ಲವೆ? ದೇಹದ ದುಡಿಮೆಯಿಂದ ಬಳಲಿದವರು ಕೂತು ಏನನ್ನಾದರೂ ಓದಲು ಮೊದಲಿಟ್ಟಾಗಲೂ ಅದು ವಿಶ್ರಾಂತಿಯೆ ಅಲ್ಲವೆ?

ಆದರೆ ನಿರ್ದಿಷ್ಟವಾದ ಒಂದು ಉದ್ಯಮವೋ ಆಸಕ್ತಿಯೋ ಇರದಿದ್ದಾಗ ವಿಶ್ರಾಂತಿಯ ಸ್ವಾರಸ್ಯವಿರಲಾರದು.

ಕಲ್ಲು-ಲಿಂಗ

ಉಳಿ ಮುಟ್ಟದ ಕಲ್ಲು ಲಿಂಗವಾದೀತೆ ? ಸ್ವಯಂಭುಲಿಂಗಗಳಿರುತ್ತವೆ. ಅವುಗಳ ಮಾತು ಬಿಡಿ. ಅವುಗಳ ಸಂಖ್ಯೆಯೇನು ದೊಡ್ಡದಲ್ಲ.

ಕಾಡುಕಲ್ಲನ್ನು ಹೊತ್ತು ತಂದು, ಜಾಣನಾದ, ಸಾಹಸಿಯಾದ ಶಿಲ್ಪಿ ಎಡೆಬಿಡದೆ, ಉಳಿಪೆಟ್ಟು ಹಾಕಿ ಹಾಕಿ ಲಿಂಗವನ್ನು ಕಡೆಯುತ್ತಾನೆ. ಮೊದಲು ನಾವು ಅಸಡ್ಡೆಯಿಂದ ಕಾಣುತ್ತಿದ್ದ, ಮೆಟ್ಟಿನಿಲ್ಲುತ್ತಿದ್ದ ಬಂಡೆಗಲ್ಲು ಈಗ ಪೂಜೆಗೆ ಅಣಿಯಾಯಿತು. ಅದಕ್ಕೆ ನಾವು ತಲೆಬಾಗಿಸುತ್ತೇವೆ. ಅದನ್ನು ಭಕ್ತಿಯಿಂದ ಮುಟ್ಟುತ್ತೇವೆ. ಉಳಿಯ ಪೆಟ್ಟು ಎಷ್ಟು ಮಹತ್ವದ್ದು! ಶಿಲೆಯನ್ನು ಶಂಕರನನ್ನಾಗಿಸುವ ಸಾಧನ ಅದು. ಹಲವರಿಗೆ ಬದುಕಿನಲ್ಲಿ ಮೇಲಿಂದ ಮೇಲೆ ಹೊಡೆತ ಬೀಳುವುದುಂಟು. ಹೀಗೆ ತೊಳಲುತ್ತಿರುವಾಗ, ಬವಣೆ ಪಡುತ್ತಿರುವಾಗ ಹೊಡೆತಗಳಿಗೂ ಒಂದು ಗುರಿಯುಂಟು. ಹೊಡತದಿಂದ ನಮಗೆ ಪ್ರಯೋಜನವುಂಟು ಎಂಬ ಅರಿವಾಗುವುದು ಕಷ್ಟ. ವಿಧಿಯನ್ನು ಹಳಿಯುತ್ತೇವೆ, ದೇವರನ್ನು ದೂಷಿಸುತ್ತೇವೆ. 'ಅಕಟಕಟಾ' ಎಂದು ಬಿಸುಸುಯ್ಯುತ್ತೇವೆ; ದುರ್ದೈವವೆಂದು ಮಮ್ಮಲ ಮರುಗುತ್ತೇವೆ. ಇದು ಬಹುಜನರ ಅನುಭವವಾದರೆ, ಕೆಲವರು ತಮಗೊದಗುವ ತೊಂದರೆಗಳನ್ನು ಪರೀಕ್ಷೆಯೆಂದು ಕಾಣುತ್ತಾರೆ. ತಮ್ಮ ಸತ್ವವನ್ನು ಪರೀಕ್ಷೆಗೆ ಒಳಪಡಿಸಲೆಂದೇ ವಿಧಿ ಅಡೆ-ತಡೆಗಳನ್ನು, ಅಡ್ಡಿ-ಆತಂಕಗಳನ್ನು ತಂದೊಡ್ಡುವುದೆಂದು ಅವರ ಅನಿಸಿಕೆ. ಎಂದ ಮೇಲೆ 'ಬಂದದ್ದೆಲ್ಲಾ ಬರಲಿ' ಎಂದು ಟೊಂಕ ಕಟ್ಟಿ ನಿಲ್ಲುವ ಸಾಹಸ, ಧೈರ್ಯ ಅವರದ್ದು. ಕಾಣಿಸಿಕೊಂಡ ಸವಾಲುಗಳನ್ನೆಲ್ಲ ಎದುರಿಸಿ ಮುನ್ನುಗ್ಗುವುದು ಅವರ ರೀತಿ. ಎಷ್ಟು ಸಂಕಟ ಬಂದರೂ ಕಂಗೆಡುವುದಿಲ್ಲ ಅವರು. ಸೋಲಿಗೆ ಅವರೇನು ಸೊರಗುವುದಿಲ್ಲ. ಬೆದರುವುದಿಲ್ಲ. ಮಡಿಯುವವರೆಗೂ ಮಾಡು ಎಂಬ ನೀತಿ ಅವರದ್ದು. ಸವಾಲುಗಳನ್ನೆದುರಿಸದೆ, ಸೋಲುಗಳನ್ನು ಅನುಭವಿಸದೆ, ಕಷ್ಟಪಡದೆ ಮೇಲೆ ಬಂದವರು ವಿರಳ. ಪ್ರಸಿದ್ಧನಾದ, ಲೋಕೋಪಕಾರಿಯಾದ ಯಾವುದೇ ವ್ಯಕ್ತಿ ಸಾಹಸಿಯಾಗದೆ ಇರುವುದು ಸಾಧ್ಯವಿಲ್ಲ; ಎರಗಿ ಬಂದ ಸಂಕಟಗಳನ್ನು ಮೀರಿ ನಿಲ್ಲುವ ಸಾಹಸವಿರದೆ ಯಾವ ಸಿದ್ಧಿಯಾದೀತು? ಹಿಡಿದ ಪಟ್ಟು ಬಿಡದೆ ಮುಂದುವರಿಯುವುದು ಮುಖ್ಯ.

ಸಾಹಸವಿದ್ದವರೆಲ್ಲ ಸಿದ್ಧರಾದಾರು, ಪ್ರಸಿದ್ಧರಾದಾರು ಎಂಬ ನಿಯಮವೇನಿಲ್ಲ. ಒದಗಿಬಂದ ಸಂಕಟದಿಂದ ಸುಸಂಸ್ಕೃತರಾದರೆ ಸಾಹಸಕ್ಕೆ ಅದೊಂದು ಶೋಭೆ. ಯಾವ ಕಲ್ಲಿಗೆ ಲಿಂಗವಾಗುವ ಪುಣ್ಯವಿದೆಯೋ ಬಲ್ಲವರಾರು? ಆದರೆ ಉಳಿಯ ಪೆಟ್ಟು ಕಾಣದ ಕಲ್ಲು ಲಿಂಗವಾಗುವ ಸಂಭವ ಕಡಮೆ.

ವೃತ್ತಿ-ನಿವೃತ್ತಿ

ವೃತ್ತಿಯಿಂದ ನಿವೃತ್ತಿಯಾಗುವುದೆಂದರೆ ಬಹುಮಂದಿಗೆ ಅಂಜಿಕೆ.

ಕೆಲವರಿಗಂತೂ ಅದು ನಾಚಿಕೆಯ ಪ್ರಸಂಗ! ನಿವೃತ್ತಿಯಾಯಿತೆಂದರೆ ಮುಪ್ಪಡರಿತು, ತನ್ನ ದಿನಗಳು ಮುಗಿದವು ಎಂದೇ ಅರ್ಥವೆಂದು ಅವರ ಎಣಿಕೆ.

ನಿವೃತ್ತರಾಗಲು ಯಾರೂ ಬಯಸರು. ದೇಹಶಕ್ತಿ ಉಡುಗಿದರೂ, ಮನಸ್ಸು ಮುದುಡಿಕೊಂಡರೂ ಕೆಲಸದ ತಾಣಕ್ಕೆ ಹೋಗಿಬರುತ್ತಿರಬೇಕೆಂಬ ಚಪಲ. ತೆಪ್ಪಗೆ, ತಣ್ಣಗೆ ಮನೆಯಲ್ಲಿ ಕೂತುಕೊಳ್ಳಲು ಯಾರೂ ಒಪ್ಪರು.

ಹೀಗೇಕೆ? ವೃತ್ತಿಯನ್ನು ಹಿಡಿಯುವುದರಲ್ಲಿ ಅನೇಕ ಕಾರಣಗಳಿರುತ್ತವೆ. ಮುಖ್ಯವಾದುದು ಸಂಪಾದನೆ; ವೃತ್ತಿ ಬದುಕುವ ದಾರಿಯಲ್ಲವೆ? ನಿವೃತ್ತಿಯೆಂದರೆ ಸಂಪಾದನೆ ನಿಂತಿತು, ಅಥವಾ ಇಳಿಮುಖವಾಯಿತು. ಇದು ಯಾರಿಗೂ ಬೇಡ.

ಕೆಲವರಿಗಂತೂ ನಿವೃತ್ತಿಯೆಂದರೆ ಆತಂಕಕ್ಕೆ ಅವಕಾಶವೆ! ಆದಾಯ ಇದ್ದಕ್ಕಿದ್ದಂತೆ ಕಡಮೆಯಾದರೆ, ಅಥವಾ ನಿಂತುಹೋದರೆ ಮಾಡುವುದೇನು? ಹಣದ ಕೊರತೆಯಿರದಿದ್ದವರಾದರೂ ನಿವೃತ್ತಿಯನ್ನು ನಗುಮೊಗದಿಂದ ಎದುರು ನೋಡಿಯಾರೆ? ಅದೂ ವಿರಳವೆ. ನಿವೃತ್ತರಾದ ಮೇಲೆ ಮಾಡುವುದಾದರೂ ಏನನ್ನು?

ಹತ್ತಾರು ವರ್ಷಗಳಿಂದ ದಿನದಿನವೂ ಮಾಡಿದ (ಅಥವಾ ಮಾಡಿದಂತೆ ನಟಿಸಿದ) ಕೆಲಸ ಮೈಗಂಟಿಕೊಂಡು ಮನಸ್ಸನ್ನು ಮುತ್ತಿರುವಾಗ, ಇನ್ನು ಅದನ್ನು ಮಾಡಬೇಕಾದುದಿಲ್ಲ ಎಂದಾಗ ಏನೋ ಮುಜಗರ! ವೃತ್ತಿಯನ್ನು ಬಿಡುವುದೆಂದರೆ ಮೈಯ ಒಂದು ಭಾಗವೆ ಕಳಚಿಕೊಂಡು ಬಿದ್ದಂತೆ ಎಂದು ಹಲವರ ಭಾವನೆ.

ವೃತ್ತಿ ತಪ್ಪಿದರೆ ಶೂನ್ಯದ ಅನುಭವ. ತಾವಿರುವುದೆ ದುಡಿಯುವುದಕ್ಕಾಗಿ, ದುಡಿಮೆಯಿಂದ ಬಿಡುಗಡೆ ಬೇಡವೇ ಬೇಡ ಎಂಬ ಹಟವೂ ಕೆಲವರಿಗೆ. ಇಂಥ ಪರದಾಟ ಏತಕ್ಕೆನ್ನುವಿರಾ? ವೃತ್ತಿಯಲ್ಲೆ ಅಖಂಡವಾಗಿ ತಮ್ಮನ್ನು ತೊಡಗಿಸಿಕೊಂಡವರಿಗೆ ಸ್ವಂತ ಪ್ರವೃತ್ತಿಯೆಂಬುದಕ್ಕೆ ಸಂಚಕಾರ!

ವೃತ್ತಿ ಎಂಬುದು ಬದುಕಿನ ಒಂದು ಮುಖ ಅಷ್ಟೆ: ಬಾಳೆಲ್ಲ ಅಷ್ಟಕ್ಕೆ ಮುಗಿಯುವುದಿಲ್ಲ, ಮುಗಿಯಬಾರದು. ವ್ಯಕ್ತಿಗೆ ತನ್ನದೆ ಆದ ಆಸಕ್ತಿಗಳಿದ್ದು ಅಭಿರುಚಿಗಳಿದ್ದು ನಿವೃತ್ತಿಯಾದೊಡನೆ ಆ ಕಡೆಗೆ ಗಮನ ಹರಿಸಬಹುದು, ಎಂಬ ಉತ್ಸಾಹವಿದ್ದರೆ ನಿವೃತ್ತಿಯೆಂದರೆ ಅಂಜಿಕೆಯೇನು ಇರದು.

ನಿವೃತ್ತಿಯಾದ ಮೇಲೆ ದಿಟವಾದ ಬದುಕು ಆರಂಭವಾಗುವುದೂ ಉಂಟು. ಸಾರ್ಥಕವಾದ ಬದುಕು ಅದು.

ನಕಾರದ ರೀತಿ

ಯಾರಾದರೂ ಬಂದು ನಮ್ಮನ್ನು ಬೇಡಿಕೊಂಡಾಗ, ಯಾವುದಾದರೂ ವಿಚಾರ ಎತ್ತಿ, ನಮ್ಮ ಅಭಿಪ್ರಾಯವನ್ನು ಕೇಳಿದಾಗ ಇಲ್ಲ, ಆಗದು, ಬೇಡ ಎಂದು ಹೇಳುವುದು ಸುಲಭವಲ್ಲ. ಹೇಳದೆ ಇರುವುದೂ ಸರಿಯಲ್ಲ.

ಈ ಸಂಕಟದಿಂದ ಪಾರಾಗುವ ಬಗೆಯೇನು? ಬಾಯಿಂದ 'ನೀನು ಬಯಸಿದುದನ್ನು ನಾನು ಕೊಡಲಾರೆ', 'ನನ್ನ ಅಭಿಪ್ರಾಯವನ್ನು ಹೇಳಲಾರೆ' ಎಂದು ಹೇಳದೆ ಇದ್ದರೂ ಅದನ್ನು ಸೂಚಿಸುವುದು ಸಾಧ್ಯ. ಇಂಗಿತವನ್ನು ಬಲ್ಲವರು ತಿಳಿದುಕೊಳ್ಳುತ್ತಾರೆ. ಅಷ್ಟು ಸೂಕ್ಷ್ಮವಾಗಿರದಿದ್ದವರಿಗೆ ಬಾಯಿಂದ ಬಿಡಿಸಿ ಹೇಳಬೇಕು. ಸಂಸ್ಕೃತದ ಒಂದು ಶ್ಲೋಕದಲ್ಲಿ 'ನಕಾರಃ ಷಡ್ವಿಧಃ ಸ್ಮೃತಃ' ಎಂಬ ಒಕ್ಕಣೆ ಬರುತ್ತದೆ. ಎಂದರೆ, ಇಲ್ಲ, ಬೇಡ, ಆಗದು, ಒಪ್ಪೆನು, ಮಾಡೆನು ಎಂದೆಲ್ಲ ಹೇಳುವುದು 'ನಕಾರ'. ಮಾತನಾಡದೆ ಸುಮ್ಮನಿದ್ದುಬಿಟ್ಟರೆ ಆಯಿತು: ಇಲ್ಲವೆಂದೇ ಅರ್ಥ. ನೋಡೋಣ, ಇರಲಿ, ಆಮೇಲೆ, ಮುಂದೆ ಎಂದಾದರೂ ಎಂಬ ಮಾತುಗಳನ್ನಾಡಿದರೂ ಇಲ್ಲವೆಂದೇ ತಾತ್ಪರ್ಯ. ಅನಂತರ ಎಂಬ ಮಾತಿಗೆ ಇಲ್ಲವೆಂಬುದು ಸಮಾನಾರ್ಥಕವಾದುದಂತೆ ('ಪಶ್ಚಾತ್ ಶಬ್ದಃ ನಾಸ್ತಿಪರ್ಯಾಯಃ')! ತಡಮಾಡುವುದು (ಕಾಲವಿಳಂಬ) ನಕಾರದ ಇನ್ನೊಂದು ರೀತಿ. ಮರು ಮಾತಾಡದೆ, ಸ್ಥಳವನ್ನೇ ಬಿಟ್ಟು ಎದ್ದು ಹೊರಟುಬಿಡುವುದು (ಪ್ರಯಾಣ) ಮತ್ತೊಂದು ರೀತಿ. ಕೇಳಿದವರು ಅಲ್ಲೇ ಇದ್ದರೂ, ಅವರಿಂದ ದೂರವಾಗಿಬಿಡುವುದರ ಅರ್ಥವೇನು? ಅವರು ಕೇಳಿದ್ದು ತನಗೆ ಹಿತವಲ್ಲ ಎಂದು ತಾನೆ? ಜಾಗ ಬಿಡದೆ ಅಲ್ಲೇ ಇದ್ದರೂ, ಕೇಳಿದವರನ್ನು ನೋಡದೆ ನೆಲದ ಕಡೆ ಕಣ್ಣು ನೆಲೆಗೊಳ್ಳುವಂತೆ ಮಾಡುವುದು (ಭೂಮಿದರ್ಶನ) ಇಲ್ಲವೆಂಬುದರ ಸೂಚನೆ.

ಹುಬ್ಬುಗಂಟಿಕ್ಕುವುದು ಇನ್ನೊಂದು ಬಗೆ (ಭ್ರುಕುಟಿ). ಕೇಳಿದುದು ತನಗೆ ಹಿತವೆನಿಸಲಿಲ್ಲ, ಕೇಳಿದವರನ್ನು ತಾನು ಮೆಚ್ಚಿಕೊಳ್ಳುವುದಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮೇಲಿನ ಯಾವುದನ್ನೂ ಮಾಡದೆ ಇದ್ದರೂ, ಮಾತನ್ನು ಬೇರೆ ಕಡೆಗೆ ತಿರುಗಿಸಿಬಿಡುವುದೂ ಅದೇ ಧ್ವನಿಯನ್ನು ಕೊಡುತ್ತದೆ. ಹಣವನ್ನು ಕೇಳಲು ಬಂದವರು ಹಣದ ಬೇಡಿಕೆಯನ್ನು ಮುಂದಿರಿಸಿದೊಡನೆ ಬಲವಂತವಾಗಿ ಬೇರೊಂದು ವಿಚಾರದತ್ತ ಗಮನವನ್ನು ಹರಿಸಿಬಿಟ್ಟರೆ ಅವರ ಬೇಡಿಕೆಗೆ ಅಡ್ಡಹಾಕಿದಂತೆಯೇ. ಮತ್ತೆ ಅವರು ತಮ್ಮ ಬೇಡಿಕೆಯನ್ನು ಮುಂದುವರಿಸುವುದು ಕಷ್ಟ.

ಸಂಸ್ಕೃತಿಯ ಹರವಿನಲ್ಲಿ ಇಂಥ ಜಾಣತನ ಉಪಯೋಗಕ್ಕೆ ಬರುತ್ತದೆ. ಹಾವು ಸಾಯಬಾರದು, ಕೋಲು ಮುರಿಯಬಾರದು.

ಹವಾ-ಮಾನ

ಸಂಭಾಷಣೆಯಲ್ಲಿ ಸಾಮಗ್ರಿ ಸಾಲದಾದಾಗ ಮಾತು ಹವೆಯ ಕಡೆ ತಿರುಗುತ್ತದೆ. ಬಿಸಿಲು ತಡೆಯಲಾಗದಷ್ಟು ಎಂದು ಬೇಸಿಗೆಯಲ್ಲಿ ದೂರು; ಚಳಿಯೋ ಚಳಿ ಎಂದು ಚಳಿಗಾಲದಲ್ಲಿ. ಅಬ್ಬರದ ಮಳೆಗಾಲದಲ್ಲಂತೂ ಕೇಳುವಂತೆಯೇ ಇಲ್ಲ! ನಮ್ಮ ಸಲಹೆಯಂತೆ ಹವೆ ನಡೆಯುವುದಾದರೆ ಬೇಸಿಗೆಯಲ್ಲಿ ಚಳಿಯಾಗಬೇಕು, ಚಳಿಗಾಲದಲ್ಲಿ ಬಿಸಿಲಿನ ಬೇಗೆ ಇರಬೇಕು; ಯಾವ ಕಾಲದಲ್ಲೂ ಮಳೆ ಬರಲೇ ಬಾರದು! ಅಂತೂ ನಮ್ಮ ಅನುಕೂಲ ನೋಡಿಕೊಂಡು ಹವಾಮಾನ ಇರಬೇಕು, ಬದಲಾಗಬೇಕು!

ಸದ್ಯ, ಇದು ಸಾಧ್ಯವಿಲ್ಲ. ಎಲ್ಲರ ಅನುಕೂಲವೂ ಒಂದೇ ರೀತಿಯದು ಎನ್ನಬಹುದೆ ? ಅನುಕೂಲ ಎಲ್ಲ ಕಾಲದಲ್ಲೂ ಏಕಪ್ರಕಾರವಾಗಿರುತ್ತದೆ ಎನ್ನಲಾದೀತೆ? ಹತ್ತು ಮಂದಿಯಿದ್ದರೆ ಹತ್ತು ಮನಸ್ಸುಗಳು, ಐವತ್ತು ಅನಿಸಿಕೆಗಳು, ನೂರು ಬಯಕೆಗಳು, ಎಲ್ಲರ ಎಲ್ಲ ಬಯಕೆಗಳನ್ನೂ ಪೂರಯಿಸಬಲ್ಲ ದೇವತೆ ಯಾರಿದ್ದಾನೋ ತಿಳಿಯದು ! ಒಂದು ವೇಳೆ ಅಂಥವನು ಒಂದು ಕಾಲಕ್ಕೆ ಇದ್ದಿದ್ದರೂ ಎರಡು ದಿನ ಉಳಿದಿರಲಾರ! ಈಗಂತೂ ಅವನ ಹೆಸರಿಲ್ಲ. ಇನ್ನು ಹವೆಗೆ ಹೊಂದಿಕೊಂಡು ಹೋಗುವ ಜಾಣತನ ನಮಗಿರಬೇಕು. ಹವೆಯ ಮೇಲೆ ನಮ್ಮದೇನು ಅಧಿಕಾರ ಇದ್ದೀತು ? ಬರಿದೆ ಹವೆಯನ್ನು ದೂರಿದರೆ ಆಗುವುದೇನು? ನಮಗೇ ಕಿರಿಕರಿಯಲ್ಲದೆ ಹವೆಗೇನು ಮಾನವಿದೆಯೆ?

ಹವಾಮಾನವೂ ನಮ್ಮ ಉಳಿವಿಗಾಗಿ, ನಮ್ಮ ಒಳಿತಿಗಾಗಿ ಎಂದು ಮಾನವಿದ್ದ ಹವೆ ಹೇಳೀತು! ಹವೆಯನ್ನು ಹಳಿದು, ನಮ್ಮ ಕೊರಗನ್ನು ತೋರಿಸಿದರೆ 'ಕೈಲಾಗದವ ಮೈ ಪರಚಿಕೊಂಡ' ಎಂದಂತೆ. ಯಾವುದೇ ಹವೆಯಾಗಲಿ ತಾಳಿಕೊಳ್ಳುವ ಬಲ ಇರಬೇಕಾದುದು ಮಾತ್ರವಲ್ಲ. ಒಂದೊಂದು ಹವೆಯನ್ನು ಅನುಭವಿಸಿ ಸಂತೋಷ ಪಡುವ ಮನೋವೃತ್ತಿಯೂ ಇರಬೇಕು. ಆಗ ಹವಾಮಾನದಿಂದ ನಮ್ಮ ಮಾನ ಉಳಿದೀತು.

ಹೊತ್ತು ಹೋಗದು !

ಹೊತ್ತು ಹೋದದ್ದೇ ತಿಳಿಯುವುದಿಲ್ಲ ಕೆಲವರಿಗೆ: ಕೈ ತುಂಬ ಕೆಲಸ. ಮತ್ತೆ ಕೆಲವರಿಗೆ ಎರಡೂ ಕೈಗಳಿಂದ ನೂಕಿದರೂ ಹೊತ್ತು ಹೋಗದು. ಇವೆರಡು ಗುಂಪಿನ ಜನರಲ್ಲಿ ಮೊದಲನೆಯವರಿಗೆ ಆರೋಗ್ಯ ಹೆಚ್ಚು; ಅವರಿಂದ ಸುತ್ತಲವರಿಗೆ ತೊಂದರೆ ಕಡಮೆ. ತನ್ನ ಕೆಲಸವಿರದಿದ್ದರೆ ತಾನೆ ಊರ ಉಸಾಬರಿ; ಉಂಡದ್ದು ಅರಗದು!

ಕೆಲಸವೆಂದರೆ ಮನೆಯಲ್ಲಿರಲಾರದೆ ಹೊರಗೆ ಹೋಗಿ ಯಾರಿಗಾಗಿಯೋ ದುಡಿಯುವುದೆಂದಷ್ಟೆ ಅರ್ಥವಲ್ಲ. ನಾಗರಿಕತೆಯ ಒತ್ತಡದಿಂದಾಗಿ, ಸರಕಾರವೋ ಸಂಸ್ಥೆಯೋ ಉದ್ದಿಮೆಯೋ ಯಾವುದಾದರೊಂದು ವ್ಯವಸ್ಥೆಯಲ್ಲಿ ತನ್ನದಲ್ಲದ, ತನಗೆ ಬೇಡದ ಕೆಲಸವನ್ನು ಮಾಡುವುದು ವಾಡಿಕೆ. ಹಣ ಗಳಿಸುವುದೇ ಮುಖ್ಯ ಉದ್ದೇಶ ಅಲ್ಲಿ.

ಹಣಕ್ಕಾಗಿ ದುಡಿಯುವುದೇ ಮುಖ್ಯವೆನಿಸಿದವರು, ಕೆಲಸ ಮುಗಿಸಿ ಮನೆಗೆ ಬಂದ ಮೇಲೆ ಅವರಿಗೆ ಮಾಡಲು ಏನೂ ಇರದು; ಬೇಸರ, ಬದುಕು ನೀರಸ, ಹೊರಗಣ ಕೆಲಸವೇ ಮುಖ್ಯವೆನಿಸಿ ರಾತ್ರಿ-ಹಗಲು ದುಡಿಯುವವರೂ ಹೀಗೆಯೇ, ಯಾವ ಕಾರಣದಿಂದಾದರೂ ಕೆಲಸ ತಪ್ಪಿದರೆ ಅವರಿಗೆ ಮುಂದೆ ಏನು ಮಾಡಬೇಕೆಂದೇ ತಿಳಿಯದು! ಅವರ ಆರೋಗ್ಯ ಕೆಡುವುದು ಖಂಡಿತ. ತನಗೆ ಹಿತವೆನಿಸಿದ, ಮನಸ್ಸಿಗೆ ಹರ್ಷತರುವ ಕೆಲಸವೂ ಕೆಲಸವೇ, ಬೇಕಿದ್ದರೆ ಅದನ್ನು ಹವ್ಯಾಸವೆಂದು ಕರೆಯಿರಿ. ಅದರಿಂದ ಪ್ರತಿಫಲ ಬಾರದಿರಬಹುದು. ಪುರಸ್ಕಾರ ದೊರೆಯದಿರಬಹುದು. ಸುತ್ತಲವರು ಮೆಚ್ಚದಿರಬಹುದು. ತನಗೆ ಅದರಲ್ಲಿ ಉತ್ಸಾಹವಿದ್ದರೆ, ತವಕವಿದ್ದರೆ, ಅಷ್ಟೇ ಸಾಕು.

ಸಂಗೀತ, ಸಾಹಿತ್ಯ, ಕೈಕೆಲಸ, ಚಿತ್ರ, ಶಿಲ್ಪ, ವೇದಾಂತ, ಓದುವುದು, ತೋಟಗಾರಿಕೆ ಈ ಯಾವುದೂ ಆದೀತು. ಅಂತು ಬದುಕಿಗೆ ಅರ್ಥಕೊಡುವ, ಬೇಸರವನ್ನು ಬಡಿದಟ್ಟುವ ಕೆಲಸ ದುಡಿಮೆಯೆನಿಸಿಕೊಳ್ಳುವುದಿಲ್ಲ. ಅದರಿಂದ ಶರೀರಕ್ಕೆ ಶ್ರಮವಿರದು, ಮನಸ್ಸಿಗೆ ಮುಜಗರವಾಗದು.

ರುಚಿಯುಳ್ಳ ಆಹಾರವನ್ನು ಉಂಡರೆ ಅರಗದೆ ಏನು? ನಾಲಗೆಗೂ ರುಚಿ, ಮೈಗೂ ಪಥ್ಯ, ಮನಸ್ಸಿಗೂ ಹಿತ. ಹಾಗೆಯೇ ತನಗೆ ಒಲಿದ ಹವ್ಯಾಸವೂ ಮೈಗೆ ಆರೋಗ್ಯ, ಮನಸ್ಸಿನಲ್ಲಿ ಉತ್ಸಾಹ. ಯಾರಾಗಲಿ ತನ್ನನ್ನು ಮೆಚ್ಚಬೇಕೆಂಬ ಹಂಬಲ ಇರದು; ಮೆಚ್ಚದಿದ್ದರೆ ನಿರಾಶೆಯೂ ಇರದು. ಮೆಚ್ಚಿದರೇನೋ ಉತ್ಸಾಹ ಹೆಚ್ಚುವುದೆನ್ನಿ.

'ಸ್ವೇ ಸ್ವೇ ಕರ್ಮಣಿ'

ಮಣ್ಣಿನ ಹಣತೆ; ಅದರೊಳಗೆ ಎಣ್ಣೆ: ಅದರೊಳಗೆ ಹತ್ತಿಯ ಬತ್ತಿ; ಬತ್ತಿಯ ಕುಡಿಗೆ ಬೆಂಕಿ ಸೋಕಿದರೆ ದೀಪ ಉರಿಯುತ್ತದೆ.

ಎಣ್ಣೆಗೂ ಬತ್ತಿಗೂ ಬೆಂಕಿಗೂ ಏನು ನಂಟು? ದೀಪದ ಮೇಲೆ ಎಣ್ಣೆಬಿದ್ದರೆ ಬೆಂಕಿ ಆರಿಹೋಗುತ್ತದೆ. ಒಣಗಿದ ಹತ್ತಿಯ ಬತ್ತಿಗೆ ಬೆಂಕಿ ತಾಕಿದರೆ ಬತ್ತಿ ಬುಗ್ಗೆಂದು ಸುಟ್ಟು ಹೋಗುತ್ತದೆ. ಮೂರರ ಸ್ವಭಾವಗಳೂ ತೀರ ಬೇರೆ ಬೇರೆ.

ಆದರೆ ಮೂರೂ ಕೂಡಿದಾಗ ಕೆಲಸ ನಡೆಯುತ್ತದೆ. ದೀಪ ಉರಿಯುತ್ತದೆ.

ಮೂರರಲ್ಲಿ ಯಾವುದಾದರೂ ಒಂದೇ ಇದ್ದರೆ ಕೆಲಸ ನಡೆಯುವುದಿಲ್ಲ; ಮೂರೂ ಒಂದು ಹದದಲ್ಲಿ ಸೇರಿಕೊಳ್ಳಬೇಕು. ನಮ್ಮ ಬದುಕು ಓರಣವಾಗಿ ನಡೆಯ ಬೇಕೆಂದರೂ ಹೀಗೆ ಪರಸ್ಪರ ವಿರುದ್ಧವಾದ ಹಲವು ವಿವರಗಳು ಒಂದು ಹದದಲ್ಲಿ ಕೂಡಿಕೊಳ್ಳಬೇಕು. ವಿವರ ಒಂದೊಂದೇ ಇದ್ದರೆ ಏನೂ ಪ್ರಯೋಜನವಿಲ್ಲ. ಒಂದೇ ಬಗೆಯ ವಿವರಗಳಿದ್ದರೂ ಆಗದು.

ದೇಹ ರಚನೆಯಲ್ಲೂ ಇದೇ ಕ್ರಮ. ಧಾತುಗಳೂ, ರಸಗಳೂ ಬೇರೆ ಬೇರೆಯೆ. ವಾತ, ಪಿತ್ತ, ಕಫ ಮೂರರ ಸ್ವಭಾವ ಪರಸ್ಪರ ವಿಲಕ್ಷಣವಾದುವೇ. ಅವುಗಳ ನಡುವೆ ಎಂದೂ ಹಗರಣವೇ. ಆದರೆ ಈ ಮೂರು ಸೇರದೆ ದೇಹವೂ ಇಲ್ಲ, ದೇಹದ ಕೆಲಸಗಳೂ ನಡೆಯುವುದಿಲ್ಲ. ಇಂದ್ರಿಯಗಳು, ಮನಸ್ಸು ಯಾವುದು ಕೆಲಸ ಮಾಡುವಾಗಲೂ ಈ ಮೂರು ಸೇರಬೇಕು; ಯಾವುದೋ ಒಂದು ಕ್ರಮದಲ್ಲಿ, ಅಳತೆಯಲ್ಲಿ. ಸಮಾಜ ದಲ್ಲಿಯೂ ಹೀಗೆಯೆ, ವೈದ್ಯನಿಗೂ ಶಿಕ್ಷಕನಿಗೂ, ಕಾರಕೂನನಿಗೂ, ಕವಿಗೂ, ಆಡಳಿತ ಗಾರನಿಗೂ, ಇಂಜನಿಯರಿಗೂ, ಪಂಡಿತನಿಗೂ, ಸೈನಿಕನಿಗೂ ಏನು ನಂಟು? ಎಲ್ಲ ವಿಲಕ್ಷಣ ಸ್ವಭಾವದವರು; ಅವರ ಕೆಲಸಗಳೂ ಬೇರೆ ಬೇರೆಯೇ. ಅವರೆಲ್ಲ ಒಟ್ಟು ಸೇರದೆ ಸಮಾಜ ಇರುವುದು ಹೇಗೆ? ಆದರೆ ಅವರವರು ಅವರವರ ಕೆಲಸಗಳನ್ನೇ ಮಾಡುತ್ತಿರಬೇಕು; ಎಲ್ಲರೂ ಒಂದೇ ತೆರನಾಗಿದ್ದರೆ, ಒಂದೇ ಕೆಲಸವನ್ನು ಮಾಡುತ್ತಿದ್ದರೆ ಸಮಾಜ ಸಾಗುವುದಿಲ್ಲ.

ಗೀತೆಯಲ್ಲಿ 'ಸ್ವೇ ಸ್ವೇ ಕರ್ಮಣಿ' ಎಂದು ಹೇಳಿರುವುದು ಇದೇ ಅರ್ಥದಲ್ಲಿಯೇ.

ಕೆಲಸ ಮಾಡುವುದು ಮುಖ್ಯ. ಒಬ್ಬರು ಇನ್ನೊಬ್ಬರ ಕೆಲಸವನ್ನಲ್ಲ; ತಂತಮ್ಮ ಕೆಲಸಗಳನ್ನು ತಾವು ಸರಿಯಾಗಿ ಮನಸ್ಸಾಕ್ಷಿಯಾಗಿ ನಡೆಸುತ್ತಿದ್ದರೆ ಒಟ್ಟಾರೆಯ ವ್ಯವಸ್ಥೆ ಸುಲಭವಾಗುತ್ತದೆ, ಸಮರ್ಪಕವಾಗಿರುತ್ತದೆ.

ಗೋಡೆ-ಚಿತ್ರ

"ಇಂದಿನ ಸಮಾಜದ ಚಿತ್ರವನ್ನು ಅಂದಿನ ಗೋಡೆಗೆ ಅಂಟಿಸುವುದು ತರವಲ್ಲ" ಹೀಗೆ ಸೇಡಿಯಾಪು ಕೃಷ್ಣಭಟ್ಟರು ಒಂದು ಕಡೆ ಬರೆದಿದ್ದಾರೆ.

ಅವರು ಆಡಿದ ಮಾತಿನ ಸಂದರ್ಭ ತಾಳಮದ್ದಲೆಯಲ್ಲಿ ಅರ್ಥಧಾರಿಗಿರಬೇಕಾದ ಔಚಿತ್ಯಜ್ಞಾನ.

ಆದರೆ ಈ ಮಾತು ಬಹುಕಡೆ ಅನ್ವಯಿಸುತ್ತದೆ. ನಮ್ಮಲ್ಲಿ ಬುದ್ಧಿವಂತ ರೆನಿಸಿಕೊಂಡವರು ಹಳೆಯ ಗ್ರಂಥಗಳಿಗೆ ಹೊಸ ದೃಷ್ಟಿಯನ್ನು ಒದಗಿಸುವುದು ಅಗತ್ಯವೆಂದು ಭಾವಿಸುವುದುಂಟು.

ಆಧುನಿಕ ಜ್ಞಾನದ ಎಲ್ಲವಿವರಗಳೂ ನಮ್ಮ ಪ್ರಾಚೀನ ಗ್ರಂಥಗಳಲ್ಲಿದ್ದುವು ಎಂಬ ನಂಬಿಕೆ ಕೆಲವರಲ್ಲಿದೆ; ಅದನ್ನು ಸಾದರಪಡಿಸಲು ಸಾಮಗ್ರಿಗಳನ್ನು ಹುಡುಕುತ್ತಲೆ ಇರುತ್ತಾರೆ. ಜ್ಞಾನದ ಗತಿಯಲ್ಲಿ ಒಂದು ಚಕ್ರಾಕಾರದ ಪರಿಭ್ರಮಣೆಯೇನೋ ಇರಬಹುದು. ಹಿಂದೆ ಎಂದೋ ಪ್ರಸಕ್ತವಾದದು ಮತ್ತೆ ಇಂದೂ ಪ್ರಸಕ್ತವಾದರೆ ಆಶ್ಚರ್ಯವಲ್ಲ. ಆದರೆ ಸಂದರ್ಭಶುದ್ಧಿ, ಯುಗಧರ್ಮ ಎಂಬದೂ ಇದೆಯಷ್ಟೆ. ಇದರ ಹಿನ್ನೆಲೆಯಲ್ಲೇ ನಾವು ಯಾವುದನ್ನೂ ಕಾಣಬೇಕಲ್ಲದೆ ಕಲ್ಪನೆಗಳು ತಮ್ಮಷ್ಟಕ್ಕೆ ತಾವು ಮುಖ್ಯವಾಗಲಾರವು. ಮಹಾಭಾರತದಲ್ಲೋ ಮತ್ತೊಂದು ಅಂಥ ಗ್ರಂಥದಲ್ಲೋ ಚಿತ್ರಿತವಾಗಿರುವ ಸಮಾಜ ಅಂದಿನ ಕಾಲಕ್ಕೆ ಪ್ರಸಕ್ತವಾಗಿದ್ದಿತು; ಅದರ ಮೌಲ್ಯಗಳೇ ಬೇರೆ, ಪ್ರಕಾರಗಳೇ ಬೇರೆ, ತಾತ್ಪರ್ಯವೇ ಬೇರೆ. ನಮ್ಮ ಇಂದಿನ ಸಮಾಜದ ರೀತಿನೀತಿಗಳನ್ನು ಹಿಡಿದು ಆ ಚಿತ್ರಣವನ್ನು ವಿಶ್ಲೇಷಣ ಮಾಡುವುದು ಸರಿಯಾಗದು. ಹಳೆಯ ಗೋಡೆ, ಹೊಸ ಚಿತ್ರ. ಮತ್ತೆ ಇಂದಿನ ಸಮಸ್ಯೆಗಳಿಗೆ ಅಂದಿನ ಪರಿಹಾರವನ್ನರಸುವುದೂ ಸರಿಯಾಗದು. ಹೊಸ ಗೋಡೆ, ಹಳೆಯ ಚಿತ್ರ. ಹಿಂದಿನ ಚಿತ್ರ ಹಿಂದಿನದು; ಇಂದಿನ ಚಿತ್ರ ಇಂದಿಗೆ ಮುಖ್ಯ. ಅದರಲ್ಲಿ ಇದನ್ನು, ಇದರಲ್ಲಿ ಅದನ್ನು ಹಿಡಿದು ತೂಗುವುದೇಕೆ ?

ಇದನ್ನೇ ಔಚಿತ್ಯಜ್ಞಾನವೆನ್ನುವುದು. ಹಳೆಯ ಚಿತ್ರವಾದರೂ ಹೊಸ ಗೋಡೆಗೆ ಹೊಂದಿಕೊಳ್ಳುವಂತಿರಬೇಕು; ವಿಕಾರವಾಗಿ ಕಾಣಬಾರದು. ಈ ತೆರನಾದ ಅರಿವಿಲ್ಲದಿದ್ದರೆ ಅಭಾಸಗಳೇ ಆಗುತ್ತವೆ. ಪ್ರಯೋಜನವಂತೂ ಏನೂ ಇರದು.

ಅಂತೆಗೆ ತಕ್ಕ ಬೊಂತೆ

ನಯಸೇನನ ಧರ್ಮಾಮೃತದಲ್ಲೊಂದು ಸಾಮತಿ-
'ನುಗ್ಗೆಯ ಬನಕ್ಕೆ ಗುಬ್ಬಿ ಕೋಗಿಲೆಯೆಂಬಂತೆ'

ನುಗ್ಗೆಯ ಬನದಲ್ಲಿ ಕೋಗಿಲೆಗೇನು ಕೆಲಸ? ಅದಕ್ಕೆ ಅಲ್ಲಿ ದೊರೆಯು ವುದಾದರೂ ಏನು? ಕೋಗಿಲೆಗೆ ಬೇಕಾದುದು ಮಾವಿನ ತೋಪು. ಮಾವಿನ ಚಿಗುರೆಲೆಯನ್ನು ಮೆದ್ದು ಕೋಗಿಲೆಯ ಕಂಠ ಕುದುರುತ್ತದೆ; ಇಂಪಾಗಿ ಹಾಡಲು ಆಗುತ್ತದೆ. ಪಂಚಮಸ್ವರ ಸರಾಗವಾಗಿ ಹೊರಹೊಮ್ಮುತ್ತದೆ. ಅದು ಬೇರೆ ಮರಗಳ ಬಳಿ ಸುಳಿಯುವುದಿಲ್ಲ. ಆದರೆ ಗುಬ್ಬಚ್ಚಿಗೇನು ಈ ನಿರ್ಬಂಧವಿಲ್ಲ. ಅದಕ್ಕೆ ಯಾವ ಮರವಾದರೂ ಸರಿ, ಎಲ್ಲಿಯಾದರೂ ಅದರ ಆಹಾರ ದೊರೆತೀತು. ಅದೇನು ಹಾಡಬೇಕೆ? ಅದರ ದನಿಯೇನು ಕುದುರಬೇಕೆ? ಅದರ ಚಿಲಿಪಿಲಿಗೆ ಯಾವ ರಸಿಕ ತಾನೆ ಒಲಿದಾನು? ನುಗ್ಗೆಯ ಬನದಲ್ಲಿ ಬೇರೆ ಹಕ್ಕಿಗಳಿಗೆ ಆಕರ್ಷಣೆ ಕಡಮೆ. ಅವು ಅಷ್ಟಾಗಿ ಇಲ್ಲಿಗೆ ಬರುವುದಿಲ್ಲ. ಗುಬ್ಬಚ್ಚಿಯೊಂದು ಬರುತ್ತದೆ. ಅದರ ಚಿಲಿಪಿಲಿಯೇ ಇಲ್ಲಿ ಸಂಗೀತ.

ಈ ಚಿಲಿಪಿಲಿಯಲ್ಲಿ ದಿಟವಾಗಿ ಸಂಗೀತ ಇರಲಾರದು. ಆದರೆ ಕೋಗಿಲೆ ಇದ್ದರೆ ತಾನೆ ಅಂತರ ತಿಳಿಯುವುದು? ಕೋಗಿಲೆಯನ್ನು ಅರಿಯದವರಿಗೆ ಗುಬ್ಬಚ್ಚಿಯ ಕೂಗೇ ಸುಮಧುರವೆನಿಸುವುದು ಸಾಧ್ಯ. ಮನುಷ್ಯರ ನಡುವೆ ನಾಯಕರಾಗಿ ಮಹಾಪುರುಷ ರಿರುತ್ತಾರೆ. ಅವರ ನಡೆನುಡಿಗಳು ಎಲ್ಲರಿಗೂ ಆಕರ್ಷಕವಾಗಿರುತ್ತವೆ. ಅನುಕರಣೀಯ ವಾಗಿರುತ್ತವೆ. ಆದರೆ ಎಲ್ಲ ಸಮಾಜದಲ್ಲೂ ಇಂಥವರು ಇರುವುದಿಲ್ಲ. ಜನರ ಯೋಗ್ಯತೆಯನ್ನುಸರಿಸಿ ಮಹಾಪುರುಷರು. ಜನರ ಯೋಗ್ಯತೆಯ ಮಟ್ಟ ಕೆಳದರ್ಜೆ ಯದಾದರೆ ಅವರ ನಾಯಕರೂ ಅದೇ ದರ್ಜೆಯವರು. ಅಂತೆಗೆ ತಕ್ಕ ಬೊಂತೆ!

ಅಂಥ ಸಮಾಜದಲ್ಲಿ ಇಂಥ ನಾಯಕರಿಗೇ ಹಿರಿಯ ಪಟ್ಟ. ಅವರ ಬಂಡವಾಳ ಅಲ್ಲಿಗೇ ಸರಿ. ಬೇರೆ ಸಮಾಜದಲ್ಲಿ, ಗುಣಮಟ್ಟ ಹೆಚ್ಚಾಗಿ ಇರುವಲ್ಲಿ ಈ ನಾಯಕರ ಬೇಳೆ ಬೇಯದು.

ತನ್ನೂರಿನಲ್ಲಿ ರಂಗ, ಪರವೂರಿನಲ್ಲಿ ಮಂಗ.

ಯಾರು ಹಿತವರು ನಿನಗೆ?

'ನೇಮಿಜಿನೇಶಸಂಗತಿ'ಯೆಂಬ ಹಳೆಯ ಕಾವ್ಯದಲ್ಲೊಂದು ಮಾತು-

'ಅಂತರಂಗದ ಹಗೆ, ಬಹಿರಂಗದ ಹಿತವಂತಿಕೆ'

ಲೋಕಾನುಭವದಿಂದ ಕವಿ ಕಂಡುಕೊಂಡದ್ದು ಇದು. ಸ್ವಾರ್ಥವನ್ನು ಸಾಧಿಸಲು ಹೊರಟವರು ಮನಸ್ಸಿನಲ್ಲಿರುವಂತೆ ಮಾತನಾಡುವುದಿಲ್ಲ; ಅವರು ಮಾತನಾಡಿದಂತೆ ನಡೆಯುವುದಿಲ್ಲ; ಮಾತು, ಮನಸ್ಸು, ಮಾಡುವ ಕೆಲಸ ಬೇರೆ ಬೇರೆ-ಒಂದಕ್ಕೊಂದಕ್ಕೆ ತಾಳೆಯಿರುವುದಿಲ್ಲ.

ಸಮಯಸಾಧಕರದ್ದು ಯಾವಾಗಲೂ ನಗು ಮೊಗ, ಮೆಲು ಮಾತು, ಸವಿ ಸೂಸುವ ನಡವಳಿಕೆ. ಅವರ ಮಾತನ್ನು ಕೇಳಿದರೆ ಎಷ್ಟು ಹಿತಚಿಂತಕರೋ ಎಂಬ ಭ್ರಮೆ ಮೂಡುತ್ತದೆ. ಆದರೆ ಅವರೊಂದಿಗೆ ವ್ಯವಹಾರ ಕುದುರಿದಾಗ ಮೇಲಿನ ಮುಸುಕು ಕಳಚಿಬೀಳುತ್ತದೆ; ಅವರು ತೊಟ್ಟ ಮುಖವಾಡ ದೂರ ಸರಿದು, ದಿಟವಾದ ಮೋರೆ ಕಣ್ಣಿಗೆ ಬೀಳುತ್ತದೆ. ಅಂತರಂಗಕ್ಕೂ ಬಹಿರಂಗಕ್ಕೂ ಇರುವ ಅಂತರದ ಅರಿವಾಗುತ್ತದೆ.

ರಾಜಕಾರಣಿಗಳಲ್ಲಿ ಇದೊಂದು ವಿಶೇಷವಾದ ವರ್ತನೆ. ಒಳಗಿನ ಹಗೆತನ ತೋರಿಸಿಕೊಳ್ಳುವುದಿಲ್ಲ; ತಮಗೆ ಆಗದವರೊಂದಿಗೂ ಆದರದಿಂದಲೇ ನಡೆದುಕೊಳ್ಳು ವಂತೆ ಜನರೆದುರು ಕಾಣಿಸುತ್ತಾರೆ. ಒಂದೇ ವೇದಿಕೆಯಲ್ಲಿ ಸೇರಿ ಒಬ್ಬರನ್ನೊಬ್ಬರು ಹೊಗಳುತ್ತಾರೆ; ಮಿತ್ರರಂತೆ ನಟಿಸುತ್ತಾರೆ; ಆದರೆ ನುಡಿಯಲ್ಲಿ ಜೇನು, ಒಡಲಿನಲ್ಲಿ ವಿಷ ಎಂಬುದನ್ನು ಬಲ್ಲವರೇ ಬಲ್ಲರು.

ಹಗೆಗಳು ಹಗೆಗಳಂತೆಯೇ ಕಾದಾಡಿದರೆ ಮರೆಮಾಚುವುದು ಏನೂ ಇರದು; ಆದರೆ ಒಬ್ಬನಿಗೆ ಇನ್ನೊಬ್ಬ ತನಗಿಂತ ಬಲಿಷ್ಠನೆಂದು ಕಂಡರೆ ಅವನಿಗೆ ಎದುರಾಗಿ ನಿಲ್ಲುವುದು ಹೇಗೆ? ನಿಂತರೆ ತನಗೆ ಉಳಿಗಾಲವಿದೆಯೆ? ಆಗ ಅಡ್ಡದಾರಿ ಹಿಡಿಯು ವುದು ಲೇಸೆನಿಸುತ್ತದೆ. ಕಪಟದಿಂದಲ್ಲದೆ ಬೇರೆ ಸಂವಿಧಾನದದಿಂದ ಗೆಲ್ಲುವುದು ಸಾಧ್ಯವಿಲ್ಲವೆನಿಸುತ್ತದೆ.

ದಿಟವಾಗಿ ಹಿತವೆಂದಾಗ ಸ್ವಾರ್ಥವಿರುವುದಿಲ್ಲ; ಆದರೆ ಅಂತರಂಗದಲ್ಲಿ ಹಗೆತನವಿದ್ದಾಗ ಸ್ವಾರ್ಥವಿಲ್ಲದೆ ಇರುವುದು ಹೇಗೆ ? ತಾನು ಉಳಿಯಬೇಕು, ತನ್ನ ಹಗೆ ಅಳಿಯಬೇಕು ಎಂಬುದೇ ಮೇಲೆದ್ದು ನಿಲ್ಲುವ ಮನೋವೃತ್ತಿ.

ಅದನ್ನು ಮುಚ್ಚಿಡುವ ಅಗತ್ಯ ಕಂಡುಕೊಂಡರೆ ಹಿತವಂತಿಕೆಯ ನಟನೆ ನಡೆಯಬೇಕು !

ಹಗಲು-ರಾತ್ರಿ

ಕನ್ನಡದ ಅತಿರಥಮಹಾರಥರಲ್ಲಿ ಅಗ್ರಪಂಕ್ತಿಗೆ ಸೇರಿರುವ ಮುಳಿಯ ತಿಮ್ಮಪ್ಪಯ್ಯನವರು ತಮ್ಮ ಪದ್ಯವೊಂದರ ಒಂದು ನುಡಿಯನ್ನು ಹೀಗೆ ಮುಗಿಸುತ್ತಾರೆ,

'ಇರುಳುಂ ಪಗಲುಂ ನರಂಗೆ ಸುಖಕರಮಲ್ತೆ?'

ಹೌದು, ಮನುಷ್ಯನಿಗೆ ಇರುಳು-ಹಗಲುಗಳೆರಡೂ ಅಗತ್ಯವೇ. ಹಗಲು ದುಡಿಮೆ, ಇರುಳು ವಿಶ್ರಾಂತಿ ಎಂಬುದು ಪ್ರಕೃತಿನಿಯಮ. ನಮ್ಮ ದೇಹರಚನೆಯಲ್ಲೂ ಇದರ ಪ್ರಭಾವವಿದೆ. ಹಗಲಲ್ಲಿ ಕೆಲಸ ಮಾಡುವ ಕಣ್ಣು ಕತ್ತಲಾದೊಡನೆ ಸೋಲುತ್ತದೆ. ಅಂಗಾಂಗಗಳೆಲ್ಲ ವಿಶ್ರಾಂತಿಗೆ ಸಿದ್ಧಮಾಡಿಕೊಳ್ಳುತ್ತವೆ. ಹಗಲು-ಇರುಳುಗಳು ಪರಸ್ಪರ ಪೂರಕ. ಹಗಲು ಚೆನ್ನಾಗಿ ಕಳೆದೆವೆಂಬುದಕ್ಕೆ ನಿದರ್ಶನವೇ ರಾತ್ರಿಯ ಸುಖನಿದ್ರೆ. ರಾತ್ರಿಯ ನಿದ್ರೆ ಸುಖವಾಗಿದ್ದಿತೆಂದರೆ ಬೆಳಕು ಹರಿಯುತ್ತಲೆ ಉತ್ಸಾಹ ಮೂಡುವುದು. ಇರುಳಿದ್ದರೆ ತಾನೆ ಹಗಲಿನ ಸ್ವಾರಸ್ಯ? ಹಗಲಿನಲ್ಲಿ ಗೆಲುವಿರಲು ಇರುಳು ನೆಮ್ಮದಿ ಯಿಂದ ಕಳೆಯಬೇಕು; ಮತ್ತೆ ಹಗಲಿನ ದುಡಿಮೆಯಿದ್ದರಲ್ಲವೆ ಇರುಳಿನ ನೆಮ್ಮದಿ? ಇದನ್ನರಿಯದ ಗಾವಿಲರು ಇವೆರಡರಲ್ಲಿ ಪಕ್ಷಪಾತ ಎಣಿಸುತ್ತಾರೆ. ಹಗಲೆಂದರೆ ಬೆಳಕು, ಧೈರ್ಯ, ಸುಖ, ಜ್ಞಾನ ಎಂದೂ, ರಾತ್ರಿಯೆಂದರೆ ಕತ್ತಲೆ, ಭೀತಿ, ಕಷ್ಟ, ಅಜ್ಞಾನ ಎಂದೂ ವಿವರಣೆ ನೀಡುತ್ತಾರೆ. ಬೆಳ್ಳಂಬೆಳಕು, ಕಗ್ಗತ್ತಲೆಯೆಂಬ ಪ್ರತಿಮೆಗಳು ಕಾವ್ಯದಲ್ಲೂ ದರ್ಶನದಲ್ಲೂ ಕಾಣಸಿಗುತ್ತವೆ. ಜೀವದ ಕಾರಿರುಳು ಎಂದರೆ ತೊಂದರೆಗಳ ಸರಮಾಲೆ. ಮುಂಜಾನೆಯ ಬೆಳಕೆಂದರೆ ಕಷ್ಟಗಳು ತೊಲಗಿ ಸುಖದ ಸಂದರ್ಭ. ಹೀಗೆ ಇರುಳು-ಹಗಲುಗಳಲ್ಲಿ ಕಾಣುವ ಅಂತರ ಕವಿಕಲ್ಪಿತ ಅಷ್ಟೆ. ಇರುಳಿನಲ್ಲಿನ ನಿದ್ರೆಯ ಸುಖಕ್ಕೆ ಹಗಲಿನ ಯಾವ ಸುಖ ಸರಿಗಟ್ಟಲು ಸಾಧ್ಯ? ಕತ್ತಲಿನ 'ಆಸುರೀಶಕ್ತಿಗಳು' ಕೊಡುವ ಕಾಟವೆಲ್ಲ ಕತ್ತಲೆಯನ್ನು ಹಗಲು ಮಾಡಿಕೊಂಡು ಇನ್ನೂ ಎಚ್ಚರವಾಗಿದ್ದು ದುಡಿಯುತ್ತಿರುವವನ ಪಾಲಿಗೆ, ಅಲ್ಲವೆ? ಮನುಷ್ಯನ ಬದುಕಿನಲ್ಲಿ ದೊಡ್ಡ ಆತಂಕವೆಂದರೆ ಸಹಜವಾಗಿ ಹಗಲು ಮುಗಿದರೂ ಕೃತಕವಾಗಿ ಹಗಲನ್ನು ಮುಂದೂಡಿಕೊಂಡು ಬರುವ ಹಂಬಲ, ಮತ್ತು ಅದಕ್ಕಿರುವ ಸೌಲಭ್ಯ.

ಹಗಲು ಹೆಚ್ಚು, ಇರುಳು ಕಡಮೆ ಎಂಬ ಎಣಿಕೆ ಕಾಲಪ್ರಮಾಣದಿಂದ ಮಾತ್ರ ಅಲ್ಲ; ಮೌಲ್ಯದಲ್ಲಿಯೂ ಅದೇ ಎಣಿಕೆ. ಹಗಲು ಬೇಕಾದುದು. ಇರುಳು ಬೇಡ ವಾದುದು ಎಂಬ ವಿಕಲ್ಪ ಇದಕ್ಕೆ ಆಸರೆ.

ಹೀಗಾದಾಗ 'ಇರುಳಂ ಪಗಲುಂ ಎರಡುಂ ಸುಖಕರಮಾಗದು'.

ಮರುಮಗುತನ

ಧರ್ಮಶಾಸ್ತ್ರಗಳಲ್ಲಿ ಎಲ್ಲ ಕಾಲಕ್ಕೂ ಎಲ್ಲರಿಗೂ ಸಲ್ಲುವ ಕೆಲವು ಮಾತುಗಳಿರುತ್ತವೆ. ಆಯಾ ಕಾಲಕ್ಕೆ ಮಾತ್ರ ಆಯಾ ವರ್ಗದವರಿಗೆ ಮಾತ್ರ ಒಪ್ಪಾಗಬಲ್ಲ ಮಾತುಗಳೇ ಹೆಚ್ಚು ಎನ್ನಿ.

ಎಲ್ಲರಿಗೂ ಎಂದಾದರೂ ಸಲ್ಲುವ ಮಾತುಗಳಲ್ಲಿ ಇದೊಂದು— ವೃದ್ಧರ ಮಾತನ್ನು ಕೇಳತಕ್ಕದ್ದೆಂದು ಶಾಸ್ತ್ರ ಹೇಳುತ್ತದೆ.(ಶ್ರೋತವ್ಯಂ ಖಲು ವೃದ್ಧಾನಾಂ ಇತಿ ಶಾಸ್ತ್ರ ನಿದರ್ಶನಂ) ಆದರೆ ಅತಿವೃದ್ಧರ ಮಾತನ್ನು ಕೇಳತಕ್ಕದ್ದಲ್ಲ; ಏಕೆಂದರೆ ಅವರು ಮತ್ತೆ ಮಕ್ಕಳಂತೆ (ನ ತ್ವೇವಂ ಹ್ಯತಿವೃದ್ಧಾನಾಂ ಪುನರ್ಬಾಲಾ ಹಿ ತೇ ಮತಾ)

ಇಲ್ಲಿ ನಾವು ಗಮನಿಸಬೇಕಾದುದು ಹಿರಿಯರಿಗೂ ಮುದುಕರಿಗೂ ಮಾಡಿರುವ ವ್ಯತ್ಯಾಸ. ಹಿರಿಯರೆಂದರೆ ಅನುಭವುಳ್ಳವರು, ಲೋಕದ ಪರಿಚಯವನ್ನು ಪಡೆದುಕೊಂಡವರು; ದ್ವೇಷಾಸೂಯೆಗಳಿಂದ ಮೇಲೆ ನಿಂತವರು; ರಾಗ, ಕಾಮ, ಲೋಭ ಮುಂತಾದುವುಗಳ ಹಿಡಿತದಿಂದ ಪಾರಾದವರು.

ಬೆಟ್ಟದ ಮೇಲೆ ನಿಂತು ಕೆಳಗಿನ ಊರನ್ನು ಕಾಣುವಂತೆ ಅವರ ದೃಷ್ಟಿಯಲ್ಲಿ ಹರವಿರುತ್ತದೆ. ಸ್ವಾರ್ಥವಿಲ್ಲದುದರಿಂದ ಅವರ ಮಾತಿಗೆ ಬೆಲೆಯೂ ಇರುತ್ತದೆ. ಅಂಥವರ ಮಾತನ್ನು ಕೇಳುವುದು ಸರಿಯೇ.

ಮುದುಕರೆಂದರೆ ವಯಸ್ಸಾದವರು. ಅಷ್ಟೇ ಅವರ ಹಿರಿತನ. ಆದರೆ ವಯಸ್ಸಾದ ಮಾತ್ರಕ್ಕೆ ಅನುಭವ ಒದಗಿತೆಂದಾಗಲಿ, ಬುದ್ಧಿ ಬಲಿಯಿತೆಂದಾಗಲಿ ಏನು ನೆಚ್ಚಿಗೆ?

ವಯಸ್ಸಾಗುತ್ತ ಆಗುತ್ತ ಇಂದ್ರಿಯಪಾಟವ ಕಡಮೆಯಾದಂತೆ ವಿವೇಕವೂ ಕುಗ್ಗುವುದು ವಿರಳವೇನಲ್ಲ; ಕೀಳರಿಮೆಯೂ ತಲೆ ಹಾಕುತ್ತದೆ. ಅವರ ಕಿರಿಕಿರಿ ಹೆಚ್ಚುತ್ತದೆ.

ಇಂಥವರ ಮಾತನ್ನು ಕೇಳುವುದು ಹೇಗೆ? 'ಎರಡನೆಯ ಶೈಶವ' ಎಂಬ ವರ್ಣನೆ ಇವರನ್ನು ಕುರಿತದ್ದೇ.

ಮಕ್ಕಳು ಬೆಳೆದು ಬಗೆಗಾಣದೆ ಮಕ್ಕಳಾಗಿಯೆ ಉಳಿಯುವುದೂ ಉಂಟು; ಬೆಳೆದು ದೊಡ್ಡವರಾದ ಮೇಲೆ ಬೇರೆ ದಾರಿ ಕಾಣದೆ ಮತ್ತೆ ಮಕ್ಕಳೇ ಆಗುವುದೂ ಉಂಟು.

ತಾನು-ಲೋಕ

"ತಾನುಂಟೊ ಮೂರು ಲೋಕವುಂಟೊ?' ಎಂಬುದೊಂದು ಮಾತಿದೆ.

ತಾನಿದ್ದರೆ, ಉಳಿದೆಲ್ಲ ಇದ್ದುದಕ್ಕೆ ಸಾರ್ಥಕ. ತಾನೇ ಇರದಿದ್ದರೆ, ಇನ್ನು ಏನಿದ್ದರೆ ತಾನೆ ಏನು? ಎಂದು ಈ ಮಾತಿನ ಒಕ್ಕಣೆ. ಅದು ದಿಟವೆ. ತಾನಿರುವವರೆಗೆ ಸುತ್ತಮುತ್ತ ಇದ್ದವರು ತನಗೆ ಹಿತವಾಗಿರಬೇಕು. ತನ್ನ ಪರಿಸರವೆಲ್ಲ ತನಗೆ ಅನುಕೂಲವಾಗಿರಬೇಕು ಎಂಬ ಬಯಕೆಯಿರುವುದು ಸಹಜವೇ, ನ್ಯಾಯವೆ. ತಾನು ಸತ್ತ ಮೇಲೆ ಪ್ರಪಂಚ ಹೇಗಿದ್ದರೇನು? ಬದುಕಿರುವವರ ಪಾಡು ಅದು; ಸತ್ತವರಿಗೇಕೆ ಅದರ ಚಿಂತೆ? ಕಂತೆ ಒಗೆದ ಮೇಲೆ ಅದರ ಹಂಗೂ ತೀರಿತು! ತಾನೇ ಎಲ್ಲರಿಗೂ ಎಲ್ಲ ಕಾಲಕ್ಕೂ ಹೊಣೆಯೆಂಬುದು ಕೆಲವರಿಗೆ ಇರುವ ಭ್ರಾಂತಿ. ಇದರಿಂದಾಗಿ ಹಣ ಗಳಿಸುವುದೊ ಮತ್ತೊಂದು ಸಾಧನೆಯೊ ತಮಗೆ ಮಾತ್ರ, ತಮ್ಮವರಿಗೆ ಮಾತ್ರ ಎಂದಲ್ಲದೆ, ಹಲವು ಕಾಲ ಉಳಿಯುವಂತಾಗಬೇಕು ಎಂಬ ಭ್ರಮೆಯೂ ಅಂಟಿಕೊಳ್ಳುತ್ತದೆ. ಇದಾಗಲಿ ತಪ್ಪೆನ್ನುವಂತಿಲ್ಲ. ತಾನು ಮಾಡುವುದೆಲ್ಲ ತನಗಾಗಿಯೆ, ತನ್ನವರಿಗಾಗಿಯೆ ಎನ್ನುವ ಸ್ವಾರ್ಥಬುದ್ಧಿಯನ್ನು ಯಾರು ತಾನೆ ಒಪ್ಪಿಯಾರು? ತಾನೂ ಇರಬೇಕು. ಇತರರು ಯಾರೂ ಇರದೆ ತಾನೊಬ್ಬ ಇರಲು ಸಾಧ್ಯವೆ? ಎಂಬ ಕಲ್ಪನೆಯಿದೆ. ಇತರರೂ ಇರಬೇಕು ಎಂಬುದಲ್ಲವೆ ಪ್ರಕೃತಿನಿಯಮ? ಆದರೆ ಪರೋಪಕಾರ ಭಾವನೆಯನ್ನು ತನ್ನವರಿಗೆ ಮಾತ್ರ ಮೊಟಕುಮಾಡಿಕೊಂಡರೆ ಅದೂ ಸ್ವಾರ್ಥವೆ. ಲೋಕಕ್ಕೆಲ್ಲ ಹಿತವಾಗಲಿ ಎಂಬ ಉದ್ದೇಶದಿಂದ ದುಡಿಯುವಾಗ ಅದರ ಸ್ವಾರಸ್ಯ ಬೇರೆ. ಲೋಕವಿದ್ದರೆ ತಾನಿದ್ದಂತೆ. ಇತರರು ಯಾರೂ ಇರದೆ ತಾನೊಬ್ಬ ಇರಲು ಸಾಧ್ಯವೆ? ಎಂಬ ಕಲ್ಪನೆಯಿದೆ. ಇತರರು ಬಿಟ್ಟುಹೋಗಿರುವ ಸಾಮಗ್ರಿಯನ್ನಲ್ಲವೆ ನಾವು ಬಳಸುತ್ತಿರುವುದು? ಕಲೆಯಾಗಲಿ, ಭಾಷೆಯಾಗಲಿ, ಬಾಳುವೆಯ ಪರಿಕರ ಯಾವುದೆ ಆಗಲಿ, ಬೇರೆಯವರು, ಹಿಂದಿನವರು, ತಾವು ಮರೆಯಾದರೂ ಉಳಿಯಬಲ್ಲ ವಿವರಗಳನ್ನು ನಮ್ಮ ಸಲುವಾಗಿ ಬಿಟ್ಟುಹೋಗಿದ್ದಾರೆ.

ತಾನಿದ್ದರೆ ಮೂರು ಲೋಕ ಎನ್ನುವಷ್ಟೆ ದಿಟವಾದ ಮಾತು ಮೂರು ಲೋಕವಿದ್ದರೇ ತಾನು ಎಂಬುದು. ತನಗೂ ಲೋಕಕ್ಕೂ ತೀರದ ಒಂದು ನಂಟಿದೆ ಎಂದು ಕಂಡುಕೊಂಡ ಯಾರಾಗಲಿ ತನ್ನ ಪಾಡಿಗೆ ತಾನು, ಲೋಕದ ಗೊಡವೆ ತನಗೇಕೆ ಎಂದು ಬಾಳಲಾರ. ಸ್ವಾರ್ಥದ ಪಿಶಾಚ ಅವನನ್ನು ಮೆಟ್ಟುವುದಿಲ್ಲ.

ಮತ್ತೆ ತನ್ನಿಂದಲೇ ಲೋಕ, ಎಲ್ಲರ ಹಿತವೂ ತನ್ನ ಹೊಣೆಯೆ ಎಂಬ ಭೂತವೂ ಅವನ ಬೆನ್ನೇರುವುದಿಲ್ಲ, ಅವನನ್ನು ಕಾಡುವುದಿಲ್ಲ.

ಮೂರು-ಎರಡು-ಒಂದು

ಒಂದು ಒಗಟು-ಮೂರು ದಾರಿ ಯಾರಿಗೆ? ಎರಡು ದಾರಿ ಯಾರಿಗೆ? ಒಂದೇ ದಾರಿ ಯಾರಿಗೆ?

ಅದಕ್ಕುತ್ತರ— ಸಜ್ಜನನಿಗೂ ಸಜ್ಜನನಿಗೂ ಮೂರು ದಾರಿ, ಸಜ್ಜನನಿಗೂ ದುರ್ಜನನಿಗೂ ಎರಡು ದಾರಿ, ದುರ್ಜನನಿಗೂ ದುರ್ಜನನಿಗೂ ಒಂದೇ ದಾರಿ.

ಒಬ್ಬ ಒಳ್ಳೆಯವನು ಇನ್ನೊಬ್ಬ ಒಳ್ಳೆಯವನನ್ನು ಕೂಡಿಕೊಂಡಾಗ ಅವರಿಗೆ ಮೂರು ದಾರಿಗಳು ಹೇಗೆಂದರೆ- ಒಬ್ಬೊಬ್ಬನದ್ದೂ ತನ್ನದೇ ಆದ ಒಳ್ಳೆಯ ದಾರಿಗಳು ಎರಡು; ಅವರಿಬ್ಬರೂ ಕೂಡಿ ನಡೆಯುವುದಿನ್ನೊಂದು ದಾರಿ, ಒಟ್ಟು ಮೂರು.

ಒಳ್ಳೆಯವನು ತನ್ನ ದಾರಿ ಬಿಡಲಾರ; ಇನ್ನೊಂದು ಒಳ್ಳೆಯ ದಾರಿ ಎಂದು ಕಂಡುಕೊಂಡಾಗ ತನ್ನದನ್ನು ಬಿಡದೆ ಅದನ್ನೂ ಹಿಡಿದಾನು. ಇಲ್ಲವೆ ಇಬ್ಬರು ಒಳ್ಳೆಯವರು ಇದ್ದಾಗ ಅವನು ಇವನ ದಾರಿಯನ್ನು ಹಿಡಿದಾನು, ಇವನು ಅವನ ದಾರಿಯನ್ನು ಹಿಡಿದಾನು. ಇಬ್ಬರೂ ಕೂಡಿದಾಗ ಇನ್ನೊಂದು ಒಳ್ಳೆಯ ದಾರಿಯನ್ನೇ ಹುಡುಕಿಕೊಂಡಾರು.

ಒಳ್ಳೆಯವನೊಬ್ಬ ಕೆಟ್ಟವನ್ನೊಬ್ಬನನ್ನು ಸೇರಿದನೆನ್ನಿ. ಒಳ್ಳೆಯವನು ತನ್ನ ದಾರಿ ಬಿಡುವುದಿಲ್ಲ; ಕೆಟ್ಟ ದಾರಿ ಹಿಡಿಯುವುದಿಲ್ಲ. ಕೆಟ್ಟವನೂ ತನ್ನ ದಾರಿ ಬಿಡುವುದಿಲ್ಲ; ಒಳ್ಳೆಯ ದಾರಿ ಹಿಡಿಯುವುದಿಲ್ಲ. ಅವರವರ ದಾರಿ ಅವರವರಿಗೆ. ಹೀಗೆ ಅವರಿಬ್ಬರೂ ಎರಡು ಬೇರೆ ಬೇರೆ ದಾರಿಗಳನ್ನು ಹಿಡಿಯುತ್ತಾರೆ.

ಕೆಟ್ಟವನೊಬ್ಬ ಕೆಟ್ಟವನಿನ್ನೊಬ್ಬನನ್ನು ಸೇರಿದರೆ, ಇಬ್ಬರ ದಾರಿಗಳೂ ಕೂಡಿ ಕೊಳ್ಳುತ್ತವೆ; ಒಂದೇ ದಾರಿಯಾಗುತ್ತದೆ. ಒಳ್ಳೆಯತನ, ಕೆಟ್ಟತನ ಸ್ವರೂಪದಲ್ಲೂ ಸ್ವಭಾವದಲ್ಲೂ ಫಲದಲ್ಲೂ ಬೇರೆ ಬೇರೆಯಾದವು. ಅವೆರಡೂ ಕಲೆಯುವ ಸಂಭವವೇ ಇಲ್ಲ. ಒಳ್ಳೆಯವನು ಕೆಟ್ಟವನಾದಾನು; ಕೆಟ್ಟವನೂ ಒಳ್ಳೆಯವನಾದಾನು, ದಿಟ. ಆದರೆ ಇಬ್ಬರದ್ದೂ ಒಂದೇ ದಾರಿಯಾಗುವುದಿಲ್ಲ. ಕೆಟ್ಟವನು ಒಳ್ಳೆಯವನಾದಾಗ ಒಳ್ಳೆಯ ದಾರಿಯನ್ನೆ ಹಿಡಿಯುತ್ತಾನೆ. ಒಳ್ಳೆಯವನು ಕೆಟ್ಟವನಾದಾಗ ಕೆಟ್ಟ ದಾರಿ ಹಿಡಿಯುತ್ತಾನೆ. ಅವರಿಬ್ಬರಿಗೆ ಹೇಗೂ ಎರಡು ದಾರಿಗಳೆ, ಅವೆರಡೂ ಒಂದಾಗುವುದು ಸಾಧ್ಯವಿಲ್ಲ.

ಸೇರಿದವರಿಬ್ಬರೂ ಕೆಟ್ಟವರೇ ಆದರೆ, ಅವರ ದಾರಿಗಳು ಸೇರಬಾರದೆಂಬ ಹಟವೇನಿರುವುದಿಲ್ಲ. ಇಬ್ಬರ ದಾರಿಗಳೂ ಅಷ್ಟಿಷ್ಟು ನೇವರಿಸಿಕೊಂಡರೆ ಒಂದೇ ಆಗಬಲ್ಲುವು.

ತೃಪ್ತಿ-ಸಂತೋಷ

'ತೃಪ್ತಿಯಾಯಿತು', 'ಸಂತೋಷವಾಯಿತು' ಎಂಬ ಎರಡು ಮಾತುಗಳನ್ನು ಬಳಸುವಾಗ ಬೇರೆ ಬೇರೆ ಸಂದರ್ಭಗಳು.

ಸಂತೋಷವೆನ್ನುವುದು ಅನುಭವ. ಮೈಗೋ ಮನಸ್ಸಿಗೋ ಹಿತವಾದುದು ಒದಗಿದಾಗ ಸಂತೋಷವೆನಿಸುತ್ತದೆ. ಅವರೆಗೆ ಇಲ್ಲದ್ದು, ಆಗ ಬಂದದ್ದು, ಸಂತೋಷದ ಸಂದರ್ಭ.

ತೃಪ್ತಿಯೆನ್ನುವುದು ಅನುಭವವಲ್ಲ, ಮನೋಧರ್ಮ. ಇದ್ದದ್ದು ಸಾಕು, ಇನ್ನು ಹೆಚ್ಚೇನೂ ಬೇಡ ಎನ್ನುವುದು ತೃಪ್ತಿ. ತೃಪ್ತಿಯಲ್ಲಿ ಬಯಕೆಯ ಪಾತ್ರವಿರದು; ಸಂತೋಷದಲ್ಲಿಯಾದರೋ ಬಯಸಿದುದೇ ಬಂದ ಅನುಭವ, ಆದರೆ ಬಂದಷ್ಟು ಸಾಕು ಎನ್ನುವ ಮನೋಧರ್ಮ ಈ ಅನುಭವದಲ್ಲಿರದು. ತೃಪ್ತಿಗೆ ಇನ್ನೊಂದು ಮಾತು ಅಲಂಭಾವ; ' ಸಾಕು' ಎನ್ನುವ ನೆಲೆ. ಇದೇನು ವಿರಕ್ತಿಯಲ್ಲ, ಔದಾಸೀನ್ಯವಲ್ಲ, ಬೇಕು- ಸಾಕುಗಳ ನಡುವೆ ಹದವರಿತ ಹೊಂದಾಣಿಕೆ. ಊಟ ಮಾಡುವಾಗ ಹೊಟ್ಟೆ ಬಿರಿಯ ತಿನ್ನುವುದೊಂದು ಬಗೆ; ಹಸಿವು ಇಂಗಿದೊಡನೆ ಸಾಕೆನ್ನುವುದು ಇನ್ನೊಂದು ಬಗೆ. ತೃಪ್ತಿಯಲ್ಲಿ ಸಂತೋಷವಿಲ್ಲದೆ ಇಲ್ಲ, ಊಟದ ನಿದರ್ಶನವನ್ನೆ ಎತ್ತಿಕೊಂಡರೆ, ಉಂಡಮೇಲೂ ಹೊಟ್ಟೆ ಭಾರವಾಗದೆ, ಮೈ ಹಗುರಾಗಿದ್ದು ಅಡ್ಡಾಡುವ ಉತ್ಸಾಹ ವಿದ್ದರೆ ಅದು ಸಂತೋಷದ ಅನುಭವವೇ.

ಆದರೆ ಸಂತೋಷದಲ್ಲಿ ತೃಪ್ತಿ ಇದ್ದೀತೆಂಬ ನೆಚ್ಚಿಕೆಯಿರದು; ಇಲ್ಲದಿರುವುದೇ ಸಾಮಾನ್ಯ ಎಂದರೂ ನಡೆದೀತು. ಯಾವುದಾದರೂ ಸಂತೋಷವನ್ನು ಅನುಭವಿಸು ತ್ತಿರುವಾಗ 'ಇಷ್ಟು ಸಾಕು' ಎನ್ನುವ ಬುದ್ಧಿ ಬರುವುದು ಕಷ್ಟ. ಬೇಕುಬೇಕೆಂಬ ಭಾವನೆಯೇ ಬೇರೂರಿಕೊಳ್ಳುತ್ತದೆ.

ಸಂತೋಷಕ್ಕೆ ಇರುವ ಆಕರ್ಷಣೆ ತೃಪ್ತಿಗೆ ಇಲ್ಲ. ಸಂತೋಷಕ್ಕೆ ತವಕಪಡುವಂತೆ ತೃಪ್ತಿಯಲ್ಲಿ ನೆಲೆಗಾಣುವವರ ಸಂಖ್ಯೆ ಕಡಮೆ. ತೃಪ್ತಿಯ ಸ್ವಾರಸ್ಯವನ್ನು ಕಂಡುಕೊಳ್ಳ ಬೇಕೆಂದರೆ ವಿವೇಕ ಇರಬೇಕಲ್ಲವೆ? ಸಂತೋಷವೂ ಮಿತಿಮೀರಿದರೆ ತೊಂದರೆ ಯಾದೀತು, ಎನ್ನುವ ಎಚ್ಚರಿಕೆ ಎಷ್ಟು ಮಂದಿಗೆ ಇರುತ್ತದೆ?

ಹಿರಿಯರ ನೆನಪು

ಕಾಲದ ಚಕ್ರ ಉರುಳುವಾಗ ಮುಂದೆ ಮುಂದೆ ಸಾಗುವುದು ಸಹಜವಲ್ಲವೆ? ಹಿಂದಕ್ಕೆ ಸರಿಯುವುದುಂಟೆ?ಗಾಲಿಯ ಗುರುತುಗಳು ಹಿಂದೆ ಉಳಿಯುವುದೇನೋ ಸರಿ; ಚಕ್ರ ಮುಂದೆ ಬಂದುದಕ್ಕೆ ಇನ್ನೇನು ಪುರಾವೆಯಿದ್ದೀತು? ಆದರೆ ಗಾಲಿಯು ತಿರುಗುವಾಗ ನೆಲದ ಮೇಲೆ ಮೂಡಿಕೊಂಡ ಗೆರೆಗಳು ಗೀರುಗಳು ಎಲ್ಲವೂ ಅಚ್ಚಳಿಯದೆ ನಿಲ್ಲುವಂತಾದರೆ ನೆಲಕ್ಕೆ ತುಂಬ ಗಾಸಿಯಾದೀತು; ನೆಲದ ಚೆಲುವೂ ಇಲ್ಲವಾದೀತು, ಹಳೆಯದು ಮಾಸಬೇಕು; ಹೊಸದು ಮೂಡಬೇಕು.

ಇದು ನಿಸರ್ಗದ ಕ್ರಮವೇ ಹೌದು. ಹಿಂದಿದ್ದವರ ಜಾಡು ಮರೆಯಾಗುತ್ತದೆ; ಇಂದಿನವರು ತಮ್ಮ ಜಾಡನ್ನು ಮೂಡಿಸುವುದರಲ್ಲಿ ತೊಡಗುತ್ತಾರೆ. ಮುಂದೆ ಇವರ ಜಾಡೂ ಮರೆಯಾದೀತೆಂಬ ತಿಳಿವಳಿಕೆ ಇರಬೇಕಷ್ಟೆ! ಹಿಂದದ್ದವರ ಹೆಜ್ಜೆ ಗುರುತುಗಳು ಮಾಸದೆ ಇಂದಿನವರ ಹೆಜ್ಜೆ ಗುರುತುಗಳಿಗೆ ಆಸ್ಪದವೆಲ್ಲಿ? ಇಂದಿನವರು ಇಂದು ಮುಂದಿರುವುದು ದಿಟ; ಮುಂದೆ ಇವರೇ ಹಿಂದುಳಿಯುವವರು ಎಂಬುದೂ ದಿಟವಲ್ಲವೆ?

ಇವೆಲ್ಲ ದಿಟವೇ. ಆದರೆ ಹಿಂದಿನ ಎಲ್ಲವೂ ಮರೆಯಾಗಿಬಿಟ್ಟರೆ ಇಂದಿನದೇನು ಇದ್ದೀತು? ಹಿಂದಿಲ್ಲದೆ ಇಂದು ಎಂಬುದಿದೆಯೆ ? ಇಂದಿಲ್ಲದೆ ಮುಂದು ಹೇಗೆ ಇರದೋ ಹಾಗೆ. ಇಂದಿನವರು ಮುಂದಿರುವುದಾದರೂ ಹಿಂದಿನವರ ಬೆನ್ನೇರಿಯೇ ಅಲ್ಲವೆ? ಹಿಂದಿನಿವರಿಗಿರದಿದ್ದ ಸೌಕರ್ಯ, ಸೌಲಭ್ಯಗಳು ಇಂದಿನವರಿಗಿದೆ; ಇದರಿಂದಲೆ ಮುಂದುವರಿಯುವುದು ಸಾಧ್ಯವಾಗಿರುವುದು. ಈ ಸೌಕರ್ಯ-ಸೌಲಭ್ಯಗಳಾದರೂ ನಮಗೆ ಆಗಸದಿಂದ ಕೆಳಗೆ ಬೀಳಲಿಲ್ಲ. ಹಿಂದಿನವರ ಶ್ರಮದ ಫಲವಾಗಿಯೇ ಇಂದು ನಮಗೆ ಲಭಿಸಿವೆ. ಹಿರಿಯರ ಹೆಜ್ಜೆ ಗುರುತುಗಳನ್ನು ಕಂಡುಕೊಳ್ಳದೆ ಇಂದಿನವರು ಹಿರಿಯರಾಗುವ ಸಾಧ್ಯತೆ ಕಡಮೆ. ಅವರ ಅನುಭವ, ಅವರಿಗಾದ ಒಳಿತು-ಕೆಡಕುಗಳು, ಅವರ ಶ್ರಮ, ಅವರ ದುಗುಡ ಎಲ್ಲವೂ ನಮಗೆ ದಾರಿದೀಪ ಗಳಾಗಬೇಕು. ಅವರು ನಡೆದಂತೆಯೇ ನಡೆಯುವುದು ಸಾಧ್ಯವಿಲ್ಲವಾದರೂ, ವಿಧಿ-ನಿಷೇಧಗಳ ಸೂಚನೆಯಂತೂ ಸಿಗುತ್ತದೆ. ಹಿಂದಿನವರನ್ನು ನೆನೆದುಕೊಳ್ಳುವಾಗ ಎಷ್ಟು ಯುಕ್ತವೋ, ಎಷ್ಟು ಪ್ರಸಕ್ತವೋ, ಎಷ್ಟು ಪ್ರಯೊಜಕವೋ ಅಷ್ಟಿದ್ದರೆ ಸಾಕು.

ಲೋಕದ ಒಳಿತಿಗಾಗಿ ದುಡಿದ ಮಹನೀಯರ ನೆನಪು ಮಾರ್ಗದರ್ಶಕವಾದೀತು; ಅಂಥ ನೆನಪನ್ನು ಉಳಿಸಿಕೊಳ್ಳುವವರೂ ಧನ್ಯರು, ಉಳಿಯುವಂತೆ ಮಾಡವವರೂ ಧನ್ಯರು.

ಕಾಲ ಕೆಟ್ಟಿತೆ?

ಸ್ವಲ್ಪ ವಯಸ್ಸಾಯಿತೆಂದರೆ ಯಾರಾಗಲಿ 'ಕಾಲ ಕೆಟ್ಟಿತು', ' ಮೊದಲಿನಂತೆ ಈಗಿಲ್ಲ'ಎಂದು ಹೇಳುವುದನ್ನು ಕೇಳುತ್ತೇವೆ.

ಕಾಲ ಕೆಡುವುದೆಂದರೆ ಮನುಷ್ಯರು ಕೆಟ್ಟರೆಂದೇ ಅರ್ಥ. ಮೊದಲಿಗೆ ಒಳ್ಳೆಯವರು ಇರುತ್ತಿದ್ದರು; ಈಗೀಗ ಅವರ ಸಂಖ್ಯೆ ಕಡಮೆಯಾಗುತ್ತ ಬಂದಿದೆ. ಜಗಳ, ದರೋಡೆ, ಮೋಸ, ವ್ಯಭಿಚಾರ-ಮೊದಲಾದುವೆಲ್ಲ ಹೆಚ್ಚುತ್ತಿವೆ. ಇದು ಕಾಲ ಕೆಡುತ್ತಿರುವುದಕ್ಕೆ ಸಾಕ್ಷಿ ಎಂದು ಇಂಗಿತ. ಆದರೆ ಎಂದಿನಿಂದ ಕಾಲ ಕೆಡುತ್ತಬಂದಿತು, ಹೇಳಬಲ್ಲಿರಾ? ಎಂದು ಕೇಳಿದರೆ ಉತ್ತರ ಬರುವುದು ಕಷ್ಟ. ಇಂದು ನಮ್ಮ ಹಿರಿಯರು ಕಾಲ ಕೆಡುತ್ತಿರುವುದನ್ನು ಅರಿತುಕೊಂಡಿದ್ದಾರೆ, ಅವರ ಹಿರಿಯರು ತಮ್ಮ ಕಾಲದಲ್ಲೂ ಇದನ್ನು ಅರಿತುಕೊಂಡಿದ್ದರು. ಇದೇ ಮಾತನ್ನು ಹೇಳುತ್ತಿದ್ದರು. ಕಿರಿಯರು ಹಿರಿಯ ರಾದೊಡನೆ ಕಾಲ ಕೆಟ್ಟುಹೋಗುತ್ತದೆ ಎಂದಾಯಿತು. ಹಿರಿಯರು ಕಿರಿಯರಾಗುವ ಸಾಧ್ಯತೆ ಇಲ್ಲವಾಗಿ, ಕೆಟ್ಟುಹೋದ ಕಾಲ ಮತ್ತೆ ಸರಿಯಾಗುವ ಸಂಭವವೇ ಇಲ್ಲ, ಕಾಲ ಕೆಡುತ್ತಲೇ ಹೋಗುತ್ತದೆ! ಇದು ದಿಟವಾಗಿ ನಡೆಯುವುದೆಂದು ಭಾವಿಸಬಾರದು. ಈಗ ಕೆಟ್ಟ ಜನರಿರುವಂತೆ ಎಲ್ಲ ಕಾಲದಲ್ಲೂ ಇದ್ದರು. ಈಗ ನಡೆಯುತ್ತಿರುವಂತೆಯೆ ಎಲ್ಲ ಕಾಲದಲ್ಲೂ ಜಗಳ, ಮೋಸ, ಕಳ್ಳತನ, ಸುಳ್ಳು- ಮೊದಲಾದುವೆಲ್ಲ ನಡೆಯುತ್ತಿದ್ದುವು. ಮಹಾಭಾರತದ ಕಾಲವನ್ನೇ ನೋಡಿ; ಪುರಾಣಗಳಲ್ಲಿನ ಕತೆಗಳನ್ನು ಕೇಳಿ; ಸ್ವರ್ಗದ ದೇವತೆಗಳೂ ಅಪ್ಸರೆಯರೂ ನಮ್ಮ ಋಷಿಗಳೂ ಏನೇನು ಮಾಡಿದ ರೆಂಬುದನ್ನು ಓದಿ, ಅನಂತರ ನಮ್ಮ ಕಾಲ ದಿಟವಾಗಿ ಕೆಟ್ಟಿದೆಯೆ ಎಂದು ವಿಚಾರ ಮಾಡಿ! ಮೀಮಾಂಸಕರ ನಂಬಿಕೆಗಳಲ್ಲೊಂದು ಈಗಿರುವಂತೆಯೇ ಜಗತ್ತು ಯಾವಾಗಲೂ ಇದ್ದಿತು (ನ ಹಿ ಕದಾಚಿದನೀದೃಶಂ ಜಗತ್). ಎಂದಾಗಲಿ ಜಗತ್ತು ಬೇರೆಯಾಗಿದ್ದಿತು, ಈಗಿಗಿಂತ ಉತ್ತಮವಾಗಿದ್ದಿತು ಎನ್ನುವುದು ಭ್ರಮೆ ಅಷ್ಟೆ. ಕವಿಗಳೂ ಭಾವುಕರೂ ಗತಕಾಲದ ಒಂದಾನೊಂದು ಸ್ವರ್ಣಯುಗವನ್ನು ಕಲ್ಪಿಸಿಕೊಳ್ಳುತ್ತಾರೆ. ಆ ಕಾಲದಲ್ಲಿ ಅದೇನು ಸ್ವರ್ಣವಾಗಿರಲಿಲ್ಲ. ಅದರ ಕಾಲ ಮುಗಿದ ಮೇಲೆ ಈಗ ಸ್ವರ್ಣ, ಅಷ್ಟೆ!

ಆ ಕಾಲದಲ್ಲಿಯೂ ಗತಕಾಲದ ಮತ್ತೊಂದು ಸ್ವರ್ಣಯುಗದ ಕಲ್ಪನೆ ಇದ್ದಿತೋ ಏನೋ? ಕೈಗೆ ಎಟುಕಲಾರದ ಜಿಂಕೆ ಬಂಗಾರದ್ದೇ; ರಾಮ ಅದನ್ನು ಅರಸಿದ್ದೂ ಅರಸಿದ್ದೇ; ದೊರೆತಾಗ ಮಾತ್ರ ಅದು ರಾಕ್ಷಸ!

ಬದುಕು-ಸಾವು

ಗ್ರೀಸ್ ದೇಶದ ದಾರ್ಶನಿಕರಲ್ಲಿ ಎಪಿಕ್ಯೂರಸ್ ಎಂಬುವನೊಬ್ಬ; ಅವನ ಪ್ರಸಿದ್ಧಿಯಿರುವುದು ಬದುಕುವುದರ ಸ್ವಾರಸ್ಯವನ್ನು ತಿಳಿಯಹೇಳಿದನೆಂಬುದರಿಂದ.

ಬದುಕೆಂಬುದು ಸಂತೋಷವಾಗಿರಲೆಂದೇ ಸಿದ್ಧವಾದುದು ಎಂದವನ ವಾದ. ಏನಾದರಾಗಲಿ, ಎಲ್ಲಾದರಿರಲಿ ಸುಖವಾಗಿ ಇರಬೇಕು, ಬದುಕಿಗೂ ಸುಖಕ್ಕೂ ಒಂದು ತೀರದ ನಂಟಿದೆ. ಅವನದ್ದೊಂದು ಅನಿಸಿಕೆ ಸಾವನ್ನು ಕುರಿತದ್ದು. ಜನ ಸಾವಿಗೆ ಅಂಜುವರೇಕೆ? ಅದು ಎಂದೋ ಬರುವುದಲ್ಲವೆ? ಬದುಕಿದ್ದಾಗ ಸಾವೆಂಬುದಿಲ್ಲ; ಸತ್ತಮೇಲೆ ಬದುಕೆಂಬುದಿರದು. ನಾವಿರುವಾಗ ಬದುಕೇ; ಸಾವು ಬಂದ ಮೇಲೆ ನಾವೆಲ್ಲಿರುತ್ತೇವೆ? ಕಳವಳವೇಕೆ? ಆಲೋಚಿಸಿದಾಗ ಇದು ದಿಟವೆನಿಸುವುದು. ನಮಗೆ ಬದುಕಿನ ಮೇಲೆ ಎಲ್ಲಿಲ್ಲದ ಅಭಿಮಾನ ಬಂದುಬಿಡುತ್ತದೆ. ನೂರಾರು ವರ್ಷಗಳಿಂದ ಬದುಕಿಯೇ ಇದ್ದೇವೆಯೆ? ಇತ್ತೀಚೆಗಷ್ಟೆ ನಮ್ಮ ಬದುಕು ಮೊದಲಾಯಿತು. ಆಗಲೆ ಅಷ್ಟು ಮಮತೆ, ಬದುಕುತ್ತಲೆ ಇರಬೇಕೆಂಬಾಸೆ. ಹೀಗಾಗಿ ಸಾವೆಂದರೆ ಅಂಜಿಕೆ; ಸಾಯಲು ಯಾರಿಗೂ ಇಷ್ಟವಿಲ್ಲ; ಸಾಯದೆ ಇರಲು ವಿಶ್ವಪ್ರಯತ್ನ ಮಾಡುತ್ತೇವೆ. ಕೆಲವರಂತೂ ಬೇರೆಯವರು ಸತ್ತಾಗಲೂ ದಿಗಿಲುಬೀಳುತ್ತಾರೆ; ಸಾವು ಎಂಬ ಮಾತನ್ನಾಡಲೂ ಬೆದರುತ್ತಾರೆ. ಸಾವು ತಪ್ಪದೆಂದು ಎಲ್ಲರಿಗೂ ತಿಳಿದಿದೆಯೆನ್ನಿ. ನಾವೆಷ್ಟು ಬೇಡವೆಂದರೂ ಬಿಡುತ್ತದೆಯೆ? ಎಂದಾದರೂ ಸಾಯುವುದು ತಪ್ಪಿದ್ದಲ್ಲ ಎಂಬ ಸಮಾಧಾನವನ್ನಲ್ಲ ಎಪಿಕ್ಯೂರಸ್ ಹೇಳಿದ್ದು, ಬದುಕಿರವಾಗ ಸಾಯುವ ಸಂಭವವಿಲ್ಲ; ಸಾವು ಬಂದ ಮೇಲೆ ಬದುಕಿರುವ ಸಾಧ್ಯತೆಯಿಲ್ಲ, ಇದಿದ್ದಾಗ ಅದಿಲ್ಲ; ಅದಿದ್ದಾಗ ಇದಿಲ್ಲ. ಅಂಜಬೇಕಾದುದು ಏತಕ್ಕೆ? ಅಂಜುವವರು ಯಾರು? ಬದುಕಿರುವವರೋ ಸತ್ತವರೋ? ಸತ್ತವರಿಗೆ ಏತರ ಅಂಜಿಕೆ? ಅಂಜಲು ಅವರಲ್ಲೇನಿದೆ? ಇನ್ನು ಬದುಕಿರುವವರು ಅಂಜಲೇಕೆ? ಬದುಕಿರುವೆವೆಂಬ ಸಂತೋಷ ಇರಬೇಕಲ್ಲವೆ? ಬದುಕು ಇರುವುದು; ಸಾವು ಇಲ್ಲದಿರುವುದು, ಇದ್ದಾಗ ಇಲ್ಲದುದರ ಚಿಂತೆ ಏಕೆ? ಇದ್ದುದು ಇಲ್ಲವಾದೀತೆಂಬ ಚಿಂತೆಯೆ? ಆಗ ಹೇಗೂ ಇರುವುದಿಲ್ಲವಲ್ಲ? ಚಿಂತೆ ಮಾಡುವವರು ಯಾರು?

ಎಪಿಕ್ಯೂರಸ್ ಹೇಳಿದುದು ಇದನ್ನು, ಬದುಕಿರುವಾಗ ಬದುಕಿನ ಸುಖವನ್ನು ಅನುಭವಿಸಬೇಕು. ಸಾವಿನ ಅಂಜಿಕೆಯಿದ್ದರೆ ಬದುಕಿನ ಸುಖವೂ ಮರೆಯಾಗುತ್ತದೆ.

ಚಿಟ್ಟೆ-ಮನುಷ್ಯ

ಚು ಅಂಗ್‌ತ್ಸೆ ಪ್ರಾಚೀನ ಚೀಣಿ ದಾರ್ಶನಿಕರಲ್ಲಿ ಪ್ರಮುಖ; ಅವನು ಕ್ರಿಸ್ತಪೂರ್ವ ಮುನ್ನೂರು ವರ್ಷಗಳ ಮೊದಲೇ ತೀರಿಕೊಂಡ. ಅವನ ಚಿಂತನೆಯ ಪ್ರಭಾವ ಬಹುಕಾಲ ಉಳಿದು ಬಂದಿತು.

ಅವನ ಬರಹಗಳಲ್ಲಿ ಇದೊಂದು ಪ್ರಸಿದ್ಧವಾದುದು- 'ಒಂದು ಬಾರಿ ನಾನು— ಚು ಅಂಗ್‌ತ್ಸೆ ಕನಸೊಂದನ್ನು ಕಂಡೆ. ಅದರಲ್ಲಿ ನಾನು ಚಿಟ್ಟೆಯಾಗಿ ಅತ್ತಿತ್ತ ಹಾರಾಡುತ್ತಿದ್ದೆ. ರೂಪ, ಪ್ರವೃತ್ತಿ, ಗುಣ ಎಲ್ಲದರಲ್ಲೂ ಚಿಟ್ಟೆಯೇ. ಸ್ವತಂತ್ರವಾಗಿ ಬೇಕೆಂದೆಡೆ ಹಾರಾಡುತ್ತ, ಹೂವುಗಳ ಮೇಲೆ ನಲಿಯುತ್ತ, ರೆಕ್ಕೆಗಳನ್ನು ಪಟಪಟನೆ ಬಡಿಯುತ್ತ ಸಂತೋಷವಾಗಿದ್ದೆ. ಈ ಸಂತೋಷದ ಅನುಭವ ಬಿಟ್ಟರೆ ನನಗೆ ಯಾವುದೂ ತಿಳಿಯುತ್ತಿರಲಿಲ್ಲ. ಆದರೆ ಬೇಗನೆ ಕನಸಿನಿಂದ ಎಚ್ಚರಗೊಂಡೆ. ನೋಡಿದರೆ ನಾನೇ, ಚು ಅಂಗ್‌ತ್ಸೆ! ಕನಸಿನಲ್ಲಿ ನಾನಾಗಿದ್ದ ಚಿಟ್ಟೆ ಎಲ್ಲಿ ಹೋಯಿತು? ಚು ಅಂಗ್‌ತ್ಸೆ ಚಿಟ್ಟೆ ತಾನೆಂದು ಕನಸಿನಲ್ಲಿ ಕಂಡನೋ? ಚಿಟ್ಟೆಯೇ ತಾನು ಚು ಅಂಗ್‌ತ್ಸೆಯೆಂದು ಈಗ ಕನಸು ಕಾಣುತ್ತಿದೆಯೋ? ಚಿಟ್ಟೆಯನ್ನು ಕಂಡದ್ದು ಕನಸೋ, ಚು ಅಂಗ್‌ತ್ಸೆಯೆಂದು ಕಾಣುತ್ತಿರುವುದು ಕನಸೋ? ಚಿಟ್ಟೆ, ಮನುಷ್ಯ ಬೇರೆ ಬೇರೆ ತಾನೆ? ಚಿಟ್ಟೆ ಮನುಷ್ಯನಾಯಿತೋ, ಅಥವಾ ಮನುಷ್ಯ ಚಿಟ್ಟೆಯಾದನೋ? ಎರಡೂ ಸಾಧ್ಯವಿಲ್ಲ, ಆದರೆ ಕಂಡ ಕನಸು ಸುಳ್ಳೆ? ಕನಸು ಸುಳ್ಳೆನಿಸುವುದು ಕನಸಿನಿಂದ ಎಚ್ಚರವಾದಾಗಲೇ. ಕನಸನ್ನು ಕಾಣುತ್ತಿರುವವರೆಗೂ ಅದು ದಿಟವೆಂಬ ಅರಿವೇ, ಚಿಟ್ಟೆಯಾಗಿ ಹಾರಾಡುತ್ತ ಸುಖದ ಅನುಭವ ಚು ಅಂಗ್‌ತ್ಸೆ ಗಾದದ್ದು ಸುಳ್ಳಲ್ಲ. ದಿಟವಾಗಿ ಚಿಟ್ಟೆಯ ಅನುಭವವೇ ಅದು. ಎಚ್ಚರಗೊಂಡಾಗ ಸುಖದ ನೆನಪು ಉಳಿಯಿತು; ಅದಕ್ಕೆ ಆಧಾರವಾಗಿದ್ದ ಚಿಟ್ಟೆ ಮರೆಯಾಯಿತು. ನೆನಪು ಉಳಿದದ್ದು ಯಾರಿಗೆ? ಚು ಅಂಗ್‌ತ್ಸೆಗಲ್ಲವೆ? ಸುಖದ ಅನುಭವ ಇರದಿದ್ದರೆ ನೆನಪು ಹೇಗಿರುತ್ತಿತ್ತು? ಚು ಅಂಗ್‌ತ್ಸೆ ಚಿಟ್ಟೆಯೇ ಆಗಿರದಿದ್ದರೆ ನೆನಪು ಉಳಿದದ್ದು ಹೇಗೆ? ಕನಸನ್ನು ಸುಳ್ಳೆಂದು ಹೇಳಲಾದೀತೆ?

ಅಷ್ಟು ಮಾತ್ರವಲ್ಲ, ಎಚ್ಚರವೂ ಕನಸಿನಂತೆಯೇ ; ಕನಸಿನಿಂದ ಎಚ್ಚೆತ್ತ ಹಾಗೆ, ಎಚ್ಚರದಿಂದಲೂ ಎಚ್ಚೆತ್ತರೆ ಕನಸೇ ದಿಟವಾದೀತು ಅಲ್ಲವೆ? ಚಿಟ್ಟೆಯು ಎಚ್ಚರದಿಂದ ಕನಸಿಗೆ ಸಂದಾಗ ಚಿಟ್ಟೆಯೇ ಚು ಅಂಗ್‌ತ್ಸೆ ಆಯಿತು ಎಂದರೆ ತಪ್ಪೆ?

ಕತ್ತೆಯ ಪುಣ್ಯ

ಏಸುಕ್ರಿಸ್ತನು ಜನಪ್ರಿಯನಾದ ಮೇಲೆ ಜೆರೂಸಲೆಂ ನಗರಕ್ಕೆ ಬಂದಾಗ ಜನರೆಲ್ಲ ಉತ್ಸಾಹದಿಂದ ಅವನನ್ನು ಎದುರ್ಗೊಳ್ಳಲು ಕಾದಿದ್ದರು. ಕ್ರಿಸ್ತನು ಆಗಿನ ವಾಡಿಕೆಯಂತೆ ಕತ್ತೆಯ ಮೇಲೆ ಕೂತು ಬರುತ್ತಿದ್ದನು.

ನೆರೆದ ಜನರು ತಾವು ಹೊದ್ದಿದ್ದ ಹಚ್ಚಡಗಳನ್ನೂ ಬೆಲೆಬಾಳುವ ಅಂಗವಸ್ತ್ರಗಳನ್ನೂ ಭಕ್ತಿಯಿಂದ ಕ್ರಿಸ್ತನಿಗಾಗಿ ನಡೆಮಡಿಯಂತೆ ದಾರಿಯುದ್ದಕ್ಕೂ ಹಾಸಿದರು. ಅದರ ಮೇಲೆ ಕತ್ತೆ ಗತ್ತಿನಿಂದ ನಡೆದು ಬಂದಿತು. ಕತ್ತೆಯ ಮೇಲಿದ್ದ ಕ್ರಿಸ್ತನಿಗೆ ಜಯಘೋಷವಾಯಿತು. ಕತ್ತೆ ಅದು ತನಗೆಂದು ಸಂತೋಷಪಟ್ಟಿತು! ಕತ್ತೆಯ ಪುಣ್ಯ ನೋಡಿ! ತನಗಾಗಿಯೆ ಜನ ದಾರಿಯಲ್ಲಿ ನಡೆಮಡಿ ಹರಡಿದರೆಂದು ಅದು ಭಾವಿಸಿದ್ದರೆ ಸೋಜಿಗವಲ್ಲ! ಎಷ್ಟಾದರೂ ಕತ್ತೆಯಲ್ಲವೆ? ಕ್ರಿಸ್ತ ಅದರ ಮೇಲೆ ಕೂತಿರದಿದ್ದರೆ ಕತ್ತೆಯನ್ನು ಕೇಳುವವರು ಯಾರು? ಕ್ರಿಸ್ತ ಅದರ ಬೆನ್ನಿಂದ ಇಳಿದುಹೋದ ಮೇಲೆ ತಾನೆ ಕತ್ತೆಯನ್ನು ಯಾರು ಕೇಳಿಯಾರು? ಬರಿಯ ಕತ್ತೆಗೆಂದು ನಡೆಮಡಿ ಹಾಸುವವರು ಯಾರು? ಕತ್ತೆಯ ಮೇಲೇರಿ ಬಂದನೆಂದು ಕ್ರಿಸ್ತನಿಗೆ ಜಯಕಾರವೆ? ಕ್ರಿಸ್ತ ಅದರ ಮೇಲಿದ್ದನೆಂದಲ್ಲವೆ ಅದಕ್ಕೆ ಮರ್ಯಾದೆ? ದೊಡ್ಡ ದೊಡ್ಡ ಅಧಿಕಾರದಲ್ಲಿರುವ ಕೆಲವರು ಈ ಕತೆಯಲ್ಲಿನ ಕತ್ತೆಗಳಂತೆಯೆ. ತಮಗೆ ದೊರಕುವ ಮರ್ಯಾದೆ, ಮನ್ನಣೆಯೆಲ್ಲ ತಮಗಲ್ಲ, ತಾವು ಹೊತ್ತಿರುವ ಅಧಿಕಾರಕ್ಕೆ ಎನ್ನುವ ಅರಿವು, ವಿವೇಕ ಅವರಿಗಿರುವುದಿಲ್ಲ. ಅಧಿಕಾರವನ್ನು ಬಿಟ್ಟೊಡನೆ ಅವರನ್ನು ಕೇಳುವವರು ಯಾರು? ಅಧಿಕಾರದ ಮದ ಅವರ ತಲೆಯೊಳಗೆ ಹೊಕ್ಕಮೇಲೆ ತಲೆ ಹೋದರೂ ಅದು ಮಾತ್ರ ಹೋಗುವುದಿಲ್ಲ! ಅಧಿಕಾರವನ್ನು ಕಳಚಿಹೋದರೂ ಅಧಿಕಾರದಲ್ಲಿದ್ದಾಗ ಕಲಿತ ಧೋರಣೆ ಮರೆಯಾಗುವುದಿಲ್ಲ. ಅದನ್ನೆ ಮುಂದು ಮಾಡಿ ಕೊಂಡು ಮನೆಯಲ್ಲೂ ಹೊರಗೂ ಎಲ್ಲರ ಮೇಲೆ ದರ್ಪ ನಡೆಸಲು ಹೊರಡುತ್ತಾರೆ. ಆದರೆ ಕೇಳುವವರು ಯಾರು? ಹಲ್ಲುಕಿತ್ತ ಹಾವಿಗೆ ಬೆದರುವವರುಂಟೇ?

ಅಧಿಕಾರ ಬಿಡುವ ದಿನ ಕಚೇರಿಯೊಳಗೆ ಹೋಗುವಾಗ ಬಾಗಿಲಲ್ಲಿರುವ ನೌಕರ ಎದ್ದು ನಿಲ್ಲುವನು; ಹೊರಗೆ ಬರುವಾಗ ಅವನೆ ಕೂತಲ್ಲಿಂದ ಏಳುವುದಿಲ್ಲ.

ಕತ್ತೆಗಿರುವ ಸ್ಥಾನ-ಮಾನದ ಮೂಲ ಕತ್ತೆಗೇನು ತಿಳಿಯುತ್ತದೆ? ಪುಣ್ಯವನ್ನೂ ತನ್ನ ಹಕ್ಕೆಂದು ಭಾವಿಸೀತು ಅದು !

ಒಳಿತು-ಕೆಡುಕು

ಒಳ್ಳೆಯವರು ಸತ್ತ ಮೇಲೆ ಸ್ವರ್ಗಕ್ಕೆ ತಾನೆ ಹೋಗುವುದು? ಅಂಥ ನಂಬಿಕೆಯೇನೋ ಎಲ್ಲ ಜನರಲ್ಲೂ ಇದೆಯಷ್ಟೆ.

ಆದರೆ ಒಳ್ಳೆಯತನವೆಂದರೇನು? ಇದೊಂದು ಕಥೆ ಅದನ್ನು ಸೂಚಿಸುತ್ತದೆ.

ಕ್ರೈಸ್ತ ಜನರ ನಂಬಿಕೆಯಂತೆ ಸ್ವರ್ಗದ ಬಾಗಿಲಲ್ಲಿ ಸಂತ ಪೇತ್ರ ನಿಂತು, ಸತ್ತು ಬಂದ ಜೀವಿಗಳನ್ನು ಪರೀಕ್ಷಿಸಿ ಒಳ್ಳೆಯವರನ್ನು ಮಾತ್ರ ಒಳಕ್ಕೆ ಬಿಡುತ್ತಾನೆ.

ಒಮ್ಮೆ ಭೂಮಿಯ ಮೇಲೆ ಒಳ್ಳೆಯವನೆಂದು ಹೆಸರಾದವನು ಸತ್ತು ಸ್ವರ್ಗದ ಬಾಗಿಲಲ್ಲಿ ನಿಂತ; ತನ್ನನ್ನು ಬಿಡದೆ ಬೇರೆ ಯಾರನ್ನು ಸ್ವರ್ಗದೊಳಗೆ ಸೇರಿಸಿಯಾರು ಎಂಬ ವಿಶ್ವಾಸ ಅವನದ್ದು. ಸಂತ ಪೇತ್ರನನ್ನು ಕುರಿತು ಕೇಳಿದ-

"ನಾನು ಬಂದಿದ್ದೇನೆ, ಕಾಣುವುದಿಲ್ಲವೆ?"

ಸಂತ ಪೇತ್ರ ಮುಗುಳ್ನಗೆ ನಕ್ಕು "ನೀನು ಬಂದದ್ದು ಕಾಣುತ್ತದೆ, ಆದರೆ ನೀನು ಯಾರು? ಸ್ವರ್ಗವನ್ನು ಸೇರಲು ನಿನ್ನ ಅಧಿಕಾರವಾದರೂ ಏನು?" ಎಂದು ಕೇಳಿದ.

"ನಾನೋ, ಭೂಮಿಯ ಮೇಲಿರುವಾಗ ಒಂದು ಕೆಡುಕನ್ನಾದರೂ ಮಾಡಲಿಲ್ಲ. ತಪ್ಪು ಎಂಬುದನ್ನೇ ಅರಿಯೆ. ಯಾರಿಗೂ ದ್ರೋಹ ಮಾಡಲಿಲ್ಲ. ಇದಕ್ಕಿಂತ ಇನ್ನೇನು ಅಧಿಕಾರ ಬೇಕು?"

"ಅಯ್ಯಾ, ನೀನು ಕೆಡುಕನ್ನು ಮಾಡಲಿಲ್ಲ ಸರಿಯೆ, ಆದರೆ ಅಷ್ಟು ಕಾಲ ನೀನು ಭೂಮಿಯ ಮೇಲಿದ್ದು ಉಂಡು, ಮಲಗಿ ಸುಖವಾಗಿದ್ದೆಯಲ್ಲ, ಅದಕ್ಕೆಂದು ಯಾರಿಗಾದರೂ ಏನಾದರೂ ಒಳ್ಳೆಯದನ್ನು ಮಾಡಿದ್ದೀಯಾ?"

"ಒಳ್ಳೆಯದನ್ನು ಮಾಡಲಿಲ್ಲ; ಕೆಡುಕನ್ನೂ ಮಾಡಲಿಲ್ಲ ಅಲ್ಲವೇ? ಅದು ಅಧಿಕಾರವೆಂದಾಗುವುದಿಲ್ಲವೆ?"

"ಆಗುವುದಿಲ್ಲ ತಮ್ಮ, ಕೆಡುಕನ್ನು ಮಾಡದೆ ಇದ್ದುದು ಒಳ್ಳೆಯದನ್ನು ಮಾಡಿದಂತಾಗವುದಿಲ್ಲ. ಬೇರೆಯವರ ಕಷ್ಟಕ್ಕೆ ನೆರವಾಗದೆ ನಿನ್ನ ಪಾಡಿಗೆ ನೀನಿದ್ದರೆ ಅದು ಕೆಡುಕನ್ನೇ ಮಾಡಿದಂತೆ. ಒಳ್ಳೆಯದನ್ನು ಮಾಡುವುದು ಸಾಧ್ಯವಿದ್ದಾಗ ಮಾಡದಿದ್ದರೆ ಅದು ಕೆಡುಕೇ".

ಸ್ವರ್ಗವಿರುವುದು ಒಳ್ಳೆಯವರಿಗೆ ಮಾತ್ರ; ಕೆಡುಕನ್ನು ಮಾಡದೆ ಇರುವವರಿಗಲ್ಲ.

ಕತ್ತೆಯ ಮಾತು

ಷೂಫಿ ಸಂಪ್ರದಾಯದ ಜನರಲ್ಲಿ ಮುಲ್ಲಾ ನಾಸಿರುದ್ದೀನನ ಕತೆಗಳು ಬಳಕೆಯಲ್ಲಿವೆ. ಮೇಲ್ನೋಟಕ್ಕೆ ತಿಳಿಹಾಸ್ಯವಿದ್ದರೂ ಅಂತರಾರ್ಥ ಗಂಭೀರವಾದುದು.

ನಿದರ್ಶನಕ್ಕೊಂದು ಕತೆ. ಹಳೆಯ ಕಾಲ, ಪರ್ಶಿಯಾ ದೇಶ. ಉಳ್ಳವರು ಕತ್ತೆಗಳನ್ನು ಸಂಚಾರಕ್ಕೆ ಬಳಸುತ್ತಿದ್ದ ಕಾಲ. ಮುಲ್ಲಾನ ಬಳಿಯೊಂದು ಕತ್ತೆಯಿತ್ತು. ಅವನ ಪರಿಚಯದವನೊಬ್ಬ ಒಂದು ದಿನ ಅವನ ಬಳಿ ಬಂದು ಅವನ ಕತ್ತೆಯನ್ನು ಒಂದೆರಡು ದಿನಗಳ ಮಟ್ಟಿಗೆ ಎರವಲು ಕೊಡುವಂತೆ ಕೇಳಿದ. ಮುಲ್ಲಾ ಹಿಂದೆ ಮುಂದೆ ನೋಡದೆ "ನನ್ನ ಬಳಿ ಕತ್ತೆಯಿಲ್ಲ" ಎಂದು ಹೇಳಿಬಿಟ್ಟ. ಅವನು ಹೇಳಿದೊಡನೆಯೆ ಮನೆಯ ಹಿಂದೆ ಅಂಗಳದಲ್ಲಿ ಕಟ್ಟಿದ್ದ ಅವನ ಕತ್ತೆ ಗಟ್ಟಿಯಾಗಿ ಅರಚಿಕೊಂಡಿತು! ಅದನ್ನು ಕೇಳಿ "ಏನಯ್ಯಾ ಮುಲ್ಲಾ, ಕತ್ತೆಯಿಲ್ಲವೆಂದು ಸುಳ್ಳೇ ಹೇಳುತ್ತೀಯೆ. ಅದರ ದನಿಯನ್ನು ನಾನು ಕೇಳಿದೆನಲ್ಲ?" ಎಂದ ಬಂದಿದ್ದಾತ. ಒಡನೆಯೆ ಮುಲ್ಲಾ "ಅಲ್ಲವಯ್ಯಾ ಮೂರ್ಖ, ನೀನು ನನ್ನ ಮಾತನ್ನು ನಂಬುತ್ತೀಯೋ, ಕತ್ತೆಯ ಮಾತನ್ನು ನಂಬುತ್ತೀಯೋ?" ಎಂದು ಮರುಪ್ರಶ್ನೆ ಮಾಡಿದ. ಕತ್ತೆಯ ಮಾತನ್ನು ನಂಬುವವ ಎಂಥ ಜಾಣ? ಮುಲ್ಲಾ ಕತ್ತೆ ಇಲ್ಲವೆಂದದ್ದು ಅದರ ಅಸ್ತಿತ್ವದ ಪ್ರಶ್ನೆಗೆ ಉತ್ತರವಾಗಲ್ಲ, ಕತ್ತೆಯನ್ನು ಎರವುಕೊಡುವ ಮನಸ್ಸು ತನಗಿಲ್ಲವೆಂದು ಧ್ವನಿ. ಅದನ್ನು ಬಂದಿದ್ದವ ಅರ್ಥಮಾಡಿಕೊಳ್ಳಲಿಲ್ಲ. ಕತ್ತೆ ಕೂಗನ್ನಲ್ಲ, ಕತ್ತೆಯನ್ನು ಕಣ್ಣೆದುರೇ ನೋಡಿದರೇನು, ಅದನ್ನು ಕೊಡಬೇಕಾದವನು ಮುಲ್ಲನೇ ಅಲ್ಲವೇ? ಕತ್ತೆಯಿದೆಯೆಂದು ತಿಳಿದು ಕೊಳ್ಳುವುದೆ ಬಂದವನ ಉದ್ದೇಶವಾಗಿದ್ದಿತೆ? ಬಹುಮಂದಿ, ಮಾತನ್ನು ಕೇಳಿ ಅಷ್ಟಕ್ಕೆ ತಮ್ಮ ಗಮನವನ್ನು ಸೀಮಿತ ಗೊಳಿಸುತ್ತಾರೆ. ಮಾತಿನ ಹಿಂದಿರುವ ಅಭಿಪ್ರಾಯವೇನೆಂದು ತಿಳಿಯುವ ಕುತೂಹಲ ಅವರಿಗಿರುವುದಿಲ್ಲ. ಶಾಸ್ತ್ರದ ವಿಧಿ-ನಿಷೇಧಗಳೂ, ಕಟ್ಟು ಕಟ್ಟಳೆಗಳೂ ಮೇಲ್ನೋಟಕ್ಕೆ ಮಾತುಗಳೇ. ಮೇಲ್ನೋಟದ ಅರ್ಥವನ್ನಷ್ಟೆ ಹಿಡಿದರೆ ಸಾಲದು: ತಾತ್ಪರ್ಯವೇನು, ಪ್ರಯೋಜನವೇನು ಎಂದು ವಿಚಾರ ಮಾಡುವ ಅಗತ್ಯವಿದೆ. ಹಿನ್ನಲೆಯಲ್ಲಿ ಯಾವ ಉದ್ದೇಶವೂ ಇಲ್ಲದೆ ಆಡುವ ಮಾತು ನಿರರ್ಥಕವಾಗುತ್ತದೆ; ಕತ್ತೆಯ ಕಿರುಚಾಟದಂತೆ. ಅವನು ಬಂದದ್ದು ತನ್ನನ್ನು ಒಯ್ಯಲು ಎಂದು ಕತ್ತೆಗೇನು ಗೊತ್ತು? ತಾನು ಬಂದವನೊಂದಿಗೆ ಹೋಗುವ, ಬಿಡುವ ನಿರ್ಧಾರವಾಗಲಿ ಕತ್ತೆಯದೆ?

ಹೀಗಿರುವಾಗ ಕತ್ತೆಯ ಮಾತಿಗೇನು ಬೆಲೆ?

ಕತ್ತೆಯ ಬುದ್ಧಿವಂತಿಕೆ

ನಾಸಿರುದ್ದೀನನದೇ ಇನ್ನೊಂದು ಕತೆ.

ಅವನ ಹತ್ತಿರ ಕತ್ತೆಯೊಂದಿದ್ದಿತಷ್ಟೆ? ಅದರ ಮೇಲೆ ಉಪ್ಪನ್ನು ಹೇರಿಕೊಂಡು ಪಕ್ಕದ ಊರಿಗೆ ಹೋಗಿ ಮಾರಿ ಬರುತ್ತಿದ್ದ. ಅವನ ಊರಿಗೂ ಪಕ್ಕದ ಊರಿಗೂ ನಡುವೆ ಸಣ್ಣದೊಂದು ತೊರೆ. ಆಳವೇನಿರಲಿಲ್ಲ; ಕತ್ತೆ ಅದನ್ನು ದಾಟುವಾಗ ಅದರ ಕಾಲು ಮಾತ್ರ ನೀರಿನಲ್ಲಿ ಮುಳುಗಿರುತ್ತಿತ್ತು. ಒಮ್ಮೆ ಹೀಗೆಯೇ ಹೋಗುತ್ತಿರುವಾಗ ಕತ್ತೆ ಎಡವಿಬಿದ್ದಿತು; ಬೆನ್ನ ಮೇಲಿದ್ದ ಉಪ್ಪು ನೀರಿನಲ್ಲಿ ಕರಗಿಹೋಯಿತು. ಮತ್ತೆ ಎದ್ದು ಮುಂದೆ ಹೊರಟಾಗ ಭಾರ ಹಗುರವಾಗಿದ್ದಿತು. ಮರುದಿನ ಹೋಗುವಾಗ ಕತ್ತೆ ಬೇಕೆಂದೇ ನಡುನೀರಿನಲ್ಲಿ ಕುಳಿತುಬಿಟ್ಟಿತು; ಉಪ್ಪೆಲ್ಲ ನೀರಿನ ಪಾಲಾಯಿತು. ದಡವನ್ನು ಸೇರಿದಮೇಲೆ ತನ್ನ ಜಾಣತನಕ್ಕೆ ತಾನೇ ಖುಷಿ ಪಟ್ಟಿತು. ನಾಸಿರುದ್ದೀನ್ ಇದನ್ನು ಗಮನಿಸಿದ; ಇರಲಿ, ಇದಕ್ಕೆ ಬುದ್ಧಿ ಕಲಿಸುತ್ತೇನೆಂದುಕೊಂಡು, ಮಾರನೆಯ ದಿನ ಉಪ್ಪಿಗೆ ಬದಲಾಗಿ ಉಣ್ಣೆಯನ್ನು ಕತ್ತೆಯ ಮೇಲೆ ಹೇರಿದ. ಮತ್ತೆ ಕತ್ತೆ ನೀರಿನಲ್ಲಿ ಕುಳಿತಾಗ, ಉಣ್ಣೆಯು ನೀರಿನಲ್ಲಿ ತೊಯ್ದು ಹೆಣಭಾರವಾಯಿತು. ದಡವನ್ನು ಸೇರಿದಾಗ ಕತ್ತೆ ಅದನ್ನು ಹೊರಲಾರದೆ ಕಷ್ಟಪಟ್ಟಿತು. ಪರ್ಶಿಯನ್ ಭಾಷೆಯಲ್ಲಿ ಉಪ್ಪು ಎನ್ನುವ ಮಾತಿಗೆ ಮಿಲ್ಹ್ ಎಂಬ ಪರ್ಯಾಯಪದವಿದೆ. ಇದಕ್ಕೆ ಒಳ್ಳೆಯತನ ಎಂದೂ ಇನ್ನೊಂದು ಅರ್ಥವಿದೆ. ಕತ್ತೆಯೆಂದರೆ ಮನುಷ್ಯನೇ. ಮನುಷ್ಯನು ಒಳ್ಳೆಯತನವನ್ನು ಗಾಳಿಗೆ ತೂರಿಬಿಟ್ಟರೆ ಬದುಕು ಹಗುರಾದೀತೆಂದು ಬಗೆಯುವುದು ವಾಡಿಕೆ. ಆದರೆ ಕತೆಯಲ್ಲಿ ಕತ್ತೆಯ ಜಾಣತನದಿಂದ ಉಪ್ಪೆಲ್ಲ ನೀರಿನಲ್ಲಿ ಕರಗಿದಾಗ, ಅದರ ಹೊರೆಯೇನೋ ಹಗುರವಾಯಿತು. ಆದರೆ ಉಪ್ಪನ್ನು ಮಾರಿದರಲ್ಲವೆ ದುಡ್ಡು; ದುಡ್ಡಿಲ್ಲದೆ ಕತ್ತೆಗೆ ಮೇವು ದೊರೆಯುವುದೆಂತು? ಬೆನ್ನಿಗೆ ಭಾರವೂ ಹೋಯಿತು; ಹೊಟ್ಟೆಗೆ ಆಹಾರವೂ ಇಲ್ಲವಾಯಿತು. ಒಳ್ಳೆಯತನವನ್ನು ಬಿಟ್ಟವರಿಗೆ ನೆಮ್ಮದಿ ಯೆಲ್ಲಿ? ಸುಖವೆಲ್ಲಿ? ಇನ್ನು ಉಣ್ಣೆಯೆಂದರೆ ಸೂಫಿಸಂತನೇ, ನಾಸಿರುದ್ದೀನನ ಎಣಿಕೆಯೆಂದರೆ ಗುರುವಿನ ಉಪದೇಶ. ಇದರಿಂದ ಶಿಷ್ಯನಿಗೆ ನಡೆಯುವಾಗ ಕಷ್ಟವೇ. ಆದರೆ ಒಮ್ಮೆ ನಡೆದದ್ದು ಮುಗಿಯಿತೆಂದಾಗ ಸುಖವೇ. ಉಣ್ಣೆಯನ್ನು ಮಾರಿದರೆ ಬರುವ ಹಣ ಉಪ್ಪಿನಿಂದ ಬರುವ ಹಣಕ್ಕಿಂತ ಹೆಚ್ಚಿನದು, ಕತ್ತೆಗೆ ದೊರೆಯುವ ಮೇವೂ ಹೆಚ್ಚಿನದೇ.

ನೀರಿನಲ್ಲಿ ತೊಯ್ದ ಉಣ್ಣೆಯ ಭಾರವೂ ಹೆಚ್ಚು; ತೂಕವೂ ಹೆಚ್ಚು; ಹಣವೂ ಹೆಚ್ಚು.

ಒಳಕತ್ತಲೆ, ಹೊರಬೆಳಕು

ಒಮ್ಮೆ ನಾಸಿರುದ್ದೀನ್ ಮನೆಯ ಹೊರಗೆ ಬೀದಿಯಲ್ಲಿ ಏನನ್ನೋ ಹುಡುಕುತ್ತಿದ್ದ. ದಾರಿಹೋಕನೊಬ್ಬ "ಮುಲ್ಲಾ, ಏನನ್ನು ಹುಡುಕುತ್ತಿದ್ದಿ?" ಎಂದು ಕೇಳಿದ. "ಅಯ್ಯೊ, ನನ್ನ ಸೂಜಿ ಕಾಣೆಯಾಗಿದೆ, ಟೋಪಿಯನ್ನು ಸ್ವಲ್ಪ ಹೊಲಿದು ಕೊಳ್ಳಬೇಕಾಗಿತ್ತು" ಎಂದ ನಾಸಿರುದ್ದೀನ್. ದಾರಿಹೋಕನೂ ಸ್ವಲ್ಪ ಹೊತ್ತು ಹುಡುಕಿ ನೋಡಿದ. ಸೂಜಿ ಸಿಗಲಿಲ್ಲ, ಕಡಗೆ "ಮುಲ್ಲಾ, ಅದು ಬಿದ್ದದ್ದೆಲ್ಲಿ?" ಎಂದು ಕೇಳಲು, ನಾಸಿರುದ್ದೀನ್ "ಅದು ಬಿದ್ದದ್ದು ಮನೆಯೊಳಗೆ, ಇಲ್ಲಲ್ಲ" ಎಂದ. ದಾರಿಹೋಕನಿಗೆ ಸ್ವಲ್ಪ ಸಿಟ್ಟೂ ಬಂದಿತು, ನಗೆಯೂ ಬಂದಿತು.

"ಅಲ್ಲವಯ್ಯಾ ಮುಲ್ಲಾ, ನೀನು ಜಾಣನೆಂದು ಎಲ್ಲರೂ ಹೇಳುತ್ತಾರೆ. ಅದು ಬಿದ್ದ ಕಡೆ ಹುಡಿಕಿದರೆ ಸಿಕ್ಕೀತೇ ವಿನಾ ಬೇರೆಡೆ ಹುಡುಕಿದರೆ ಸಿಕ್ಕೀತೆ? ಅಷ್ಟೂ ತಿಳಿವಳಿಕೆಯಿಲ್ಲವೆ ನಿನಗೆ?" ಎಂದು ಮೂದಲಿಸಿದ. ಅದಕ್ಕೆ ಮುಲ್ಲಾ, "ನೀನು ಹೇಳುವುದೇನೋ ಸರಿ. ಆದರೆ ಅದು ಬಿದ್ದ ಕಡೆ ಬೆಳಕಿರಲಿಲ್ಲ, ಬೆಳಕಿದ್ದಲ್ಲಿ ಹುಡುಕಬೇಕೋ, ಕತ್ತಲೆಯಲ್ಲಿ ಹುಡುಕಬೇಕೋ ನೀನೇ ಹೇಳು!" ಎಂದ. ದಾರಿಹೋಕನಿಗೆ ದಿಗ್ಭ್ರಮೆಯಾಯಿತು. ಏನು ಹೇಳಬೇಕೆಂದು ತೋರದೆ ತನ್ನ ದಾರಿ ಹಿಡಿದು ಹೊರಟುಹೋದ. ನಾಸಿರುದ್ದೀನನ ನಡವಳಿಕೆಯಲ್ಲಿ ಲೋಕನೀತಿಯ ಅಣಕು ಇದೆ. ಸಂಬೋಧಿ ಬೇಕೆಂದು, ಪರಾಜ್ಞಾನ ಬೇಕೆಂದು ಜನ ತಮ್ಮ ಇಂದ್ರಿಯಗಳು, ಮನಸ್ಸು ಇವುಗಳ ಬೆಳಕಿನಲ್ಲಿ ಹೊರಗೆಲ್ಲ ಅಲೆದಾಡುತ್ತಾರೆ. ನೆಮ್ಮದಿ ಬೇಕೆಂದು ಭೋಗವಸ್ತುಗಳನ್ನೆಲ್ಲ ಪಡೆದಿಟ್ಟುಕೊಳ್ಳುತ್ತಾರೆ. ವ್ಯವಹಾರದ ಬೆಳಕಿರುವಲ್ಲಿ ಶಾಂತಿಯನ್ನು ಅರಸುತ್ತಾರೆ. ಆದರೆ ಅದಿರುವುದು ಹೊರಗಲ್ಲ, ಒಳಗೇ ಎಂಬುದು ಅವರಿಗೆ ತಿಳಿಯದು. ಸೂಜಿ ಬಿದ್ದದ್ದು ಒಳಗೇ; ಅದನ್ನು ಹುಡುಕಾಡುವುದು ಮಾತ್ರ ಹೊರಗೆ. ಶಾಂತಿಯಾಗಲಿ, ಸುಖವಾಗಲಿ ನಮ್ಮೊಳಗೇ ಅಡಗಿದೆ. ನಮ್ಮ ಹಿಡಿತಕ್ಕೆ ಸಿಕ್ಕುತ್ತಿಲ್ಲ. ಏಕೆಂದರೆ ನಾವು ಒಳಗೆ ನೋಡಿಕೊಂಡಿಲ್ಲ, ಅಲ್ಲಿರುವುದು ನಮ್ಮ ಪಾಲಿಗೆ ಬರೀ ಕತ್ತಲೆ. ಬೆಳಕು ನಮಗೆ ತೋರಿಕೊಳ್ಳುವುದು ಹೊರಗಿಂದಲೇ, ನಮಗೆ ಬೇಕಾದುದನ್ನು ಅಲ್ಲೇ ಅರಸಿದರಾಯಿತು ಎಂದು ಹೊರಹೊರಗೇ ಅಲೆದಾಡುತ್ತೇವೆ. ಆ ಗುರು, ಈ ಪುಸ್ತಕ; ಆ ಸಿದ್ಧಾಂತ, ಈ ಯೋಗ; ಆ ಸಾಧು ಈ ಸಂತ ಇವರ ಸುತ್ತಮುತ್ತಲೇ ಸುಳಿದಾಡುತ್ತೇವೆ.

ಆದರೆ ನಮಗೆ ಬೇಕಾದ ಪರಮಾರ್ಥ ಅಲ್ಲೆಲ್ಲ ತಡುಕಾಡಿದರೆ ದೊರಕುವುದು ಹೇಗೆ?

ಹಿಡಿಯುವ ದಾರಿ

ಫರೀದುದ್ದೀನ್ ಅತ್ತರ್ ಎಂಬುವನೊಬ್ಬ ಸೂಫೀ ಸಂತ. ಅವನ ಬರಹಗಳು ತತ್ತ್ವಚಿಂತನೆಯ ಗಣಿಯೆನ್ನಬಹುದು. ಆತ ಸೂಫೀ ಫಕೀರನಾದದ್ದು ಒಂದು ಸ್ವಾರಸ್ಯವಾದ ಕತೆ.

ಮೊದಲಿಗೆ ಅತ್ತರ್ ಶ್ರೀಮಂತ ವ್ಯಾಪಾರಿಯೊಬ್ಬನ ಮಗ; ತಂದೆ ಪರಿಮಳ ದ್ರವ್ಯಗಳ ದೊಡ್ಡ ಅಂಗಡಿ ಇಟ್ಟಿದ್ದ. ಅವನು ಸತ್ತಮೇಲೆ ಅಂಗಡಿ, ಆಸ್ತಿಪಾಸ್ತಿಯೆಲ್ಲ ಮಗನಿಗೆ ಬಂದಿತು. ತಂದೆ ಬಿಟ್ಟುಹೋದ ಅಂಗಡಿಯಲ್ಲಿ ಸಾವಿರಾರು ಮದ್ದಿನ ಮಡಕೆಗಳು, ರಸಾಯನದ ಸೀಸೆಗಳು, ಬೆಲೆಬಾಳುವ ಪರಿಕರಗಳಿದ್ದುವು. ಅತ್ತರ್ ಒಂದು ದಿನ ತನ್ನ ಅಂಗಡಿಯಲ್ಲಿ ಕುಳಿತಿದ್ದಾಗ, ಒಬ್ಬ ಫಕೀರ ಅಲ್ಲಿಗೆ ಬಂದು ಒಳಗಿರುವ ಸಾಮಾನುಗಳನ್ನೆಲ್ಲ ನೆಟ್ಟ ಕಣ್ಣಿನಿಂದ ನೋಡುತ್ತ ಬಾಗಿಲಲ್ಲಿ ನಿಂತನಂತೆ. ಅತ್ತರ್ ಅವನನ್ನು ಕುರಿತು"ಏನಯ್ಯಾ, ನೋಡುತ್ತ, ನಿಂತೆ? ನಡಿ, ನಿನ್ನ ದಾರಿ ಹಿಡಿದು ಹೋಗು" ಎಂದನಂತೆ. ಅದಕ್ಕೆ ಆ ಫಕೀರನು, "ಅಯ್ಯಾ ದಣಿಯೆ, ನನ್ನ ದಾರಿ ಹಿಡಿದು ಹೋಗಲು ನನಗೇನು ಕಷ್ಟವಿಲ್ಲ, ಇಗೋ ಉಟ್ಟಿರುವುದೊಂದು ಬಟ್ಟೆ, ಹಿಡಿದಿರುವುದೊಂದು ಕೋಲು, ಈಗಲೇ, ಹೀಗೆಯೇ ಹೊರಟೆನೆಂದುಕೋ, ನನಗೇನು ಶ್ರಮವಿಲ್ಲ. ಆದರೆ ನಾನು ನಿನ್ನ ವಿಚಾರ ಕುರಿತು ಆಲೋಚನೆ ಮಾಡುತ್ತಿದ್ದೇನೆ. ನೀನು ನಿನ್ನ ದಾರಿ ಹಿಡಿದು ಹೋಗಬೇಕೆಂದರೆ ಇಷ್ಟೆಲ್ಲ ಸಾಮಾನು- ಸರಂಜಾಮು, ಪರಿಕರ- ಪದಾರ್ಥಗಳಿವೆಯಲ್ಲ? ಹೇಗೆ ಹೋಗುವೆ?" ಎಂದು ಕೇಳಿದನಂತೆ. ಫಕೀರನ ಮಾತುಗಳನ್ನು ಕೇಳಿದೊಡನೆಯೇ ಅತ್ತರನಿಗೆ ಜ್ಞಾನೋದಯವಾಯಿತಂತೆ. ಅವನು ತನ್ನಲ್ಲಿದ್ದ ಸಮಸ್ತವನ್ನೂ ಬಡಬಗ್ಗರಿಗೆ ದಾನ ಮಾಡಿ ತಾನೂ ಸೂಫೀ ಫಕೀರನಾಗಿ ಹೊರಟುಬಿಟ್ಟನಂತೆ. ಅತ್ತರನು ಸೂಫೀ ಸಂತನೆಂಬುದೂ, ಅದನ್ನು ಅವನು ತಿಳಿದುಕೊಳ್ಳದೆ ಲೋಕಯಾತ್ರೆಯಲ್ಲಿ ಬವಣೆಪಡುತ್ತಿರುವುದೂ ಅವನಂಗಡಿಯ ಬಾಗಿಲಿಗೆ ಬಂದ ಫಕೀರನಿಗೆ ತಿಳಿದಿದ್ದಿತೆಂದು ಈ ವೃತ್ತಾಂತವನ್ನು ಬರೆದ ದೌಲತ್ ಶಾ ಸೂಚಿಸಿದ್ದಾನೆ. ಫಕೀರನು ಹಿಡಿದಿದ್ದ ದಾರಿಯೇ ಅತ್ತರನೂ ಹಿಡಿಯಬೇಕಾಗಿದ್ದುದು, ಆದರೆ ಫಕೀರನಿಗೆ ಪ್ರಾಪಂಚಿಕ ಕಟ್ಟು-ಕೋಟಲೆಗಳಿರಲಿಲ್ಲ; ಶ್ರೀಮಂತ ಅತ್ತರನಿಗಿದ್ದ ಹೊರೆಭಾರವೂ ಇರಲಿಲ್ಲ. ಅವನು ಆಗಲೆ ಭಾರನ್ಯಾಸ ಮಾಡಿದ್ದವನು.

ಹೀಗಿದ್ದುದರಿಂದಲೇ ಅವನು ಅತ್ತರನಿಗೆ ಗುರುವಾದ. ಅವನ ಒಂದೇ ಒಂದು ಮಾತು ಅತ್ತರನಿಗೆ ದಾರಿದೀಪವಾಯಿತು. ಅವನ ಬದುಕಿನ ಮಾರ್ಗವನ್ನು ತೋರಿಸಿಕೊಟ್ಟಿತು.

ಕುರೂಪವನ್ನು ಕಾಣಲೇಕೆ?

ಶಿರಾಜಿನ ಶೇಖ ಸಾದಿಯದೊಂದು ಕತೆಯಿದೆ.

ಒಬ್ಬ ಗೃಹಸ್ಥನಿಗೆ ತುಂಬ ಕುರೂಪಿಯಾದ ಮಗಳಿದ್ದಳು. ಅವಳನ್ನು ಯಾರು ಮದುವೆಯಾಗುತ್ತಾರೆ? ಯಾರೂ ಮುಂದೆ ಬರಲಿಲ್ಲ. ಕಡೆಗೆ ಆ ಊರಲ್ಲಿದ್ದ ಕುರುಡನೊಬ್ಬನನ್ನು ಒಪ್ಪಿಸಿ ಅವನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟ. ಕುರುಡ- ಕುರೂಪಿಯರ ಸಂಸಾರ ಶುರುವಾಯಿತು. ಇವರನ್ನು ನೋಡಿದ ವೈದ್ಯನೊಬ್ಬ ಹುಡುಗಿಯ ತಂದೆಯ ಮನೆಗೆ ಬಂದು" ಅಯ್ಯಾ, ನಿನ್ನ ಅಳಿಯನ ಕುರುಡು ಹೋಗಿಸಿ, ಕಣ್ಣು ಕಾಣುವಂತೆ ಮಾಡುವ ಮದ್ದು ನನ್ನಲ್ಲುಂಟು" ಎಂದು ಹೇಳಿದ. ಗೃಹಸ್ಥನಿಗೆ ದಿಗಿಲಾಯಿತು. "ಅಯ್ಯಾ, ನಿನ್ನ ಮದ್ದು ನಿನ್ನಲ್ಲಿಯೇ ಇರಲಿ! ನನ್ನ ಅಳಿಯನ ಕುರುಡನ್ನು ಕಳೆಯಬೇಡ, ಮಾರಾಯ! ಅವನ ಕಣ್ಣು ಕಾಣುವಂತಾದರೆ ನನ್ನ ಮಗಳನ್ನು ತನ್ನ ಬಳಿ ಉಳಿಸಿಕೊಂಡಾನೆ? ಸೋಡಾಚೀಟಿ ಕೊಟ್ಟು ಕಳುಹಿಸಿಯಾನು. ಆಮೇಲೆ ನನ್ನ ಮಗಳ ಗತಿಯೇನು" ಎಂದು ವೈದ್ಯನನ್ನು ಹಿಂದಕ್ಕೆ ಕಳುಹಿಸಿಕೊಟ್ಟ. ಸಂಸಾರದಲ್ಲೆಲ್ಲ ಇಂಥ ಅರೆಕೊರೆಗಳು ಇದ್ದೇ ಇರುತ್ತವೆ. ನಮ್ಮ ಒಳಗಣ್ಣು ಕಾಣುವುದಿಲ್ಲವಾಗಿ ಎಲ್ಲವನ್ನೂ ಒಪ್ಪಿಕೊಂಡಿದ್ದೇವೆ. ಅದು ಹೇಗೋ ವ್ಯವಹಾರ ಸಾಗುತ್ತಿದೆ. ಅಜ್ಞಾನಕ್ಕೆ ನಮ್ಮ ಧನ್ಯವಾದ ಸಲ್ಲಬೇಕು. ಅದನ್ನೇ ಮಾಯೆಯೆನ್ನುವುದು, ಮರುಳೆನ್ನುವುದು. ಜ್ಞಾನಕ್ಕೆ ಜನ ಅಂಜುವುದೂ ಇದೇ ಕಾರಣಕ್ಕಾಗಿ, ಒಳಗಣ್ಣು ಕಾಣಲು ತೊಡಗಿದರೆ ಸಂಸಾರದ ಆಟ ಮುಗಿದಂತೆಯೇ ! ಅದರ ಜೊಳ್ಳು ಬಯಲಾಗುತ್ತದೆ. ಹೊರಗಿನ ಕತ್ತಲೆಗೂ ಒಳಗಣ ಕತ್ತಲೆಗೂ ಒಂದು ಅಂತರವಿದೆ. ಹೊರಗಿನ ಕತ್ತಲೆ ಎಷ್ಟು ದಟ್ಟವಾದರೂ ದೀಪವನ್ನು ಬರಬೇಡವೆಂದು ನೂಕುವುದಿಲ್ಲ; ತೆಪ್ಪನೆ ಇರುತ್ತದೆ, ದೀಪ ಬಂದರೆ ಓಡಿ ಹೋಗುತ್ತದೆ. ಆದರೆ ಒಳಗಣ ಕತ್ತಲೆ ಇದೆಯಲ್ಲಾ, ಅದು ಬೆಳಕನ್ನು ತನ್ನ ಬಳಿ ಬರಲು ಬಿಡುವುದಿಲ್ಲ. ಹಲವಾರು ನೆಪಗಳನ್ನು ಮುಂದಿಟ್ಟು ತನ್ನ ಬಲವನ್ನೆಲ್ಲ ಬಳಸಿ ಬೆಳಕನ್ನು ಆಚೆ ದಬ್ಬುತ್ತದೆ. ಒಳಗಣ್ಣಿನ ಕುರುಡು ನೋಡಲಾರದ್ದು ಮಾತ್ರವಲ್ಲ, ನೋಡಲು ನಿರಾಕರಿಸುವಂಥದ್ದು. ನೋಡುವ ಬಯಕೆಯೇ ಅದಕ್ಕಿರದು. ತಾನು ಕಟ್ಟಿಕೊಂಡಿರುವುದು ಕುರೂಪಿ ಎಂದು ಗಟ್ಟಿಯಾದ ಮೇಲೆ, ಅದನ್ನು ಕಾಣುವುದಾದರೂ ಏತಕ್ಕೆ? ಕಂಡು ಹೇಸುವುದಾದರೂ ಏತಕ್ಕೆ? ಕುರುಡಾಗಿರುವುದೇ ಲೇಸು.

ಸುಂದೋಪಸುಂದರು

ಸುಂದ, ಉಪಸುಂದರೆಂಬಿಬ್ಬರು ರಾಕ್ಷಸರು; ಮಹಾಬಲಶಾಲಿಗಳು; ಕ್ರೂರರು.

ತಪಸ್ಸು ಮಾಡಿ ಬ್ರಹ್ಮನನ್ನು ಒಲಿಸಿ ವರವನ್ನು ಪಡೆದುಕೊಂಡರು; ಮೂರು ಲೋಕಗಳಲ್ಲಿ ಯಾರಿಂದಲೂ ತಮಗೆ ಸಾವು ಬರಬಾರದೆಂಬುದು ಅವರು ಬಯಸಿದ ವರ.

ಸಾಯದೆ ಇರುವುದು ಸಾಧ್ಯವೆ? ಬ್ರಹ್ಮನೇ ಆದರೂ ವರವನ್ನು ನೀಡುವುದು ಹೇಗೆ? ಅಣ್ಣತಮ್ಮಂದಿರು ಆಗ ಅನ್ಯೋನ್ಯವಾಗಿಯೇ ಇದ್ದರು; ಸರಿ, ವರಕ್ಕೊಂದು ಅಡಿ ಟಿಪ್ಪಣಿ- ಅಣ್ಣನಿಂದ ತಮ್ಮನೇ, ತಮ್ಮನಿಂದ ಅಣ್ಣನೇ ಕೊಲ್ಲಲ್ಪಡಬಹುದು, ಬೇರೆ ಯಾರಿಂದಲೂ ಅವರನ್ನು ಸಾಯಿಸುವುದಾಗದು. ಅಣ್ಣ ತಮ್ಮಂದಿರು ಜೊತೆಯಾಗಿಯೇ ಇದ್ದು ಲೋಕಗಳಲ್ಲಿ ಹಾವಳಿಯನ್ನು ಆರಂಭಿಸಿದರು. ಎಷ್ಟು ಕಾಲ ಇವರ ಉಪಟಳವನ್ನು ದೇವತೆಗಳು ತಡೆದುಕೊಂಡಾರು?

ಕಡೆಗೊಮ್ಮೆ ಕಡು ಚೆಲುವೆ ತಿಲೋತ್ತಮೆಯನ್ನು ಅವರೆದುರು ಹರಿಹಾಯಿಸಿದರು. ಇಬ್ಬರೂ ಅವಳ ಮೋಹಕ್ಕೆ ಪಕ್ಕಾದರು; ಇಬ್ಬರಿಗೂ ಅವಳು ಬೇಕು. ಆಗ ಅವರಿಬ್ಬರಲ್ಲಿ ಬಂತು ಬಲಾಬಲ ಪರೀಕ್ಷೆ. ತಿಲೋತ್ತಮೆಯನ್ನು ಪಡೆದುಕೊಳ್ಳಲು ಸೋದರರು ಪರಸ್ಪರ ಬಡಿದಾಡತೊಡಗಿದರು. ಒಬ್ಬರನ್ನೊಬ್ಬರು ಸೆಣಸಿ ಇಬ್ಬರೂ ಸತ್ತರು.

ಪುರಾಣದ ಕತೆ ಇದು. ಆದರೆ ಅದರ ಅನ್ವಯವನ್ನು ನಮ್ಮ ಕಾಲದಲ್ಲೂ ಕಾಣುತ್ತೇವೆ.

ಭ್ರಷ್ಟಾಚಾರದ ರಾಜಕಾರಣದಲ್ಲಿ ಮಿತ್ರರೂ ಹಗೆಗಳಾಗುತ್ತಾರೆ. ಹಗೆಗಳು ಮಿತ್ರರಾಗುತ್ತಾರೆ ಎಂಬುದು ಯಾರಿಗೆ ತಿಳಿಯದು?

ಸಂಪತ್ತೆಂಬ ಸುರಸುಂದರಿಯನ್ನರಸಿ ಎಲ್ಲರೂ ಮುನ್ನುಗ್ಗುವರು. ಒಬ್ಬರನ್ನು ಸೋಲಿಸಲು ಇನ್ನೊಬ್ಬರು ಎಲ್ಲ ಬಗೆಯ ಸನ್ನಾಹವನ್ನು ಮಾಡುವರು. ಕಡೆಗೆ ಇಬ್ಬರೂ ಸೋಲುವರು.

ಅಧಿಕಾರವೆಂಬುದು ಕೂಡ ಸುರಸುಂದರಿಯೆ. ಅದನ್ನು ವಶಮಾಡಿಕೊಳ್ಳುವುದೂ ಹೀಗೆಯೇ; ಪರಸ್ಪರ ಸೆಣೆಸಾಟ ಇದ್ದದ್ದೇ.

ದಕ್ಕುವುದು ತನಗೆ ದಕ್ಕಬೇಕು; ಉಳಿದವರು ಮಣ್ಣುಮುಕ್ಕಬೇಕು. ಇದೇ ಇಲ್ಲಿನ ನೀತಿ.

ಮೂರ್ಖತನ

ಭೋಜ ಪ್ರಬಂಧದ ಒಂದು ಕತೆ.

ಧಾರಾನಗರದ ಅರಸ ಭೋಜರಾಜನ ರಾಣಿಯು ಒಮ್ಮೆ ತನ್ನ ಅಂತಃಪುರದಲ್ಲಿ ಸಾಮುದ್ರಿಕನೊಬ್ಬನಿಂದ ತನ್ನ ಕೈಯನ್ನು ನೋಡಿಸಿಕೊಳ್ಳುತ್ತಿದ್ದಳು. ಅವನೇನೋ ಅವಳಿಗೆ ಭವಿಷ್ಯ ನುಡಿಯುತ್ತಿದ್ದ. ಆ ಸಮಯದಲ್ಲಿ ಭೋಜರಾಜ ಅಂತಃಪುರಕ್ಕೆ ಬಂದ. ಅವನನ್ನು ಕಂಡೊಡನೆ ರಾಣಿಯು ಸಿಟ್ಟಿಗೆದ್ದು 'ನೀನು ಮೂರ್ಖ' ಎಂದಳು. ಅರಸನಿಗೂ ಸಿಟ್ಟು ಬಂದಿತು. ಒಡನೆಯೇ ಹೊರಗೆ ಹೋದ. ಕಂಡವರಿಗೆಲ್ಲ 'ನೀನು ಮೂರ್ಖ' ಎನ್ನತೊಡಗಿದ. ಅವನ ಓಲಗದ ಕವಿಯಾದ ಕಾಳಿದಾಸನಿಗೂ ಇದೇ ಸನ್ಮಾನ ಸಿಕ್ಕಿತು. ಆದರೆ ಕಾಳಿದಾಸ ಸುಮ್ಮನಿರಲಿಲ್ಲ. 'ನಾನೇಕೆ ಮೂರ್ಖನಾದೇನು?' ಎಂದು ಒಂದು ಪದ್ಯ ಹೇಳಿದ. ಇದರಲ್ಲಿ ಮೂರ್ಖರ ಚರ್ಯೆಯೂ ಇದೆ; ಭೋಜರಾಜನು ಮೂರ್ಖನೆನಿಸಿಕೊಂಡದ್ದಕ್ಕೆ ಕಾರಣವೂ ಇದೆ.

ಪದ್ಯದ ಒಕ್ಕಣೆ ಇದು-

'ಅಯ್ಯಾ ಭೋಜರಾಜ, ನಾನೇನು ತಿನ್ನುತ್ತ ನಡೆದಾಡುವೆನೆ? ಇಲ್ಲವೇ ನಗುತ್ತ ಮಾತನಾಡುವೆನೋ? ಹೋದದ್ದಕ್ಕೆ ನಾನೇನು ಚಿಂತಿಸುವುದಿಲ್ಲ; ಮಾಡಿದ ಉಪಕಾರವನ್ನು ಮರೆಯುವುದೂ ಇಲ್ಲ. ಇಬ್ಬರಿರುವಾಗ ನಾನು ಮೂರನೆಯವನಾಗಿ ಅಲ್ಲಿಗೆ ಹೋಗುವುದೂ ಇಲ್ಲ. ಹೇಗೆ ತಾನೆ ಮೂರ್ಖನಾದೇನು?'

ಭೋಜರಾಜನಿಗೆ ತನ್ನ ಮೂರ್ಖತನದ ಅರಿವಾಯಿತು. ಅಂತೂ, ಇದರಲ್ಲಿ ವಿವೇಕಿಗಳ ನಡತೆಯ ಕೆಲವು ಬಗೆಗಳನ್ನು ಹೇಳಲಾಗಿದೆ. ಊಟ ಮಾಡುವಾಗ ಕುಳಿತು ನೆಮ್ಮದಿಯಾಗಿ ಉಣ್ಣಬೇಕು; ನಡೆದಾಡುತ್ತ, ಆತುರವಾಗಿ ತಿನ್ನಬಾರದು. ನಗುವುದೂ ಮಾತನಾಡುವುದೂ ಒಮ್ಮೆಲೆ ನಡೆಯಬಾರದು, ನಡೆಯುವುದು ಸಾಧ್ಯವೂ ಇಲ್ಲವೆನ್ನಿ, ಪ್ರಯತ್ನಪಟ್ಟರೆ ನಗೆಪಾಟಲು. ಕೈಮಿಂಚಿ ಹೋದುದಕ್ಕೆ ದುಃಖಪಟ್ಟು ಪ್ರಯೋಜನವೇನು? ಕೆಲಸ ಹಾಳಾಯಿತೆಂದು ತಲೆಯಮೇಲೆ ಕೈಹೊತ್ತು ಕೂಡುವುದು ಮೂರ್ಖತನ. ಸರಿಯಾಗುವ ಹಾಗಿದ್ದರೆ ಸರಿಪಡಿಸುವ ಯತ್ನ ಮಾಡಬೇಕು; ಅದಿಲ್ಲವಾದರೆ ಅದನ್ನು ಮರೆತುಬಿಡಬೇಕು. ಮರೆಯಬಾರದ್ದೂ ಇದೆ. ನಮಗೆ ಯಾರೋ ಒಂದಿಷ್ಟು ನೆರವಾದರು; ಉಪಕಾರ ಮಾಡಿದರು, ಅದನ್ನು ಮರೆಯಬಹುದೆ? ಕೃತಜ್ಞತೆ ಎನ್ನುವುದು ದೊಡ್ಡ ಗುಣ. ಇಬ್ಬರಿರುವಾಗ ಏನೋ ಮಾತುಕತೆ ನಡೆದಿರುತ್ತದೆ; ಯಾವ ರಹಸ್ಯವೋ, ಏನು ಏಕಾಂತವೋ - ಅಂಥ ಕಡೆ ದಿಢೀರನೆ ನಾವು ಹೋದರೆ ಅವರಿಗೇನು ಸಮಾಧಾನವೆ? ನಮಗಾದರೂ ವಿವೇಕವಿರಬೇಡವೆ?

ಎಂದಿನಂದವೇ ಸಾಕು

ಆಯ್ದಕ್ಕಿ ಮಾರಯ್ಯನ ಮಡದಿ ಲಕ್ಕಮ್ಮ ತನ್ನೊಂದು ವಚನದಲ್ಲಿ
"ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ?"

ಎಂದು ಕೇಳುತ್ತಾಳೆ. ಈ ಮಾತಿನ ಸಂದರ್ಭ ಸ್ವಾರಸ್ಯವಾದುದು. ಗಂಡ ಮಾರಯ್ಯ ಶಿವಭಕ್ತ. ಮಾರಯ್ಯ ಶರಣರ ಮನೆಗಳೆದುರು ಬಿದ್ದಿದ್ದ ಅಕ್ಕಿ ಕಾಳುಗಳನ್ನು ಆಯ್ದು ಕೊಂಡು ಬಂದು ತನ್ನ ಮಡದಿಗೆ ಒಪ್ಪಿಸಿ ದಿನವೂ ಹೊಟ್ಟೆ ಹೊರೆದು ಕೊಳ್ಳುವುದು ಅವನ ಕಾಯಕ. ಹಾಗೆಂದೇ ಅವನು ಆಯ್ದಕ್ಕಿ ಮಾರಯ್ಯನೆನಿಸಿದ.

ಅಕ್ಕಿಯನ್ನು ಆಯ್ದುಕೊಳ್ಳುವುದು ದಿನದಿನದ ಅಗತ್ಯಕ್ಕೆ ತಕ್ಕಷ್ಟೆ. ಆದರೆ ಒಂದು ದಿನ ಎಂದಿಗಿಂತ ಹೆಚ್ಚು ಅಕ್ಕಿಕಾಳು ಅವನ ಸಂಚಿಕೆಯಲ್ಲಿ ಸಂಗ್ರಹವಾಯಿತು. ಅದನ್ನು ಕಂಡ ಲಕ್ಕಮ್ಮ ಮೇಲಿನ ಮಾತನ್ನು ಹೇಳುತ್ತಾಳೆ. 'ಈಸಕ್ಕಿಯ ಆಸೆ ನಿಮಗೇಕೆ' ಎಂದು ಹೇಳಿ ಹೆಚ್ಚಿನ ಅಕ್ಕಿಯನ್ನು ಕೊಂಡೊಯ್ದು ಅಲ್ಲಿಯೇ ಸುರಿಯುವಂತೆ ಸೂಚಿಸುತ್ತಾಳೆ!

ಶಿವ ಕೊಟ್ಟದ್ದು ಸಾಕು, ಎಂದವಳ ಎಣಿಕೆ. ಹೆಚ್ಚನ್ನು ಬಯಸಿದರೆ 'ಈಶ್ವರನೊಪ್ಪ' ಎನ್ನುತ್ತಾಳೆ. ಭಕ್ತರಿಗೆ ಇರಬೇಕಾದ ತೃಪ್ತಿಯ ಮನೋಧರ್ಮ ಇಲ್ಲಿ ಎದ್ದು ಕಾಣುತ್ತದೆ.

ಅರಸಿಗೆ ಆಸೆಯಿರುವುದೇನೋ ಸಹಜವೆ. ಆಳುವವರಿಗೆ ಅಧಿಕಾರ, ಸಂಪತ್ತು, ಪ್ರಭಾವ, ಯಶಸ್ಸು ಎಲ್ಲದರ ಬಯಕೆಯೂ ಇರುತ್ತದೆ. ಅರಸರಲ್ಲದವರಿಗೆ ಆಸೆಯಿಲ್ಲವೆಂದಲ್ಲ; ಅವರಿಗೆ ಅರಸರಾಗುವ ಆಸೆ!

ಆಳಾಗುವುದೂ ಅರಸನಾದೇನೆಂಬ ಬಯಕೆಯ ಬಲದಿಂದಲೆ. ಅರಸನಾಗದೇ ಆಳಾಗೇ ಉಳಿದರೂ ಅರಸನ ಆಸೆಗಳಂತೂ ಒಡಮೂಡಿಕೊಳ್ಳುತ್ತವೆ.

ಬದುಕಲು ಬೇಕಾದುದೆಷ್ಟು ಎಂದು ಕಂಡುಕೊಳ್ಳುವ ವಿವೇಕ ತೋರಿಕೊಳ್ಳುವುದು ಕಷ್ಟ. ಬೇಕಾದುದನ್ನು ಶಿವನೇ ಕೊಡುತ್ತಾನೆ ಎಂದು ಚಿಂತೆಯಿಲ್ಲದೆ ಇರುವುದು ಇನ್ನೂ ಕಷ್ಟ!

ಕಾರಣ-ಕಾರ್ಯ

ನಾಥಪಂಥದ ಯೋಗಿಯೊಬ್ಬ ತನ್ನ ಶಿಷ್ಯರೊಂದಿಗೆ ಹಳ್ಳಿಯ ಇಕ್ಕಟ್ಟು ದಾರಿಯಲ್ಲಿ ನಡೆದು ಹೋಗುತ್ತಿದ್ದ. ಪಕ್ಕದಲ್ಲೇ ಮನೆಗಳು.

ಇದ್ದಕ್ಕಿದ್ದಂತೆ ಒಂದು ಮನೆಯ ಸೂರಿನಿಂದ ಒಬ್ಬಾತ ಜಾರಿ, ನಡೆದುಹೋಗುತ್ತಿದ್ದ ಯೋಗಿಯ ತಲೆಯ ಮೇಲೆ ಬಿದ್ದ! ಬಿದ್ದವನಿಗೆ ಏನೂ ಪೆಟ್ಟಾಗಲಿಲ್ಲ; ಆದರೆ ಯೋಗಿಯ ತೋಳು ಮುರಿಯಿತು. ಚಿಕಿತ್ಸೆಗೆ ಅವನನ್ನು ಒಯ್ಯಬೇಕಾಯಿತು. ಚಿಕಿತ್ಸೆ ಮುಗಿದಮೇಲೆ ಶಿಷ್ಯರು ಗುರುವನ್ನು ಕೇಳಿದರು — "ಸ್ವಾಮಿ ಈ ಘಟನೆಯಿಂದ ನಾವು ಕಲಿಯಬೇಕಾದುದು ಏನಾದರೂ ಇದೆಯೆ?" ಯೋಗಿ ನಗುತ್ತ ಹೇಳಿದ- "ಕಲಿಯಬೇಕಾದುದು ಇಲ್ಲದೆ ಏನು? ಕಾರಣ-ಕಾರ್ಯಗಳ ನಡುವೆ ಇರುವ ನಂಟು ನೋಡಿ. ಮೇಲಿನಿಂದ ಬೀಳುವುದು ಕಾರಣ; ಕೈಕಾಲು ಮುರಿದುಕೊಳ್ಳುವುದು ಕಾರ್ಯ. ಈ ತಿಳಿವಳಿಕೆ ಎಷ್ಟರಮಟ್ಟಿಗೆ ದಿಟ? ಬಿದ್ದವನು ಅವನು; ಕೈಮುರಿದುಕೊಂಡವನು ನಾನು! ನಾನೇನು ಮೇಲಿನಿಂದ ಬೀಳಲಿಲ್ಲ; ಅವನೇನು ಕೈಕಾಲು ಮುರಿದುಕೊಳ್ಳಲಿಲ್ಲ. ಎಲ್ಲಿಯ ಕಾರಣ, ಯಾವ ಕಾರ್ಯ? ಕಾರಣವಿಲ್ಲದೆ ಕಾರ್ಯ ನಡೆಯುವ ಸಂಭವವಿದೆ; ಕಾರಣವು ಕಾರ್ಯದಲ್ಲಿ ಮುಗಿಯದೆ ಇರುವ ಸಂಭವವೂ ಇದೆ. ಈ ಕಾರಣದಿಂದ ಇದೇ ಕಾರ್ಯ; ಈ ಕಾರ್ಯಕ್ಕೆ ಇದೇ ಕಾರಣ ಎಂದು ಎದೆ ತಟ್ಟಿಕೊಂಡು ಹೇಳುವುದಾದೀತೆ?" ನಮ್ಮ ಸಾಮಾನ್ಯವಾದ ತಿಳಿವಳಿಕೆ ಹೇಗೆ ದಾರಿ ತಪ್ಪಿಸುತ್ತದೆ ಯೆಂದು ತಿಳಿಯ ಹೇಳುವುದು ಯೋಗಿಯ ಉದ್ದೇಶ. ಮೇಲಿನಿಂದ ಬಿದ್ದವನಿಗೆ ಕೈಕಾಲು ಮುರಿಯುತ್ತದೆ; ಎಚ್ಚರದಿಂದಿರಬೇಕು ಎಂದು ಹೇಳುವುದು ವಾಡಿಕೆ. ಆದರೆ ಹಾದಿಯಲ್ಲಿ ನಡೆದುಹೋಗಬೇಡ. ಯಾರಾದರೂ ಮೇಲಿಂದ ನಿನ್ನ ಮೇಲೆ ಬಿದ್ದಾರು ಎಂದು ಯಾರು ಹೇಳುತ್ತಾರೆ? ನಡೆದದ್ದೇನೋ ಹೀಗೆಯೇ, ಸೂರಿನ ಮೇಲಿಂದ ಬಿದ್ದವನಿಗೆ ಯೋಗಿಗೆ ಗಾಸಿಯನ್ನುಂಟುಮಾಡಬೇಕೆಂಬ ಬಯಕೆಯೇನು ಇರಲಿಲ್ಲ. ನಡೆದು ಹೋಗುತ್ತಿದ್ದ ಯೋಗಿಗೆ ತನ್ನ ಕೈ ಮುರಿದುಕೊಳ್ಳಬೇಕೆಂಬ ಕಾತರವೂ ಇರಲಿಲ್ಲ. ಅವನು ಬೀಳುವುದು, ಅದೇ ವೇಳೆಗೆ ಇವನು ಅಲ್ಲಿಗೆ ಬರುವುದು, ಎಂಬ ಆಕಸ್ಮಿಕ ಘಟನೆಯೇ ಇದು. ನಮಗೆ ಒದಗುವ ಎಷ್ಟೋ ಕಷ್ಟಗಳಿಗೆ ಅವರಿವರು ಕಾರಣವೆಂದು ನಾವು ಹಗೆತನ ಸಾಧಿಸುವೆವು. ಇದು ಸರಿಯಲ್ಲವೆಂದು ಯೋಗಿಯ ತಿಳಿವಳಿಕೆ. ಕಾರ್ಯಕಾರಣಗಳಿಗೆ ಇಂಥ ವ್ಯಕ್ತವಾದ ನಂಟು ಇರಲಾರದು.

ನಡೆಯುವ ಒಂದು ಕೆಲಸಕ್ಕೆ ವಿಧಿಯೆಂಬುದು ಅವ್ಯಕ್ತಕಾರಣವಾಗಿರುತ್ತದೆ. ಕಾಲ-ಕರ್ಮ ಕೂಡಿದಾಗ ಆ ಕೆಲಸವನ್ನು ನಡೆಸುತ್ತದೆ.

ಸಾಗರದ ನೀರು

ಈಶ್ವರಚಂದ್ರ ವಿದ್ಯಾಸಾಗರರ ಹೆಸರನ್ನು ಯಾರು ಕೇಳಿಲ್ಲ? ಮತ್ತೆ ರಾಮಕೃಷ್ಣ ಪರಮಹಂಸರ ವಿಚಾರ ಯಾರರಿಯರು?

ಇಬ್ಬರೂ ಸಮಕಾಲಿಕರು. ವಿದ್ಯಾಸಾಗರರು ಕಲ್ಕತ್ತೆಯಲ್ಲಿದ್ದರು; ಪರಮಹಂಸರು ದಕ್ಷಿಣೇಶ್ವರದಲ್ಲಿದ್ದರು; ಕಲ್ಕತ್ತೆಗೆ ಹತ್ತಿರವೇ ದಕ್ಷಿಣೇಶ್ವರ.

ವಿದ್ಯಾಸಾಗರರ ಪ್ರಖ್ಯಾತಿಯನ್ನು ಕೇಳಿ ಪರಮಹಂಸರಿಗೆ ಅವರನ್ನು ಕಾಣಬೇಕೆನಿಸಿತು. ಕಲ್ಕತ್ತೆಗೆ ಹೋದರು. ವಿದ್ಯಾಸಾಗರರನ್ನು ಅವರ ಮನೆಯಲ್ಲಿ ಕಂಡೊಡನೆ -

"ಈವರೆಗೆ ನಾನು ಕೆರೆ, ತೊರೆ, ಹಳ್ಳ, ನದಿಗಳನ್ನಷ್ಟೇ ನೋಡಿದ್ದೆ. ಇಂದು ಸಾಗರವನ್ನು ಸಮೀಪಿಸಿದ್ದೇನೆ!" ಎಂದರು. ಒಡನೆಯೆ ವಿದ್ಯಾಸಾಗರರು "ಸಾಗರದ ನೀರು ಉಪ್ಪುತಾನೆ? ಕುಡಿಯಲು ಬರುತ್ತದೆಯೆ?" ಎಂದು ನಗೆಯಾಡಿದರು.

ಪರಮಹಂಸರೇನು ಹಿಂದುಳಿಯಲಿಲ್ಲ. "ನಾನು ಬಂದಿರುವುದು ನೀರನ್ನು ಕುಡಿಯಲೆಂದಲ್ಲ. ಸಾಗರದ ಆಳಕ್ಕೆ ಮುಳುಗಿ ಮುತ್ತು ಹವಳಗಳನ್ನು ಹೆಕ್ಕಿಕೊಳ್ಳುತ್ತೇನೆ!" ಎಂದುತ್ತರ ಕೊಟ್ಟರು.

ಸಾತ್ವಿಕರು ಸೇರಿದಾಗ ನಡೆಯುವ ಮಾತುಕತೆಯಲ್ಲಿ ಸವಿಯೂ ಕೂಡಿಕೊಳ್ಳುತ್ತದೆ. 'ವಿದ್ಯಾಸಾಗರ' ಎಂಬ ಬಿರುದನ್ನು ಆಗಿನ ಪಂಡಿತರೆಲ್ಲ ಸೇರಿ ಈಶ್ವರಚಂದ್ರರಿಗೆ ಅವರ ಇಪ್ಪತ್ತನೆಯ ವರ್ಷ ವಯಸ್ಸಿನಲ್ಲಿಯೇ ಸಲ್ಲಿಸಿದ್ದರು.

ಆದರೆ ಅದರಿಂದ ಅವರ ತಲೆಯೇನೂ ತಿರುಗಲಿಲ್ಲ.

ವಿದ್ಯೆಗೆ ತಕ್ಕ ವಿನಯ ಅವರಲ್ಲಿ ಎದ್ದು ಕಾಣುತ್ತಿತ್ತು. ಸಾಗರದ ವೈಶಾಲ್ಯ ಬಿರುದಿನ ತಾತ್ಪರ್ಯ; ಆದರೆ ಸಾಗರದಲ್ಲಿಯೂ ದೋಷವಿರದೆ? ಅದರ ನೀರು ಉಪ್ಪು, ಸಣ್ಣ ನದಿಯ ನೀರು ಸಿಹಿ; ಯಾರಾದರೂ ಕುಡಿದಾರು. ಬಾಯಾರಿದವನಿಗೆ ಸಮುದ್ರ ಹೇಗೆ ನೆರವಾದೀತು?

ಇದು ಈಶ್ವರಚಂದ್ರರ ಅರಿವಿನಲ್ಲಿದ್ದುದೇ ಪರಮಹಂಸರೂ ಅವರ ಬಳಿ ಬರಲು ಕಾರಣವಾಯಿತು. ವಿದ್ಯೆಯೂ ವಿನಯವೂ ಕೂಡಿಕೊಂಡಾಗ ತಳದಲ್ಲಿ ಮುತ್ತು-ಹವಳಗಳು ಕಂಡುಕೊಳ್ಳುವುದೇನು ಸೋಜಿಗವಲ್ಲ.

ಖಂಡನೆ-ಮಂಡನೆ

ಒಮ್ಮೆ ಶೃಂಗೇರಿಯ ಹಿಂದಿನ ಸ್ವಾಮಿಗಳಾಗಿದ್ದ ಚಂದ್ರಶೇಖರ ಭಾರತೀಸ್ವಾಮಿಗಳ ಬಳಿ ಒಬ್ಬರು ವಿದ್ವಾಂಸರು ಬಂದರು. ತಾವು ಬರೆದಿದ್ದ ದೊಡ್ಡ ಪುಸ್ತಕವೊಂದನ್ನು ಸ್ವಾಮಿಗಳೆದುರು ಇರಿಸಿ, "ಸನ್ನಿಧಾನ ಇದನ್ನು ಕೃಪೆಯಿಟ್ಟು ಪರಾಂಬರಿಸಬೇಕು" ಎಂದರು.

ಸ್ವಾಮಿಗಳು- "ಇದರಲ್ಲಿ ಏನು ಬರೆದಿದ್ದೀರಿ?" ಎಂದು ಕೇಳಿದರು.

ವಿದ್ವಾಂಸರು "ದ್ವೈತ ಸಿದ್ಧಾಂತದ ಖಂಡನೆಯನ್ನು ಮಾಡಿದ್ದೇನೆ" ಎಂದರು.

ಅದಕ್ಕೆ ಸ್ವಾಮಿಗಳು - "ನೀವು ವೇದಾಂತವನ್ನು ಯಾವ ಉದ್ದೇಶದಿಂದ ಅಧ್ಯಯನ ಮಾಡಿದಿರಿ?"

ವಿದ್ವಾಂಸರ ಉತ್ತರ - "ಮೋಕ್ಷಾಪೇಕ್ಷೆಯಿಂದ" ಎಂದು.

ಸ್ವಾಮಿಗಳು - "ದ್ವೈತಸಿದ್ಧಾಂತವನ್ನು ಖಂಡನೆ ಮಾಡುವುದು ಮೋಕ್ಷಕ್ಕೆ ದಾರಿಯೆಂದು ನಮ್ಮ ಆಚಾರ್ಯರು ಎಲ್ಲಿಯಾದರೂ ಹೇಳಿದ್ದಾರೆಯೆ? ಈ ಪ್ರವೃತ್ತಿ ದ್ವೇಷದಿಂದ ತುಂಬಿದ್ದು, ರಾಗ-ದ್ವೇಷಗಳನ್ನು ಬಿಡದೆ ಮೋಕ್ಷ ದೊರಕುವುದು ಎಲ್ಲಿಯಾದರೂ ಉಂಟೆ?

ನಿಮ್ಮ ಗ್ರಂಥಕ್ಕೆ ಉತ್ತರವಾಗಿ ಅದನ್ನು ಖಂಡಿಸಿ ಬೇರೊಬ್ಬರು ಬರೆದಾರು; ಅದಕ್ಕೆ ನಿಮ್ಮ ಖಂಡನೆ ಇದ್ದೇ ಇರುತ್ತದೆ. ಇದರಿಂದ ದ್ವೇಷಾಸೂಯೆಗಳು ಹೆಚ್ಚುವುದು ಬಿಟ್ಟು ಬೇರೆ ಏನು ಲಾಭವಿದೆ? ದೇವರು ನಿಮಗೆ ತಿಳಿವಳಿಕೆಯನ್ನೂ ಪಾಂಡಿತ್ಯವನ್ನೂ ಕೊಟ್ಟುದು ಇದಕ್ಕಾಗಿಯೆ?

ಈ ಪುಸ್ತಕ ಬರೆಯಲು ನೀವು ಕಳೆದ ಕಾಲವನ್ನು ಪೂಜೆಯಲ್ಲೋ ಧ್ಯಾನದಲ್ಲೋ ಕಳೆದಿದ್ದರೆ ಸಾರ್ಥಕವಾಗುತ್ತಿತ್ತು. ಇಷ್ಟು ವೇಳೆಯನ್ನು ನೀವು ಹಾಳು ಮಾಡಿಕೊಂಡುದು ಸಾಲದೆ, ನಮ್ಮ ವೇಳೆಯನ್ನೂ ಹಾಳುಮಾಡಲು ಬಂದಿದ್ದೀರಲ್ಲ?

'ಇಂಥ ಪುಸ್ತಕಗಳನ್ನು ನಾನು ಕೈಯಿಂದಲೂ ಮುಟ್ಟಲಾರೆ. ತೆಗೆದುಕೊಂಡು ಹೋಗಿ. ಮತ್ತೆ ಇಂಥ ಕೆಲಸಕ್ಕೆ ಕೈಹಾಕದಿರಿ" ಎಂದರು.

ಸಾಧನೆ ಸಾಲದು

ವೈಣಿಕ ಶಿಖಾಮಣಿ ಶೇಷಣ್ಣನವರ ಎಳವೆಯ ನೆನಪುಗಳಲ್ಲೊಂದು.

ಅವರು ಸಣ್ಣವರಿದ್ದಾಗ ಚಿಕ್ಕಸುಬ್ಬರಾಯರು ಎಂಬ ಅರಮನೆಯ ಆಸ್ಥಾನದ ವಿದ್ವಾಂಸರೊಬ್ಬರ ಬಳಿ ಶಿಕ್ಷಣ ಪಡೆಯುತ್ತಿದ್ದರು. ಅವರು ತುಂಬ ನುರಿತ, ಹಿರಿಯ ವೈಣಿಕರಾಗಿದ್ದವರು. ಗುರುಮನೆ-ಅರಮನೆಗಳಲ್ಲಿ ಹೆಸರಾದವರು.

ಶೇಷಣ್ಣನವರದ್ದೂ ಬಾಲಪ್ರತಿಭೆಯೇ. ಅವರ ಕಲಿಕೆ ಏಕಾಗ್ರತೆಯದು; ಎಡೆಬಿಡದೆ ಅಭ್ಯಾಸ. ಇನ್ನೂ ಹದಿಹರೆಯದಲ್ಲಿ ಭೈರವಿರಾಗದ ವಿರಿಬೋಣಿ ವರ್ಣವನ್ನು ಗುರು ಕಲಿಸುತ್ತಿದ್ದರು; ಕಷ್ಟಸಾಧ್ಯವಾದ ಪಾಠ. ಎಚ್ಚರದಿಂದಲೇ ಮೂರು ಕಾಲಗಳಲ್ಲಿ ಅದನ್ನು ನುಡಿಸುವುದು ಶೇಷಣ್ಣನವರಿಗೆ ಕರಗತವಾಯಿತು. ಆದರೆ ಅದನ್ನು ಗುರುಗಳ ಮುಂದೆ ನುಡಿಸಿದಾಗ ಗುರುಗಳು "ಸಾಧಕ ಸಾಲದು; ಹೋಗು, ಇನ್ನಷ್ಟು ಅಭ್ಯಾಸ ಮಾಡು" ಎಂದುಬಿಟ್ಟರು. ಹೀಗೆ ನಾಲ್ಕಾರು ಬಾರಿ ಆಯಿತು. ಶೇಷಣ್ಣನವರಿಗೆ ಸ್ವಲ್ಪ ಬೇಸರವಾಯಿತು. ರಾತ್ರಿಯೆಲ್ಲ ನಿದ್ದೆ ಕೆಟ್ಟು ವರ್ಣವನ್ನು ಮತ್ತೆ ಅಭ್ಯಾಸ ಮಾಡಿದರು; ನೂರಾರು ಬಾರಿ ನುಡಿಸಿಕೊಂಡರು. ಈ ಬಾರಿಯಾದರೂ ಗುರುಗಳನ್ನು ಮೆಚ್ಚಿಸಲೇಬೇಕು; ಅವರಿಂದ ಭಲೆ ಎನ್ನಿಸಿಕೊಳ್ಳಬೇಕೆಂಬ ಕಾತರ ಅವರದ್ದು. ಈ ಬಾರಿಯೂ ಗುರುಗಳಿಗೆ ತೃಪ್ತಿಯಾಗದೆ ಹೋದರೆ ಪಾಠವನ್ನೇ ಬಿಟ್ಟುಬಿಡುವುದು ಎಂದೂ ನಿಶ್ಚಯಿಸಿಕೊಂಡರು. ಮರುದಿನ ಮುಂಜಾನೆ ಪಾಠದ ವೇಳೆಯಲ್ಲಿ ವರ್ಣವನ್ನು ಗುರುಗಳ ಮುಂದೆ ನುಡಿಸಿದರು; ಮತ್ತೆ ಗುರುಗಳು 'ಸಾಧಕ ಸಾಲದು' ಎಂದುಬಿಟ್ಟರು. ಶೇಷಣ್ಣನವರಿಗೆ ಸಿಟ್ಟು ಬಂದಿತು; 'ಮತ್ತೆ ಹೇಗೆ ನುಡಿಸಬೇಕೋ ಕಾಣೆ' ಎಂದುಬಿಟ್ಟರು! ಗುರುಗಳು 'ಆ, ಹಾಗೋ? ಹೇಗೆ ನುಡಿಸಬೇಕೆಂಬುದನ್ನು ನೋಡು' ಎಂದು ಹೇಳಿ ವೀಣೆಯನ್ನು ಕೈಗೆತ್ತಿಕೊಂಡು ವರ್ಣವನ್ನು ಮುಂದಿನ ಮೂರುಕಾಲಗಳಲ್ಲಿ ನಿರರ್ಗಳವಾಗಿ ನುಡಿಸಿ, ಸ್ವರಕಲ್ಪನೆಯನ್ನೂ ಅರ್ಧಗಂಟೆ ಮಾಡಿದರು.

ಶೇಷಣ್ಣ ಬೆರಗಾಗಿ ದಿಗ್ಗನೆದ್ದು ಗುರುಗಳ ಕಾಲಿಗೆ ಬಿದ್ದರು; ಕಣ್ಣಿಂದ ನೀರು ಸುರಿಯಿತು. "ದುಡುಕಿ ನುಡಿದದ್ದು ತಪ್ಪಾಯಿತು. ಸಾಧಕ ಸಾಲದೆಂಬುದು ಮನದಟ್ಟಾಯಿತು. ಗುರುಗಳು ಮನ್ನಿಸಬೇಕು, ಸಾಧಕವೆಂದರೆ ಏನೆಂಬುದನ್ನು ಈ ದಿನ ಅರಿತುಕೊಂಡೆ" ಎಂದು ಅಂಗಲಾಚಿ ಬೇಡಿಕೊಂಡರು.

ಶಿಷ್ಯನ ಯೋಗ್ಯತೆಯನ್ನು ತಿಳಿದೇ ಅಲ್ಲವೆ ಸಾಧನೆಯಲ್ಲಿ ತೊಡಗಿಸುವುದು?

ರಸಿಕ-ಪಂಡಿತ

ಒಮ್ಮೆ ನದಿಯೊಂದರ ದಂಡೆಯ ಮೇಲೆ ಸ್ನೇಹಿತರಿಬ್ಬರು ಅಡ್ಡಾಡುತ್ತಿದ್ದರು. ನದಿಯ ನೀರಿನಲ್ಲಿ ಮೀನು ಹರಿದಾಡುತ್ತಿತ್ತು. ಈ ಸ್ನೇಹಿತರಲ್ಲಿ ಒಬ್ಬ ರಸಿಕ, ಇನ್ನೊಬ್ಬ ಪಂಡಿತ. ರಸಿಕನು ಮೀನನ್ನೇ ನೋಡುತ್ತಿದ್ದನು. ತನ್ನ ಸ್ನೇಹಿತನ ಭುಜ ತಟ್ಟಿ ಹೇಳಿದ-

'ನೋಡು, ಈ ಮೀನು ಎಷ್ಟು ಸಂತೋಷದಿಂದ ಈಜಾಡುತ್ತಿದೆ!' ಪಂಡಿತನು ಮೀನಿನ ಕಡೆ ನೋಡಲೂ ಇಲ್ಲ, ಅವನು ಕೇಳಿದ, 'ಅಯ್ಯಾ, ನೀನೇನು ಮೀನಲ್ಲ, ಮೀನಿಗೆ ಸಂತೋಷ ಎಂದು ನಿನಗೆ ತಿಳಿದದ್ದು ಹೇಗೆ ?' ರಸಿಕ ನಗುತ್ತ ಕೇಳಿದ-

'ನೀನೇನು ನಾನಲ್ಲ. ನನಗೆ ತಿಳಿಯಲಿಲ್ಲವೆಂದು ನಿನಗೆ ತಿಳಿದದ್ದು ಹೇಗೆ ?' ಈ ಸಂಭಾಷಣೆಯ ಸ್ವಾರಸ್ಯ ಇರುವುದು ಅವರಿಬ್ಬರ ಮನೋಧರ್ಮಗಳಲ್ಲಿ. ರಸಿಕನು ಮೀನು ಸ್ವತಂತ್ರವಾಗಿ, ಏನೂ ಆತಂಕವಿಲ್ಲದೆ ಈಜಾಡುತ್ತಿರುವುದನ್ನು ಕಂಡು, ತಾನೂ ಅದರಲ್ಲಿ ಪಾಲ್ಗೊಂಡು, ತಾನು ಅನುಭವಿಸಿದ ಸಂತೋಷ ಮೀನಿಗೂ ಇದ್ದೀತು ಎಂದು ಭಾವಿಸಿದ. ಅವನ ದೃಷ್ಟಿಯಲ್ಲಿ ತಾನು ಬೇರೆ ಅಲ್ಲ, ಮೀನು ಬೇರೆ ಅಲ್ಲ. ಪಂಡಿತನಿಗಾದರೆ ಈ ತಾದಾತ್ಮ್ಯಭಾವ ಸಾಧ್ಯವಿರದು. ಮೀನು ಈಜಾಡುವುದನ್ನು ಅವನೂ ನೋಡಿದ್ದಾನು ; ಆದರೆ ಮೀನು ಈಜಾಡುವಾಗ ಯಾವ ಸಂತೋಷವನ್ನು ಪಡೆಯಬಹುದು ಎನ್ನುವ ಕಲ್ಪನೆ ಅವನ ಪಾಲಿಗೆ ಇಲ್ಲ. ತಾನೇ ಮೀನಾಗಿ ಅದರ ಅನುಭವದಲ್ಲಿ ಪಾಲ್ಗೊಳ್ಳುವುದಂತೂ ಅವನಿಗೆ ಅಸಾಧ್ಯವೇ! ಹಾಗೆ ಮಾಡುವುದು ಅಸಾಧುವೆಂದೂ ಅವನ ಎಣಿಕೆಯಿದ್ದೀತು. ಯಾವುದಾದರೂ ಅದರ ಒಳಹೊಕ್ಕು, ಅದರ ನೆಲೆಯಲ್ಲೇ ನಿಂತು, ತನ್ನ ಇರವನ್ನು ಮರೆಮಾಚಿ, ಅನುಭವಿಸುವುದು ರಸಿಕನ ಪ್ರವೃತ್ತಿ. ಮೀನಿಗೂ ತನಗೂ ಅಂತರವನ್ನು ಅವನು ಏರ್ಪಡಿಸಿಕೊಳ್ಳಲಾರ. ಪಂಡಿತನೋ, ಏನನ್ನಾಗಲಿ ಹೊರಗಿನಿಂದಲೇ ನೋಡುವವನು. ನೋಡುವವನು ತಾನು, ನೋಟ ಹೊರಗಿನದು. ನೋಡುವವನು ನೋಟದಲ್ಲೆ ಮೈಮರತರೆ ಹೇಗೆ ?

ರಸಿಕನದು ಭಾವುಕ ವ್ಯಾಪಾರ. ಅವನನ್ನು ತೊಡಗಿಸುವುದು ಹೃದಯ. ಪಂಡಿತನ ವ್ಯವಹಾರವೆಲ್ಲ ಮನಸ್ಸಿನಲ್ಲಿ ; ಅವನಿಗೆ ಆಲೋಚನೆಗಳೇ ಮುಖ್ಯ. ಭಾವ-ಅನುಭಾವ ಗಳಿಗೂ ಅವನಿಗೂ ತುಂಬ ದೂರ. ನೋಡಿದ್ದನ್ನು ಅಳೆಯುವುದು, ತೂಗುವುದು, ವಿಶ್ಲೇಷಿಸುವುದು ಇವೆಲ್ಲ ಅವನ ಹವ್ಯಾಸಗಳು. ಒಳಹೊಕ್ಕು ಅನುಭವಿಸುವುದು ಮನಸ್ಸಿನ ಕೆಲಸವಲ್ಲ. ಅದು ಹೃದಯ ಕೆಲಸಮಾಡುವ ಬಗೆ.

ಬದುಕಿನಲ್ಲಿ ಎರಡೂ ಪ್ರವೃತ್ತಿಗಳು ಬೇಕು, ದಿಟ. ಆದರೆ ಬದುಕನ್ನು ಬೆಳಗಿಸುವುದು ಹೃದಯವೇ, ಮನಸ್ಸಲ್ಲ.

ಇಲಿ-ಬಾಲ

"ಎಲ್ಲಾ ಹೊಕ್ಕಿತು, ಬಾಲ ಮಾತ್ರ ಉಳಿಯಿತು" ಎಂದವನ ಕತೆಯನ್ನು ಕೇಳಿದ್ದೀರಲ್ಲವೆ ?

ಹಳೆಯ ಕಾಲದಲ್ಲಿ ಕೂಲಿಮಠವೊಂದರಲ್ಲಿ ಹತ್ತಾರು ಹುಡುಗರಿಗೆ ಪಾಠ ಹೇಳುತ್ತಿದ್ದ ಒಬ್ಬ ಗುರು. ಕೇಳುತ್ತ ಕುಳಿತಿದ್ದವರಲ್ಲಿ ಒಬ್ಬನಿಗೆ ಪಾಠ ಹಿಡಿಸಲಿಲ್ಲ. ಮನಸ್ಸು ಎಲ್ಲೆಲ್ಲೋ ಹರಿದಾಡುತ್ತಿತ್ತು. ಇದ್ದಕ್ಕಿದ್ದಂತೆ ಒಂದು ಇಲಿ ಎತ್ತಣಿಂದಲೋ ಬಂದು, ಗೋಡೆ ಬದಿಯ ಬಿಲವೊಂದತ್ತ ಹೋದದ್ದು ಈ ಹುಡುಗನ ಕಣ್ಣಿಗೆ ಬಿತ್ತು. ಅವನಿಗೆ ಪಾಠಕ್ಕಿಂತ ಈ ನೋಟವೇ ರುಚಿಸಿತು. ಇಲಿಯನ್ನೇ ಎವೆಯಿಕ್ಕದೆ ನೋಡುತ್ತಿದ್ದ. ಇದು ಗುರುಗಳಿಗೆ ತಿಳಿಯದು. ಗುರುಗಳು ಶಿಷ್ಯರನ್ನು "ವಿಷಯ ಮನಸ್ಸಿಗೆ ಹೊಕ್ಕಿತೆ ?"ಎಂದು ಆಗಾಗ ಕೇಳುವುದು ವಾಡಿಕೆ. ಈ ಬಾರಿ ಈ ಹುಡುಗನನ್ನೇ ಹೆಸರು ಹಿಡಿದು ಕೂಗಿ "ಏನಯ್ಯಾ, ಮನಸ್ಸಿಗೆ ಹೊಕ್ಕಿತೆ ?"ಎಂದು ಕೇಳಿದರು. ತನ್ನ ಹೆಸರನ್ನು ಹಿಡಿದು ಗುರುಗಳು ಕೂಗಿದ್ದು ಇವನ ಸಮಾಧಿಯನ್ನು ಕದಲಿಸಿತು; ಅವರ ಪ್ರಶ್ನೆಯೂ ಕಿವಿಗೆ ಬಿದ್ದಿತು.

ಒಡನೆಯೇ ಅವನು ಎದ್ದು ನಿಂತು "ಎಲ್ಲಾ ಹೊಕ್ಕಿತು ಗುರುಗಳೇ, ಬಾಲವೊಂದು ಉಳಿಯಿತು" ಎಂದುತ್ತರಕೊಟ್ಟ.

ಆ ವೇಳೆಗೆ ಇಲಿ ಬಿಲದೊಳಗೆ ಹೊಕ್ಕು, ಅದರ ಬಾಲ ಮಾತ್ರ ಹೊರಗೇ ಉಳಿದುಕೊಂಡಿತ್ತು. ಅದನ್ನೇ ನೋಡುತ್ತಿದ್ದು, ಪಾಠವನ್ನು ಒಂದಿಷ್ಟೂ ಕೇಳಿಸಿ ಕೊಳ್ಳದಿದ್ದವನು ಬೇರೆ ಏನುತ್ತರ ಕೊಟ್ಟಾನು ?

ಆದರೆ ಈ ಉತ್ತರದಿಂದ ಗುರುಗಳು ಕಕ್ಕಾಬಿಕ್ಕಿಯಾದರು. ಅವರು ಇಲಿಯನ್ನು ಕಂಡಿರಲಿಲ್ಲ. ಅದು ಬಿಲ ಹೊಕ್ಕಿದ್ದನ್ನು ಗಮನಿಸಿರಲಿಲ್ಲ. ಹೀಗಾಗಿ ಅವನ ಮಾತು ಅವರಿಗೆ ಅರ್ಥವಾಗಲಿಲ್ಲ.

ಇಂದು ನಮ್ಮ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಆಗುತ್ತಿರುವುದು ಇದೇ. ವಿದ್ಯಾರ್ಥಿಗಳಿಗೆ ವಿದ್ಯೆಯ ಮೇಲೆ ಒಲವಿರದು; ಅವರ ಗಮನವೆಲ್ಲ ಹುದ್ದೆಯ ಕಡೆಗೆ.

ಇನ್ನು ಉದ್ಯೋಗಕ್ಕಾಗಿಯೇ ವಿದ್ಯೆ ಎನ್ನುವಂತಾಗಲಂತೂ ಕೇಳುವುದೇನು? ಎಲ್ಲ ಹುಡುಗರ ಗಮನವೂ ಇಲಿಯ ಕಡೆಗೇ!

ಪಾಠ ಮುಗಿಯುವುದೂ ಮೈಯೆಲ್ಲ ಬಿಲದೊಳಗೆ ಹೊಕ್ಕು ಬಾಲವೊಂದು ಹೊರಗೆ ಕಾಣಿಸಿಕೊಳ್ಳುವಾಗಲೇ! ಇನ್ನು ಹಿಡಿಯಬೇಕಾದುದು ಬಾಲವನ್ನಷ್ಟೆ ಅಲ್ಲವೆ?

ತ್ರಿಕರಣಶುದ್ಧಿ

'ತ್ರಿಕರಣಶುದ್ಧಿ' ಎಂಬ ಮಾತು ಬಳಕೆಯಲ್ಲಿದೆಯಷ್ಟೆ? ಮೂರೂ ಕರಣಗಳಲ್ಲಿ ಒಮ್ಮತ, ಔಚಿತ್ಯ, ಅನ್ಯೋನ್ಯ ಎಂದರ್ಥ. ಆದರೆ ಕರಣ ಎಂದರೇನು.? ಮಾಡುವ ಕೆಲಸಕ್ಕೆ ನೆರವಾಗುವ ವಿವರಕ್ಕೆ ಕರಣವೆಂದು ಹೆಸರು. ನಿದರ್ಶನಕ್ಕೆ ಇಂದ್ರಿಯಗಳು ಕರಣಗಳು. ಕಾಣಲು ಕಣ್ಣು, ಕೇಳಲು ಕಿವಿ, ಹಿಡಿಯಲು ಕೈ, ನಡೆಯಲು ಕಾಲು ನೆರವಾಗುವಂತೆ. ಇವೆಲ್ಲಕ್ಕೂ ಸಮನಾದ ಕರಣ ಒಳಗಿನ ಮನಸ್ಸು; ಅಂತಃಕರಣ. ತ್ರಿಕರಣವೆನ್ನುವಾಗ ಮನಸ್ಸು, ಮಾತು, ಮೈ ಮೂರೂ ಸೇರುತ್ತವೆ; ಸಂಸ್ಕೃತದಲ್ಲಿ ಮನೋ-ವಾಕ್-ಕಾಯ ಎನ್ನುತ್ತಾರೆ.

ಯಾವುದೆ ಕೆಲಸವನ್ನು ಕೈಗೊಂಡರೂ ಅದರಲ್ಲಿ ಕೈಯಾರೆ ಮಾಡಬೇಕಾದ ಭಾಗ ಇರುತ್ತದೆ; ಮಾತಿನ ಬಳಕೆಯೂ ಬರುತ್ತದೆ. ಇವೆರಡಕ್ಕೂ ಆಸರೆಯಾಗಿ ಮನಸ್ಸಿನ ಪಾತ್ರ ಇರುತ್ತದೆ. ಬಯಕೆಗಳು, ಭಾವನೆಗಳು, ಆಲೋಚನೆಗಳು, ಅಂಜಿಕೆಗಳು, ದುಗುಡ, ದುಮ್ಮಾನ ಇವೆಲ್ಲ ಮನಸ್ಸಿನ ಬಗೆಬಗೆಯ ರೂಪಗಳು. ಮನಸ್ಸಿನ ಕಲ್ಪನೆ ಸ್ಪಷ್ಟವಾಗಿದ್ದು ದೃಢವಾಗಿರುವುದು; ಅದಕ್ಕನುಗುಣವಾಗಿ ಹಿತಮಿತವಾದ ಮಾತು; ಎರಡಕ್ಕೂ ಅಪಚಾರವಾಗದಂತೆ ಸಮರ್ಥವಾದ ಮತ್ತು ಸಮರ್ಪಕವಾದ ಕೈಕೆಲಸ. ಹೀಗೆ ಮೂರೂ ಕೂಡಿಕೊಂಡರೆ ಅದು ತ್ರಿಕರಣಶುದ್ಧಿ. ಆಡುವ ಮಾತು ಏನೋ. ಮನಸ್ಸಿನಲ್ಲಿರುವುದು ಮತ್ತೇನೋ. ಕೈಯಿಂದ ಮಾಡುವ ಕೆಲಸ ಎರಡರಿಂದಲೂ ಬೇರೆಯಾದುದು. ಹೀಗಾದರೆ ಹಿಡಿದ ಕೆಲಸ ಊರ್ಜಿತವಾಗದು.

ಆಡುವ ಮಾತಿನ ಹಿಂದೆ, ಮುಂದೆ ಸಮನಾಗಿರಬೇಕು. ಮಾತಿನ ಹಿಂದೆ ಮನಸ್ಸು, ಮಾತಿನ ಮುಂದೆ ಕೆಲಸ. ಮನಸ್ಸಿದ್ದಂತೆಯೇ ಮಾತು; ಮಾತನಾಡಿದಂತೆಯೆ ಕೆಲಸ ಇರಬೇಕಲ್ಲವೆ? ಮನಸ್ಸು ವಿಚಾರ ಮಾಡಿ ಔಚಿತ್ಯವನ್ನು ಕಂಡುಕೊಂಡು ಒಂದು ನಿರ್ಧಾರಕ್ಕೆ ಬರಬೇಕು. ಮಾತು ಸ್ಪಷ್ಟವಾಗಿ, ನಯವಾಗಿ, ಮಧುರವಾಗಿರಬೇಕು; ಯಾರನ್ನೂ ನೋಯಿಸಬಾರದು. ಕೆಲಸ ಸಮರ್ಥವಾಗಿ ನಿರ್ವಂಚನೆಯಿಂದ ಕೂಡಿರಬೇಕು. ತನ್ನ ಒಳಿತು, ಹೆರವರ ಹಿತ ಎರಡನ್ನೂ ಗಮನದಲ್ಲಿರಿಸಿಕೊಂಡು ನಮ್ಮ ದೇಹ, ಮಾತು, ಮನಸ್ಸು ಮೂರನ್ನೂ ನೇರ್ಪಡಿಸಿಕೊಂಡು ಬಳಸಿದಾಗಲೆ ತ್ರಿಕರಣಶುದ್ಧಿ.

ಮಾತು-ಮನಸ್ಸು

ಮನುಷ್ಯನ ಸಾಹಸಗಳಲ್ಲಿ ಮೊದಲನೆಯದು- ಮಾತಿಗೂ ಮನಸ್ಸಿಗೂ ನಿಲುಕದ ತತ್ತ್ವವೊಂದನ್ನು ತನ್ನ ಅನುಭವಕ್ಕೆ ತಂದುಕೊಳ್ಳುವುದು. ಇದೇ ಎಲ್ಲ ಮತಧರ್ಮಗಳಿಗೂ ಮೂಲದ್ರವ್ಯ. ಹಾಗೆ ಅದನ್ನು ಅನುಭವಕ್ಕೆ ತಂದುಕೊಳ್ಳಬೇಕೆಂದರೂ ಅದಕ್ಕೆ ಸಾಧನಗಳು ಇವೇ- ಮಾತು, ಮನಸ್ಸು, ಮೂರನೆಯ ಸಾಧನವೇನಾದರೂ ಇದೆಯೋ? ಮಾತಿನ ಮಿತಿಯನ್ನೂ ಮನಸ್ಸಿನ ದೌರ್ಬಲ್ಯವನ್ನೂ ಅರಿತುಕೊಂಡವರು ಎರಡನ್ನೂ ದಾಟಿ ಹೋಗಲೆತ್ನಿಸುವುದು ಸಹಜವೇ. ತತ್ತ್ವವಾದರೂ ಅವುಗಳಾಚೆಯೇ ಇರುವುದು ತಾನೆ? ಆದರೆ ಮಾತೂ, ಮನಸ್ಸೂ ಮನುಷ್ಯನಿಗೆ ಸ್ವಭಾವಸಿದ್ಧವಾದ ಸಾಧನಗಳು, ಶಕ್ತಿಗಳು. ಅವನ್ನು ಕೈಬಿಡುವುದು ತುಂಬ ಕಷ್ಟದ ಕೆಲಸವೇ. ದೂರದ ಗುರಿ ನಮ್ಮೆದುರಿಗಿದ್ದರೂ ಹತ್ತಿರದ ಈ ನೆರವು ನಮ್ಮನ್ನು ಬಿಡಲಾರದು. ಅಪ್ಪಿಕೊಂಡ ಕರಡಿಯನ್ನು ನಾವು ಬಿಡಬೇಕೆಂದರೂ ಕರಡಿ ನಮ್ಮನ್ನು ಬಿಡಬೇಕಲ್ಲ? ಮಾತು, ಮನಸ್ಸುಗಳು ಗುರಿಯ ಕಡೆ ನಮ್ಮನ್ನು ನಡೆಯಿಸುವುದೆಂಬ ನಂಬಿಕೆಯೂ ಇರದು! ಈಗಿರುವ ಮತಧರ್ಮಗಳ ಸೆಣಸಾಟವನ್ನು ನೋಡಿದರೆ, ಮಾತು-ಮನಸ್ಸುಗಳ ಪಾತ್ರ ಅರ್ಥವಾದೀತು. ಅವನ್ನೇ ಅವಲಂಬಿಸಿದರೆ ಆಗುವುದು ಅನರ್ಥವೇ.

ಇಷ್ಟು ಮಾತು, ಮನಸ್ಸುಗಳ ಕೆಲಸವನ್ನು ನಿಲ್ಲಿಸುವ ಹವಣಿಕೆಯೂ ನಡೆದಿದೆ. ಜಪ, ಧ್ಯಾನ, ಯೋಗ ಇವೆಲ್ಲ ಈ ಪ್ರಯತ್ನಗಳೇ. ಮಾತು, ಮನಸ್ಸು ಎರಡರ ಹರವಿನಲ್ಲಿ ತತ್ತ್ವ ಕಾಣಿಸಿಕೊಂಡಾಗ ಅದನ್ನು ಸಗುಣವೆನ್ನುತ್ತಾರೆ. ಈ ಹರವಿನ ಹಿಡಿತದಿಂದ ದೂರಾಗಿ ತತ್ತ್ವ ತೋರಿಕೊಳ್ಳುವುದಾದರೆ ಅದು ನಿರ್ಗುಣ. ನಿರ್ಗುಣದಲ್ಲಿ ಮಾತಿನ, ಮನಸ್ಸಿನ ಕೆಲಸವಿರದು; ಬರಿಯ ಅನುಭವ. ಮೂಕ ಕಂಡ ಕನಸಿನಂತೆ, ಅದನ್ನು ಯಾರಿಗೂ ಹೇಗೂ ತಿಳಿಸುವಂತಿಲ್ಲ! ಸಗುಣವಾದರೆ ವರ್ಣನೆ, ಕೀರ್ತನೆ, ಅರ್ಚನೆ, ಉಪಾಸನೆ ಎಲ್ಲವೂ ಸಾಧ್ಯವಾದೀತು. ಆದರೆ ಎಲ್ಲವೂ ಮಾತು-ಮನಸ್ಸುಗಳ ಅಂಕೆಯೊಳಗೆ.

ಕಿವಿ-ಬಾಯಿ

ನಿಸರ್ಗದಿಂದ ನಾವು ಪಡೆದುಕೊಂಡಿರುವುದು ಕಿವಿಗಳೆರಡು. ಬಾಯಿ ಒಂದೆ, ಕಿವಿಗಳು ತೆರೆದೇ ಇರುತ್ತವೆ. ಬಾಯಿಯನ್ನಾದರೆ ಮುಚ್ಚಬಹುದು. ಅದೇಕೆ ಬಲ್ಲಿರಾ? ದಾರ್ಶನಿಕನೊಬ್ಬನ ಉತ್ತರ-ನಾವು ಮಾತನಾಡುವುದಕ್ಕಿಂತ ಹೆಚ್ಚಾಗಿ ಇತರರು ಹೇಳುವುದನ್ನು ಕೇಳಬೇಕೆಂದು.

ಇನ್ನೊಬ್ಬ ಬುದ್ಧಿವಂತನ ಉತ್ತರ-ಇತರರು ಹೇಳಿದ್ದು ಒಂದು ಕಿವಿಯಿಂದ ಒಳಗೆ ಬಂದು ಮತ್ತೊಂದು ಕಿವಿಯಿಂದ ಹಾಗೆಯೇ ಹೊರಹೋಗಲೆಂದು ಎರಡು ಕಿವಿಗಳಿವೆ; ಒಳಗಣ ಬಯಲು ಹೊರಗೆ ಬರಲೆಂದು ಬಾಯಿ ತೆರೆಯುತ್ತದೆ. ಕೇಳುವುದೇನೋ ಕಿವಿಗಳ ಕೆಲಸ; ಆದರೆ ಕೇಳಿದ್ದನ್ನು ಉಳಿಸಿಕೊಳ್ಳುವುದು ಅವುಗಳಿಗೆ ಸಾಧ್ಯವಿಲ್ಲ. ಮನಸ್ಸು ಮಾಡಬೇಕಾದ ಕೆಲಸ ಅದು.

ಕೇಳುವುದರ ಕಡೆ ಮನಸ್ಸಿರದಿದ್ದರೆ ಕಿವಿಗಳು ತೆರೆದಿದ್ದರೂ ಪ್ರಯೋಜನವಿರದು. ಬೇರೆಯವರು ಹೇಳಿದ್ದು ಒಂದು ಕಿವಿಯಿಂದ ಒಳತೂರಿ ಇನ್ನೊಂದು ಕಿವಿಯಿಂದ ಹೊರಹಾಯುವುದು ಸಹಜವೆ. ಎರಡು ಕಿವಿಗಳ ನಡುವೆ ಒಂದು ಮೆದುಳಿದೆಯಲ್ಲವೆ; ಬುದ್ಧಿಯ ವ್ಯಾಪಾರ ಅಲ್ಲಿಯೆ ನಡೆಯುವುದೆಂದು ಎಣಿಕೆ. ಮನಸ್ಸಿನ ನೆಲೆ ಅದೆ ಎಂದೂ ಭಾವನೆ.

ಮಾತು ಸಾಮಾನ್ಯವಾಗಿ ಮನಸ್ಸಿನಿಂದಲೆ ಒದಗಿಬರಬೇಕು. ಕೆಲವರು ಅರ್ಥವಿರದೆ ಮಾತನಾಡುವ ಕಲೆಯನ್ನು ಕರಗತ ಮಾಡಿಕೊಂಡಿರುವುದುಂಟು; ಮನಸ್ಸಿಗೂ ಮಾತಿಗೂ ಯಾವ ನಂಟೂ ಇರದೆ ಮಾತನಾಡುವವರೂ ಉಂಟೆನ್ನಿ. ಆದರೆ ಇದು ಸಾಮಾನ್ಯವಾದ ಸಾಮರ್ಥ್ಯವಲ್ಲ.

ದಾರ್ಶನಿಕ ಹೇಳಿದ್ದರಲ್ಲಿ ತಾತ್ಪರ್ಯವೇನು? ನಮ್ಮಲ್ಲಿ ಬಹುಮಂದಿಗೆ ಮಾತನಾಡುವ ಚಪಲ ಬಹಳ. ಬೇರೆಯವರು ಹೇಳಿದ್ದನ್ನು ಕೇಳಿಸಿಕೊಳ್ಳದೆ ಅದರ ಕಡೆ ಗಮನವಿಡದೆ ತಮ್ಮ ಮನಸ್ಸಿಗೆ ಬಂದದ್ದನ್ನೆ ಬಡಬಡ ಮಾತನಾಡುವರು. ವಾಚಾಳಿಯೆಂಬುದೇನು ಮನ್ನಣೆಯ ಮಾತಲ್ಲ; ಬಾಯಿಬಡಕ ಎಂದೆ ಅದರ ಅರ್ಥ.

ಇದು ಸರಿಯಾದ ದಾರಿಯಲ್ಲವೆಂದು ದಾರ್ಶನಿಕನ ಅಭಿಪ್ರಾಯ. ತಮ್ಮ ನಿಲುವನ್ನೆ ತೋರಿಸಿಕೊಳ್ಳಲು, ಸಮರ್ಥಿಸಿಕೊಳ್ಳಲು ಮಾತನಾಡುವವರು ಬೇರೆಯವರ ನಿಲುವೇನು? ಅಭಿಪ್ರಾಯವೇನು? ಆಕ್ಷೇಪಣೆಯೇನು? ಎಂಬುದನ್ನು ಸಹನೆಯಿಂದ ಕೇಳಿ ತಿಳಿದುಕೊಳ್ಳಬೇಕು.

ಸಾಧ್ಯವಿದ್ದಾಗಲೆಲ್ಲ ಕೇಳ್ಮೆ; ಅಗತ್ಯವಿದ್ದಾಗ ಮಾತ್ರ ಮಾತು.

ನುಡಿಯ ಬೆಳಕು

ಸಂಸ್ಕೃತ ಕವಿಯಾದ ಆಚಾರ್ಯ ದಂಡಿಯ ಮಾತೊಂದಿದೆ-

'ಮಾತೆಂಬ ಬೆಳಕು ಪ್ರಪಂಚವನ್ನು ಬೆಳಗದಿದ್ದರೆ, ಮೂರೂ ಲೋಕಗಳು ಕತ್ತಲೆಯಲ್ಲಿ ಮುಳುಗಿರುತ್ತಿದ್ದುವು.'.

ಮನುಷ್ಯನಿಗೆ ಆಲೋಚಿಸುವ ಶಕ್ತಿಯೂ ಇದೆ; ಆಲೋಚಿಸಿದ್ದನ್ನು ಮಾತುಗಳಲ್ಲಿ ಇತರರಿಗೆ ತಿಳಿಯಹೇಳುವ ಅನುಕೂಲವೂ ಇದೆ. ಮನಸ್ಸಿನಲ್ಲಿ ಏನಿದೆಯೆಂಬುದನ್ನು ಮಾತಿನಿಂದಲೆ ಅರಿತುಕೊಳ್ಳಬೇಕು. ಬೇರೆ ದಾರಿಯಿಲ್ಲ. ಮಾತಿಗೂ ಮನಸ್ಸಿಗೂ ಸಹಜವಾಗಿಯೇ ಒಡನಾಟವಿದೆ. ಮನಸ್ಸಿನ ಆಲೋಚನೆಗಳೂ ಮಾತುಗಳಲ್ಲೇ ಮೂಡಿಬರುತ್ತವೆ. ಮಾತಿನ ನೆರವಿಲ್ಲದೆ ಮನಸ್ಸು ಕೆಲಸ ಮಾಡಲರಿಯದು.

ಮಾನವನ ಸಂಸ್ಕೃತಿಯಲ್ಲಿ ಮಾತು ಮೂಲ ವಿವರ. ಸಂಸ್ಕೃತಿ ಉಳಿಯಲು, ಬೆಳೆಯಲು, ಮಾರ್ಪಡಲು ಮಾತೇ ಮುಖ್ಯವಾಗುತ್ತದೆ.

ಸಾಹಿತ್ಯದ ಮಾತು ಬಿಡಿ; ಅದು ಮಾತಿನ ಮಾಟವೇ. ಸಂಗೀತಕ್ಕೂ ಮಾತಿನ ಅಗತ್ಯವಿದೆ. ಕಾವ್ಯ, ನಾಟಕಗಳಲ್ಲಲ್ಲದೆ ನೃತ್ಯ, ಗೀತಗಳಲ್ಲೂ ಮಾತಿನ ಪಾತ್ರವಿರದೆ? ಚಿತ್ರಕಲೆಯಾಗಲಿ ಶಿಲ್ಪವಾಗಲಿ ಮೇಲುನೋಟಕ್ಕೆ ಮಾತಿನಿಂದ ಮುಕ್ತವಾಗಿರುವಂತೆ ತೋರುತ್ತದೆ. ಆದರೆ ಅದನ್ನು ವಿವರಿಸಬೇಕಾದಾಗ ಮಾತು ಬೇಕಾಗುತ್ತದೆ. ಅದರ ರುಚಿ ಸವಿಯುವಾಗಲೂ ಮಾತಿರುತ್ತದೆ. ಮಾತಿಲ್ಲದ ಮಾನವನ ಇರವನ್ನು ಊಹಿಸಿಕೊಳ್ಳುವುದು ಕಷ್ಟ. ಮೂಕರಾದರೂ ಮಾತಿನ ಬಳಕೆ ಒಂದಿಲ್ಲೊಂದು ತೆರನಾಗಿ ಇರುತ್ತದೆ; ನಮ್ಮೊಡನಿರುವಾಗ ಮಾತನ್ನು ಅರಿತುಕೊಳ್ಳಲು ಉಪಾಯಗಳನ್ನು ಕಲ್ಪಿಸಿಕೊಂಡಿರುತ್ತಾರೆ. ಮಾನವ ಸಮಾಜದಲ್ಲೇ ಮಾತು ಬಳಕೆಯಲ್ಲಿರದೆ ಇರುವುದನ್ನು ನಾವು ಊಹಿಸಿಕೊಳ್ಳುವುದಂತೂ ಸಾಧ್ಯವೇ ಇಲ್ಲ. ಭೂಮಿಯ ಮೇಲೆ ಮಾನವನು ವಿಶಿಷ್ಟ ಪ್ರಾಣಿಯಾಗಿ ಕಾಣಿಸಿಕೊಳ್ಳುವಾಗಲೆ ಮಾತಿನ ಅಗತ್ಯವನ್ನು ಅವನು ಕಂಡುಕೊಂಡ. ಭಾಷೆಯನ್ನು ಬೆಳೆಸಿದ; ಅದರಲ್ಲಿ ತನ್ನೆಲ್ಲ ವ್ಯವಹಾರವನ್ನೂ ತೂರಿಸಿಟ್ಟುಕೊಂಡ.

ಮಾನವನ ಸಂಸ್ಕೃತಿ ಬೆಳೆದಂತೆ ಮಾತಿನ ಅಗತ್ಯವೂ ಬೆಳೆಯುತ್ತ ಬಂದಿತು; ಮಾತಿನ ಮೋಡಿಯೂ ಹೆಚ್ಚುತ್ತ ಬಂದಿತು; ಮಾತಿನಿಂದ ನೋವೂ, ನಲಿವೂ ಸಾಧ್ಯವಾದುವು; ಹೊಂದಾಣಿಕೆಯೂ ಕಾದಾಟವೂ ನೆಲೆಗೊಂಡುವು; ಮೆಚ್ಚುಗೆ ಮುನಿಸುಗಳು ತೋರಿಕೊಂಡುವು. ಸಮಾಜದಲ್ಲಿ ಗೊಂದಲವಾದುದೂ ಮಾತಿನಿಂದಲೆ; ಏಳಿಗೆಯೂ ಮಾತಿನಿಂದಲೇ. ಏಕತೆಯೂ ಮಾತಿನಿಂದ; ವೈವಿಧ್ಯವೂ ಮಾತಿನಿಂದಲೇ.

ಮಾತಿನ ಮೋಡಿ

'ಬಾಯಿದ್ದವರು ಬರಗಾಲದಲ್ಲಿಯೂ ಬದುಕಿಯಾರು' ಎಂದು ಹೇಳುವುದುಂಟು. ಮಾತುಗಾರಿಕೆಯ ಸ್ವಾರಸ್ಯವನ್ನೂ ಸಾಮರ್ಥ್ಯವನ್ನೂ ಸೂಚಿಸುವ ಮಾತು ಇದು. ಮಾತನಾಡಬಲ್ಲವನು ಬೇರೆಯವರನ್ನು ಬೇಗನೆ ಒಲಿಸಿಕೊಳ್ಳಬಲ್ಲ; ತನ್ನ ಕೆಲಸವನ್ನು ಸಾಧಿಸಿಕೊಳ್ಳಬಲ್ಲ, ಎಂದು ತಾತ್ಪರ್ಯ.

'ಮಾತು ಬಲ್ಲವನಿಗೆ ಜಗಳವಿಲ್ಲ' ಎಂದೂ ಹೇಳುವುದಿದೆ. ನಯವಾಗಿ, ಹಿತವರಿತು ಮಾತನಾಡುವುದೂ ಒಂದು ಕಲೆ. ಮನಸ್ಸಿನಲ್ಲಿ ಹೇಗೇ ಇರಲ್ಲಿ, ಮಾತು ಮಧುರವಾಗಿದ್ದರೆ ಸಾಕು ಎನ್ನುವವರೂ ಇದ್ದಾರೆ!ಆಷಾಢಭೂತಿಗಳು. ಮನಸ್ಸಿನಿಂದ ಮನಸ್ಸಿಗೆ ಆಲೋಚನೆಗಳು, ಭಾವನೆಗಳು, ಭಾವಗಳು ಹರಿದುಹೋಗಲು ಮಾತೇ ಮಾಧ್ಯಮ. ಮೂಡಿದ ಕಲ್ಪನೆ ಮಾತಿನ ಮೂಲಕವೆ ಪ್ರಕಟವಾಗಬೇಕು; ಬೇರೆ ದಾರಿ ಇರದು. ಮನುಷ್ಯನ ಬದುಕಿನಲ್ಲಂತೂ ಮಾತೇ ಮುಖ್ಯ. ಆದುದರಿಂದಲೆ ಮಾತು ಬೆಳೆದು ಹೆಮ್ಮರವಾಗಿದೆ; ನೂರಾರು ಕವಲುಗಳು, ಸಾವಿರಾರು ಕೊಂಬೆಗಳು, ಲೆಕ್ಕವಿರದಷ್ಟು ಚಿಗುರುಗಳು. ಮಾತಿನಿಂದ ಮರಳುಮಾಡುವ ಹವ್ಯಾಸವೂ ಹೆಚ್ಚಿದೆಯೆನ್ನಿ. ಕಾರಣವಿಲ್ಲದೆ ಅರ್ಥವಿರದೆ ಮಾತನಾಡುವವರೂ ಬಹು ಮಂದಿ. ರಾಜಕಾರಣಿಗಳಲ್ಲಿ, ಉದ್ಯಮಿಗಳಲ್ಲಿ, ವ್ಯಾಪಾರ ಕುದುರಿಸುವವರಲ್ಲಿ, ಸೆಮಿನಾರು ಗಳಲ್ಲಿ ಪಾಲ್ಗೊಳ್ಳುವ ಬುದ್ಧಿವಂತರಲ್ಲಿ ಇಂಥವರನ್ನು ನಾವು ಗುರುತಿಸಬಹುದು.

ಬಾಯಿಬಡುಕರಿಗೆ ಮಾತಿನ ಹಿಂದೆ ಖಚಿತವಾದ ಅಭಿಪ್ರಾಯ ಇರಬೇಕೆಂಬ ನಿರ್ಬಂಧವೇನಿರದು. ಬಾಯಿಗೆ ಬಂದದ್ದನ್ನೇ ಆಡುವುದು ಅವರ ವಾಡಿಕೆ. ಸತ್ಯದ ಕಡೆಗಾಗಲಿ ಅವರ ಗಮನವಿರದು. ಇನ್ನು ಹಿತ-ಮಿತಗಳ ಕಟ್ಟುಪಾಡನ್ನು ಅವರು ಹುಟ್ಟಿನಿಂದಲೆ ಕಂಡರಿಯರು! ಮನುಷ್ಯನಲ್ಲಿ ಮಾತು ಮುಖ್ಯವೆನಿಸಿದ್ದು ಈ ಕಾರಣದಿಂದ ಅಲ್ಲ. ತನ್ನ ಮನಸ್ಸಿನಲ್ಲಿರುವ ಭಾವನೆಯನ್ನು ಪ್ರಕಟಗೊಳಿಸಲು, ಬೇರೆಯವರ ಮನಸ್ಸಿಗೆ ಮುಟ್ಟಿಸಲು ಮೊದಲಾದುದು ಮಾತು. ಮಾತಿನ ಕೆಲಸ ಕೈಗೂಡಬೇಕಾದರೆ ಮನಸ್ಸಿನಲ್ಲಿ ಭಾವನೆಯಿರಬೇಕು; ಭಾವನೆಯಲ್ಲಿ ಸ್ವಾರಸ್ಯವೊ ಸಂಗತಿಯೊ ಇರಬೇಕು; ಬೇರೆಯವರಿಗೆ ಅದರಿಂದ ಪ್ರಯೋಜನವಿರಬೇಕು.

ನಡೆ-ನುಡಿ

'ಕುಡಿವುದು ಕಳ್, ನುಡಿವುದು ತತ್ತ್ವಂ' ಹೀಗೊಬ್ಬ ಕವಿ ಕಂಡಿದ್ದಾನೆ; ನಾವೂ ಕಂಡಿದ್ದೇವೆ! ವೇದಿಕೆಯ ಮೇಲೇರಿ ಬಣ್ಣಬಣ್ಣದ ಮಾತುಗಳಿಂದ ಆದರ್ಶಗಳನ್ನೆಲ್ಲ ಕಣ್ಣೆದುರು ನಿಲ್ಲಿಸಿ ಮರುಳು ಮಾಡುವ ಮಂದಿ ವಿರಳವೆ? ಅವರ ಬಾಯಿಂದ ಧಾರೆಧಾರೆಯಾಗಿ ಹರಿದುಬರುವ ಉದಾತ್ತತತ್ತ್ವಗಳು ಯಾರನ್ನಾದರೂ ಬೆರಗುಗೊಳಿಸುತ್ತವೆ. ಆದರೆ ಈ ಮೋಡಿಯ ಹಿಂದಿರುವ ಬದುಕು ಎಂಥದು ಎಂದು ವಿಚಾರಿಸಿದರೆ ಅಷ್ಟೇ ಅಚ್ಚರಿಯೂ ಆದೀತು! ಕುಡಿಯುವುದು ಕಳ್ಳು, ಎಂದರೆ ಹೆಂಡ. ಆಡುವುದು ಮಾತ್ರ ವೇದಾಂತ ತತ್ತ್ವಗಳನ್ನು ಕುರಿತೇ. ಉಪದೇಶ ಒಂದು; ಆಚರಣೆ ಇನ್ನೊಂದು! ಎರಡಕ್ಕೂ ಹೊಂದಾಣಿಕೆಯಿರಬೇಕೆಂಬ ಅರಿವೂ ಬಹುಮಂದಿಗಿರುವುದಿಲ್ಲ.

'ನುಡಿದಂತೆ ನಡೆವವರ, ನಡೆದಂತೆ ನುಡಿವವರ ನಾ ಕಾಣೆ' ಎಂದು ಇನ್ನೊಬ್ಬ ಕವಿಯ ಅಳಲು. ನುಡಿಯುವವರ ಪಾಡು ಬಿಡಿ, ಅದನ್ನು ಕೇಳುವವರೂ ಹಾಗೆ ನಿರೀಕ್ಷಿಸುವುದಿಲ್ಲವಲ್ಲ ಎಂಬುದು ಹೆಚ್ಚಿನ ಕಳವಳದ ಸಂಗತಿ. ಅವನ ಬದುಕು ಹೇಗಾದರಿರಲಿ, ಅವನ ಮಾತಿನಿಂದ ಪ್ರಯೋಜನವನ್ನು ಪಡೆದುಕೊಳ್ಳಿ ಎಂದೂ ಕೆಲವರು ಸೂಚಿಸುವುದುಂಟು! ಅವನ ವೈಯಕ್ತಿಕ ನೀತಿಯನ್ನು ಕಟ್ಟಿಕೊಂಡು ನಮಗೇನು, ನಮಗೆ ಬೇಕಾದುದು ಸಮರ್ಥವಾದ ಪ್ರವಚನ ಎಂಬ ಸಮಾಧಾನವೂ ಕೆಲವರಿಗೆ! ನೀತಿಯ ಬೆಂಬಲವಿಲ್ಲದೆ ಪ್ರವಚನಕ್ಕೆ ಅಧಿಕಾರವಾದರೂ ಒದಗುವುದು ಸಾಧ್ಯವೆ? ತನ್ನ ಬದುಕಿನಲ್ಲಿ ತಾನು ಅಳವಡಿಸಿಕೊಳ್ಳದ ತತ್ತ್ವವನ್ನು ಬೇರೆಯವರಿಗೆ ತಿಳಿಯಹೇಳಲು ಹೊರಡುವುದು ಏನು ಚೆನ್ನು? ಬರಿಯ ವಾಗ್ವಿಲಾಸವಿದ್ದರೆ ಆಯಿತೆ?

ನಂಬುವವರು ಇದ್ದೆಡೆ ನಂಬಿಸುವ ಮೋಸಗಾರರು ನೆರೆಯುವುದು ಸಹಜ.

ಜನರೆಲ್ಲ ಕಲೆತಾಗ ಒಟ್ಟಾಗಿ ಮರುಳಾಗುವುದು ಸುಲಭ.

ಬಹುಮಂದಿ ಸೇರಿ ಓಲೈಸುತ್ತಿರುವಾಗ, ಮರುಳು ಮಾಡುವುದೂ ಕಷ್ಟವೇನಲ್ಲ. ಕುರಿಗಳ ಸಾಮತಿ ಕೇಳಿಲ್ಲವೆ? ಒಟ್ಟಾಗಿ ಸೇರಿದಾಗ ವಿವೇಕಕ್ಕೆ ಅಷ್ಟಾಗಿ ಕೆಲಸವಿಲ್ಲ. ಹೇಗೂ ವಿಚಾರ ವಿಮರ್ಶೆಗಳಿಗೆ ಅವಕಾಶವಿಲ್ಲ.

ಮಾತಿನ ಬಡತನ

ಮಾತಿಗೆ ಬಡತನವೆ? ಸಂಸ್ಕೃತದಲ್ಲೂ 'ವಚನೇ ಕಿಂ ದರಿದ್ರತಾ' ಎಂಬ ಸುಭಾಷಿತವಿದೆ.

ಈ ಸುಭಾಷಿತದ ಸಂದರ್ಭವೇನೆಂಬುದು ತಿಳಿಯದು. ಯಾವುದೋ ಶ್ಲೋಕದ ಕಡೆಯ ಪಾದವಿದ್ದಂತೆ ತೋರುತ್ತದೆ.

ಬಾಯಿತುಂಬ ಮಾತನಾಡು, ಅದರಲ್ಲಿ ಅಡೆತಡೆ ಏಕೆ, ಎಂಬುದು ಅರ್ಥವೋ? ಕೈಯಿಂದ, ಹಣದಿಂದ ನೆರವಾಗುವುದು ಸಾಧ್ಯವಿರದಿದ್ದರೂ ಒಳ್ಳೆಯ ಮಾತುಗಳನ್ನು ಆಡಬಹುದಲ್ಲ, ಎಂದರ್ಥವೋ?

ಸುಭಾಷಿತಕಾರನ ಉದ್ದೇಶ ಏನಾದರೂ ಇರಲಿ. ಮಾತನಾಡುವುದರಲ್ಲಿ ಕೊಂಚವೂ ಬಡತನವಿರದವರನ್ನು ನಮ್ಮ ಸುತ್ತಮುತ್ತ ಕಾಣುತ್ತೇವೆ.

ರಾಜಕಾರಣಿಗಳು ವೇದಿಕೆಯ ಮೇಲೆ ನೀಡುವ ಭರವಸೆಗಳನ್ನು ನೋಡಿ. ಚುನಾವಣೆಗೆ ಮುಂಚೆ ಹರಿಯುವ ಆಶ್ವಾಸನೆಗಳ ಹೊಳೆಗಳನ್ನೇ ನೋಡಿ. ಉದ್ಯಮಿಗಳ ವಾಗ್ದಾನದ ಔದಾರ್ಯವನ್ನೇ ನೋಡಿ. ಎಲ್ಲಿಯೂ ಮಾತಿನ ಬರಗಾಲ ಕಾಣುವುದಿಲ್ಲ! ಮಾತನಾಡಲು ಯಾರಿಗೂ ಸಂಕೋಚವಿಲ್ಲ. ಅಂಜಿಕೆಯಿಲ್ಲ. ಮಾತನಾಡುವವನು ಮಾಡುವುದಿಲ್ಲ, ಮಾಡುವವನು ಮಾತನಾಡುವುದಿಲ್ಲ ಎಂದು ಎಲ್ಲರೂ ಬಲ್ಲರು. ಹೀಗಾಗಿ ಯಾವ ಮಾತಿಗೂ ಬೆಲೆಯಿಲ್ಲವಾಗಿದೆ. ಮಾತಿಗೆ ಮರುಳಾಗುವವರ ಸಂಖ್ಯೆಯೂ ಕಡಮೆಯಾಗುತ್ತಿದೆಯೆನ್ನಿ.

ಹಾಗಾದರೆ ಸುಭಾಷಿತದ ಇಂಗಿತವಾದರೂ ಏನಿದ್ದೀತು? ಇನ್ನೊಂದು ಸುಭಾಷಿತವಿದೆ- 'ವಾಗ್ಭೂಷಣಂ ಭೂಷಣಂ'; ಕನ್ನಡದಲ್ಲೂ 'ಮಾತೇ ಮುತ್ತು'ಎಂಬ ಮಾತಿದೆಯಷ್ಟೆ? ಮುತ್ತಿನಂಥ ಮಾತು ಯಾವುದು? ಸತ್ಯ, ಹಿತ, ಮಿತ ಎಂಬ ನಿರ್ಬಂಧಗಳನ್ನು ಒಳಗೊಂಡು ಸ್ಪಷ್ಟವಾಗಿ, ಕಪಟವಿಲ್ಲದೆ, ಸವಿಯೆನಿಸುವಂತೆ ಮಾತನಾಡುವುದು.

ಇದಕ್ಕೆ ಹಣವಿರಬೇಕಾಗಿಲ್ಲ. ಅಧಿಕಾರ ಇರಬೇಕಾಗಿಲ್ಲ. ಪಾಂಡಿತ್ಯವಿರಬೇಕಾಗಿಲ್ಲ. ಪ್ರಭಾವವಿರಬೇಕಾಗಿಲ್ಲ. ಕುಲದ ಹಿರಿಮೆ ಇರಬೇಕಾಗಿಲ್ಲ. ಸಂಸ್ಕಾರವೊಂದಿದ್ದರೆ ಸಾಕು. ಸಂಸ್ಕಾರಕ್ಕಾದರೂ ಶ್ರೀಮಂತಿಕೆಯ ಆಸರೆಯೇನು ಅಗತ್ಯವಿರದು.

ಮಾತನಾಡುವವನು ಬಡವನೇ ಆಗಿರಲಿ, ಸಂಸ್ಕಾರಿಯಾಗಿದ್ದರೆ ಸಾಕು; ಅವನ ಮಾತನ್ನು ಆಲಿಸಲು ಯಾರಾದರೂ ಸಿದ್ಧವಾಗಿರುತ್ತಾರೆ; ಕಾತರರಾಗಿರುತ್ತಾರೆ.

ಈ ಅರ್ಥದಲ್ಲಿ ಮಾತಿಗೇನು ಬಡತನವೆ?

ಕಾಡುಹರಟೆ

ಹರಟೆಗೆ ಒಂದು ವಿಷಯವೆಂಬುದಿದೆಯೆ? ಇಷ್ಟೆಂಬ ಮಿತಿಯಿದೆಯೆ?

ವಿಷಯ ಯಾವುದಾದರೂ ಆದೀತು; ಹರಟೆ ಕೊಚ್ಚುವಾಗ ಕಾಲ ಎಷ್ಟು ಸಂದಿತೆಂಬ ಆತಂಕವೂ ಇರದು.

ಒಂದೇ ವಿಷಯದ ಮೇಲೆ ಬಹುಕಾಲ ಮಾತನಾಡುವುದು ಕಷ್ಟವಲ್ಲವೆ? ಬೇಸರವೂ ಬಂದೀತೆನ್ನಿ!

ವಿಷಯಗಳು ಬೇರೆ ಬೇರೆ ತೋರಿಕೊಳ್ಳಬೇಕು; ಎತ್ತೆತ್ತಲೋ ಮಾತಿನ ಹೊಳೆ ಹರಿಯಬೇಕು. ಮಾತನಾಡುವವರ ಚಪಲತೆಗೆ ತಕ್ಕಂತೆ, ಕೇಳುವವರ ಕುತೂಹಲಕ್ಕೆ ಅನುಗುಣವಾಗಿ ಹರಟೆ ಹಬ್ಬಿಕೊಳ್ಳುತ್ತದೆ.

ಅದಕ್ಕೊಂದು ಕ್ರಮವೆಂದಾಗಲಿ, ಆನುಪೂರ್ವಿಯೆಂದಾಗಲಿ, ಔಚಿತ್ಯವೆಂದಾಗಲಿ, ಚೌಕಟ್ಟೆಂದಾಗಲಿ ಇರಲಾರದು. ಕಾಡಿನಲ್ಲಿ ಗಿಡಗೆಂಟೆ ಸ್ವೇಚ್ಛೆಯಾಗಿ ಬೆಳೆದಂತೆ ಹರಟೆಯಲ್ಲಿನ ಮಾತೂ ಮನಸ್ಸಿಗೆ ಬಂದಂತೆ ಹೊರಡುತ್ತದೆಯಾಗಿ 'ಕಾಡುಹರಟೆ'. ಕಾಡೇನು ತೋಟವಲ್ಲ; ಗಿಡ-ಮರಗಳಲ್ಲಿ ಓರಣವೇನಿರುವುದಿಲ್ಲ, ವಿನ್ಯಾಸ ವೆಂಬುದಿಲ್ಲ. ಕಾಡುಹರಟೆಯಲ್ಲಿಯೂ ಹಾಗೆಯೇ; ಓರಣ ಒಪ್ಪ, ನಯ, ನಾಜೂಕು, ರುಚಿ, ಶುಚಿ ಎಂಬ ಯಾವ ಎಣಿಕೆಯೂ ಇರದು. ಅದರಿಂದ ಯಾರಿಗೂ ಯಾವ ಪ್ರಯೋಜನವೂ ಆಗಲಾರದು; ಹಾಗೆಂದೇ ಅದನ್ನು 'ಹಾಳು ಹರಟೆ'ಯೆಂದೂ ಕರೆಯುವುದುಂಟು. ಮಾಡಲು ಬೇರೇನೂ ಕೆಲಸವಿರದಿದ್ದರೆ, ಬೇಸರವನ್ನು ನೀಗಿಕೊಳ್ಳಲು ಅರಸಿಕರು ಹಚ್ಚಿಕೊಳ್ಳುವ ಹವ್ಯಾಸ ಹರಟೆ. ಅದಕ್ಕೇನು ಪೂರ್ವಸಿದ್ಧತೆ ಬೇಕಾದುದಿಲ್ಲ; ವಿಷಯಸಂಗ್ರಹಣದ ಹಿನ್ನೆಲೆಯಾಗಲಿ, ನಿರೂಪಣೆಯ ಸಂವಿಧಾನ ವಾಗಲಿ, ತರ್ಕದ ಕಟ್ಟುಪಾಡಾಗಲಿ ಇರಬೇಕಾದುದಿಲ್ಲ; ಧರ್ಮಾಧರ್ಮದ ಪರಿವೆಯೂ ಇರದು.

ಅದೇನು ಚರ್ಚಾಕೂಟವಲ್ಲ; ವಾದ-ವಿವಾದಗಳಿಗೆ ಅಲ್ಲೇನು ಎಡೆಯಿಲ್ಲ. ಮಾತುಗಾರರು ತಂತಮ್ಮ ಮೇಲ್ಮೆಯನ್ನು ಮೆರೆಯಬೇಕಾಗುದುದಿಲ್ಲ. ಯಾವೊಂದು ತತ್ತ್ವವನ್ನೂ ಯಾರಿಗೂ ಮನದಟ್ಟುಮಾಡಿಕೊಡಬೇಕಾಗಿಲ್ಲ! ಯಾವ ನಿರ್ಣಯಕ್ಕೆ ಯಾರೂ ಬರಬೇಕಾದುದಿಲ್ಲ.

ಅದೊಂದು 'ಕಾಲಕ್ಷೇಪ'. ಅದರಲ್ಲಿ ಸೇರುವವರೆಲ್ಲ ಸಹೃದಯರಾಗಿದ್ದರಾಯಿತು. ಸಮಾನಶೀಲರಾಗಿದ್ದರೆ ಸಾಕು.

ವಾಗ್ಮಿ

ಈಗೀಗ ಸಭೆ-ಸಮಾರಂಭಗಳು ಹೆಚ್ಚುತ್ತಿವೆ.

ಸಭೆಯೆಂದಮೇಲೆ ಮಾತನಾಡುವವರಿರಬೇಕು; ಕೇಳುವವರೂ ಇದ್ದರೆ ಚೆನ್ನು!

ಕೇಳುವವರಿಗೆ ಸ್ವಾತಂತ್ರ್ಯವಿದೆ. ನಿಯಮವೇನಿರದು.

ಆದರೆ ಮಾತನಾಡುವವರೂ ಮನಸ್ಸಿಗೆ ಅಥವಾ ಬಾಯಿಗೆ ಬಂದಂತೆ ಮಾತನಾಡುತ್ತ, ಕಾಲದ ಪರಿವೆಯಾಗಲಿ, ಔಚಿತ್ಯದ ಅರಿವಾಗಲಿ ಇಲ್ಲದೆ ಕೇಳುವವರನ್ನು ಕೊರೆಯತೊಡಗಿದರೆ ಮಾಡುವುದೇನು ? ಮಾತನಾಡುವುದು ಒಂದು ಕಲೆ; ಅದೂ ಸಭೆಯಲ್ಲಿ ಮಾತನಾಡುವುದು ವಿಶಿಷ್ಟವಾದ ಕಲೆ.

ಭಾರವಿಯೆಂಬ ಸಂಸ್ಕೃತ ಕವಿಯು ವಾಗ್ಮಿಯನ್ನು (ಎಂದರೆ ಸಭೆಯಲ್ಲಿ ಮಾತನಾಡುವವನನ್ನು) ಕುರಿತು ಕೆಲವು ಸೂಚನೆಗಳನ್ನು ನೀಡಿದ್ದಾನೆ.

ಶಬ್ದಾರ್ಥಗಳೆರಡೂ ತಿಳಿಯಾಗಿದ್ದು ಓಜಸ್ಸಿನಿಂದ ಕೂಡಿದ್ದರೆ ಕೇಳುವವರಿಗೆ ಹಿತವೆನಿಸುತ್ತದೆ. ಆಡುವ ಮಾತಿನಲ್ಲಿ ಗಾಂಭೀರ್ಯವಿರಬೇಕು; ಅರ್ಥವೇ ಮುಖ್ಯವಾಗಿರಬೇಕು. ಮಾತು ಟೊಳ್ಳಾಗಿರಬಾರದು. ಅನಗತ್ಯವಾದ ಮಾತುಗಳನ್ನಾಡಿ ಬೇಸರಪಡಿಸಬಾರದು. ಮಾತನಾಡುವಾಗ ತನ್ನ ಅಭಿಪ್ರಾಯಗಳು ನ್ಯಾಯಸಮ್ಮತವೋ, ಯುಕ್ತಿಯುಕ್ತವೋ ಎಂಬುದನ್ನು ಪರಿಶೀಲಿಸಬೇಕು. ತಾನು ಹೇಳಿದ್ದನ್ನು ಯಾರೂ ಅಲ್ಲಗಳೆಯುವಂತಿರಬಾರದು.

ಮತ್ತೆ, ಮಾತನಾಡುವಾಗ ಯಾರ ಮನಸ್ಸನ್ನೂ ನೋಯಿಸದೆ ಇರುವಂತೆ ಎಚ್ಚರವಹಿಸಬೇಕು,.

ಇದನ್ನು ಔದಾರ್ಯಗುಣವೆಂದಿದ್ದಾನೆ ಕವಿ.

ಮಾತನಾಡುವಾಗ ಉದ್ವೇಗಕ್ಕೆ ಅವಕಾಶವಿರಬಾರದು.

ತಾನೂ ಶಾಂತಚಿತ್ತನಾಗಿರಬೇಕು; ಕೇಳುವವರ ನೆಮ್ಮದಿಯೂ ಕೆಡದಂತೆ ನೋಡಿಕೊಳ್ಳಬೇಕು.

ಮಾತನಾಡುವ ಸಾಮರ್ಥ್ಯವೇನೋ ಕೆಲವರಿಗೆ ಸಹಜವಾಗಿಯೆ ಬರುತ್ತದೆ; ದೈವದತ್ತವೆನ್ನಿ.

ಆದರೆ ಅದನ್ನು ಸರಿಯಾಗಿ ಬೆಳೆಸಿಕೊಳ್ಳದಿದ್ದರೆ ಅವರು ವಾಚಾಳಿಗಳಾಗಬಹುದು. ವಾಗ್ಮಿಗಳಾಗಲಾರರು.

ಬಿಳಿಯ ಸುಳ್ಳು

ಇಂಗ್ಲಿಷಿನಲ್ಲಿ 'ಬಿಳಿ ಸುಳ್ಳು' ಎಂಬುದೊಂದು ಮಾತಿದೆ. ಇದಕ್ಕೆ ಕನ್ನಡದಲ್ಲಾಗಲಿ ಸಂಸ್ಕೃತದಲ್ಲಾಗಲಿ ಸಮಾನಾರ್ಥದ ಪದವಿದೆಯೋ ನನಗೆ ತಿಳಿಯದು.

ಆದರೆ ಸುಳ್ಳೆಲ್ಲವೂ ಕೆಟ್ಟದ್ದು ಎಂದು ನಮ್ಮವರೇನು ನಂಬಿಲ್ಲ. ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಿಸಬೇಕೆಂಬ ಆರ್ಯೋಕ್ತಿಯೇ ಇದೆಯಲ್ಲವೆ? ಎಂದ ಮೇಲೆ, ಸುಳ್ಳಿನಿಂದ ಒಳ್ಳೆಯ ಪ್ರಯೋಜನವೂ ಸಾಧ್ಯವಾದೀತು.

ಒಂದು ಸುಳ್ಳು ತನ್ನ ಕಾಲ ಮೇಲೆ ತಾನು ನಿಲ್ಲುವುದು ಕಷ್ಟವಾದ್ದರಿಂದ ಸಾವಿರ ಸುಳ್ಳುಗಳನ್ನು, ಸಭೆ ಸೇರಿಸುವ ಮೂಲಕ ಪ್ರಜಾಪ್ರಭುತ್ವವನ್ನು ಮೈಗೂಡಿಸಬೇಕು!

ಮದುವೆಗೆ ಮಾತ್ರ ಸಾವಿರಸುಳ್ಳು ಪ್ರಸಕ್ತವೋ, ಅಥವಾ ಯಾವುದೇ ಶುಭಕಾರ್ಯಕ್ಕಾದರೂ ಇದರ ಅಗತ್ಯ ಇದೆಯೋ ಎಂಬುದನ್ನು ಆರ್ಯೋಕ್ತಿ ಹೇಳಲಿಲ್ಲ. ಎಂಜಲ ವಿಚಾರವಾಗಿ ದಾಸರು ಹೇಳಿದಂತೆ, ಸುಳ್ಳು ಸುಳ್ಳೆಂಬರಾ ನುಡಿ ಸುಳ್ಳಲ್ಲವೆ ಎಂದು ನಾವೂ ಕೇಳಬಹುದು. ಸುಳ್ಳೆಂದು ಕಡೆಗಣ್ಣಿಂದ ಕಾಣಲೇಕೆ? ಬೇಟೆಗಾರನೆದುರು ಸುಳ್ಳಾಡಿ ಜಿಂಕೆಯ ಪ್ರಾಣವನ್ನುಳಿಸಿದ ಮುನಿಯ ಕತೆಯಿಲ್ಲವೆ? ಮುನಿಯನ್ನು ಸುಳ್ಳನೆಂದು ಜರಿಯಲು ಸಾಧ್ಯವೆ? ವ್ಯವಹಾರದಲ್ಲಿ ಸುಳ್ಳನ್ನು ಆಡುವ ಪ್ರಸಂಗಗಳು ಬಂದೆ ಬರುತ್ತವೆ. ಸಂಗೀತ ವಿಮರ್ಶಕರು, ಕಲಾವಿಮರ್ಶಕರು, ಸಭ್ಯರೆನಿಸಿಕೊಂಡವರು ಸುಳ್ಳಾಡದಿದ್ದರೆ ಆದೀತೆ?

ಚೆನ್ನಾಗಿಲ್ಲದ್ದು ಚೆನ್ನಾಗಿದೆಯೆಂದು ಹೇಳುವಾಗ ಅದು ಬಿಳಿಸುಳ್ಳು. ಅದರಿಂದ ಸಂಬಂಧಪಟ್ಟವರಿಗೆ ಸಂತೋಷವನ್ನು ಉಂಟುಮಾಡುವುದಷ್ಟೇ ಉದ್ದೇಶ. ಅದರಿಂದ ಯಾರಿಗೂ ಏನೂ ತೊಂದರೆಯಿರದು. ಅನೇಕ ವೇಳೆ ಸ್ವಪ್ರಯೋಜನವೂ ಇರದೆನ್ನಿ!

ದಿಟವಾಗಿ ಚೆನ್ನಾಗಿರುವುದನ್ನು ಚೆನ್ನಾಗಿಲ್ಲವೆಂದರೆ ಅದು ಕರಿಯ ಸುಳ್ಳೇ.

ಸುಳ್ಳು ಬಿಳಿಯದೋ ಕರಿಯದೋ ಎಂದು ನಿರ್ಧರಿಸುವುದು ಅದರ ಹಿಂದಿರುವ ಉದ್ದೇಶ. ಸುಳ್ಳಿನಿಂದ ತನಗೆ ಲಾಭವಾಗಿ ಬೇರೆಯವರಿಗೆ ನಷ್ಟವಾದರೆ ಅದು ಕರಿಯ ಸುಳ್ಳು; ಸರ್ವಥಾ ಸಲ್ಲದು.

ಆದರೆ ಸುಳ್ಳಿನಿಂದ ಬೇರೆಯವರಿಗೆ ಒಳ್ಳೆಯದಾಗುವುದಾದರೆ ಯಾರಿಗೂ ಕೆಡುಕಾಗದಿದ್ದರೆ ಅದು ಬಿಳಿ ಸುಳ್ಳು; ಅದಕ್ಕೊಂದು ವಿನಾಯಿತಿಯಿದೆ.

ಗೊಣಗಲೇಕೆ?

ಕೆಲವರಿಗೆ ಗೊಣಗುವುದೇ ವಾಡಿಕೆ. ಗೊಣಗದಿದ್ದರೆ ಅವರಿಗೆ ಉಂಡದ್ದು ಅರಗುವುದಿಲ್ಲ. ಕಣ್ಣಿಗೆ ನಿದ್ದೆ ಹತ್ತುವುದಿಲ್ಲ.

ಅವರ ಕಣ್ಣಿಗೆ ಕಾಣುವುದೆಲ್ಲ ಕೊರತೆಯೆ; ಕಷ್ಟಗಳೇ! ಏನಾದರೂ ಅದರಲ್ಲಿ ದೋಷವನ್ನು ಅವರು ಕಂಡಾರು.

ಬೇಸಿಗೆಯಾದರೆ ರಣ ರಣ ಬಿಸಿಲು, ಹೀಗೆ ಎಂದೂ ಇರಲಿಲ್ಲ, ಎಂದು ಬೇಸರಿಸುವರು. ಮಳೆಗಾಲವಾದರೆ ಇದೇನು ಮಳೆ, ನಾನು ಕಂಡೇ ಇರಲಿಲ್ಲ, ಎಂದು ಮರುಗುವರು. ಚಳಿಗಾಲವಾದರಂತೂ ತಾವೂ ನಡುಗುವರು. ಬೇರೆಯವರನ್ನೂ ನಡುಗಿಸಿಯಾರು!

ಹವೆಯೆಂದರೆ ಹೇಗಿದ್ದರೆ ಅವರಿಗೆ ಹಿಡಿಸೀತು? ಹೇಗಿದ್ದರೂ ಅವರು ಒಪ್ಪಲಾರರು. ಎಲ್ಲದಕ್ಕೂ ಏನಾದರೊಂದು ತಕರಾರು ಇದ್ದದ್ದೇ. ಯಾರಿಗೂ ತೋರಿಕೊಳ್ಳದ ಆತಂಕ ಅವರಿಗೆ ಎದ್ದುಕೊಳ್ಳುತ್ತದೆ.

ಹವೆಯೇನಾದರೂ ಇವರ ಗೊಣಗಾಟವನ್ನು ಕೇಳಿ ಇವರಿಗೆ ಸಮಾಧಾನ ವಾಗುವಂತೆ ಇರಬೇಕೆಂದುಕೊಂಡರೆ ಅದು ಗಳಿಗೆಗೊಮ್ಮೆ ಮಾರ್ಪಡಬೇಕು. ಗಂಟೆಗೊಂದು ಹವೆ. ಇವರಿಗೆ ಬೇಸರವಾಗುವುದರೊಳಗೆ ಮರೆಯಾಗಬೇಕು.

ಇಂಥವರು ನಾಲ್ಕುಜನ ಇದ್ದರೆ ಮುಗಿಯಿತಲ್ಲ? ಹವೆ ಯಾರನ್ನು ಮೆಚ್ಚಿಸಬೇಕು? ಇವನು ಮೆಚ್ಚಿದ್ದನ್ನು ಅವನು ದೂರುತ್ತಾನೆ. ಅವನು ಮೆಚ್ಚಿದ್ದನ್ನು ಇವನು ದೂರುತ್ತಾನೆ. ಯಾರ ಮರ್ಜಿಯನ್ನು ಹಿಡಿಯುವುದು? ಒಬ್ಬೊಬ್ಬರಿಗೂ ಒಂದೊಂದು ಬೇರೆಯಾಗಿಯೇ ಹವೆ ಎಂದಾದರೆ ಆಗಬಹುದೇನೋ! ಅದೂ ಒಂದೇ ತೆರನಾಗಿದ್ದರೆ ಬೇಸರ ಬಾರದೆ ಇರುತ್ತದೆಯೇ?

ಸದ್ಯ ಇವೆಲ್ಲ ಪಟ್ಟಣದವರ, ಸಭ್ಯರೆನಿಸಿಕೊಂಡವರ ಮೋಜು ಮಾತು. ಹಳ್ಳಿಗಾಡವರಿಗೆ, ಸಾಮಾನ್ಯಜನಕ್ಕೆ ಹವೆಯನ್ನು ಕುರಿತು ತಕರಾರು ಏನಿರದು. ನಮ್ಮ ಅನುಕೂಲಕ್ಕೆಂದು ಹವೆಯೆ? ನಮ್ಮನ್ನು ಮೆಚ್ಚಿಸಲೆಂದು ಅದು ಮಾರ್ಪಡುವುದೇ? ಅದು ಇರುವಂತೆ ಇರುತ್ತದೆ. ನಮ್ಮ ಅಡ್ಡಿ-ಆತಂಕಗಳ ಗೊಡವೆ ಅದಕ್ಕೇನು?

ಬಿಸಿಲು ಕಾಯುವಾಗ ಕಾಯುತ್ತದೆ. ಮಳೆ ಹುಯ್ಯುವಾಗ ಹುಯ್ಯುತ್ತದೆ. ಚಳಿಗಾಲದಲ್ಲಿ ಚಳಿಯಲ್ಲದೆ ಮತ್ತೇನು? ನಮ್ಮ ಊಳಿಗಕ್ಕೆಂದು ಸಂಬಳಕೊಟ್ಟು ಹವೆಯನ್ನು ನೇಮಿಸಿಕೊಂಡಿದ್ದೇವೆಯೆ?

ತಕ್ಕಡಿಯ ತಟ್ಟೆಗಳು

ಕಾಲು ಕೆಸರಾಯಿತೆನ್ನಿ, ನೀರಿನಿಂದ ತೊಳೆದುಕೊಳ್ಳುತ್ತೇವೆ. ಕಾಲು ಚೊಕ್ಕಟವಾಗುತ್ತದೆ.

ಆದರೆ ತೊಳೆದುಕೊಂಡ ನೀರು ಕೊಳೆಯಾಗುತ್ತದೆ. ಬಟ್ಟೆಯಿಂದ ವರೆಸಿಕೊಂಡರೆ ಬಟ್ಟೆಗೆ ಕೊಳೆ ಅಂಟಿಕೊಳ್ಳದೆ ಉಂಟೆ? ಒಂದನ್ನು ಶುಚಿ ಮಾಡುವಾಗ ಇನ್ನೊಂದು ಕೊಳೆಯಾಗುವುದು ಸಹಜ. ಇಲ್ಲಿನ ಕೊಳೆ ಅಲ್ಲಿಗೆ ಹೋಗುತ್ತದೆ. ಅದು ಕೊಳೆಯಾದರೇ ಇದು ಶುಚಿ. ಇನ್ನೊಂದನ್ನು ಕೊಳೆ ಮಾಡದೆ ಏನನ್ನಾಗಲಿ ಶುಚಿ ಮಾಡುವುದು ಸಾಧ್ಯವಿರದು ಎಂಬುದೊಂದು ನಿಯಮವೇ ಎಂದರೂ ತಪ್ಪಾಗದು.

ಆದರೆ ಯಾವುದನ್ನೂ ಶುಚಿಮಾಡದೆ ಎಲ್ಲವನ್ನು ಕೊಳೆ ಮಾಡುವುದು ಸಾಧ್ಯ!

ವೈದ್ಯವನ್ನೇ ನೋಡಿ. ಯಾವುದೋ ಒಂದು ಬೇನೆಯಿಂದ ನರಳುತ್ತಿರುವವನು ವೈದ್ಯನ ಬಳಿ ಹೋಗುತ್ತಾನೆ. ಆ ಬೇನೆಯನ್ನು ಗುಣಪಡಿಸಲು ವೈದ್ಯ ಮದ್ದು ಕೊಡುತ್ತಾನೆ. ಮದ್ದಿನ ಪ್ರಭಾವದಿಂದ ಆ ಬೇನೆ ಹೋಯಿತೆನ್ನೋಣ. ಆದರೆ ಅದೇ ಮದ್ದು ಇನ್ನೊಂದು ಬೇನೆ ತಲೆಹಾಕಲು ಕರೆನೀಡುತ್ತದೆ. ಅದಕ್ಕೆ ಬೇರೊಂದು ಮದ್ದು; ಅದರಿಂದ ಮತ್ತೊಂದು ಬೇನೆ!

ಈ ಬೇನೆ-ಮದ್ದುಗಳ ಕಣ್ಣಾಮುಚ್ಚಾಲೆಯಾಟದಲ್ಲಿ ರೋಗಿಯ ಹಣ ವೈದ್ಯನ ಕಿಸೆಗೆ, ಅಲ್ಲಿನದು ಇಲ್ಲಿಗೆ, ಇಲ್ಲಿನದು ಅಲ್ಲಿಗೆ.

ಯಾವೊಂದು ಬೇನೆಯನ್ನೂ ಕಳೆಯದೆ ಹಲವು ಬೇನೆಗಳಿಗೆ ಕಾರಣವಾಗುವ ವೈದ್ಯವೂ ಇದೆಯೆನ್ನಿ! ಬಡವನು ಧನಿಕನಾಗುವಾಗ ತನ್ನ ಬಡತನವನ್ನು ಬೇರೆಯವರಿಗೆ ಅಂಟಿಸದೆ ಆಗುತ್ತದೆಯೆ? ಒಬ್ಬನಿಂದ ಕೈ ಬಿಟ್ಟ ಹಣವೇ ತಾನೆ ಬೇರೊಬ್ಬನನ್ನು ಸೇರುವುದು? ಯಾರೂ ಬಡವರಿರದೆ ಎಲ್ಲರೂ ಹಣವಂತರಾಗುವುದು ಸಾಧ್ಯವಿಲ್ಲ. ಯಾರೂ ಹಣವಂತರಿರದೆ ಎಲ್ಲರೂ ಬಡವರಾಗುವುದೇನೋ ಸಾಧ್ಯ!

ನಮ್ಮ ದೇಶದಲ್ಲಿ ಸಮಾಜ ಸುಧಾರಣೆ, ಆರ್ಥಿಕ ಸಮಾನೀಕರಣ, ವರ್ಗಸಮನ್ವಯ ಮುಂತಾದ ಹೆಸರುಗಳಿಂದ ನಡೆಯುತ್ತಿರುವ ಕೆಲಸಗಳೆಲ್ಲ ಬಹುಮಟ್ಟಿಗೆ ಇಂಥವೇ.

ತಕ್ಕಡಿಯ ತ್ರಾಸು ತಟ್ಟೆಗಳ ಲೆಕ್ಕ. ಒಂದು ಮೇಲೆ ಹೋದರೆ ಇನ್ನೊಂದು ಕೆಳಗೆ ಬರುತ್ತದೆ. ಒಂದೇ ನೆಲೆಯಲ್ಲಿ ಇರುವುದೇನೋ ಆದರ್ಶವೇ. ಆದರೆ ಸಮತೂಕ ತೂಗುವುದು ಅಷ್ಟು ಸುಲಭವಲ್ಲ.

ಕುರುಡು ಕಾಂಚಾಣ

ಹಣದ ಹಿಂದೆ ಓಡುವವರೇ ಎಲ್ಲರೂ! ಹಣದ ಬೇಟೆ ಯಾರಿಗೂ ಬೇಸರವಿಲ್ಲ!

ಹಣವಿಲ್ಲದೆ ಏನನ್ನು ತಾನೆ ಮಾಡಬಹುದು, ಎಂದು ಹಣದ ಬೇಟೆಯಲ್ಲಿ ತೊಡಗಿದವರ ಸವಾಲು. ಹಣವಿದ್ದರೆ ಏನನ್ನಾದರೂ ಮಾಡಿಯೇವು ಎಂದು ಅವರ ಹುಮ್ಮಸ. ಆದರೆ ಒಂದು ಗಳಿಗೆ ಬೇಟೆಯನ್ನು ನಿಲ್ಲಿಸಿ ಆಲೋಚಿಸಿದರೆ- ಬದುಕಿನ ಮುಖ್ಯ ವಿವರಗಳೆಲ್ಲ ಹಣದಿಂದ ಬರುವವೇ ಅಲ್ಲ! ಸ್ನೇಹ, ಪ್ರೀತಿ, ತೃಪ್ತಿ, ಆರೋಗ್ಯ, ಹರ್ಷ, ಜಾಣತನ, ಪ್ರತಿಭೆ, ಕಲೆಯಲ್ಲಿ ಅಭಿರುಚಿ, ಅನುಕೂಲವಾದ ದಾಂಪತ್ಯ ಸರಸಸಂವಾದ-ಇವುಗಳಲ್ಲಿ ಯಾವುದನ್ನು ತಾನೆ ಹಣದಿಂದ ಪಡೆದುಕೊಳ್ಳಲಾದೀತು? ರಾಶಿ ರಾಶಿ ಹಣವಿದ್ದರೂ ಇವನ್ನು ಎಳ್ಳಷ್ಟೂ ಪಡೆಯದೆ ಹೋಗುವವರನ್ನು ಯಾರು ಕಂಡಿಲ್ಲ? ಅವರ ಸಂಕಟವನ್ನು ಯಾರು ಕೇಳಿಲ್ಲ? ಬೇಸರವನ್ನು ಕಳೆಯಲು ನೆರವಾಗುವ ಹಣ ನೆಮ್ಮದಿಯನ್ನೂ ತಂದೀತೆಂಬ ನಿಶ್ಚಯವಿರದು.

ಹಣ ಬೇಡವೆಂದಲ್ಲ. ಬಡತನದ ಬೇಗೆ ಯಾರಿಗೆ ತಾನೆ ಹಿತ? ದುಡಿದು ಗಳಿಸುವ ಹಣಕ್ಕೆ ಬೆಲೆಯಿಲ್ಲವೆ? ಹಣವಿರದೆ ಬದುಕು ಬರಡಾಗುವುದಷ್ಟೇ ಅಲ್ಲ, ಸೊರಗಿಹೋಗುವುದೂ ಉಂಟು. ಆದರೆ ಅದಕ್ಕೆ ನಾವು ಕಟ್ಟುವ ಪಟ್ಟ ಅದರ ಯೋಗ್ಯತೆಯನ್ನು ಮೀರಿರಬಾರದು. ಹಣವಿದ್ದಾರಾಯಿತು, ಉಳಿದ ಗುಣಗಳೆಲ್ಲ ತಾವಾಗಿ ಬಂದು ಸೇರಿಕೊಳ್ಳುತ್ತವೆ ಎನ್ನುವ ಹಾಗಿಲ್ಲ. ಹಣದಿಂದ ಎಲ್ಲವನ್ನೂ ಪಡೆದುಕೊಳ್ಳಬಹುದು ಎನ್ನುವಂತೆಯೂ ಇಲ್ಲ. ಹಣವಿದ್ದರೆ ಸುಖ ಎನ್ನುವುದು ನಿಶ್ಚಯವಿಲ್ಲ. ಹಣದಿಂದ ಕೊಳ್ಳಲಾಗದ ಸುಖವೂ ಇದೆ; ಹಣದಿಂದ ಗಳಿಸಿಕೊಳ್ಳಬಹುದಾದ ಕಷ್ಟವೂ ಇದೆ! ಬದುಕಿನುದ್ದಕ್ಕೂ ಆಸರೆಯಾಗಿ ನಿಲ್ಲಬಲ್ಲದ್ದನ್ನು ನಾವು ಅರಸುವುದು ಸಹಜ. ಬಯಸುವುದು ಸಹಜ. ಇದು ಎಲ್ಲರಿಗೂ ಒಂದೇ ಆಗಿರದು. ಯಾವುದು ಬದುಕಿಗೆ ಆಸರೆಯಾದೀತು ಎನ್ನುವುದು ಅವರವರ ಆಸಕ್ತಿ ಪ್ರವೃತ್ತಿ ಅನುಭವವಗಳನ್ನನುಸರಿಸಿ ಇರುತ್ತದೆ. ಆದರೆ ಇದು ಹಣವಂತೂ ಅಲ್ಲ; ಅಷ್ಟು ಮಾತ್ರ ದಿಟ!

ಹಣಕ್ಕೆ ಕಣ್ಣಿಲ್ಲ; ತನ್ನನ್ನು ನಂಬಿಕೊಂಡವರು ಯಾರು ಎಂದು ಅದು ಕಾಣಲಾರದು. ನಮಗೆ ಅದರ ಮೇಲಿರುವ ಆಸೆ ಅದಕ್ಕೆ ನಮ್ಮ ಮೇಲೆ ಇರಲಾರದು. ಎಷ್ಟಾದರೂ ಅದು 'ಕುರುಡು-ಕಾಂಚಾಣ'ವಲ್ಲವೆ? ಅದನ್ನೇ ನಂಬಿದವರು ತಾವೂ ಕುರುಡರೇ ಆದಾರು!'

ಧನದ ದಾರಿ

ಹಳೆಯದೊಂದು ಕಿವಿಮಾತು-ಹಣಕ್ಕೆ ಮೂರೇ ದಾರಿಗಳು:ದಾನ, ಭೋಗ, ನಾಶ. ಬೇರೆಯವರಿಗೆ ದಾನ ಮಾಡದಿದ್ದ ಹಣ, ತಾನು ಅನುಭವಿಸದಿದ್ದ ಹಣ ನಾಶವಾಗುವುದು ಖಂಡಿತ.

ಹಣವನ್ನು ಸಂಪಾದಿಸಬೇಕಾಗಿರುವುದು ಸರಿಯೆ. ಹಣವಿಲ್ಲದೆ ಬದುಕು ಸಾಗಲಾರದು. ಸಂಪಾದಿಸಿದ ಹಣವನ್ನು ಉಳಿಸಿಕೊಳ್ಳಬೇಕೆಂಬುದೂ ಸರಿಯೆ. ಮುಂದೆ ಹೇಗೋ ಏನೋ! ಆದರೆ ಗಳಿಕೆ-ಉಳಿಕೆಗಳಲ್ಲಿ ಒಂದು ಔಚಿತ್ಯಜ್ಞಾನ ಇರ ಬೇಕಾಗುತ್ತದೆ. ಹಣವನ್ನು ಗಳಿಸುವುದರಲ್ಲೇ ಬಾಳನ್ನೆಲ್ಲ ಕಳೆದರೆ, ಹಣದ ಪ್ರಯೋಜನವನ್ನು ಪಡೆದುಕೊಳ್ಳುವುದು ಯಾವಾಗ? ಹಣ ತನ್ನ ಕೈ ಬಿಡಬಾರದೆಂದು ಜೋಪಾನವಾಗಿ ಕೂಡಿಟ್ಟರೂ ಹಣದ ಪ್ರಯೋಜನವನ್ನು ಪಡೆದುಕೊಂಡಂತಾಯಿತೆ?

ಮೊದಲಿಗೆ ಹಣವಿಲ್ಲದ ಬಡವ; ಆಮೇಲೆ ಹಣವುಳ್ಳ ಬಡವ! ಹಣ ಬಂದಿತೆಂದು ಅವನು ತನ್ನ ಬಡತನವನ್ನೇನು ಬಿಡುವುದಿಲ್ಲ. 'ಜಿಪುಣನಂಥ ದಾನಿಯಿಲ್ಲ' ಎಂಬ ಇನ್ನೊಂದು ಮಾತಿದೆ. ಉಳಿದ ದಾನಿಗಳು ತಾವು ಅನುಭವಿಸಿ, ಉಳಿದದ್ದನ್ನು ಕೈಯೆತ್ತಿ ದಾನ ಮಾಡುತ್ತಾರೆ. ಜಿಪುಣನೋ ತಾನೂ ಅನುಭವಿಸದೆ, ಕೈಯಿಂದ ಮುಟ್ಟದೆಯೇ, ತನ್ನ ಅರಿವಿಲ್ಲದೆಯೇ, ಬೇರೆಯವರಿಗೆ ಬಿಟ್ಟು ಹೋಗುತ್ತಾನೆ! ಹಣ ಬಂದ ಕಾಲಕ್ಕೆ ಅದನ್ನು ಅನುಭವಿಸುವುದು ಒಂದು ದಾರಿ. ಅನುಭವಿಸುವವನ ಬದುಕಂತೂ ಸಂತೋಷದಿಂದ ಕೂಡಿರುತ್ತದೆ. ತಾನೂ ಅನುಭವಿಸಿ, ಇತರರ ಅನುಭವಕ್ಕೂ ಅದನ್ನು ಒದಗಿಸಿ, ತನ್ನ ಸಂತೋಷ ಮತ್ತು ಇತರರ ಸಂತೋಷ ಎರಡನ್ನೂ ಸಾಧಿಸಿಕೊಳ್ಳುವುದು ಎರಡನೆಯ ದಾರಿ. ಆದರೆ ತಾವೂ ತಿನ್ನದೆ ಪರರಿಗೂ ಕೊಡದೆ ಇರುವವರು ಏನು ಮಾಡಿದಂತಾಯಿತು? ಹಣದ ಪ್ರಯೋಜನ ಬದುಕಿನ ಸೌಲಭ್ಯಗಳಿಗೆ ಕಾರಣ ವಾಗುವುದು. ಬದುಕಿಗೆ ಅಗತ್ಯವಾದುದೆಲ್ಲ ಹಣದಿಂದ ಬರುತ್ತದೆ ಎಂದಲ್ಲ. ಆದರೆ ಬದುಕನ್ನು ಹಗುರಗೊಳಿಸುವಲ್ಲಿ ಹಣ ನೆರವಾಗುತ್ತದೆ. ಇದನ್ನು ಮೀರಿ ಹಣಕ್ಕೆ ಬೆಲೆಯಿಲ್ಲ.

ಹಣವಿದ್ದು ಅದನ್ನು ಬಳಸದಿದ್ದರೆ ಏನು? ಹಣವಿರದೆ ಇದ್ದರೆ ಏನು? ಬಡವನಿಗೂ ಜಿಪುಣನಿಗೂ, ಬದುಕಿನ ಬಗೆಯಲ್ಲೇನು ಅಂತರವಿರದು. ಜಿಪುಣನ ಹಣ ಹಿಡಿಯುವುದು ಮೂರನೆಯ ದಾರಿಯನ್ನು. ಅದು ಹೇಳಹೆಸರಿಲ್ಲದೆ ಹಾಳಾಗುತ್ತದೆ. ಇವನು ಕೂಡಿಟ್ಟದ್ದು ಯಾರ ದುಂದಿಗೋ ಒದಗುತ್ತದೆ. ಅದೇನು ಊರ್ಜಿತವಾಗಲಾರದು.

'ಯಕ್ಷವಿತ್ತ'

ಸಂಸ್ಕೃತದಲ್ಲಿ 'ಯಕ್ಷವಿತ್ತ' ವೆಂಬ ಒಂದು ಮಾತಿದೆ. ಯಕ್ಷರು ಕುಬೇರನ ಅನುಚರರೆಂದು ಪ್ರತೀತಿ. ಕುಬೇರ 'ನಿಧಿಪತಿ'. ಎಂದರೆ ಭೂಮಿಯೊಳಗೆ ಅಡಗಿರುವ ಎಲ್ಲ ಸಂಪತ್ತಿಗೂ ಒಡೆಯ. ಭೂಮಿಯ ಹರವಿನಲ್ಲಿ ಬರುವ ಬೇರೆ ಬೇರೆ ಬಗೆಯ ಸಂಪತ್ತುಗಳನ್ನು ಕಾಪಿಟ್ಟುಕೊಳ್ಳುವ ಸಲುವಾಗಿ ಯಕ್ಷರನ್ನು ಕುಬೇರ ನೇಮಿಸಿದ್ದಾನಂತೆ.

ಎಂದರೆ ಯಕ್ಷರು ಸಂಪತ್ತಿನ ಕಾವಲುಗಾರರು. ಆದರೆ ಅವರು ಅದನ್ನು ಮುಟ್ಟುವ ಹಾಗಿಲ್ಲ. ಅನುಭವಿಸುವ ಹಾಗಿಲ್ಲ. ಯಾರಿಗಾಗಲಿ ಕೊಡುವ ಹಾಗಿಲ್ಲ. ಅದು ಹಾಳಾಗದಂತೆ ನೋಡಿಕೊಳ್ಳುವುದಷ್ಟೆ ಅವರ ಕೆಲಸ. ಅವರ ಹೊಣೆ.

ಅವರ ಬಳಿ ಬೇಕಾದಂತೆ ಸಂಪತ್ತಿದ್ದರೂ, ಅವರ ವಶದಲ್ಲೇ ಅದು ಇರುವುದಾದರೂ, ದಿಟವಾಗಿ ಅದು ಅವರದ್ದಲ್ಲ! ಅವರಿಗೆ ಅದರಿಂದ ಯಾವ ಪ್ರಯೋಜನವಾಗಲಿ, ಏನೊಂದು ಸುಖವಾಗಲಿ ಇರದು.

ಜಿಪುಣರ ಬಳಿ ಇರುವ ಹಣವನ್ನು 'ಯಕ್ಷವಿತ್ತ'ವೆಂದು ಬಣ್ಣಿಸುತ್ತಾರೆ. ಕಷ್ಟ ಪಟ್ಟೋ; ಅನಾಯಾಸವಾಗಿಯೋ ಅವರ ಬಳಿ ಹಣ ಸೇರುವುದೆನ್ನಿ. ಏನನ್ನೂ ಪೋಲು ಮಾಡದೆ ಎಲ್ಲವನ್ನೂ ಕೂಡಿಸಿ ಇಡುತ್ತಾರೆ. ಹಣ ತಮ್ಮ ಬಳಿ ಹೆಚ್ಚುತ್ತಿರುವುದನ್ನು ತಿಳಿದು ಸಂತೋಷಪಡುತ್ತಾರೆ. ಆದರೆ ತಮ್ಮ ನೆಮ್ಮದಿಗಾಗಿ, ಸುಖಕ್ಕಾಗಿ, ಅನುಕೂಲ ಕ್ಕಾಗಿ ಈ ಹಣವನ್ನು ಜಿಪುಣರು ವೆಚ್ಚ ಮಾಡುವುದಿಲ್ಲ. ಹೊಟ್ಟೆತುಂಬ ಉಣ್ಣುವುದೂ ಇಲ್ಲ, ಮೈತುಂಬ ಉಡುವುದೂ ಇಲ್ಲ; ತನ್ನವರೊಂದಿಗೆ ಸುಖಪಡುವುದೂ ಇಲ್ಲ; ಹಣ ಇರದ ಬಡವರು ಬಾಳಿದಂತೆಯೆ ಬಾಳುತ್ತಾರೆ!

ಇನ್ನು ಬೇರೆಯವರಿಗೆ ಕೈಯೆತ್ತಿ ನೀಡುವುದಾದರೂ ಉಂಟೆ? ಅದು ಕನಸಿನಲ್ಲಿಯೂ ಇಲ್ಲ. 'ತಾನೂ ತಿನ್ನ; ಪರರಿಗೂ ಕೊಡ'. ತನ್ನ ಬಳಿಯಿರುವ ಹಣ ಯಾವ ಕಾರಣದಿಂದಲೂ ಕಡಮೆಯಾಗಬಾರದು ಎನ್ನುವ ಹಟ ಜಿಪುಣನಿಗೆ; ಹಣವನ್ನು ನೋಡಿ ಸಂತೋಷಪಡುತ್ತಾನೆ ಅಷ್ಟೆ. ಆದರೆ ಅವನು ಕೂಡಿಟ್ಟ ಹಣ ಎಷ್ಟು ಕಾಲ ಉಳಿದೀತು? ಅವನ ಕಾಲ ಮುಗಿಯಿತೆಂದರೆ, ಅದನ್ನು ಪೋಲುಮಾಡುವ ಮಕ್ಕಳಿ ರುತ್ತಾರೆ. ನುಂಗಿ ಹಾಕುವ ದಾಯಾದಿಗಳಿರುತ್ತಾರೆ. ವಶಪಡಿಸಿಕೊಳ್ಳುವ ಅಧಿಕಾರಿ ಗಳಿರುತ್ತಾರೆ.

ಹಣಕ್ಕೆ ಮೂರೇ ದಾರಿಗಳಂತೆ-ಇದ್ದಾಗ ಅನುಭವಿಸುವುದು ಒಂದು; ಇಲ್ಲದಿದ್ದ ವರಿಗೆ ನೀಡುವುದು ಇನ್ನೊಂದು; ಎರಡೂ ಆಗದಾಗ ಹಾಳಾಗುವುದು ಮೂರನೆಯದು (ದಾನಂ, ಭೋಗೋ, ನಾಶಃ ತಿಸ್ರ ಏವ ಗತಯೋ ವಿತ್ತಸ್ಯ)

ಹಣ-ಹಸಿವು

ಸಂಸ್ಕೃತದ ಸುಭಾಷಿತವೊಂದು ಬಡವರ ಭಾಗ್ಯವಂತರ ನಡುವೆ ಇರುವ ಭೇದವನ್ನು ಹೀಗೆ ಒಕ್ಕಣೆ ಮಾಡಿದೆ- ಬಡವ ಹಸಿವೆಯಿಂದ ಕಂಗೆಟ್ಟು ಹಣಬಂದರೆ ಊಟ ಸಿಕ್ಕೀತೆಂದು ಪರದಾಡುತ್ತಾನೆ; ಭಾಗ್ಯವಂತನಾದರೋ ಹಣವಿದ್ದರೂ ಹಸಿವೆಯೇ ಆಗದೆ ತೊಂದರೆಪಡುತ್ತ ಸದ್ಯ ಹಸಿವು ಹುಟ್ಟಿದರೆ ಸಾಕೆಂದು ಪೇಚಾಡುತ್ತಾನೆ.

ಬಡವನ ಹಸಿವೆ ಆಹಾರವಿಲ್ಲದ್ದರಿಂದ; ಅವನಿಗೆ ಆಹಾರ ಇಲ್ಲದಿರುವುದು ಹಣ ಇಲ್ಲದಿರುವುದರಿಂದ. ಹಸಿವೆಯಾದರೆ ಆರೋಗ್ಯವೆಂದೇ ಸೂಚನೆ. ಆರೋಗ್ಯ ವಿದ್ದಾಗಲೇ ಊಟ ಬೇಕೆನಿಸುವುದು. ಹೊಟ್ಟೆ ತುಂಬುವಷ್ಟು ಊಟಕ್ಕೆ ಬೇಕಾದಷ್ಟು ಹಣ ದೊರೆತರೆ ಸಾಕು ಎಂದು ಅವನಿಗೆ ಅನಿಸುವುದು ಸಹಜ.

ಭಾಗ್ಯವಂತನ ಸಮಸ್ಯೆ ಬೇರೆ ರೀತಿಯದು. ಹೊಟ್ಟೆಬಟ್ಟೆಗೆ ಸಾಕಾಗುವಷ್ಟಕ್ಕಿಂತ ಎಷ್ಟೋ ಹೆಚ್ಚು ಹಣ ಅವನಲ್ಲಿದೆ; ಹಾಗಾಗಿರುವುದರಿಂದ ಹೊಟ್ಟೆಬಿರಿಯ ತಿಂದು, ತೇಗಿ ಕೆಲಸಮಾಡುವ ಅಗತ್ಯವಿರದೆ ಒರಗಿರುತ್ತ ಸುಖದ ಸಾಧನೆಗಳನ್ನೆಲ್ಲ ಬಳಸಿಕೊಳ್ಳುವವನು ಅವನು. ಇದರಿಂದಾಗಿ ಉಂಡದ್ದು ಅರಗದೆ, ಜಡ್ಡು ಹಿಡಿದು, ಬವಣೆಪಡುವನು. ಆರೋಗ್ಯ ಕೆಟ್ಟು ಹಸಿವೆಯೇ ಆಗದೆ ಮದ್ದಿಗಾಗಿ ಅಂಡಲೆ ಯುತ್ತಾನೆ. ತನ್ನಲ್ಲಿ ಹಸಿವೆಯನ್ನುಂಟುಮಾಡಬಲ್ಲ ವೈದ್ಯನನ್ನು ಹುಡುಕಾಡುತ್ತ ಸಂಕಟಪಡುತ್ತಾನೆ.

ಈ ವಿಪರ್ಯಾಸ ಎಲ್ಲರಿಗೂ ತಿಳಿದದ್ದೇ ತಾನೆ? ಹಣವಿದ್ದೂ ಭಾಗ್ಯವಂತನಿಗೆ ಸುಖವಿಲ್ಲ; ಆರೋಗ್ಯವಿದ್ದೂ ಬಡವನಿಗೆ ಸುಖವಿಲ್ಲ. ಅವನಿಗೆ ಊಟವಿದೆ; ಹಸಿವೆಯಿಲ್ಲ. ಇವನಿಗೆ ಹಸಿವೆಯಿದೆ; ಊಟವಿಲ್ಲ! ಇವನ ಆರೋಗ್ಯ ಅವನಿಗೆ ಬರಬೇಕಾದರೆ ಅವನ ಹಣದಲ್ಲಿ ಒಂದು ಭಾಗ ಇವನಿಗೆ ಬರಬೇಕು. ಭಾಗ್ಯವಂತ ನಲ್ಲಿರುವ ಹೆಚ್ಚು ಹಣಕ್ಕೆ ಗುಣ ಒದಗುವುದು ಅದನ್ನು ಹಂಚಿಕೊಂಡಾಗಲೇ. ಹಸಿವನ್ನು ಹಂಚಿಕೊಳ್ಳುವಹಾಗಿಲ್ಲ. ಹಣವನ್ನಾದರೆ ಹಂಚಿಕೊಳ್ಳಬಹುದು.

ಆದ್ದರಿಂದಲೇ ದಾನವನ್ನು 'ಸಂವಿಭಾಗ' ಎಂದು ನಮ್ಮವರು ಕರೆದಿದ್ದಾರೆ. ಸಂವಿಭಾಗವೆಂದರೆ, ಇದ್ದದ್ದನ್ನು ಇಲ್ಲದವರೊಂದಿಗೆ ಹಂಚಿಕೊಳ್ಳುವುದು.

'ಸಿರಿ ಬರಲು'

ಕನ್ನಡದಲ್ಲಿ ಗಾದೆ— ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿದು ನಡೆದ, ಎಂದು? ಅರ್ಧರಾತ್ರಿಯಲ್ಲಿ ನಡೆದಾಡುವ ಪ್ರಸಕ್ತಿಯೆ ಸಾಮಾನ್ಯರಿಗಿರದು. ಒಂದು ವೇಳೆ ಅಂಥ ಅಗತ್ಯ ಬಂದರೂ ಮಳೆಯಿರದಿದ್ದಾಗ ಕೊಡೆ ಹಿಡಿಯಬೇಕಾದುದಿಲ್ಲ. ಬಿಸಿಲಂತೂ ಇರುವುದೇ ಇಲ್ಲವಷ್ಟೆ? ಇನ್ನು ಕೊಡೆಯ ಪ್ರಯೋಜನವೇನು? ತನ್ನ ಬಳಿ ಕೊಡೆಯೊಂದು ಇದೆಯೆಂಬುದನ್ನು ಎಲ್ಲರಿಗೂ ಮನವರಿಕೆ ಮಾಡಿಕೊಡುವುದೇ ಉದ್ದೇಶ. ಆದರೆ ಇವನು ಕೊಡೆ ಹಿಡಿದಿರುವುದನ್ನು ನೋಡಲು ಅರ್ಧಗಾತ್ರಿಯಲ್ಲಿ ಯಾರು ನೆರೆದಿರುತ್ತಾರೆ? ಇದರ ಪರಿವೆ ಅವನಿಗಿದೆಯೆ? ಐಶ್ವರ್ಯ ಬಂದಿತೆಂದರೆ ವಿವೇಕ ಹಾರಿಹೋಗುತ್ತದೆ. ಹಣವಿರುವಾಗ ಎಲ್ಲ ತೆರನಾದ ಅನುಕೂಲಗಳೂ, ವೈಭವಗಳೂ ತನಗಿರಬೇಕು; ಬೇರೆಯವರು ತನ್ನ ಓಲಾಟವನ್ನು ಕಂಡು ಕರುಬಬೇಕು; ತನ್ನನ್ನು ಓಲೈಸಬೇಕು. ಇಷ್ಟೇ ಅವನ ಬಯಕೆ. ಅದಕ್ಕಾಗಿ, ಸಂದರ್ಭಶುದ್ಧಿ ಇರಲಿ ಇಲ್ಲದಿರಲಿ, ಅವನ ಠೀವಿ, ಠೇಂಕಾರ, ಒಡ್ಡೋಲಗ, ಡೌಲು, ಮೆರವಣಿಗೆ ನಡೆಯುತ್ತಲೆ ಇರಬೇಕು. ತನಗಿರುವ ಸಿರಿ-ಸಂಪತ್ತು ಎಲ್ಲರ ಕಣ್ಣನ್ನೂ ಕುಕ್ಕಬೇಕು, ಎಲ್ಲರೂ ತನ್ನನ್ನು ನೋಡಿ ಕೊಂಡಾಡಬೇಕು ಎಂಬುದು ಅಲ್ಪನ ಬಯಕೆ.

ಸ್ವಭಾವದಲ್ಲಿ ಗಾಂಭೀರ್ಯವಿದ್ದವರು 'ಸಿರಿ ಬರಲು ಡೊಂಕಿ' ನಡೆಯುವುದಿಲ್ಲ. 'ಸಿರಿ-ಗರ ಸೋಂಕಿದೊಡೆ ನರರು ಮೂಡೊಂಕಪ್ಪರು'. ಐಶ್ವರ್ಯವೆನ್ನುವುದು ಒಂದು ಗರ; ಗ್ರಹಬಾಧೆ. ಇದು ಎರಗಿದರೆ ಮನುಷ್ಯನ ಮೈ ನೆಟ್ಟಗಿದ್ದುದು ತ್ರಿಭಂಗಿಯಾಗಿ ಬಿಡುವುದಂತೆ! ನಿಂತಲ್ಲಿ ನಿಲ್ಲಲಾರ, ಕೂತಲ್ಲಿ ಕೂಡಲಾರ. ಕುಣಿದಾಡುತ್ತಿರುವುದು, ಹಾರಾಡುವುದು ಅವನ ಪಾಡು. ಮೈಯಲ್ಲಿ ಒಂದು ಡೊಂಕಿದ್ದರೇ ಕಷ್ಟ; ಇನ್ನು ಮೂರು ಡೊಂಕುಗಳಾದರೆ ಹೇಳುವುದೇನು?

ಬಡತನದ ಹೆಗ್ಗಳಿಕೆ

ನೀಲಕಂಠ ದೀಕ್ಷಿತರೆಂಬುವವರು 'ಕಲಿವಿಡಂಬನ'ವೆಂಬ ಕೃತಿಯೊಂದನ್ನು ರಚಿಸಿದ್ದಾರೆ. ಅದರಲ್ಲಿ ಬಡತನದ ಅನುಕೂಲವನ್ನು ಕುರಿತಂತೆ ಕೆಲವು ಮಾತುಗಳೂ ಬರುತ್ತವೆ.

'ಬಡವನಿಗೆ ಕಳ್ಳರ ಭಯವಿಲ್ಲ; ತನ್ನ ಮೇಲೆ ಯಾರಾದರೂ ದೂರನ್ನು ಒಯ್ದಾರೆಂಬ ಅಂಜಿಕೆಯಿಲ್ಲ; ಆಸ್ತಿಯಲ್ಲಿ ಪಾಲನ್ನು ಕೇಳಿ ಕಾಡುವ ನಂಟರಿಲ್ಲ. ಇನ್ನು ತೆರಿಗೆ ಹಾಕಿ ಬಳಲಿಸುವರೆಂಬ ಆತಂಕವಾದರೂ ಇದೆಯೆ ಎಂದರೆ ಅದೂ ಇಲ್ಲ'. ಬಡತನವೊಂದು ಬೇನೆಯೆಂದೇ ಎಲ್ಲರ ಅನಿಸಿಕೆ. ಅದನ್ನು ತೊಲಗಿಸಿಕೊಳ್ಳುವ ಹಂಬಲ ಎಲ್ಲರದ್ದೂ. ಅದೊಂದು ಕೊರತೆ. ಅದರಿಂದ ಮೈಗೂ ಹಿತವಿಲ್ಲ, ಮನಸ್ಸಿಗೂ ಸುಖವಿಲ್ಲ. ಸಿರಿತನವೇ ದೊಡ್ಡದು, ಅದರಿಂದ ಎಲ್ಲ ದುಃಖಗಳೂ ನೀಗಿಹೋಗುವುವು, ನಿತ್ಯ, ನಿರಂತರವಾದ ಸುಖ ಎಂದೇನೂ ಅಲ್ಲ. ಸಿರಿತನದಿಂದಲೂ ಕಷ್ಟ ಬಂದಡರುತ್ತದೆ. ಕಳ್ಳರ ಕಾಟ, ಚಾಡಿಕೋರರ ಮೇಲಾಟ, ದಾಯಾದಿಗಳು ಒದಗಿಸುವ ಸಂಕಟ, ಸುಂಕದವರ ನಿರ್ಬಂಧ ಮೊದಲಾದ ಕಷ್ಟಗಳು. ಇದನ್ನೇ ನೀಲಕಂಠದೀಕ್ಷಿತರು ಹೇಳಿರುವುದು. ಬಡವರಿಗೆ ಇಂಥ ತೊಂದರೆಗಳೇನಿರವು. ಆದರೆ ಬದುಕಿನಲ್ಲಿ ಇಷ್ಟೇ ಕಷ್ಟಗಳೇ? ಇವುಗಳಿಗೆ ಮಿಗಿಲಾದ ಕಷ್ಟಗಳಿರವೆ? ಹಸಿವೆಯನ್ನು ತಣಿಸಲಾರದೆ ಹೋದರೆ, ತಲೆಯ ಮೇಲೊಂದು ಸೂರು ಇರದಿದ್ದರೆ, ನಿಲ್ಲಲು ನೆಲೆಯೊಂದು ಕಾಣದಾದರೆ, ನಂಬಿದರವನ್ನು ಸಲಹಲಾರದೆ ಹೋದರೆ ಅದೇನು ನೆಮ್ಮದಿ? ಇವೆಲ್ಲ ಬಡತನದಿಂದ ನೇರವಾಗಿ ಬರುವ ತೊಂದರೆಗಳೇ. ಇವನ್ನು ಕುರಿತು ಯಾವ ಕವಿಯೂ ಹಾಡಿಹೊಗಳಲಾರ. ಕವಿಗಳು ಹೇಳಿಕೇಳಿ ಬಡವರೇ. ಬಡತನ ವಿರದಿದ್ದರೆ ಅವರ ಕವಿತೆ ಹೊರಬರುತ್ತಿತ್ತೋ ಇಲ್ಲವೋ! ಕಲೆಗೆ ಪ್ರೇರಕವಾದುದು ಬಹುವೇಳೆ ಬಂದೊದಗುವ ಕಷ್ಟಗಳೇ ಎನ್ನಿ. ಆದರೆ ಇಲ್ಲಿ ಕವಿ ಮಾಡಿರುವುದು ಸ್ತುತಿಯಲ್ಲ, ವಿಡಂಬನೆ. ಇದೊಂದು ಹಾಸ್ಯದ ಹೊನಲಿನಲ್ಲಿ ಬಂದ ಕಟುಸತ್ಯ.

ಬಡತನವೇನು ಕವಿ ಒಲಿದುಕೊಂಡ ವ್ರತವಲ್ಲ. ಈ ಪದ್ಯದಿಂದಲೂ ಅವನಿಗಷ್ಟಿಷ್ಟು ಹಣ ಬಂದಿದ್ದೀತು! ಬಂದರೆ ಯಾರು ಬೇಡವೆನ್ನುತ್ತಾರೆ? ಬಂದಮೇಲೆ ಕಳ್ಳರೋ ದಾಯಾದಿಗಳೋ ತೆರಿಗೆಯ ಅಧಿಕಾರಿಗಳೋ ಬಂದರೆ ಬರಲಿ.

ಬಕಬಂಧನ

ಶಾಸ್ತ್ರ ಗ್ರಂಥಗಳಲ್ಲಿ ಯಾವುದಾದರೊಂದು ನಿಲುವನ್ನು ಎತ್ತಿಹಿಡಿಯುವಾಗ, ಅಥವಾ ಅಲ್ಲಗಳೆಯುವಾಗ ಕೆಲವು ಲೌಕಿಕ ನ್ಯಾಯಗಳನ್ನು ಬಳಸುವುದುಂಟು. ಅವುಗಳಲ್ಲೊಂದು 'ಬಕಬಂಧನ ನ್ಯಾಯ'.

ಕೊಕ್ಕರೆಯನ್ನು ಹಿಡಿಯುವ ಬಗೆಯನ್ನು ಕುರಿತದ್ದು. ಅದು ಜಾಣನೊಬ್ಬನ ಸಲಹೆ. ಕೊಕ್ಕರೆಯನ್ನು ಕಂಡೊಡನೆ ಅದರ ಹತ್ತಿರ ಹೋಗಿ ಅದರ ತಲೆಯಮೇಲೆ ಬೆಣ್ಣೆಯ ಮುದ್ದೆಯೊಂದನ್ನು ಇರಿಸಬೇಕು; ಬಿಸಿಲಿಗೆ ಕರಗಿ ಬೆಣ್ಣೆ ಕೊಕ್ಕರೆಯ ಕಣ್ಣೊಳಗೆ ಹರಿಯುತ್ತದೆ; ಕಣ್ಣು ಕಾಣದಂತಾಗುತ್ತದೆ. ಆಗ ಕೊಕ್ಕರೆಯನ್ನು ಸುಲಭವಾಗಿ ಹಿಡಿದುಕೊಳ್ಳಬಹುದು! ಸಲಹೆಯೇನೋ ಒಳ್ಳೆಯದೇ; ತರ್ಕಬದ್ಧ ವಾಗಿದೆ. ಆದರೆ ಕೊಕ್ಕರೆಯನ್ನು ಹಿಡಿದುಕೊಳ್ಳದೆ ಅದರ ತಲೆಯ ಮೇಲೆ ಬೆಣ್ಣೆ ಯನ್ನಿಡುವುದು ಹೇಗೆ ಸಾಧ್ಯ? ಅದನ್ನು ಹಿಡಿದುಕೊಂಡಮೇಲೆ, ಬೆಣ್ಣೆಯನ್ನು ಇಡಬೇಕಾದ ಅಗತ್ಯವಾದರೂ ಏನು? ತಲೆಯ ಮೇಲೆ ಬೆಣ್ಣೆಯನ್ನಿರಿಸುವವರೆಗೂ ಕೊಕ್ಕರೆ ಅಲ್ಲೇ ನಿಂತಿರುವುದಾದರೆ, ಅದನ್ನು ಹಾಗೆಯೇ ಹಿಡಿದುಕೊಳ್ಳಬಹುದಲ್ಲ? ಇಂಥ ಪ್ರಸಂಗಗಳು ನಮ್ಮ ದಿನನಿತ್ಯದ ಬದುಕಿನಲ್ಲಿ ಎಷ್ಟೋ ಬರುತ್ತವೆ. ಕೊಕ್ಕರೆಯನ್ನು ಹಿಡಿಯುವಷ್ಟು ಸರಳವಲ್ಲದಿದ್ದರೂ, ನಮ್ಮ ಬಯಕೆಗಳನ್ನು ತೀರಿಸಿಕೊಳ್ಳುವ ಉಪಾಯಗಳನ್ನಂತೂ ನಾವು ಅರಸುತ್ತಲೇ ಇರುತ್ತೇವೆ. ಆಗ, ಮೇಲೆ ಹೇಳಿದ ಜಾಣನ ಸಲಹೆಯಂತೆಯೇ ನಮಗೆ ಅನೇಕ ಸಲಹೆಗಳು ದೊರಕುತ್ತವೆ.

ಸಮಸ್ಯೆಗೆ ಪರಿಹಾರದ ದಾರಿ ತರ್ಕಬದ್ಧವಾಗಿದ್ದರೆ ಮಾತ್ರ ಸಾಲದು; ಪ್ರಯೋಗಕ್ಕೆ ಒಳಪಡುವಂತಿರಬೇಕು, ವ್ಯವಹಾರದಲ್ಲಿ ಬರುವಂತಿರಬೇಕು. ನಾವು ಅನುಸರಿಸುವ ಸಾಧನ ಸಮರ್ಥವಾಗಿದೆಯೆ ಎನ್ನುವುದಕ್ಕಿಂತ ಹೆಚ್ಚಾಗಿ ಅದರ ಅಗತ್ಯವಿದೆಯೆ ಎಂದು ವಿಚಾರ ಮಾಡಬೇಕು.

ಕುಟುಂಬದ, ಸಮಾಜದ, ಪರಿಸರದ ಹಲವಾರು ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಿರುವ ತಜ್ಞರು, ರಾಜಕಾರಣಿಗಳು ಬಕ ಬಂಧನ ನ್ಯಾಯವನ್ನಷ್ಟು ಪರಿಶೀಲಿಸಿದರೆ ಒಳ್ಳೆಯದು.

ಶಾಖಾಚಂದ್ರ

ಸಂಸ್ಕೃತದಲ್ಲಿ 'ಶಾಖಾಚಂದ್ರನ್ಯಾಯ' ಎಂಬುದೊಂದಿದೆ. ಮಗು ಚಂದ್ರನನ್ನು ನೋಡಿಲ್ಲ, ಚಂದ್ರನೆಂದರೆ ಏನೆಂಬುದನ್ನೇ ಅರಿಯದು. ಅದಕ್ಕೆ ಚಂದ್ರನನ್ನು ತಿಳಿಸಿಕೊಡುವ ಬಗೆ ಹೇಗೆ? ಮಗು ಮರವನ್ನಾದರೆ ನೋಡಿದೆ; ಮರದ ರೆಂಬೆಯನ್ನೂ ತಿಳಿದಿದೆಯೆನ್ನಿ. ದೊಡ್ಡವರು ಮಗುವನ್ನೆತ್ತಿಕೊಂಡು ಮರದ ಕಡೆ ಬೆರಳು ತೋರಿಸಿ "ಅಗೋ ಆ ಮರವಿದೆಯಲ್ಲ, ಅದರ ಆ ರೆಂಬೆಯ ಮೇಲೆ ಬೆಳ್ಳಗೆ ಗುಂಡಗೆ ಕಾಣುವುದೆ ಚಂದ್ರ" ಎಂದು ಹೇಳುವರು. ಮಗು ಮರವನ್ನು ನೋಡಿ, ರೆಂಬೆಯ ಮೇಲೆ ಕಣ್ಣಾಡಿಸಿ ಚಂದ್ರನನ್ನು ಗುರುತಿಸುವುದು. ಮರದ ರೆಂಬೆಗೆ ಅಂಟಿಕೊಂಡಿರುವುದೆ ಚಂದ್ರ ಎಂದು ಮಗುವಿನ ಮೊದಲ ಗ್ರಹಿಕೆ. ವಯಸ್ಸು ಬಂದಂತೆ, ಮರದ ರೆಂಬೆಗೂ ಚಂದ್ರನಿಗೂ ಸಂಬಂಧವೇನಿರದು ಎಂಬ ಅರಿವು ಮೂಡುತ್ತದೆ. ಚಂದ್ರನಿರುವುದು ಮುಗಿಲಲ್ಲಿ, ಮರವಿರುವುದು ನೆಲದ ಮೇಲೆ, ಚಂದ್ರನನ್ನು ಕಾಣಿಸಲು, ಚಂದ್ರನತ್ತ ಗಮನವನ್ನು ಹರಿಸಲು ಮರದ ರೆಂಬೆ ಮೊದಲ ಸಾಧನವಾಯಿತು ಅಷ್ಟೆ.

ಹಿರಿಯರ ಬೆರಳನ್ನು ಹಿಡಿದು ಮಗುವಿನ ನೋಟ ಸಾಗುತ್ತದೆ; ಬೆರಳನ್ನು ದಾಟಿ ಮರದ ರೆಂಬೆಯನ್ನು ಹಿಡಿಯುತ್ತದೆ; ಅದನ್ನೂ ಬಿಟ್ಟು ಮುಂದೆ ಚಂದ್ರನಲ್ಲಿ ನೆಲೆಸುತ್ತದೆ. ಹಿರಿಯರಿಗೂ ಇದರ ಅರ್ಥವಾಗುವುದು ಕಷ್ಟ. ನಿದರ್ಶನಕ್ಕೆ, ಗುಡಿಯಲ್ಲಿ ಪೂಜೆಗೊಳ್ಳುವ ಗೊಂಬೆಯೇ ದೇವರು ಎನ್ನುವುದು ಮೊದಲ ಗ್ರಹಿಕೆ, ಮರದ ರೆಂಬೆಯ ಮೇಲೆ ಕೂತಿರುವುದು ಚಂದ್ರ ಎಂದ ಹಾಗೆ. ಆದರೆ ಬಹುಮಂದಿಗೆ ಈ ಮೊದಲ ಗ್ರಹಿಕೆಯೆ ಪಟ್ಟಾಗಿ ಉಳಿದುಕೊಳ್ಳುತ್ತದೆ. ಅದನ್ನು ಮೀರಿ ಅವರು ಮುಂದೆ ಸಾಗುವುದೇ ಇಲ್ಲ! ಅದೊಂದು ಉಪಾಯ, ಬಿಂಬವೇ ದೇವರು ಎಂಬುದು ಮೊದಲ ಹೆಜ್ಜೆ ಎಂಬುದನ್ನು ತಿಳಿಯಲಾರರು. ಹೀಗೆಯೆ, ವಿದ್ಯೆಗೂ ಶಾಲೆಗೂ ಇರುವ ನಂಟು, ಹಣಕ್ಕೂ ಸುಖಕ್ಕೂ ಇರುವ ಸಂಬಂಧ, ಸ್ವರೂಪಕ್ಕೂ ಸ್ವಭಾವಕ್ಕೂ ಇರುವ ಜೊತೆ.

ಸಂಕೇತವೇ ಸತ್ತ್ವವೆನ್ನಬಹುದೆ?

ಮದ್ದಿನೊಂದಿಗೆ ಬೆಲ್ಲ

ಸಂಸ್ಕೃತದಲ್ಲೊಂದು ನ್ಯಾಯ- 'ಗುಡಜಿಹ್ವಿಕಾ ನ್ಯಾಯ'ವೆಂಬುದು.

ಮಕ್ಕಳಿಗೆ ಕಹಿ ಔಷಧ ಕುಡಿಸುವ ಮುಂಚೆ, ಅಥವಾ ಅನಂತರ, ಬೆಲ್ಲವನ್ನು ನಾಲಗೆಗೆ ಹಾಕುವ ವಾಡಿಕೆಯಿದೆಯಲ್ಲವೆ? ಗುಡವೆಂದರೆ ಬೆಲ್ಲ; ಜಿಹ್ವೆಯೆಂದರೆ ನಾಲಗೆ. ಬೆಲ್ಲದ ರುಚಿಯನ್ನು ಮಗು ಬಲ್ಲದು, ಔಷಧದ ಕಹಿಯನ್ನೂ ಅರಿತಿರುತ್ತದೆ. ಔಷಧ ಬೇಡವೆಂದು ಹಟಮಾಡುತ್ತದೆ. ಬೇಡವೆಂದು ನಿರ್ಧರಿಸಿದಾಗ, ಔಷಧವನ್ನು ಬಲವಂತವಾಗಿ ಕುಡಿಸಿದರೂ ಮಗು ಅದನ್ನು ಹೊರಕ್ಕೆ ಹಾಕುವ ಹವಣಿಕೆ ಯಲ್ಲಿರುತ್ತದೆ. ಆದರೆ ಬೆಲ್ಲದ ಆಶೆ ಮದ್ದಿನ ಕಹಿಯನ್ನು ಮರೆಯುವಂತೆ ಮಾಡೀತು. ಔಷಧ ಹೇಗೋ ಗಂಟಲೊಳಗೆ ಇಳಿಯುತ್ತದೆ. ಬೆಲ್ಲದಿಂದ ಬೇನೆಯೇನೂ ಗುಣವಾಗುವುದಿಲ್ಲ; ಬೇನೆಗೆ ತಕ್ಕ ಔಷಧವೇ ಬೀಳಬೇಕು, ಅದರಿಂದಲೇ ಬೇನೆ ಬಗೆಹರಿಯುವುದು. ಆದರೆ ಔಷಧ ಒಳಗಿಳಿಯಲು ಬೆಲ್ಲ ನೆರವಾಗುತ್ತದೆ. ಬೆಲ್ಲವಿದ್ದರೇ ಔಷಧಕ್ಕೆ ಸ್ವಾಗತವಲ್ಲವೆ? ಬೇನೆಗೀಡಾಗಿರುವ ಅಂಗ ಯಾವುದೋ ಇರುತ್ತದೆ; ಅದಕ್ಕೆ ಬೆಲ್ಲದ ಅಗತ್ಯವೇನಿರದು. ಆದರೆ ಔಷಧ ಮೈಸೇರುವುದು ನಾಲಗೆಯ ಮೂಲಕ. ನಾಲಗೆಯ ರುಚಿಗೆ ಬೆಲ್ಲ ಹಿತ; ಔಷಧ ಅಹಿತ. ನಾಲಗೆಗೆ ಔಷಧ ಅಹಿತವೆನಿಸಿದರೂ ಶರೀರಕ್ಕೆ ಹಿತವೇ; ಅದರ ಅಗತ್ಯವಿದ್ದೇ ಇದೆ. ಬೆಲ್ಲದ ಆಸೆಗೆ ಮಗು ಔಷಧವನ್ನು ಸಹಿಸಿಕೊಳ್ಳುತ್ತದೆ. ಇದಕ್ಕೆ ರೋಚನವೆಂದು ಹೆಸರು. ಒಳ್ಳೆಯ ಕೆಲಸ ಮಾಡಿದರೆ ಪುಣ್ಯಸಂಪಾದನೆಯಾಗುತ್ತದೆ, ದಾನ ಮಾಡಿದರೆ ಸ್ವರ್ಗಸುಖ ಸಿಗುತ್ತದೆ ಎನ್ನುವ ಒಕ್ಕಣೆಯೆಲ್ಲ ರೋಚನಾರ್ಥವಾಗಿಯೇ. ಪುರುಷಾರ್ಥಗಳ ಎಣಿಕೆಯಲ್ಲಿ ಧರ್ಮಮೋಕ್ಷಗಳೇ ಮುಖ್ಯವಾದುವು; ಅವೆರಡರಲ್ಲಿ ಮೋಕ್ಷ ಸಾಧ್ಯ, ಧರ್ಮ ಸಾಧನೆ. ಧರ್ಮದ ಕಡೆಗೆ ಜನ ಒಲಿಯುವುದು ಸ್ವಾಭಾವಿಕವಲ್ಲ. ಸಾರ್ವತ್ರಿಕವೂ ಅಲ್ಲ, ಮದ್ದಿನಂತೆಯೇ ಅದರ ಸ್ವಭಾವ. ಶರೀರಕ್ಕೆ ಹಿತ, ನಾಲಗೆಗೆ ಅಹಿತ. ನಾಲಗೆಗೆ ರುಚಿ ಹತ್ತಿಸಲೆಂದು ಅರ್ಥ, ಕಾಮಗಳನ್ನು ಸೂಚಿಸಿದ್ದಾರೆ; ಬೆಲ್ಲದಂತೆ ಅದರ ನೆರವು.

ಔಷಧದ ಯೋಚನೆಯನ್ನೇ ಬಿಟ್ಟು ಬರಿಯ ಬೆಲ್ಲವನ್ನೇ ಮೆಲ್ಲುತ್ತಿದ್ದರೆ ಹೇಗೆ? ಇದ್ದ ಬೇನೆಯೂ ಗುಣವಾಗುವುದಿಲ್ಲ; ಇನ್ನೊಂದು ಬೇನೆಯೂ ಬಂದಡರುತ್ತದೆ! ಅರ್ಥ-ಕಾಮಗಳನ್ನಷ್ಟೆ ನಂಬಿಕೊಂಡವರ ಪಾಡು ಇದು. ನಾಲಗೆಯ ರುಚಿಯೂ ಬರುಬರುತ್ತ ಕೆಡುತ್ತದೆ, ಬೆಲ್ಲವೂ ಸಿಹಿಯೆನಿಸುವುದಿಲ್ಲ.

ನ್ಯಾಯಾನ್ಯಾಯವಿಚಾರ

'ಅಗಸರ ಕತ್ತೆ ದೊಂಬರಿಗೆ ತ್ಯಾಗ' ಎಂಬುದೊಂದು ಗಾದೆ. ಇದಕ್ಕೆ ಸಮನಾದ ಇಂಗ್ಲಿಷ್ ಗಾದೆ 'ರಾಬ್ ಪೀಟರ್ ಅಂಡ್ ಪೇ ಪಾಲ್.' ಈ ಗಾದೆಯ ಆಶಯವೇನು? ದೊಂಬರಿಗೆ ಕತ್ತೆ ಬೇಕಾಗಿದೆ. ಅವರ ಬಳಿ ಇಲ್ಲ, ಅಗಸರಿಗೂ ಕತ್ತೆ ಬೇಕಾದುದೇ. ಆದರೆ ಅವರ ಬಳಿ ಇದೆಯಲ್ಲ? ಇಲ್ಲದವರಿಗೆ ಇದ್ದವರಿಂದ ಕಸಿದುಕೊಂಡಾದರೂ ಕೊಟ್ಟರೆ ಒಳ್ಳೆಯದಲ್ಲವೆ? ದಾನ ಮಾಡುವಾಗ ಪಾತ್ರತೆಯ ಬಗ್ಗೆ ಆಲೋಚನೆ ಮಾಡಬೇಕು. ಯೋಗ್ಯನಾದವನಿಗೆ ಮಾಡಿದರೇ ದಾನದ ಸಾರ್ಥಕತೆ. ಇದ್ದವರಿಗೆ ಕೊಟ್ಟರೆ ಅದೇನು ದಾನವಲ್ಲ. ಆದರೆ ದಾನವಾಗಿ ನೀಡುತ್ತಿರುವ ವಸ್ತುವನ್ನು ದಾನಿಯು ಪಡೆದುಕೊಂಡದ್ದು ಹೇಗೆ ಎಂಬುದನ್ನೂ ಗಮನಿಸಬೇಕಲ್ಲವೆ? ಅದು ನ್ಯಾಯವಾಗಿ ಬಂದದ್ದಾದರೆ, ದಿಟವಾಗಿ ತನ್ನದೇ ಎಂದಾದರೆ ದಾನದ ಸಾರ್ಥಕತೆ ಹೆಚ್ಚುತ್ತದೆ. ಕಷ್ಟಪಟ್ಟು ದುಡಿದುಕೊಂಡಿದ್ದರಂತೂ ಅದರ ಸಾರ್ಥಕತೆ ನೂರ್ಮಡಿಯಷ್ಟು.

ಅನ್ಯಾಯದಿಂದ ಅರ್ಜಿತವಾದದ್ದು ಅಸಡ್ಡಾಳದಲ್ಲಿ ಹಾಳಾಗುತ್ತದೆ ಎಂಬ ಇನ್ನೊಂದು ಮಾತುಂಟು. ಅಗಸರನ್ನು ಬೆದರಿಸಿಯೋ, ಹಿಂಸಿಸಿಯೋ ಕತ್ತೆಯನ್ನು ಕಸಿದುಕೊಂಡು, ಮಾಡಿದ ಕತ್ತೆಯ ದಾನದಿಂದ ಪುಣ್ಯವುಂಟೆ?

ದೊಂಬರಿಗೇನೋ ಪ್ರಯೋಜನವಾದೀತು. ಆದರೆ ಅಗಸರಿಗೆ ಇದ್ದ ಒಂದು ಆಸರೆ ತಪ್ಪಿತಲ್ಲ? ಅವರಿಗೆ ಅನ್ಯಾಯವಾಯಿತಲ್ಲ? ಅಗಸರಿಗೆ ಆದ ಅನ್ಯಾಯಕ್ಕೆ ದೊಂಬರಿಗೆ ಆದ ನ್ಯಾಯದಿಂದ ಸರಿಹೋಗುವುದುಂಟೆ?

ಇಂಗ್ಲಿಷ್ ಜನರ ಮಕ್ಕಳಿಗೆ ರಾಬಿನ್ ಹುಡ್ ಕತೆಗಳು ತುಂಬ ಪ್ರಿಯವಾದವು. ಹಣವಂತರನ್ನು ಸುಲಿಗೆ ಮಾಡಿ ಬಡವರನ್ನು ಕಾಪಾಡುತ್ತಿದ್ದ ಸಾಹಸಿ ರಾಬಿನ್ ಹುಡ್. ಅವನ ಆಶಯವೇನೋ ಒಳ್ಳೆಯದೇ. ಆದರೆ ಅವನು ಅನ್ಯಾಯಕಾರಿ(ಔಟ್‌ಲಾ) ಎಂಬುದನ್ನು ಜನ ಮರೆಯಲಿಲ್ಲ.

ಗಾಂಧೀಜಿಯವರ ಒಂದು ನಿಲುವು— ಗುರಿ ಸರಿಯಾಗಿದ್ದರೆ ಸಾಕು; ದಾರಿ ಹೇಗಾದರೂ ಇರಲಿ, ಎನ್ನಬಾರದು. ನಡೆಯುವ ದಾರಿ ಒಳ್ಳೆಯದಾದರೆ ಸೇರುವ ಗುರಿಯೂ ಒಳ್ಳೆಯದಾಗಿರುತ್ತದೆ. ಕೆಡುಕಿನ ದಾರಿಯಿಂದೂ ಒಳಿತಾದ ಗುರಿಗೆ ಒಯ್ಯಲಾರದು. ಅನ್ಯಾಯದ ಮೂಲಕ ನ್ಯಾಯವನ್ನು ನಿಲ್ಲಿಸುವುದಾಗದು. ನಿತ್ಯದ ಬದುಕಿನಲ್ಲಿ ಇದಕ್ಕೆ ಅರ್ಥವಿದೆ. ರಾಜಕಾರಣ, ವ್ಯವಹಾರ, ಆರ್ಥಿಕ ನೆಲೆ ಎಲ್ಲ ಕಡೆಯೂ ಇದೇ ಅರ್ಥವತ್ತಾಗುತ್ತದೆ. ಒಬ್ಬರಿಗೆ ಮಾಡಿದ ಅಪಕಾರ ಮತ್ತೊಬ್ಬರಿಗೆ ಉಪಕಾರವಾದೀತು ಎಂದು ಬಗೆದು ಮಾಡಿದ ಕೆಲಸವಂತೂ ಊರ್ಜಿತವಾಗಲಾರದು.

ಕಾಲ: ಅಂದು-ಇಂದು

ಧ್ವನ್ಯಾಲೋಕದಲ್ಲಿ ಎಲ್ಲಿಂದಲೋ ಒಂದು ಶ್ಲೋಕವನ್ನು ಎತ್ತಿಕೊಂಡು ಕೊಟ್ಟಿರುವುದಿದೆ. ಅದರ ತಾತ್ಪರ್ಯ ಹೀಗೆ - ಒಳ್ಳೆಯ ದಿನಗಳು, ಸುಖದ ಕಾಲ ಎಂಬುದು ಹಳೆಯ ಮಾತಾಯಿತು, ಮತ್ತೆ ಅವು ಬರುವುದಿಲ್ಲ (ಅತಿಕ್ರಾಂತಸುಖಾಃ ಕಾಲಾಃ). ಕೇಡು, ಕೆಡುಕು ಎಂಬುದೇ ಬಂದು ಮುಂದೆ ನಿಂತಿರುವ ಕಾಲ ಈಗಿನದು (ಪ್ರತ್ಯುಪಸ್ಥಿತ ದಾರುಣಾಃ). ಕೆಟ್ಟಕಾಲ ಇದು. ಇನ್ನು ಮುಂದೆ ಬರುವ ದಿನಗಳೋ, ಪಾಪ ಹೆಚ್ಚು-ಹೆಚ್ಚಾಗಿ ಹರಡಿಕೊಳ್ಳುವ ದಿನಗಳು (ಶ್ವಶ್ವಃ ಪಾಪೀಯದಿವಸಾಃ). ದಿನದಿನಕ್ಕೆ ಕೇಡು ಹೆಚ್ಚುವ ಕಾಲ. ಭೂಮಿಗೆ ತಾರುಣ್ಯವೆಂಬುದು ತೀರಿತು, ಮುಪ್ಪಡರಿತು (ಪೃಥಿವೀ ಗತಯೌವನಾ).

ಇದು 'ವ್ಯಾಸವಚನ'ವೆಂಬ ಸೂಚನೆಯೇನೋ ಇದೆ. ಆದರೆ ವ್ಯಾಸರು ಎಲ್ಲಿ, ಯಾವ ಸಂದರ್ಭದಲ್ಲಿ, ಯಾರಿಗೆ ಹೇಳಿದರೋ ತಿಳಿಯದು.

ಬದುಕಿನ ನಿರಾಸೆಯನ್ನು ಹೊರತೋರುವ ಭಾವ ಇಲ್ಲಿದೆಯಲ್ಲವೆ? ಸುವರ್ಣಯುಗ ಎಂದೋ ಇದ್ದಿತು; ಅದು ಮರೆಯಾಗಿ ಈಗ ಕಾಳರಾತ್ರಿ ಮೊದಲಾಗಿದೆ ಎಂಬ ಕಳವಳ ಇಲ್ಲಿ ಕಾಣುತ್ತದೆ. ಆದರೆ ಸಂಪ್ರದಾಯದ ದೃಷ್ಟಿ ಇದಲ್ಲ. ಪ್ರಪಂಚದ ವ್ಯವಹಾರ ಈಗಿನದಕ್ಕಿಂತ ಬೇರೆಯಾಗಿ ಎಂದಾದರೂ ಇದ್ದಿರಲಾರದು; ಜಗತ್ತು ಈಗಿರುವಂತೆಯೇ ಎಂದೂ ಇದ್ದಿತು ಎಂದು ಸಂಪ್ರದಾಯದ ಎಣಿಕೆ.

'ನ ಹಿ ಕದಾಚಿದನೀದೃಶಂ ಜಗತ್' ಎಂಬ ಮಾತು ಶಾಸ್ತ್ರದಲ್ಲಿ ಸೇರಿಬಂದಿದೆ.

ನಮ್ಮ ಕಾಲದಂತೆಯೇ ಎಲ್ಲ ಕಾಲವೂ ಇದ್ದಿತು. ಹಿಂದಿನಂತೆಯೇ ಇಂದು, ಇಂದಿನಂತೆಯೇ ನಾಳೆ.

ಕಾಲ ಕೆಟ್ಟಿತು ಎಂಬ ಕಲ್ಪನೆ ಶಾಸ್ತ್ರ ಬಲ್ಲವರದ್ದಲ್ಲ. ಪುರಾಣಗಳಲ್ಲಿ ಕಲಿಯುಗದ ವರ್ಣನೆಯೇನೋ ಇದೆ. ಆದರೆ ಅದೇನು ಶಾಸ್ತ್ರ ಸಮ್ಮತವಲ್ಲ.

ವೇದ, ಉಪನಿಷತ್ತು, ಗೀತೆ, ದರ್ಶನಗಳು ಇಲ್ಲೆಲ್ಲಿಯೂ ಈ ಬಗೆಯ ನಿರಾಶಾವಾದಕ್ಕೆ ಎಡೆಯಿಲ್ಲ, ಚೆನ್ನಾಗಿ ಬದುಕಿ ಬಾಳಲು ನೆರವಾಗುವುದೇ ಶಾಸ್ತ್ರದ ಉದ್ದೇಶ.

ಅಂಜುವವರ ಮೇಲೆ ಹಲ್ಲಿಯನ್ನು ಹರಿಯಬಿಡುವುದು ಶಾಸ್ತ್ರದ ಪ್ರವೃತ್ತಿಯಲ್ಲ.

ಪುರಾಣದ ಧೋರಣೆಗೂ ಶಾಸ್ತ್ರದ ನಿಲುವಿಗೂ ಇರುವ ಅಂತರವನ್ನು ಅರಿತುಕೊಳ್ಳಬೇಕಾದ ಅಗತ್ಯವಿದೆ.

ಹಳೆಯದು-ಹೊಸದು

ಕಾಲಕ್ಕೆ ತಕ್ಕಂತೆ ಕುಣಿಯುವುದು ಸಹಜವೇ, ನ್ಯಾಯವೇ. ಇಂದಿರುವವರು ಹಿಂದಿನದಕ್ಕೆ ಹೊಂದುಕೊಳ್ಳುವುದಾದರೂ ಹೇಗೆ?

ಆದರೆ ಕೆಲವರು ಕಾಲ ಸರಿಯುವುದನ್ನು ಗಮನಿಸದೆ, ಗಮನಿಸಿದರೂ ಅದನ್ನು ಒಪ್ಪಿಕೊಳ್ಳದೆ, ಹಿಂದೆ ತಾವು ತಳೆದಿದ್ದ ಧೋರಣೆಯ ಗುಂಗಿನಲ್ಲೇ ಮುಂದುವರಿಯುತ್ತಾರೆ. ಅವರು ಎಂತಾದರಿರಲಿ, ಎಲ್ಲಾದರಿರಲಿ, ಸುತ್ತಮುತ್ತ ಇರುವವರನ್ನೂ ತಮ್ಮ ಧೋರಣೆಯಲ್ಲೇ ಅಡಗಿಸಲು ಪ್ರಯತ್ನಿಸಿದರೆ, ಹಳೆಯದು- ಹೊಸತರ ನಡುವೆ ಸೆಣಸಾಟ ಸಿದ್ಧವಾದದ್ದೇ. ಹಳೆಯದೆಲ್ಲ ಬಂಗಾರ; ಅದೇ ಉಳಿಯಬೇಕು. ಹೊಸತು ಸತ್ತ್ವವಿಲ್ಲದ್ದು, ಬೀಸುವ ಗಾಳಿಗೆ ಹಾರಿ ಹೋಗುವ ತರಗೆಲೆ ಅದು. ಹೊಸತನ್ನು ನಂಬಿದವರಿಗೆ ನೆಲೆಯಿಲ್ಲ, ಬೆಲೆಯಿಲ್ಲ— ಹೀಗೆಂದು ಕೆಲವರು.

ಹಳೆಯದು ಹಳಸಿತು; ತಂಗುಳಾಯಿತು; ಹಳೆಯದಕ್ಕೆ ಬೆಲೆಯಿಲ್ಲವೆಂದು ತಾನೆ ಹೊಸತು ಬಂದಿರುವುದು? ಮುಂದಿರುವುದನ್ನು ಬದಿಗೊತ್ತಿ ಎಂದೋ ಇದ್ದುದಕ್ಕೆ ಅಂಟಿಕೊಳ್ಳುವುದು ಯಾವ ಜಾಣತನ? ಹೀಗೆ ಮತ್ತೆ ಕೆಲವರು.

ಬಹುಮಂದಿಗೆ, ಹಳೆಯದೋ ಹೊಸತೋ ಚೆನ್ನಾಗಿ ಬದುಕಲು ನೆರವಾದರೆ ಆಯಿತು. ವಿವಾದವೇಕೆ? ಎನಿಸುತ್ತದೆ. ಇದು ಸರಿಯೆಂದೂ ತೋರುತ್ತದೆ.

ಆದರೆ ಚೆನ್ನಾಗಿ ಬದುಕುವುದೆಂದರೇನು ಎಂದು ಕೇಳಿದಾಗ ಮಾತ್ರ ಮತ್ತೆ ತಲೆ ಕೆರೆದುಕೊಳ್ಳಬೇಕು!

ಎಲ್ಲರಿಗೂ ಒಂದೇ ಬಗೆಯಾದ 'ಚೆನ್ನು' ಇರಲಾರದು. ಹಲವರಿಗೆ ಹಲವು ಬಗೆಗಳಲ್ಲಿ ಬದುಕಿನ ಚೆನ್ನು. ಇದು ಅವರವರ ಹಿನ್ನೆಲೆ, ಸಂಸ್ಕಾರ, ಅನುಭವ, ಆಶಯ ಮೊದಲಾದುವನ್ನು ಅವಲಂಬಿಸುತ್ತದೆ.

ಆದರೂ ಕೆಲವು ಮೌಲ್ಯಗಳೇನೋ ಎಂದಿಗೂ ಪ್ರಸಕ್ತವಾಗುತ್ತವೆ. ಅವಕ್ಕೆ ಹಳೆಯದು, ಹೊಸತು ಎನ್ನುವ ತಲೆಪಟ್ಟಿ ಹೊಂದದು. ಬದುಕಿನ ಕೆಲವು ಪ್ರವೃತ್ತಿಗಳನ್ನು ಕಾಲವೇನು ಮಾರ್ಪಡಿಸುವುದಿಲ್ಲ.

ಮನುಷ್ಯನಿಗೆ ಸಹಜವಾದ ಪ್ರವೃತ್ತಿಗಳು, ಸಮಾಜದ ಅಚ್ಚುಕಟ್ಟಿಗೆ ಬೇಕಾದ ಮನೋವೃತ್ತಿಗಳು, ಇವು ಮುಖ್ಯ; ಹಳೆಯದೇನು? ಹೊಸತೇನು?

ಹಳಬರು-ಹಿರಿಯರು

ಹಳಬರನ್ನೇ ಹಿರಿಯರೆಂದು ಕರೆಯುವ ವಾಡಿಕೆಯಿದೆ.

ಆದರೆ ಹಳಬರೆಂದಮಾತ್ರಕ್ಕೆ ಹಿರಿತನ ತಾನಾಗಿ ಒದಗಿಬರುತ್ತದೆ ಎನ್ನುವಂತಿಲ್ಲ.

ಹಿರಿಯರಿಂದ ಮಾರ್ಗದರ್ಶನ ಪಡೆದುಕೊಳ್ಳುವೆವು. ಅವರ ಅನುಭವ, ವಿವೇಕ, ಸಹನೆ, ಔದಾರ್ಯ, ಪರೋಪಕಾರಬುದ್ಧಿ ಇವೆಲ್ಲ ಕೆಲಸಕ್ಕೆ ಬರುತ್ತವೆ.

ಹಳಬರಿಗಾದರೆ ಅವರ ವಯಸ್ಸೊಂದೇ ಮುಖ್ಯ ವಿವರ, ದೇಹಕ್ಕೆ ಮುಪ್ಪಡರಿದರೆ ಮನಸ್ಸು ಪ್ರೌಢವಾಗುತ್ತದೆ ಎಂದೇನು ನಿಶ್ಚಯವಿಲ್ಲ. ಹಳಬರಿಗೆ ಮನೆಮಂದಿ ಗೌರವ ತೋರಿಸುವುದು ಸರಿಯೆ. ಆದರೆ ಇತರರು ಅವರನ್ನೇನು ಆದರದಿಂದ ಕಾಣ ಬೇಕಾದುದಿಲ್ಲ. ಸಮುದಾಯ ಅವರನ್ನು ಗುರುತಿಸಬೇಕೆಂದು ನಿರೀಕ್ಷೆ ಮಾಡುವುದು ಸರಿಯಲ್ಲ.

ಹಿರಿಯರು ಕಿರಿಯರಿಗೆ ಹಲವು ಬಗೆಗಳಲ್ಲಿ ದಾರಿದೀಪಗಳಾಗಿ ನಿಲ್ಲುವರು. ಅವರು ಹೇಳುವ ಮಾತು ಮಾತ್ರವಲ್ಲದೆ, ಅವರು ಬದುಕುವ ರೀತಿಯೇ ಮಾರ್ಗದರ್ಶಕವಾದೀತು. ಹಿರಿಯರು ಸಮಾಜದಲ್ಲಿ ದೊಡ್ಡದೊಂದು ಹೊಣೆಯನ್ನು ಹೊತ್ತವರು, ಬದುಕಿನ ಯಾವ ಪ್ರಕಾರವೇ ಆಗಲಿ, ಕಿರಿಯರು ಅವರತ್ತ ಕಣ್ಣು ಹಾಯಿಸುವುದು ಸಹಜ. ಬದುಕಿನ ಜಂಜಡದಿಂದ, ನಾಗಾಲೋಟದಿಂದ, ಪೈಪೋಟಿ ಯಿಂದ ದೂರ ನಿಂತು, ಬಯಸಿಬಂದವರಿಗೆ ಹಿತವನ್ನು ತಿಳಿಸಿಕೊಡುವುದರಲ್ಲೇ ತೊಡಗಿದವರು ಹಿರಿಯರು. ಸಂಸ್ಕೃತದಲ್ಲಿ 'ವೃದ್ಧ' ಎಂಬ ಮಾತಿಗೆ ಬೆಳೆದುನಿಂತವರು ಎಂಬರ್ಥವಿದೆ. ವಯಸ್ಸಾದರೂ ಬೆಳೆಯದೆ ನಿಂತವರು ವೃದ್ಧರೆನಿಸಲಾರರು.

ಬೆಳವಣಿಗೆ ಅಂತಃ ಸತ್ತ್ವದ್ದು, ಮನಸ್ಸಿನದು, ಹೃದಯ ಪರಿಪಾಕದ್ದು. ತಾನಾಗಿ ಬಂದು ಹೋಗುವ ಸಂವತ್ಸರಗಳ ಲೆಕ್ಕ ಅಲ್ಲ ಅದು. ಬಾಳನ್ನು ತಪಸ್ಸೆಂಬಂತೆ ಕಳೆದದ್ದರಿಂದ ಬರುವ ಸಂಸ್ಕಾರದ ಮಾತು ಅದು.

ಈ ದೃಷ್ಟಿಯಿಂದ ಹಳಬರೆಲ್ಲರೂ ಹಿರಿಯರಾಗಲಾರರು. ಆದರೆ ಹಳಬರು ಹಿರಿಯರಾಗಿ ನಿಲ್ಲಬೇಕೆಂದು ನಾವು ಎದುರುನೋಡುವುದು ಸರಿಯೇ.

ಹಿರಿಯರಾಗದೆ ಬರಿದೆ ಹಳಬರಾದರೆ ಏನಾದಂತಾಯಿತು? ಮತ್ತೆ ಹಿರಿಯರಾಗಲು ಹಳಬರೇ ಆಗಿರಬೇಕೆಂಬ ನಿಯಮವೂ ಇರದು.

ಪವಾಡದ ಮೂಲ

ಷೂಫಿ ಸಂತ ಮುಲ್ಲಾ ನಾಸಿರುದ್ದೀನನದೊಂದು ಕತೆ: ಒಬ್ಬ ಅರಸ; ಕ್ರೂರಿ ಮತ್ತು ದಡ್ಡ. ಅವನಿಗೆ ಯಾರೋ ಹೇಳಿದರು- 'ಮುಲ್ಲಾ ನಾಸಿರುದ್ದೀನ್ ದೊಡ್ಡ ಯೋಗಿ. ಬೇರೆ ಯಾರಿಗೂ ಕಾಣದ್ದು ಅವನಿಗೆ ಕಾಣುತ್ತದೆ!' ಎಂದು.

ಒಡನೆಯೆ ಅರಸ ನಾಸಿರುದ್ದೀನನನ್ನು ಕರೆಸಿದ. 'ಅಯ್ಯಾ, ನೀನು ದೊಡ್ಡ ಯೋಗಿಯಂತೆ. ಯಾರಿಗೂ ಕಾಣದ್ದು ನಿನಗೆ ಕಾಣುವುದಂತೆ. ನನ್ನ ಮುಂದೆ ನಿನ್ನ ಪವಾಡ ತೋರಿಸದಿದ್ದರೆ ನಿನ್ನ ತಲೆ ಹಾರಿಸುತ್ತೇನೆ. ಈಗಲೆ ನಿನಗೇನು ಕಾಣುವುದು ಎಂಬುದನ್ನು ತಿಳಿಸು' ಎಂದು ಆಜ್ಞಾಪಿಸಿದ. ಅರಸನು ತನ್ನ ಮಾತನ್ನು ನಿಲ್ಲಿಸಿದ ಕೂಡಲೆ, ನಾಸಿರುದ್ದೀನ್ 'ಖಾವಂದರೇ, ಆಕಾಶದಲ್ಲಿ ಹಾರುತ್ತಿರುವ ಬಂಗಾರದ ಹಕ್ಕಿ ನನಗೆ ಕಾಣಿಸುತ್ತಿದೆ. ಭೂಮಿಯ ಒಳಗೆ ಭೂತಗಳು ಅಡಗಿಕೊಂಡಿರುವುದು ಕಾಣಿಸುತ್ತಿದೆ' ಎಂದು ಹೇಳಿಬಿಟ್ಟ!

ಅರಸನಿಗೆ ಆಶ್ಚರ್ಯವಾಯಿತು. 'ಅಯ್ಯಾ, ಇವೆಲ್ಲ ನನಗೆ ಕಾಣುವುದಾದರೂ ಹೇಗೆ?' ಎಂದು ಕುತೂಹಲದಿಂದ ಕೇಳಿದ. ನಾಸಿರುದ್ದೀನ್ 'ಭಯವೊಂದಿದ್ದರೆ ಸಾಕು, ಏನು ಬೇಕಾದರೂ ಕಾಣಿಸುತ್ತದೆ' ಎಂದ. ಅರಸನ ಬಳಿಗೆ ಬಂದಾಗಲೆ ನಾಸಿರುದ್ದೀನನಿಗೆ ಭಯವಾಗಿದ್ದಿತು; ಮೊದಲೇ ದಡ್ಡ, ಮೇಲೆ ಕ್ರೂರಿ ಬೇರೆ. ಏತಕ್ಕೆ ಕರೆಸಿದನೋ, ಏನು ಮಾಡುವನೋ ತಿಳಿಯದು; ಹೆದರಿದ್ದ. ಇನ್ನು ಅರಸನ ಮಾತು ಕೇಳಿದ ಮೇಲೆ ಭಯ ಇನ್ನೂ ಹೆಚ್ಚಾಯಿತು. ತನಗೆ ಅಂಥ ಯಾವ ಶಕ್ತಿಯೂ ಇರದೆಂಬುದು ತಿಳಿದಿದ್ದಿತು; ತನಗೆ ಆಗದವರು ಯಾರೋ ಈ ಪೇಚಿಗೆ ತನ್ನನ್ನು ಸಿಕ್ಕಿಸಿದ್ದಾರೆಂದು ಬಗೆದ. ದಿಟವನ್ನು ಇವನ ಮುಂದೆ ಹೇಳಿದರೆ ಪ್ರಯೋಜನವಿಲ್ಲ. ಹೇಗಾದರೂ ಈ ಕಷ್ಟದಿಂದ ಪಾರಾಗಬೇಕಲ್ಲ?

ಮನಸ್ಸಿನಲ್ಲಿ ಯಾವ ಕಾರಣಕ್ಕಾದರೂ ಭಯ ಬೇರೂರಿದರೆ, ಸಾಮಾನ್ಯವಾದ ಆಲೋಚನೆಗಳು ನಿಂತುಹೋಗುತ್ತವೆ; ತರ್ಕ ಕೆಲಸ ಮಾಡುವುದಿಲ್ಲ. ಇಲ್ಲದಿರುವುದೂ ಕಾಣಿಸತೊಡಗುತ್ತದೆ; ಯಾವುದೂ ಅಸಂಭವವೆನಿಸುವುದಿಲ್ಲ.

ನಮಗೇ ಅರಿವಿಲ್ಲದಂತೆ ದಿಗಿಲು ನಮ್ಮನ್ನು ಮೆಟ್ಟಿನಿಂತಾಗ, ಬುದ್ಧಿವಂತಿಕೆ ಕೆಲಸ ಮಾಡುವುದಿಲ್ಲ; ನಂಬಿಬಿಡುವ ಪ್ರವೃತ್ತಿ ತಾನಾಗಿ ತಲೆದೋರಿಕೊಳ್ಳುತ್ತದೆ.

ನಾಸಿರುದ್ದೀನ್ ಅರಸನಿಗೆ ಸೂಚಿಸಿದುದು ಇದನ್ನೆ. ಇವನು ದೊಡ್ಡ ಯೋಗಿಯೆಂದು ನಂಬಿದ್ದ ಅರಸನಿಗೆ ಅವನನ್ನು ಕಂಡು ದಿಗಿಲಾಯಿತು. ಅದನ್ನು ನಾಸಿರುದ್ದೀನ್ ಕಂಡುಕೊಂಡ.

ಅಂಧ ಪರಂಪರೆ

ಲೌಕಿಕ ನ್ಯಾಯಗಳಲ್ಲಿ ಅಂಧಪರಂಪರೆಯೆಂಬುದೊಂದು.

ಹಲವಾರು ಮಂದಿ ಕುರುಡರು ಒಬ್ಬರ ಬೆನ್ನು ಇನ್ನೊಬ್ಬರು ಹಿಡಿದು, ಸಾಲುಗಟ್ಟಿ ನಡೆದುಹೋಗುವ ಪ್ರಸಂಗವನ್ನು ಕುರಿತದ್ದು ಇದು. ಅವರ ಸಾಲು ತುದಿ-ಮೊದಲಿಲ್ಲದಂತೆ ಸಾಗುತ್ತಿರುವಾಗ, ಅವರಲ್ಲಿ ಯಾರನ್ನು 'ನಿಮ್ಮನ್ನು ನಡೆಸುತ್ತಿರುವವರು ಯಾರು?' ಎಂದು ಕೇಳಿದರೂ ತಮ್ಮ ಮುಂದಿನವರನ್ನು ತೋರಿಸುತ್ತಾರೆ ಅಷ್ಟೆ. ಸಾಲಿಗೆ ಮೊದಲಿಗ ಯಾರು ಎಂಬುದನ್ನು ಯಾರೂ ಅರಿಯರು. ಒಬ್ಬೊಬ್ಬರಿಗೂ ತಮ್ಮ ಕೈ ಸೋಕಿರುವ ಇನ್ನೊಬ್ಬನ ಬೆನ್ನು ಮಾತ್ರ ಅರಿವಿಗೆ ಬರುತ್ತದೆ. ಈ ನ್ಯಾಯವೇನು ಕುರುಡರನ್ನು ಕುರಿತದ್ದಲ್ಲ, ಕಣ್ಣಿದ್ದವರಿಗೇ ಇದರ ಅನ್ವಯ. ಕಣ್ಣಿರದೆ ಕುರುಡರಾದವರು ಕೆಲವರಾದರೆ, ಕಣ್ಣಿದ್ದೂ ಕುರುಡರಾಗಿರುವವರ ಸಂಖ್ಯೆ ದೊಡ್ಡದು! ದಿನನಿತ್ಯದ ಬದುಕಿನಲ್ಲಿ ನಮ್ಮ ಆಚಾರ, ವ್ಯವಹಾರ, ಆಹಾರ, ಒಲವು, ನಿಲುವು ಯಾವುದನ್ನೆ ಎತ್ತಿಕೊಂಡು 'ಇದು ಹೀಗೇಕೆ?' ಎಂದು ಪ್ರಶ್ನೆ ಮಾಡಿದಿರಾದರೆ ದೊರಕುವ ಉತ್ತರ ವಾಡಿಕೆಯದು. 'ಎಲ್ಲರೂ ಮಾಡುವುದು ಹೀಗೆಯೆ' ಎಂಬುದು. ಹೀಗೆಂದು ಬಗೆದು ಒಬ್ಬೊಬ್ಬರೂ ಮಾಡುವುದರಿಂದ ತಾನೆ ಎಲ್ಲರೂ ಹಾಗೆಯೇ ಮಾಡುವುದಾದೀತು? ಇದು ಯಾರ ಗಮನಕ್ಕೆ ಬರುತ್ತದೆ? ಆಚಾರ, ಧರ್ಮ, ಶಾಸ್ತ್ರ ಈ ವಿಚಾರಗಳಲ್ಲಿ 'ಕುರುಡು ನಂಬಿಕೆ'ಯೆಂಬ ಮಾತು ಬಳಕೆಯಲ್ಲಿದೆ. ಕರ್ಮ, ಪುನರ್ಜನ್ಮ, ಸದ್ಗತಿ, ಪಾಪ-ಪುಣ್ಯ ಇವೆಲ್ಲ ನಂಬಿಕೆಗಳಿಗೆ ಅನುಭವದ ಅಥವಾ ಯುಕ್ತಿಯ ಸಮರ್ಥನೆ ಸಿಗದಿದ್ದಾಗ ಅವನ್ನು ಕುರುಡೆಂದು ಬಣ್ಣಿಸುವುದಿದೆಯಷ್ಟೆ? ಆದರೆ ಕುರುಡುತನದ ಹರವು ಇಷ್ಟಕ್ಕೆ ಮುಗಿಯುವುದಿಲ್ಲ, ಬದಲಾಗುವ ಉಡುಗೆ-ತೊಡುಗೆಗಳನ್ನೇ ನೋಡಿ, ಸಿಂಗಾರದ ಬಗೆಗಳನ್ನೇ ನೋಡಿ. ಇವಕ್ಕೆಲ್ಲ ಕಾರಣವನ್ನು ಬಲ್ಲವರು ಯಾರು? ಅವುಗಳ ಔಚಿತ್ಯವನ್ನಾಗಲಿ ಉಪಯುಕ್ತತೆಯನ್ನಾಗಲಿ ವಿಚಾರ ಮಾಡುವವರು ಯಾರು? ಮುಂಬಯಿಯಲ್ಲಿ ಫ್ಯಾಶನ್ ಮೊದಲಾದುದು ಬೆಂಗಳೂರಿಗೆ ಬಂದಿಳಿಯುತ್ತದೆ. ಬೆಂಗಳೂರಿನಲ್ಲಿ ಸಂದುದು, ದೂರದ ಹಳ್ಳಿಗಳಿಗೂ ಸಲ್ಲುತ್ತದೆ. ಸಮೂಹ ಮಾಧ್ಯಮದ ಪ್ರಭಾವ ಇದು!

ವಿಜ್ಞಾನದ ಹೆಸರಿನಲ್ಲಿ ಹರಡಿಕೊಳ್ಳುತ್ತಿರುವ ವೈದ್ಯ ಮತ್ತಿತರ ತಾಂತ್ರಿಕ ಪ್ರಕಾರಗಳೂ ಫ್ಯಾಶನ್‌ಗಳಂತೆಯೇ 'ಕುರುಡು' ನಂಬಿಕೆಗಳೇ.

ಹಲವರು ಅಡಿಯಿಟ್ಟು, ಸವೆಸಿದ್ದೇ ದಾರಿ.

ಪವಾಡ

ಪವಾಡಗಳನ್ನು ನಂಬುವವರಿದ್ದಾರೆ, ನಂಬದವರಿದ್ದಾರೆ.

ಪವಾಡ ತೋರಿಸುವವರಲ್ಲೂ ಇದೇ ವಿಂಗಡಣೆಯಿದ್ದೀತು. ತಮ್ಮ ಪವಾಡವನ್ನು ತಾವೇ ನಂಬಿದರೆ ಅವರ ಮಾತು ಬೇರೆ.

ಆದರೆ ತಮ್ಮಲ್ಲಿ ಪವಾಡಕ್ಕೆ ಬೇಕಾದ ಶಕ್ತಿಯಿರದೆಂದು ಅರಿತುಕೊಂಡಾಗಲೂ, ಪವಾಡಗಳನ್ನು ತೋರಿಸುವಂತೆ ನಾಟಕವಾಡಿ ಮೆರೆಯುವ ಮಂದಿಯಿದ್ದಾರಲ್ಲವೆ?

ಇವರಿಂದ ತೊಂದರೆ ಹೆಚ್ಚು, ಏಕೆಂದರೆ ಜನರನ್ನು ಮೋಸಗೊಳಿಸುವುದೆ ಇವರ ಉದ್ದೇಶ. ಪವಾಡವನ್ನು ಪೂರಾ ಜರಿಯುವವರ ಮಾತನ್ನು ಬಿಡಿ. ಪವಾಡವೆ ಸಾಧ್ಯವಿಲ್ಲವೆಂದು ಅವರು ಹೇಳಿಯಾರು; ನಂಬುವವರು ಯಾರು?

ಉಸಿರಾಡುವಾಗ, ಒಳಗೆ ಹೋದ ಗಾಳಿ ಹೊರಗೆ ಬರುವುದೇ ಒಂದು ಪವಾಡ ವಲ್ಲವೆ? ಈ ಮಲಿನ ವಾತಾವರಣದ ನಡುವೆ ರೋಗವಿರದೆ ಇರುವುದೇ ಒಂದು ಪವಾಡ! ಬರಿಗೈಯಿಂದ ಬೂದಿಯನ್ನುದುರಿಸುವುದೆ ಪವಾಡ; ಉಳಿದುದೆಲ್ಲ ವಿಜ್ಞಾನದ ತಿಳಿವಳಿಕೆಗೆ ಒಳಪಡುತ್ತದೆ ಎಂದು ಹೇಳಬಹುದೆ?

ಇಲ್ಲಿ ಮುಖ್ಯವಾದ ಮಾತೆಂದರೆ ಉದ್ದೇಶದ್ದು. ತಮ್ಮ ಅರಿವಿಗೇ ಬರದಂತೆ ಪವಾಡಗಳನ್ನು ನಡೆಸುವವರಿದ್ದಾರೆ. ಅವರ ಹಿರಿಮೆ ಅವರು ನಡೆಸಿದ ಪವಾಡವನ್ನೇನು ಅವಲಂಬಿಸುವುದಿಲ್ಲ.

ಪವಾಡದಿಂದಲೆ ತಮ್ಮ ಹೆಚ್ಚುಗಾರಿಕೆಯನ್ನು ತೋರಿಸಿಕೊಳ್ಳಲೆಂದೋ, ಹಣವನ್ನು ಗಳಿಸಿಕೊಳ್ಳಲೆಂದೋ, ಪ್ರಭಾವವನ್ನು ಗಿಟ್ಟಿಸಿಕೊಳ್ಳಲೆಂದೋ ಹೊರಟವರು ಮೋಸಗಾರರು ಎಂಬುದರಲ್ಲಿ ಎರಡು ಮಾತಿಲ್ಲ.

ಜನರದ್ದು ಸಾಮಾನ್ಯವಾಗಿ ನಂಬುವ ಸ್ವಭಾವ, ರೇಡಿಯೋ, ಟಿ. ವಿ. ಗಳಲ್ಲಿ ಬಂದದ್ದನ್ನಂತೂ ಮೊದಲು ನಂಬುತ್ತಾರೆ;

ಪವಾಡ ತೋರಿಸುವವನೂ ಹೀಗೆಯೆ ಅತಿಮಾನವ ವರ್ಗಕ್ಕೆ ಸೇರಿದವನು; ಅವನನ್ನು ನಂಬದಿರುವುದರಿಂದ ಕೆಡುಕಾದರೂ ಆದೀತೋ ಏನೋ?

ಇಂಥ ಅಂಜಿಕೆ ಬೇರೆ!

ಇಂಥವರನ್ನು ಪವಾಡಗಾರರು ನಂಬಿಸುವುದರಲ್ಲೇನು ಕಷ್ಟವಿರದು. ಅವರ ಮೋಸವೂ ತಟ್ಟನೆ ಬಯಲಾಗುವುದಿಲ್ಲ.

ಆದರೆ ಎಂದಾದರೂ ಬಯಲಾಗದೆ ಇರುವುದಿಲ್ಲವೆನ್ನಿ.

ಗ್ರಹ-ಚಾರ

ನಮಗಿಷ್ಟವಿಲ್ಲದ್ದು ಏನಾದರೂ ಆದರೆ, ಅದು ಹಾಗೆ ಏಕಾಯಿತೆಂದು ತಿಳಿಯದಿದ್ದರೆ, 'ನಮ್ಮ ಗ್ರಹಚಾರ' ಎಂದುಕೊಳ್ಳುವುದುಂಟು.

ಗ್ರಹ-ಚಾರವೆಂಬ ಮಾತಿಗೆ ಗ್ರಹಗಳು ಸಾಗುತ್ತಿರುವುದರ ಪ್ರಭಾವ ಎಂಬ ಅರ್ಥ. ಇದು ಜ್ಯೋತಿಷದಿಂದ ಬಂದ ಕಲ್ಪನೆ. ಒಬ್ಬೊಬ್ಬರ ಬದುಕಿನಲ್ಲಿ ನಡೆಯುವ ಎಲ್ಲ ಪ್ರಸಂಗಗಳಿಗೂ ಅವರವರ ಜಾತಕದಂತೆ ಜರುಗುವ ಗ್ರಹಗತಿಗಳೇ ಕಾರಣ ಎಂಬುದು ಹಿನ್ನೆಲೆ. ಇದು ಜ್ಯೋತಿಷ್ಯವನ್ನು ನಂಬುವವರ ಎಣಿಕೆ. ಜ್ಯೋತಿಷ್ಯದ ಕಡೆ ಅಷ್ಟಾಗಿ ಗಮನವನ್ನು ಹರಿಸದವರೂ ಗ್ರಹಚಾರವೆಂಬ ಮಾತನ್ನು ಬಳಸುವುದಿದೆ. ಅವರ ಅರ್ಥವೇನು? ನಡೆದ ಪ್ರಸಂಗಕ್ಕೆ ಕಾರಣಗಳಿರದೆ ಇಲ್ಲ; ಕೆಲವು ಸ್ಪಷ್ಟವಾಗಿಯೆ ಎದ್ದು ಕಾಣುತ್ತವೆ. ಕೆಲವು ಸೂಕ್ಷ್ಮವಾಗಿ ನಾವು ಪರಮಾರ್ಶೆ ಮಾಡಿದ ಮೇಲೆಯೆ ತಿಳಿದು ಬರುತ್ತವೆ. ಮತ್ತೆ ಕೆಲವು ಕಾರಣಗಳು ನಾವೆಷ್ಟು ತಲೆ ಕೆಡಿಸಿಕೊಂಡರೂ ಬಯಲಾಗುವುದಿಲ್ಲ. ಇದು ನಡೆದದ್ದಾದರೂ ಏಕೆ ಎಂಬುದು ಬಿಡಿಸಲಾರದ ಒಗಟಾಗಿಯೆ ಉಳಿದುಕೊಳ್ಳುತ್ತದೆ. ಆಗ ಗ್ರಹಚಾರವೆಂಬ ಮಾತು ಹೊರಡುತ್ತದೆ. ನಮ್ಮ ವಿಚಾರಕ್ಕೆ ಮೀರಿದ್ದು ಎಂದಷ್ಟೆ ಅರ್ಥ. ಯಾವುದೋ ಕಾಣದ ಕೈ ತಮಗೆ ಎರಡು ಬಗೆಯುತ್ತಿದೆಯೆಂದು ಅವರ ಕೊರಗು. ಇದು ದಿಟವೊ ಅಲ್ಲವೊ ಏನಾದರಿರಲಿ. ಅದರ ಹಿಂದಿರುವ ಮನೋವೃತ್ತಿ ಎಂಥದೆಂದು ನೋಡಿ. ತಮಗಾದ ನೋವಿಗೆ ಬೇರೆ ಯಾರನ್ನೂ ದೂರದೆ, ಪರಿಸರದಲ್ಲಿ ಏನಾದರೊಂದು ಕಾರಣವನ್ನು ಹುಡುಕದೆ, ಹೆರವರ ಮೇಲೆ ಹರಿಹಾಯದೆ, ತಮ್ಮ ನೋವನ್ನು ತಮ್ಮಲ್ಲಿಯೆ ಅಡಗಿಸಿಕೊಳ್ಳುವ ತೆರ. 'ಅನಿಷ್ಟಕ್ಕೆ ಕಂಗಾಲ ಗುರಿ' ಎನ್ನುವುದನ್ನು ಕೇಳಿದ್ದೀರಷ್ಟೆ. ನಮಗಾದ ಬವಣೆಗೆ ಎದುರಿಗಿದ್ದವರನ್ನೇ ದೂರುವುದೂ ಉಂಟಲ್ಲ? ತೊಂದರೆ ಮೇಲೇರಿ ಬಂದಾಗ ವಿಚಾರಶಕ್ತಿ ಉಡುಗುತ್ತದೆ; ಔಚಿತ್ಯ ಜ್ಞಾನವೂ ಮರೆಯಾಗುತ್ತದೆ. ಇದಕ್ಕೆ ಅವಕಾಶಕೊಡದಂತೆ ತಡೆ ಹಿಡಿಯುವುದು ಗ್ರಹಚಾರವೆಂಬ ಎಣಿಕೆ. ತೊಂದರೆಗೆ ಪರಿಹಾರವನ್ನೇ ಹುಡುಕದೆ, ಬರಿದೆ ಗ್ರಹಚಾರವೆಂದುಕೊಂಡು ತೆಪ್ಪಗಿದ್ದರೆ ಅದು ತಪ್ಪೇ. ಅದು ಗ್ರಹಚಾರಕ್ಕೇ ಅಪಚಾರ!

ಗ್ರಹಚಾರವೆಂದ ಮಾತ್ರಕ್ಕೆ ಪುರುಷಪ್ರಯತ್ನ ಬೇಡವೆಂದಲ್ಲ; ವಿಚಾರ ನಿರರ್ಥಕವೆಂದಲ್ಲ; ಬೇರೆ ದಾರಿಯೇ ಇಲ್ಲವೆಂದಲ್ಲ.

ಮನಸ್ಸನ್ನು ಹತೋಟಿಗೆ ತಂದುಕೊಳ್ಳುವ ಒಂದು ಹವಣಿಕೆ.

ಭವಿಷ್ಯಚಿಂತನೆ

ಮುಂದಾಗುವುದನ್ನು ಇಂದೇ ತಿಳಿಯುವ ಕುತೂಹಲ ಯಾರಿಗಿರದು? ನಾಳೆಯ ಸ್ಥಿತಿಗತಿ ನಮ್ಮ ಮಟ್ಟಿಗೆ ಹೇಗಿದ್ದೀತೋ ಎನ್ನುವ ಕಾತರ ಸಹಜವಾದುದೆ.

ನೆನ್ನೆಯ ಆಧಾರದ ಮೇಲೆ ಇಂದು; ಇಂದಿನ ಆಧಾರದ ಮೇಲೆ ನಾಳೆ. ಹಿಂದೆ-ಮುಂದೆಗಳನ್ನು ಬಿಟ್ಟು ಇಂದು ಎಂಬುದು ಬಿಡಿಯಾಗಿ ಇರಬಲ್ಲುದೆ? ಈ ತಾತ್ತ್ವಿಕ ವಿಚಾರವನ್ನು ಕೈಬಿಟ್ಟರೂ, ಮುಂದೇನಾದೀತು, ಒಳ್ಳೆಯದೊ ಕೆಟ್ಟದೊ ಎಂಬ ಕಾತರವಿರುವುದಂತೂ ಎಲ್ಲರ ಅನುಭವದಲ್ಲಿದೆ. ವಯಸ್ಸಾದಂತೆ ಈ ಕಾತರ ಹೆಚ್ಚುವುದೂ ಉಂಟು!

ಆದರೆ ಮುಂದಿನದನ್ನು ಈಗಲೆ ಅರಿತುಕೊಳ್ಳುವುದು ಹೇಗೆ? ಹಿಂದಿನ ಸ್ಥಿತಿಯನ್ನು ಗಮನಿಸಿ ಇಂದಿನ ಸ್ಥಿತಿಯೇನೆಂಬುದನ್ನು ತಿಳಿದುಕೊಳ್ಳುವಂತೆಯೆ. ಇಂದಿನದನ್ನು ಗಮನಿಸಿ ಮುಂದಿನ ಸ್ಥಿತಿಗತಿಗಳನ್ನು ಊಹಿಸಿಕೊಳ್ಳುವುದು ಕೊಂಚಮಟ್ಟಿಗೆ ಸಾಧ್ಯ. ಆದರೆ ಅಲ್ಲಿ ಹೀಗೆಯೇ ಆದೀತೆಂಬ ನಿಶ್ಚಯವಿರಲಾರದು. ನಮ್ಮ ಪಾಲಿಗೆ ಬಂದದ್ದು ಊಹೆಯಷ್ಟೆ; ನಿಶ್ಚಿತವಾದ ಜ್ಞಾನವೇನು ಅಲ್ಲ. ಇಂಥ ಸಂದರ್ಭದಲ್ಲಿ ಜ್ಯೋತಿಷ್ಯ ಮುಂದೆ ಬರುತ್ತದೆ. ಗ್ರಹಗತಿಗಳನ್ನು ಗಮನಿಸಿ, ಜಾತಕವನ್ನು ಪರಿಶೀಲಿಸಿ, ಗುಣಾಕಾರ ಮಾಡಿ, ಮುಂದೆ ಹೀಗೆಯೇ ಆಗುತ್ತದೆ ಎಂದು ಖಂಡಿತವಾಗಿ ಎಂಬಂತೆ ಹೇಳಬಲ್ಲವರನ್ನು ಮೊರೆಹೋಗುವುದು ಕಂಡುಬರುತ್ತದೆ.

ಭವಿಷ್ಯ ಹೇಳುವ ಮಂದಿಗೆ ಮರುಳಾಗುವವರು ನಮ್ಮ ದೇಶದಲ್ಲಿ ಮಾತ್ರವಲ್ಲ, ಎಲ್ಲ ದೇಶಗಳಲ್ಲಿಯೂ ಇದ್ದಾರೆ; ಅವರ ಸಂಖ್ಯೆಯೂ ದೊಡ್ಡದೆ! ಜ್ಯೋತಿಷ್ಯ ಸುಳ್ಳೊ ನಿಜವೊ ಆ ಮಾತು ಬೇರೆ. ಆದರೆ ಅದನ್ನು ಬಳಸಿಕೊಂಡು ಬದುಕುವವರ ಪ್ರಾಮಾಣಿಕತೆ ಸಂಶಯಾಸ್ಪದವಾದದ್ದೆ. ನಮ್ಮ ನಿಮ್ಮಂತೆಯೆ ಆಸೆ-ಆತಂಕಗಳಿಂದ ಬಾಳುವ ಜ್ಯೋತಿಷ್ಕರಿಗೆ ಮುಂದಿನದನ್ನು ತಿಳಿದುಹೇಳುವ ಸಾಮರ್ಥ್ಯ ಇದೆಯೆಂದರೆ ನಂಬುವುದು ಕಷ್ಟ.

ಮುಂದಿನದಕ್ಕೆ ಅಂಜುವವರು ಜ್ಯೋತಿಷ್ಯವನ್ನು ಹಿಡಿಯುವುದು ಸಹಜವೆ. ನದಿಯಲ್ಲಿ ಮುಳುಗುವವನು ಹುಲ್ಲುಕಡ್ಡಿಯನ್ನಾದರೂ ಹಿಡಿಯುವುದಿಲ್ಲವೆ? ಕಾತರವಿರುವವರು ಏನನ್ನಾದರೂ ನಂಬಿಯಾರು!

ಇತಿಹಾಸದ ದೃಷ್ಟಿ

ನಮ್ಮ ಹಿಂದಿನವರಿಗೆ ಚರಿತ್ರೆಯೆಂಬ ಶಾಸ್ತ್ರಭಾಗದ ಅರಿವೇ ಇರಲಿಲ್ಲವಂತೆ.

ಇದು ಕೆಲವರ ಆಕ್ಷೇಪ. ಅವರಿಗೆ ಕಥೆಯಾಗಲಿ, ಕಾವ್ಯವಾಗಲಿ, ಪುರಾಣವಾಗಲಿ, ಇತಿಹಾಸವಾಗಲಿ ಎಲ್ಲ ಒಂದೇ! ಎಂದು.

ನಿರೂಪಿಸುವ ಪ್ರಸಂಗದಲ್ಲಿ ದಿಟವಾಗಿ ನಡೆದದ್ದೇನು, ಕಲ್ಪನೆಯ ಪಾಲೆಷ್ಟು, ಊಹೆ-ಉತ್ಪ್ರೇಕ್ಷೆಗಳ ಮೇಲಾಟವೇನು ಎಂಬ ವಿವೇಕವೇ ಅವರಿಗಿರುವುದಿಲ್ಲ. ಈ ಆಕ್ಷೇಪದ ಹಿನ್ನೆಲೆಯಲ್ಲಿರುವುದು ಐತಿಹಾಸಿಕ ದೃಷ್ಟಿ. ಇದೊಂದು ಇತ್ತೀಚಿನ ಸೃಷ್ಟಿ.

ಐರೋಪ್ಯರ ಸಂಪರ್ಕ ನಮಗೆ ಒದಗಿಬಂದಮೇಲೆ ನಾವು ಕಲಿತ ಹಲವು ವಿದ್ಯೆಗಳಲ್ಲಿ ಇದೊಂದು.

ಇತಿಹಾಸವೆಂದರೆ ಇದ್ದುದನ್ನು ಇದ್ದಂತೆಯೇ, ನಡೆದುದನ್ನು ನಡೆದಂತೆಯೇ ತಿಳಿಸಿಕೊಡುವುದು ಎಂಬರ್ಥವಿದೆ. ಇದರಲ್ಲಿ ಕಲ್ಪನೆಗೆ, ಊಹೆಗೆ, ನಿರ್ಣಯಕ್ಕೆ, ಚಿಂತನೆಗೆ, ವಿಮರ್ಶೆಗೆ ಎಡೆಯಿರದು ಎಂಬ ಹಟ ಬೇರೆ. ಶಾಸನ, ನಾಣ್ಯ, ಕಟ್ಟಡ, ಕಡತ, ಬರಹ ಇವೆಲ್ಲ ಇತಿಹಾಸದ ಸಾಮಗ್ರಿಗಳು. ಎಂದೋ ನಡೆದುಹೋದ ಸಂಗತಿಗಳನ್ನು ನಮಗೆ ತಿಳಿಸುವಾಗ ಇತಿಹಾಸ ಇಷ್ಟನ್ನೆ ಅವಲಂಬಿಸಿದರೆ ಅದರಲ್ಲಿ ರುಚಿಯೇನು, ರಸವೇನು?

ಹಿಂದೆ ನಡೆದ ಎಲ್ಲ ಪ್ರಸಂಗಗಳಿಗೂ ಶಾಸನ, ನಾಣ್ಯ, ಕಟ್ಟಡ ಮೊದಲಾದುವು ಇದ್ದುವೋ? ಇದ್ದುವೆಲ್ಲ ಉಳಿದುಕೊಂಡು ಬಂದುವೋ? ಉಳಿದುಕೊಂಡು ಬಂದುವೆಲ್ಲ ನಮಗೆ ದೊರೆತಿವೆಯೇ?

ದೊರೆತದ್ದನ್ನು ಕೂಡಿ ಹಾಕಿ ಚರಿತ್ರೆ ಬರೆಯುವಾತನೂ ಮನುಷ್ಯ ತಾನೆ?

ಅವನ ಪೂರ್ವಗ್ರಹ, ಅನಿಸಿಕೆ, ವಿಮರ್ಶೆ, ಕಲ್ಪನೆ ಇವೆಲ್ಲ ಅವನ ಅರಿವಿಲ್ಲದೆಯೇ ಅವನ ಬರಹದಲ್ಲಿ ತೂರಿಕೊಂಡು ಬರಲಾರವೆ?

ಇಷ್ಟಾಗಿ, ಚರಿತ್ರೆಯಲ್ಲೇ ಎಷ್ಟೊಂದು ಮಾರ್ಪಾಟು ಒದಗಿಬಂದಿಲ್ಲ?

ಹೊಸ ವಿವರಗಳು ದೊರೆತಂತೆ ಹಳೆಯ ಚಿತ್ರ ಬದಲಾಗುತ್ತದೆ.

ನಮ್ಮ ಹಿಂದಿನವರು ಯಾವುದಾದರೊಂದು ಪ್ರಸಂಗದ ಸ್ವಾರಸ್ಯವನ್ನೋ, ಯಾವನೊಬ್ಬ ವ್ಯಕ್ತಿಯ ಹಿರಿಮೆಯನ್ನೊ ಸಾಧಿಸಬೇಕೆಂದು ಹೊರಟಾಗ, ನಾವು ಮೆಚ್ಚಿಕೊಳ್ಳುವಂಥ ರಸಮಯ ಚಿತ್ರವೊಂದನ್ನು ನಮ್ಮೆದುರು ಇರಿಸುತ್ತಿದ್ದರು.

ಅದರಿಂದ ಪ್ರಯೋಜನವಿಲ್ಲವೆ?

ಚರಿತ್ರೆಯ ಚರಿತಾರ್ಥ

ನಮ್ಮ ಹಿಂದಿನವರಿಗೆ ಐತಿಹಾಸಿಕ ಪ್ರಜ್ಞೆಯಿರಲಿಲ್ಲವೆಂದು ನಮ್ಮವರಲ್ಲಿ ಕೆಲವರಿಗೆ ಕೊರಗು.

ನಾವಿಂದು ಬೆಳೆಸಿಕೊಂಡು ತಲೆಯ ಮೇಲಿರಿಸಿಕೊಂಡಿರುವ ಐತಿಹಾಸಿಕ ದೃಷ್ಟಿ ಈ ಶತಮಾನದ ಸೃಷ್ಟಿ. ಇತಿಹಾಸವೆಂಬುದು ಹಿಂದೆ ಇರಲಿಲ್ಲವೆಂದಲ್ಲ. ಆದರೆ ಅದೇ ಒಂದು ಶಾಸ್ತ್ರ, ಒಂದು ವಿದ್ಯೆಯೆಂದಾಗಿರಲಿಲ್ಲ.

ಈಗಿನ ಚರಿತ್ರೆಯ ಮುಖ್ಯೋದ್ದೇಶವೇನು? ಯಥಾರ್ಥಜ್ಞಾನ. ಇದ್ದದ್ದನ್ನು ಇದ್ದಂತೆಯೆ ತಿಳಿಸುವುದು. ಇದಕ್ಕೆ ಆಧಾರವಾಗಿ ಪ್ರತ್ಯಕ್ಷ, ಅನುಮಾನ, ಅನುಭವ, ಶಾಸನ, ದಾಖಲೆ ಇವನ್ನಷ್ಟೆ ಈಗಿನವರು ಹಿಡಿಯುತ್ತಾರೆ. ತನ್ನ ಅನುಭವಕ್ಕೆ ಬಂದರೂ ಇತರರಿಗೆ ಅದು ಅಸಂಭವವೆಂದು ಕಾಣುವ ಭಯವಿದ್ದರೆ ಚರಿತ್ರಕಾರನು ಅದನ್ನು ಕೈಬಿಡುತ್ತಾನೆ. ಯಾವುದಾದರೊಂದು ಪ್ರಸಂಗವನ್ನು ಅದಕ್ಕೆ ಪ್ರಮಾಣ ಸಿಗುವವರೆಗೆ ನಡೆಯಲೇ ಇಲ್ಲವೆಂದು ಭಾವಿಸುತ್ತಾನೆ. ಪ್ರಮಾಣ ದೊರೆತರೆ ತನ್ನ ಅಭಿಪ್ರಾಯವನ್ನು ಮಾರ್ಪಡಿಸಿಕೊಳ್ಳುತ್ತಾನೆನ್ನಿ. ಇದೆ ಎಂಬುದಕ್ಕೆ ಸಾಕ್ಷಿ ದೊರೆಯದಾದರೆ ಇಲ್ಲವೆಂದೇ ಸಿದ್ಧ! ಚರಿತ್ರಕಾರರು ಏನನ್ನಾದರೂ ನಂಬುವುದಕ್ಕೇ ಅಂಜುತ್ತಾರೆ. ಪ್ರಾಚೀನರ ದೃಷ್ಟಿಯಲ್ಲಿ ಚರಿತ್ರೆಯಿಂದ ನಮಗೊದಗುವ ಪ್ರಯೋಜನ ಉತ್ತಮನಾದ ವ್ಯಕ್ತಿಯೊಬ್ಬನ ಬದುಕು, ಬವಣೆ, ಆದರ್ಶ ಇವುಗಳ ಪರಿಚಯ.

ವ್ಯಕ್ತಿಯ ಸಮಗ್ರಚಿತ್ರವನ್ನು ರಸಮಯವಾಗಿ ಒದಗಿಸಲು ಕವಿಯಾದವನು (ನಮ್ಮಲ್ಲಿ ಚರಿತ್ರಕಾರರು ಕವಿಗಳೇ) ತಾನು ಕಂಡದ್ದು, ಕೇಳಿದ್ದು, ಕಲ್ಪಿಸಿಕೊಂಡದ್ದು ಎಲ್ಲವನ್ನೂ ಕಲಸಿ ಕದಂಬವೊಂದನ್ನು ಸಿದ್ಧಪಡಿಸುತ್ತಾನೆ.

ಇಲ್ಲಿ ವಿವರಗಳು ಮುಖ್ಯವಲ್ಲ; ಒಟ್ಟಾರೆ ಚಿತ್ರಣ ಮುಖ್ಯ.

ಆಧುನಿಕ ಚರಿತ್ರೆಯಲ್ಲಿ ಒಟ್ಟಾರೆ ಚಿತ್ರಣದ ಸಾಧ್ಯತೆಯೇ ಇಲ್ಲ; ವಿವರಗಳು ಮೇಲೆದ್ದು ಕುಣಿಯುತ್ತವೆ. ಒದಗುವ ತಿಳಿವಳಿಕೆ ಬಿಡಿ ಬಿಡಿಯಾದದ್ದು; ಹಣಕು ತುಣುಕಿನದು.

ಇದು ದೃಷ್ಟಿಭೇದದ ಮಾತು.

ಆಧುನಿಕತೆಯ ಅವಾಂತರ

ನಯಸೇನನ 'ಧರ್ಮಾಮೃತ'ದಲ್ಲಿ ಬರುವ ಸ್ವಾರಸ್ಯವಾದ ಮಾತುಗಳಲ್ಲೊಂದು 'ಗಾಳಿಯಂ ಮೆಲ್ವನ, ಬಾಯ್ಗವಲಂ ಪೊಯ್ವರ್' ಎಂಬುದು.

ಗಾಳಿಯಷ್ಟನ್ನೇ ಉಂಡು ಬಾಳಬಲ್ಲವನು ಇದ್ದಾನೆಂದುಕೊಳ್ಳೋಣ. ಅವನ ಸಾಮರ್ಥ್ಯಕ್ಕೆ ಅಚ್ಚರಿಪಡದೆ, ಅವನ ಸಾಧನೆಯನ್ನು ಮೆಚ್ಚಿಕೊಳ್ಳದೆ, ಅವನ ಮೇಲೆ ಕನಿಕರದಿಂದ ಅವನ ಬಾಯಿಗಷ್ಟು ಅವಲಕ್ಕಿಯನ್ನು ತುರುಕುವ ಜನರೂ ಇರುತ್ತಾರೆ.

ಸಮಾಜದಲ್ಲಿ ಸರಳವಾಗಿ ಬದುಕುವ ಕಲೆಯನ್ನು ಸಾವಿರಾರು ವರ್ಷಗಳಿಂದ ಸಾಧಿಸಿಕೊಂಡವರಿದ್ದಾರೆ. ಅವರನ್ನು ತಮ್ಮ ಪಾಡಿಗೆ ಬಿಡದೆ, ಅವರ ಮೇಲೆ ಜಟಿಲ ಜೀವನದ ತಾಂತ್ರಿಕಪರಿಕರಗಳನ್ನು ಹೇರುವ ಪ್ರಯತ್ನ ಎಲ್ಲೆಲ್ಲೂ ನಡೆಯುತ್ತಿದೆ.

ಬೇಸಾಯವನ್ನೇ ನೋಡಿ. ನಮ್ಮ ದೇಶ ಬೇಸಾಯದಿಂದಲೇ ಬದುಕಿಬಾಳಿದ್ದು, ಅನಾದಿಕಾಲದಿಂದಲೂ ಇಲ್ಲಿ ಬೇಸಾಯವೇ ಪ್ರಮುಖ ವೃತ್ತಿ ಎಂದಮೇಲೆ ಬೇಸಾಯಕ್ಕೆ ಅಗತ್ಯವಾದ ತಿಳಿವಳಿಕೆ, ಸಂವಿಧಾನಗಳು ನಮ್ಮ ಜನರಿಗೆ ಸಹಜವಾಗಿಯೇ ರೂಢಮೂಲವಾಗಿ ಬಂದಿವೆ. ಸರ್ಕಾರದ ಪ್ರೋತ್ಸಾಹದಿಂದ ಕೃಷಿ ವಿಜ್ಞಾನಿಗಳು ಬೇಸಾಯವನ್ನು ಸುಧಾರಿಸುವತ್ತ ತಮ್ಮ ಗಮನವನ್ನು ಹರಿಸುತ್ತಿದ್ದಾರಷ್ಟೆ. ಇವರ ತಿಳಿವಳಿಕೆಯಾದರೋ, ಇಲ್ಲಿ ತಲೆತಲಾಂತರದಿಂದ ಬಂದದ್ದಲ್ಲ; ಹೊರಗಣದೇಶಗಳ ಪ್ರಭಾವವನ್ನು ತಳೆದು, ಇತ್ತೀಚೆಗೆ ನಾಲ್ಕಾರು ಹೆಜ್ಜೆಗಳನ್ನು ಇಡತೊಡಗಿರುವ ವಿಜ್ಞಾನ-ತಂತ್ರಗಳ ಅಧ್ಯಯನದಿಂದ ಬಂದದ್ದು.

ಇವರು ನಮ್ಮ ರೈತಾಪಿಜನರಿಗೆ ಉಪದೇಶ ಮಾಡುವ, ಮಾರ್ಗದರ್ಶನ ಮಾಡುವ ಹೊಣೆಯನ್ನು ಹೊತ್ತುಕೊಂಡಮೇಲಾದರೂ, ಸಾವಿರಾರು ವರ್ಷಗಳಿಂದ ಈ ಜನ ಚೆನ್ನಾಗಿಯೇ ಬದುಕಿ ಬಾಳಿರುವುದರ ರಹಸ್ಯವೇನು ಎಂದಾದರೂ ಆಲೋಚನೆ ಮಾಡಬೇಡವೇ? ಬೇಸಾಯಗಾರರ ಆರ್ಥಿಕ ಸ್ಥಿತಿ, ಸಾಮಾಜಿಕ ಅವಸ್ಥೆ, ಪರಿಸರದ ಅಗತ್ಯ ಒಂದನ್ನೂ ಎಣಿಕೆಗೆ ತಂದುಕೊಳ್ಳದೆ, ತಾಂತ್ರಿಕ ಪರಿಕರಗಳನ್ನು ಅವರ ಮೇಲೆ ಹೇರುವುದು ನಡೆಯುತ್ತಿದೆ. ಅವರ ಸರಳಜೀವನ, ಸಂಪ್ರದಾಯದ ಸಂವಿಧಾನಗಳು, ಪರಿಸರದ ಪರಿಶುದ್ಧಿ ಎಲ್ಲವೂ ಮರೆಯಾಗುತ್ತಿವೆ.

ಈ ಸಂದರ್ಭದಲ್ಲಿ ನಯಸೇನನ ಮಾತು ನೆನಪಿಗೆ ಬರುತ್ತದೆ.

ಅಲಂ-ಕಾರ

ಅಲಂಕಾರವನ್ನು ಮೆಚ್ಚಿಕೊಳ್ಳದವರು ಯಾರು? ಅಲಂಕಾರಕ್ಕೆ ಮನಸೋಲದೆ ಇರುವವರ ಸಂಖ್ಯೆ ಸಣ್ಣದು ತಾನೆ?

ಇನ್ನು ಅಲಂಕಾರಕ್ಕೆ ಜನ ವೆಚ್ಚ ಮಾಡುವ ಸಮಯ, ಹಣ ಮತ್ತು ಶ್ರಮಗಳನ್ನು ನೋಡಿದರೆ ಆಶ್ಚರ್ಯವಾದೀತು. ಪತ್ರಿಕೆಗಳಲ್ಲಿ ಬರುವ ಜಾಹೀರಾತುಗಳನ್ನೇ ಗಮನಿಸಿ; ಅಲಂಕಾರದ ಸಾಮಗ್ರಿಗಳನ್ನು ಒದಗಿಸುವ ಅಂಗಡಿಗಳಲ್ಲಿ ನೆರೆಯುವ ಸಂದಣಿಯನ್ನೇ ನೋಡಿ.

ಬದುಕಿನಲ್ಲಿ ಅಲಂಕಾರಕ್ಕೆ ಪ್ರಮುಖಪಟ್ಟ ಕಟ್ಟಿರುವ ಹೆಂಗಸರೂ ಇದ್ದಾರೆ, ಗಂಡಸರೂ ಇದ್ದಾರೆ. ಮೈಯನ್ನೂ ಮನೆಯನ್ನೂ ಬಗೆಬಗೆಯಾಗಿ ಸಿಂಗರಿಸಿಕೊಳ್ಳುವ ಚಪಲ ತುಂಬ ಪ್ರಾಚೀನವಾದದ್ದೇ; ಪ್ರಪಂಚದಲ್ಲೆಲ್ಲ ಹರಡಿರುವುದೇ.

ಅಲಂಕಾರದ ಪ್ರಯೋಜನವೇನು? ಇರುವ ಚೆಲುವನ್ನು ಹೆಚ್ಚಿಸುವುದು, ಚೆಲುವು ಇದ್ದರೆ ಅಲಂಕಾರದ ಅಗತ್ಯವೇ ಇಲ್ಲ ಎಂದು ಹೇಳುವ ರಸಿಕರಿದ್ದಾರೆ. ಚೆಲುವು ಇಲ್ಲದಿದ್ದರೆ ಅಲಂಕಾರ ಆ ಕೊರತೆಯನ್ನು ಎಂದಿಗೂ ಎಷ್ಟು ಮಾತ್ರಕ್ಕೂ ನೀಗಲಾರದು ಎನ್ನುವವರೂ ಇದ್ದಾರೆ! ಆದರೆ, ಚೆಲುವಿದ್ದಾಗಲೂ ಅದರ ಮೇಲೆ ಅಂಲಕಾರದ ಹೊರೆಯನ್ನು ಹೇರುತ್ತಾರೆ. ಚೆಲುವಿರದಾಗಲಂತೂ ಅಲಂಕಾರವೇ ಅವಲಂಬನೆ; ಅಲಂಕಾರವಾದರೂ ಚೆಲುವನ್ನು ಒದಗಿಸೀತು ಎನ್ನುವ ನಿರೀಕ್ಷೆ ಹಲವರದ್ದು.

ಅಲಂಕಾರ ಎನ್ನುವ ಮಾತಿಗೆ ಅರ್ಥವೇನೆಂದು ಬಲ್ಲಿರಾ? 'ಸಾಕುಮಾಡುವುದು' (ಅಲಂ-ಕರಣ) ಎಂದು. 'ಇಷ್ಟು ಸಾಕು' ಎನ್ನುವ ಅರಿವಿದ್ದರೆ ಅದೇ ಅಲಂಕಾರ. ಉಡುಗೆ-ತೊಡುಗೆಯಲ್ಲೆ ಆಗಲಿ, ಮನೆಯ ಇರಸರಿಕೆಯಲ್ಲೆ ಆಗಲಿ, ಊಟ-ಉಪಚಾರ ದಲ್ಲೇ ಆಗಲಿ, ಮಾತುಕತೆಯಲ್ಲೆ ಆಗಲಿ, ಮಿತಿ ಮೀರದೆ ಇರುವುದು ಅಲಂಕಾರ.

ಬದುಕಿನ ಯಾವುದೇ ವಿವರದಲ್ಲೂ ಅಗತ್ಯ, ಔಚಿತ್ಯ ಎಂಬ ಮಾತುಗಳಿಗೆ ಬೆಲೆಯುಂಟು. ಅಲಂಕಾರದಲ್ಲೂ ಇದೆ. ಅಗತ್ಯಕ್ಕಿಂತ ಹೆಚ್ಚು ಒದಗಿಬಂದರೆ ಅದು ಅತಿರೇಕ; ಔಚಿತ್ಯದ ಎಲ್ಲೆಕಟ್ಟನ್ನು ಮೀರಿದರೆ ಅದು ಅಸಂಗತ.

ಎಷ್ಟು ಅಗತ್ಯವೋ ಅಷ್ಟು ಮಾತ್ರ ಅಲಂಕಾರವಿದ್ದರೆ ಹಿತ. ಎಷ್ಟು ಉಚಿತವೋ ಅಷ್ಟೇ ಇದ್ದರೆ ಚೆಲುವು. ಮಿತಿಯನ್ನು ಮೀರಿದರೆ ರಸಾಭಾಸ.

ಹೊರಗಿನ ಶೃಂಗಾರ

ಹಬ್ಬದ ದಿನದಂದು ಹೊಸ್ತಿಲನ್ನು ಸಾರಿಸುತ್ತಾರೆ; ರಂಗೋಲಿ ಇಡುತ್ತಾರೆ. ಬಾಗಿಲಿಗೆ ಮಾವಿನೆಲೆಯ ತೋರಣ ಕಟ್ಟುತ್ತಾರೆ. ಹೊಸ ಉಡುಪನ್ನು ಧರಿಸುತ್ತಾರೆ. ಆದರೆ ಇಷ್ಟನ್ನು ಮಾಡಿಬಿಟ್ಟರೆ ಹಬ್ಬವಾಯಿತೆ?

ದಿಟವಾಗಿ ಹಬ್ಬವೆಂದರೆ ಇವುಗಳ ಅಗತ್ಯವೇ ಅಲ್ಲ. ಇವಿಲ್ಲದೆಯೂ ಹಬ್ಬದ ಸಂಭ್ರಮ ಸಾಧ್ಯ. ಆದರೆ ಹಬ್ಬಕ್ಕೆ ಹೊರಗಣ ಆಕಾರವೂ ಇರಬೇಕಲ್ಲ? ಸಂಭ್ರಮಕ್ಕೆ ಸಿದ್ಧತೆಯಾಗಿ ಇವೆಲ್ಲ.

ನಮ್ಮ ಬದುಕಿನಲ್ಲಿ ಎಷ್ಟೋ ವಿವರಗಳು ಹೀಗೆಯೇ ಇರುತ್ತವೆ. ಹೊಸ್ತಿಲನ್ನು ಸಾರಿಸುತ್ತೇವೆ; ಒಳಗೆ ಬಿದ್ದಿರುವ ಕಸವನ್ನು ಹೊರಗೆ ಹಾಕಲು ಮರೆಯುತ್ತೇವೆ. ಮನೆಯ ಮುಂದೆ ರಂಗೋಲಿಯಿರುತ್ತದೆ; ಒಳಗೆ ಒಪ್ಪ-ಓರಣಗಳಿರುವುದಿಲ್ಲ. ಬಾಗಿಲಿಗೆ ತೋರಣ; ಒಳಗೆ ಹಗರಣ.

ವಿದ್ಯಾಭ್ಯಾಸವನ್ನೇ ನೋಡಿ, ಪರೀಕ್ಷೆಗಳು, ಪ್ರಶಸ್ತಿಗಳು, ಕಟ್ಟಡಗಳು, ಪರಿಕರಗಳು, ಪಠ್ಯಪದ್ಧತಿಗಳು, ಸುಧಾರಣೆಗಳು, ಇವಕ್ಕೆ ಕೊನೆ ಮೊದಲಿಲ್ಲ; ಆದರೆ ಕಲಿಯುವ ವಿದ್ಯೆ ಎಂಥದು? ವ್ಯವಹಾರದಲ್ಲಾಗಲಿ ಬದುಕಿನಲ್ಲಿಯಾಗಲಿ ಅದರ ಬೆಲೆ ಎಷ್ಟು?

ಅದ್ದೂರಿಯಾಗಿ ಮದುವೆ ಮಾಡುತ್ತಾರೆ; ಊಟ, ಉಡುಗೊರೆಗಳ ಮೇಲಾಟ. ಒಂದೆರಡು ದಿನಗಳ ಸಂಭ್ರಮವೋ ಸಂಭ್ರಮ, ಆದರೆ ಮದುವೆಯೆಂಬುದೊಂದು ಸಂಸ್ಕಾರ. ಅದರಲ್ಲಿ ಪ್ರಸಕ್ತವಾಗುವ ವೈದಿಕ ಕರ್ಮಗಳ ಕಡೆ ಯಾರಿಗೂ ಗಮನವಿಲ್ಲ. ಅವುಗಳ ತಾತ್ಪರ್ಯವಂತೂ ಯಾರಿಗೂ ತಿಳಿಯದು. ತಿಳಿದುಕೊಳ್ಳುವ ಕುತೂಹಲವೂ ಯಾರಿಗೂ ಇರದು.

ಸಾಮಾನ್ಯವಾಗಿ ಜನರ ನೋಟ ಹೊರಗಣ ವಿವರಗಳ ಕಡೆಗೇ, ಮನುಷ್ಯನ ಶೀಲ ಹೇಗಾದರಿರಲಿ; ಉಡುಪು ಅಂದವಾಗಿರಬೇಕು. ಆಚಾರ ಹೇಗಾದರಿರಲಿ, ಆಕಾರ ಕೆಡಬಾರದು. ಬಹಿರಂಗಶುದ್ಧಿಯಿದ್ದರೆ ಆಯಿತು; ಅಂತರಂಗದಲ್ಲಿ ಏನಿದೆಯೆಂದು ಯಾರು ನೋಡುತ್ತಾರೆ?

ಹೀಗಾಗಿ ಎಲ್ಲರಿಗೂ ಹೊರಗನ್ನು ಚೆನ್ನಾಗಿ ಕಾಣಿಸುವುದರಲ್ಲೇ ಆಸಕ್ತಿ. ಈ ಆಸಕ್ತಿಯು ಹೆಚ್ಚಿದಂತೆ ಒಳಗು ಬರಬರುತ್ತ ಬರಡಾಗುತ್ತದೆ; ಹೊಲಸಾಗುತ್ತದೆ. ಒಳಗನ್ನು ಹೀಗೆ ಅಸಡ್ಡೆಯಿಂದ ಕಾಣತೊಡಗಿದರೆ, ಹೊರಗಿನ ಚೆನ್ನಾಗಲಿ ಎಷ್ಟು ಕಾಲ ಉಳಿದೀತು? ಮೈ ನಾರುತ್ತಿದ್ದರೆ ಮೇಲೆ ಎಷ್ಟು ಅತ್ತರು ಹಾಕಿದರೆ ತಾನೆ ಏನು?

ತಾಂಬೂಲದ ಸ್ವಾರಸ್ಯ

ಆಂಗ್ಲ ಸಾಹಿತ್ಯದಲ್ಲಿ ಗೋಲ್ಡ್‌ಸ್ಮಿತ್ ಪ್ರಸಿದ್ಧನಾದವನು. ಅವನ ಬರಹಗಳಲ್ಲಿ ಆಣಿಮುತ್ತಿನಂಥ ಮಾತುಗಳು ಮತ್ತೆ ಮತ್ತೆ ಕಾಣಸಿಗುತ್ತವೆ. ಅವುಗಳಲ್ಲೊಂದು-

Learn the luxury of doing good ಎಂಬುದು.

ಬೇರೆಯವರಿಗೆ ಒಳ್ಳೆಯದನ್ನು ಮಾಡಬೇಕೆಂಬುದು ಯಾರ ಅಗತ್ಯವೂ ಅಲ್ಲ. ಕರ್ತವ್ಯವೂ ಅಲ್ಲ. ಹಾಗೆಂದು ಯಾವ ಕಾನೂನೂ ಇರದು. ಯಾರ ನಿರ್ಬಂಧಕ್ಕೆ ಯಾರೂ ಒಳ್ಳೆಯದನ್ನು ಮಾಡಬೇಕಾದುದಿಲ್ಲ.

ಆದರೆ ಕೆಲವರು ಕರ್ತವ್ಯವನ್ನಷ್ಟೇ ನಿರ್ವಹಿಸಿ ಕೃತಾರ್ಥರಾಗುವುದಿಲ್ಲ. ನನ್ನ ಪಾಡು ನನಗೆ ಎಂದು ಕೈಕಟ್ಟಿ ಕೂಡುವುದೂ ಇಲ್ಲ. ತಾವು ಮಾಡಬೇಕಾದುದನ್ನು ಮಾಡಿದ ಮೇಲೂ ಬೇರೆಯವರಿಗೆ ಅನುಕೂಲವಾಗಲೆಂದು ಏನನ್ನಾದರೂ ಮಾಡಲು ಹೊರಡುತ್ತಾರೆ. ಊಟವಾದ ಮೇಲೆ ತಾಂಬೂಲವನ್ನು ಹಾಕಿಕೊಳ್ಳುವಂತೆ.

ಹಸಿವನ್ನು ತೀರಿಸುವುದು ಊಟ; ಅದನ್ನು ಮಾಡಲೇಬೇಕು. ಊಟ ಮಾಡದಿದ್ದರೆ ಮತ್ತೇನನ್ನೂ ಮಾಡುವುದು ಸಾಧ್ಯವಿರದು. ಆದರೆ ತಾಂಬೂಲವನ್ನು ಜಗಿಯಲೇಕೆ?

ಊಟದಂತೆ ಅದೇನು ಅಗತ್ಯವಾದುದಲ್ಲ. ಅದು ಗೋಲ್ಡ್‌ಸ್ಮಿತ್ ಮಾತಿನಲ್ಲಿ ಹೇಳುವುದಾದರೆ 'ಲಕ್ಷುರಿ'.

ತಾಂಬೂಲದಿಂದ ಉಂಡದ್ದು ಅರಗುತ್ತದೆ ನಿಜ. ಆದರೆ ಆಹಾರ ಜೀರ್ಣವಾಗಲೆಂದು ಯಾವ ರಸಿಕನೂ ತಾಂಬೂಲವನ್ನು ಮೆಲ್ಲುವುದಿಲ್ಲ. ತಾಂಬೂಲಚರ್ವಣದ್ದೇ ಒಂದು ಸೊಗಸು, ಒಂದು ಮೋಜು, ಊಟಕ್ಕೆ ಮಂಗಳ ಹಾಡಿದಂತೆ ಅದು. ಊಟದಲ್ಲಿ ತೃಪ್ತಿಯನ್ನು ಕಾಣುವುದು ಅದರಲ್ಲಿ. ಬದುಕಿನಲ್ಲೂ ಹಾಗೆಯೇ. ನಾವು ಮಾಡಲೇಬೇಕಾದುದು ಬೇಕಾದಷ್ಟು ಇರುತ್ತದೆ. ಅಷ್ಟರಲ್ಲೆ ಬದುಕನ್ನೆಲ್ಲ ಸವೆಸಿದರೆ ಕೆಲವರಿಗೆ ಸಮಾಧಾನವಾಗದು. ನಮ್ಮ ಹಿತವನ್ನು ಸಾಧಿಸಿಕೊಳ್ಳುವುದು ನಮ್ಮ ಹಸಿವನ್ನು ತೀರಿಸಿಕೊಳ್ಳಲು ನಾವು ಊಟ ಮಾಡಿದಂತೆ. ಕೆಲವರು ಸ್ನೇಹಿತರನ್ನೂ ಕರೆದು ಊಟ ಹಾಕುವುದಿಲ್ಲವೆ? ಅದರಿಂದ ಸಂತೋಷವನ್ನು ಪಡೆಯುವುದಿಲ್ಲವೆ? ಬೇರೆಯವರಿಗೆ ಒಳ್ಳೆಯದನ್ನು ಮಾಡಬೇಕೆನ್ನುವ ಬಯಕೆ ಮನುಷ್ಯನಿಗಿರದಿದ್ದರೆ ಅವನ ಬದುಕಿನಲ್ಲಿ ಸ್ವಾರಸ್ಯಾಗಲಿ ಸಂತೋಷವಾಗಲಿ ಕಡಮೆಯೆ.

ಇದು ಸಹಜವಾಗಿ ಬರುವ ಗುಣವಲ್ಲ. ಅದನ್ನು ಕಲಿಯಬೇಕು. ಸಂಸ್ಕಾರವಿದ್ದರೆ, ಸಂಸ್ಕೃತಿಯಿದ್ದರೆ ಅದು ಒದಗಿ ಬಂದೀತು.

ಗುಟ್ಟು-ರಟ್ಟು

ಪಂಚತಂತ್ರದಲ್ಲಿ ಒಂದು ಕಿವಿಮಾತು-

'ನಾಲ್ಕು ಕಿವಿಗಳಿಗೆ ಬಿದ್ದ ಮಾತು ಗಟ್ಟಿಯಾಗಿ ಗುಟ್ಟಾಗಿ ಉಳಿದೀತು. ಆದರೆ ಆರು ಕಿವಿಗಳಿಗೆ ಬಿದ್ದ ಗುಟ್ಟು ರಟ್ಟಾಗದೆ ಇರದು.'

ನಾಲ್ಕು ಕಿವಿಗಳೆಂದರೆ ಇಬ್ಬರೇ ಮನುಷ್ಯರು. ಅವರಿಬ್ಬರ ನಡುವೆ ನಡೆದ ವ್ಯವಹಾರವೋ ಮಾತುಕತೆಯೋ ಅವರಿಬ್ಬರಿಗೆ ಮಾತ್ರ ಸಂಬಂಧಿಸಿದಂತೆ ಇದ್ದರೆ, ಅದು ಅವರಿಬ್ಬರಲ್ಲೇ ಉಳಿಯುವುದು ಸಾಧ್ಯ, ಸಹಜ. ಆರು ಕಿವಿಗಳೆಂದರೆ ಮೂವರು, ಇಬ್ಬರ ವ್ಯವಹಾರದಲ್ಲೂ ನೇರವಾದ ನಂಟಿಲ್ಲದೆ, ಇಬ್ಬರ ಮಾತನ್ನೂ ಕೇಳುತ್ತಿರುವವನು ಮತ್ತೊಬ್ಬ. ಇಬ್ಬರ ನಡುವೆ ಇರಬಹುದಾದ ಭಾವಸಂಬಂಧ ಇವನಿಗೇನು ಇರದು. ವ್ಯವಹಾರದ ಬಿಸಿಯೂ, ಮಾತುಕತೆಯ ಬಿರಸೂ ಅವನನ್ನೇನು ಮುಟ್ಟಲಾರದು. ಅವನು ಹೇಗೂ 'ಹೊರಗಿನವನು', ನಿರಾಸಕ್ತ. ಇವರ ಗೊಡವೆ ನನಗೇಕೆ ಎನ್ನುವುದು ಮೂಲಭೂತವಾದ ನಿಲುವು ಅವನದು. ಆದರೆ ಅಷ್ಟಕ್ಕೇ ಅವನು ಬಿಟ್ಟರೆ ತೊಂದರೆಯಿಲ್ಲ, ಆದರೆ ತಾವು ಕಿವಿಯಾರೆ ಕೇಳಿದ್ದನ್ನು ಕಣ್ಣಾರೆ ಕಂಡದ್ದನ್ನು ತಮ್ಮಲ್ಲೇ ಉಳಿಸಿಕೊಳ್ಳದೆ ಅದನ್ನು ಪ್ರಚಾರ ಮಾಡುತ್ತ ಹೊರಡುವವರು ವಿರಳವೇನಲ್ಲ. ಕಂಡವರ ವ್ಯವಹಾರದಲ್ಲಿ ಕಾರಣವಿಲ್ಲದೆ ಕುತೂಹಲವನ್ನು ತಾಳುವ ಮಂದಿಗೇನು ಕೊರತೆಯಿಲ್ಲ. ತೊಂದರೆಯಲ್ಲಿರುವವರ ನೆರವಿಗೆ ಬರಬೇಕೆಂಬ ಬುದ್ಧಿಯೇನು ಇರಬೇಕಾದುದಿಲ್ಲ; ಅವರನ್ನು ಮತ್ತಷ್ಟು ಪೇಚಿಗೆ ಸಿಕ್ಕಿಸಬಾರದೆಂಬ ಕನಿಕರ ಇದ್ದರೂ ಸಾಕು. ಅದೂ ಇರುವುದಿಲ್ಲ ಈ ಮಂದಿಗೆ. ಜಗಳವಾಡುತ್ತಿರುವವರು ಇಬ್ಬರು ಇದ್ದರೆ ಅವರ ಸುತ್ತ ನೆರೆಯುವವರು ಹತ್ತು ಮಂದಿ; ಜಗಳವನ್ನು ನಿಲ್ಲಿಸಲೆಂದಲ್ಲ, ತಮಾಷೆ ನೋಡಲೆಂದು. ಬೀದಿಯಲ್ಲಿ ಉದ್ಯೋಗವಿಲ್ಲದೆ ಅಲೆಯುವವರು, ಕಾಲ ಕಳೆಯಲು ಕೆಲಸವಿಲ್ಲದೆ ಇರುವವರು ಲೋಕದಲ್ಲಿ ಎಷ್ಟು ಮಂದಿ ಇದ್ದಾರೋ? ಬೇರೆಯವರ ಗುಟ್ಟನ್ನು ರಟ್ಟು ಮಾಡುವುದೇ ಹವ್ಯಾಸವಾಗಿ ಮಾಡಿಕೊಂಡಿರುವವರೂ ಇರುತ್ತಾರೆನ್ನಿ. ಒಮ್ಮೊಮ್ಮೆ ಇದರಿಂದ ಅವರಿಗೆ ಆದಾಯವೂ ಉಂಟು; ಇದೇ ವೃತ್ತಿಯಾಗಿ ಉಳ್ಳವರಿಲ್ಲವೆ? ತಮ್ಮ ಗುಟ್ಟನ್ನು ಅರಿತವರು ಅದನ್ನು ರಟ್ಟುಮಾಡದೆ ಇರಲೆಂಬ ಕಾತರದಿಂದಲೇ ಈ ಮೂರನೆಯವರ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳಬೇಕಾಗುತ್ತದೆ!

ಆದರೆ ನಾಯಿಯ ತಲೆಯ ಮೇಲಿನ ಬುತ್ತಿ ಕೆಳಕ್ಕೆ ಬೀಳದೆ ಇರುತ್ತದೆಯೆ? ಮೂರನೆಯವನ ಕಿವಿಗೆ ಬಿದ್ದ ಗುಟ್ಟಿನ ಗತಿಯೂ ಇದೇ.

ನಾಯಿ ಇದೆ, ಎಚ್ಚರಿಕೆ!

ಈ ಸುದ್ದಿಯನ್ನೂ, ಹುಷಾರಿಯನ್ನೂ ಹೊತ್ತ ಫಲಕಗಳು ಹಲವು ಮನೆಗಳ ತಲೆಬಾಗಿಲಮೇಲೆ ತೂಗಾಡುವುದನ್ನು ಕಂಡಿದ್ದೇವೆ.

ಉದ್ದೇಶವೇನೋ ಒಳ್ಳೆಯದೆ. ಅರಿಯದೆ ಒಳಗೆ ಬಂದವರು ಹುಲಿಯಂತೆ ಹರಿಹಾಯುವ ನಾಯಿಯನ್ನು ಕಂಡರೆ ಗಾಬರಿಯಾಗದೆ? ಅಮಾಯಕರಾದ ಆಗಂತುಕರನ್ನು ಈ ತೊಂದರೆಯಿಂದ ಪಾರು ಮಾಡುವುದು ನಾಯಿಯ ಒಡೆಯರ ಕರ್ತವ್ಯ ತಾನೆ?

ಮನೆಗೆ ಬರಬಾರದವರು ಕೆಲವರಿದ್ದಾರೆ-ಕಳ್ಳರು ಮೊದಲಾದವರು. ಇದೇ ಗುಂಪಿನಲ್ಲಿ ಕೆಲವರು, ಮತ್ತೆ ಕೆಲವರನ್ನೂ ಸೇರಿಸುವುದುಂಟು-ತಿರುಪೆ ಎತ್ತುವವರು. ವ್ಯಾಪಾರದ ನೆಪದಲ್ಲಿ ಕಾಡುವವರು, ಕಾರಣವಿಲ್ಲದೆ ಬಂದೊದಗಿ ಕಾಲಹರಣ ಮಾಡುವವರು ಇತ್ಯಾದಿ.

ಇಂಥವರನ್ನು ದೂರವಿರಿಸಲು ನಾಯಿ ನೆರವಾಗುತ್ತದೆಯೆನ್ನಿ. ಆದರೆ ಸಮಾಜದ ಚೌಕಟ್ಟಿನಲ್ಲಿ ಒಬ್ಬರನ್ನೊಬ್ಬರು ಕಾಣಬೇಕಾದ ಸಂದರ್ಭ ಎಂಥವರಿಗಾದರೂ ಬಂದೇ ಬರುತ್ತದೆ. ಅವರ ಪಾಡೇನು?

ಅದು ಹೋಗಲಿ, ಅಂಚೆಯವರು, ಗ್ಯಾಸಿನವರು, ಕೆಲಸದ ಸಲುವಾಗಿ ಬರುವವರು, ಕರೆಯಲು ಬರುವವರು ಇಂಥವರು ಅಂಜುತ್ತ ಅಂಜುತ್ತಲೆ ಒಳಗೆ ಕಾಲಿರಿಸಬೇಕು! ನಾಯಿ ಇರುವುದು ಅವರಿಗಾಗಿ ಅಲ್ಲವೆಂದು ಎಲ್ಲರೂ ಬಲ್ಲರು.

ಆದರೆ ಅವರೂ ಎಚ್ಚರದಿಂದಲೆ ಇರಬೇಕಲ್ಲ? ತಾವು ಬಂದ ಉದ್ದೇಶ ನಾಯಿಗೆ ತಿಳಿಯುವುದೆಂಬ ನಿಶ್ಚಯ ಯಾರಿಗೆ? ನಾಯಿ ತಮ್ಮನ್ನು ಕಂಡೊಡನೆ ಬಗುಳ ತೊಡಗಿದರೆ ಮನೆಯವರನ್ನು ಯಾರು ಮೆಚ್ಚಿಕೊಂಡಾರು?

ಈ ಬಗೆಯ ಆದರವನ್ನು ಅಪೇಕ್ಷಿಸಿ ಬರುವವರು ಯಾರು? ಒಂದು ವೇಳೆ ವಿಧಿಯಿಲ್ಲದೆ ಬಂದರೂ, ಅಲ್ಲಿಂದ ಹೋಗುವವರೆಗೆ ಅವರಿಗೆ ನೆಮ್ಮದಿಯಿರದು.

ನಾಯಿ ತಮ್ಮ ಮನೆಯಲ್ಲಿದೆ ಎಂದು ಬೇರೆಯವರನ್ನು ಎಚ್ಚರಿಸುವುದು ಒಂದು ದಾರಿಯಾದರೆ, ಅದಕ್ಕಿಂತ ಒಳ್ಳೆಯ ದಾರಿ ತಮ್ಮ ನಾಯನ್ನು ಅಗತ್ಯವಿದ್ದಾಗ ಮಾತ್ರ ಹೊರಬಿಡುವುದು, ತಮ್ಮನ್ನು ತಾವೆ ಎಚ್ಚರಿಸಿಕೊಳ್ಳುವುದು.

ಹೋಗದೂರಿಗೆ ದಾರಿ

ಹೃದಯ ಎಲ್ಲಿದೆ? ಎದೆಗೂಡಿನ ಬಲಗಡೆಯೋ ಎಡಗಡೆಯೋ? ಅದರ ಆಕಾರ ಏನು? ಅದರ ಕೆಲಸ ಏನು?

ಇಂಥ ಸಮಸ್ಯೆಗಳು ವಿಜ್ಞಾನಿಗಳಿಗೆ ಒದಗುವುದು ಸಹಜ. ಅವರಿಗೆ ಯಾವುದೇ ವಿಷಯವಾಗಲಿ ಖಚಿತವಾಗಿ ಮನವರಿಕೆಯಾಗಬೇಕು. ಇದಕ್ಕಾಗಿ ಅವರು ವಿಶೇಷವಾದ ಸಾಧನಗಳನ್ನು ಸಿದ್ಧಪಡಿಸುತ್ತಲೇ ಇರುತ್ತಾರೆ. ಇದು ಪಾಶ್ಚಾತ್ಯರು ಹಿಡಿದ ದಾರಿ. ಆದರೆ ನಮ್ಮಲ್ಲಿ (ಎಂದರೆ ಭಾರತ, ಚೀಣ, ಜಪಾನು, ತಿಬೆಟ್ಟು, ಕೊರಿಯ, ಮಂಗೋಲಿಯ ಈ ಕಡೆ) ಬೇರೂರಿರುವ ದೃಷ್ಟಿ ಇದಲ್ಲ, ವಿಷಯಗಳನ್ನು ಅರಿತುಕೊಳ್ಳಬೇಕೆಂಬ ಕುತೂಹಲವೇನೋ ಇದೆ; ವಿಷಯಕ್ಕೊಂದು ಚೌಕಟ್ಟು ಎಂಬುದನ್ನು ನಾವು ಮರೆಯಲಾರೆವು. ಚೌಕಟ್ಟನ್ನು ಮರೆತರೆ ವಿಷಯ ಸರಿಯಾಗಿ ತಿಳಿದುಬರಲಾರದು. ಮೇಲಾಗಿ, ನಮ್ಮ ಕುತೂಹಲವೂ ಅಡೆತಡೆಗಳಿಲ್ಲದ ಹುಚ್ಚು ಹೊಳೆಯಲ್ಲ. ತಿಳಿದುಕೊಳ್ಳಬೇಕೆಂಬ ಚಪಲಕ್ಕೊಂದು ಕಡಿವಾಣ ಇರಬೇಡವೆ? ತಿಳಿದುಕೊಂಡು ನಾವು ಮಾಡುವುದೇನು ಎಂಬ ಪರಿವೆ ಇರಬೇಡವೆ? 'ಹೋಗದೂರಿಗೆ ದಾರಿ ಕೇಳಿ ಮಾಡುವುದೇನು?' ಎಂದು ಪುರಂದರದಾಸರ ಪ್ರಶ್ನೆ. ಚೀಣೀ ವಿದ್ವಾಂಸ ನೊಬ್ಬನನ್ನು ಪಾಶ್ಚಾತ್ಯ ವಿಜ್ಞಾನಿಯೊಬ್ಬ ಕೇಳಿದನಂತೆ- "ನಿಮ್ಮ ಪ್ರಕಾರ, ಹೃದಯ ಎಲ್ಲಿದೆ? ಬಲಗಡೆಯೋ ಎಡಗಡೆಯೋ?" ಅದಕ್ಕೆ ಚೀಣೀಯನು ಕೊಟ್ಟ ಉತ್ತರ ಸ್ವಾರಸ್ಯವಾಗಿದೆ - "ಅದು ಎಲ್ಲಿದ್ದರೇನು? ನಮ್ಮ ಹೃದಯವನ್ನು ಸರಿಯಾದ ಕಡೆ ಇರಿಸಬೇಕಾದುದು ನಮ್ಮ ಕೆಲಸ!" ಇದು ಪಾಶ್ಚಾತ್ಯರ ಕೇವಲ ಕುತೂಹಲಕ್ಕೆ ಸಮರ್ಪಕವಾದ ಉತ್ತರವೆನಿಸಲಾರದು. ಆದರೆ ಅದು ಬದುಕಿನ ಅಗತ್ಯಕ್ಕೆ ಹೊಂದಿಕೊಳ್ಳುವ ಉತ್ತರವಲ್ಲವೆ? ಹೃದಯವೆಂದರೆ ಅದೊಂದು ಅಂಗ ಎಂದು ಬಗೆಯುವವರು ಅದರ ಆಕಾರ, ಅದಿರುವ ಜಾಗ ಮುಂತಾದ ವಿವರಗಳನ್ನು ತಿಳಿಯಬಯಸುವುದು ಸಹಜ. ನಮ್ಮವರು ಹಾಗೆ ಬಗೆಯಲಿಲ್ಲ. ಹೃದಯವೆಂದರೆ, ಅವರ ಪ್ರಕಾರ, ಬದುಕಿನ ಕೇಂದ್ರ. ಇಡೀ ಶರೀರ ಯಾವುದರಿಂದ ನಿಂತಿದೆಯೋ ಅದೇ ಹೃದಯ. ಹೃದಯದ ಬಗ್ಗೆ ನಮಗೇನು ಅಸಡ್ಡೆಯಿರದು. ಅದನ್ನು ಕುರಿತು ನಮ್ಮ ಆಸಕ್ತಿ ಕಡಮೆಯೇನಲ್ಲ. ಆದರೆ ನಮ್ಮ ಬದುಕು ನೇರವಾಗಲು, ಹಸನಾಗಲು, ಸುಖ ವಾಗಿರಲು ನೆರವಾಗುವಂತೆ ಹೃದಯವನ್ನು ಅರಿತುಕೊಂಡರೆ ಸಾಕು.

ಓದಿ ಓದಿ ಮರುಳಾಗುವ ಕೂಚುಭಟ್ಟರು ಊರ ತುಂಬ ಇದ್ದಾರೆ. ಓದಿದ್ದನ್ನು ಅರಗಿಸಿಕೊಂಡು ನೆಮ್ಮದಿಯಿಂದ ಬಾಳುವ ಜಾಣರು ಕಡಮೆ.

ನರಕಕ್ಕೆ ದಾರಿ

ಭಗವದ್ಗೀತೆಯಲ್ಲೊಂದು ನುಡಿ-

ನರಕಕ್ಕೆ ಮೂರು ದಾರಿಗಳಂತೆ- ಕಾಮ, ಕ್ರೋಧ, ಲೋಭ ಎಂಬುವೇ ಆ ಮೂರು.

ನರಕವೆಂದರೆ ಕೇಡು, ದುಃಖ. ಅದೊಂದು ಬೇರೆ ಲೋಕವಲ್ಲ. ಇಲ್ಲೇ ಒದಗುವ ಒಂದು ಅವಸ್ಥೆ. ಮನುಷ್ಯನಿಗೆ ಇಂಥ ದುರವಸ್ಥೆ ಬರುವುದುಂಟು. ಬಂದಾಗ ಕಳವಳ, ದುಗುಡ. ಬಂದದ್ದು ಹೇಗೆ? ಬಾರದಿರುವಂತೆ ಮಾಡಲು ಆಗುತ್ತಿರಲಿಲ್ಲವೆ? ಎಂಬ ಆಲೋಚನೆ ಮಾತ್ರ ಬರುವುದಿಲ್ಲ.

ಕಾರಣವಿಲ್ಲದೆ ಯಾವ ಕಾರ್ಯವೂ ಆಗುವುದಿಲ್ಲ. ಆದದ್ದಕ್ಕೆಲ್ಲ ಒಂದು ಹಿನ್ನೆಲೆ ಇರಲೇಬೇಕು, ಒತ್ತಡವಿರಬೇಕು. ಇದ್ದಕ್ಕಿದ್ದಂತೆ ಏನೂ ಆಗುವುದಿಲ್ಲ. ಗೀತೆಯ ವಿಶ್ಲೇಷಣೆ ಅನುಭವದಿಂದ ಒಡಮೂಡಿದ್ದು, ಎಲ್ಲ ಮಾನವರಿಗೂ ಎಲ್ಲ ಕಾಲದಲ್ಲೂ ಒಪ್ಪಾಗುವ ವಿವರವದು. ಮೂಲಭೂತವಾದ ವಿವರಣೆಯೂ ಹೌದು.

ಮೂರು ಕಾರಣಗಳು ದುಃಖಕ್ಕೆ ಎಂದು ವಿಶ್ಲೇಷಣೆ.

ಮೊದಲನೆಯದು ಕಾಮ— ಹಸಿದಾಗ ಊಟ ಮಾಡಬೇಕೆನಿಸುತ್ತದೆ. ಬಳಲಿದಾಗ ವಿಶ್ರಾಂತಿ ಬೇಕೆನಿಸುತ್ತದೆ. ಅದು ಕಾಮವಲ್ಲ; ಬದುಕಿಗೆ ಅಗತ್ಯವಾದ ಬಯಕೆಗಳು ಅವೆಲ್ಲ. ಆದರೆ ಹಸಿವನ್ನು ಇಂಗಿಸಲು ಎಷ್ಟು ಬೇಕೋ ಅಷ್ಟಕ್ಕಿಂತ ಹೆಚ್ಚು ವೈಭವದ ಊಟ ಬಯಸಿದರೆ, ಅದು ಕಾಮ. ಅದು ಹೊಟ್ಟೆಯಲ್ಲಿ ಹುಟ್ಟುವ ಬಯಕೆಯಲ್ಲ; ಮನಸ್ಸಿನಲ್ಲಿ ಮೂಡಿಕೊಳ್ಳುವ ದುರಾಸೆ. ಅದರಿಂದ ತೊಂದರೆ ಕಟ್ಟಿಟ್ಟದ್ದೆ.

ಎರಡನೆಯದು ಕ್ರೋಧ— ಸಿಟ್ಟು; ಇದೂ ಸಾಮಾನ್ಯವಾಗಿ ತಡೆದುಕೊಳ್ಳಲಾರದ ಅತಿರೇಕದ ಸಿಟ್ಟೇ. ದಡ್ಡನ ಸಿಟ್ಟು ಮಾತ್ರ ದವಡೆಗೆ ಮೂಲವಲ್ಲ; ಎಲ್ಲರ ಸಿಟ್ಟೂ ಅದಕ್ಕೇ ಮೂಲ.

ಮೂರನೆಯದು ಲೋಭ— ಎಲ್ಲ ಅನುಕೂಲಗಳೂ ತನಗೊಬ್ಬನಿಗೆ ಮಾತ್ರ ಇರಬೇಕು, ತನ್ನ ಸಂಪತ್ತು ಬೇರೆ ಯಾರಿಗೂ ಯಾವ ವಿಧದಲ್ಲಿಯೂ ನೆರವಾಗಬಾರದು ಎಂಬುದು ಲೋಭ. ದುರಾಸೆಯದೇ ಇನ್ನೊಂದು ಮುಖ.

ಕಾಮದಲ್ಲಿ ಪಡೆದುಕೊಳ್ಳುವಾಸೆ; ಲೋಭದಲ್ಲಿ ಉಳಿಸಿಕೊಳ್ಳುವಾಸೆ. ಅಗತ್ಯವನ್ನು ಮೀರಿ, ವಿವೇಕವನ್ನು ದಾಟಿ ಹಬ್ಬಿಕೊಳ್ಳುವ ಬಯಕೆ.

ಇವು ಮೂರೂ ಕೆಡುಕಿಗೆ ತೆರೆದ ಬಾಗಿಲುಗಳು. ಇವನ್ನು ಹಿಡಿತದಲ್ಲಿರಿಸಿ ಕೊಳ್ಳಲಾರದವನು ಇವಕ್ಕೆ ವಶವಾಗುತ್ತಾನೆ; ಇವುಗಳ ಅಂಕೆಯಲ್ಲಿರುತ್ತಾನೆ. ಇವು ಇವನನ್ನು ಹಳ್ಳಕ್ಕೆ ತಳ್ಳುತ್ತವೆ.

ಸ್ವಘಾತ

ಮರಣದಲ್ಲಿ ಸ್ವಘಾತ, ಪರಘಾತ ಎಂದೆರಡು ಬಗೆ. ಸ್ವಘಾತವೆಂದರೆ ತನ್ನನ್ನು ತಾನೇ ಕೊಂದುಕೊಳ್ಳುವುದು; ಬೇರೆಯವರು ತನ್ನನ್ನು ಕೊಂದರೆ ಅದು ಪರಘಾತ.

ಪರಘಾತವೆಂಬುದೇನೋ ಸರಿಯೆ; ಆದರೆ ಸ್ವಘಾತವೂ ಇದೆಯೆ?

ಯುದ್ಧದಲ್ಲಿ ಸಾಯುವವರು, ಶತ್ರುಗಳಿಂದ ಕೊಲೆಗೀಡಾಗುವವರು, ವಾಹನ ಅಪಘಾತದಲ್ಲಿ ಮಡಿಯುವವರು, ಕಾಡುಪ್ರಾಣಿಗಳ ದಾಳಿಗೆ ಸಿಗುವವರು, ಅರಿಯದೆ ವಿಷವನ್ನು ಉಂಡು ತೀರಿಕೊಳ್ಳುವವರು, ಇವರೆಲ್ಲ ಪರಘಾತದ ನಿದರ್ಶನಗಳೇ.

ಇಂಥದನ್ನು ಕಾಣುತ್ತೇವೆ, ಕೇಳುತ್ತೇವೆ. ಆದರೆ ತಮ್ಮನ್ನೇ ತಾವು ಕೊಂದು ಕೊಳ್ಳುವುದೂ ಉಂಟೆ? ತಡೆಯಲಾರದ ದುಃಖದಲ್ಲಿ, ತೀರಿಸಲಾಗದ ಋಣದಲ್ಲಿ, ಗುಣವಾಗದ ರೋಗದಲ್ಲಿ, ಮೇರೆ ಮೀರಿದ ಅಪಮಾನದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರೇನೋ ಇರುತ್ತಾರೆ. ಆದರೆ ಇಂಥವರ ಸಂಖ್ಯೆ ಕಡಮೆ. ಇದನ್ನೇ ಪರಘಾತದಿಂದ ಬೇರ್ಪಡಿಸಿತೋರಿಸಬಹುದೆ?

ಸ್ವಘಾತ-ಪರಘಾತವೆಂದು ವಿಭಾಗ ಮಾಡುವಾಗ ಆತ್ಮಹತ್ಯೆ ಸ್ವಘಾತವೆನಿಸಿಕೊಳ್ಳುವುದಿಲ್ಲ. ಅಲ್ಲಿ ಸಾವಿಗೆ ಹೊರಗಣ ಕಾರಣವೇ ಇರುತ್ತದೆ; ಬೇರೆಯದರ ಒತ್ತಡವೂ ಇರುತ್ತದೆ. ಒಂದು ರೀತಿಯಲ್ಲಿ ಅದು ಪರಘಾತವೇ.

ಸ್ವಘಾತವೆಂದರೆ ತನ್ನ ಹಿತವನ್ನೇ ತಾನೇ ಕಳೆದುಕೊಳ್ಳುವುದು.

ಆಹಾರ-ವಿಹಾರಗಳಲ್ಲಿ ಎಚ್ಚರ ತಪ್ಪಿ, ಮಿತಿಮೀರಿ ನಮ್ಮ ಆರೋಗ್ಯವನ್ನು ಕೆಡಿಸಿಕೊಂಡರೆ, ದುಡಿಯದೆ ಉಂಡಾಡಿಯಾಗಿ ಕೂತರೆ, ಹಿಡಿತವಿಲ್ಲದೆ ಭೋಗ ಮಾಡಿದರೆ, ಇವೆಲ್ಲ ಸ್ವಘಾತವಾಗುತ್ತವೆ.

ನಮ್ಮೊಳಗೇ ಸಂರಕ್ಷಣೆಯ ಉಪಾಯಗಳಿವೆ; ಅಪಾಯದ ಸೂಚನೆಗಳೂ ಇವೆ. ಇವನ್ನು ಅರಿತುಕೊಳ್ಳದೆ ಬಯಕೆಗಳನ್ನು ತೀರಿಸಿಕೊಳ್ಳಲೆಂದೇ ಎಡೆಬಿಡದೆ ಹೊರಟರೆ ಅದು ಸ್ವಘಾತ. ನಮ್ಮನ್ನು ಸದಾ ಸೆಣಸುವ ಶತ್ರುಗಳು ಹೊರಗಲ್ಲ; ಒಳಗೇ ಇರುತ್ತವೆ. ನಾವು ಅದನ್ನು ತಿಳಿದುಕೊಳ್ಳುವುದಿಲ್ಲ ಅಷ್ಟೆ. ಸಲ್ಲದ ಬಯಕೆಗಳು, ಉಚಿತವಲ್ಲದ ಸಿಟ್ಟು, ದುರಾಸೆ, ಹೊಟ್ಟೆ ಕಿಚ್ಚು ಇವೆಲ್ಲ ದಿಟವಾಗಿ ಶತ್ರುಗಳೇ.

ನಮ್ಮನ್ನು ಕೊಲ್ಲಲು ಹವಣಿಸುತ್ತಿರುವ ಇವನ್ನೇ ನಂಬಿಕೊಂಡು, ಇವುಗಳ ಬಲವನ್ನು ಹೆಚ್ಚಿಸುತ್ತಲೇ ಇರುತ್ತೇವೆ.

ಎಂದರೆ ನಮ್ಮ ಕೈಯಾರೆ ನಮ್ಮನ್ನೇ ನಾವು ಕೊಂದುಕೊಂಡಂತೆ ಅಲ್ಲವೆ?

ಇದೀಗ ಸ್ವಘಾತವೆನಿಸಿಕೊಳ್ಳುತ್ತದೆ.

ಶರೀರದಲ್ಲಿ ಬೆಂಕಿ

ಸಂಸ್ಕೃತದಲ್ಲಿ ಶರೀರ ಎಂಬ ಮಾತಿದೆಯಲ್ಲವೆ? ದೇಹ, ಮೈ ಎಂದದರ ಅರ್ಥ. ಆದರೆ ಮಾತಿನ ಮೂಲಾರ್ಥವೇನು? ಧಾತುವನ್ನು ಹಿಡಿದರೆ ನಾಲ್ಕಾರು ಅರ್ಥಗಳಿವೆ. ಅವುಗಳಲ್ಲೊಂದು ಸ್ವಾರಸ್ಯವಾದುದು.

'ಶ್ರಿಯಂತೆ ಇತಿ' ಎಂಬುದು ಅದು. ಯಾವುದನ್ನು ಆಸರೆಯಾಗಿ ಪಡೆದು ಕೊಂಡಿವೆಯೊ ಅದು ಎಂಬರ್ಥ ಹೊರಡುತ್ತದೆ. ಆಸರೆಯಾಗಿರುವುದು ಶರೀರ. ಆದರೆ ಯಾವುದಕ್ಕೆ ಆಸರೆ? ಮೂರು ಬೆಂಕಿಗಳಿಗೆ ಎಂದು ಒಂದು ಉಪನಿಷತ್ತಿನ ಒಕ್ಕಣೆ. ಕೋಷ್ಠಾಗ್ನಿ, ದರ್ಶನಾಗ್ನಿ, ಜ್ಞಾನಾಗ್ನಿ ಎಂಬುವು ಅವು.

ಕೋಷ್ಠಾಗ್ನಿ ಹೊಟ್ಟೆಯಲ್ಲಿರುವ ಕಿಚ್ಚು. ಉಂಡದ್ದನ್ನೆಲ್ಲ ಅರಗಿಸಿಕೊಳ್ಳುವ ಜಾಠರಾಗ್ನಿ. ಅದರಿಂದಲೇ ನಮ್ಮ ಮೈಯ ಕಾವು. ಇಂದ್ರಿಯಗಳಿಂದ ಹೊರಗಣ ವಿವರಗಳನ್ನು ಅರಿತುಕೊಳ್ಳುವುದು ದರ್ಶನಾಗ್ನಿಯೆನಿಸಿಕೊಳ್ಳುತ್ತದೆ. ಒಂದೊಂದು ಇಂದ್ರಿಯದಲ್ಲೂ ಬೆಂಕಿಯ ಅಂಶವಿದೆ. ಬೆಳಗುವುದು, ಪಾಕಮಾಡುವುದು ಬೆಂಕಿ. ಮೂರನೆಯ ಬೆಂಕಿ ಒಡಲೊಳಗೆ ಹುದುಗಿರುವ ವಿವೇಕ. ಇದು ಸರಿ, ಇದು ತಪ್ಪು; ಇದರಿಂದ ಒಳಿತು, ಇದರಿಂದ ಕೆಡುಕು ಎಂದು ಮುಂತಾಗಿ ತಿಳಿಯುವ ಸಾಧನ ಇದು. ಜ್ಞಾನಾಗ್ನಿಯು ಉಳಿದೆರಡು ಅಗ್ನಿಗಳಂತೆ ಸಹಜವಾಗಿ ಮೂಡಿಕೊಳ್ಳಲಾರದು. ಬುದ್ಧಿಯಿಂದ, ಅಭ್ಯಾಸದಿಂದ, ಸಂಸ್ಕಾರದಿಂದ, ಅನುಭವದಿಂದ ಇದು ಸಿದ್ಧವಾಗುತ್ತದೆ. ಕೋಷ್ಠಾಗ್ನಿಯನ್ನು ಕಾಪಾಡಿಕೊಳ್ಳಲು ಆಹಾರವನ್ನು ಅದರಲ್ಲಿ ಸುರಿಯಬೇಕು; ಅದರಿಂದ ಕಾವು, ಬೆಳಕು. ಇದನ್ನು ಉಪನಿಷತ್ತು ಗಾರ್ಹಪತ್ಯಾಗ್ನಿಯೆನ್ನುತ್ತದೆ. ಇಂದ್ರಿಯಗಳ ಬಳಕೆ, ಲೋಕಾನುಭವದ ಗಳಿಕೆ ಇದು ದರ್ಶನಾಗ್ನಿಯ ಕೆಲಸ; ಅದು ಆಹವನೀಯಾಗ್ನಿಯಂತೆ.

ಜ್ಞಾನಾಗ್ನಿಯನ್ನು ತಣಿಸಲು ಅಧ್ಯಯನ, ಆಚಾರ, ತಪಸ್ಸು, ಲೋಕಸಂಗ್ರಹ ಇವೆಲ್ಲ ನೆರವಾಗುತ್ತವೆ. ಇದು ದಕ್ಷಿಣಾಗ್ನಿಯ ಸ್ಥಾನದಲ್ಲಿದೆ. ಇವು ಮೂರೂ ಅಗ್ನಿಗಳಿಗೆ ಆಸರೆಯಾದರೇ ಅದು ಶರೀರ.

ಮಧ್ಯಮಾರ್ಗ

ಮರುಳೆಂದು ಗುರುತಿಸಲು ಆರು ಸೂಚನೆಗಳಂತೆ (ಷಡ್ವಿಧಂ ಮೂರ್ಖ ಲಕ್ಷಣಂ)-

ಅತಿಶೌಚ, ಅಶೌಚಗಳು ಮೊದಲ ಎರಡು. ದೇಹದ ಇರವು, ಉಡುಗೆಯ ಓರಣ, ಊಟದಲ್ಲಿ ಎಚ್ಚರಿಕೆ, ಇಂದ್ರಿಯಗಳ ಸಮಾಧಾನ ಇವೆಲ್ಲ ಶೌಚಕ್ಕೆ ಸಂಬಂಧಪಟ್ಟವು. ಇವುಗಳ ಬಗ್ಗೆ ಅತಿಯಾದ ಕಳವಳ ತೋರಿಸಿ, ಕಠಿನವಾದ ಕಟ್ಟುಪಾಡುಗಳಲ್ಲಿ ತೊಡಗಿಸಿಕೊಳ್ಳುವುದು ಅತಿಶೌಚ. ಅದೊಂದರ ವಿಚಾರವನ್ನೂ ಎಳ್ಳಷ್ಟೂ ತಲೆಗೆ ಹಚ್ಚಿಕೊಳ್ಳದೆ ಹೇಗಾದರೂ ಇದ್ದರಾಯಿತು, ಏನನ್ನಾದರೂ ತಿಂದರಾಯಿತು, ಎಂದರೆ ಅದು ಅಶೌಚ. ಅತಿನಿಂದೆ, ಅತಿಸ್ತುತಿ ಇವೆರಡು ಮುಂದಿನವು. ತಾನು ಮೆಚ್ಚಿಕೊಂಡುದನ್ನು ಬ್ರಹ್ಮಾಂಡವಾಗಿ ಬಣ್ಣಿಸುವುದು. ತನಗೆ ಹಿಡಿಸಿದವರನ್ನು ಮಿತಿಮೀರಿ ಹಾಡಿ ಹೊಗಳುವುದು ಅತಿಸ್ತುತಿ. ಹಾಗೆಯೇ ತನಗೆ ಇಷ್ಟವಾಗದುದನ್ನು ಮನಸ್ಸಿಗೆ ಬಂದಂತೆ ತೆಗಳುವುದು ಅತಿನಿಂದೆ. ಅತ್ಯಾಚಾರ, ಅನಾಚಾರ ಇವೆರಡು ಕಡೆಯವು. ಆಚಾರವೆಂದರೆ ನಮ್ಮ ವೈಯಕ್ತಿಕ, ಸಾಮಾಜಿಕ ನಡವಳಿಕೆ. ನಮ್ಮ ಮತ್ತು ನಮ್ಮ ಸುತ್ತಲವರ ಹಿತವನ್ನು ಗಮನಿಸಿ, ಈಗಿನ ಮತ್ತು ಮುಂದಣ ಸುಖವನ್ನು ಬಯಸಿ ಇರುವ ಬಗೆ. ಮಾಡುವ ಕೆಲಸ ಆಚಾರವೆನಿಸಿ ಕೊಳ್ಳುತ್ತದೆ. ಇದರಲ್ಲಿ ಕುಲಾಚಾರ, ದೇಶಾಚಾರ ಮೊದಲಾದುವೆಲ್ಲ ಸೇರುತ್ತವೆ. ಆಚಾರವೇ ಗುರಿಯಲ್ಲ; ಗುರಿಯನ್ನು ಮುಟ್ಟುವ ದಾರಿ ಅದು ಅಷ್ಟೆ.

ಇದನ್ನರಿಯದೆ, ಆಚಾರವನ್ನೇ ಮೇಲೇರಿಸಿಕೊಂಡು ತನಗೆ ಎಷ್ಟೇ ಕಷ್ಟವಾಗಲಿ, ಇತರರಿಗೆ ಎಷ್ಟೇ ತೊಂದರೆಯಾಗಲಿ ಆಚಾರವನ್ನು ಎಷ್ಟು ಮಾತ್ರಕ್ಕೂ ಬಿಡದಿರುವುದು, ಅದರಲ್ಲಿ ಏನೊಂದು ಊನವೂ ಬರದಂತೆ ಹಟ ಹಿಡಿಯುವುದು ಅತ್ಯಾಚಾರ. ಆಚಾರದ ಗಂಧ ಗಾಳಿಯೂ ಇರದೆ, ಬೇಕಾದಂತೆ ಬದುಕುವುದು, ತನ್ನ ಅಥವಾ ತನ್ನನ್ನು ನಂಬಿದವರ ಹಿತದ ಗಣನೆಯೆ ಇರದಂತೆ, ಸ್ವೇಚ್ಛೆಯಿಂದ ಬಾಳುವುದು ಅನಾಚಾರ. ಇದರಲ್ಲಿ ಯಾವ ತಡೆಯೂ ಇರದು, ಯಾರ ಆತಂಕವೂ ಇರದು. ಸಾಮಾನ್ಯ ಜನರಲ್ಲಿ ಶೌಚವನ್ನು ಕಾಣುತ್ತೇವೆ. ಆಚಾರವನ್ನು ಕಾಣುತ್ತೇವೆ. ಹೊಗಳಿಕೆ-ತೆಗಳಿಕೆಗಳನ್ನು ಕಾಣುತ್ತೇವೆ. ಆದರೆ ಇವು ಒಂದು ಮಿತಿಯೊಳಗೆ ಇರುತ್ತವೆ.

ಶೌಚವನ್ನು ಕೈಬಿಡುವುದೂ ಇಲ್ಲ, ತಲೆಯ ಮೇಲೇರಿಸಿಕೊಳ್ಳುವುದೂ ಇಲ್ಲ.

ಆಚಾರವೂ ಹಾಗೆಯೇ ಎಷ್ಟು ಅಗತ್ಯವೋ ಎಷ್ಟು ಹಿತವೋ ಅಷ್ಟೆ. ಯಾವುದಕ್ಕೂ ಒಂದು ಮಿತಿಯಿರಬೇಕು. ಇದೇ ಮಧ್ಯಮಾರ್ಗದ ಸೊಗಸು.

ಅಪ್ರಯೋಜಕರು

ಸಂಸ್ಕೃತದ ಈ ಮಾತನ್ನು ಎಲ್ಲರೂ ಬಲ್ಲರು-'ಉಪಾಧ್ಯಾಯಾಶ್ಚ ವೈದ್ಯಾಶ್ಚ ಕಾರ್ಯಾಂತೇ ಅಪ್ರಯೋಜಕಾಃ'

ಇದರ ಸಾಮಾನ್ಯವಾದ ಗ್ರಹಿಕೆಯೆಂದರೆ- ಪಾಠ ಕಲಿತ ಮೇಲೆ ಉಪಾಧ್ಯಾಯನಾಗಲಿ, ಚಿಕಿತ್ಸೆ ಪಡೆದುಕೊಂಡ ಮೇಲೆ ವೈದ್ಯನಾಗಲಿ, ಏತಕ್ಕೂ ಬೇಡದವನು. ಇದು ಹಲವರ ಅನುಭವದಲ್ಲೂ ಇದೆಯೆನ್ನಿ. ಕೆಲಸ ಮುಗಿದ ಮೇಲೆ ಕೆಲಸ ಮಾಡಿಕೊಟ್ಟವರ ಹಂಗೇನು? ಮತ್ತೆ ಅವರ ಅಗತ್ಯವಾದರೂ ಇದ್ದೀತೆ? ಹೊಳೆ ದಾಟಿದ ಮೇಲೆ ಅಂಬಿಗನೇತಕ್ಕೆ? ಅವನ ದೋಣಿಯೇತಕ್ಕೆ?

'ಅಪ್ರಯೋಜಕ' ರೆಂದರೆ ಮುಂದೆ ಅವರ ಕೆಲಸವೇನು ಇರದು ಎನ್ನುವ ಅರ್ಥದಲ್ಲಿ ಮೇಲಿನ ಒಕ್ಕಣೆ. ಆದರೆ ದಿಟವಾದ ಅರ್ಥ ಹೀಗೆ-ಉಪಾಧ್ಯಾಯನಾದವನು ಶಿಷ್ಯನಿಗೆ ಪಾಠ ಕಲಿಸಿದ ಮೇಲೆ ಅವನಿಗೆ ಇನ್ನು ತನ್ನ ಅಗತ್ಯವಿರದಂತೆ ನೋಡಿಕೊಳ್ಳಬೇಕು. ಶಿಷ್ಯನು ಗುರುವಿನಿಂದ ಸ್ವತಂತ್ರನಾಗಬೇಕು; ತನ್ನ ಕಾಲ ಮೇಲೆ ತಾನು ನಿಲ್ಲಬೇಕು. ಪಾಠ ಕಲಿತದ್ದರ ಪ್ರಯೋಜನ ಅದು. ವೈದ್ಯನು ಚಿಕಿತ್ಸೆ ಮಾಡಿದ ಮೇಲೂ ರೋಗಿ ವೈದ್ಯನನ್ನೇ ಅಥವಾ ಅವನ ಮದ್ದನ್ನೇ ಅವಲಂಬಿಸಿರುವುದಾದರೆ ಅದೆಂಥ ವೈದ್ಯ ಅವನು? ಯಾವ ಬಗೆಯ ಚಿಕಿತ್ಸೆ ಅದು? ಪಾಠ ಕಲಿಯಬೇಕಾದಾಗ ಉಪಾಧ್ಯಾಯನ ಪ್ರಯೋಜನ: ರೋಗವಿರುವಾಗ ವೈದ್ಯನ ಅಗತ್ಯ. ಪಾಠ ಕಲಿತ ಮೇಲೂ ಉಪಾಧ್ಯಾಯನಿಗೆ ಜೋತುಬೀಳಬೇಕೆ? ರೋಗ ತೊಲಗಿದ ಮೇಲೂ ವೈದ್ಯನ ಆಶ್ರಯ ಇರಬೇಕೆ? ವೈದ್ಯನ ಅಗತ್ಯವನ್ನು ದೂರ ಮಾಡುವುದೆ ವೈದ್ಯನ ಹೊಣೆ; ಶಿಷ್ಯನಿಗೆ ಯಾವ ಸಂಶಯವೂ ಇರದಂತೆ ಪಾಠವನ್ನು ಮನದಟ್ಟು ಮಾಡಿಕೊಡುವುದೆ ಉಪಾಧ್ಯಾಯನ ಕೆಲಸ. ಇಬ್ಬರೂ ಅಪ್ರಯೋಜಕರಾಗಲು ಶ್ರಮಿಸಬೇಕು. ತಂದೆ-ತಾಯಿಯರೂ ಅಷ್ಟೆ. ಮಕ್ಕಳನ್ನು ಬೆಳೆಸುವಾಗ ತಮ್ಮ ಅಗತ್ಯ ಅವರಿಗೆ ಬರುಬರುತ್ತ ಕಡಮೆಯಾಗುವಂತೆ ಬೆಳೆಸಬೇಕು. ಬೆಳೆದವರೆಂದರೆ ಸ್ವತಂತ್ರರು. ತಮ್ಮ ಪಾಡನ್ನು ತಾವು ನೋಡಿಕೊಳ್ಳಬಲ್ಲವರು; ಬೇರೆಯವರ ಆಶ್ರಯ ಬೇಕಾಗದವರು. ಮಕ್ಕಳು ಬಾಳಿನುದ್ದಕ್ಕೂ ತಂದೆತಾಯಿಯವರನ್ನೇ ಅವಲಂಬಿಸುವುದು ಸಾಧ್ಯವೆ? ಸಾಧುವೆ?

'ಅಪ್ರಯೋಜಕ'ರೆಂದರೆ ಕಡೆಗಣ್ಣಿಂದ ಕಾಣಬೇಕೆಂದೇನು ಅರ್ಥವಲ್ಲ; ಹೀನಾಯದ ಮಾತೇನಲ್ಲ ಅದು. ಇನ್ನು ಅವರಿಂದ ಪ್ರಯೋಜನವನ್ನು ಅಪೇಕ್ಷಿಸಬಾರದು ಎಂದಷ್ಟೆ ಅರ್ಥ. ಗೌರವದ ಪ್ರಶ್ನೆ ಇಲ್ಲಿ ಏಳುವುದಿಲ್ಲ.

ಹೆಸರಿನಲ್ಲೇನಿದೆ?

'ನಿನ್ನ ಹೆಸರೇನು', 'ಅವಳ ಹೆಸರೇನಂತೆ?'

ಎಂದು ಮುಂತಾಗಿ ಕೇಳುವುದುಂಟಲ್ಲವೆ? ಮನುಷ್ಯನಾದವನಿಗೆ ಹೆಸರೊಂದು ಇರಲೇಬೇಕು ಎಂಬ ನಂಬಿಕೆ ಇದಕ್ಕೆ ಮೂಲ.

ಯಾರೊಬ್ಬನಿಗಾಗಲಿ ಕೈಯಿರುವಂತೆ, ಕಾಲಿರುವಂತೆ ಹೆಸರೂ ಇರಲೇಬೇಕು. ಹೆಸರಿರದ ಮನುಷ್ಯ ಹೇಗಿರಬಲ್ಲ?

ಆದರೆ ಹುಟ್ಟುತ್ತಲೆ ಹೆಸರೇನು ಕೂಡಿಕೊಂಡು ಬರುವುದಿಲ್ಲ. ಅನಂತರ ಯಾರೊ ಹಿರಿಯರು ಹೆಸರನ್ನು ಇಡುತ್ತಾರೆ, ಕೊಡುತ್ತಾರೆ.

ಹುಟ್ಟಿದವನ ಪ್ರಯೋಜನಕ್ಕಲ್ಲ; ಸುತ್ತಮುತ್ತ ಇರುವವರ ಅನುಕೂಲಕ್ಕೆಂದು.

ಈ ಪ್ರಾಣಿಗೊಂದು ಇಂಥ ಹೆಸರು ಎಂದಾದರೆ ಅದರಿಂದ ಅವನನ್ನು ಕರೆಯುವುದು, ಕಳುಹಿಸುವುದು, ಕೆಲಸಕ್ಕೆ ಒಪ್ಪಿಸುವುದು, ಬಯ್ಯುವುದು, ಹೊಗಳುವುದು ಎಲ್ಲ ಸುಲಭವಾಗುತ್ತದೆ. ಅವನಿಗೂ ತನ್ನ ಹೆಸರಿಂಥದು ಎಂಬ ಅರಿವಾದರೆ ತನ್ನತನವೂ ಮೈದುಂಬಿ ಬಂದೀತು. ವ್ಯಕ್ತಿಗೊಂದು ಹೆಸರು ಎಂಬುದು ಜಗತ್ತಿನಲ್ಲೆಲ್ಲೂ ಇರುವುದೇ, ಹೆಸರಿಲ್ಲದ ಮನುಷ್ಯ ದುರ್ಲಭನೆ. ಮನುಷ್ಯನಿಗೇ ಏನು, ಎಲ್ಲ ವಸ್ತುಗಳಿಗೂ ಹೆಸರುಕೊಟ್ಟು ನಿರ್ದೇಶಿಸುವ ವಾಡಿಕೆಯುಂಟಷ್ಟೆ? ಮನುಷ್ಯನು ಭೂಮಿಯ ಮೇಲೆ ವಾಸಮಾಡತೊಡಗಿದ ತರುಣದಲ್ಲಿ ಹೊರಗಣ ವಸ್ತುಗಳನ್ನು, ಪರಿಸರವನ್ನು ವಿವರವಾಗಿ ಗುರುತಿಸಿಕೊಳ್ಳುವುದು ಅಗತ್ಯವಾಯಿತು. ಒಂದು ವಸ್ತುವನ್ನು ಇನ್ನೊಂದರಿಂದ ಬೇರ್ಪಡಿಸಿ ತಿಳಿದುಕೊಳ್ಳುವ ಸಂದರ್ಭದಲ್ಲಿ ಅವಕ್ಕೆ ಬೇರೆ ಬೇರೆ ಶಬ್ದಗಳನ್ನು ಬಳಸಿ, ಅವುಗಳನ್ನು ನಿರ್ದೇಶಿಸಿಕೊಂಡ; ನೆನಪಿನಲ್ಲಿ ಉಳಿಸಿಕೊಂಡ. ವಸ್ತುವಿಗೊಂದು ಹೆಸರು; ಅದರಿಂದ ಬೇರ್ಪಟ್ಟ ವಸ್ತುವಿಗೆ ಇನ್ನೊಂದು ಹೆಸರು; ಮತ್ತೊಂದಕ್ಕೆ ಮತ್ತೊಂದು. ಹೀಗೆ ಕೊನೆಮೊದಲಿಲ್ಲದೆ ಹೆಸರುಗಳು ಬೆಳೆದುಬಂದುವು. ಹೆಸರುಗಳಲ್ಲಿ ಹಲವು ರೂಢಿಯಿಂದ ಬಂದುವು. ಕೆಲವು ವಸ್ತುಗಳ ಗುಣ-ಧರ್ಮಗಳನ್ನು ಗಮನಿಸಿ ಸಿದ್ಧವಾದುವು.

ಮನುಷ್ಯರ ಹೆಸರುಗಳಿಗೆ ಅರ್ಥವಿರಲೆಬೇಕೆಂಬ ನಿಯಮವೇನಿಲ್ಲ; ಒಬ್ಬನನ್ನು ಇತರರಿಂದ ಬೇರ್ಪಡಿಸುವುದಾದರೆ ಸಾಕು.

ಅರ್ಥವಿದ್ದರೂ ಹೆಸರು ಅನ್ವರ್ಥವೆಂದೇನಲ್ಲವಷ್ಟೆ?

ಹಾಸ್ಯಶಿಲ್ಪಿ

ಹಾಸ್ಯರಸವನ್ನುಂಟು ಮಾಡುವ ಸಾಹಿತಿಗೆ ಈ ಹೆಸರು. ನವರಸಗಳಲ್ಲಿ ಹಾಸ್ಯರಸವೂ ಒಂದು. ಸಾಹಿತ್ಯದಲ್ಲಿಯೂ ದಿನನಿತ್ಯದ ಬದುಕಿನಲ್ಲಿಯೂ ಇದಕ್ಕೊಂದು ಸ್ಥಾನವಿದೆ. ತಾನೂ ನಕ್ಕು ಇತರರನ್ನು ನಗಿಸುವುದು ದೊಡ್ಡ ಕಲೆಯೇ, ಆದರೆ ಅಣಕು, ವ್ಯಂಗ್ಯ, ಕುಚೋದ್ಯ, ಲೇವಡಿ ಇವೆಲ್ಲ ಹಾಸ್ಯದ ಹೆಸರಿನಲ್ಲೇ ಹೊರಬರುತ್ತವೆ.

ಬೇರೆಯವರ ಮೋರೆ ಸೊಟ್ಟಗಿರುವುದನ್ನೋ, ಕುಂಟ ಕಾಲುಜಾರಿ ಬೀಳುವುದನ್ನೋ, ತಿಂಡಿಪೋತನ ತಾಪತ್ರಯವನ್ನೋ ಎತ್ತಿ ತೋರಿಸಿದರೆ ಅದು ಹಾಸ್ಯವೆಂದು ಹಲವರ ಎಣಿಕೆ. ಇತರರಲ್ಲಿರುವ ತಪ್ಪುಗಳನ್ನು ತೋರಿಸುವುದೇನೋ ಹಾಸ್ಯದ ಕೆಲಸವೇ. ಆದರೆ ಅದರಲ್ಲಿ ಕೊಂಕು, ಮೊನಚು, ಬಿರುಸು ಇದ್ದರೆ ಹಾಸ್ಯ ರಸದಲ್ಲಿ ಕೊರತೆಯಾದೀತು. ಇದನ್ನು ನಯವಾದ ಹಾಸ್ಯ ಎನ್ನಲಾರೆವು.

ಸಾಮಾನ್ಯವಾಗಿ ನಾವು ತಪ್ಪನ್ನು ನಿರೀಕ್ಷಿಸದ ಕಡೆಯೂ ಆಕಸ್ಮಿಕವಾಗಿ ತಪ್ಪು ಕಂಡರೆ, ಅದರ ಸ್ವಾರಸ್ಯವನ್ನು ಗಮನಿಸುವಂತೆ ಮಾಡುವುದು ಹಾಸ್ಯ.

ಬೇರೆಯವರಲ್ಲಿ ಕಾಣಬಹುದಾದ ತಪ್ಪನ್ನೋ ಲೋಪದೋಷಗಳನ್ನೋ, ಅತಿರೇಕವನ್ನೋ, ವಿಸಂಗತಿಯನ್ನೋ ತನ್ನಲ್ಲೂ ಕಂಡುಕೊಂಡು ನಗುವ ಶಕ್ತಿ ಇದ್ದರೆ ಅವನೀಗ ದಿಟವಾದ ಹಾಸ್ಯಶಿಲ್ಪಿ.

ಹಾಸ್ಯದಲ್ಲಿ ದ್ವೇಷ, ಅವಹೇಳನ, ಮೂದಲಿಕೆ, ಬೈಗಳು ಮೊದಲಾದುವು ಇದ್ದರೆ ಹಾಸ್ಯ ತಿಳಿಯಾದುದೂ ಅಲ್ಲ, ಸಭ್ಯವಾದುದೂ ಅಲ್ಲ. ಶಿಲ್ಪಕ್ಕೆ ಮೂಲಸಾಮಗ್ರಿ ಕಲ್ಲೋ, ಮರವೋ, ಇಟ್ಟಿಗೆಯೋ ಇದ್ದಂತೆ ಹಾಸ್ಯಕ್ಕೂ ಮೂಲಸಾಮಗ್ರಿ ಲೋಪದೋಷಗಳನ್ನು ಗುರುತಿಸುವುದೆ. ಆದರೆ ಕಲ್ಲಿನಲ್ಲಿ, ಮರದಲ್ಲಿ ಇಟ್ಟಿಗೆಯಲ್ಲಿ ಸಂಸ್ಕಾರವನ್ನೊದಗಿಸದಿದ್ದರೆ, ಉದ್ದೇಶಕ್ಕೆ ತಕ್ಕಂತೆ ಅವನ್ನು ಬಳಸಿಕೊಳ್ಳದಿದ್ದರೆ ಶಿಲ್ಪವಾದೀತೆ? ಹಾಸ್ಯದ ಉದ್ದೇಶ ಜನರ ಚಿತ್ತಕ್ಕೆ ಸಂಸ್ಕಾರವನ್ನೊದಗಿಸುವುದು, ಸಮಾಜದ ಅಂಕುಡೊಂಕುಗಳನ್ನು ತಿದ್ದುವುದು.

ಹೀಗೆ ಮಾಡುವಾಗ ಹಾಸ್ಯಶಿಲ್ಪಿಯ ಚಾತುರ್ಯವೆಂದರೆ ಹಾಸ್ಯರಸವೇ ಮುಖ್ಯವೆಂಬಂತೆ ಕಾಣಿಸುವುದು.

ಲೋಪದೋಷಗಳು ತಮ್ಮಷ್ಟಕ್ಕೆ ತಾವು ಸರಿಯಾಗಲಿ; ನಗುವುದು, ನಗಿಸುವುದು ತಿಳಿಯಾಗಿ, ನಿರ್ಮಲವಾಗಿದ್ದರಾಯಿತು.

ಹೆಣ್ಣನ್ನು ಹೀಗಳೆಯುವುದೆ?

ನಮ್ಮ ಸಂಸ್ಕೃತಿಯ ಆದರ್ಶದಲ್ಲೇನೋ ಹೆಣ್ಣಿಗೆ ಹಿರಿಯ ಪಟ್ಟವಿದೆ. ಋಗ್ವೇದದಲ್ಲೇ ಹೆಣ್ಣು ಋಷಿಗಳಿದ್ದಾರೆ; ಇತಿಹಾಸದ ಹಳೆಯ ಹಾಳೆಗಳಲ್ಲಿ ಹೆಂಗಸರ ಪಾತ್ರವೇ ಹೆಚ್ಚಿನದು. ಪೂಜೆಗೊಳ್ಳುತ್ತಿದ್ದ, ಈಗಲೂ ಪೂಜೆಗೊಳ್ಳುತ್ತಿರುವ ದೇವ-ದೇವತೆಯರ ತಂಡದಲ್ಲಿ ಹೆಣ್ಣು ದೇವತೆಗಳೇ ಹೆಚ್ಚುಮಂದಿ; ಅವರ ಆರಾಧನೆ ನಾಡಿನಲ್ಲೆಲ್ಲ ಜರುಗುತ್ತದೆ.

ಮೊದಲೇ 'ಮಾತೃದೇವೋ ಭವ'; ಅನಂತರ 'ಪಿತೃದೇವೋ ಭವ'. 'ತಾಯಿ-ತಂದೆ' (ಮಾತಾ ಪಿತರೌ) ಎಂಬುದೇ ಕ್ರಮ; ದಂಪತಿಯೆಂದರೆ 'ಹೆಂಡತಿ-ಗಂಡ' (ಜಾಯಾಪತಿ) ಎಂದೇ ನಿಘಂಟುವಿನ ಬಳಕೆ. ಈಗೇನೋ ಕನ್ನಡದಲ್ಲಿ 'ಗಂಡ-ಹೆಂಡತಿ' ಎಂಬುದು ವಾಡಿಕೆಯಾಗಿದೆಯೆನ್ನಿ. ಆದರೆ ಆದರ್ಶವನ್ನು ವ್ಯವಹಾರದಲ್ಲಿ ಉಳಿಸಿಕೊಳ್ಳಲಾಗಲಿಲ್ಲ ಎಂಬುದು ದಿಟವೇ. ನಡುಯುಗದಲ್ಲಿ ಸಿದ್ಧವಾದ ದಿಟವೇ. ನಡುಯುಗದಲ್ಲಿ ಸಿದ್ಧವಾದ ಸ್ಮೃತಿ ಗ್ರಂಥಗಳಲ್ಲೇ ಹೆಂಗಸರ ಅವಹೇಳನವಿದೆ. ಹೆಂಗಸರು ವೇದ ಋಕ್ಕುಗಳಿಗೇ ದ್ರಷ್ಟಾರರಾಗಿದ್ದುದನ್ನು ಮರೆತು, ಹೆಂಗಸರು ವೇದವನ್ನು ಓದಬಾರದೆಂಬ ಕಟ್ಟಳೆ ಕಾಣಿಸಿಕೊಂಡಿತು. ಹೆಂಗಸಿಗೆ ಸ್ವಾತಂತ್ರ್ಯವಿರಬಾರದೆಂಬ ಉಪದೇಶವೂ ಹೊರಬಂದಿತು. ಧಾರ್ಮಿಕ ವಿಧಿಗಳಲ್ಲಿ ಹೆಂಡತಿಯ ಅನುಮೋದನೆ ಇರದೆ ಗಂಡ ಏನನ್ನೂ ಮಾಡುವಂತಿಲ್ಲ, ಕಡೆಗೆ ಒಂದು ದಾನಕೊಡಬೇಕಾದರೂ ಹೆಂಡತಿಯ ಕೈಯಿಂದ ಒಪ್ಪಿಗೆಯ ನೀರು ಬೀಳಬೇಕು. ಆದರೂ, ಧರ್ಮದ ನೆಲೆಯಲ್ಲೇ ಮೂಡಿಕೊಂಡ ಗೃಹ ಜೀವನದಲ್ಲಿ ಹೆಂಡತಿ ಗಂಡನಿಗೆ ಅಧೀನ! ಸಂಪ್ರದಾಯದ ಬದುಕಿನಲ್ಲಂತೂ ಅವಳು ಗಂಡಸಿಗೆ ಅಡಿಯಾಳು.

ಕನ್ನಡದ ಕವಯತ್ರಿ ಸಂಚಿಯ ಹೊನ್ನಮ್ಮ ಇದನ್ನು ಕಂಡು ರೋಸಿ-

'ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆದರು ಕಣ್ಣು ಕಾಣದ ಗಾವಿಲರು?' ಎಂದು ಕೇಳಿದಳು. ಹೀಗೆಯೇ ಕೇಳುವ ಹೆಂಗಳೆಯರ ಸಂಖ್ಯೆ ಸಾವಿರಾರು. ಇದೇ ಪ್ರಶ್ನೆಯನ್ನು ಕೇಳುವ ಸುಸಂಸ್ಕೃತ ಗಂಡಸರ ಸಂಖ್ಯೆಯೂ ಕಡಮೆಯೇನಲ್ಲ.

ಹೀಗೇಕೆ ವಿಪರ್ಯಾಸವಾಯಿತು? ಪಾಶ್ಚಾತ್ಯ ದೇಶಗಳಲ್ಲೂ ಇದೇ ಪರಿಸ್ಥಿತಿ ಎನ್ನುವುದು ಸಮಾಧಾನವಲ್ಲ, ಆ ದೇಶಗಳಲ್ಲಿ ಎಂದಿನಿಂದಲೂ ಹೆಣ್ಣಿನ ಸ್ಥಾನ ಕೀಳೇ. ಕರ್ತವ್ಯ ವಿಭಜನೆಯ ದೃಷ್ಟಿಯಿಂದ ಹೆಣ್ಣು ಒಳಗೆ, ಗಂಡು ಹೊರಗೆ ಎಂಬುದಿದ್ದರೂ ಮೇಲು ಕೀಳು ಎಂಬುದು ನಡುಯುಗದವರೆಗೆ ಇರಲಿಲ್ಲ, ಅನಂತರವೇ ಅಂಟಿಕೊಂಡ ಅನಿಷ್ಟ ಇದು.

ಒಳಗಣ್ಣು-ವಿವೇಕ

ಯಾವುದೋ ಕಾರಣದಿಂದ ಒಬ್ಬನಿಗೆ ಕತ್ತಲೆಯಲ್ಲೇ ಓಡಿಯಾಡುವ, ತಡುಕಾಡುವ ಸಂದರ್ಭ ಬಂದಿತೆನ್ನಿ. ಅವನಿಗೆ ಹತ್ತಿರವಿರುವ ವಸ್ತು ತಿಳಿಯುವುದು ಹೇಗೆ? ಅದು ತಲೆಗೆ ಬಡಿದಾಗಲೇ.

ಕತ್ತಲೆಯಲ್ಲಿದ್ದವನಿಗೆ ದೂರದಲ್ಲೇನಿದೆ, ಹತ್ತಿರದಲ್ಲೇನಿದೆ ಎಂದು ತಿಳಿಯಲಾರದು. ಅವನಿಗೆ ಕಣ್ಣುಗಳಿದ್ದೂ ಅವು ಪ್ರಯೋಜನಕ್ಕೆ ಬಾರವು. ಅವು ಇದ್ದೂ ಇಲ್ಲದಂತೆಯೆ. ಕತ್ತಲಲ್ಲಿರುವವನಿಗೂ ಕುರುಡನಿಗೂ ಅಷ್ಟೇನು ಅಂತರವಿರದು.

ಮನುಷ್ಯನಿಗೆ ಬುದ್ಧಿಶಕ್ತಿಯಿದೆ. ಪೂರ್ವಾಪರ ಆಲೋಚನೆ ಮಾಡಬಲ್ಲ; ವಿಚಾರ ಮಾಡಬಲ್ಲ; ಯಾವುದು ಸರಿ, ಯಾವುದು ತಪ್ಪು ಎಂದು ನಿರ್ಣಯಿಸಬಲ್ಲ; ಏನನ್ನು ಮಾಡಬೇಕು, ಏನನ್ನು ಮಾಡಬಾರದು ಎಂಬ ವಿವೇಕ ಅವನಿಗಿದ್ದೀತು. ಬುದ್ಧಿಯೇ ಮನುಷ್ಯನಿಗೆ ಒಳಗಣ್ಣು, ಹೊರಗಣ್ಣು ಕಾಣಲಾಗದುದನ್ನೂ ಒಳಗಣ್ಣು ಕಂಡೀತು. ಒಳಗಣ್ಣು ಹೊರಗಣ್ಣಿನೊಂದಿಗೆ ಕೂಡಿಕೊಂಡಿದ್ದರೇ ನೋಟ ಸಾರ್ಥಕ. ಆದರೆ ಮನುಷ್ಯರು ಅದನ್ನು ಬಳಸಿಕೊಳ್ಳುವುದು ಕಡಮೆ. ಬಹುಮಟ್ಟಿಗೆ ಜನ ಆಲೋಚನೆ ಮಾಡಲು ಅಂಜುತ್ತಾರೆ. ವಿಚಾರಮಾಡುವ ಶ್ರಮವೇಕೆಂದು ಇತರರು ಮಾಡುವಂತೆ ಮಾಡಿಬಿಡುತ್ತಾರೆ; ಆ ಕಾಲಕ್ಕೆ ಯಾವುದು ಹೇಗೆ ತೋರುವುದೋ ಅದನ್ನು ಹಾಗೆ ಮಾಡಿಬಿಡುತ್ತಾರೆ. ಅವರ ವ್ಯವಹಾರವೆಲ್ಲ ಕತ್ತಲೆಯಲ್ಲೇ; ಒಳಗಣ್ಣು ಅಲ್ಲಿ ಕೆಲಸ ಮಾಡುವುದಿಲ್ಲ. ಹೊರಗಣ್ಣು ವಿಷಯಗಳನ್ನು ಗ್ರಹಿಸಿದಾಗಲೂ, ಎಚ್ಚರವಿದ್ದಾಗಲೂ ಒಳಗಡೆ ವಿಚಾರವಿಲ್ಲದಿದ್ದರೆ, ಒಳಗಣ್ಣು ಮುಚ್ಚಿದ್ದರೆ ಅದು ಕತ್ತಲೆಯೇ. ವಿವೇಕವಿಲ್ಲದ ನಡವಳಿಕೆ, ವಿಚಾರವಿಲ್ಲದ ತೀರ್ಮಾನ, ಆಲೋಚನೆ ಮಾಡದೆ ದುಡುಕುವುದು, ದಿಟವಾದುದು, ಮುಖ್ಯವಾದುದು, ಪ್ರಸಕ್ತವಾದುದು ಇಂಥವನಿಗೆ ತಿಳಿಯುವುದು ಯಾವಾಗ? ತಲೆ ತಾಕಿದ ಮೇಲೇ ಅಲ್ಲವೆ? ಪೆಟ್ಟು ಬಿದ್ದಮೇಲೆ ಎಚ್ಚರ. ಹೀಗೆ ಮಾಡಬಾರದಿತ್ತು, ಇದನ್ನು ಆಡಬಾರದಿತ್ತು ಎಂಬ ವಿವೇಕ ಪಶ್ಚಾತ್ತಾಪದಲ್ಲಿಯೇ.

ಮೊದಲೇ ಬುದ್ಧಿಯನ್ನು ಬಳಸಿಕೊಂಡರೆ ಪಶ್ಚಾತ್ತಾಪಕ್ಕೆ ಕಾರಣವಿರುವುದಿಲ್ಲ.

ಅಡುಗೆ ಕೆಟ್ಟಮೇಲೆ ಅದನ್ನು ಸರಿಪಡಿಸುವುದು ಕಷ್ಟ; ಹಲವಾರು ರಿಪೇರಿಗಳನ್ನು ಮಾಡಬೇಕಾಗುತ್ತದೆ. ಮಾಡಿದ ಮೇಲೂ ಇರಬೇಕಾದ ರುಚಿ ಇರುವುದಿಲ್ಲ.

ಹಾಗೆಯೇ ತಪ್ಪು ಮಾಡಿ ತಿದ್ದಿಕೊಳ್ಳುವುದಕ್ಕಿಂತ, ವಿಚಾರಮಾಡಿ ಸರಿಯಾಗಿಯೇ ಮಾಡಿದರೆ ಮೇಲಲ್ಲವೆ?

ಯೋಗಕ್ಷೇಮ

"ನಿನ್ನ ಯೋಗಕ್ಷೇಮ ನೋಡಿಕೋ", "ಮನೆಯವರ ಯೋಗಕ್ಷೇಮ ತಿಳಿಸು" ಎಂದೆಲ್ಲ ನಾವು ಹೇಳುವುದುಂಟಲ್ಲ. ಇಲ್ಲಿ ಯೋಗಕ್ಷೇಮವೆಂದರೇನು? ಶರೀರದ ಆರೋಗ್ಯ, ಮನಸ್ಸಿನ ನೆಮ್ಮದಿ, ಮನೆಯ ಅನುಕೂಲ, ನೆರೆಹೊರೆಯ ನೆರವು, ಉದ್ಯೋಗದ ಆಸರೆ ಎಲ್ಲವೂ ಈ ಮಾತಿನಲ್ಲಿ ಅಡಕವಾಗುತ್ತವೆ.

ಆದರೆ ಯೋಗಕ್ಷೇಮ ಒಂದು ಪದವಲ್ಲ. ಯೋಗ ಮತ್ತು ಕ್ಷೇಮ ಎಂಬ ಎರಡು ಪದಗಳು ಇದರಲ್ಲಿ ಕೂಡಿಕೊಂಡಿವೆ. ಸಂಸ್ಕೃತದಲ್ಲಿ "ಯೋಗಕ್ಷೇಮೌ" ಎಂಬ ಪ್ರಯೋಗವೂ ಉಂಟು. ಯೋಗ ಎಂಬ ಮಾತಿಗೆ ಹಲವು ಅರ್ಥಗಳಿವೆ. ಇಲ್ಲದ್ದನ್ನು ಪಡೆದುಕೊಳ್ಳುವುದು; ಹೊಸದಾಗಿ ಒಂದು ಸ್ಥಿತಿಯನ್ನು ಮುಟ್ಟುವುದು. ನಮಗೆ ಬೇಕಾದುದು ಇನ್ನೂ ದೊರಕದಿದ್ದಾಗ ಪ್ರಯತ್ನಪಟ್ಟು ದೊರಕಿಸಿಕೊಳ್ಳುವುದು (ಅಪ್ರಾಪ್ತಸ್ಯ ಪ್ರಾಪಣಂ) ಎಂದು ಇಲ್ಲಿ ಪ್ರಸಕ್ತವಾಗುವ ಅರ್ಥ. ಶರೀರಕ್ಕೆ ಆಹಾರ, ಮನಸ್ಸಿಗೆ ಗೆಲುವು, ಮನೆಯಲ್ಲಿ ನೆಮ್ಮದಿ, ಉದ್ಯೋಗದಲ್ಲಿ ಉತ್ಸಾಹ, ಎಲ್ಲಕ್ಕೂ ಅಗತ್ಯವಾಗಿ ಹಣ, ಒಳ್ಳೆಯ ಹೆಸರು ಮೊದಲಾದುವೆಲ್ಲ ಇದರಲ್ಲಿ ಸೇರುತ್ತವೆ. ಇನ್ನು ಕ್ಷೇಮವೆಂದರೆ ಇದ್ದದ್ದನ್ನು ಉಳಿಸಿಕೊಳ್ಳುವುದು (ಪ್ರಾಪ್ತಸ್ಯ ಪಾಲನಂ). ಈಗಾಗಲೇ ಪಡೆದುಕೊಂಡುದನ್ನು ಕಾಪಿಟ್ಟುಕೊಳ್ಳುವುದು. ಶರೀರದ ಆರೋಗ್ಯವಾಗಲಿ, ಮನಸ್ಸಿನ ನೆಮ್ಮದಿಯಾಗಲಿ, ಮನೆಯ ಅನುಕೂಲವಾಗಲಿ ಹಾಳಾಗದಂತೆ, ಕೆಡದಂತೆ, ಕಹಿಯಾಗದಂತೆ, ನೋಡಿಕೊಳ್ಳುವುದು ಕ್ಷೇಮ. ಕಷ್ಟಪಟ್ಟು ಸಂಪಾದಿಸಿದ ಹಣ ನಾಶವಾಗದಂತೆ, ಪ್ರಯತ್ನದಿಂದ ಪಡೆದುಕೊಂಡ ಪ್ರೀತಿ ವಿಶ್ವಾಸವನ್ನು, ಗಳಿಸಿಕೊಂಡ ವಿದ್ಯೆಯನ್ನು ಕಾಪಾಡಿಕೊಳ್ಳುವುದೆಲ್ಲ ಇಲ್ಲಿ ಸೇರುತ್ತವೆ. ಇಲ್ಲದ್ದನ್ನು (ಆದರೆ ಬೇಕಾದುದನ್ನು) ಪಡೆದುಕೊಳ್ಳುವುದು ಎಷ್ಟು ಮುಖ್ಯವೋ, ಇದ್ದದ್ದನ್ನು (ಬೇಕಾದುದನ್ನು) ಉಳಿಸಿಕೊಳ್ಳುವುದು ಅಷ್ಟೇ ಮುಖ್ಯ. ಹೆಚ್ಚು ಹಣ ಗಳಿಸಬೇಕೆಂದು ಶರೀರದ ಸೌಖ್ಯವನ್ನಾಗಲಿ ಮನಸ್ಸಿನ ನೆಮ್ಮದಿಯನ್ನಾಗಲಿ ಕಳೆದುಕೊಂಡರೆ ಅದು ಯೋಗವೂ ಅಲ್ಲ, ಕ್ಷೇಮವೂ ಅಲ್ಲ. ಯಾವುದಕ್ಕೆ ಯಾವಾಗ ಎಷ್ಟು ಬೆಲೆ ಎನ್ನುವ ವಿವೇಕ ಇದ್ದರೆ ಒಳಿತು. ಅಗತ್ಯ ವಿಲ್ಲದ್ದನ್ನು ಪಡೆದುಕೊಳ್ಳುವಾಗ ಅಗತ್ಯವಾದದ್ದು ಕಳೆದು ಹೋದರೆ ಹೇಗೆ? ಅಗತ್ಯವಿಲ್ಲದ್ದನ್ನು ಇದೆಯೆಂಬಷ್ಟೇ ಕಾರಣದಿಂದ ಉಳಿಸಿಕೊಳ್ಳಲು ಹೆಣಗಾಡುವುದೂ ಅಷ್ಟೇ ಹೆಡ್ಡತನ.

ಬರಬೇಕಾದುದು ಬರಲಿ, ಇರಬೇಕಾದುದು ಇರಲಿ ಎನ್ನುವ ವಿವೇಚನೆಯೇ ಯೋಗಕ್ಷೇಮದ ಗುಟ್ಟು.

ದೂರದ ಬೆಟ್ಟ

'ದೂರದ ಬೆಟ್ಟ ನುಣ್ಣಗೆ' ಎಂಬ ಮಾತನ್ನು ಅರಿಯದವರಾರು?

ದೂರದಿಂದ ನೋಡಲು ಯಾವುದೇ ಬೆಟ್ಟವಾದರೂ ಚೆಲುವು. ಮುಗಿಲ ನೀಲಿ ಮುಸುಕಿದಂತೆ, ಹಸಿರು ಹುಲ್ಲಿನ ಹಾಸಿಗೆ ಹರವಿದಂತೆ, ಹಾಸುಗಲ್ಲು ನಯವಾಗಿರುವಂತೆ ತೋರುತ್ತದೆಯಲ್ಲವೆ? ಆದರೆ ಅದರ ಹತ್ತಿರ ಹೋಗಿ ಅದನ್ನೇರತೊಡಗಿದಾಗ, ಅದರ ಇರವು ಇದ್ದಕ್ಕಿದ್ದಂತೆ ಬೇರೆಯಾಗುತ್ತದೆ. ಅಡಿಯಿರಿಸಲಾರದಂತೆ ಕಲ್ಲು-ಮುಳ್ಳು, ಕಾಲಿಗೆ ತೊಡರುವ ಗಿಡ-ಗೆಂಟೆ, ಮುಗ್ಗರಿಸಿ ಬೀಳುವಂತೆ ಹಳ್ಳ-ಕೊಳ್ಳ, ಕಡಿದಾದ ಬಂಡೆ, ಇವೆಲ್ಲ ಆಗ ತೋರಿಕೊಳ್ಳುತ್ತವೆ!

ದೂರದ ನೋಟ ಹತ್ತಿರದ ಅನುಭವಕ್ಕಿಂತ ಬೇರೆ. ನಾವು ಬಯಸುವುದು ಒಂದಾದರೆ, ಬಯಸಿದ್ದು ಕೈಸೇರಿದಾಗ ಅದು ಇನ್ನೊಂದು.

ಈ ಗಾದೆಯ ಅನ್ವಯ ಬಹುಕಡೆ. ಬೇರೆಯವರ ಉನ್ನತಿಯನ್ನಷ್ಟೆ ಕಂಡು ಅದು ತನಗೂ ಇರಬೇಕೆನ್ನುವವನು ಆ ಉನ್ನತಿ ತನಗೇ ಒದಗಿದಾಗ ಅದರೊಂದಿಗೆ ಬರುವ ಬವಣೆಗೆ ಬೇಸರಪಡುವುದಿಲ್ಲವೆ?

ದೂರದೇಶದ ಯಾವುದೋ ರಾಜಕೀಯ ವ್ಯವಸ್ಥೆಯನ್ನು ಮೆಚ್ಚಿಕೊಂಡು ಹಾತೊರೆಯುವ ಜನ, ಅದು ಹತ್ತಿರ ಸುಳಿಯುವಂತಾದಾಗ ಬೆದರುವುದಿಲ್ಲವೆ? ಅಮೆರಿಕೆಯ ಅದ್ದೂರಿಯ ಬದುಕು ದೂರಕ್ಕೆ ಸೊಗಸೇ. ಅದರ ಆತಂಕಗಳೇನು ದೂರಕ್ಕೆ ಕಾಣುವುದಿಲ್ಲ. ಹತ್ತಿರ ಸರಿದಾಗ ಮಾತ್ರ ಅವೇ ಎದ್ದು ತೋರಿಕೊಳ್ಳುತ್ತವೆ! ಕಣ್ಸೆಳೆದ, ಮನಮೆಚ್ಚಿದ ಹೆಣ್ಣಾಗಲಿ ಗಂಡಾಗಲಿ ಮದುವೆಯಾದಮೇಲೆ, ಒಟ್ಟಿಗೆ ಇರುವಾಗ ಹೃದಯ ಹಿಂಡುವ ನಿದರ್ಶನಗಳಿಲ್ಲವೆ? ದೂರಕ್ಕೆ ಒಲಿದವರು ಹತ್ತಿರದಲ್ಲಿ ಮುನಿಯುವುದು ಇದ್ದದ್ದೆ!

ಮಹಾಪುರುಷರೆಂದು ಪ್ರಸಿದ್ಧರಾದವರ ಒಡನಾಟ ಕೊಂಚ ಬೆಳೆದರೆ ಅವರ ಅಲ್ಪತನ ಎಷ್ಟೆಂದು ತಿಳಿದೀತು. ತಿಳಿಯದವರಿಗೇನೊ ಆದರ್ಶಪುರುಷರೆ! 'ತೋಟ ಶೃಂಗಾರ, ಒಳಗೆ ಗೋಣಿಸೊಪ್ಪು' ಎಂಬ ಮಾತೂ ಈ ಸಂದರ್ಭದಲ್ಲಿ ಒಪ್ಪುತ್ತದೆ. ತಾತ್ಪರ್ಯವೇನೆಂದರೆ, ಸಿರಿತನವಾಗಲಿ, ಹಿರಿತನವಾಗಲಿ ಮೊದಲ ನೋಟಕ್ಕೆ ಆಕರ್ಷಕವೆ. ಅದರ ತೋರುಗಾಣಿಕೆಯನ್ನಷ್ಟೆ ನಂಬಿಕೊಂಡು ಕಾಲು ಜಾರಬಾರದು.

ಕನ್ನಡಿಯ ಕೆಲಸ

ಮಾಟವಾದ ಮುಖವುಳ್ಳ ಚೆಲುವನಿಗೆ ಕನ್ನಡಿ ತೋರಿಸಿದರೆ ಅವನಿಗೇನು ಕೇಡೆನಿಸದು. ಅದೇ ಮೆಳ್ಳಗಣ್ಣು, ಸೊಟ್ಟಮೂಗು, ಹರಕು ತುಟಿಯುಳ್ಳವನೆದುರು ಕನ್ನಡಿ ಹಿಡಿದರೆ ಸಿಡುಕದೆ ಇರುವನೆ? ಶೀಲವಂತನನ್ನು ಅವನಿದ್ದಂತೆಯೆ ಬಣ್ಣಿಸಿದರೆ ಅವನು ಸಿಟ್ಟಾಗನು; ನಡತೆಗೆಟ್ಟವನನ್ನು ಹಾಗೆಯೆ ಕಾಣಿಸಿದರೆ ಉರಿದೆದ್ದು ಬೀಳುವನು. ಗುಲಗಂಜಿಗೆ ತನ್ನ ಕಪ್ಪು ತಿಳಿದರೆ ಹಿತವಿರದು; ಬರಿ ಕೆಂಪೇ ಎಂದು ಕಾಣಿಸಿಕೊಳ್ಳುವ ಕಾತರ ಅದಕ್ಕೆ.

ಯಾರಿಗಾಗಲಿ ಬೇರೆಯವರು ತನ್ನನ್ನು ನೋಡಿ ಮೆಚ್ಚಬೇಕೆಂಬ ಹಂಬಲ ಇರುವುದು ತಪ್ಪಲ್ಲ. ಆದರೆ ಬೇರೆಯವರು ಗುಣವನ್ನು ಕಂಡಾರು, ದೋಷವನ್ನೂ ಕಂಡಾರು. ಒಂದಿಲ್ಲದೆ ಇನ್ನೊಂದು ಇರದಷ್ಟೆ? ಗುಣಕ್ಕೆ ಮಣಿಯುವರು; ದೋಷವನ್ನೂ ಅವರು ಮೆಚ್ಚಿಕೊಳ್ಳಬೇಕೆಂದರೆ ಹೇಗೆ? ದೋಷವನ್ನು ಎತ್ತಿತೋರಿಸಲು ಹಲವರು ಅಂಜುವರು; ಕೆಲವರು 'ನಮಗೇಕೆ?' ಎಂದು ಸುಮ್ಮನಿರುವರು. ತನ್ನ ದೋಷವನ್ನು ಯಾರಾಗಲಿ ಎತ್ತಿ ತೋರಿಸಿದಾಗ ಅದನ್ನು ತಿದ್ದಿಕೊಳ್ಳಬಯಸುವವರು ವಿರಳ. ಹಾಗೆ ಎತ್ತಿ ತೋರಿಸಿದವರನ್ನು ಕೃತಜ್ಞತೆಯಿಂದ ಕಾಣುವವರು ಇನ್ನೂ ವಿರಳ!

ಲೋಕದ ವಾಡಿಕೆಯೆ ಹೊಗಳುವವರನ್ನು ಅಪ್ಪಿಕೊಳ್ಳುವುದು; ತೆಗಳುವವರನ್ನು ದೂರ ಇಡುವುದು. ತೆಗಳಿದಾಗ ದುಗುಡವಾದಂತೆಯೆ ಹೊಗಳಿದಾಗ ಹೆಮ್ಮೆ ಬರುವುದೂ ಸಹಜ. ಹೆಮ್ಮೆ ಒಂದು ಅವಗುಣವೆ. ಅದನ್ನು ಯಾರುತಾನೆ ಮೆಚ್ಚಿಯಾರು? ಹೊಗಳಿ ಹೊಗಳಿ ಹೊನ್ನಶೂಲಕ್ಕೆ ಏರಿಸುವ ಮಾತನ್ನು ಬಸವಣ್ಣನವರು ಆಡಿದ್ದಾರಲ್ಲವೆ? ಹೆಮ್ಮೆಯೆನ್ನುವುದೆ ಹೊನ್ನಶೂಲ. ತನ್ನನ್ನು ತಾನು ಕಂಡುಕೊಳ್ಳಲು ಕನ್ನಡಿಯ ನೆರವು; ಕನ್ನಡಿಯೇನು ಹೊಗಳುವುದೂ ಇಲ್ಲ. ತೆಗಳುವುದೂ ಇಲ್ಲ.

ಕುಂದಿದ್ದರೆ ತಿದ್ದಿಕೊಳ್ಳುವುದು ನಮ್ಮ ಹೊಣೆ.

ಬುದ್ಧಿ - ಮನಸ್ಸು

'ಕೆಸರು ಲೇಪಿಸಿದರು, ಗಂಧವ ತಂದು ಲೇಪಿಸಿದರು, ಕನ್ನಡಿ ಕುರುಡು'. ಹೀಗೆಂದು ರತ್ನಾಕರವರ್ಣಿಯ ಮಾತು.

ಕನ್ನಡಿಯನ್ನು ಹಿಡಿದು ಅದರ ಮೇಲೆ ಕೆಸರನ್ನು ಬಳಿದರೆ ಅದೇನು ಬೇಡವೆನ್ನುತ್ತದೆಯೆ? ಅದಕ್ಕೇನು ದುಮ್ಮಾನವೆ? ಶ್ರೀಗಂಧವನ್ನು ಪೂಸಿದರೆನ್ನಿ;ಅದೇನು ಹಿರಿಹಿಗ್ಗುವುದೆ? ಭಲೆ ಎಂದು ಬೀಗುವುದೆ? ಎರಡೂ ಇಲ್ಲ. ಕನ್ನಡಿಯು ಕುರುಡಂತೆ, ಅದಕ್ಕೆ ಕೆಸರೂ ಕಾಣಿಸದು, ಗಂಧವೂ ಕಾಣಿಸದು. ಯಾವುದು ಮೇಲೆ ಬಂದಡರಿದರೂ ಅದನ್ನು ತಾಳಿಕೊಳ್ಳುತ್ತದೆ. ಕನ್ನಡಿಯನ್ನು ಉಪಯೋಗಿಸುವವರ ಮಾತು ಬೇರೆ. ಕೆಸರು ಕನ್ನಡಿಯ ಮೇಲಿದ್ದರೆ ಮುಖ ಕಾಣುವುದು ಹೇಗೆ? ಗಂಧ ಪೂಸಿದ್ದರೇನೋ ಮೂಗಿಗೆ ಸುವಾಸನೆ ಬಡಿಯುತ್ತದೆ, ಸೊಗಯಿಸುತ್ತದೆ. ಕನ್ನಡಿಯ ಉಪಯೋಗವೂ ಆಯಿತು, ಮನಸ್ಸಿಗೆ ಹಿತವೂ ಆಯಿತು. ಕವಿಯ ಆಶಯದಲ್ಲಿ ಕನ್ನಡಿಯೆಂದರೆ ಮನಸ್ಸು, ಒಳಗಿರುವ ಆತ್ಮನನ್ನು ಪ್ರತಿಬಿಂಬಿಸುವುದು ಮನಸ್ಸಿನ ಕೆಲಸ. ಇದಕ್ಕೆ ಅಂತಃಪ್ರವೃತ್ತಿ ಅಗತ್ಯವಾಗುತ್ತದೆ. ಅದನ್ನು ಬಿಟ್ಟು ಹೊರಗಣ ವಿಷಯಗಳ ಕಡೆಗೇ ಮನಸ್ಸು ಒಲಿದರೆ ಕನ್ನಡಿಯ ಮೇಲೆ ಕೆಸರನ್ನು ಲೇಪಿಸಿದಂತೆ, ಕನ್ನಡಿಯ ಕೆಲಸ ನಿಂತಂತೆಯೇ. ಧರ್ಮದತ್ತ ಮನಸ್ಸು ಹರಿದರೆ ಗಂಧವನ್ನು ಲೇಪಿಸಿದಂತೆ. ಕನ್ನಡಿಯ ಕೆಲಸಕ್ಕೆ ಅದೇನು ಅಡ್ಡಿ ಮಾಡುವುದಿಲ್ಲ; ಅಷ್ಟು ಮಾತ್ರವಲ್ಲ. ಕನ್ನಡಿಗೊಂದು ಸೊಗಸನ್ನು ತಂದುಕೊಡುತ್ತದೆ. ಮನಸ್ಸಿಗೊಂದು ಹಿತ ಒಡಮೂಡುತ್ತದೆ. ಅಂತಃಪ್ರವೃತ್ತಿಗೆ ನೆರವಾಗುವ ವಿವರ ಇದು. ಆಗ ಮನಸ್ಸು ಆತ್ಮನನ್ನು ಪ್ರತಿಬಿಂಬಿಸುವುದು ಸಾಧ್ಯವಾಗುತ್ತದೆ. ಮನಸ್ಸು ತಾನಾಗಿ ತನಗೆ ಇದು ಬೇಕು ಇದು ಬೇಡ ಎಂದೇನು ಹೇಳುವುದಿಲ್ಲ. ಹೇಳಿಕೇಳಿ ಮನಸ್ಸೆನ್ನುವುದು ಜಡ. ಅದನ್ನು ಹೊರಗೆ ತಿರುಗಿಸಬೇಕೋ ಒಳಗೆ ತಿರುಗಿಸಬೇಕೋ ಎನ್ನುವುದು ಬುದ್ಧಿಯ ಕೆಲಸ. ಬುದ್ಧಿಯೂ ಜಡವೇ ಆದರೂ ಚೇತನಕ್ಕೆ ಸನಿಹದಲ್ಲೇ ಇದ್ದುಕೊಂಡು ಅದರ ಪ್ರಭಾವದಿಂದ ತಾನೂ ಚೇತನದಂತೆಯೇ ವ್ಯವಹರಿಸುತ್ತದೆ. ಮನಸ್ಸಿನ ಮೇಲೆ ಕೆಸರನ್ನು ಬಳಿಯುವುದಾಗಲಿ, ಗಂಧವನ್ನು ಪೂಸುವುದಾಗಲಿ ಅದರ ಕೆಲಸವೇ.

ಬುದ್ಧಿಯ ಪ್ರೇರಣೆ ಸರಿಯಾಗಿದ್ದರೆ ಮನಸ್ಸಿನಿಂದ ಒಳಿತೇ ನಡೆಯುತ್ತದೆ; ಆಗ ಕನ್ನಡಿ ಕುರುಡಾಗುವುದಿಲ್ಲ. ಬುದ್ಧಿಯಲ್ಲೇ ಕತ್ತಲೆಯಿದ್ದರೆ ಮನಸ್ಸು ಕುರುಡಾಗದೆ ಇರಲು ಸಾಧ್ಯವೆ? ಬುದ್ಧಿಯನ್ನು ಬೆಳಗಿಸುವುದು ಧರ್ಮವೆಂದು ಕವಿಸಮಯ.

ಪ್ರತ್ಯಕ್ಷ-ಪ್ರಮಾಣ

'ಮನಸ್ಸಿರದಿದ್ದರೆ ಕಣ್ಣು ಕುರುಡು' ಎಂದು ಇತಾಲಿಯನ್ ಭಾಷೆಯಲ್ಲಿ ಗಾದೆಯೊಂದಿದೆ. ರೂಪವನ್ನು ಕಾಣುವುದೇನೋ ಕಣ್ಣೇ. ಕಣ್ಣಿನ ಕೆಲಸವೆ ಅದು. ಅದನ್ನು ಬಿಟ್ಟು ಕಣ್ಣು ಮತ್ತೇನನ್ನು ಮಾಡೀತು? ಆದರೆ ಕಣ್ಣು ಮಾತ್ರ ಕೆಲಸ ಮಾಡಿದರೆ ಆಯಿತು, ನೋಡುವುದು ಸಾಧ್ಯವಾಗುತ್ತದೆ ಎನ್ನುವಂತಿಲ್ಲ. ಕಣ್ಣಿನ ಹಿಂದೆ ಮನಸ್ಸೂ ಇರಬೇಕು. ಹಾಗಿಲ್ಲವಾದರೆ ಕಣ್ಣು ತೆರೆದಿದ್ದರೂ ರೂಪವೇನು ತಿಳಿಯುವುದಿಲ್ಲ. ಕಣ್ಣಿಂದ ಪಡೆದುಕೊಂಡದ್ದು ಅರ್ಥವಿಲ್ಲದೆ ಹೋಗುತ್ತದೆ. ಕಣ್ಣು ಕುರುಡಾದಂತೆಯೆ.

ಅವಧಾನ (ಅಟೆನ್‌ಷನ್) ಇರದೆ ಕಣ್ಣೆದುರು ಏನಿದ್ದರೂ ಉಪಯೋಗವೇನು? ನೋಡಿದ್ದರ ಗುಣ, ಧರ್ಮ, ಪ್ರಸ್ತುತತೆ, ವಿಶೇಷ, ಪ್ರಯೋಜನ, ತಾತ್ಪರ್ಯ ಇವನ್ನೆಲ್ಲ ಅರಿತುಕೊಳ್ಳುವುದು ಮನಸ್ಸೆ.

ಕಣ್ಣು ಇದನ್ನೆಲ್ಲ ಒದಗಿಸಲಾರದು. ಎದುರಿಗಿರುವ ವಸ್ತುವಿನ ರೂಪವನ್ನು ಮನಸ್ಸಿಗೆ ಮುಟ್ಟಿಸಿದರೆ ಅದರ ಕೆಲಸ ತೀರಿತು. ಅನಂತರ ಮನಸ್ಸು ಆ ರೂಪವನ್ನು ಪರಾಮರ್ಶೆ ಮಾಡಿದಾಗಲೆ ಕಣ್ಣಿನ ಕೆಲಸ ಪೂರ್ಣವಾಗುವುದು. ವಸ್ತುವನ್ನು ಕುರಿತ ನೆನಪು, ಹಿಂದಿನ ಅನುಭವದ ವಾಸನೆ, ಮುಂದಿನ ಎಣಿಕೆ, ಬೇಕು-ಬೇಡಗಳ ಚೌಕಟ್ಟು, ಮೊದಲಾದುವೆಲ್ಲ ಮನಸ್ಸಿನ ಕೆಲಸವೇ. ಇವಿಲ್ಲದೆ ಕಣ್ಣು 'ನೋಡ' ಲಾರದು.

ಇಲ್ಲಿ ಇನ್ನೂ ಒಂದು ಸ್ವಾರಸ್ಯ ಇದೆಯೆನ್ನಿ. ಒಮ್ಮೊಮ್ಮೆ, ನಮ್ಮ ಮನಸ್ಸಿನಲ್ಲಿರುವುದನ್ನೇ ನಾವು ನೋಡುವುದು. ಹೊರಗಣ ವಿವರ ಏನೇ ಇರಲಿ. ನಮ್ಮ ಭಾವನೆಗಳು ಅದರ ಮೇಲೆ ಮೂಡಿಬರುತ್ತವೆ. ಅದೂ ಭಯ, ಉದ್ವೇಗ, ಆತಂಕ, ಸಿಟ್ಟು ಮೊದಲಾದುವು ಮನಸ್ಸನ್ನು ಮೆಟ್ಟಿದಾಗಲಂತೂ ಕಣ್ಣು ಸ್ವತಂತ್ರವಾಗಿ ಕೆಲಸ ಮಾಡುವುದೇ ಇಲ್ಲ. ಹೀಗಿರುವಾಗ, ಕಣ್ಣಿಂದ ಕಂಡದ್ದೆಲ್ಲ ದಿಟ ಎಂದಾಗಲಿ, ಕಣ್ಣು ದಿಟವಾದುದನ್ನೆ ಕಾಣುವುದು ಎಂದಾಗಲಿ ಹೇಳುವುದು ಹೇಗೆ?

ಪ್ರತ್ಯಕ್ಷವೇ ಪ್ರಮಾಣ ಎಂದು ಬಹುಮಂದಿ ತಿಳಿದಿದ್ದಾರಲ್ಲವೆ? ಪ್ರತ್ಯಕ್ಷವೆಂದರೆ ಇಂದ್ರಿಯ, ವಿಷಯ ಎರಡೂ ಕೂಡಿದ್ದು ಎಂದಷ್ಟೆ. ಆದರೆ ಪ್ರತ್ಯಕ್ಷವೇನು ಪ್ರಮಾಣವಲ್ಲ. ಇಂದ್ರಿಯ ವ್ಯಾಪಾರಕ್ಕೂ ಮನಸ್ಸಿನ ಹಿನ್ನೆಲೆಯಿರಬೇಕು. ಇದ್ದಾಗಲೆ ಪ್ರತ್ಯಕ್ಷವೆನಿಸಿಕೊಳ್ಳುವುದು. ಮನಸ್ಸಿನ ಪಾತ್ರವನ್ನರಿಯದೆ ಕಣ್ಣು ಕಂಡದ್ದಷ್ಟೆ ದಿಟ ಎನ್ನುವುದು ಸರಿಯಾಗದು.

ಮೇಲೆ ನೋಡದಿರು

ಋಗ್ವೇದದಲ್ಲೊಂದು ಕಿವಿಮಾತು: 'ಅಧಃಪಶ್ಯಸ್ವ ನೋಪರಿ' ಎಂದು. 'ನಡೆಯುವಾಗ ನೆಲದ ಕಡೆ ಕಣ್ಣಿರಲಿ, ಮುಗಿಲಗೊಡವೆ ನಿನಗೇಕೆ?' ಎಂದು ಅರ್ಥ. ಮುಗಿಲತ್ತ ಕತ್ತೆತ್ತಿ ಮೇಲೆ ಮಿನುಗುವ ತಾರೆಗಳನ್ನೆಣಿಸುತ್ತ ನಡೆದ ಜೋಯಿಸ ಎದುರಿಗಿದ್ದ ಹಳ್ಳವನ್ನು ಕಾಣದೆ ಅದರಲ್ಲಿ ಬಿದ್ದನೆಂಬ ವೃತ್ತಾಂತ ಇದಕ್ಕೆ ಸಂವಾದಿಯಾದುದು.

ನಡೆಯುವ ಮಾತು ಬದುಕುವುದರ ಸಂಕೇತ: ಬಾಳಿನಲ್ಲಿ ಗಟ್ಟಿಯಾದ ಕೆಲವು ವಿವರಗಳಿವೆ; ಹಗಲುಗನಸುಗಳೂ ಬಿಸಿಲುಗುದುರೆಗಳೂ ಇವೆ. ನಾವು ಅವಲಂಬಿಸ ಬೇಕಾದುವೆಂದರೆ ಗಟ್ಟಿಯಾದ ವಿವರಗಳೆ.

ಇವನ್ನು ಕೈಬಿಟ್ಟು, ಯಾವುದೊ ಬಯಕೆ, ಯಾತರದೊ ಆಸೆ, ಎಂಥದೊ ಭರವಸೆ ಎಂದು ಹಾರಾಡುವುದು ಬುದ್ಧಿವಂತಿಕೆಯಲ್ಲ. ತನ್ನನ್ನು ನಂಬಿ, ತನ್ನೊಡನೆ ಬಾಳುವವರ ಹಿತವನ್ನು ಮರೆತು ಲೋಕಸಂಗ್ರಹದ ಗೀಳನ್ನು ಹಚ್ಚಿಕೊಳ್ಳುವುದು ಹುಚ್ಚುತನ.

ಎದುರಿಗಿರುವುದು, ಇಂದು ಪ್ರಸಕ್ತವಾಗಿರುವುದು, ಸದ್ಯದ ಅಗತ್ಯವನ್ನು ಪೂರಯಿಸುವುದು ಇವೆಲ್ಲ ಮುಖ್ಯವಾಗಬೇಕು. ಇನ್ನೂ ಶಕ್ತಿಯೂ, ವೇಳೆಯೂ ತಾಳ್ಮೆಯೂ ಉಳಿದಿದ್ದರೆ ಬೇರೆಯ ಮಾತು. ತನ್ನ ಹಿತವನ್ನೆ ಕಂಡುಕೊಳ್ಳಲಾರದ ಜೋಯಿಸ ಬೇರೆಯವರ ಭವಿಷ್ಯವನ್ನೇನು ತಿಳಿಯಬಲ್ಲ? ಹೆಂಡತಿಯ ಮಾತನ್ನೆ ಕೇಳದ ಗಂಡ ಹೆರವರ ಮಾತಿಗೆ ಬೆಲೆ ಕೊಡಬೇಕೆ?

ಬದುಕಿನಲ್ಲಿ ನಮಗಿಂತ ಹೆಚ್ಚು ಪುಣ್ಯವಂತರಿದ್ದಾರೆ; ನಮಗಿಂತ ಕಡಮೆಯವರೂ ಇದ್ದಾರೆ. ನಮಗಿಂತ ಉತ್ತಮಸ್ಥಿತಿಯಲ್ಲಿರುವವರನ್ನು ಕಂಡು ಕರುಬುವುದಾಗಲಿ, ಅವರೊಂದಿಗೆ ಮೇಲಾಟ ನಡೆಸಲು ಬಯಸುವುದಾಗಲಿ ಒಳ್ಳೆಯದಲ್ಲ. ನಮಗಿರುವ ಅನುಕೂಲವೂ ಇರದವರು ಇದ್ದಾರಷ್ಟೆ? ನಮ್ಮ ಸ್ಥಿತಿಗತಿಗಳನ್ನೂ ಮುಟ್ಟಲಾರದ ಮಂದಿ ಇದ್ದಾರಲ್ಲವೆ? ಅವರನ್ನು ಕುರಿತು ಒಂದಷ್ಟು ಸಹಾನುಭೂತಿಯಿರುವುದಾದರೆ ನಮಗೇ ಒಳ್ಳೆಯದು!

ತನ್ನ ಕಾಲಿಗೆ ಜೋಡು ಕೂಡ ಇರದಷ್ಟು ಬಡತನದಲ್ಲಿದ್ದವನು ದುಗುಡದಿಂದ ದೇವರನ್ನು ದೂರುತ್ತಿದ್ದನಂತೆ. ಅವನೊಮ್ಮೆ ಒಂದು ಕಾಲಿಲ್ಲದೆ ನಡೆಯು ತ್ತಿದ್ದಾತನನ್ನು ಕಂಡು, ಸದ್ಯ ದೇವರು ತನಗೆ ಎರಡೂ ಕಾಲುಗಳನ್ನು ಕೊಟ್ಟಿದ್ದಾನೆಂದು ಸಂತೋಷಪಟ್ಟು, ದೇವರಿಗೆ ಅಡ್ಡಬಿದ್ದನಂತೆ!

ತನ್ನತನ

ಹಳೆಯದೊಂದು ಕತೆ— ಸಿರಿವಂತರ ಮನೆಯ ಹುಡುಗ, ತನ್ನ ಮನೆಯಿಂದ ಹೊರಟವನು, ಮರೆವಿನ ಬೇನೆಗೆ ತುತ್ತಾಗಿ, ಮನೆಯನ್ನೆ ಮರೆತ. ತನ್ನ ಮನೆಯ ಗುರುತನ್ನಾಗಲಿ, ಮನೆತನದ ಸ್ಥಿತಿಯನ್ನಾಗಲಿ ಹಿಡಿಯಲಾರದೆ, ತಾನು ಗತಿಯಿಲ್ಲದ ವನೆಂದು ಭಾವಿಸಿ ಅಲೆದಾಡತೊಡಗಿದ. ಅವರಿವರಲ್ಲಿ ಬೇಡಿ, ತಿರುಪೆಯಿಂದ ಹೊಟ್ಟೆಹೊರೆದುಕೊಂಡು, ಕಷ್ಟಪಡುತ್ತಿದ್ದ.

ತಿಳಿದ ಹಿರಿಯರೊಬ್ಬರು ಅವನನ್ನು ಕಂಡು, ಗುರುತಿಸಿ ಅವನಿಗಾಗಿ ಮರುಗಿ, ಅವನಿಗೆ ತನ್ನ ಮನೆಯ ಗುರುತನ್ನು ತಿಳಿಸಿದರು. ಹುಡುಗ ಅವರ ಮಾತನ್ನು ನಂಬಿ, ಅವರು ತೋರಿಸಿದ ದಾರಿಯನ್ನು ಹಿಡಿದು, ಮನೆಯನ್ನು ಸೇರಿದ. ಅವನ ಕಷ್ಟ ಹರಿಯಿತು. ಕತೆಯ ನೀತಿಯೇನು? ತನ್ನನ್ನು ತಾನು ಅರಿತುಕೊಳ್ಳಬೇಕು. ತನಗಿರುವ ಅನುಕೂಲದ ಕಡೆ ಗಮನ ಕೊಡಬೇಕು. ಇದಕ್ಕಿಂತ ಹೆಚ್ಚಾಗಿ ತನ್ನತನವೆಂಬುದನ್ನು ಕಾಪಾಡಿಕೊಳ್ಳಬೇಕೆಂಬುದು ಕತೆಯ ಸ್ವಾರಸ್ಯ.

ತಮ್ಮ ಹಿರಿಯರ ಸಾಧನೆಗಳನ್ನೂ ಮೇಲ್ಮೆಯನ್ನೂ ಮರೆತು, ಹೆರವರ ಹೆಗ್ಗಳಿಕೆಯನ್ನೆ ಹಾಡಿ ಹೊಗಳುತ್ತ ಕಾಲ ಕಳೆಯುವ ಮಂದಿ ಇಲ್ಲವೆ? ತನ್ನತನವನ್ನು ಮರೆತವನಿಗೆ ನೆಮ್ಮದಿಯಿರುವುದಿಲ್ಲ. ಜಗವನ್ನೆಲ್ಲ ಎತ್ತಿನಿಲ್ಲಿಸಬಲ್ಲ ಶೂರನೂ ತನ್ನ ಕಾಲಮೇಲೆ ತಾನು ನಿಂತರೇ ಹಿತವಲ್ಲವೆ?

ತನ್ನ ಕಾಲಮೇಲೆ ತಾನು ನಿಲ್ಲಬಲ್ಲವನು ನೆರೆಮನೆಯ ಊರುಗೋಲನ್ನು ಬಯಸುವುದಾದರೂ ಏಕೆ? ಕೂಪಮಂಡೂಕದಂತಿರಬೇಕು ಎಂದರ್ಥವಲ್ಲ. ಬೇರೆಯ ಕಡೆ ಸ್ವಾರಸ್ಯವಾಗಲಿ ಸತ್ತ್ವವಾಗಲಿ ಇರದೆಂದೂ ಅಲ್ಲ. ಆದರೆ ನೆಲೆ ಎಲ್ಲಿರಬೇಕು ಎನ್ನುವ ಪ್ರಶ್ನೆ. ನಮ್ಮ ಮನೆಯಲ್ಲೇ ನೆಮ್ಮದಿ ದೊರೆಯುವುದಾದರೆ, ಊರಲ್ಲೆಲ್ಲ ಅಂಡಲೆಯುವ ಕಾರಣವೇನು?

ನೆರೆಯವನ ಕೈಯಲ್ಲಿ ಹೊಳೆಯುವ ಗಾಜಿನ ಚೂರಿಗೆ ಆಸೆಬಟ್ಟು, ತನ್ನಲ್ಲಿರುವ ಮಣಿಯನ್ನು ಮಾರಿಕೊಳ್ಳಬಹುದೆ?

ಮಾತು-ಕೆಲಸ

ಕುಡಿದ ನೀರು ತೊಂದರೆಯನ್ನುಂಟುಮಾಡದೆಯಿರಲು ನೀರನ್ನು ಬಟ್ಟೆಯಿಂದ ಶೋಧಿಸಿ ಕುಡಿಯಬೇಕು (ವಸ್ತ್ರಪೂತಂ ಪಿಬೇಜ್ಜಲಂ). ಹಾಗೆಯೇ, ನಡೆಯುವಾಗ ಎಡವದೆ ಇರಲು, ಕೊಳಚೆಯ ಮೇಲೆ ಕಾಲಿಡದೆ ಇರಲು, ಕಣ್ಣಿಂದ ನೆಲವನ್ನು ನೋಡುತ್ತ ನಡೆಯಬೇಕು (ದೃಷ್ಟಿಪೂತಂ ನ್ಯಸೇದ್ ಪಾದಂ)

ಇವೆರಡು ಎಲ್ಲರಿಗೂ ತಿಳಿಯುವ ಮಾತುಗಳನ್ನು ಹೇಳಿ, ಮನುಸ್ಮೃತಿ ಮುಂದಕ್ಕೆ ಬಹುಜನ ಗಮನಿಸದ ಎರಡು ಮಾತುಗಳನ್ನು ಹೇಳುತ್ತದೆ.

ಮಾತನಾಡುವಾಗ ಸತ್ಯದ ಒರೆಗಲ್ಲಿಂದ ಉಜ್ಜಿಯೇ ಮಾತನಾಡಬೇಕು (ಸತ್ಯ ಪೂತಂವದೇದ್ವಾಕ್ಯಂ). ಸುಳ್ಳು, ತಟವಟ, ಉತ್ಪ್ರೇಕ್ಷೆ, ಎರಡರ್ಥದ ಮಾತು- ಇವೆಲ್ಲ ಸಂದರ್ಭಕ್ಕೆ ಸರಿಯಾಗಿ, ಒತ್ತಡದಿಂದ ಜಾರಿಕೊಳ್ಳಲು ಅಥವಾ ಏನಾದರೊಂದು ಲಾಭವನ್ನು ದೊರಕಿಸಿಕೊಳ್ಳಲು ಹೊರಬರುತ್ತವೆ.

ಅವುಗಳಿಂದ ತಾತ್ಕಾಲಿಕ ಪ್ರಯೋಜನ ಒಂದು ವೇಳೆ ಸಿದ್ಧವಾದರೂ ಮಾತಿನಲ್ಲಿರುವ ಮಾಯೆ ಎಂದಾದರೂ ಬಯಲಾದೀತು; ಅದರಿಂದ ತೊಂದರೆ ತಪ್ಪಿದ್ದಲ್ಲ. ಇದು ಹಲವರ ಅನುಭವದಲ್ಲಿದ್ದೀತು.

ಮುಂದೆ ತೊಂದರೆಯಾದೀತು ಎಂದು ಸುಳ್ಳಾಡದೆ ಇರುವುದೇನು ಶೀಲವಂತನ ಪ್ರವೃತ್ತಿಯಲ್ಲವೆನ್ನಿ. ತೊಂದರೆಯಾಗಲಿ, ಬಿಡಲಿ, ಸತ್ಯವನ್ನು ಅವನು ಕೈಬಿಡಲಾರ. ಆದರೆ ಅಷ್ಟೊಂದು ಶೀಲಬಲವಿಲ್ಲದವರು ತೊಂದರೆಗಾದರೂ ಹೆದರಬೇಕಲ್ಲ?

ಇನ್ನೊಂದು ಮಾತು, ಏನು ಮಾಡಿದರೂ ಮನಃಪೂರ್ತಿಯಾಗಿ ಮಾಡಬೇಕು (ಮನಃಪೂತಂ ಸಮಾಚರೇತ್). ಎಂದರೆ ಕೈಗೊಂಡ ಕೆಲಸವನ್ನು ಮನಸ್ಸಿಟ್ಟು ಶ್ರದ್ಧೆಯಿಂದ ಅಚ್ಚುಕಟ್ಟಾಗಿ ಮಾಡಬೇಕು. ಕಾಟಾಚಾರಕ್ಕೆ ಮಾಡುವುದು ಎಂಬುದೊಂದು ಮಾತಿದೆಯಷ್ಟೆ? ಮಾಡುವುದನ್ನು ಮನಸ್ಸಿಲ್ಲದೆ, ಬೇರೆ ದಾರಿಯೂ ಇಲ್ಲದೆ, ಏನೋ ಮಾಡಿದ ಶಾಸ್ತ್ರ ಮಾಡಿ ಮುಗಿಸಿದರಾಯಿತು ಎನ್ನುವ ಧೋರಣೆ. ಮನಸ್ಸಿಗೆ ಹಿತವಲ್ಲದ ಕೆಲಸವನ್ನು ಮಾಡಲು ತೊಡಗುವುದಾದರೂ ಏತಕ್ಕೆ? ಎಲ್ಲ ಕೆಲಸವೂ ನಮಗೆ ಒಪ್ಪಿಗೆಯಾಗಿಯೇ ಇರಬೇಕು ಎಂದಲ್ಲ. ಎಷ್ಟೋವೇಳೆ ನಿರ್ಬಂಧ ದಿಂದ ಕೆಲಸ ಮಾಡಬೇಕಾಗುತ್ತದೆ. ಆದರೆ ಕೆಲಸಕ್ಕೆ ತೊಡಗಿದೆವೆಂದರೆ ಮನಸ್ಸು ಅದರಲ್ಲೇ ಇರಬೇಕು. ಹಾಗಿಲ್ಲವಾದರೆ ಕೆಲಸ ಕೆಡುತ್ತದೆ, ಬೇಸರವಾಗುತ್ತದೆ. ಮನಸ್ಸು ಹುಳಿಯಾಗುವುದರೊಂದಿಗೆ ಹೆಸರೂ ಹಾಳಾಗುತ್ತದೆ.

ನಾಲಗೆಯ ಹೊಣೆ

'ಹೊಟ್ಟೆಯೆ, ನಿನ್ನಿಂದ ಕೆಟ್ಟೆ' ಎಂದು ಹೇಳುವುದುಂಟು. ವಿಚಾರ ಮಾಡಿದರೆ ಹೊಟ್ಟೆಯ ತಪ್ಪು ಅಷ್ಟಾಗಿ ಇರದು.

ತಿಂದು ತಿಂದು ಅಜೀರ್ಣವಾಗಿ ರೋಗ ಬರುತ್ತದೆ; ತಿನ್ನುವುದೇ ಚಾಳಿಯಾಗಿ, ಅದಕ್ಕೆ ಬೇಕಾದುದನ್ನು ಪಡೆದುಕೊಳ್ಳುವುದೇ ಹವ್ಯಾಸವಾಗಿ, ಗಳಿಸಿದ್ದೆಲ್ಲ ಇಷ್ಟಕ್ಕೆ ಮುಗಿದು ಬದುಕು ನೀರಸವಾಗುತ್ತದೆ. ಇದನ್ನು ಗಮನಿಸಿಯೇ ಮೇಲಿನ ಮಾತು ಬಂದಿರುವುದು. ಆದರೆ ತಿನ್ನುವುದು ಹೊಟ್ಟೆಯ ಅಗತ್ಯಕ್ಕೆ ಆದರೂ, ತಿನ್ನುವಾಗ ನಾಲಗೆಯ ಚಪಲವೇ ಮುಖ್ಯವಾಗುತ್ತದೆ. ಜನರು ಕೆಡುವುದು ಹೊಟ್ಟೆಯಿಂದಲ್ಲ; ನಾಲಗೆಯಿಂದ. ರುಚಿಯಾಗಿದೆಯೆಂದು ತಿನ್ನುವಾಗ ಹೊಟ್ಟೆಯ ಮಿತಿಯನ್ನೂ ಗಮನಿಸಿದರೆ ತೊಂದರೆಯಿಲ್ಲ, ಆದರೆ ನಾಲಗೆಯ ಚಪಲವೇ ಹೆಚ್ಚಾದರೆ, ಹೊಟ್ಟೆಗೆ ತೊಂದರೆ ಕಟ್ಟಿಟ್ಟದ್ದೆ. ಹೊಟ್ಟೆಗೊಂದು ಮಿತಿಯಿದೆ; ನಾಲಗೆಗೆ ಯಾವ ಮಿತಿಯೂ ಇರದು. ಇನ್ನು ನಾಲಗೆಗೆ ಇನ್ನೊಂದು ಕೆಲಸವೂ ಇದೆ-ಮಾತನಾಡುವುದು. ಹೊಟ್ಟೆಗಾದರೆ ಉಂಡ ಅನ್ನವನ್ನು ಅರಗಿಸಿಕೊಳ್ಳುವುದೊಂದೇ ಕೆಲಸ. ನಾಲಗೆಗೆ ತಿನ್ನುವ ಕೆಲಸ ಅಷ್ಟೆ. ತಿಂದದ್ದನ್ನು ಅರಗಿಸಿಕೊಳ್ಳಬೇಕಾದ ಹೊಣೆ ಅದಕ್ಕೇನಿದೆ? ಮಾತನಾಡುವ ಕೆಲಸವನ್ನೂ ತನ್ನ ಮೇಲೆ ಹಾಕಿಕೊಳ್ಳುತ್ತದೆ. ಮಾತನಾಡುವಾಗಲೂ ಚಪಲವೇ ಮುಖ್ಯ. ಮಾತು ಬರುವುದು ಮನಸ್ಸಿನಿಂದ; ಅದಕ್ಕೊಂದು ರೂಪ ಬರುವುದೂ ಮನಸ್ಸಿನಿಂದಲೆ. ಅದು ಹೊರಗೆ ಹಾಯಬೇಕಾದಾಗ ಮಾತ್ರ ನಾಲಗೆ ಬೇಕು. ನಾಲಗೆಗೆ ಅಷ್ಟೇ ಸಾಕು; ಗೊತ್ತು ಗುರಿ ಇಲ್ಲದೆ ಬಡಬಡಿಸುತ್ತದೆ. ನಾಲಗೆಯನ್ನು ಹಿಡಿತದಲ್ಲಿರಿಸಿಕೊಳ್ಳುವುದರಿಂದ ಹೊಟ್ಟೆಗೂ ಹಿತ, ಮನಸ್ಸಿಗೂ ನೆಮ್ಮದಿ. ನಾಲಗೆಯನ್ನು ಅಂಕೆಯಲ್ಲಿರಿಸಿಕೊಂಡ ಯೋಗಿಯು ಮಿತಾಹಾರಿಯಾಗಿರುತ್ತಾನೆ, ಮೌನಿಯಾಗಿಯೂ ಇರುತ್ತಾನೆ.

ಮೇಲಿನ ಮನಸ್ಸು, ಕೆಳಗಿನ ಹೊಟ್ಟೆ ಎರಡಕ್ಕೂ ನಡುವೆ ಇರುವ ನಾಲಗೆ ಎರಡಕ್ಕೂ ಅಗತ್ಯವಾಗಿ ಬೇಕಾದುದೇ; ಎರಡನ್ನೂ ತೊಂದರೆಗೀಡುಮಾಡಬಹು ದಾದುದೇ. ಆದ್ದರಿಂದ ನಾಲಿಗೆಗೆ ಇರಬೇಕಾದ ಗುಣಗಳು ಹಿತ-ಮಿತ. ಎರಡಲ್ಲೂ ಆಯತಪ್ಪಿದರೆ ಇಡೀ ಮನುಷ್ಯನೇ ಹಾಳಾಗುತ್ತಾನೆ.

ತಿನ್ನುವಾಗ ರುಚಿ, ಮಾತಾನಾಡುವಾಗ ಹಿತ ಇರಬೇಕು. ಮಿತಿಯಂತೂ ಇರಲೇಬೇಕು. ಮಿತಿಮೀರಿದರೆ ಕೇಡು ಕಟ್ಟಿಟ್ಟದ್ದೇ.

ಹೆಡ್ಡರು-ಜಾಣರು

ಜಾಣರ ಒಂದು ಕಿವಿಮಾತು ಇದು. ಹೆಡ್ಡರ ಕೂಡ ಗುದ್ದಾಡದಿರು, ನೋಡುವವರಿಗೆ ಹೆಡ್ಡರು ಯಾರೆಂಬುದು ತಿಳಿಯದೆ ಹೋದೀತು !

ಹೆಡ್ಡರನ್ನು ಸಾಮಾನ್ಯವಾಗಿ ಕಂಡುಕೊಳ್ಳುವುದು ಕಷ್ಟವಲ್ಲ, ಅವರ ಮಾತು, ಕತೆ, ನಡೆ, ನೋಟ, ಉಡುಗೆ ತೊಡುಗೆ ಎಲ್ಲವೂ ಹೆಡ್ಡತನವನ್ನು ಹೊರಹೊಮ್ಮಿಸುತ್ತವೆ. ಜಾಣರ ವೇಷವನ್ನು ತೊಡುವ ಹೆಡ್ಡರೂ ಇರುತ್ತಾರೆನ್ನಿ. ಅದು ವೇಷವೆಂದು ಅರಿತುಕೊಳ್ಳಲು ಸ್ವಲ್ಪ ವಿಳಂಬವಾಗಬಹುದು. ಆದರೆ ಅದೇನು ಬಯಲಾಗದೆ ಇರಲಾರದು.

ಹೆಡ್ಡರಿಗೆ ಗುದ್ದಾಡುವುದೇನು ಅಸಹಜವಲ್ಲ. ಅಲ್ಪವಾದ ಪ್ರಚೋದನೆ ಇದ್ದರೆ ಸಾಕು; ಗುದ್ದಾಟಕ್ಕೆ ಸಿದ್ಧರಾಗುತ್ತಾರೆ. ಪ್ರಚೋದನೆ ಇರಬೇಕೆಂಬುದೂ ಇಲ್ಲವೆನ್ನಿ. ಗುದ್ದಾಟಕ್ಕೆ ಇಂಥವರೇ ಇರಬೇಕೆಂಬ ನಿಯಮವೂ ಇಲ್ಲ, ಕಾರಣವಿರಬೇಕೆಂಬ ಸಂಕೋಚವೂ ಇರದು, ಸ್ಥಾನದ ಔಚಿತ್ಯವೂ ಶೂನ್ಯವೇ! ನೋಡುವವರು ಏನಂದುಕೊಂಡಾರೆಂಬ ಅಳುಕಾದರೂ ಇದ್ದೀತೆ? ಅದನ್ನು ಎಣಿಸುವವರು ಅಂಜುಕುಳಿಗಳು. ಊರವರಿಗೆ ಹೆದರಿಕೊಂಡು ನಾವು ಬದುಕುವುದಾದೀತೆ?

ಹೆಡ್ಡರಿಗೆ ಇರುವ ಧೈರ್ಯ ಜಾಣರಿಗೆ ಇರಲಾರದು. ಬುದ್ಧಿಯಿಲ್ಲದ ಕಡೆ ಬೇರೊಂದು ಏನಾದರೂ ಇರಬೇಡವೆ? ಮಂಡೆ ಖಾಲಿಯಾಗಿದ್ದಾಗ ಗುಂಡಿಗೆಯಲ್ಲಿ ಗಟ್ಟಿಗತನ ತುಂಬಿಕೊಳ್ಳುತ್ತದೆ.

ಧೈರ್ಯಕ್ಕೆ ಸಂದರ್ಭಶುದ್ಧಿಯಿರಬೇಕು. ಧೈರ್ಯದೊಂದಿಗೆ ಗಾಂಭೀರ್ಯವೂ ಇರಬೇಕು. ಈ ಪರಿವೆ ಹೆಡ್ಡರಿಗಿರುವುದಿಲ್ಲ. ಬುದ್ಧಿಯಿದ್ದಾಗ ಸ್ವಲ್ಪ ಅಂಜಿಕೆಯೂ ಇರುತ್ತದೆ; ವಿವೇಕವಿದ್ದಾಗ ಸ್ವಲ್ಪ ಹಿಡಿತವೂ ಇರುತ್ತದೆ; ಪರಿಣಾಮದ ಕಡೆ ಗಮನವಿರುತ್ತದೆ. ಸಿಟ್ಟಿಗೆದ್ದಾಗಲೂ ಗಡುವು ಮೀರಿ ಕುಣಿದಾಡುವುದಿಲ್ಲ.

ಹೊರಗಣ ಒತ್ತಡವೇನಿದ್ದರೂ ಒಳಗಣ ನೆಮ್ಮದಿಗೆ ಹೆಚ್ಚು ಬೆಲೆ ಕೊಡುವವರು ಜಾಣರು. ಒಳಗಣ ನೆಮ್ಮದಿಯ ಸುಳಿವನ್ನೇ ಅರಿಯದೆ, ಹೊರಗಣ ಒತ್ತಾಸೆ, ವಿರೋಧಗಳಿಗೇ ಅಂಟಿಕೊಂಡು ಬಾಳನ್ನು ಕಳೆಯುವ ಹೆಡ್ಡರೊಂದಿಗೆ ಜಾಣರು ನಡೆದುಕೊಳ್ಳಬೇಕಾದುದು ಹೇಗೆ?

ಈ ಸಮಸ್ಯೆಯನ್ನು ಹೆಡ್ಡರು ಬಿಡಿಸಲಾರರು; ಜಾಣರಿಗೇ ಇರುವ ಸಮಸ್ಯೆಯಲ್ಲವೇ ಇದು?

ಊರು-ಕಾಡು

ಶಿವಶರಣೆ ಮುಕ್ತಾಯಕ್ಕನ ಒಂದು ಮಾತು ಇದು. 'ಉಟ್ಟುದ ತೊರೆದಂಗೆ ಊರೇನು, ಕಾಡೇನು?' ಅರ್ಥವೇನೋ ಸ್ಪಷ್ಟವಾಗಿದೆ. ಉಟ್ಟ ಬಟ್ಟೆಯನ್ನು ಕಿತ್ತು ಬಿಸುಟು ಬೆತ್ತಲೆಯಾಗುವವನು ಊರಿನಲ್ಲಿದ್ದರೇನು, ಕಾಡಿನಲ್ಲಿದ್ದರೇನು? ಅವನಿಗೆ ಏತರ ಅಂಜಿಕೆ?

ಊರಲ್ಲಿರಬೇಕಾದರೆ ಕಟ್ಟು, ಕಟ್ಟಳೆಗಳಿವೆ. ಮಾನ- ಮರ್ಯಾದೆಗಳ ಪ್ರಶ್ನೆಯಿದೆ. ಬೇರೆಯವರು ಏನೆಂದುಕೊಂಡಾರೋ ಎಂಬ ಅಂಜಿಕೆಯಿರುತ್ತದೆ. ಸಮಾಜದ ಸಮ್ಮತಿ ಅಗತ್ಯವಾಗುತ್ತದೆ.

ಅದನ್ನು ಅಸಡ್ಡೆ ಮಾಡುವ ಜನರಿದ್ದಾರಲ್ಲವೇ? ಬೇರೆಯವರು ಏನಂದುಕೊಂಡರೆ ನನಗೇನು ಎಂದು ತನಗೆ ತೋರಿದಂತೆಯೇ ಮಾಡುವವರಿಗೆ ಯಾವ ಕಟ್ಟು, ಯಾವ ಕಟ್ಟಳೆ? ಯಾರೂ ಇರದಾಗ ಮಾಡುವಂತೆಯೆ ಯಾರು ಇದ್ದರೂ ಮಾಡುತ್ತಾರೆ ಅವರು! ಅವರಿಗೆ ಊರೂ ಒಂದೆ. ಕಾಡೂ ಒಂದೆ. ಕಾಡಿನಲ್ಲಿದ್ದಂತೆಯೆ ಊರಿನಲ್ಲಿಯೂ. ಬೇರೆಯವರ ಹಂಗು ಏನೇನೂ ಇರದು, ಅದರ ಪರಿವೆಯೂ ಇರದು.

ಮತ್ತೆ ಕೆಲವರು ವಿಧಿಯಿಲ್ಲದೆ ಮಾನವನ್ನು, ಮರ್ಯಾದೆಯನ್ನು ಕೈಬಿಡಬೇಕಾಗುತ್ತದೆ. ಒಳ್ಳೆಯ ಸ್ಥಿತಿಯಲ್ಲಿದ್ದವರಿಗೆ ಇದ್ದಕ್ಕಿದ್ದಂತೆ ಬಡತನ ಬಂದಡರಿ ಬೇರೆಯವರ ಔದಾರ್ಯಕ್ಕೆ ಕೈಯೊಡ್ಡಬೇಕಾದ ಪರಿಸ್ಥಿತಿ ಒದಗಿದಾಗ ಮಾನದ ಪ್ರಶ್ನೆಯೆಲ್ಲಿ?

ಬಡತನದಿಂದ ಬೇಸತ್ತು ಬೇಡುವವರಿಲ್ಲವೆ? ವಿಧಿಯ ವಿಕಟ ಅವರನ್ನು ಕಾಡುತ್ತದೆ. ಬೇಡುವಾಗಲೂ ಅವರು ಬೇಸತ್ತುಕೊಂಡೆ ಬೇಡುವರು. ಬೇಡಿ ಪಡೆದದ್ದನ್ನು ದುಗುಡದಿಂದಲೇ ಅನುಭವಿಸುವರು. ಊರಲ್ಲಿದ್ದರೂ ಅವರು ಕಾಡಿನಲ್ಲಿದ್ದಂತೆಯೆ ಎನಿಸುವುದು. ಮತ್ತೆ ಇದ್ದ ಅನುಕೂಲ ಮರೆಯಾಗಿ ಕೆಟ್ಟಕಾಲ ಬಂದರೆ ಇದು- ಅದು ಎಂಬ ಕಟ್ಟೇನು. ಅದರಲ್ಲಿ ಬಿಗುಮಾನವೇನು? ನೀರಲ್ಲಿಳಿದವನಿಗೆ ಚಳಿಯೇನು ಮಳೆಯೇನು? ಊರಿನ ಕಟ್ಟುಪಾಡು ಅವರ ಪಾಲಿಗೆ ಸಡಿಲವಾಗಿ ಜಾರಿದಂತೆ, ಅದರ ಅಗತ್ಯವೂ ಅವರಿಗೆ ಕಾಣಿಸದು. ಪ್ರಯೋಜನವಂತೂ ಇಲ್ಲವೇ ಇಲ್ಲವಷ್ಟೆ?

ಉಳ್ಳವರಿಗೇ ಊರು. ಇಲ್ಲದವರಿಗೆ ಊರಾದರೂ ಅದು ಕಾಡೇ.

ಗೋರ್ಕಲ್ಲ ಮೇಲೆ ಮಳೆ

'ಮೂರ್ಖನಿಗೆ ನೂರ್ಕಾಲ ಬುದ್ಧಿ ಹೇಳುವುದು ಗೋರ್ಕಲ್ಲ ಮೇಲೆ ಮಳೆಗರೆದಂತೆ' ಎಂಬ ಮಾತಿದೆಯಷ್ಟೆ?

ಮಳೆ ಬಿದ್ದರೆ ಭೂಮಿಗೆ ಹಿತ. ತಾಪ ಅಡಗುತ್ತದೆ. ಹಸಿರು ಮೂಡುತ್ತದೆ. ನೆಲ ಹಸನಾಗುತ್ತದೆ. ಬೆಳೆ ಬಿತ್ತಲು ಹದವಾಗಿರುತ್ತದೆ. ಬಿತ್ತಿದ ಬೆಳೆ ಪಯಿರಿಗೆ ಬರುತ್ತದೆ. ಮನುಷ್ಯನ ಬದುಕಿನಲ್ಲಿ ನೆಮ್ಮದಿಯನ್ನು ತರುತ್ತದೆ.

ಅದೇ ಮಳೆ ಬಂಡೆಯ ಮೇಲೆ ಬಿದ್ದಾಗ ಏನಾದೀತು? ಕಲ್ಲೇನು ಕರಗುವುದಿಲ್ಲ, ಹಸಿರಾಗುವುದಿಲ್ಲ. ಹಸಿರು ಮೂಡಲು ನೆರವಾಗುವುದಿಲ್ಲ.

ಬಂಡೆಯ ಮೇಲೆ ಮಳೆ ಗಂಟೆಗಟ್ಟಲೆ ಧಾರಕಾರವಾಗಿ ಧಾರಳವಾಗಿ ಸುರಿದರೂ, ನೀರೆಲ್ಲ ವ್ಯರ್ಥವೇ ತಾನೆ?

ಸಾವಿರಾರು ವರ್ಷ ಮಳೆ-ಗಾಳಿಗೆ ಒಡ್ಡಿದ ಬಂಡೆಯಲ್ಲಿ ಕೆಲವು ಮಾರ್ಪಾಟಾಗುವುದೇನೋ ಉಂಟು. ಮೇಲ್ಮೈ ನುಣುಪಾದೀತು. ಅಲ್ಲಲ್ಲಿ ಜೀವಿಗಳಿಗೆ ಆಸರೆಯಾದೀತು. ಆದರೆ ಈ ಮಾರ್ಪಾಟು ಜರುಗುವುದು ಭೂಶಾಸ್ತ್ರಜ್ಞರ ಎಣಿಕೆಯ ಕಾಲಮಾನದಲ್ಲಿ; ನಮ್ಮ ಎಣಿಕೆಯಲ್ಲಲ್ಲ. ಹೆಡ್ಡನ ಮುಂದೆ ಮಾಡಿದ ಉಪದೇಶವೆಲ್ಲ ಹೀಗೆಯೆ ವ್ಯರ್ಥ- ಎಂದು ಇಲ್ಲಿನ ತಾತ್ಪರ್ಯ. ಹೆಡ್ಡನ ತಲೆ ಬಂಡೆಯಂತೆ ಗಟ್ಟಿ; ಉಪದೇಶದಿಂದ ಮೆದುವಾಗುವಂಥದಲ್ಲ. ಕಿವಿಯೊಳಗೆ ಬಿದ್ದ ಯಾವ ಮಾತೂ ತಲೆಯೊಳಗೆ ಇಳಿಯದು. ಮತ್ತೆ ಮತ್ತೆ ಹಲವು ಬಗೆಗಳಲ್ಲಿ ತಿಳಿಯ ಹೇಳಿದರೂ ಯಾವ ಪ್ರಯೋಜನವೂ ಕಾಣಿಸದು. ಮೊದಲಿದ್ದಂತೆಯೇ ಮುಂದೂ! ತಿಳಿಯ ಹೇಳಿದವರ ಬಾಯಿ ಸೋತೀತಷ್ಟೆ; ಅವರ ಮನಸ್ಸಿಗೆ ನೋವಾದೀತು; ಬೇಸರವೊದಗೀತು. ಕೇಳಿದವನು ಮಾತ್ರ ಇದ್ದಂತೆಯೆ ಇದ್ದಾನು!

ಆದರೆ ಹೆಡ್ಡರು ಯಾರು? ಮನುಷ್ಯರೆಲ್ಲರೂ ಹೆಡ್ಡರೆ. ಋಷಿಮುನಿಗಳು ಬಂದಾಯಿತು, ಬುದ್ಧ-ಮಹಾವೀರರು ಬುದ್ಧಿ ಹೇಳಿಯಾಯಿತು. ಸಾಕ್ರಟೀಸ್ ಎಚ್ಚರಿಸಿದ್ದಾಯಿತು; ಯೇಸು ಉಪದೇಶಿಸಿದ್ದಾಯಿತು. ಗಾಂಧೀಜಿ ತಿಳಿಯ ಹೇಳಿ ತೀರಿಕೊಂಡಿದ್ದಾಯಿತು!

ನಾವೇನು ಬದಲಾಯಿಸಿದ್ದೇವೆಯೆ? ನಮ್ಮ ಸ್ವಭಾವವೇನು ಮಾರ್ಪಟ್ಟಿದೆಯೆ?

ಗಾಜಿನ ಮನೆಯವರು

ಗಾಜಿನ ಮನೆಯಲ್ಲಿ ವಾಸಮಾಡುವವರನ್ನು ಕುರಿತಂತೆ ಗಾದೆಯೊಂದಿದೆ ಯಲ್ಲವೆ? ಅವರು ನೆರೆಮನೆಯ ಮೇಲೆ ಕಲ್ಲನ್ನೆಸೆಯಬಾರದೆಂದು ಗಾದೆಯ ಕಿವಿಮಾತು.

ಸರಿಯೆ. ನಾವು ಪಕ್ಕದ ಮನೆಯ ಮೇಲೆ ಕಲ್ಲನ್ನು ತೂರಿದರೆ ಅವರು ಸುಮ್ಮನಿರುತ್ತಾರೆಯೆ? ನಮ್ಮ ಕಲ್ಲನ್ನು ನಮಗೇ ಹಿಂದಿರುಗಿಸುತ್ತಾರೆ. ಮತ್ತಷ್ಟು ಉತ್ಸಾಹದಿಂದ.

ನಮ್ಮದು ಗಾಜಿನ ಮನೆ. ಅವರದ್ದು ಹೆಂಚಿನದೋ ತಾರಸಿಯದೋ. ಕಲ್ಲು ಬೀರುವಾಗ ಯಾವ ಮನೆಗೆ ಆತಂಕ ಹೆಚ್ಚು? ನಮ್ಮ ಮನಗೇ ತಾನೆ? ಇದನ್ನು ಕಂಡುಕೊಳ್ಳುವ ಜಾಣತನ ಗಾಜಿನ ಮನೆಯವರಿಗಿರಬೇಕು. ಗಾದೆ ಹೇಳುವುದು ಇದನ್ನು.

ಗಾಜಿನ ಮನೆಯೆಂದರೆ ನಾಜೂಕಾದ ಶೀಲ; ನೆಲೆಗಾಣದ ನೀತಿ, ಬೇರೂರಿದ ಸಭ್ಯತೆ. ಬೇಗನೆ ಫಳ್ಳೆಂದು ಒಡೆದು ಚೂರುಚೂರಾಗಬಲ್ಲ ವ್ಯಕ್ತಿತ್ವ. ಪಕ್ಕದ ಮನೆಯವನ ತಪ್ಪು ಒಂದಿದ್ದು, ನಮ್ಮದು ಹತ್ತು ಎಂದಾದರೆ ಅವನ ತಪ್ಪನ್ನು ಎತ್ತಿ ಆಡುವುದು ಜಾಣತನವಲ್ಲ.

ಬೇರೆಯವರ ಲೋಪ-ದೋಷಗಳನ್ನು ಕಾಣಿಸುವಾಗ ನಾವು ತುಂಬ ಎಚ್ಚರದಿಂದಿರಬೇಕು. ನಮ್ಮಲ್ಲಿ ಯಾವೊಂದು ಲೋಪ-ದೋಷವೂ ಇರದು ಎಂದು ಮನದಟ್ಟುಮಾಡಿಕೊಂಡಮೇಲೆ, ನಮ್ಮ ಕಡೆ ಯಾವ ದೂರೂ ಬೊಟ್ಟಿಟ್ಟು ತೋರಲಾರದು ಎಂಬ ಧೈರ್ಯವಿದ್ದರೇನೇ, ಬೇರೆಯವರ ತಪ್ಪುಗಳನ್ನು ಎಣಿಸಿ ಕಾಣಿಸಬಹುದು.

ಆದರೆ ಈ ಧೈರ್ಯ ಯಾರಿಗಿರುತ್ತದೆ? ನಮ್ಮೆಲ್ಲ ಲೋಪ-ದೋಷಗಳೂ ನಮ್ಮ ಅರಿವಿಗೆ ಬಾರವಲ್ಲ! ಗುಲಗುಂಜಿಯ ಕಪ್ಪು ಕಾಣುವುದು ಬೇರೆಯವರಿಗೆ ತಾನೆ? ನಮ್ಮಲ್ಲಿ ಯಾವುದೂ ಕೊರತೆಯಿಲ್ಲ ಎಂದು ಹೇಳುವ ಎದೆಗಾರಿಕೆ ಇರುವುದು ಕಷ್ಟ; ಇದ್ದರೂ ಅದನ್ನು ಉಳಿಸಿಕೊಳ್ಳುವುದು ಕಷ್ಟ. ಹೀಗಿದ್ದಮೇಲೆ, ಬೇರೆಯವರನ್ನು ದೂರುವುದು ಯಾವ ಧೈರ್ಯದಿಂದ? ನಾವು ಬೀಸಿದ ಕಲ್ಲು ಇನ್ನಷ್ಟು ಬಿರುಸಿನಿಂದ ನಮ್ಮ ಕಡೆಗೇ ಬಂದರೆ ಮಾಡುವುದೇನು?

ಕಲ್ಲನ್ನು ಬೇರೆಯವರ ಮೇಲೆ ಬೀಸದಿರುವುದೇ ಜಾಣತನ.

ಸರಳ-ಜಟಿಲ

ಸರಳವಾಗಿರುವುದನ್ನು ಗೊಂದಲಕ್ಕೀಡುಮಾಡಿ ಜಟಿಲವಾಗಿ ಮಾಡುವುದು ಸುಲಭ; ಯಾರಾದರೂ ಅದನ್ನು ಮಾಡಿಯಾರು! ಆದರೆ ಜಟಿಲವಾಗಿರುವುದನ್ನು ಸರಳವಾಗಿಸುವುದು ಕಷ್ಟ; ಬಹುಮಂದಿ ಹಾಗೆ ಮಾಡಲು ಅಂಜುತ್ತಾರೆ.

ಗೊಂದಲವೆಂದರೆ ಹಲವಾರು ವಿವರಗಳು ಕಲೆತು, ಒಂದಕ್ಕೆ ಇನ್ನೊಂದರ ನಂಟು ಸ್ಪಷ್ಟವಾಗದೆ, ಗೋಜಾಗಿರುವುದು; ಎಳೆಗಳು ಬೇರೆ ಬೇರೆ ಬರಲಾರವು; ಬಿಡಿಸುವುದು ಕಷ್ಟ. ಹಾಗೆ ಎಳೆಗಳನ್ನು ಬಿಡಸಲಾರದೆ ಹೋದರೆ ಅದರ ತಾತ್ಪರ್ಯವೇ ತಿಳಿಯುವುದಿಲ್ಲ. ತಾತ್ಪರ್ಯ ತಿಳಿಯಲಾರದೆ ಅದರೊಂದಿಗೆ ವ್ಯವಹಾರ ಮಾಡುವುದು ಹೇಗೆ? ಎಳೆಗಳನ್ನು ಬಿಡಿಸಬೇಕೆಂದರೆ ಎಚ್ಚರ ಇರಬೇಕು, ತಾಳ್ಮೆ ಬೇಕು, ಜಾಣತನ ಬೇಕು, ಬಿಡಿಸಲೇಬೇಕೆಂಬ ನಿಶ್ಚಯವೂ ಇರಬೇಕು. ಬೇಸರಪಟ್ಟರೆ ಕೆಲಸ ಹಾಳು; ಗೊಂದಲ ಇನ್ನಷ್ಟು ಗೋಜಾಗುತ್ತದೆ. ಎಚ್ಚರ ತಪ್ಪಿದರೆ ಎಳೆಗಳು ಕಡಿದೇ ಹೋದಾವು!

ಸಹಜವಾಗಿಯೇ ಯಾವುದೂ ಜಟಿಲವಾಗಿರುವುದಿಲ್ಲ; ಸ್ವಭಾವದಲ್ಲಿ ಎಲ್ಲವೂ ಸರಳವೇ. ಮನುಷ್ಯನ ಕೈವಾಡದಿಂದ, ಕುಟಿಲದಿಂದ, ಕುಬುದ್ಧಿಯಿಂದ ಜಟಿಲವಾಗುತ್ತದೆ. ಏನಾದರೂ ಗೊಂದಲವೇರ್ಪಡುತ್ತದೆ. ನೇರವಾಗಿದ್ದದ್ದು ವಕ್ರವಾಗುತ್ತದೆ. ವಕ್ರವಾಗಿದ್ದುದು ಒಡೆಯುತ್ತದೆ. ಗೋಜಾದುದನ್ನು ಬಿಡಿಸುವುದು ಎಲ್ಲರಿಗೂ ಸಾಧ್ಯವಿಲ್ಲ. ಆದರೆ ಬಿಡಿಯಾಗಿರುವ ಎಳೆಗಳನ್ನು ಗೋಜುಮಾಡುವುದು ಮಗುವಿಗೂ ಸಾಧ್ಯ . ಕೆಲವರಿಗೆ ಗೋಜುಮಾಡುವುದರಲ್ಲೇ ಮೋಜು; ಸರಳವಾಗಿದ್ದರೆ ಏನೋ ಕಸವಿಸಿ.

ಕೆಲವರ ಭಾಷಣವನ್ನು ಕೇಳಿದರೆ ಇದು ತಿಳಿಯುತ್ತದೆ. ಸರಳವಾಗಿ ಹೇಳುವುದೆಂದರೆ ಅವರಿಗೆ ಆಗದು; ತಾನಾಗಿ ಸರಳವಾದ ವಿಷಯವನ್ನೂ ಆದಷ್ಟು ತೊಡಕುಮಾಡಿ, ಕೇಳುವವರ ನಿಲುವಿಗೆ ಮೀರಿದುದೆಂದು ಮನವರಿಕೆ ಮಾಡಿಕೊಟ್ಟರೆ ಇವರಿಗೆ ಸಮಾಧಾನ! ಭಾಷಣ ಚೆನ್ನಾಗಿತ್ತು, ಆದರೆ ಹೇಳಿದ್ದು ತಿಳಿಯಲಿಲ್ಲ ಎನ್ನುವಂತಾಗಬೇಕು! ಮತ್ತೆ ಕೆಲವರು ಕ್ಲಿಷ್ಟವಾದ ವಿಷಯಗಳನ್ನೂ ಸರಳವಾಗಿ, ಎಳೆ ಎಳೆಯಾಗಿ ಬಿಡಿಸಿ, ಎಲ್ಲರಿಗೂ ತಿಳಿಯುವಂತೆ ಹೇಳುತ್ತಾರೆ.

ವಿಷಯವನ್ನು ಚೆನ್ನಾಗಿ ಬಲ್ಲವರು ತಿಳಿಯಾಗಿಯೇ ಹೇಳುತ್ತಾರೆ; ತಾವೇ ತಿಳಿಯದಿದ್ದಾಗ ಹೇಳುವುದು ಜಟಿಲವಾಗುತ್ತದೆ. ಎಲ್ಲರಿಗೂ ತಿಳಿದುಬಿಟ್ಟರೆ ಹೇಗೆ ಎಂಬ ಆತಂಕವೂ ಕೆಲವರಿಗಿರುವುದುಂಟೆನ್ನಿ.

ಗುಣ-ದೋಷ

ಏನೊಂದು ದೋಷವಿಲ್ಲದ ಮನುಷ್ಯನನ್ನು ಕಾಣಬೇಕೆಂದು ಹೊರಟರೆ ನಿರಾಶೆ ಕಟ್ಟಿಟ್ಟ ಬುತ್ತಿ. ಅಂಥ ಮನುಷ್ಯ ಹಿಂದೆ ಎಂದೂ ಇರಲಿಲ್ಲ; ಮುಂದೆ ಬರಲಾರ; ಈಗಂತೂ ಅಂಥವನನ್ನು ಕಾಣಲಾರೆವು.

ಎಂಥ ಉತ್ತಮನಾದ ಮನುಷ್ಯನೆಂದರೂ, ಎಷ್ಟು ಶ್ರೇಷ್ಠವಾದ ವಸ್ತುವೆಂದರೂ ದೋಷ ಇಲ್ಲವೇ ಇಲ್ಲವೆಂದರ್ಥವಲ್ಲ; ಗುಣಗಳು ಹೆಚ್ಚಾಗಿವೆ ಎಂದಷ್ಟೇ ತಾತ್ಪರ್ಯ. ಗುಣಗಳು ಎದ್ದು ಕಾಣುವಂತಿದ್ದರೆ ಅವಕ್ಕೆ ಮಾರುಹೋಗುತ್ತೇವೆ; ಆಗ ಇರಬಹುದಾದ ದೋಷಗಳು ಹಿಂದೆ ಸರಿದು ನಿಲ್ಲುತ್ತವೆ, ಕಣ್ಣು ಕುಕ್ಕುವುದಿಲ್ಲ. ದೋಷಗಳೇ ಹೆಚ್ಚಾಗಿ ಕಂಡುಬಂದರೆ ಸರಿಯೇ ಸರಿ. ದೂರುವುದು ಇದ್ದದ್ದೇ. ಆದರೆ ಅಲ್ಲಿ ಗುಣಗಳೇ ಇಲ್ಲವೆಂದಲ್ಲ, ಇರಬಹುದಾದ ಗುಣಗಳು ದೋಷಗಳಲ್ಲಿ ಮುಚ್ಚಿಹೋಗುತ್ತವೆ.

ಇನ್ನೂ ಒಂದು ವಿಚಾರ, ನೋಡುವವರ ಕಣ್ಣಿರುವಂತೆ ವಸ್ತು ಕಾಣಿಸುತ್ತದೆ. ಗುಣಗಳನ್ನು ಅರಸುವವರಾದರೆ ಗುಣಗಳೇ ಕಾಣಿಸುತ್ತವೆ; ದೋಷವನ್ನೇ ಹುಡುಕುವವರಿಗೆ ಕಾಣುವುದು ದೋಷಗಳೇ. ಗುಣಗಳೂ ದೋಷಗಳೂ ಒಟ್ಟಿಗೇ ಇರುತ್ತವೆ; ಒಂದೇ ವಸ್ತುವಿನಲ್ಲಿ, ಒಬ್ಬನೇ ವ್ಯಕ್ತಿಯಲ್ಲಿ ಇರುತ್ತವೆ. ಆದರೆ ಒಟ್ಟಿಗೆ ತೋರಿಕೊಳ್ಳುವುದಿಲ್ಲ; ಅವರವರ ಒಲವಿದ್ದಂತೆ ನೋಟ, 'ಹರಿಯ ಭಕ್ತರಿಗೆ ಹರಿ, ಹರನ ಭಕ್ತರಿಗೆ ಹರ'

ಯಾವೊಬ್ಬ ವ್ಯಕ್ತಿಯನ್ನು ಮೆಚ್ಚಿಕೊಂಡವರಿಗೆ ಅವನ ಗುಣಗಳು ಆಕರ್ಷಕವಾಗಿರುತ್ತವೆ. ಇದು ಸಹಜವೇ. ಆದರೆ ತಾನು ಮೆಚ್ಚಿಕೊಂಡವನನ್ನೇ ಎಲ್ಲರೂ ಮೆಚ್ಚಿಕೊಳ್ಳಬೇಕೆಂದು ಹಟ ಹಿಡಿದರೆ ಹೇಗೆ? ಅಥವಾ ಅವನಲ್ಲಿ ದೋಷದ ಗಾಳಿಗಂಧವೂ ಇರದು ಎಂದು ಸಾಧಿಸಹೊರಟರೆ ಹೇಗೆ?

ದೋಷವಿರುವುದನ್ನು ಕಂಡುಕೊಂಡ ಮಾತ್ರಕ್ಕೆ ಗುಣಗಳ ಮೇಲಿರುವ ಗೌರವ ಕಡಮೆಯಾಗಬೇಕಾದುದಿಲ್ಲ. ದೋಷವಿದ್ದರೂ ಚಿಂತೆಯೇನಿಲ್ಲವಲ್ಲ? ದೋಷವಿದ್ದಲ್ಲಿ ಗುಣ ಗಣನೀಯವಲ್ಲ ಎಂದು ಹೇಳಬಹುದೆ? ಗುಣವಿದ್ದಲ್ಲಿ ದೋಷವನ್ನು ಕಾಣಬಾರದು ಎಂದೂ ಹೇಳುವಹಾಗಿಲ್ಲ. ಇದು ಗುಣ, ಇದು ದೋಷ ಎಂದು ಕಾಣುವ ಎಚ್ಚರವಿರಬೇಕು. ಬೆಂಕಿ ಉರಿಯುವಾಗ ಬೆಳಕೂ ಬರುತ್ತದೆ, ಬಿಸಿಯೂ ಇರುತ್ತದೆ. ಒಂದು ಬೇಡ, ಇನ್ನೊಂದು ಬೇಕು ಎಂದರೆ ಹೇಗೆ?

ನಾಯಿ ಕಚ್ಚಿದರೆ

ನಾವು ಒಳ್ಳೆಯವರಾಗಿರಬೇಕು, ದಿಟ. ಆದರೆ ಎಲ್ಲರಿಗೂ ಒಳ್ಳೆಯವರಾಗಿರುವುದು ಸಾಧ್ಯವೆ? ಹೋಗಲಿ, ಅದು ಅಗತ್ಯವೂ ಹೌದೋ? ಇದೊಂದು ತಾತ್ತ್ವಿಕ ಪ್ರಶ್ನೆಯೆಂದು ಕೈ ಬಿಡುವ ಹಾಗಿಲ್ಲ. ಇದು ನಮ್ಮ ನಿತ್ಯಜೀವನದಲ್ಲಿ ನಮ್ಮನ್ನು ಎದುರಿಸುವ ಸಮಸ್ಯೆ.

ಒಳ್ಳೆಯವರೂ ಇರುತ್ತಾರೆ, ಕೆಟ್ಟವರೂ ಇರುತ್ತಾರೆ. ಕೆಟ್ಟವರಿಗೆ ಒಳ್ಳೆಯವರನ್ನು ಹಿಂಸಿಸುವುದು ಸುಲಭ; ಮತ್ತೆ ಮತ್ತೆ ಕಾಡಿಸುತ್ತಾರೆ. ಹೀಗೆ ಕೆಟ್ಟವರ ಕಾಟದಿಂದ ಬವಣೆಗೊಂಡ ಒಳ್ಳೆಯವರು ಮಾಡಬೇಕಾದುದೇನು?

'ಶಠಂ ಪ್ರತಿ ಶಾಠ್ಯಂ' ಎಂಬ ಮಾತೇನೋ ಇದೆ. ಒಳ್ಳೆಯವರಿಗೆ ಒಳ್ಳೆಯವ ರಾಗಿಬೇಕು; ಕೆಟ್ಟವರಿಗೆ ಕೆಟ್ಟವರೇ ಆಗಿರಬೇಕು, ಎಂಬುದು ಈ ಮಾತಿನ ಇಂಗಿತ. ಇದೊಂದು ದಾರಿ. ಬಹುಜನರು ಇದನ್ನೇ ಹಿಡಿಯುತ್ತಾರೆನ್ನಿ. ಆದರೆ ಇದರಿಂದ ಒಳ್ಳೆಯವರಿಗಾಗಲಿ ಕೆಟ್ಟವರಿಗಾಗಲಿ ಆಗುವ ಪ್ರಯೋಜನವೇನು? ಕೆಟ್ಟವರು ಒಳ್ಳೆಯವರಾಗುವ ಸಂಭವ ಕಡಮೆ; ಒಳ್ಳೆಯವರು ಕೆಟ್ಟವರಾದದ್ದೇ ಫಲ!

ಒಳ್ಳೆಯವರಾದರೂ ಒಳ್ಳೆಯವರಾಗಿಯೇ ಉಳಿದರೆ ವಾಸಿ ಎಂಬ ಕಾರಣದಿಂದಲೇ ಕೆಟ್ಟವರಿಗೂ ಒಳ್ಳೆಯದನ್ನೇ ಮಾಡಬೇಕೆಂದು ಬುದ್ಧನಾಗಲಿ ಏಸುವಾಗಲೀ ಹೇಳಿದುದು. ಅದನ್ನೇ ಕವಿಯೊಬ್ಬ ಮಾರ್ಮಿಕವಾಗಿ ಹೇಳಿದ:

"ನಾಯ್ ಕರ್ಚೆ
ಮಗಳ್ದು ಕರ್ಚುವರೆ?"

ನಾಯಿ ನಮ್ಮನ್ನು ಕಚ್ಚಿತೆಂದರೆ ನಾಯನ್ನು ನಾವು ಕಚ್ಚುವುದುಂಟೆ? ಹಾಗೆ ಕಚ್ಚಿದರೆ ನಮಗಾಗಲಿ ನಾಯಿಗಾಗಲಿ ಪ್ರಯೋಜನವಾಗುವುದಿದೆಯೆ? ನಾಯಿಗಾಗುವ ಗಾಸಿ ಕಡಮೆ. ನಮಗಾಗುವುದು ಹೆಚ್ಚಿನದು!

ನಾವು ನಾಯಿಗೆ ಅಂಜಬೇಕು, ನಾಯಿ ನಮಗೆ ಅಂಜುವುದಿಲ್ಲ ಅಲ್ಲವೆ? ಕಚ್ಚುವುದು ನಾಯಿಯ ಸ್ವಭಾವವೇ ವಿನಾ ನಮ್ಮ ಕೆಲಸವಲ್ಲ.

ಹಾವು-ಹುತ್ತ

'ಗೆದ್ದಲು ಮನೆಯ ಮಾಡೆ, ಸರ್ಪಂಗೆ ಇಂಬು' ಇದೊಂದು ಗಾದೆ. ಅದನ್ನು ಬಳಸುವ ಸಂದರ್ಭ— ಕಷ್ಟಪಟ್ಟು ದುಡಿದವರು ಯಾರೋ, ಅದರ ಸುಖವನ್ನು ಅನುಭವಿಸುತ್ತಿರುವವರು ಯಾರೋ, ಎಂದು.

ಗೆದ್ದಲು ಹುಳುಗಳು ಸಾವಿರಾರು ಕಲೆತು ಒಂದೊಂದೂ ಹೆಣಗಾಡಿದ ಮೇಲೆಯೇ ಗೂಡು ಮೇಲೇಳುವುದು. ಗೂಡಿನ ಒಂದೊಂದು ಮಣ್ಣು ಕಣವನ್ನೂ ಗೆದ್ದಲು ಹುಳು ಎತ್ತಿ, ಹೊತ್ತು ತಂದು ಕೂಡಿಸಬೇಕು.

ಹುತ್ತವೆಂದು ಸಿದ್ಧವಾದೊಡನೆ ಎಲ್ಲಿಂದಲೊ ಹಾವೊಂದು ಬಂದು ಅದನ್ನು ತನ್ನ ಮನೆಯನ್ನಾಗಿ ಮಾಡಿಕೊಂಡು ಬಿಡುತ್ತದೆ. ಗೆದ್ದಲು ಹುಳುಗಳು ಅಲ್ಲಿಂದ ಕಾಲು ಕಿತ್ತು ಬೇರೊಂದೆಡೆ ಸರಿಯಬೇಕು. ಅಲ್ಲಿಯೂ ಅದೇ ಪಾಡೆನ್ನಿ!

ಲೋಕದಲ್ಲಿ ಈ ಬಗೆಯ ವ್ಯವಹಾರವನ್ನು ಎಲ್ಲೆಲ್ಲೂ ಕಾಣಬಹುದು. ಹಲವರು ಬೆವರು ಸುರಿಸಿ ದುಡಿದ ಮೇಲೆ, ಅದರ ಫಲವಾಗಿ ತೋರಿಕೊಂಡ ಸುಖವನ್ನುಣ್ಣಲು ಒಬ್ಬಿಬ್ಬರು ಮುಂದೆ ಬರುತ್ತಾರೆ.

ಕಷ್ಟಪಡುವವರು ಹಲವರು; ಆ ಕಷ್ಟದ ಫಲವನ್ನು ಹಾಯಾಗಿ ಕೂತು ಅನುಭವಿಸುವವರು ಕೆಲವರು. ಕಷ್ಟಪಟ್ಟರೆ ಸುಖವುಂಟು ಎಂಬ ಮಾತೇನೋ ದಿಟವೇ. ಆದರೆ ಕಷ್ಟಪಟ್ಟವರಿಗೇ ಸುಖ ಎಂಬ ನಿಯಮವಿದೆಯೆ?

ಸುಖಕ್ಕೆ ಕಾರಣವಾಗುವ ಕಷ್ಟದ ಪರಿ ಹೀಗೆ. ಒಳ್ಳೆಯ ಕೆಲಸವನ್ನು ಹತ್ತಾರು ಮಂದಿ ಕೂಡಿಕೊಂಡು ಕಷ್ಟಪಟ್ಟು ಮಾಡಬೇಕು; ಇತರರಿಗೆ ಅದರಿಂದ ಹಿತವಾದೀತು. ಗೆದ್ದಲೇ ಹುತ್ತವನ್ನು ಕಟ್ಟಬೇಕು; ಹಾವಿಗೆ ಅದು ಸಾಧ್ಯವೆ?

ಆದರೆ ಕೆಟ್ಟ ಕೆಲಸವಾದರೆ ಒಬ್ಬ ಮಾಡಿದರೆ ಸಾಕು, ಅದರ ಫಲವನ್ನು ಎಲ್ಲರೂ ಅನುಭವಿಸಿಯಾರು. 'ಕೆಡುಕನಿಗೆ ಕೆಟ್ಟ ಕೆಲಸ ಮಾಡುವುದರಲ್ಲೆ ಸುಖ; ಅದರಿಂದ ಕಷ್ಟ ಬರುವುದು ಅವನಿಗಿಂತಲೂ ಇತರರಿಗೇ ಹೆಚ್ಚು.

ನಮ್ಮ ಆರ್ಥಿಕ ವ್ಯವಸ್ಥೆ ಸಾಮಾಜಿಕ ಸಂವಿಧಾನಗಳಲ್ಲೂ ಈ ಗಾದೆಯ ಸ್ವಾರಸ್ಯವನ್ನು ಕಂಡುಕೊಳ್ಳಬಹುದು. ಶೋಷಣವೆಂಬ ಪ್ರವೃತ್ತಿಗೆ ಹಂದರವಾಗುವುದು ಹಲವರ ಪ್ರಾಮಾಣಿಕ ದುಡಿಮೆಯೆ.

ಅಣುಬಾಂಬಿನ ಕಲ್ಪನೆಗೆ ಕಾರಣರಾದವರು ಐನ್‌ಸ್ಟೈನಿನಂಥ ಸಜ್ಜನ ವಿಜ್ಞಾನಿಗಳೇ, ಲೋಕ ಹಿತೈಷಿಗಳೇ. ಆದರೆ ಅದನ್ನು ಬಳಸಿಕೊಂಡವರು ಲೋಕಕಂಟಕರು.

ಹೆಂಡ-ಹಣ

ಹೆಂಗಸು, ಹೆಂಡ, ಹಣ ಇವು ಮೂರೂ 'ಸುರೆ'ಗಳಂತೆ.

ಸುರೆಯೆಂದರೆ ಮತ್ತು ಹಿಡಿಸುವ ಪದಾರ್ಥ; ಬುದ್ಧಿಯನ್ನು ಕೆಡಿಸುವುದು, ವಿವೇಕವನ್ನು ಹಾಳುಮಾಡುವುದು, ಮತ್ತೆ ಮತ್ತೆ ಬೇಕೆನಿಸುವುದು.

ಮೊದಲನೆಯಧನ್ನು ಕಂಡರೇ ಸಾಕು; ಎರಡನೆಯದನ್ನು ಕುಡಿಯಬೇಕು; ಮೂರನೆಯದನ್ನು ಕೂಡಿಡಬೇಕು. ಆಗ ಸುರೆಯ ಕೆಲಸ ನಡೆಯುತ್ತದೆ.

ಹಳೆಯ ಸಂಸ್ಕೃತ ಶ್ಲೋಕದಲ್ಲಿ ಬಂದಿರುವ ಈ ಮಾತಿನಲ್ಲಿ ಹೆಂಗಸನ್ನು ಹೆಂಡದೊಂದಿಗೆ ಹಣದೊಂದಿಗೆ ಕೂಡಿಸಿರುವುದನ್ನು ನಾವೇನು ಮೆಚ್ಚಲಾರೆವು. ನೀತಿಗೆಟ್ಟ ಹೆಂಗಸು ಎಂದು ಸಂಕುಚಿತಾರ್ಥವನ್ನು ಹಿಡಿಯಬೇಕೋ ಏನೋ. ಸುಭಾಷಿತವನ್ನು ರಚಿಸಿದವನು ಗಂಡಸು; ಹೆಂಗಸು ಬರೆದಿದ್ದರೆ ಮೊದಲನೆಯ ಮಾತು ಏನಾಗುತ್ತಿದ್ದಿತೋ ತಿಳಿಯದು.

ಮೊದಲನೆಯದನ್ನು ಕೈಬಿಡೋಣ. ಉಳಿದೆರಡರ 'ಸುರೆತನ'ವಂತೂ ಎಲ್ಲರಿಗೂ ತಿಳಿದದ್ದು ಎನ್ನೋಣವೆ?

ಹೆಂಡ ಮತ್ತು ಹಿಡಿಸುವುದೇ ತಾನೆ? ಕುಡಿಯುವವರು ಕುಡಿಯುವುದೂ ಅದಕ್ಕೆಂದೇ. ಮತ್ತು ಬಾರದಿದ್ದರೆ ಹೆಂಡವೇಕೆ? ದುಃಖವನ್ನು ಮರೆಯಬೇಕು, ಕಷ್ಟವನ್ನು ತಲೆಯಿಂದ ಓಡಿಸಬೇಕು, ಆತಂಕವನ್ನು ಅಡಗಿಸಬೇಕು ಎಂದಲ್ಲವೇ ಕುಡಿಯುವುದು? ಅದೇನೊ ಎಲ್ಲರಿಗೂ ತಿಳಿದದ್ದೆ. ಆದರೆ ಮೂರನೆಯದು ಹೆಂಡದಂತೆಯೇ ಎನ್ನುವುದು ಹೇಗೆ? ಸುಭಾಷಿತದ ಸ್ವಾರಸ್ಯವೇ ಅದು, ಹಣ ಕೂಡಿಟ್ಟುಕೊಳ್ಳುವುದನ್ನೂ ಹೆಂಡ ಕುಡಿಯುವುದನ್ನೂ ಒಂದೇ ನೆಲೆಯಲ್ಲಿ ಕಾಣಿಸಿದೆ! ಅವೆರಡರ ಗೋತ್ರ ಒಂದೆ ಎಂಬುದನ್ನು ಬಹುಮಂದಿ ಅರಿಯರು. ಹಣವನ್ನು ಕೂಡಿಡುವುದೂ ಒಂದು ಚಟ. ಹಣದ ಅಮಲಿನಲ್ಲಿ ತಾನು ಮಾಡಬೇಕಾದುದೇನು ಮಾಡಬಾರದುದೇನು ಎಂಬ ವಿವೇಕ ದೂರ ಸರಿಯುತ್ತದೆ. ತಾನು ಹಣವಿರುವವನು ಎಂಬ ಮತ್ತಿನಲ್ಲಿ ಬುದ್ಧಿಯನ್ನು ಬಳಸಬೇಕಾದ ಅಗತ್ಯ ಕಾಣದೆ ಅದು ಸೊರಗುತ್ತದೆ.

ಹೊರಗಣ ವಾಸ್ತವಿಕತೆಯನ್ನು ಅರಿಯದಿರುವಂತೆ ಮಾಡುವುದು ಸುರೆ ಯೆಂದಾದರೆ, ಹಣದ ಗಳಿಕೆಯ ಗೀಳಿಗಿಂತ ಹೆಚ್ಚಿನ ಸುರೆಯಿರದು, ಎಷ್ಟು ಹಣವಿದ್ದರೂ ಇನ್ನೂ ಮತ್ತೂ ಗಳಿಸಬೇಕೆಂಬ ಹಂಬಲ ಹೆಂಡ ಕುಡಿಯುವ ವ್ಯಸನದಂತೆಯೆ.

ತೆರಿಗೆ-ದಾನ

ಆಳುವ ಅರಸರು ಕಾರಣವಿಲ್ಲದೆ ಯಾರನ್ನಾದರೂ ಇಷ್ಟು ಹಣ ತೆರಬೇಕೆಂದು ನಿರ್ಬಂಧ ಮಾಡಿದರೆ, ಅವರು ಕೇಳಿದಷ್ಟು ಹೊನ್ನನ್ನು ಮರುಮಾತಿಲ್ಲದೆ ತೆರುತ್ತಾರೆ. ಅದೇ ಬೇರೆಯವರಿಗೆ ನೆರವಾಗುವಂತೆ ಏನಾದರೊಂದು ದಾನವನ್ನು ನಿಮ್ಮ ಇಚ್ಛೆಯಿಂದಲೆ ಮಾಡಿರೆಂದರೆ ಒಂದು ಅಕ್ಕಿಯ ಕಾಳನ್ನೂ ನೀಡುವುದಿಲ್ಲ.

ಇದು ಲೋಕಸ್ವಭಾವ, ಬಾಳಿನಲ್ಲಿ ಜಾಣತನವೆಂದರೆ ಮುಂದಿನ ಕಷ್ಟವನ್ನು ತಪ್ಪಿಸಿಕೊಳ್ಳುವುದು.

ತೆರಿಗೆ ಕೊಡದಿದ್ದರೆ ಬಿಡುತ್ತಾರೆಯೆ? ಸುಂಕದವನ ಮುಂದೆ ಸುಖದುಃಖ ಹೇಳಿಕೊಂಡರೆ, ಅವನು ಕಂಕುಳಲ್ಲಿರುವುದೇನು ಎಂದು ಕೇಳಿದನಂತೆ. ಕೊಡದೆ ಬವಣೆಪಡುವುದಕ್ಕಿಂತ, ಕೊಟ್ಟು ನಿರಾಳವಾಗಿರುವ ಉಪಾಯ. ಕೊಡುವಾಗ ಬೇಗುದಿಯೇ ಎನ್ನಿ.

ಹೀಗೆ ಹೊರಗಿನ ಒತ್ತಡವಿದ್ದಾಗ, ನಿರ್ಬಂಧವಿದ್ದಾಗ ನಾವು ಕೈ ಬಿಟ್ಟು ಕೊಡುವುದನ್ನು ಧರ್ಮವೆನ್ನಬಹುದೆ? ಅದು ದಾನವಾದೀತೆ? ದರೋಡೆಕೋರರು ಬಂದು ಕತ್ತು ಹಿಡಿದು, ಇದ್ದುದನ್ನು ಕೊಡೆಂದರೆ ಹಿಂದೆಮುಂದೆ ನೋಡದೆ, ಮಾತನಾಡದೆ ಕೊಟ್ಟು ಬಿಡುತ್ತೇವೆ, ಜೀವವಾದರೂ ಉಳಿಯಲೆಂಬ ಆಸೆಯಿಂದ. ಇದು ದಾನವೂ ಅಲ್ಲ, ಧರ್ಮವೂ ಅಲ್ಲ. ಅದರಿಂದ ಪುಣ್ಯ ಬಂದೀತೆಂಬ ಎಣಿಕೆ ಯಾರಿಗಾದರೂ ಇರುತ್ತದೆಯೆ? ಅದು ಸದ್ಗತಿಗೆ ದಾರಿಯಾಗುವುದೆಂದು ಯಾರು ಹೇಳುತ್ತಾರೆ? ಮನಸ್ಸಿಲ್ಲದೆ ಮಾಡುವುದು ಧರ್ಮ ಆಗಲಾರದು; ಬೇರೆಯವರ ನಿರ್ಬಂಧಕ್ಕೆ ಮಾಡುವುದೂ ಧರ್ಮವಲ್ಲ, ದಾನವಲ್ಲ. ಮುಂದೆ ಬರಬಹುದಾದ ಕಷ್ಟಕ್ಕೆ ಅಂಜಿ, ಅದನ್ನು ತಪ್ಪಿಸಿಕೊಳ್ಳುವ ಸಲುವಾಗಿ ತೆರುವ ತೆರಿಗೆ, ಹೊನ್ನು, ಒಡವೆ ಇವು ದಾನಧರ್ಮದ ಚೌಕಟ್ಟಿನಲ್ಲಿ ಸೇರುವುದಿಲ್ಲ. ಏಕೆಂದರೆ ಮನಸಾರೆ ನೀಡಿದವಲ್ಲ ಅವು. ಕೈಯಾರೆ ನೀಡಿದರೆ ಸಾಲದು, ಮನಸಾರೆಯೂ ಆಗಿರಬೇಕು. ಸ್ವಂತ ಇಚ್ಛೆಯಿಂದ, ಒಳಗಿನ ಒತ್ತಡದಿಂದ ನೀಡಿದಾಗ ಅದರ ಫಲ ದೊಡ್ಡದು.

ಕಷ್ಟದಲ್ಲಿರುವವರಿಗೆ ನೆರವಾಗುವ, ಬಡವರಿಗೆ ಊರುಗೋಲಾಗುವ, ಜನರ ಸಂತೋಷಕ್ಕೋ ನೆಮ್ಮದಿಗೋ ಕಾರಣವಾಗುವ ದಾನವನ್ನು ತಾವು ಅರಿತು, ಆದರದಿಂದ ನೀಡಬೇಕು. ಇದು ಧರ್ಮದ ನೆಲೆ; ನಮ್ಮ ಹಿತವನ್ನೂ ಲೋಕಹಿತವನ್ನೂ ಒಟ್ಟಿಗೆ ಸಾಧಿಸಿಕೊಳ್ಳುವ ಹವಣಿಕೆ ಅದು.

ಯುವ-ಶಕ್ತಿ

ಯುವಜನರಿಗೆ ದೆಶೆ. ಎಲ್ಲಿಯೂ ಯುವಜನ, ಯುವಶಕ್ತಿ, ಯುವತ್-ಮೊದಲಾದ ಮಾತುಗಳೇ ಕೇಳಿಬರುತ್ತವೆ.

ಯುವಜನರನ್ನು ಎಚ್ಚರಿಸುವ ಹವಣಿಕೆ ಕೆಲವರದ್ದು, ಯುವಶಕ್ತಿಯನ್ನು ಬಳಸಿಕೊಳ್ಳುವ ಹೊಂಚು ಹಲವರದ್ದು. ಯುವಜನರೇ ದೇಶದ ಆಸ್ತಿ, ನಾಡಿನ ಭರವಸೆ, ರಾಷ್ಟ್ರದ ನಿರೀಕ್ಷೆ ಎಂದೆಲ್ಲ ವೇದಿಕೆಯ ಘೋಷಣೆ. ಆದರೆ ಈ ಯುವಜನರು ಯಾರು? ಯುವಶಕ್ತಿ ಯಾವುದು? ವಯಸ್ಸೇ ಮುಖ್ಯವಾಗಿ ಮಾನದಂಡ ಎಂದರೆ, ಅದರಲ್ಲಿ ಒಮ್ಮತವಿರದು, ಇಪ್ಪತ್ತರಿಂದ ನಲವತ್ತರವರೆಗೆ ಎನ್ನೋಣವೆ? ಹದಿನೈದರಿಂದ ಮೂವತ್ತರವರೆಗೆ ಎನ್ನೋಣವೆ?

ಬಾಲ್ಯ ಕಳೆದು ಪ್ರೌಢಾವಸ್ಥೆಯನ್ನು ಮುಟ್ಟಿ ಇನ್ನೂ ವೃದ್ಧಾಪ್ಯದಲ್ಲಿ ಅಡಿಯಿರಿಸುವ ಮುನ್ನ ಯುವಾವಸ್ಥೆ ಎನ್ನೋಣ.

ಅದಕ್ಕೆ ಮೊದಲು ಬದುಕಿನ ಸಿದ್ಧತೆ; ಅದಾದನಂತರ ಸಾವಿಗೆ ಸಿದ್ಧತೆ. ನಡುವಣ ಕಾಲ ತಾರುಣ್ಯದ್ದು. ಇದರ ಮುಖ್ಯ ಲಕ್ಷಣ ಉತ್ಸಾಹ, ಸಾಮರ್ಥ್ಯ.

ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಉತ್ಸಾಹವಿರಬೇಕು. ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವಿರಬೇಕು, ನಿಜ. ಆದರೆ ಇಷ್ಟಿದ್ದರೆ ಸಾಕೆ? ಜೊತೆಗೆ ವಿವೇಕವೂ ಇದ್ದರೆ ಚೆನ್ನು. ವಿವೇಕವನ್ನು ಯುವಜನರಲ್ಲದವರಿಂದ (ಎಂದರೆ ಮುದುಕರಿಂದ, ಎಂದರೆ ಉತ್ಸಾಹ, ಸಾಮರ್ಥ್ಯಗಳಿಲ್ಲದವರಿಂದ) ಪಡೆದುಕೊಳ್ಳಬೇಕೆಂದು ರಾಜಕಾರಣಿಗಳ ಎಣಿಕೆ.

ಯುವಶಕ್ತಿಯನ್ನು ವೃದ್ಧ 'ವಿವೇಕಿ' ಗಳು ಬಳಸಿಕೊಳ್ಳುವ ತಂತ್ರ ಇದು ಎಂಬ ಸಂದೇಹ ಒದಗುವುದು ಸಹಜ. ಯುವಾವಸ್ಥೆ ಕಳೆಯಿತೆಂಬಷ್ಟು ಕಾರಣದಿಂದಲೆ ವಿವೇಕ ಒದಗಿಬರುತ್ತದೆಯೆ? ಮೇಲಾಗಿ, ಉತ್ಸಾಹಿಗಳು, ವಿವೇಕಿಗಳು ಎಂಬುದೆರಡೇ ಇರುವುದಿಲ್ಲವೆ? ಎರಡರಲ್ಲಿ ಯಾವುದೂ ಇಲ್ಲದವರಂತೂ ಇದ್ದಾರೆ!

ಉತ್ಸಾಹಕ್ಕಾಗಲಿ ವಿವೇಕಕ್ಕಾಗಲಿ ವಯಸ್ಸು ಕಾರಣವಲ್ಲ,

ಯುವಜನಕ್ಕೆ ಉತ್ಸಾಹವೂ ವಿವೇಕವೂ ಜೊತೆಜೊತೆಯಾಗಿದ್ದಾಗಲೇ ಯುವಶಕ್ತಿ.

ಗುಟ್ಟು

ಬದುಕಿನಲ್ಲಿ ಎಲ್ಲವೂ ತೆರೆದ ಪುಸ್ತಕವಾಗಬೇಕಾಗಿಲ್ಲ. ಎಲ್ಲರಿಗೂ ಎಲ್ಲವೂ ತಿಳಿಯುವಂತೆ ಇರಬೇಕಾದುದಿಲ್ಲ. ಕೆಲವೊಂದು ವಿವರ ಗುಟ್ಟಾಗಿದ್ದರೇ ಚೆನ್ನು.

ಗುಟ್ಟಾಗಿ ಮಾಡುವುದೂ ಇರುತ್ತದೆ; ಪ್ರಕಟವಾಗಿ ಮಾಡುವುದೂ ಇರುತ್ತದೆ. ಗುಟ್ಟಾಗಿ ಮಾಡಬೇಕಾದುದನ್ನು ಪ್ರಕಟವಾಗಿ ಮಾಡಿದಾಗ ಅಸಹ್ಯವೆನಿಸುತ್ತದೆ; ಪ್ರಕಟವಾಗಿ ಮಾಡಬೇಕಾದ್ದನ್ನು ಗುಟ್ಟಾಗಿ ಮಾಡಿದರೆ ಅನುಚಿತವಾಗುತ್ತದೆ.

ಗುಟ್ಟಾಗಿ ಮಾಡಬೇಕಾದುದನ್ನು ನಮ್ಮವರು 'ಗುಪ್ತಿ'ಯೆಂದು ಕರೆದು, ಅದರ ಕೆಲವು ನಿದರ್ಶನಗಳನ್ನು ತೋರಿಸಿದ್ದಾರೆ.

'ಧರ್ಮಗುಪ್ತಿ'ಯೆಂಬುದೊಂದು. ನಾವು ಅನುಸರಿಸುವ ಮತ ಧರ್ಮ, ನಡೆಸುವ ಆಚಾರಗಳು, ಮನೆಯೊಳಗೇ ಇರಬೇಕು. ಹಾಗೆಯೇ 'ಗೃಹಯಾತ್ರಾಗುಪ್ತಿ'. ಸಂಸಾರ ವನ್ನು ಸಾಗಿಸುವಾಗ ಬರುವ ತೊಂದರೆಗಳೋ ಆತಂಕಗಳೋ ಊರವರಿಗೆಲ್ಲ ತಿಳಿಯ ಬೇಕಾದುದಿಲ್ಲ. 'ವಿರಕ್ತಿಗುಪ್ತಿ'ಯೆಂದರೆ ಮನುಷ್ಯನಿಗೆ ಯಾವುದಾದರೂ ಕಾರಣದಿಂದ ಬದುಕು ಬೇಸರವೆನಿಸಿ ಸಂನ್ಯಾಸಿಯಾಗುವ ಬಯಕೆ ಬಂದಿತೆನ್ನಿ. ಒಡನೆಯೇ ಅವನು ಅದನ್ನು ಎಲ್ಲರೆದುರು ಡಂಗುರ ಸಾರಿಬಿಟ್ಟರೆ, ಬಯಕೆ ಮರೆಯಾಗಿಬಿಟ್ಟರೆ ಅವನು ಮಾಡುವುದೇನು? ಮತ್ತೆ ವಿರಕ್ತಿ ಹೋಗಿ ರಕ್ತಿ ಬಂದಿತೆಂದು ಬೊಬ್ಬೆಯಿಡಬೇಕು!

ಶ್ರೀಮಂತರಿಗೆ ಒಮ್ಮೊಮ್ಮೆ ಧರ್ಮಬುದ್ಧಿಯೂ ಇರುವುದುಂಟು, ಅಥವಾ ಬರುವುದುಂಟು. ಆಗ ದಾನ ಮಾಡುವ ಮನಸ್ಸು ಬರುತ್ತದೆ. ತಾವು ಮಾಡುವ ದಾನ ಎಲ್ಲರಿಗೂ ತಿಳಿಯಲೆಂದು ಮಾಡುವವರೇ ಬಹು ಮಂದಿ. ತಮ್ಮಿಂದ ನಡೆಯುವ ದಾನವನ್ನು ಪ್ರಕಟವಾಗಿ ಮಾಡುವರು. ಪತ್ರಿಕೆಗಳಲ್ಲಿ ಕಾಣಿಸುವರು, ಬಾನುಲಿಯಲ್ಲಿ ಕೇಳಿಸುವರು. ಆದರೆ ದಾನಗಳಲ್ಲಿ 'ಗುಪ್ತದಾನ' ವೆಂಬುದು ಶ್ರೇಷ್ಠವಂತೆ; ಎಂದರೆ ಗುಟ್ಟಾಗಿ ಮಾಡುವ ದಾನ. ಯಾರು ದಾನ ಮಾಡಿದರೆಂಬುದು ತಿಳಿಯಬಾರದು; ದಾನವನ್ನು ತೆಗೆದುಕೊಂಡವರು ಯಾರೆಂಬುದೂ ತಿಳಿಯಬಾರದು, ಇವನ ಔದಾರ್ಯವೂ ಅವನ ದೈನ್ಯವೂ ಪ್ರಕಟವಾಗಬಾರದು. ನೀಡುವ ಕೈ, ಬೇಡುವ ಕೈಗಳಿಗಿರುವ ಹಿರಿಮೆ- ಹೀನಾಯಗಳೆರಡೂ ದಾನದಲ್ಲಿ ಮರೆಯಾದರೇ ದಾನದ ಸಾರ್ಥಕ್ಯ.

ಸ್ವಾತಿ-ಮುತ್ತು

'ಚಿಪ್ಪಿನೊಳಗೆ ಬಿದ್ದ ಸ್ವಾತಿಯ ಮಳೆನೀರು ಸುಪ್ಪಾಣಿ ಮುತ್ತಾಗುವಂತೆ'. ಬಾಹುಬಲಿ ಕವಿಯ ನಾಗಕುಮಾರ ಚರಿತೆಯಲ್ಲಿ ಬರುವ ಉಪಮೆ ಇದು. ಸ್ವಾತಿಮಳೆ ಹುಯ್ದಾಗ ಸಮುದ್ರದಲ್ಲಿನ ಚಿಪ್ಪೊಂದರಲ್ಲಿ ಮಳೆನೀರಹನಿ ಸೇರಿಕೊಂಡು, ಕಾಲಾಂತರದಲ್ಲಿ ಗಟ್ಟಿಯಾಗಿ ಅದೇ ಮುತ್ತಾಗುವುದೆಂದು ನಂಬಿಕೆ.

ಇದು ಕೇವಲ ಕವಿಸಮಯವೇ ಇದ್ದೀತು. ಆದರೆ ಅದರ ಅನ್ವಯ ಎಲ್ಲೆಲ್ಲೂ ಕಂಡುಬರುತ್ತದೆ.

ಎಲ್ಲ ಮಳೆನೀರಹನಿಗಳೂ ಮುತ್ತಾಗಲಾರವು. ಸ್ವಾತಿಮಳೆಗೆ ಮಾತ್ರ ಆ ಯೋಗ್ಯತೆ. ಸ್ವಾತಿ ಮಳೆಯೂ ಎಲ್ಲ ಕಡೆಯೂ ಧಾರಾಳವಾಗಿ ಬೀಳುತ್ತದೆ; ಬಿದ್ದ ನೀರಹನಿಗೆಲ್ಲ ಮುತ್ತಾಗುವ ಪುಣ್ಯವಿರದು. ಸಮುದ್ರದಲ್ಲಿ ಬೀಳಬೇಕು. ಹನಿಯೊಂದು ಬಿದ್ದಾಗ ಚಿಪ್ಪೊಂದು ಬಾಯ್ದೆರೆದುಕೊಂಡಿರಬೇಕು; ಹನಿ ಬಿದ್ದೊಡನೆ ಮುಚ್ಚಿಕೊಳ್ಳ ಬೇಕು, ಅನಂತರ ಬಹುಕಾಲದ ಮೇಲೆಯೇ ಮುತ್ತು ಕಾಣಿಸಿಕೊಳ್ಳುವುದು.

ಶಾಲೆಯಲ್ಲಿ ಪಾಠವೇನೋ ಗಂಟೆಗಟ್ಟಳೆ ನಡೆಯುತ್ತದೆ. ಎಲ್ಲ ಹುಡುಗರ ಮೇಲೂ ಈ ಸುರಿಮಳೆ ಸಾಮಾನ್ಯವಾದದ್ದೇ, ಆದರೆ ಅದರ ಪ್ರಯೋಜನವಾಗುವುದು ಎಷ್ಟು ಮಂದಿಗೆ? ಕಿವಿಯನ್ನೂ ಮನಸ್ಸನ್ನೂ ಆಗ ತೆರೆದುಕೊಂಡಿದ್ದವರಿಗೆ ಮಾತ್ರ; ಕೇಳಿದ್ದನ್ನು ಗ್ರಹಿಸಿ ಮನಕೊಂಡವರಿಗೆ ಮಾತ್ರ.

ಸರಕಾರದ ಸೌಲಭ್ಯಗಳು ಹಿಂದುಳಿದವರಿಗೆಂದು ಗೊತ್ತಾದಾಗ, ಅದರ ಫಲ ದೊರಕುವುದು ಎಷ್ಟು ಮಂದಿಗೆ? ಸರಕಾರದ ನಿರ್ಧಾರವೇನೋ ಸ್ವಾತಿಯ ಮಳೆನೀರೆ; ಅದರ ವ್ಯಾಪ್ತಿಯಲ್ಲಿ ಸೇರುವವರು ಬಹುಮಂದಿ.

ಆದರೆ ಚಿಪ್ಪುಗಳು ಎಷ್ಟಿವೆ? ಮಳೆನೀರ ಹನಿ ಬಿದ್ದಾಗ ಚಿಪ್ಪು ಬಾಯ್ದೆರೆದು ಕೊಂಡಿರಬೇಕಲ್ಲ? ಮತ್ತೆ ಒಡನೆಯೇ ಮುಚ್ಚಿಕೊಂಡು ಅದನ್ನು ಗಟ್ಟಿಮಾಡಿ ಕೊಳ್ಳಬೇಕಲ್ಲ? ಇಲ್ಲವಾದರೆ ಮುತ್ತಾಗುವುದು ಹೇಗೆ?

ಸಂಪಾದನೆಗೆ ಅವಕಾಶವೇನೋ ವಿಪುಲವಾಗಿದೆ. ಅದನ್ನು ಪಡೆದುಕೊಳ್ಳುವ ಪುಣ್ಯ ಎಷ್ಟು ಮಂದಿಗೆ? ಜ್ಞಾನವಿತರಣೆಯ ಸಾಧನೆಗಳು ವ್ಯಾಪಕವಾಗಿವೆ. ಜ್ಞಾನ ಫಲಕಾರಿಯಾಗುವುದೇನೊ ಕಡಮೆಯೇ ತಾನೆ?

ಮಳೆನೀರು ಮೇಲಿನಿಂದ ಬೀಳುತ್ತದೆ; ಆದರೆ ಕೆಳಗೆ ಚಿಪ್ಪಿದ್ದರೆ ಮಾತ್ರ ಮುತ್ತಾಗುವ ಸಾಧ್ಯತೆ. ಇಲ್ಲವಾದರೆ ಗೋರ್ಕಲ್ಲ ಮೇಲೆ ಮಳೆ ಬಿದ್ದಂತೆಯೆ!

ಸಂಸ್ಕಾರ

ಹುಟ್ಟಿದೊಡನೆ ಸಂಸ್ಕಾರವನ್ನು ಮಾಡುವುದು ಹಲವು ಜನರಲ್ಲಿ ವಾಡಿಕೆ. ತುಂಬ ಹಳೆಯ ಕಾಡು ಜನಾಂಗಗಳಲ್ಲೂ ಇದು ಬಳಕೆಯಲ್ಲಿದೆ. ಪಟ್ಟಣದ ಶಿಷ್ಟವರ್ಗ ಗಳಲ್ಲಿಯೂ ಇದೆ.

ಹುಟ್ಟಿದ ಮಗುವನ್ನು ಹುಟ್ಟಿದಂತೆಯೆ ಯಾರೂ ಬಿಡುವುದಿಲ್ಲ. ಹುಟ್ಟಿನ ಹೊಲೆಯನ್ನು ಕಳೆಯಲು ಏನಾದರೊಂದು ಶುದ್ಧೀಕರಣ ಮಾಡುತ್ತಾರೆ. ಮತ್ತು ಮಗು ಮನೆಗೆ, ಮನೆಯವರೊಂದಿಗೆ ಹೊಂದಿಕೊಳ್ಳುವ ಉದ್ದೇಶದಿಂದ ಕೆಲವೊಂದು ಆಚರಣೆಗಳು ಬಳಕೆಯಲ್ಲಿವೆ. ಹುಟ್ಟಿದೊಡನೆ ಮಗು ಮನುಷ್ಯನೇನಲ್ಲ; ಅದರ ಪ್ರವೃತ್ತಿಗಳೆಲ್ಲ ಪ್ರಾಣಿ ಸಹಜವಾದುವು. ದೇಹಸಿದ್ಧವಾದುವು. ಈ ಪ್ರಾಣಿಯನ್ನು, ಪ್ರಾಣವುಳ್ಳ ದೇಹವನ್ನು ಕುಟುಂಬದ, ಸಮಾಜದ, ಸಮುದಾಯಜೀವನದ ನೆಲೆಯಲ್ಲಿ ನಿಲ್ಲಿಸಿ, ಅದಕ್ಕೊಂದು ವ್ಯಕ್ತಿತ್ವವನ್ನು ಒದಗಿಸಿಕೊಡುವ ಸನ್ನಾಹವೆ ಬೆಳವಣಿಗೆ. ಮಾತು, ಆಟ, ಪಾಠ, ಕಲಿಕೆ ಇವೆಲ್ಲ ದೇಹವನ್ನು ಬೆಳೆಸುತ್ತವೆ, ಬುದ್ಧಿಯನ್ನೂ ಬಲಿಯಿಸುತ್ತವೆ. ಈ ಬೆಳವಣಿಗೆಯಲ್ಲಿ ಕೆಲವು ವಿಶಿಷ್ಟ ಹಂತಗಳನ್ನು ನಿರ್ದೇಶಿಸಿ, ಒಂದು ಹಂತದಿಂದ ಮುಂದಿನ ಹಂತಕ್ಕೆ ಸರಿಯುವಾಗ ಒಂದೊಂದು ಸಂಸ್ಕಾರವನ್ನು ಸೂಚಿಸಿದ್ದಾರೆ. ನಾಮಕರಣ, ಅನ್ನಪ್ರಾಶನ, ಚೂಡಾಕರಣ, ಉಪನಯನ, ವಿವಾಹ ಇವೆಲ್ಲ ನಿದರ್ಶನಗಳು.

ಸಂಸ್ಕಾರವೆಂಬ ಮಾತಿಗೆ ಮೂಲಾರ್ಥ"ಮಾಡುವುದು"ಎಂದಷ್ಟೆ(ಕೃ ಎನ್ನುವ ಧಾತು).ಉಪಸರ್ಗ ಸೇರಿಸಿದಾಗ, ಚೆನ್ನಾಗುವಂತೆ ಮಾಡುವುದು ಎಂಬರ್ಥ ಹೊರಡುತ್ತದೆ. 'ಚೆನ್ನಾಗಿ' ಆಗುವುದೆಂದರೆ ಇಬ್ಬಗೆಯಿಂದ ಇರುವ ದೋಷಗಳನ್ನು ಮರೆಯಾಗಿಸುವುದು (ದೋಷಾಪನಯನ), ಅಗತ್ಯವಾದ ಗುಣಗಳಿಗೆ ಎಡೆಮಾಡಿ ಕೊಡುವುದು (ಗುಣಾಂತರೋಪಜನನ). ಇರುವ ದೋಷಗಳನ್ನು ಕಳೆದುಕೊಳ್ಳದೆ, ಬೇರೆಯ ಗುಣಗಳನ್ನು ಪಡೆದುಕೊಳ್ಳುವುದು ಹೇಗೆ?

ಬೆಳೆಯುವ ವ್ಯಕ್ತಿ ತನ್ನ ಪುರುಷಾರ್ಥಗಳನ್ನು ಪಡೆದುಕೊಂಡು ಸುಖವಾಗಿರಬೇಕು. ನೆರೆಯವರಿಗೆ ಒಪ್ಪಾಗಿರುವಂತೆಯೂ ಇದ್ದುಕೊಂಡು ಅವರನ್ನೂ ಸುಖವಾಗಿರಿಸಬೇಕು. ಇದು ಸಂಸ್ಕಾರದ ಮುಖ್ಯ ಉದ್ದೇಶ.

ಉಪ್ಪು-ಕರ್ಪೂರ

ಉಪ್ಪು-ಕರ್ಪೂರ ನೋಡಲು ಒಂದೇ ತೆರನಾಗಿರುತ್ತವೆಯಲ್ಲವೆ? ಆದರೆ ಅವು ಒಂದೆ ಎಂದು ಯಾರು ಹೇಳಿಯಾರು? ಎರಡರ ಬಣ್ಣವೂ ಬಿಳಿ ಸರಿ; ಆದರೆ ಬಾಯಿಗೆ ಹಾಕಿಕೊಂಡರೆ ಉಪ್ಪು ಬೇರೆ, ಕರ್ಪೂರ ಬೇರೆ, ಅಥವಾ ಉರಿ ತಗುಲಿಸಿದರೂ ತಿಳಿಯುತ್ತದೆ, ಯಾವುದು ಉಪ್ಪು ಯಾವುದು ಕರ್ಪೂರ ಎಂದು.

ನೋಡಿದ ಮಾತ್ರಕ್ಕೆ ವಸ್ತುವನ್ನು ತಿಳಿಯಲಾಗದು; ಪರೀಕ್ಷೆಗೆ ಒಳಪಡಿಸಿದಾಗ ಗುಣ ಅರಿವಾಗುತ್ತದೆ. ಮನುಷ್ಯರಲ್ಲೂ ಹೀಗೆಯೇ. ಮೇಲ್ನೋಟಕ್ಕೆ ಸಮನಾಗಿಯೇ ಕಾಣುತ್ತಾರೆ; ಪರಿಚಯವಾದಂತೆ ಗುಣಾವಗುಣಗಳು ತಿಳಿಯುತ್ತವೆ.

ಒಬ್ಬೊಬ್ಬರ ಸಾಮರ್ಥ್ಯ ಒಂದೊಂದು ಬಗೆಯದು; ಅದಕ್ಕನುಗುಣವಾಗಿ ವೃತ್ತಿಯಿರಬೇಕು; ಉದ್ಯಮ ಇರಬೇಕು. ಎಲ್ಲರೂ ಎಲ್ಲಕ್ಕೂ ಯೋಗ್ಯರಲ್ಲ.

ಎಲ್ಲರಿಗೂ ಸಮನಾದ ಅವಕಾಶವಿರಬೇಕೆಂಬ ನೀತಿ ಸರಿಯೆ; ಸಮಾಜದ ಸರ್ವಾಂಗೀಣ ಪ್ರಗತಿಯನ್ನು ಸಾಧಿಸಲು ಇದು ಬೇಕು. ಆದರೆ ಎಲ್ಲರಿಗೂ ಒಂದೇ ಯೋಗ್ಯತೆ, ಅರ್ಹತೆ, ಸಾಮರ್ಥ್ಯ ಇರಬೇಕಲ್ಲವೆ? ಈ ಸಮತೆಯನ್ನು ಸಮಾಜ ಏರ್ಪಡಿಸಿಕೊಳ್ಳಬೇಕು. ಅದಿಲ್ಲದೆ, ಯಾರು ಯಾವ ಕೆಲಸವನ್ನಾದರೂ ಮಾಡಿ ಯಾರೆಂದು ನಿರೀಕ್ಷಿಸುವುದು ಹೇಗೆ? ಮೇಲಾಗಿ, ಸ್ವಭಾವಸಿದ್ಧವಾದ ವೈವಿಧ್ಯವೂ ಇರುತ್ತದೆ. ಇದನ್ನು ಮರೆಯುವಂತಿಲ್ಲ. ಉಪ್ಪಿನ ಸ್ವಭಾವವೇ ಬೇರೆ. ಕರ್ಪೂರದ ಸ್ವಭಾವವೇ ಬೇರೆ. ಇಲ್ಲಿ ಹೆಚ್ಚು ಕಡಮೆ, ಕೀಳು-ಮೇಲು ಎಂಬ ವಿಭಜನೆಗೆ ಅವಕಾಶವಿಲ್ಲ. ಊಟಕ್ಕೆ ಉಪ್ಪುಬೇಕು; ಆರತಿಗೆ ಕರ್ಪೂರ ಬೇಕು. ಆರತಿಯ ಕಾಲಕ್ಕೆ ಉಪ್ಪಿನ ಅಗತ್ಯವಿಲ್ಲ; ಊಟದ ಸಮಯದಲ್ಲಿ ಕರ್ಪೂರದ ಅಗತ್ಯವೇನಿದೆ?

ಶಾಲೆಯಲ್ಲಿ ಪಾಠ ಹೇಳಬಲ್ಲವನು ಕಛೇರಿಯಲ್ಲಿ ಆಡಳಿತ ಮಾಡಲಿ ಎಂದರೆ ಹೇಗೆ? ಲೆಕ್ಕದಲ್ಲಿ ಜಾಣನಾದ ಕರಣಿಕನು ಬೇಸಾಯದಲ್ಲೂ ಗಟ್ಟಿಗನಾಗಿ ಇರಬಲ್ಲನೆ?

ಎಲ್ಲರೂ ಒಂದೇ ಎಂಬುದು ತಾತ್ತ್ವಿಕವಾಗಿ ಸರಿ. ಯಾರನ್ನಾದರೂ ಯಾವ ವೃತ್ತಿಗಾದರೂ ತಯಾರು ಮಾಡಬಹುದೆಂಬುದೂ ಕೊಂಚಮಟ್ಟಿಗೆ ಸರಿಯೇ. ಆದರೆ ಸ್ವಭಾವಸಿದ್ಧವಾದ ಪ್ರವೃತ್ತಿಗಳೂ ಕೆಲಸ ಮಾಡುತ್ತವೆ ಎಂಬುದನ್ನು ಒಪ್ಪಬೇಕು.

ಯಾರೂ ನಿಷ್ಪ್ರಯೋಜಕರಲ್ಲ, ಆದರೆ ಅವರವರ ಗುಣವಿಶೇಷಗಳನ್ನು ವಿಚಾರ ಮಾಡುವ ಅಗತ್ಯವಿದೆ. ಯಾರಿಗೆ ಯಾವುದು ಸರಿಯಾದೀತು ಎಂಬ ವಿವೇಕವೂ ಸಮಾಜದ ಧುರೀಣರಿಗೆ ಇರಬೇಕು. ಹೀಗಿರದಿದ್ದರೆ ವ್ಯಕ್ತಿಗೂ ಸಮಾಧಾನವಿಲ್ಲ, ಸಮಾಜಕ್ಕೂ ಹಿತವಿಲ್ಲ.

ಮನೆ-ಬಾಡಿಗೆ

ಲೋಕದಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸಬೇಕೆಂಬ ನಿಷ್ಠೆಯುಳ್ಳವನಿಗೆ ಬದುಕಿನಲ್ಲಿ ಬೇಸರವಾಗಲಿ ಬೇಗುದಿಯಾಗಲಿ ಬರಲಾರದು.

ಬೇರೆಯವರಿಂದ ತನಗೇನು ಸಲ್ಲಬೇಕು ಎಂದು ಆಲೋಚಿಸುವವರೇ ಬಹುಮಂದಿ; ಸಲ್ಲಬೇಕಾದುದು ಸಂದಿಲ್ಲವೆಂದೇ ಬೇಸರ, ಬೇಗುದಿ. ತನ್ನಿಂದ ಬೇರೆಯವರಿಗೆ ಸಲ್ಲಬೇಕಾದುದೇನು ಎಂಬುದನ್ನು ಕುರಿತು ಆಲೋಚನೆ ಮಾಡುವವರು ವಿರಳ. ಸಲ್ಲಬೇಕಾದುದನ್ನು ಸಲ್ಲಿಸಲೇಬೇಕೆಂದು ಪಟ್ಟುಹಿಡಿಯುವವರು ಇನ್ನೂ ವಿರಳ. ಲೋಕದಲ್ಲಿ ನಾವು ಕಾಣಿಸಿಕೊಳ್ಳುವುದಕ್ಕೆ ಕಾರಣವೇನು? ಅದೇನು ನಿಯತಿಯೋ, ಆಕಸ್ಮಿಕವೋ? ಅದಕ್ಕೆ ಅರ್ಥವಿದೆಯೋ ಇಲ್ಲವೋ? ಎಂಬೆಲ್ಲ ಸಮಸ್ಯೆಗಳು ಪ್ರಸಕ್ತವಲ್ಲ. ಉತ್ತರ ದೊರಕುವಂಥ ಪ್ರಶ್ನೆಗಳಲ್ಲ ಅವು. ಲೋಕದಲ್ಲಿ ನಾವಿರುವುದು ಬದುಕುವುದಕ್ಕೆ ಎಂಬುದಂತೂ ಖಚಿತವಷ್ಟೆ? ಬದುಕು ಎನ್ನುವುದು ಸಮುದಾಯ ದೊಳಗೆ, ಕುಟುಂಬದೊಳಗೆ, ನೆರೆಹೊರೆಯಲ್ಲಿ, ಇದೂ ಖಚಿತವಾದ ವಿವರವೇ ತಾನೆ? ಎಂದರೆ ಇತರರ ನೆರವಿನಿಂದ, ಇತರರ ಹಿನ್ನೆಲೆಯ ಬಲದಿಂದ, ಇತರರ ದುಡಿಮೆಯ ಜಾಡನ್ನು ಹಿಡಿದು ನಾವು ಬದುಕುವುದು. ಯಾರೊಬ್ಬರದ್ದೂ ಒಂಟಿ ಜೀವವಲ್ಲ. ನಾವು ಉಣ್ಣುವ ಊಟವಾಗಲಿ, ಉಡುವ ಬಟ್ಟೆಯಾಗಲಿ, ಇರುವ ಮನೆಯಾಗಲಿ, ಬಳಸುವ ಸಲಕರಣೆಗಳಾಗಲಿ, ಆಡುವ ಭಾಷೆಯಾಗಲಿ, ನಾವೇ ಮಾಡಿಕೊಂಡದ್ದಲ್ಲ; ಇತರರಿಂದ ಆದದ್ದು.

ಒಬ್ಬೊಬ್ಬರ ಬದುಕಿನಲ್ಲೂ ಬೇರೆಯವರ ನೆರವು ಎಷ್ಟಿದೆಯೆಂದು ಅರಿತು ಕೊಂಡರೆ, ಬೇರೆಯವರಿಗೆ ನಾವು ಏನು ಮಾಡಿದ್ದೇವೆ, ಎಷ್ಟು ಮಾಡಬೇಕಾದದ್ದಿದೆ ಎಂಬುದು ತಿಳಿದೀತು.

ಕೈಲಾಸಂ ಹೇಳಿದಂತೆ, ನಾವು ಬೇರೆಯವರಿಗೆ ಕೈಲಾದಷ್ಟು ನೆರವಾಗುವುದೇ, ನಾವು ಈ ಪ್ರಪಂಚದಲ್ಲಿರುವುದಕ್ಕೆ ತೆರಬೇಕಾದ ಬಾಡಿಗೆ. ಹಾಗೆ ಮಾಡದಿದ್ದರೆ, ಬಾಡಿಗೆ ಮನೆಯಲ್ಲಿದ್ದು ಬಾಡಿಗೆ ಕೊಡದೆ ಹೋದಂತೆ. ಬಾಡಿಗೆ ಕೊಡುವುದಿರಲಿ, ಮನೆಯ ಮಾಲಿಕರನ್ನು ಅಳಿಸಿಬಿಡುವವರೂ ಇದ್ದಾರೆ. ನೆರೆಯವರಿಗೆ ಕಾಟ ಕೊಡುವವರೂ ಇದ್ದಾರೆ. ಇವರ ಆದರ್ಶವನ್ನು ಸುಸಂಸ್ಕೃತರು ಅನುಸರಿಸುವುದೆ ? ನಮ್ಮ ಹೊಣೆಯನ್ನು ನಾವು ಅರಿತುಕೊಂಡರೆ ಲೋಕದ ಭಾರ ಅರ್ಧದಷ್ಟು ಹಗುರಾಯಿತು!

ದಿಟವಾದ ಸಾಧು

ನಿದ್ರೆ ಮಾಡುತ್ತಿರುವವರನ್ನು ಎಚ್ಚರಗೊಳಿಸಬಲ್ಲವನು ಯಾರು? ಎಚ್ಚೆತ್ತಿರುವವನಲ್ಲದೆ, ತಾನೇ ನಿದ್ರೆಮಾಡುತ್ತಿರುವವನು ಅಲ್ಲ.

ಜನರಿಗೆ ಅಜ್ಞಾನವಿದೆಯೆಂದಮೇಲೆ ಅದನ್ನು ತೊಲಗಿಸಿ ಅರಿವನ್ನುಂಟು ಮಾಡಬಲ್ಲವನು ಜ್ಞಾನಿಯೇ ವಿನಾ ಅಜ್ಞಾನಿಯಲ್ಲ. ಆದರೆ ಅಜ್ಞಾನಿಗಳೇ ಒಬ್ಬರನ್ನೊಬ್ಬರು ಆಶ್ರಯಿಸುತ್ತಿರುವುದನ್ನು ನೋಡಿದರೆ ನಗೆ ಬರುತ್ತದೆ. ತಾನೇ ಈಜು ಬಾರದವನು ಬೇರೆಯವರಿಗೆ ಈಜು ಕಲಿಸಲು ಹೊರಟಂತೆ; ಅಥವಾ ಅವನು ನೀರಿನಲ್ಲಿ ಬಿದ್ದವನನ್ನು ಮೇಲೆತ್ತಲು ಹೊರಟಂತೆ. ಇಬ್ಬರೂ ನೀರಿನಲ್ಲಿ ಬಿದ್ದು ಸಾಯುತ್ತಾರೆ ಅಷ್ಟೆ. ಉತ್ಸಾಹವೇನೋ ಸರಿಯೆ; ಉದ್ದೇಶವೂ ಒಳ್ಳೆಯದಿದ್ದೀತು. ಆದರೆ ಸಾಮರ್ಥ್ಯವಿರದಿದ್ದರೆ ಹೇಗೆ? ಅದೇ ಮೊದಲಿರಬೇಕಾದದ್ದು.

ಕೈಲಾಗದ ಕೆಲಸಕ್ಕೆ ತೊಡಗಿದರೆ ಮೈ ಪರಚಿಕೊಂಡಂತೆಯೇ ಅಲ್ಲವೇ? ಅದರಿಂದ ಯಾರಿಗೆ ಪ್ರಯೋಜನವಾದೀತು? ಈಗ ನಮ್ಮೆದುರು ತೋರಿಕೊಳ್ಳುವ ಸಾಧುಸಂತರಲ್ಲಿ ಬಹುಮಂದಿ ಇಂಥವರೇ.

ಮಾತೇನೋ ಮುತ್ತಿನಂತೆ, ಆದರೆ ನಡತೆ ನೆಟ್ಟಗಿಲ್ಲದಿದ್ದರೆ ಆ ಮಾತನ್ನು ನಂಬಿಕೊಂಡವನು ಕೆಟ್ಟ. ಅಂಥವನ ಉಪದೇಶ ಅವನ ನಾಲಗೆಯಲ್ಲಿ ಹುಟ್ಟುತ್ತದೆ; ನಮ್ಮ ಕಿವಿಯಲ್ಲಿ ಅದರ ಗೋರಿ ಆಗಬೇಕು. ಅವನ ನಾಲಗೆಯ ಹಿಂದೆಯೂ ಅದಿಲ್ಲವೆಂದ ಮೇಲೆ ನಮ್ಮ ಕಿವಿಯ ಮುಂದೆಯೂ ಅದಿರಬೇಕಾದ ಅಗತ್ಯವೇನು?

ಈ ಬಗೆಯ ಸಾಧುಗಳು ನೆರೆದಾಗಲೂ ಮಾತುಕತೆ ನಡೆಯುತ್ತದೆ. ಅದೊಂದು ಸಂತೆಯಿದ್ದಂತೆ. ಸಂತೆಯಲ್ಲಿ ಮಾರಲು ತಮ್ಮ ಮಾಲನ್ನು ತರುತ್ತಾರೆ; ಅದರ ಗುಣಗಳನ್ನು ಹಾಡಿ ಹೊಗಳುತ್ತಾರೆ. ಕೊಳ್ಳುವವರು ಹಣ ಕೊಟ್ಟರೆ ಮಾತ್ರ ಅದನ್ನು ಪಡೆದುಕೊಳ್ಳಬಹುದು. ಸಂತರ ಮಾತನ್ನು ಪಡೆದುಕೊಳ್ಳುವಾಗ ಕಿಸೆಯಿಂದ ಹಣ ತೆಗೆಯಬೇಕಾಗಿಲ್ಲ. ಅವರ ಮಾತಿನ ನೆಲೆಯನ್ನು ಅರಿತುಕೊಳ್ಳುವ ಯೋಗ್ಯತೆಯಿರಬೇಕು. ಜಾಣತನವಿರಬೇಕು. ಇಲ್ಲವಾದರೆ ಆ ಮಾತನ್ನು ಕೇಳಿ ಪ್ರಯೋಜನವಿಲ್ಲ. ಬೂಟಾಟಿಕೆಯ ಸಾಧುಗಳು, ಠಕ್ಕರಾದ ಸಂತರು ಮಾತನಾಡುವುದು ಜನರು ಮರುಳಾಗಿ ಅದನ್ನು ಕೊಳ್ಳಲೆಂದು; ಮಾತಿಗೆ ಪ್ರತಿಯಾಗಿ ಹಣವನ್ನು ಕೊಡಲೆಂದು. ಅದಕ್ಕೇ ಅವರು ಜನರ ನಡುವೆಯೆ ಇರುತ್ತಾರೆ, ಜನರನ್ನು ಸೇರಿಸುತ್ತಲೆ ಇರುತ್ತಾರೆ.

ದಿಟವಾದ ಸಾಧುವಿಗೆ ಜನರಿಂದೇನಾಗಬೇಕಿದೆ? ಅವನು ಎಚ್ಚರವಾಗಿರುತ್ತಾನೆ; ನಿದ್ರೆ ಹೋದವರನ್ನು ಎಚ್ಚರಿಸುತ್ತಾನೆ.

ಬಂದದ್ದು, ಹೋದದ್ದು

ಸುಮಾರು ಎಪ್ಪತ್ತು ವರ್ಷಗಳ ಹಿಂದೆ ತೀರಿಕೊಂಡ ಅಥಣಿಯ ಶಿವಯೋಗಿಗಳು ಮಹಾ ವಿರಕ್ತರು. ಮಠಾಧಿಪತಿಗಳಾಗಿದ್ದರೂ ಅದನ್ನು ಮರೆತಿದ್ದರು. ಬಾಳಿನುದ್ದಕ್ಕೂ ಸೇವೆಯಲ್ಲೇ ಮೈಯನ್ನು ಸವೆಸಿದವರು, ಅಧಿಕಾರವನ್ನು ಒಲ್ಲನೆಂದು ಕಾಯಕವನ್ನೇ ಕೈಗೊಂಡವರು.

ಅವರನ್ನು ಕುರಿತಂತೆ ಹಲವಾರು ಸ್ವಾರಸ್ಯವಾದ ಕತೆಗಳಿವೆ. ಇದೊಂದು—

ಅವರ ಹಿರಿಮೆಗೆ ಮಾರುಹೋದ ಹಣವಂತ ಭಕ್ತನೊಬ್ಬ ಮಠದ ಗದ್ದುಗೆಯ ಬಾಗಿಲಿಗೆ ಬೆಳ್ಳಿಯ ನಾಣ್ಯಗಳನ್ನು ಬಿಡಿಸಿದನಂತೆ. ಸಾವಿರಾರು ರೂಪಾಯಿಗಳ ಸೇವೆ ಸಲ್ಲಿಸಿದ. ಒಂದೆರಡು ದಿನಗಳು ಕಳೆಯುವಷ್ಟರಲ್ಲೇ ಬಾಗಿಲಿಗೆ ಬಡಿದಿದ್ದ ಬೆಳ್ಳಿಯ ನಾಣ್ಯಗಳೆಲ್ಲ ಕಣ್ಮರೆಯಾದವು. ರಾತ್ರಿ ಅವನ್ನೆಲ್ಲ ಯಾರೋ ಕಳವು ಮಾಡಿದ್ದರು.

ಮಠದ ಆಡಳಿತಗಾರ ಗಾಬರಿಗೊಂಡು ಶಿವಯೋಗಿಗಳ ಬಳಿ ಓಡಿಬಂದು, ನಡೆದುದನ್ನು ಹೇಳಿ ಗೋಳಾಡಿದ. ಕಳೆದುಹೋದುದನ್ನು ಮತ್ತೆ ಪಡೆದುಕೊಳ್ಳುವ ಸಲುವಾಗಿ ಸಲಹೆ ಮಾಡಿದ. ಶಿವಯೋಗಿಗಳ ಮುಖಮುದ್ರೆ ಬದಲಾಗಲಿಲ್ಲ. ನಸುನಗುತ್ತಲೆ ಅವರು ಆಡಳಿತಗಾರರನ್ನು ಕೇಳಿದರು- ಇದ್ದವನು ಬಡಿದ, ಇಲ್ಲದಿದ್ದವನು ಕೊಂಡೊಯ್ದ, ನಡುವೆ ನಿನ್ನದೇನು ತಕರಾರು?

ಈ ವಿವೇಕ ಸಾಮಾನ್ಯಕ್ಕೆ ಬರುವಂಥದಲ್ಲ. ನಮ್ಮ ಬಳಿ ಇದ್ದದ್ದು ನಮ್ಮದೇ. ಅದು ನಮ್ಮ ಕೈ ಬಿಡಬಾರದು ಎಂಬ ಅಭಿಮಾನವೇ ನಮಗೆಲ್ಲ. ಹೀಗಾಗಿ ಗಳಿಸುವುದಕ್ಕಿಂತ ಹೆಚ್ಚಿನ ಶ್ರಮ ಉಳಿಸಿಕೊಳ್ಳುವುದರಲ್ಲಿ ವೆಚ್ಚವಾಗುತ್ತದೆ.

ಬೇಕೆಂಬ ಬಯಕೆ ಇಲ್ಲದವನಿಗೆ, ಇರಲೆಂಬ ಆದರವೂ ಇರುವುದಿಲ್ಲ. ಎಲ್ಲಿಂದಲೋ ಬರುತ್ತದೆ, ಎಲ್ಲಿಗೋ ಹೋಗುತ್ತದೆ; ನಮ್ಮಲ್ಲಿ ಇರುವ ಎರಡು ಗಳಿಗೆಯಲ್ಲಿ ಅದು ನಮ್ಮದೆಂದು ಅಭಿಮಾನ. ಅದನ್ನು ಉಳಿಸಿಕೊಳ್ಳುವ ಹಂಬಲ. ಶಿವಯೋಗಿಗಳ ಮಾತಿನ ಇಂಗಿತ ಇದು. ಮಠಕ್ಕೆ ಇದ್ದವರು ಕೊಡುತ್ತಾರೆ. ಇಲ್ಲದಿದ್ದವರು ಮಠದಿಂದ ಒಯ್ಯುತ್ತಾರೆ. ಮಠ ಇರುವುದೂ ಅದೇ ಕೆಲಸಕ್ಕೆ ತಾನೆ?

ಮನುಷ್ಯನ ನೆಲೆ-ಬೆಲೆ

ದೇವತೆಯಾಗಿದ್ದವನು ಮುಗಿಲಿಂದ ನೆಲಕ್ಕೆ ಬಿದ್ದು ಮನುಷ್ಯನಾದ ಎಂಬ ನಂಬಿಕೆಯೊಂದುಂಟು. ಮಂಗವೇ ಮೇಲೇರಿ ಮನುಷ್ಯನಾದ ಎಂಬುದಿನ್ನೊಂದು ನಂಬಿಕೆ. ಇವೆರಡೂ ನಂಬಿಕೆಗಳೇ. ಮೊದಲನೆಯದು ಧರ್ಮದ ಪರಿಕರವಾಗಿ, ಎರಡನೆಯದು ವಿಜ್ಞಾನದ ಅಂಗವಾಗಿ. ಎರಡರಲ್ಲೂ ಸಂಪೂರ್ಣವಾಗಿ ತಥ್ಯ ಎಂಬುದೇನೋ ಇರದು. ಆದರೆ ಮನುಷ್ಯರಲ್ಲಿ ದೇವತೆಯ ಅಂಶವೂ ಇದೆ, ಮಂಗದ ಲಕ್ಷಣವೂ ಇದೆ ಎನ್ನುವುದೇನೋ ದಿಟ. ಯಾವ ಸಮಯದಲ್ಲಿ, ಯಾವ ಸಂದರ್ಭದಲ್ಲಿ ಯಾವುದು ಮೇಲೆ ಬರುತ್ತದೆ ಎಂದು ಹೇಳುವ ಹಾಗಿಲ್ಲ. ಇತರ ಪ್ರಾಣಿಗಳಲ್ಲಿ ಕಾಣಸಿಗದ ಕಲ್ಪನೆ, ಬುದ್ಧಿಶಕ್ತಿ, ಪ್ರತಿಭೆ, ಭಾವಸಂಪತ್ತು, ಸೃಜನಾತ್ಮಕತೆ ಇವೆಲ್ಲವೂ ಮನುಷ್ಯನಲ್ಲಿವೆ. ಮಂಗಗಳಲ್ಲಿ ಇವೆಲ್ಲ ಇಲ್ಲವಷ್ಟೆ. ಹಾಗೆಯೆ ಮನುಷ್ಯನ ಕ್ರೌರ್ಯ, ಕದನಕುತೂಹಲ, ಅಬ್ಬರ, ದಬ್ಬಾಳಿಕೆ, ಆಡಂಬರ, ಹೊಟ್ಟೆಬಾಕತನ, ದುರಾಸೆ-ಇವನ್ನು ಇತರ ಯಾವ ಪ್ರಾಣಿಯಲ್ಲೂ ನಾವು ಕಾಣಲಾರೆವು.

ಇತಿಹಾಸದ ಹಾಳೆಗಳಲ್ಲಿ ಮನುಷ್ಯ ನಡೆದುಕೊಂಡಿರುವ ರೀತಿಯಲ್ಲಿ ನೋಡಿದರೆ ಮನುಷ್ಯನ ಹಿನ್ನೆಲೆ ದೇವತೆಯದಿರಲಾರದು ಎನಿಸುತ್ತದೆ. ಅವನಲ್ಲಿ ರಾಕ್ಷಸೀ ಪ್ರವೃತ್ತಿಯೆ ಹೆಚ್ಚು. ಮಂಗಗಳನ್ನೂ ಮೀರಿಸಿದ ಹುಚ್ಚಾಟ, ಕಚ್ಚಾಟ. ದೇವತಾಂಶವನ್ನೊಳಗೊಂಡ ಮನುಷ್ಯ ಒಬ್ಬನಿದ್ದರೆ ದೈತ್ಯಾಂಶವಿದ್ದವರು ನೂರು ಮಂದಿ; ಅವರದ್ದೇ ಮೇಲಾಟ, ಪ್ರಾಣಿಗಳನ್ನು ಮನುಷ್ಯನ ಅಧ್ಯಯನ ಮಾಡುವಂತೆಯೆ ಮನುಷ್ಯನನ್ನೂ ಪ್ರಾಣಿಗಳು ಅಧ್ಯಯನಮಾಡುವುದಾದರೆ, ತಮಗಿಂತ ತುಂಬ ಕೀಳ್ಮಟ್ಟದ ಪ್ರಾಣಿ ಇದು ಎಂದು ಅವು ಕಂಡುಕೊಂಡಾವು! ಮನುಷ್ಯನ ಮೇಲ್ಮೆಯನ್ನು ಮನುಷ್ಯರೇ ಕೊಂಡಾಡುವುದು ಸಹಜ; ಮತ್ತೆ ಯಾವ ಪ್ರಾಣಿಯೂ ಅವನನ್ನು ಮೆಚ್ಚಿಕೊಳ್ಳಲಾರದು!

ಮೇಲ್ಮೆಯ ಕಲ್ಪನೆ ಒಳ್ಳೆಯದೇ. ಮೇಲ್ಮೆಯಿರದೆಂದು ಕಂಡುಕೊಂಡರೆ ಅದೂ ಮೇಲ್ಮೆಯೆ. ಮೇಲ್ಮೆಯನ್ನು ಪಡೆದುಕೊಳ್ಳಲು ಪ್ರಯತ್ನಪಡುವುದಂತೂ ಮೇಲ್ಮೆಯ ಕುರುಹೇ. ಇದೇ ದೇವತೆಯ ಅಂಶ. ಮಂಗಾಟವನ್ನು ಬಿಟ್ಟು ಮೇಲೇರಿದಂತೆಯೇ.

ಮನುಷ್ಯನ ಮೇಲ್ಮೆ

ಮನುಷ್ಯನೂ ಮೂಲಭೂತವಾಗಿ ಮೃಗವೇ. ಅದೇ ನೆಲೆಯಿಂದ ಎದ್ದು ಬಂದವನು.

ಆದುದರಿಂದ ಮೃಗಗಳಂತೆಯೆ ಬಾಳುವುದು ಸಹಜವೇ. ಸಮರ, ವಿರಸ, ಹಗರಣ, ಕಾಮ, ಕೇಳಿ, ಕ್ರೌರ್ಯ ಇವೆಲ್ಲ ಹುಟ್ಟುತ್ತಲೆ ಬಂದ ಗುಣಗಳು.

ಆದರೆ ಮನುಷ್ಯನ ಬುದ್ಧಿಶಕ್ತಿ ಇತರ ಮೃಗಗಳಿಗಿಂತ ಮೇಲ್ತರನಾದುದು, ಹೆಚ್ಚಿನದು, ಅವನ ಸಂಸ್ಕೃತಿ ವಿಶಿಷ್ಟವಾದುದು.

ಉಳಿದ ಪ್ರಾಣಿಗಳು ಶಬ್ದ ಮಾಡುತ್ತವೆ, ಮಾತನಾಡಲಾರವು; ನಡೆಯುತ್ತವೆ, ವಾಹನವನ್ನು ಬಳಸಲಾರವು; ಉಣ್ಣುತ್ತವೆ, ಅಡುಗೆಯನ್ನು ಮಾಡಿಕೊಳ್ಳಲಾರವು; ಸಂಭೋಗಿಸುತ್ತವೆ, ಮದುವೆಯಾಗಿ ಮನೆಯನ್ನು ಕಟ್ಟಲಾರವು.

ಮನುಷ್ಯನ ಬುದ್ಧಿಶಕ್ತಿ ಸಂಸ್ಕೃತಿಯನ್ನು ನಿರ್ಮಿಸಲು ನೆರವಾಗಿದೆ. ಆದರೆ ಅದೇ ಬುದ್ಧಿಶಕ್ತಿ ವಿಪರೀತದ ದಾರಿಯನ್ನು ಹಿಡಿದು ಸಂಸ್ಕೃತಿಯನ್ನು ನಿರ್ಮೂಲ ಮಾಡಲೂ ಹೊರಟಿದೆ.

ತನ್ನನ್ನು ತಾನು ಕೊಂದುಕೊಳ್ಳುವ ತಿಳಿಗೇಡಿತನ ಮನುಷ್ಯನಿಗಿರುವಂತೆ ಬೇರೆ ಯಾವ ಪ್ರಾಣಿಗೂ ಇರದು. ಮುಂದಾಲೋಚನೆಯ ಸೌಕರ್ಯ ಇರುವಾಗಲೂ ಅದನ್ನು ಬಳಸಿಕೊಳ್ಳುತ್ತಲಿಲ್ಲ.

ಬೇರೆ ಪ್ರಾಣಿಗಳು ಕಾದಾಡಬೇಕಾದಾಗ ಮೈಯನ್ನು ಮಾತ್ರ ಮುಂದೊಡ್ಡುತ್ತವೆ. ಮನುಷ್ಯನಾದರೆ ಆಯುಧವನ್ನು ಬಳಸಿಯಾನು. ಹಿಂದುಳಿದ ನೆಲೆಗಳಲ್ಲಿ ಕದನವೆಂದರೆ ವ್ಯಕ್ತಿಗಳಿಗೆ ತೊಂದರೆ ಅಷ್ಟೆ; ಸುತ್ತಮುತ್ತಲ ಜನಕ್ಕೆ ತೊಂದರೆಯೂ ಅಷ್ಟಿಷ್ಟು.

ಆದರೆ ಮುಂದರಿದ ಜನರು ಸಮರಕ್ಕೆ ಸಿದ್ಧವಾದರೆ ಸರ್ವನಾಶ ತಪ್ಪಿದ್ದಲ್ಲ; ಕಾದಾಟದ ಬಿಸಿ ಕಾದಾಡುವ ಕಡೆ ಮಾತ್ರವಲ್ಲ, ಎಲ್ಲೆಡೆಯೂ ಹರಡುತ್ತದೆ. ಪರಿಸರವನ್ನೆ ಹದಗೆಡಿಸೀತು.

ಬುದ್ಧಿಶಕ್ತಿಯಿಂದ ಹಗರಣದ ಬಗೆಗಳನ್ನು ಹೆಚ್ಚು ಹೆಚ್ಚು ಆತಂಕಕಾರಿಗಳಾಗಿ ಮಾರ್ಪಡಿಸುತ್ತಾರೆ. ಆದರೆ ಆತಂಕ ಯಾರನ್ನು ಬಲಿಗೊಳ್ಳುತ್ತದೆ, ಯಾರನ್ನು ಬಿಡುತ್ತದೆ ಎಂಬುದು ನಿಶ್ಚಯವಲ್ಲ.

ಬುದ್ಧಿಶಕ್ತಿಯಿಂದ ನೆಮ್ಮದಿಯಾಗಿರುವುದನ್ನು ಕಲಿತರೆ ಸರಿ; ಆದರೆ ಮನುಷ್ಯನ ಬುದ್ಧಿಶಕ್ತಿಯಿಂದ ಜನರ ನೆಮ್ಮದಿ ದೂರ ದೂರ ಸರಿಯುತ್ತಿದೆ.

ಮನುಷ್ಯ ಹಿಡಿದ ದಾರಿ

ನೂರಿಪ್ಪತ್ತು ವರ್ಷಗಳ ಹಿಂದೆ ಡಾರ್ವಿನ್ ತನ್ನ ಜೀವವಿಕಾಸ ವಾದವನ್ನು ಮಂಡಿಸಿದ ಮೇಲೆ, ಅದಕ್ಕೆ ಹೊಂದಿಕೊಂಡಂತೆ ನಮ್ಮ ನಡುವೆ ಒಂದು ಮನೋಧರ್ಮ ತೋರಿಕೊಂಡಿತು.

ಪ್ರಾಣಿವರ್ಗದಲ್ಲೆಲ್ಲ ಮನುಷ್ಯನೆ ಮೇಲ್ಮಟ್ಟದವನು; ಜೀವಸಂತತಿಯಲ್ಲಿ ಅಂತಿಮಘಟ್ಟವೆ ಮನುಷ್ಯನದು ; ಉಳಿದೆಲ್ಲ ಜೀವಿಗಳೂ ಬೆಳೆದು ಬಂದುದು ಕಡೆಗೆ ಮನುಷ್ಯನಾಗುವ ಹವಣಿಕೆಯಿಂದಲೆ, ಎಂದು. ಈ ಮನೋಧರ್ಮಕ್ಕೆ ಅಂಟಿಕೊಂಡು ಬಂದ ಮತ್ತೊಂದು ಧೋರಣೆ ಎಲ್ಲ ಪ್ರಾಣಿಗಳೂ ಮನುಷ್ಯನಿಗಾಗಿಯೆ ಇರುವುದು ಎಂಬುದು. ಪರಿಸರವೆಲ್ಲ ಮನುಷ್ಯನ ಪ್ರಯೋಜನಕ್ಕೇ. ಚರಾಚರವಿಶ್ವಕ್ಕೆ ಅವನೆ ಒಡೆಯ; ಅವನ ಒಡೆತನಕ್ಕೆ ಇತಿಮಿತಿಯೆ ಇರದು. ಇದೇನು ಶುದ್ಧಾಂಗವಾಗಿ ವೈಜ್ಞಾನಿಕ ಸಿದ್ಧಾಂತವೆನ್ನಲಾಗದು. ಆ ಕಾಲದಲ್ಲಿ ಅಲ್ಲಿ ಬಳಕೆಯಲ್ಲಿದ್ದ ಧಾರ್ಮಿಕ ನಿಲುವು ಇದನ್ನೆ ಹೇಳುತ್ತಲಿದ್ದಿತು. ದೇವರು ಮನುಷ್ಯನನ್ನು ಹುಟ್ಟಿಸಿದ್ದೆ ಉಳಿದೆಲ್ಲ ಸೃಷ್ಟಿಗೆ ಅಧಿಪತಿಯಾಗಿ ಎಂದು. ಸ್ವರ್ಗದಿಂದ ಜಾರಿ ಬುವಿಗಿಳಿದು ಬಂದವನಲ್ಲವೆ ಮನುಷ್ಯ? ಇತರ ಪ್ರಾಣಿಗಳಿಗಿಂತ ತೀರ ಬೇರೆಯಾದವನಲ್ಲವೆ? ಇಲ್ಲಿ ಅವನೆ ದೇವರು ತಾನೆ? ಇತರ ಪ್ರಾಣಿಗಳಿಗಿಂತ ಮನುಷ್ಯ ಬೇರೆಯಾಗಿರುವ ವಿವರಗಳಿಲ್ಲದೆ ಇಲ್ಲ. ಮಾತನಾಡುವ ಸಾಮರ್ಥ್ಯ, ಕೈಗಳಿಂದ ಆಯುಧ-ಉಪಕರಣಗಳನ್ನು ಬಳಸುವ ಸಾಹಸ, ಸಂಸ್ಕೃತಿಯನ್ನು ಕಟ್ಟುವ ಶಕ್ತಿ, ಧರ್ಮವನ್ನು ಕುರಿತು ಆಲೋಚಿಸುವ ಹವಣಿಕೆ, ಕಲೆಗಾರಿಕೆಯ ಸಿದ್ಧಿ, ಉದ್ಯಮದ ವೈವಿಧ್ಯ ಇತ್ಯಾದಿ. ಆದರೆ ಇಷ್ಟರಿಂದ ಅವನು ಉಳಿದ ಪ್ರಾಣಿಗಳಿಗಿಂತ ಮೇಲ್ತರನಾದವನು ಎಂದು ಹೇಳಬಹುದೆ? ಇತರ ಜೀವಿಗಳಲ್ಲಿ ಈ ಸೌಲಭ್ಯಗಳಿಲ್ಲ ಎಂದಾಗಲಿ ನಿಶ್ಚಯವಾಗಿದೆಯೆ? ಮನುಷ್ಯನೇ ಪ್ರಪಂಚದ ಕೇಂದ್ರಸ್ಥಾನದಲ್ಲಿರುವ ಪ್ರಾಣಿ ಎಂದು ಸಿದ್ಧವಾಗುತ್ತದೆಯೆ? ನಮ್ಮ ಕಣ್ಣಿಗೆ ನಾವೇ ಪ್ರಧಾನ ; ನಮ್ಮನ್ನು ನಡುವೆ ಇರಿಸಿಕೊಂಡೆ ನಮ್ಮ ಸುತ್ತ ಜಗತ್ತಿನ ಬಲೆಯನ್ನು ಹೆಣೆದುಕೊಳ್ಳುವೆವು. ಉಳಿದ ಪ್ರಾಣಿಗಳ ಅನಿಸಿಕೆಯೇನೋ ಅದನ್ನು ಊಹಿಸಿ ಕೊಳ್ಳಲಾರೆವು.

ಮನುಷ್ಯ ಹಿಡಿದ ದಾರಿ, ಅವನು ಪಡುತ್ತಿರುವ ಕಷ್ಟ, ಅವನ ಕೆಟ್ಟತನದ ಫಲಗಳು, ಅವನೆದುರು ನಿಂತಿರುವ ಸಮಸ್ಯೆಗಳು ಇವನ್ನೆಲ್ಲ ಗಮನಿಸಿದರೆ ನಮ್ಮ ಹೆಗ್ಗಳಿಕೆಯ ಬಿಂಕ ಸಡಿಲವಾದೀತು.

ನಾಗರಿಕತೆಯ ಬಲೆ

ನಾಗರಿಕರೆನಿಸಿಕೊಂಡವರಿಗೆ ನಾಗರಿಕತೆಯೆ ಹೆಚ್ಚೆನಿಸುವುದು ಸಹಜವಲ್ಲವೆ? ನಾಗರಿಕತೆಯ ಗಂಧಗಾಳಿ ಮುಟ್ಟಿಲ್ಲದ ಜನರನ್ನು ಕಂಡರೆ ಅವರಿಗೆ ಕನಿಕರ ಮೂಡುವುದೂ ಸಹಜವೆ; ಓಕರಿಕೆಯಂತೂ ಇದ್ದದ್ದೇ. ಹಳೆಯ ಬುಡಕಟ್ಟುಗಳಿಗೆ ಸೇರಿದ ಜನ, ಕಾಡಾಡಿಗಳು, ಹಳ್ಳಿಗಾಡಿನ ಮಂದಿ ಇವರಿಗೆಲ್ಲ ನಾಗರಿಕತೆಯ ಕವಚವನ್ನು ತೊಡಿಸುವ ಹವಣಿಕೆ ಹಲವು ಸಮಾಜಸೇವಕರದ್ದು. ನಾಗರಿಕತೆ ಯೆಂದರೇನು? ಉಡುಗೆ - ತೊಡುಗೆಯಲ್ಲಿ ಠಾಕುಠೀಕು, ಊಟ-ಉಪಚಾರದಲ್ಲಿ ಹೊಸತನ, ಮನೆಯ ಓರಣ, ಶಾಲೆಯ ವಿದ್ಯೆ, ವಿದ್ಯುಚ್ಛಕ್ತಿಯ ಬಳಕೆ, ಆಧುನಿಕ ಪರಿಕರಗಳ ಬಳಕೆ, ವಾಹನ ಸೌಕರ್ಯ ಮುಂತಾದುವು. ಇವೆಲ್ಲ ಇರದಿದ್ದರೆ ಬದುಕಿನಲ್ಲಿ ಸುಖವಿರದು ಎಂಬ ಕಲ್ಪನೆ ನಾಗರಿಕರದ್ದು.

ಬದುಕಿನಲ್ಲಿ ನಾಜೂಕು, ಹೊರಗಿನ ಅಚ್ಚುಕಟ್ಟು, ಆಚಾರದಲ್ಲಿ ಹೊಸ ನೆಲೆ-ಬೆಲೆ ಇವನ್ನು ಅನಾಗರಿಕ ಜನರಲ್ಲಿ ಮೂಡಿಸಲು ನಾಗರಿಕರೂ, ಅವರ ಸಂಸ್ಥೆಗಳೂ ಸರಕಾರವೂ ಯತ್ನಿಸುತ್ತಲೆ ಇವೆ. ಅನಾಗರಿಕ ಜನರಲ್ಲಿ ತಲೆಮಾರುಗಳಿಂದ ಇದ್ದ ನೆಮ್ಮದಿ, ತೃಪ್ತಿ, ಸ್ವಾವಲಂಬನೆ, ಸಭ್ಯತೆಗಳು ಮರೆಯಾಗಿ, ನಮ್ಮ ಗರಡಿಯಲ್ಲೆ ಕಸರತ್ತು ಮಾಡಲು ಈಗ ಸಿದ್ಧರಾಗುತ್ತಿದ್ದಾರೆನ್ನಿ. ನಾಗರಿಕ ಸಮಾಜದ ರೋಗ - ರುಜಿನಗಳು ಅವರನ್ನು ಕಾಡಲು ತೊಡಗಿವೆ; ನಮ್ಮ ಇಬ್ಬಂದಿಯ ಬದುಕು, ವೇಗ, ದುರಾಸೆ, ಅಬ್ಬರ, ವಿರಸ- ಇವೆಲ್ಲ ಅವರಲ್ಲೂ ಕಾಣುವ ಕಾಲ ಬಂದಿದೆ. ಸಮಾಜ ಸುಧಾರಣೆಯ, ಸಮಾಜಸೇವೆಯ ಹೆಸರಿನಲ್ಲಿ ಅವರ ನೆಲೆ ತಪ್ಪಿಸುವ ಕೆಲಸ ನಡೆಯುತ್ತಿದೆ. ಇವರಿಗೆ ಅನಾದಿಕಾಲದಿಂದ ಅನುಕೂಲವಾಗಿದ್ದ ಸಾಂಸ್ಕೃತಿಕ ಚೌಕಟ್ಟು ಕಳಚಿ ಬೀಳುತ್ತಿದೆ. ನಮ್ಮ ಪರದಾಟ ಅವರಿಗೂ ಈಗೀಗ ಅಂಟಿಕೊಂಡಿದೆ. ಕೋತಿ ತಾನು ಕೆಟ್ಟುದಲ್ಲದೆ ವನವನ್ನೆಲ್ಲ ಕೆಡಿಸುವ ಸಾಮತಿ ಇಲ್ಲಿ ಪ್ರಸ್ತುತ. ನಾಗರಿಕತೆಯ ಮೌಲ್ಯಗಳನ್ನು ಸರಿಯಾಗಿ ಅರಿತುಕೊಂಡು, ಅದರ ಔಚಿತ್ಯಪೂರ್ಣವಾದ ಅನ್ವಯ ಮಾಡುವುದಾದರೆ ಸರಿ. ಹಾಗಲ್ಲದೆ, ಹಳೆಯದೆಲ್ಲ ಹೋಗಬೇಕು, ಹೊಸದೆಲ್ಲ ಬರಬೇಕು ಎಂದಷ್ಟೇ ತವಕವಾದರೆ ಕೋತಿಯ ಕತೆಯೆ.

ಸುಧಾರಣೆ

ಸಮಾಜ ಸುಧಾರಣೆಯ ಮಾತು ಮತ್ತೆ ಮತ್ತೆ ಕೇಳಿ ಬರುತ್ತದೆ. ಸಮಾಜದಲ್ಲಿ ಕಾರಣಾಂತರಗಳಿಂದ, ಮತ್ತು ಕಾಲಕ್ರಮದಲ್ಲಿ ದೋಷಗಳೂ, ರೋಗರುಜಿನಗಳೂ ತೋರಿಕೊಳ್ಳುವುದು ಸಹಜ. ಅವನ್ನು ಪರಿಹರಿಸಿಕೊಳ್ಳಬೇಕೆಂಬ ಪ್ರಯತ್ನವೂ ಸಹಜವೇ. ತಪ್ಪನ್ನು ತಿದ್ದಿಕೊಳ್ಳದಿದ್ದರೆ ಹೇಗೆ? ಜಾಡ್ಯ ಒದಗಿದಾಗ ಮದ್ದು ಮಾಡದಿದ್ದರೆ ಹೇಗೆ? ಆದರೆ ಸಮಾಜದಲ್ಲಿನ ದಿಟವಾದ ದೋಷ ಯಾವುದು ಎಂಬುದನ್ನು ಅರಿತುಕೊಳ್ಳದೆ ಸುಧಾರಿಸಹೊರಡುವುದು, ಮದ್ದಿಗಿಂತ ಜಡ್ಡೇ ಮೇಲು ಎಂಬ ಮಾತಿಗೆ ಸಮರ್ಥನೆಯಾದೀತು!

ಬಹುಮಟ್ಟಿಗೆ ಸುಧಾರಣೆಯೆಂದರೆ ಆರ್ಥಿಕ ಚೌಕಟ್ಟೇ ಎದ್ದುಕಾಣುತ್ತದೆ. ದುಡ್ಡಿದ್ದರೆ ದೊಡ್ಡವನಾದಾನು ಎಂಬ ನಂಬಿಕೆ. ಉದ್ಯೋಗಾವಕಾಶ ಕಲ್ಪಿಸಿಕೊಡಿ, ಉದ್ಯೋಗಕ್ಕೆ ದಾರಿ ಮಾಡಿಕೊಡುವ ವಿದ್ಯಾಭ್ಯಾಸ ಒದಗಿಸಿ ಎಂಬ ಕೂಗೇ ಎಲ್ಲೆಲ್ಲಿಯೂ ಕೇಳುತ್ತಿದೆಯಲ್ಲವೆ? ಇದು ಸರಿಯಲ್ಲ ಎಂದು ಯಾರು ಹೇಳಿಯಾರು? ವಿದ್ಯೆಯಿಲ್ಲದೆ ಉದ್ಯೋಗವಿಲ್ಲ; ಉದ್ಯೋಗವಿರದೆ ದುಡ್ಡಿಲ್ಲ; ದುಡ್ಡಿರದೆ ದೊಡ್ಡವರಾಗುವ ಸಾಧ್ಯತೆಯಿಲ್ಲ. ಆದರೆ ಈ ವಿಚಾರದಲ್ಲಿ ಕಂಡುಬರುವ ಕುಂದು ಇದು-ಉದ್ಯೋಗಕ್ಕಾಗಿಯೇ ವಿದ್ಯೆ ಎನ್ನಬಹುದೇ? ದುಡ್ಡಿಗಾಗಿಯೇ ಉದ್ಯೋಗ ಎನ್ನಬಹುದೇ? ವಿದ್ಯೆಗೆ ಬೇರೆ ಯಾವ ಪ್ರಯೋಜನವೂ ಇರದು ಎಂದರೆ ಸರಿಯೆ? ವ್ಯಕ್ತಿಯ ಬೆಳವಣಿಗೆಯಲ್ಲಿ ಅದರ ಪಾತ್ರವೇ ಇರದೆ? ಮತ್ತೆ, ಉದ್ಯೋಗ ಬರಿಯ ಸಂಪಾದನೆಯ ದಾರಿ ಎಂದರೆ ದೇಶದ ಹಿತ, ದೇಶದ ಪ್ರಗತಿ ಇವು ಗಾಳಿಯಲ್ಲಿ ತೂರಿಹೋಗುತ್ತವೆ.

ದುಡ್ಡಿದ್ದರೆ ದೊಡ್ಡವನು ಎಂಬುದಾದರೂ ಎಲ್ಲರೂ ಒಪ್ಪುವ ಮಾತೆ? ದೊಡ್ಡತನಕ್ಕೆ ಬೇರೆ ಆಯಾಮಗಳೆ ಇಲ್ಲವೆ? ಸುಧಾರಣೆಯಲ್ಲಿ ಆರ್ಥಿಕವೆಂಬ ನೆರವು ವ್ಯಕ್ತಿಗೆ ದೊರಕಬೇಕು, ದಿಟ. ಆದರೆ ಇಷ್ಟಾದರೆ ಸಾಕು ಎಂದಾಗಲಿ, ಇದೇ ಪ್ರಧಾನ ಎಂದಾಗಲಿ ಹೇಳುವಂತಿಲ್ಲ. ವ್ಯಕ್ತಿಯು ಗಳಿಸಿಕೊಳ್ಳುವ ಮೌಲ್ಯಗಳು ಮುಖ್ಯ. ಬದುಕುವ ಬಗೆಗಿಂತ ಬದುಕಿನ ಉದ್ದೇಶಕ್ಕೆ ಹೆಚ್ಚಿನ ಒತ್ತು ಕೊಡುವುದಾದರೆ ಸುಧಾರಣೆ ಸಾರ್ಥಕವಾದೀತು.

ಭೋಗವಸ್ತು ಸಂಗ್ರಹ

ಸಮಾಜದ ರೋಗರುಜಿನಗಳಲ್ಲಿ ಒಂದು. ಭೋಗವಸ್ತುಗಳ ಮಿತಿಮೀರಿದ ಸಂಗ್ರಹಣೆ. ವ್ಯಕ್ತಿಗಳಲ್ಲಿಯೂ ಈ ರೋಗ ಕಾಣಿಸಿಕೊಳ್ಳುತ್ತದೆ.

ಬಾಳು ನೆಮ್ಮದಿಯಿಂದ ಇರಬೇಕಾದರೆ ಕೆಲವು ವಸ್ತುಗಳು ಅಗತ್ಯವಾಗುತ್ತವೆಯಷ್ಟೇ? ಊಟ, ಉಡುಗೆ, ವಸತಿ ಮುಂತಾದುವೆಲ್ಲ ಬಾಳಿನ ಪರಿಕರಗಳೇ. ಇವುಗಳಲ್ಲಿ ಅಗತ್ಯವಾದಷ್ಟು ಎಂಬ ಎಣಿಕೆಯೊಂದುಂಟು. ಅದನ್ನು ಮೀರಿದರೆ ಅವೇ ಭೋಗವಸ್ತುಗಳಾದಾವು.

ಭೋಗವಸ್ತುಗಳನ್ನು ಪಡೆದುಕೊಳ್ಳುವ ಬಯಕೆ ಒದಗುವುದು ಅಗತ್ಯಗಳೆಲ್ಲ ಪೂರೈಸಿದ ಮೇಲೆ. ಭೋಗವಸ್ತುಗಳು ಅನಗತ್ಯವಾದಾಗಲೇ ಸಮಸ್ಯೆ ಏಳುವುದು. ಅವುಗಳನ್ನು ಪಡೆದುಕೊಳ್ಳುವ ಕಾತರವೇಕೆ? ಮುಂದೆ ಎಂದೋ ನೆರವಿಗೆ ಬರಬಹುದು ಎಂಬ ಮುನ್ನೆಚ್ಚರಿಕೆ ಅರ್ಥವಾಗುತ್ತದೆಯೆನ್ನಿ. ಸದ್ಯಕ್ಕೆ ಬೇಡವೆಂದಾದರೂ ಮುಂದೆ ಅಗತ್ಯವಾದವು, ಅಲ್ಲವೆ?

ಆದರೆ ಅಂಥ ಭೋಗವಸ್ತುಗಳದ್ದೇ ಸಂಗ್ರಹಣೆಯಲ್ಲಿ ತಾತ್ಪರ್ಯವೇನು? ಅದರಲ್ಲಿ ಪೈಪೋಟಿ, ಮೇಲಾಟ, ಪ್ರಶಸ್ತಿ, ಪಂದ್ಯ ಇಂಥ ಪ್ರವೃತ್ತಿಗಳು ತಲೆಯೆತ್ತಿಕೊಳ್ಳುವುದು ವಾಡಿಕೆ. ಅನಗತ್ಯವಾದ ವಸ್ತುಗಳನ್ನು ಸಂಗ್ರಹ ಮಾಡುವುದೇ ಒಂದು ಅಗತ್ಯವಾಗಿಬಿಡುತ್ತದೆ!

ಹಲವರ ಬಾಳಿಗೆ ಅಗತ್ಯವಾದುದು ಇವರಿಗೆ ಗೀಳಿನ ವಸ್ತುಗಳು; ತಮ್ಮ ಅನುಭವಕ್ಕೆ ಅನಗತ್ಯವಾದರೂ ಸಂಗ್ರಹಣೆಗೆ ಅಗತ್ಯವಾಗುತ್ತವೆ!

ವ್ಯಕ್ತಿಯ ಚಟ ಸಮಾಜದ ಹಿತವನ್ನು ಕಾಣಲಾರದೆ ಹೋದಾಗ ಅದೊಂದು ರೋಗವೇ.

ಒಬ್ಬೊಬ್ಬ ವ್ಯಕ್ತಿಯ ಅಗತ್ಯಗಳ ಎಣಿಕೆಯೊಂದಿದೆಯಲ್ಲವೆ?

ಈ ಎಣಿಕೆಯನ್ನು ಕಡೆಗಣಿಸಿ ವಸ್ತುಗಳನ್ನು ಅವನು ಶೇಖರಿಸುತ್ತ ಹೊರಟರೆ ಅದರಿಂದ ಇತರರ ಅಗತ್ಯಗಳು ಕೊರತೆಯನ್ನು ಕಂಡಾವು.

ಭೋಗವಸ್ತುಗಳ ಸಂಗ್ರಹಣೆಯಲ್ಲೂ ಒಂದು ಮಿತಿಯಿರಬೇಕು.

ವ್ಯಕ್ತಿ-ಶಕ್ತಿ

ನಮ್ಮ ಸುತ್ತ ಕಣ್ಣಾಡಿಸಿದಾಗ ಜಗತ್ತಿನ ಕುಂದು ಕೊರತೆಗಳೇ ಎದ್ದೆದ್ದು ತೋರಿಕೊಳ್ಳುತ್ತವೆ. ಕೊಳೆಯೋ, ಕಸವೋ, ಕಾರ್ಪಣ್ಯವೋ, ರೋಗವೋ, ರಾದ್ಧಾಂತವೋ, ಬಡತನವೋ, ಅಸೂಯೆಯೋ, ಅಬ್ಬರವೋ, ಕದನವೋ, ಕ್ರೌರ್ಯವೋ ಇವೆಲ್ಲ ಏನು ಚೆನ್ನು? ಜಗತ್ತು ಇನ್ನಷ್ಟು ಚೆನ್ನಾಗಿರಬಹುದಾಗಿದ್ದಿತಲ್ಲ ಎನಿಸುತ್ತದೆ. ತಮ್ಮ ಎಣಿಕೆಯಂತೆ ಜಗತ್ತನ್ನು ಮಾರ್ಪಡಿಸಬೇಕೆಂಬ ಕಾತರ ಇರುವವರು ಎಲ್ಲ ಕಾಲದಲ್ಲೂ ಎಲ್ಲೆಲ್ಲೂ ಇರುತ್ತಾರೆ. ಹಲವರು ಈ ಕಾತರವನ್ನು ಕೆಲಸದಲ್ಲಿ ಇಳಿಸಲೂ ಹವಣಿಸುತ್ತಾರೆ. ಆದರೆ ಸುಧಾರಣೆಯನ್ನು ಎಲ್ಲಿಂದ ಆರಂಭಿಸುವುದು? ಬೆಟ್ಟಕ್ಕೆ ಬಟ್ಟೆ ಹೊಲಿಸುವಾಗ ಮೇಲಿಂದ ಮೊದಲು ಮಾಡುವುದೋ ಕೆಳಗಿಂದಲೋ? ಕಾಡಿನ ಕಳೆಯನ್ನೆಲ್ಲ ಕೀಳುವಾಗ ಯಾವ ಕಡೆಯಿಂದ ತೊಡಗುವುದು? ಬಾಳಲು ಹಸನಾಗಿರುವ ಪ್ರಪಂಚ ಬೇಕೆಂದರೆ ತನ್ನ ರಾಷ್ಟ್ರ ಹಸನಾಗಬೇಕು ಎಂಬಲ್ಲಿಂದ ತಾನೆ ಹೊರಡಬೇಕು? ತನ್ನ ಎಲೆಯ ಮೇಲೆ ಕಪ್ಪೆ ಬಿದ್ದಿರುವಾಗ, ಪಕ್ಕದವನ ಎಲೆಯಿಂದ ನೊಣ ಓಡಿಸಲು ಹೊರಡುವುದೆ?

ರಾಷ್ಟ್ರವೆಲ್ಲ ಓರಣವಾಗಬೇಕೆಂದರೆ ತನ್ನ ರಾಜ್ಯವಾದರೂ ನೆಟ್ಟಗಿರಬೇಕು ಅಲ್ಲವೆ? ಉಳಿದವರಿಗೆ ನೀತಿ ಹೇಳುವಾಗ ತನ್ನ ರೀತಿಯೇನು ಎಂದರಿತಿರಬೇಕು.

ಇನ್ನು ತನ್ನ ರಾಜ್ಯ ನೆಟ್ಟಗಾಗಲಿ ಎಂಬ ಬಯಕೆಯಿದ್ದರೆ ತನ್ನ ಊರು ಮೊದಲು ದಾರಿ ತೋರಿಸಲಿ ಎನ್ನಬೇಕು. ಊರು ಉಳಿದುಕೊಳ್ಳದೆ ರಾಜ್ಯದ ಗತಿಯೇನು? ತನ್ನ ಊರಿಗೆ ಸರಿಯಾದ ದಾರಿಯನ್ನು ತಿಳಿಯ ಹೇಳುವ ಮೊದಲು ತನ್ನ ಕುಟುಂಬ ಸರಿಯಾಗಿದೆಯೆ ಎಂದು ಕಂಡುಕೊಳ್ಳುವ ಅಗತ್ಯವಿಲ್ಲವೆ? ಊರಿನವರಿಗೆ ತನ್ನ ಕುಟುಂಬದ ಓರೆಕೋರೆಗಳು ತಿಳಿದರೆ ತನ್ನ ಮಾತನ್ನು ಕೇಳುವವರು ಯಾರು? ಒಂದೊಂದು ಕುಟುಂಬವೂ ಅಚ್ಚುಕಟ್ಟಾಗಿದ್ದರೆ ತಾನೆ ನೆರೆಹೊರೆ ಚೆನ್ನಾಗಿರುವುದು; ನೆರೆ ಹೊರೆ ಚೆನ್ನಾಗಿದ್ದರೆ ಊರಿಗೆ ನೆಮ್ಮದಿ; ಊರು ನೆಮ್ಮದಿಯಿಂದಿದ್ದರೆ ರಾಜ್ಯ ಹಿತವಾಗಿರುವುದು; ರಾಜ್ಯದ ಹಿತವೆಂದರೆ ರಾಷ್ಟ್ರವೂ ಸುಭದ್ರವೆಂದಾಯಿತು. ಅಷ್ಟಾದರೆ ಜಗತ್ತಿನ ಒಳಿತು ದೂರವೇನಿಲ್ಲ.

ಆದ್ದರಿಂದ ಕುಟುಂಬವನ್ನು ನೇರಾಗಿ ನಡೆಸಿಕೊಳ್ಳುವುದೆ ಸರ್ವೋದಯದ ಉಪಾಯ ಎಂದಾಯಿತು. ಕುಟುಂಬವೆಂದರೆ ಹಲವು ಜನರ ಒಕ್ಕೂಟ ಅದು. ಹಲವು ಜನರೆಂದರೆ ಹಲವು ಬೇರೆ ಬೇರೆ ವ್ಯಕ್ತಿತ್ವಗಳು. ಅವರಲ್ಲಿ ಏರುಪೇರಾದರೆ, ವಿರಸವಾದರೆ ಕುಟುಂಬ ನೇರಾಗಿರದು.

ಎತ್ತು ಏರಿಗೆ, ಎಮ್ಮೆ ನೀರಿಗೆ

ನಮ್ಮ ಬಳಿ ಒಂದೇ ಗಡಿಯಾರವಿರುವಾಗ, ಸರಿಯಾದ ವೇಳೆಯೇನೆಂಬುದು ತಕರಾರಿಲ್ಲದೆ ತಿಳೀದಿತು. ಅದು ತೋರಿಸಿದ್ದೇ ವೇಳೆ!

ಆದರೆ ಎರಡು ಗಡಿಯಾರಗಳಿರುವಾಗ ಸಮಯ ಏನೆಂಬುದನ್ನು ಸರಿಯಾಗಿ ತಿಳಿಯಲಾರೆವು. ಎರಡೂ ಬೇರೆ ಬೇರೆ ವೇಳೆಯನ್ನು ತೋರಿಸುತ್ತಿರುವಾಗ ಯಾವುದನ್ನು ನಂಬುವುದು? ಯಾವುದನ್ನು ಬಿಡುವುದು?

ಒಂದೊಂದು ಗಡಿಯಾರದ್ದು ಒಂದೊಂದು ವೇಳೆ; ಇನ್ನೊಂದು ಗಡಿಯಾರದ ಗೊಡವೆ ಅದಕ್ಕೇಕೆ?

ಇದು ಬರಿಂಪು ಗಡಿಯಾರಗಳಿಗಷ್ಟೇ ಸಲ್ಲುವ ಮಾತಲ್ಲ. ಮನುಷ್ಯರ ವ್ಯವಹಾರ ವೇನು ಇದಕ್ಕೆ ಹೆಚ್ಚು ದೂರವಾದುದಲ್ಲ.

ಒಬ್ಬೊಬ್ಬನಿಗೆ ಒಂದೊಂದು ಅಲೋಚನೆ, ಬಯಕೆ, ನಿಲುವು, ದಾರಿ. ತನ್ನದೇ ಸರಿಯೆಂಬ ಹಟ ಬೇರೆ; ಬೇರೆಯವರ ವಿಚಾರಕ್ಕೆ ತಾನು ಮಣಿಯಲೇಕೆ?

ಮನೆಯಲ್ಲಿ ನಾಲ್ಕು ಜನರಿದ್ದರೆ ನಾಲ್ಕು ನಿಲುವುಗಳು. ಒಬ್ಬರನ್ನೊಬ್ಬರು ಅರಿತುಕೊಂಡು, ಹೊಂದಿಕೊಳ್ಳುವ ಮನೋಧರ್ಮವಿದ್ದರೆ ನಾಲ್ಕು ಜನರಿದ್ದರೂ ಒಬ್ಬರೇ ಇದ್ದಂತೆ.

ಎರಡು ಗಡಿಯಾರಗಳು ಒಂದೇ ವೇಳೆಯನ್ನು ತೋರಿಸುವಂತೆ ಮಾಡಲಾಗು ವುದಿಲ್ಲವೆ? ಗಡಿಯಾರಗಳೇನೋ ಜಡವಸ್ತುಗಳು; ಯಾಂತ್ರಿಕವಾಗಿ ನಡೆಯುವಂಥವು. ನಮ್ಮ ವ್ಯವಸ್ಥೆಗೆ ಒಗ್ಗಿಕೊಳ್ಳುತ್ತವೆ. ಮನುಷ್ಯರ ವಿಚಾರವಾಗಿ ಹೀಗೆ ಹೇಳುವುದು ಕಷ್ಟ. ಹೊಂದಾಣಿಕೆ ಅಷ್ಟು ಸುಲಭವಲ್ಲ. ಮನೆಯಲ್ಲಿ ಒಮ್ಮತವೆಂಬುದೇ ಶ್ರಮಸಾಧ್ಯವೆಂದಾಗ ಇನ್ನು ಸಮುದಾಯದಲ್ಲಿ ಹೇಳುವುದೇನು?

ಪ್ರಜಾಪ್ರಭುತ್ವದ ಕಲ್ಪನೆ ಹರಡಿಕೊಂಡು, ಅದರ ಉದ್ದೇಶವಾಗಲಿ ಇಂಗಿತ ವಾಗಲಿ ಅರಿವಿನಿಂದ ಹೊರಗೇ ಇದ್ದಾಗ, ಜನರಲ್ಲಿ 'ಐಕಮತ್ಯ' (ಎಂದರೆ ಒಂದೇ ಅಭಿಪ್ರಾಯ) ಮೂಡಿಕೊಳ್ಳುವುದು ಸಹಜವೂ ಅಲ್ಲ, ಸುಲಭವೂ ಅಲ್ಲ.

ಎತ್ತು ಏರಿಗೆ, ಎಮ್ಮೆ ನೀರಿಗೆ ಎಳೆದಾಡುವ ಸಾಮತಿ ಇಲ್ಲಿ ಸರಿಹೋಗುತ್ತದೆ. ಸಮಾಜದ ಬಂಡಿಯ ನೊಗಕ್ಕೆ ಎಮ್ಮೆ, ಎತ್ತುಗಳನ್ನು ಕಟ್ಟದೆ ಆದೀತೆ? ಇರುವುವೇ ಅವು!

ಕೆಟ್ಟು-ಕೆಡಿಸುವುದು

ಕೋತಿ ತಾನು ಕೆಡುವುದಲ್ಲದೆ ವನವನ್ನೆಲ್ಲ ಕೆಡಿಸಿತಂತೆ.

ಯಾವ ಕೋತಿಯನ್ನು ಕುರಿತು ಹೇಳಿದ ಮಾತೋ ಇದು ತಿಳಿಯುವುದಿಲ್ಲ. ಅಶೋಕವನವನ್ನು ಹಾಳುಮಾಡಿದ ಹನುಮಂತನನ್ನು ಕುರಿತದ್ದು ಅಲ್ಲವೆಂದು ತೋರುತ್ತದೆ. ವನ ಕೆಟ್ಟರೂ ಅವನೇನು ಕೆಡಲಿಲ್ಲವಲ್ಲ? ಕೋತಿ ಯಾವುದಾದರಿರಲಿ; ತಾತ್ಪರ್ಯವೇನೋ ತಿಳಿಯಾಗಿದೆ. ತಾನು ಕೆಡಲು ಹೊರಟವನು ಇತರರನ್ನೂ ತನ್ನೆಡೆಗೆ ಸೆಳೆದುಕೊಳ್ಳುವುದು ಸಹಜ. ಒಳ್ಳೆಯತನಕ್ಕಾದರೆ ಒಂಟಿಯಾಗಿದ್ದರೂ ಅಂಜಿಕೆಯೇನಿಲ್ಲ. ಕೆಟ್ಟವರು ಮಾತ್ರ ಕೆಡುವವರನ್ನು ಕೂಡಿಕೊಳ್ಳದಿದ್ದರೆ ಅಂಜುವರು!

ಮಿಶನರಿಗಳೆಂಬ ಧರ್ಮಪ್ರಚಾರಕರ ವಿಚಾರದಲ್ಲಿ ಮೊದಲಿಗೆ ಕೋತಿಯ ಸಾಮತಿಯನ್ನು ಕೊಡುವುದಿತ್ತು. ತಾವು ಜಾತಿ ಕೆಟ್ಟು ಇತರರನ್ನೂ ಜಾತಿ ಕೆಡುವಂತೆ ಮಾಡುವುದರಲ್ಲೇ ಅವರ ಧರ್ಮಶ್ರದ್ಧೆಯೆಂದು ಹೇಳುತ್ತಿದ್ದರು. ಈಗ ಅದು ಪ್ರಸಕ್ತವಲ್ಲವೆನ್ನಿ. ಜಾತಿ ಕೆಟ್ಟರೂ ವ್ಯಕ್ತಿ ಕೆಡದೆ ಇರಬಹುದಲ್ಲ? ಕೆಡುವುದಕ್ಕೆ ಧರ್ಮಕ್ಕಿಂತ ಜಾತಿಮತಗಳಿಗಿಂತ ಹೆಚ್ಚು ಪ್ರಬಲವಾದ ಪ್ರಲೋಭನೆಗಳಿವೆಯಲ್ಲವೆ?

ಧರ್ಮದಂತೆ ಅರ್ಥ ಕಾಮಗಳೂ ಪುರುಷಾರ್ಥಗಳೇ. ಕೆಡುವುದಕ್ಕೆ ಇವೆರಡು ಸಾಕು. ಸಮಾಜದಲ್ಲಿ ಇಂದು ಭ್ರಷ್ಟಾಚಾರ, ಲಂಚವಿಚಾರ ಎಷ್ಟು ವ್ಯಾಪಕವಾಗಿದೆ, ಎಷ್ಟು ಸ್ಥಿರವಾಗಿದೆ ಎಂಬುದನ್ನು ಯಾರರಿಯರು? ಭ್ರಷ್ಟಾಚಾರಕ್ಕೆ ನೂರಾರು ಮುಖಗಳು. ಅವುಗಳ ನೋಟದಿಂದ ತಪ್ಪಿಸಿಕೊಳ್ಳಬಲ್ಲವರು ತುಂಬ ವಿರಳ.

ಕೆಟ್ಟವರಂತೂ ಆಗಲೆ ಭ್ರಷ್ಟರು; ಕೆಡುವವರಲ್ಲಿ ಹಲವು ಹಂತಗಳು. ಬೇಗನೆ ಕೆಡುವವರು, ಸಂತೋಷದಿಂದ ಕೆಡುವವರು, ವಿಧಿಯಿಲ್ಲದೆ ಕೆಡುವವರು, ತಾವು ಮಾತ್ರ ಕೆಟ್ಟು ಸುಮ್ಮನಿರುವವರು, ತಾವು ಕೆಟ್ಟ ಮೇಲೆ ಇತರರನ್ನೂ ಕೆಡುವಂತೆ ಪ್ರೋತ್ಸಾಹಿಸುವವರು, ಕೆಟ್ಟು ಮರುಗುವವರು, ಕೆಟ್ಟು ಕೃತಾರ್ಥರಾದವರು ಇತ್ಯಾದಿ.

ಅಂತೂ ತಾವು ಕೆಡದಿದ್ದರೆ ಬಾಳು ಕೆಟ್ಟೀತು ಎಂಬ ಅಂಜಿಕೆಯೇನೋ ಹಲವರಲ್ಲಿ ಕೆಲಸ ಮಾಡುತ್ತದೆ.

ಕೆಡುವುದಕ್ಕೆ ಮುಖ್ಯ ಪ್ರೇರಣೆಯೇ ಇದು. ಕೆಟ್ಟ ಮೇಲೆ ಸಂಘಶಕ್ತಿಯ ಅಗತ್ಯವಿದೆಯಲ್ಲವೆ? ಕೆಡದೆ ಇರುವವರನ್ನು ಎದುರಿಸುವುದು ಹೇಗೆ?

ಮನೆಯೆಂದರೇನು?

'ಮನೆಯೆಂದರೆ ಕಟ್ಟಡವಲ್ಲ, ಮಡದಿಯೇ ಮನೆ'

ಆ ಅರ್ಥದ ಸುಭಾಷಿತವೊಂದು ಸಂಸ್ಕೃತದಲ್ಲಿದೆ. ಮನೆಯೆಂದರೆ ಕಲ್ಲು-ಮಣ್ಣುಗಳಿಂದ ಕಟ್ಟಿದ ವಾಸಸ್ಥಾನ ಎಂದು ತಾನೆ ನಾವೆಲ್ಲ ಬಗೆಯುವುದು? ಅದರಲ್ಲಿ ಒಂದು ಚೈತನ್ಯವಿದೆ, ಸ್ವಾರಸ್ಯವಿದೆ, ಕಳೆಯಿದೆ ಎಂದು ನಾವು ಅಷ್ಟಾಗಿ ಅಥವಾ ತಟ್ಟನೆ ಭಾವಿಸುವುದಿಲ್ಲ. ಮನೆಯಿರುವುದು ಮನೆಯ ಮಂದಿ ವಾಸ ಮಾಡಲೆಂದು ಅಲ್ಲವೆ? ಮನೆಗಾಗಿ ಮನೆಯವರಲ್ಲ, ಮನೆಯವರಿಗಾಗಿ ಮನೆ ಎಂಬ ಸರಳ ತತ್ತ್ವ ಬಹುವೇಳೆ ನಮ್ಮ ಕಣ್ಣು ತಪ್ಪಿಸಿ ಓಡಿಹೋಗುತ್ತದೆ! ಮನೆಯ ಓರಣ, ಅಚ್ಚುಕಟ್ಟು, ಚೆಲುವು, ಸೌಕರ್ಯ ಇವೆಲ್ಲ ಇರಬಾರದೆಂದು ಯಾರು ಹೇಳುತ್ತಾರೆ? ಆದರೆ ಇವಕ್ಕಿಂತ ಮಿಗಿಲಾಗಿ ಮನೆಯವರ ಸಂತೋಷ ಮನೆಯಲ್ಲೆಲ್ಲ ಹರಡಿಕೊಂಡರೆ ಅದೀಗ ಮನೆ! ಮನೆಯ ಹೆಗ್ಗಳಿಕೆ ಮನೆಯಾತನ ಆರ್ಥಿಕ ಸ್ಥಿತಿಯನ್ನು, ಸಾಂಸ್ಕೃತಿಕ ನೆಲೆಯನ್ನು, ಬೇಕೆಂದರೆ ಅಭಿರುಚಿಯನ್ನು ಅವಲಂಬಿಸಿದ್ದು, ಅದರಲ್ಲಿರುವ ಅನುಕೂಲಗಳು 'ಕಾಸಿಗೆ ತಕ್ಕ ಕಜ್ಜಾಯ'. ಮನೆಯ ಚೆಲುವಿನಿಂದ, ಓರಣದಿಂದ, ಅನುಕೂಲದಿಂದ ಒದಗುವ ಸಂತೋಷಕ್ಕೊಂದು ಮಿತಿಯಿದೆ, ಮೇರೆಯಿದೆ; ಅದು ಸ್ವತಂತ್ರವಾದುದೂ ಅಲ್ಲ, ಮನೆಯವರ ಮುನಿಸಿನಿಂದ ಮನೆಯ ಅನುಕೂಲಗಳೆಲ್ಲ ಗಾಳಿಗೆ ತೂರಿಹೋಗುವುದೂ ಉಂಟಲ್ಲ? ಮನೆಯ ಮಂದಿ ಸಂತೋಷದಿಂದ ಇರುವುದು ಮನೆಯ ಹೆಗ್ಗಳಿಕೆಯನ್ನು ಅವಲಂಬಿಸುವುದಿಲ್ಲ. ಮನೆ ಅನುಕೂಲವಾಗಿದ್ದರೆ ಸಾಕು; ಮಡದಿಯೂ ಮಕ್ಕಳೂ ಸುಖವಾಗಿರುವುದು ಕಟ್ಟಿಟ್ಟ ಬುತ್ತಿ ಎನ್ನುವಂತಿಲ್ಲ. ಮನೆಗೊಂದು ಭೌತಿಕ ಪರಿಸರವಿದೆ. ಆಯ, ಅಚ್ಚುಕಟ್ಟು, ಅಂದ, ಅನುಕೂಲಗಳು ಇದಕ್ಕೆ ಸೇರಿದವು. ಇದಲ್ಲದೆ ಮನೆಗೆ ಆಧ್ಯಾತ್ಮಿಕ ವಾತಾವರಣವೂ ಒಂದಿದೆ. ಮನೆಯ ಆವರಣದಲ್ಲಿ ಇರುವ ನೆಮ್ಮದಿ, ಸಂಭ್ರಮ; ನಡೆಯುವ ಹಬ್ಬ, ಹರಿದಿನ, ಆಟ, ಓಲಾಟ; ಮನೆಯವರ ನಡುವೆ ಇರುವ ಪ್ರೀತಿ, ಸೌಜನ್ಯ, ಸೌಹಾರ್ದ ಮೊದಲಾದುವೆಲ್ಲ ಇದರಲ್ಲಿ ಸೇರುತ್ತವೆ.

ದಿಟವಾಗಿ ಮನೆಯೆಂದರೆ ಇದೇ. ಇದನ್ನು ಒಮ್ಮೆ ಕಟ್ಟಿ ಮುಗಿಸುವುದಾಗದು, ದಿನದಿನವೂ, ಗಳಿಗೆ ಗಳಿಗೆಯೂ ಕಟ್ಟುತ್ತಲೇ ಇರಬೇಕು; ಮತ್ತೆ, ಮನೆಯ ಮಂದಿಯೇ ಕಟ್ಟಬೇಕು.

ಎರಡು ಒಂದಾಗುವುದು

ಸುಭಾಷಿತವೊಂದು ಮನ್ಮಥನನ್ನು ಹೀಗೆ ಹೊಗಳುತ್ತದೆ-

'ಲೋಕದಲ್ಲಿ ಒಂದನ್ನು ಎರಡಾಗಿ ಒಡೆಯಬಲ್ಲ ಬಿಲ್ಲುಗಾರರು ಬಹಳ ಮಂದಿ ಇದ್ದಾರು. ಆದರೆ ಎರಡನ್ನು ಒಂದುಗೂಡಿಸುವ ಬಿಲ್ಲುಗಾರ ನೀನು!'

ಮನ್ಮಥನು ಕೈಯಲ್ಲಿ ಕಬ್ಬಿನ ಜಲ್ಲೆಯನ್ನು ಬಿಲ್ಲಾಗಿ ಹಿಡಿದು ಐದು ಬಗೆಯ ಹೂಗಳನ್ನೆ ಬಾಣಗಳಾಗಿ ಬಳಸುವನೆಂದು ಕವಿಸಮಯ. ಅವನು ಗುರಿಯಿಡುವುದು ಹೃದಯಕ್ಕೆ. ತಾತ್ಪರ್ಯವನ್ನು ಗ್ರಹಿಸುವುದು ಕಷ್ಟವಲ್ಲ. ಒಲವಿನ ದಾರಿ ಒಡಲಿನದು; ಅನುರಾಗ ಮೂಡಿತೆಂದರೆ ಹೃದಯ ಪರವಶವಾಗುತ್ತದೆ. ಪ್ರೇಮವನ್ನು ಬಂಧವೆನ್ನುತ್ತಾರೆ. ಅದೊಂದು ಕಟ್ಟು. ಬೇರೆ ಯಾರೂ ಕಟ್ಟುವುದಲ್ಲ; ತನ್ನನ್ನು ತಾನೆ ಕಟ್ಟಿಕೊಳ್ಳುವುದು. ಮತ್ತೆ ಆ ಕಟ್ಟಿನಿಂದ ಸುಖವೇ ವಿನಾ ದುಃಖವಿರದು! ಪ್ರೇಮಪಾಶದಿಂದ ಬಿಡಿಸಿಕೊಳ್ಳಲು ಹೆಣಗಾಡುವ ಹುಚ್ಚ ಯಾರು?

ಎರಡು ಒಡಲುಗಳು ಅನುರಾಗದಿಂದ ಒಂದುಗೂಡಿದಾಗ ಮನ್ಮಥನ ಕೆಲಸ ಕೈಗೂಡಿದಂತೆ. ಮನ್ಮಥ ಮಾಡಿದ್ದನ್ನು ಮನುಷ್ಯರು ಕೆಡಿಸದಂತೆ ಕಾಪಿಟ್ಟುಕೊಳ್ಳುವುದು ಜಾಣತನ. ದುಃಖವೊ ಸುಖವೊ, ಕಷ್ಟವೋ ಕಾರ್ಪಣ್ಯವೊ, ಲಾಭವೊ, ನಷ್ಟವೊ, ಗೆಲುವೊ ಸೋಲೊ, ಬದುಕಿನ ಬಯಲಾಟದಲ್ಲಿ ಎಲ್ಲವೂ ತೋರಿಕೊಳ್ಳುತ್ತವೆ; ತೋರಿಯಡಗುತ್ತವೆ. ಆದರೆ ಒಲವಿನ ಬಲವಿದ್ದರೆ ಇವೊಂದೂ ಗಣನೆಗೆ ಬಾರವು; ಮೊದಲು ಒಂದುಗೂಡಿದ ಒಡಲುಗಳು ಮತ್ತೆ ಬೇರ್ಪಡಲಾರವು, ಒಡೆಯಲಾರವು. ಕಷ್ಟ-ಸುಖಗಳಲ್ಲಿ ಎಡೆಬಿಡದೆ ಇರುವುದನ್ನೇ 'ದಾಂಪತ್ಯರಸ' ಎಂದು ಕರೆದಿದ್ದಾರೆ. ಗಂಡ-ಹೆಂಡತಿಯರಲ್ಲಿರುವ ಅನ್ಯೋನ್ಯ ಅನುಕೂಲಸಿಂಧುವಾಗಿದ್ದರೆ ಸಾಲದು; ಸಂದರ್ಭ ಶುದ್ಧವಾಗಿದ್ದರೂ ಸಾಲದು. ಅಂತಃಕರಣ ಪ್ರಮಾಣವಾದ ಯಾವುದೋ ಹೇಳಲಾರದ ಒಲವು ಕೆಲಸ ಮಾಡುತ್ತಿರಬೇಕು. ಸಂಸಾರದ ಸ್ವಾರಸ್ಯವೆಂದರೆ ಇದೇ. ಸಂಸಾರವನ್ನು ಸಾಗರ ಎನ್ನುವವರು ಹಾಗೇ ಅನ್ನಲಿ; ಉಪ್ಪುನೀರನ್ನೇ ಪಡೆದುಕೊಳ್ಳಲಿ. ಸಂಸಾರವನ್ನು ನಾವೆಯೆನ್ನುವವರು ಹಾಗೆಯೇ ತಿಳಿಯಲಿ; ನಾವೆಯಲ್ಲಿ ದಡ ಸೇರಲಿ.

ಸಂಸಾರವನ್ನೆ ನಂಬಿಕೊಂಡು ಅದರಲ್ಲೇ ಇರುವ ನಮ್ಮ ಪಾಲಿಗೆ ಒಲವೆಂಬ ಊರುಗೋಲಿರಲಿ. ಅಷ್ಟೆ ಸಂಸಾರದ ಸಾರ್ಥಕತೆ.

ಹೆಣ್ಣು-ಗಂಡು

ಗಂಡು, ಹೆಣ್ಣು ಎಂದು ವಿಭಾಗಮಾಡುವುದು ದೇಹದ ಕೆಲವು ವಿವರಗಳಿಂದ ಸರಿಯೆ.

ಆದರೆ ತುಂಬ ಸ್ಥೂಲವಾದ ವಿಂಗಡಣೆ ಇದು. ಹದಿನಾರಾಣೆ ಗಂಡಸರೂ ಇಲ್ಲ. ಹದಿನಾರಾಣೆ ಹೆಂಗಸರೂ ಇಲ್ಲ. ಎಲ್ಲರಲ್ಲೂ ಎರಡೂ ಅಂಶಗಳಿರುತ್ತವೆ. ಹೆಣ್ಣುಪುಕ್ಕಲ, ಗಂಡುಬೀರಿ ಎಂಬ ಮಾತುಗಳನ್ನು ಬಳಸುವಾಗ ದೇಹದ ವಿವರವನ್ನು ಮೀರಿ ಮನಸ್ಸಿನ ಪಾತ್ರವಿರುವುದನ್ನು ಗಮನಿಸುತ್ತೇವೆ. ಸಮಾಜದಲ್ಲಿ ಗಂಡಸಿನ, ಹೆಂಗಸಿನ ವೃತ್ತಿಗಳನ್ನೊ ಪ್ರವೃತ್ತಿಗಳನ್ನೊ ಬೇರ್ಪಡಿಸಿರುವುದರಿಂದ, ನಮ್ಮ ಕಲ್ಪನೆಯಲ್ಲಿ ಗಂಡಸರು ಹೀಗಿರಬೇಕು, ಹೆಂಗಸರು ಹಾಗಿರಬೇಕು ಎಂಬ ನಿರೀಕ್ಷಣೆ.

ಮನುಷ್ಯ ಮುಂದುವರಿದ ದಾರಿಯಲ್ಲಿ ಗರ್ಭತಳೆಯುವುದು, ಮಕ್ಕಳನ್ನು ಹೆರುವುದು, ಮಕ್ಕಳನ್ನು ಬೆಳೆಸುವುದು, ಮನೆಯನ್ನು ನೋಡಿಕೊಳ್ಳುವುದು ಇವು ಹೆಂಗಸಿನ ಪಾಲಿಗೆ ಬಂದ ಕೆಲಸಗಳು; ಇವಕ್ಕೆ ಪೂರಕವಾಗಿ ಗಂಡಸಿನ ಹೊಣೆಗಾರಿಕೆ ಅಷ್ಟೆ. ಹೊರಗೆ ಹೋಗಿ ದುಡಿಯುವುದು, ಬದುಕಿಗೆ ಬೇಕಾದುದನ್ನು ಪಡೆದುಕೊಳ್ಳುವುದು, ಬೇಟೆ, ಕಾದಾಟ ಇವೆಲ್ಲ ಗಂಡಿನ ಕೆಲಸಗಳು. ಸಮಾಜದಲ್ಲಿ ಇವೆ ಮುಖ್ಯವೆನಿಸಿದಾಗ ಗಂಡಸಿನದೆ ಮೇಲುಗೈಯಾಯಿತು. ಗಂಡಿನ ಹೆಗ್ಗಳಿಕೆಗೆ ನಿಸರ್ಗದ ಸಮರ್ಥನೆಯೇನಿರದು. ಅವನು ಮಕ್ಕಳನ್ನು ಹೆರಲಾರ ಎಂದ ಮಾತ್ರಕ್ಕೆ ಮಕ್ಕಳನ್ನು ಬೆಳೆಸಲಾರ ಎಂದೇನು ಅಲ್ಲ. ಹೆಂಗಸು ಮಾಡಬಲ್ಲ ಉಳಿದ ಯಾವುದೇ ಕೆಲಸವನ್ನೂ ಅವನು ಮಾಡಬಲ್ಲ. ಹೆಂಗಸೋ ಎಂದರೆ, ಗಂಡಸು ಮಾಡುವ ಬೇಟೆ, ಕಾದಾಟ, ಆಡಳಿತ, ದುಡಿತ ಯಾವುದನ್ನಾದರೂ ಮಾಡಬಲ್ಲಳು.

ಸಮಾಜ ಬೆಳೆಸಿಕೊಂಡು ಬಂದ ಸಂಪ್ರದಾಯವೆ ಅಡ್ಡಿ, ಅಷ್ಟೆ. ಇಲ್ಲೂ ಕಲೆ, ಕಲ್ಪನೆ, ಸೂಕ್ಷ್ಮವಾದ ಕೆಲಸ, ಆಳವಾದ ಚಿಂತನೆ, ಕರಕೌಶಲ ಇವೆಲ್ಲ ಹೆಂಗಸಿಗೆ ಸಹಜವಾದುದೆಂಬ ನಂಬಿಕೆಯಿದೆ. ಇವನ್ನು ಗಂಡಸಿನಲ್ಲಿ ಗುರುತಿಸಬಹುದಾದರೆ ಆ ಮಟ್ಟಿಗೆ ಅವನು ಹೆಂಗಸೆ ತಾನೆ? ಹಾಗೆಯೆ ಧೈರ್ಯ, ನಿರ್ವಾಹಕಶಕ್ತಿ, ದೇಹಬಲ, ದುಡಿಮೆ ಮೊದಲಾದುವನ್ನು ಹೆಂಗಸಿನಲ್ಲಿ ಗುರುತಿಸಬಹುದಾದರೆ ಅವಳು ಆ ಮಟ್ಟಿಗೆ ಗಂಡಸೇ.

ಹೀಗೆ ವಿಚಾರ ಮಾಡಿದಾಗಲೂ ಪೂರಾ ಗಂಡೆನ್ನಲು, ಪೂರಾ ಹೆಣ್ಣೆನ್ನಲು ಆಗದು. ಹೆಣ್ಣಿನಲ್ಲಿ ಗಂಡುತನ, ಗಂಡಿನಲ್ಲಿ ಹೆಣ್ಣುತನ ಇರುವುದರಿಂದಲೇ ಪರಸ್ಪರ ಆಕರ್ಷಣೆ; ಸೆಣಸಾಟ.

ಮದುವೆಯೋ ಮನೆಹಾಳೋ

ಈ ಹೆಸರಿನ ಕಥೆಯೊಂದು ಹಿಂದೆ ಜನಪ್ರಿಯವಾಗಿದ್ದಿತು. ಈಗಿನವರು ಅದನ್ನು ಓದುವುದು ವಿರಳ.

ಮದುವೆಯ ಹೆಸರಿನಲ್ಲಿ ಹೆಣ್ಣುಮಕ್ಕಳ ತಂದೆತಾಯಿಯರು ಪಡುವ ಬವಣೆ ಈ ಕಥೆಯ ಮೂಲ ಸಾಮಗ್ರಿ. ಕಥೆಯನ್ನು ಮರೆತರೂ ಅದರ ಸಾಮಾಗ್ರಿಯನ್ನೇನು ಮರೆಯುವಂತಿಲ್ಲ. ಹೆಣ್ಣು ಹೆತ್ತವರು ಗಂಡಿಗಾಗಿ ಪರದಾಡುವುದು ಮಾತ್ರವಲ್ಲದೆ, ಹೆಣ್ಣು-ಗಂಡುಗಳ ಮಾರುಕಟ್ಟೆಯ ಅಬ್ಬರವನ್ನೂ ಎದುರಿಸಬೇಕು! ವರದಕ್ಷಿಣೆಯ ಪಿಡುಗು ಈಗ ಕಾನೂನಿನಿಂದಾಗಿ ಮರೆಯಾಯಿತು ಎನ್ನುವಂತಿಲ್ಲ.

ಮುಂಬಾಗಿಲಿನಿಂದ ಹೋದ ಪಿಶಾಚಿಗೆ ಗವಾಕ್ಷಿಯಿಂದ ಮತ್ತೆ ಬರುವುದೇನು ಕಷ್ಟವಲ್ಲ! ವರದಕ್ಷಿಣೆ ಕಾನೂನಿಗೆ ಆಗದು. ಅಷ್ಟೆ ತಾನೆ? ವರೋಪಚಾರಕ್ಕೆ ಅಡ್ಡಿಯೇನು? ಬರಬೇಕಾದದ್ದು, ಬಯಸಿದ್ದು ವರದಕ್ಷಿಣೆಯ ರೂಪದಲ್ಲೆ ಬರಬೇಕೆಂಬ ಹಟವೇನಿರದು. ವರನ ಕಡೆಯವರು ಕೊಡುವ ಕಾಟ ಒಂದು ಕಡೆಯಾದರೆ, ಮದುವೆಯ ಸಂಭ್ರಮಕ್ಕೆಂದು ಪಡುವ ಕಷ್ಟ ಇನ್ನೊಂದು ಕಡೆ. ಇದು ನಾನಾ ಬಗೆಯದು. ಕಲ್ಯಾಣ ಮಂದಿರಗಳ ಹಾವಳಿಯಂತೂ ಹೇಳತೀರದು. ಇದೊಂದು ಅತ್ಯಂತ ಲಾಭದಾಯಕವಾದ ಉದ್ಯಮ. ಇವುಗಳಲ್ಲೆ ಪೈಪೋಟಿ, ಮೇಲಾಟ! ಅವು ನಡೆಸುವ ಸುಲಿಗೆ ಯಾವ ಕಾನೂನಿಗೆ ಒಳಪಡುವಂಥದಲ್ಲ.

ಹಣವಂತರು ಮದುವೆಯ ವೇಳೆ ತೋರಿಸುವ ಅದ್ಧೂರಿ ಹಣವಿಲ್ಲದವರಿಗೂ ಮೇಲುಪಂಕ್ತಿಯಾಗಿಬಿಡುತ್ತದೆ. ನವಿಲನ್ನು ನೋಡಿ ಕೆಂಬೂತವೂ ರೆಕ್ಕೆ ತೆರೆದುಕೊಳ್ಳದೆ ಬೇರೆ ದಾರಿಯಿಲ್ಲ! ನವಿಲಿಗೇನೋ ಅದು ಆಟ; ಆದರೆ ಕೆಂಬೂತಕ್ಕೆ ಅದೇ ಕಾಟ! ಮದುವೆಯ ಸಂದರ್ಭದಲ್ಲಿ ವಧೂ-ವರರ ಕಡೆಯವರು ಎದುರಾಳಿಗಳು; ಅವರಿಬ್ಬರ ನಡುವೆ ಸೆಣಸಾಟ ಇರದಿದ್ದರೆ ಮದುವೆಯ ಸ್ವಾರಸ್ಯವೇ ಇರದು! ವರನ ಕಡೆಯವರು ಗೆದ್ದೇಗೆಲ್ಲುವರೆಂಬುದೇನೋ ದಿಟ. ಅವರನ್ನು ಮೆಚ್ಚಿಸಲು ಈ ಕಡೆಯವರು ಊಟ, ಉಪಚಾರಗಳಲ್ಲಿ ಹೊರಬೇಕಾದ ಆರ್ಥಿಕ ಭಾರ, ಆತಂಕ, ಕಳವಳಗಳು ದೇವರಿಗೇ ಪ್ರೀತಿ.

ಅಳಿಯ ಬಂದೇನು ಮನೆಯನ್ನು ತೊಳೆಯಬೇಕಾದ ಅಗತ್ಯವಿಲ್ಲ; ಮದುವೆಯ ಹೊತ್ತಿಗೇ ಮನೆಯ ಆಯಕಟ್ಟು ಕುಸಿದಿರುತ್ತದೆ!

ಆಯ-ವ್ಯಯ

ಆಯವೆಂದರೆ ಕೈಸೇರುವುದು; ವ್ಯಯವೆಂದರೆ ಕೈಬಿಡುವುದು.

ಆರ್ಥಿಕ ನೀತಿಗಳಲ್ಲಿ 'ಆಯಾನುರೂಪ ವ್ಯಯ' ಎಂಬುದೊಂದು. ಸಂಪಾದನೆಗೆ ಅನುಗುಣವಾಗಿ ವೆಚ್ಚ ಎಂಬ ನೀತಿ ಸೂತ್ರ.

ಸಂಪಾದನೆ ವ್ಯಕ್ತಿಯ ಯೋಗ್ಯತೆ, ಸಾಮರ್ಥ್ಯ, ಅದೃಷ್ಟಗಳನ್ನವಲಂಬಿಸಿದ್ದು. ಅವನ ದುಡಿಮೆ, ಅವನಿಗಿರುವ ಅವಕಾಶ, ಅವನ ಆರೋಗ್ಯ ಮೊದಲಾದುವೂ ನೆರವಾಗುತ್ತವೆ. ಆದರೆ ವೆಚ್ಚವೆಲ್ಲ ಅವನನ್ನೇ ಅವಲಂಬಿಸಿರುವುದಿಲ್ಲ. ತಾನಾಗಿ, ತನ್ನ ಮೋಜಿಗೆಂದು ಮಾಡುವ ವೆಚ್ಚವನ್ನು ಬಿಡಿ. ಅದು ಅವನ ಪಾಡು. ಅದರ ಸುಖವೋ ದುಃಖವೋ ಅವನಿಗೆ ಸೇರಿದ್ದು.

ಇನ್ನು ಬದುಕಿನ ಬಂಡಿ ಸಾಗಬೇಕಾದರೆ, ತನ್ನ ಕುಟುಂಬದವರು ನೆಮ್ಮದಿ ಯಿಂದಿರಬೇಕಾದರೆ ಅವನು ಮಾಡುವ ವೆಚ್ಚ ಅವನ ಅಧೀನವಲ್ಲ.

ದಿನನಿತ್ಯ ಬಳಸುವ ಪದಾರ್ಥಗಳ ಬೆಲೆ ದಿನನಿತ್ಯವೂ ಏರುವುದನ್ನು ಅವನೇನು ತಡೆಹಿಡಿಯುವಂತಿಲ್ಲ. ಪ್ರಯಾಣ ಸೌಕರ್ಯಗಳ ದರ ವಿಪರೀತವಾದರೆ ಅವನು ಮಾಡುವುದಾದರೂ ಏನಿದೆ? ತೆರಿಗೆಗಳ ಹೊರೆ ಭಾರವಾದರೆ ಅವನು ಮಾಡಬಹು ದಾದರೂ ಏನು?

ಆಯಕ್ಕೆ ತಕ್ಕಂತೆ ವ್ಯಯ ಎನ್ನುವ ಸೂತ್ರವನ್ನು ಎಲ್ಲರೂ ಪಾಲಿಸುವುದು ಕಷ್ಟ. ಆದರೆ ವ್ಯಯಕ್ಕೆ ತಕ್ಕಂತೆ ಆಯ ಎಂದು ಸಾಧಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ.

ಬಗೆ ಬಗೆಯ ಗಳಿಕೆಗಳು, ಆದಾಯಕ್ಕೆಂದು ವಿಶೇಷ ಶ್ರಮ, ಗಂಡ-ಹೆಂಡಿರಿಬ್ಬರ ಎಡೆಬಿಡದ ದುಡಿಮೆ, ನೀತಿಯ ಮೇಲಾಟವಿರದಂತೆ ವ್ಯವಹಾರ, ಇತ್ಯಾದಿ ಇತ್ಯಾದಿ.

ವ್ಯಯದ ಅಂದಾಜನ್ನು ಅನುಸರಿಸಿ ಆದಾಯವನ್ನು ರೂಪಿಸಿಕೊಳ್ಳುವುದೇನೋ ಸರಿಯೆ. ಬೆಟ್ಟ ಮುಹಮ್ಮದನ ಬಳಿಗೆ ಬಾರದೆ ಇದ್ದಾಗ, ಮುಹಮ್ಮದನೆ ಬೆಟ್ಟದ ಬಳಿ ಹೋಗಬೇಕು ತಾನೆ?

ಆದರೆ ಈ ಹೊಂದಾಣಿಕೆಯ ಹವಣಿಕೆಯಲ್ಲಿ ಬದುಕಿನ ಇತರ ಅಗತ್ಯಗಳ ಮೇಲೆ ಎರಗುವ ಏಟು ತಪ್ಪಿದ್ದಲ್ಲ.

ಸಂಪಾದನೆಯ ಬೇತಾಳ ಬೆನ್ನಟ್ಟಿದಾಗ ಮನೆಯಲ್ಲಿ ನೆಮ್ಮದಿಯಿರುವುದು ಹೇಗೆ? ದುಡಿಮೆಯ ಬೇಗೆಯ ನಡುವೆ ತಣ್ಣಗಿರುವುದು ಆದೀತೆ?

ಮನೆಯಲ್ಲಿ ಮೂಲಭೂತವಾಗಿರಬೇಕಾದ ಮೌಲ್ಯಗಳು ಗಾಳಿಪಾಲಾಗದೆ ಉಳಿದುಕೊಳ್ಳುವುದು ಕಷ್ಟವೇ ಸರಿ.

ಬರೀಗುಲ್ಲು

ಜನರು ಸಾಮಾನ್ಯವಾಗಿ ಉತ್ಸವಪ್ರಿಯರು. ಓಲಾಟವೆಂದರೆ ಬಹುಮಂದಿ ಬಾಯಿಬಿಡುವರು. ಸಡಗರ, ಸಂಭ್ರಮ, ಮೋಜು, ಇವೆಲ್ಲ ಜೀವನದ ಅಗತ್ಯವಾದ ಅಂಗಗಳೇ.

ದಿನನಿತ್ಯದ ಬದುಕಿನಲ್ಲಿರುವ ಒತ್ತಡ, ಜಂಜಡ, ಬೇಸರ, ಕ್ಲೇಶಗಳನ್ನು ಮರೆಯಲು ಏನಾದರೊಂದು ಅವಕಾಶ ಇರಬೇಡವೇ? ರಾಜಕಾರಣ, ಧರ್ಮ, ಆಂದೋಳನ ಮುಂತಾಗಿ ನೆಪಗಳನ್ನು ಹುಟ್ಟಿಸಿಕೊಂಡು ಗುಂಪು ಕೂಡಬೇಕು. ನೆರೆದ ಗುಂಪಿನಲ್ಲಿ ಮೈಮರೆಯಬೇಕು; ಅದೊಂದು ಆವೇಶ ಬಂದಂತೆ. ಗುಂಪಿನಲ್ಲಿ ಸೇರಿದಾಗ ವ್ಯಕ್ತಿಗೊಂದು ಆವೇಶ ಬರುವುದೆನ್ನಿ; ಅವನ ಸ್ವಭಾವ ಮಾರ್ಪಡುತ್ತದೆ. ಹಲವು ವೇಳೆ ಅತಿರೇಕವೂ ಆಗುವುದುಂಟು.

ಗುಂಪುಗೂಡುವಾಗ ಯಾವುದೋ ಒಳ್ಳೆಯ ಉದ್ದೇಶವೇನೋ ಇರಬಹುದು; ಆದರೆ ಅದರ ಅರಿವು ಗುಂಪಿನ ನೂಕುನುಗ್ಗಲಾಟದಲ್ಲಿ ಮರೆಯಾಗುತ್ತದೆ.

ಉದ್ದೇಶಕ್ಕಿಂತ ಗುಂಪುಗಾರಿಕೆಯೆ ಮುಖ್ಯವಾಗುತ್ತದೆ. ಸಂದರ್ಭ ಸುಖದ್ದೇ ಆಗಲಿ ವಿಷಾದದ್ದೆ ಆಗಲಿ, ಮಂಡನೆಗಾಗಿ ಇರಲಿ, ಖಂಡನೆಗಾಗಿ ಇರಲಿ, ಗುಂಪು ಗುಂಪೇ; ಅದರ ಸ್ವಭಾವವೇನು ಬದಲಾಗುವುದಿಲ್ಲ.

ದೇವರ ಹೆಸರಿನಲ್ಲಿ ಉತ್ಸವವೇ ಆಗಲಿ, ಜನ ಸೇರಿದಾಗ ದೇವರು ದೂರವೇ, ದೇವರಿಗಾಗಿ ಉತ್ಸವವಲ್ಲ; ಉತ್ಸವಕ್ಕಾಗಿ ದೇವರು. ಗುಂಪಿನಲ್ಲಿ ಗೋವಿಂದ ಎನ್ನುವಾಗ ಭಕ್ತಿಯದೇನು ಬಲ?

ರಾಜಕಾರಣದ ಗುಂಪಾದರೆ ಜನಶಕ್ತಿಯ ಪ್ರದರ್ಶನ; ಗುಂಪಿನಲ್ಲಿ ನೆರೆದವರೆಲ್ಲ ವಿವೇಕಿಗಳಂತೂ ಅಲ್ಲ! ಗುಂಪಿನ ಮನೋಧರ್ಮದಲ್ಲಿ ರಚನಾತ್ಮಕವಾದ ಅಂಶ ಅಲ್ಪ; ಉತ್ಸವದ ಭಾಗ ಹೆಚ್ಚಿನದು. ಸಡಗರವೆಲ್ಲ ಅಡಗಿದಮೇಲೆ, ನೆಮ್ಮದಿಯಿಂದ ಆದದ್ದೇನು, ಮಾಡಿದ್ದೇನು, ಲಾಭವೇನು ಎಂದು ಆಲೋಚನೆ ಮಾಡಿದಾಗ.

"ಬರೀ ಗುಲ್ಲು, ನಿದ್ದೆಗೇಡು"!

ಆರೋಗ್ಯ ಸಾಧನೆ

ಆರೋಗ್ಯ ನಿಲ್ಲುವುದು ನಾಲ್ಕು ಕಾಲುಗಳ ಮೇಲೆ. ಗಾಳಿ, ಬೆಳಕು, ನೀರು, ಆಹಾರ ಇವೆ ಈ ನಾಲ್ಕು ಕಾಲುಗಳು.

ಗಾಳಿಯಂತೂ ನಮ್ಮ ಉಸಿರು ತಾನೆ? ಉಸಿರು ಹೊರಗಾದರೆ ಅದು ಗಾಳಿಯಾಯಿತು; ಗಾಳಿ ಮೈಯೊಳಗೆ ಬಂದರೆ ಉಸಿರಾಯಿತು. ಬದುಕಿಗೆ ಆಸರೆ ಇದೆ.

ಗಾಳಿ ಕೆಟ್ಟರೆ ಉಸಿರು ಕೆಡದೆ ಇರುವುದೆ? ಉಸಿರು ಕೆಟ್ಟರೆ ಆರೋಗ್ಯ ಉಳಿಯುವುದು ಹೇಗೆ? ಆದರೆ ಗಾಳಿ ಕೆಡಲು ನೂರು ಸಾಧನೆಗಳು ತಲೆದೋರಿಕೊಂಡಿವೆ!

ಹಾಗೆಯೆ ಬೆಳಕು. ಬೆಳಕೆಂದರೆ ಸೂರ್ಯನದು. ಇದು ಆರೋಗ್ಯಕ್ಕೆ ಅಗತ್ಯವೆಂದು ಯಾರಿಗೆ ತಿಳಿಯದು? ಆದರೆ ಸೂರ್ಯನ ಬೆಳಕಿಗೆ ಅಂಜಿ ಮನೆಯಲ್ಲೋ ಮರೆಯೊಳಗೋ ಅಡಗಿಕೊಂಡಿರುವ ಹವ್ಯಾಸ ಹೆಚ್ಚುತ್ತಿದೆ!

ನೀರು ಮತ್ತೊಂದು ಆಸರೆ. ಅನೇಕ ರೋಗಗಳು ನೀರಿನಿಂದಲೇ ಬಗೆಹರಿಯುತ್ತವೆ. ಆದರೆ ಹರಿಯುವ ನೀರನ್ನು ಹರಿಯಗೊಡದೆ, ತಿಳಿನೀರನ್ನು ಕದಡಿ, ಕೆಡಿಸುವ ಸ್ಥಿತಿ ಒದಗಿರುವಾಗ ನೀರಿನಿಂದಲೇ ರೋಗಗಳು ಉಂಟಾಗುತ್ತಿವೆ!

ಇನ್ನು ಆಹಾರ. ಬದುಕಿಗೆ ಬೇಕಾಗುವ ಆಹಾರ ಶುಚಿಯಾಗಿರಬೇಕು; ರುಚಿಯಾಗಿರಬೇಕು; ಹಿತವಾಗಿರಬೇಕು; ಮಿತವಾಗಿರಬೇಕು. ಆದರೆ ಈಗ ರಸಾಯನಗಳ ಬಳಕೆ, ಅಕಾಲ ಬೆಳೆ. ಹೀಗೆ ಹತ್ತಾರು ಕಾರಣಗಳಿಂದ ಆಹಾರದಲ್ಲಿ ಸತ್ತ್ವವೂ ಸಾತ್ತ್ವಿಕತೆಯೂ ಕಡಮೆಯಾಗಿವೆ.

ಈ ನಾಲ್ಕು ವಿವರಗಳಲ್ಲೂ ಎಚ್ಚರವಿಲ್ಲದೆ, ವಿವೇಕವಿಲ್ಲದೆ ಪರದಾಡುವ ಪರಿಸ್ಥಿತಿ ನಮಗೆ ಬಂದೊದಗುತ್ತಿದೆ. ಈ ನಾಲ್ಕನ್ನು ಶುದ್ಧವಾಗಿ ಉಳಿಸಿಕೊಂಡು, ಅಗತ್ಯವಾದಷ್ಟು ಸೇವಿಸುವವರಿಗೆ ಸರಿಯೆ. ಹಾಗಿಲ್ಲದಿದ್ದರೆ ನಮ್ಮ ಆರೋಗ್ಯಕ್ಕೆ ಸಂಚಕಾರ ತಪ್ಪಿದ್ದಲ್ಲ.

ಮದ್ದುಗಳಿಂದ ಆರೋಗ್ಯ ಉಳಿದೀತು ಎಂಬ ಭ್ರಮೆ ಸಲ್ಲದು. ವೈದ್ಯಪದ್ಧತಿಯಿರುವುದು ರೋಗಕ್ಕೆ ಮದ್ದುಮಾಡಲು. ಆರೋಗ್ಯವನ್ನುಳಿಸುವ ಹೊಣೆ ಅದರ ಮೇಲೆ ಇನ್ನೂ ಬಿದ್ದಂತಿಲ್ಲ.

ನಮ್ಮ ಆರೋಗ್ಯದ ಚಿಂತೆ ನಮಗಿರಬೇಕಲ್ಲವೆ?

ನೀರು-ನೆರವು

ನೀರಿನ ಸ್ವಾರಸ್ಯ ಅರಿತವರನ್ನು ಬೇನೆ ಕಾಡುವುದು ಕಡಮೆ.

ಬಹುಮಟ್ಟಿಗೆ ಬೇನೆಗಳು ಬಂದಡರುವುದು ನೀರಿನ ಬಗ್ಗೆ ನಾವು ಅಷ್ಟು ಎಚ್ಚರಿಕೆ ವಹಿಸದಿರುವುದರಿಂದ.

ಯಾವ ನೀರನ್ನು ಕುಡಿಯಬೇಕು?ಎಷ್ಟು ಕುಡಿಯಬೇಕು? ಯಾವಾಗ? ಎಲ್ಲಿ? ಇವೆಲ್ಲ ಗೌಣವಾದ ವಿಚಾರಗಳಲ್ಲ; ಮುಖ್ಯವಾದವು.

ನೀರಡಿಕೆಯಾದರೆ ನೀರು ಕುಡಿಯುವವರೇ ಬಹುಮಂದಿ. ಅದೇನು ತಪ್ಪಲ್ಲವೆನ್ನಿ. ಬಾಯಾರಿತೆಂದರೆ ದೇಹಕ್ಕೆ ನೀರಿನ ಅಗತ್ಯವಿದೆಯೆಂದೇ ಅರ್ಥ. ನೀರನ್ನು ಕುಡಿಯ ಬೇಕಾದದ್ದೇ.

ಆದರೆ ಸಮಯ ಸಾಧಿಸಿ ನೀರನ್ನು ಕುಡಿಯಬೇಕೆಂದು ವೈದ್ಯಶಾಸ್ತ್ರ ಸೂಚಿಸುತ್ತದೆ. ಮುಂಜಾನೆ ಬರಿಹೊಟ್ಟೆಯಲ್ಲಿ ತಣ್ಣೀರು ಕುಡಿದರೆ ಒಳ್ಳೆಯದು; ಅದೂ ರಾತ್ರಿಯೆಲ್ಲ ತಾಮ್ರದ ಲೋಟದಲ್ಲಿದ್ದುದಾದರೆ ಇನ್ನೂ ಒಳ್ಳೆಯದು. ಪರಿಮಿತ, ನಿಯತ ಪ್ರಮಾಣದಲ್ಲಿ.

ಹಾಗೆಯೇ ಸಂಜೆ ಒಂದು ಲೋಟ ತಣ್ಣೀರು ಹಿತಕಾರಿ. ಬಾಯಾರಿಕೆಯಿರಲಿ ಇಲ್ಲದಿರಲಿ, ನೀರಿನ ಸೇವನೆ ಒಳ್ಳೆಯದು. ಆಯುರ್ವೇದ ಗ್ರಂಥಗಳಲ್ಲಿ ಹೀಗೆ ಹೇಳಿದೆ-

ಉಂಡದ್ದು ಅರಗದಿದ್ದರೆ ನೀರು ಕುಡಿಯುವುದೇ ಮದ್ದು (ಅಜೀರ್ಣೇ ಭೇಷಜಂ ವಾರಿ); ಉಂಡದ್ದು ಅರಗಿದ್ದರೆ ನೀರು ಬಲವನ್ನು ನೀಡುತ್ತದೆ (ಜೀರ್ಣೇ ವಾರಿ ಬಲಪ್ರದಂ). ಊಟದ ನಡುವೆ ಸ್ವಲ್ಪ ಸ್ವಲ್ಪ ನೀರನ್ನು ಸೇವಿಸುತ್ತಿದ್ದರೆ ಅದು ಅಮೃತಕ್ಕೆ ಸಮಾನ (ಅಮೃತಂ ಭೋಜನಾರ್ಧೆ).

ಆದರೆ ಊಟವಾದೊಡನೆ ನೀರನ್ನು ಕುಡಿಯುವುದು ತಪ್ಪು; ಉಂಡದ್ದು ಸರಿಯಾಗಿ ಅರಗಲು, ಮೈ ಹತ್ತಲು ಅಡ್ಡಿ ಮಾಡುತ್ತದೆ. (ಭುಕ್ತಸ್ಯೋಪರಿ ತದ್ವಿಷಂ).

ಊಟವಾದ ಮೇಲೆ ಒಂದು ಗಂಟೆಯಾದರೂ ಬಿಟ್ಟು ನೀರನ್ನು ಕುಡಿಯಬೇಕೆಂದು ಹೇಳುತ್ತಾರೆ. ಆಗ ಅದು ಆಹಾರ ಸರಿಯಾಗಿ ಜೀರ್ಣವಾಗಲು ನೆರವಾಗುತ್ತದೆ.

ಯಾವ ನೀರನ್ನು ಕುಡಿಯಬೇಕೆಂಬುದು ನಮ್ಮ ಕೈಲಿದೆಯೆ? ದೊರಕುವ ನೀರನ್ನು ಕುಡಿಯಬೇಕಾದುದು ನಮ್ಮ ಹಣೆಬರಹ. ಅದು ರೋಗಕ್ಕೆ ದಾರಿಯಾದರೆ ನಾವು ಮಾಡುವುದೇನಿದೆ?

ಅಂತೂ ಸಾಧ್ಯವಾದಷ್ಟು ಎಚ್ಚರಿಕೆ ಇದ್ದರೆ ಒಳ್ಳೆಯದು ಅಲ್ಲವೆ?

ಹಸಿವು

ಊಟ ಮಾಡದೆ ಯಾರಿರುತ್ತಾರೆ? ಆದರೆ ಊಟ ಮಾಡುವುದಾದರೂ ಏತಕ್ಕೆ ಎಂಬ ಆಲೋಚನೆ ಹಲವರಿಗೆ ಬಾರದು.

ಹಸಿವಾದರೆ ಊಟ ಹಸಿವನ್ನು ಹೋಗಲಾಡಿಸುತ್ತದೆ. ಹಸಿವೆಂಬುದು ದೇಹಕ್ಕೆ ಒಂದು ಆತಂಕಪರಿಸ್ಥಿತಿ. ಅದನ್ನು ನೀಗಿಕೊಳ್ಳುವ ಕಾತರ ಜೋರಾಗಿರುತ್ತದೆ.

ಆದರೆ ಇಷ್ಟೇ ಊಟದ ಪ್ರಯೋಜನವೆಂದಲ್ಲ. ಹಸಿವು ತಾನೇ ಕೊರತೆಯಲ್ಲ, ದೇಹದ ಒಂದು ಕೊರತೆಯ ಲಕ್ಷಣ ಅಷ್ಟೆ. ದೇಹ ತನ್ನ ಅಗತ್ಯವನ್ನು ತೋರಿಸಿ ಕೊಳ್ಳುವುದು ಹಸಿವೆ, ಬಾಯಾರಿಕೆ ಮುಂತಾದವುಗಳ ಮೂಲಕ.

ದೇಹದ ಅಗತ್ಯ ಬಲ. ಆಹಾರವಿಲ್ಲದಿದ್ದರೆ ಶರೀರ ಸೊರಗಿಹೋಗುತ್ತದೆ. ಕೆಲಸ ಮಾಡಲು ಮೈಯಲ್ಲಿ ತ್ರಾಣವಿರದು, ಪ್ರಾಣ ಉಳಿಯುವುದೂ ಕಷ್ಟವಾದೀತು.

ಸುಶ್ರುತನು ಊಟ ಒದಗಿಸುವ ನೆರವುಗಳನ್ನು ಪಟ್ಟಿ ಮಾಡಿದ್ದಾನೆ. ಮೊದಲನೆಯದೇನೋ ಹಸಿವನ್ನು ಇಂಗಿಸುವುದೇ (ಪ್ರೀಣನ, ತೃಪ್ತಿ). ಎರಡನೆಯದು ಒಡನೆಯೆ ಬಲವನ್ನು ಒದಗಿಸುವುದು (ಸದ್ಯೋಬಲಕೃತ್). ಮೂರನೆಯದು ಶರೀರ ಬೀಳದಂತೆ ಎತ್ತಿ ನಿಲ್ಲಿಸುವುದು. ಯಾವುದೇ ಕೆಲಸವನ್ನು ಕೈಗೊಂಡಾಗಲೂ ಉತ್ಸಾಹವಿದ್ದರೆ ಅದು ಚೆನ್ನಾಗಿ ನಡೆದೀತು. ಊಟ ಈ ಬಗೆಯ ಉತ್ಸಾಹವನ್ನು ನೀಡುತ್ತದೆ (ಸಮುತ್ಸಾಹ). ಮತ್ತೆ ನೆನಪಿನ ಅಗತ್ಯವನ್ನು ಅರಿಯದವರು ಯಾರು? ಆಹಾರ ಸಮರ್ಪಕವಾಗಿ ಸೇರಿದಾಗ, ನೆನಪು ಕೂಡ ಚೆನ್ನಾಗಿರುತ್ತದೆ (ಸ್ಮೃತಿ). ಮುಖದಲ್ಲಿ ಕಾಂತಿ (ತೇಜಸ್ಸು), ಮೈಯಲ್ಲಿ ಲವಲವಿಕೆ (ಓಜಸ್ಸು) ಇವು ಕೂಡ ಊಟದಿಂದ ಒದಗುವುವೇ. ಎಲ್ಲಕ್ಕಿಂತ ಹೆಚ್ಚಾಗಿ ಉಂಡದ್ದು ಅರಗಲು ಅಗತ್ಯ ವಾಗಿರುವ ಜಾಠರಾಗ್ನಿ ಉಂಡಲ್ಲದೆ ಸರಿಯಾಗಿ ಕೆಲಸ ಮಾಡಲಾರದು. ಬೆಂಕಿಗೆ ಮೊದಲು ಕಟ್ಟಿಗೆಗಳನ್ನು ಒಟ್ಟಿದರೆ ತಾನೆ ಅದು ಉರಿದೀತು? ಅನಂತರ ಇತರ ಕಟ್ಟಿಗೆಗಳನ್ನೂ ಅದು ಉರಿಸೀತು (ಅಗ್ನಿವಿವರ್ಧನ), ಕಟ್ಟಿಗೆಗಳನ್ನು ಮೇಲೆ ಮೇಲೆ ಒಟ್ಟಲೂ ಬಾರದು, ಮೊದಲು ಹಾಕಿದ ಕಟ್ಟಿಗೆ ಉರಿದ ಮೇಲೆ ಬೇರೆ ಕಟ್ಟಿಗೆಯನ್ನು ಹಾಕಬೇಕು ತಾನೆ? ಹಾಗೆಯೆ ಬೆಳಿಗ್ಗೆ ಒಮ್ಮೆ, ಸಂಜೆ ಇನ್ನೊಮ್ಮೆ ಎರಡು ಬಾರಿ ಮಾತ್ರ ಊಟ ಸರಿಯಾದುದೆಂದು ಸುಶ್ರುತನ ಅಭಿಪ್ರಾಯ (ಸಾಯಂಪ್ರಾತರ್ಮನುಷ್ಯಾಣಾಂ ಅಶನಂ ಶ್ರುತಿಚೋದಿತಂ), ಅಗ್ನಿಹೋತ್ರವೆಂಬಂತೆ!

ನಡುವೆ ಉಣ್ಣುವುದು ಒಳ್ಳೆಯದಲ್ಲ (ನಾಂತರಾಭೋಜನಂ ಕುರ್ಯಾತ್), ಎಂದು ಅವನ ಸಲಹೆ.

ಆಹಾರದಂತೆ ಬುದ್ಧಿ

ನಾವು ಮಾಡುವ ಊಟಕ್ಕೂ ನಮ್ಮಲ್ಲಿ ತೋರಿಕೊಳ್ಳುವ ಬುದ್ಧಿಗೂ ಎಡೆಬಿಡದ ನಂಟೊಂದಿದೆ.

ಇರದೆ ಇದ್ದೀತೆ? ಅನ್ನವೇ ಪ್ರಾಣ, ಪ್ರಾಣಾಧೀನವಾದುದು ಮನಸ್ಸು, ಮನಸ್ಸೇ ಬುದ್ಧಿಯಾಗಿ ತೋರಿಕೊಳ್ಳುವುದು.

ಹಸಿವೆಯನ್ನೋ ಚಪಲವನ್ನೋ ತೀರಿಸಿಕೊಳ್ಳಲೆಂದು ಊಟಮಾಡುತ್ತೇವೆ; ಉಂಡದ್ದು ಹೊಟ್ಟೆಯನ್ನು ಸೇರುತ್ತದೆ, ಸರಿ. ಆದರೆ ಅದೇನು ಹೊಟ್ಟೆಯಲ್ಲೇ ಇರುವುದೂ ಇಲ್ಲ, ಸುತ್ತಮುತ್ತ ಮಾತ್ರ ಅದರ ವ್ಯಾಪ್ತಿ ಎನ್ನುವಂತೆಯೂ ಇಲ್ಲ. ಉಂಡದ್ದು ಅರಗುವಾಗ ಇಡೀ ಶರೀರದಲ್ಲೆಲ್ಲ ಅದರ ಹರವು. ಉಂಡದ್ದರ ಸ್ಥೂಲಭಾಗ ಮೈ ಬೆಳೆಸುತ್ತದೆ. ಸೂಕ್ಷ್ಮಭಾಗ ಬಲವನ್ನೊದಗಿಸುತ್ತದೆ. ಇನ್ನೂ ಸೂಕ್ಷ್ಮವಾದುದು ಬುದ್ಧಿಗೆ ಕಾರಣವಾಗುತ್ತದೆ. ಏನನ್ನಾದರೂ ತಿಂದರಾಯಿತು. ಅರಗಿದ ಮೇಲೆ ಅದೆಲ್ಲ ಒಂದೇ ಎನ್ನುವುದು ವಸ್ತು ಸ್ಥಿತಿಯಲ್ಲ. ತಿಂದದ್ದು ದೇಹದಲ್ಲಿ ರಾಸಾಯನಿಕ ಮಾರ್ಪಾಟನ್ನು ಪಡೆದುಕೊಳ್ಳುವಾಗ ಎಲ್ಲವೂ ಒಂದೇ ಆಗದು. ಒಂದೊಂದು ಬಗೆಯ ಆಹಾರ ಒಂದೊಂದು ವಿಧವಾಗಿ ಮಾರ್ಪಾಟಾಗಿ, ಬೇರೆ ಬೇರೆಯ ಪ್ರಭಾವವನ್ನೇ ಒದಗಿಸುತ್ತದೆ. ಮನುಷ್ಯನ ದೇಹರಚನೆಯಲ್ಲಿ ಯಾವ ಬಗೆಯ ಆಹಾರವನ್ನಾದರೂ ತಿಂದು ಜೀರ್ಣಿಸಿಕೊಳ್ಳುವ ಸೌಲಭ್ಯವೇನೋ ಇದೆಯೆನ್ನಿ. ನಮಗೆ ಹುಲಿ - ಸಿಂಹಗಳಂತೆ ಮಾಂಸವನ್ನೇ ತಿನ್ನಬೇಕೆಂಬ ನಿಯಮವಿಲ್ಲ; ಹಸು-ಕುದುರೆಗಳಂತೆ ಹುಲ್ಲನ್ನೇ ಮೇಯಬೇಕೆಂಬ ಅಗತ್ಯವಿಲ್ಲ. ಮನುಷ್ಯ ಏನನ್ನಾದರೂ ತಿಂದಾನು! ಈ ಸೌಲಭ್ಯದ ಜೊತೆಗೆ ಒಂದು ನಿರ್ಬಂಧವೂ ಇರುವುದನ್ನು ನಾವು ಸಾಮಾನ್ಯವಾಗಿ ಗಮನಿಸುವುದಿಲ್ಲ. ತಿಂದದ್ದನ್ನು ಅವಲಂಬಿಸಿ ನಮ್ಮ ಮನೋವೃತ್ತಿಗಳು, ಪ್ರವೃತ್ತಿಗಳು ಸಿದ್ಧವಾಗುತ್ತವೆ ಎನ್ನುವುದೇ ಈ ನಿರ್ಬಂಧ. ಮನುಷ್ಯನ ಸ್ವಭಾವಕ್ಕೆ ಅವನ ಆಹಾರವೂ ತಕ್ಕಮಟ್ಟಿಗೆ ಕಾರಣವಾಗುತ್ತದೆ.

ಇತರ ಕಾರಣಗಳೂ ಅಲ್ಲಿ ಕೆಲಸ ಮಾಡುತ್ತವೆಯೆನ್ನಿ. ಅನುವಂಶಿಕತೆ, ಬೆಳೆದ ಬಗೆ, ಪರಿಸರದ ಒತ್ತಡ, ದೇಹರಚನೆಯ ವಿಶೇಷ- ಇತ್ಯಾದಿ ಇತ್ಯಾದಿ.

ಇವುಗಳ ನಡುವೆ ಆಹಾರದ ಪ್ರಭಾವವೂ ಇರುತ್ತದೆ.

ಏನನ್ನು ತಿನ್ನುತ್ತೇವೆ, ಎಷ್ಟು ತಿನ್ನುತ್ತೇವೆ, ಹೇಗೆ ತಿನ್ನುತ್ತೇವೆ ಇವೂ ಮುಖ್ಯವಾದ ವಿವರಗಳೇ ಆಗಬಲ್ಲವು.

ಜಿಹ್ವಾಚಾಪಲ್ಯ

ಎಂದರೆ ನಾಲಗೆಯ ಮಿತಿಮೀರಿದ ಬಯಕೆಗಳು. ನಾಲಗೆಯ ಪ್ರಯೋಜನಗಳು ಎರಡು-ಊಟಮಾಡುವಾಗ ರುಚಿ ಸವಿಯುವುದು, ಮಾತನಾಡುವುದು. ನಾಲಗೆಗೆ ಎರಡೇ ಕೆಲಸ.

ಉಳಿದ ಅಂಗಾಂಗಗಳಿಗೂ ಬಯಕೆಗಳು ಇರುವುದುಂಟು; ಕಣ್ಣು ನೋಡ ಬೇಕೆಂದು ಹಂಬಲಿಸುವುದು. ಕಿವಿ ಕೇಳಬೇಕೆಂದು ಹಾತೊರೆಯುವುದು, ಇತ್ಯಾದಿ. ಆದರೆ ನಾಲಗೆಯ ಬಯಕೆಗಳು ಇವೆಲ್ಲವನ್ನೂ ಮೀರಿರುತ್ತವೆ.

ಕೆಲವರಿಗೆ ಯಾವಾಗಲೂ ಏನನ್ನಾದರೂ ತಿನ್ನುವ ಚಪಲ; ಅವರ ಬಾಯಲ್ಲಿ ಏನಾದರೂ ಇರದಿದ್ದರೆ ಅವರಿಗೆ ಏನೋ ಮುಜಗರ. ಗಡದ್ದಾಗಿ ಊಟ ಮಾಡಿದ ಮೇಲೂ ಕುರುಕಲು ತಿಂಡಿ ಏನಾದರೂ ಇರಬೇಕು. ನಾಲಗೆ ಆಡುತ್ತಲೇ ಇರಬೇಕು. ಮೈಗೆ ಹಿತವೋ ಅಲ್ಲವೋ ಎಂಬ ವಿವೇಕಕ್ಕೆ ಎಡೆಯಿಲ್ಲ.

ಮತ್ತೆ ಕೆಲವರು ಸಮಯ ಸಿಕ್ಕಾಗಲೆಲ್ಲ ಮಾತನಾಡುತ್ತಲೇ ಇರುತ್ತಾರೆ. ಅವರ ಬಾಯಿ ಸುಮ್ಮನಿರುವುದೇ ಅಪರೂಪ. ಕೇಳುವವರಿದ್ದರೆ ಸಾಕು; ಅವರಿಗೆ ಆಸಕ್ತಿ ಇದೆಯೋ, ತಾಳ್ಮೆ ಇದೆಯೋ, ಸಮಯ ಇದೆಯೋ, ಯಾವುದರ ಪರಿವೆಯೂ ಇರದು. ನಾಲಗೆಗೆ ಬಿಡುವೆಂಬುದೇ ಇರದು.

ಕೆಲವೊಮ್ಮೆ 'ಮರದ ನಾಲಗೆಯಾಗಿದ್ದಿದ್ದರೆ ಮುರಿದು ಹೋಗುತ್ತಿತ್ತು' ಎನ್ನುವುದುಂಟು. ಸದ್ಯ, ನಾಲಗೆ ಮರದ್ದೂ ಅಲ್ಲ; ಅದಕ್ಕೆ ಮೂಳೆಯೂ ಇಲ್ಲ. ಅದರ ರಚನೆ ವಿಚಿತ್ರವಾದದ್ದೇ; ಎಷ್ಟು ಮಾತನಾಡಿದರೂ ಸೋಲುವುದಿಲ್ಲ, ಸೊರಗುವುದಿಲ್ಲ. ತಿಂದಾಗ ಹಲ್ಲಾದರೂ ಸೋತೀತು. ನಾಲಗೆ ಇನ್ನಷ್ಟು ತಿನ್ನಲು ಸಿದ್ಧವೇ!

ನಾಲಗೆಯ ಮೇಲೆ ಹಿಡಿತವಿರಬೇಕೆಂದು ಆರೋಗ್ಯಶಾಸ್ತ್ರವೂ ಹೇಳುತ್ತದೆ, ನೀತಿಶಾಸ್ತ್ರವೂ ಹೇಳುತ್ತದೆ. ತಿನ್ನುವುದು ಹಿತವಾಗಿರಬೇಕು, ಮಿತವಾಗಿರಬೇಕು. ಮಾತನಾಡುವಾಗಲೂ ಹಾಗೆಯೇ ಹಿತ-ಮಿತ ಎರಡೂ ಗುಣಗಳಿರಬೇಕು.

ಅತಿಯಾಗಿ ತಿನ್ನುವುದೂ ತಪ್ಪು. ಅತಿಯಾಗಿ ಮಾತನಾಡುವುದೂ ತಪ್ಪು. ಎರಡಕ್ಕೂ ಹಿನ್ನೆಲೆಯಲ್ಲಿ ಮಾನಸಿಕ ಬೇನೆಯೊಂದು ಇದ್ದೀತೆಂದು ಈಗೀಗ ಸ್ಪಷ್ಟವಾಗುತ್ತಿದೆ.

ಮನಸ್ಸಿನಲ್ಲಿ ಅಡಗಿರುವ ಆತಂಕದ ಒಂದು ಲಕ್ಷಣ ಈ ಜಿಹ್ವಾಚಾಪಲ್ಯ. ಆದರೆ ಚಾಪಲ್ಯಕ್ಕೆ ವಶವಾದರೆ ಆತಂಕ ಕಡಮೆಯಾಯಿತು ಎಂದೇನೂ ಅಲ್ಲ; ಅದರಿಂದ ಬೇರೆ ತೊಂದರೆಗಳೂ ಒದಗಿಯಾವು!

ಹಿತವಾದ ಊಟ

ಊಟವೆಂದರೆ ಹೊಟ್ಟೆ ಹೊರೆದುಕೊಳ್ಳುವ ಒಂದು ಹವಣಿಕೆ ಎಂದಷ್ಟೆ ಬಹು ಮಂದಿ ಭಾವಿಸುತ್ತಾರೆ. ಏನೋ ಹೇಗೋ ಅಂತೂ ಉಂಡರಾಯಿತು ಎಂದವರ ಎಣಿಕೆ.

ಮತ್ತೆ ಕೆಲವರು ಊಟದಲ್ಲಿ ಪರಿಶವಣೆಯನ್ನು ಬಯಸುವವರು. ಬದುಕಿರುವುದರ ಸ್ವಾರಸ್ಯವೇ ಚೆನ್ನಾಗಿ ಊಟ ಮಾಡುವುದು ಎಂದವರ ನಿಲುವು.

ಬದುಕಿಗೂ ಊಟಕ್ಕೂ ನಂಟಿರುವದಂತೂ ದಿಟ. ಉಣ್ಣದೆ ಯಾರು ಬದುಕಿದ್ದಾರೆ? ಅನ್ನದಿಂದ ಪ್ರಾಣ ಅಲ್ಲವೆ? ಊಟ ಮಾಡುವುದು ಬರಿಯ ದೈಹಿಕ ಅಗತ್ಯವಲ್ಲ; ಅದೊಂದು ಮಾನಸಿಕ ಸಂಸ್ಕಾರವೂ ಹೌದು. ಉಣ್ಣುವಾಗ ನೆಮ್ಮದಿಯಿಂದಿರಬೇಕು; ಹಿತರೊಂದಿಗೆ ಕೂಡಿಕೊಂಡು ಹಿತವಾದುದನ್ನು ಮಿತವಾಗಿ ತಿನ್ನಬೇಕು. ಅತಿಯಾದ ಮಾತುಕತೆ, ಜಗಳ, ಹಾಳು ಹರಟೆ, ಲೋಕವಾರ್ತೆ ಇವೆಲ್ಲ ಊಟದ ಜೊತೆ ಸೇರಬಾರದು.

ಬೇಗ ಬೇಗ ತಿನ್ನುವುದು ಒಳ್ಳೆಯದಲ್ಲ, ಉಂಡೊಡನೆ ಬಿಸಿಲಿಗೆ ಮೈಯೊಡ್ಡುವುದು, ವಾಹನವನ್ನೇರಿ ಹೋಗುವುದು, ವ್ಯಾಯಾಮಕ್ಕೆ ತೊಡಗುವುದು, ಸಂಭೋಗ ಇವೆಲ್ಲ ಮಾಡಬಾರದೆಂದು ಅಷ್ಟಾಂಗಹೃದಯ ತಿಳಿಸುತ್ತದೆ.

ಮುಹೂರ್ತಕಾಲವಾದರೂ (ಎಂದರೆ ಸುಮಾರು ಮುಕ್ಕಾಲು ಗಂಟೆ) ವಿಶ್ರಮಿಸಿಕೊಳ್ಳಬೇಕು; ಶ್ರಮದ ಕೆಲಸವನ್ನು ಮಾಡಬಾರದು.

ಆದರೆ ಕೂಡಬಾರದು, ಆಲಸ್ಯವಾದೀತು; ಮಲಗಿದರೆ ಮೈ ಬೊಜ್ಜು ಬೆಳೆದೀತು; ಓಡಿದರೆ ಸಾವು ಸಮೀಪಿಸೀತು ಎಂದು ಭಾವಪ್ರಕಾಶವೆಂಬ ವೈದ್ಯಗ್ರಂಥ ಎಚ್ಚರಿಸುತ್ತದೆ.

ಮೆಲ್ಲಗೆ ಅಲ್ಲಿಂದಿಲ್ಲಿಗೆ ನಡೆದಾಡುತ್ತಿರುವುದು ಒಳ್ಳೆಯದು; ಉಂಡದ್ದು ಅರಗಲು ನೆರವಾಗುವಂತೆ ನೂರು ಹೆಜ್ಜೆ ಎಂಬೊಂದು ಮಿತಿಯನ್ನೂ ಹೇಳುವುದಿದೆ (ಭುಕ್ತ್ವಾ ಶತಪದಂ ಗಚ್ಛೇತ್ ಶನೈಃ). ಎಣಿಸಿಕೊಂಡು ನೂರು ಹೆಜ್ಜೆ ನಡೆಯಬೇಕೆಂದೇನೂ ಅಲ್ಲ; ನೂರು ಎಂಬುದು ಸಂಸ್ಕೃತದಲ್ಲಿ ಹೆಚ್ಚು ಎಂಬರ್ಥದ್ದು ಅಷ್ಟೆ.

ಉಂಡ ಮೇಲೆ ಮನಸ್ಸಿಗೆ ಹಿತವಾದುದನ್ನು ಮಾತ್ರ ಮಾಡಿದರೆ ಉಂಡ ಅನ್ನ ಮೈಗೆ ಹತ್ತುತ್ತದೆ ಎಂದು ಸುಶ್ರುತನ ಒಕ್ಕಣೆ.

ಊಟ ಮಾಡುವಾಗಲಾಗಲಿ, ಉಂಡೊಡನೆಯಾಗಲಿ ಮನಸ್ಸಿಗೆ ಬೇಸರ ತರುವಂಥ ಏನನ್ನಾಗಲಿ ಹತ್ತಿರ ಸೇರಿಸದಿರುವುದು ಜಾಣತನ.

ಅನ್ನ ಸೇರುವುದು ಹೊಟ್ಟೆಗೇ ಆದರೂ ಮನಸ್ಸಿನಲ್ಲಿ ಬೇಸರವಾದರೆ ಹೊಟ್ಟೆಯಲ್ಲಿ ಒಳಗುದಿ ತಪ್ಪಿದ್ದಲ್ಲ.

ನಿದ್ರೆ-ಎಚ್ಚರ

ನಿದ್ರೆ ಎಲ್ಲರಿಗೂ ಅಗತ್ಯವಲ್ಲವೆ? ಹೊರಗೆ ಹಗಲು-ಇರುಳು ಎಂದಿರುವಂತೆಯೆ ಒಳಗೆ ಎಚ್ಚರ-ನಿದ್ರೆ ಎಂಬ ವಿಭಾಗ.

ಹಗಲು ದುಡಿದು ಇರುಳು ನಿದ್ರೆ ಮಾಡುವುದು ಮನುಷ್ಯ ಜಾತಿಗೆ ಸಹಜವಾದುದು. ಬಳಲಿಕೆಯಿದ್ದಾಗ ನಿದ್ರೆ ಬಂದಡರುವುದೂ ಸಹಜವೆ. ನಿದ್ರೆಯಿಂದ ಶ್ರಮಪರಿಹಾರ. ಚೆನ್ನಾಗಿ ನಿದ್ರೆ ಬಂದಿತೆನ್ನುವುದಕ್ಕೆ ಸಾಕ್ಷಿ ಬೆಳಿಗ್ಗೆ ಏಳುವಾಗ ಉತ್ಸಾಹವಿರುವುದು, ದಿನವೆಲ್ಲ ದುಡಿಯುವ ಚೈತನ್ಯ ಮೂಡುವುದು. ನಿದ್ರೆ ಬಾರದಿರಲು ಇರುವ ಹಲವು ಕಾರಣಗಳಲ್ಲಿ ಒಂದು ಚಿಂತೆ, ಇನ್ನೊಂದು ಹಗಲಲ್ಲಿ ಶ್ರಮಪಡದಿರುವುದು. ನಿದ್ರೆ ಬಾರದೆ ಬಳಲುವುದು ನಾಗರಿಕತೆಯ ಪಿಡುಗುಗಳಲ್ಲಿ ಸೇರುತ್ತದೆ. ಅದೇ ಒಂದು ರೋಗವಾಗಿ, ಮೇಲುಮಟ್ಟದ ಜನರಲ್ಲಿ ಹರಡಿಕೊಳ್ಳುತ್ತಿದೆ. ಮನಸ್ಸಿನ ನೆಮ್ಮದಿಯಿರದೆ ನಿದ್ರೆ ತಾನಾಗಿ ಬಾರದು; ವ್ಯಾಯಾಮ ಸಾಕಷ್ಟು ಇರದಿದ್ದರೂ ನಿದ್ರೆ ಹತ್ತುವುದಿಲ್ಲ, ನಿದ್ರೆಗೆ ಮನಸ್ಸಿನ ನೆಮ್ಮದಿ, ಮೈಯ ದುಡಿಮೆ ಎರಡೂ ಅಗತ್ಯವಾದುವೆ. ಮನಸ್ಸಿನ ದುಡಿಮೆ, ಮೈಯ ನೆಮ್ಮದಿಯಿದ್ದರೆ ಆಗದು! ನಿದ್ರೆ ಮಾಡಬೇಕೆಂಬ ಕಾತರವಿರುವುದೆ ಅಸ್ವಾಭಾವಿಕವಾದುದು. ನಿದ್ರೆ ಮಾಡಲು ಹೆಣಗಾಡಿದರೆ ನಿದ್ರೆ ಬರುವುದೇ ಇಲ್ಲ. ನಮ್ಮ ಅರಿವಿಲ್ಲದೆ ತಾನಾಗಿ ಬಂದೊದಗುವುದೆ ನಿದ್ರೆಯಲ್ಲವೆ? ನಿದ್ರೆ ಎಲ್ಲರಿಗೂ ಬೇಕಾದುದೇ; ಆದರೆ ಯಾರಿಗೆ ಎಷ್ಟು ನಿದ್ರೆಯ ಅಗತ್ಯವಿದೆ ಎನ್ನುವುದು ಅವರವರನ್ನು ಅವಲಂಬಿಸಿದ್ದು, ಇದು ಎಲ್ಲರಿಗೂ ಸಮ ಎನ್ನುವ ಹಾಗಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಎಷ್ಟು ನಿದ್ರೆ ಬೇಕೆನ್ನುವುದನ್ನು ಕಂಡುಕೊಳ್ಳಬಹುದು. ಊಟದಂತೆ ನಿದ್ರೆಯಲ್ಲೂ ಒಂದು ಸಮಯ, ಒಂದು ಮಿತಿ, ಒಂದು ಕಟ್ಟು, ಒಂದು ಕಟ್ಟಳೆ ಇರಬೇಕು. ಊಟ ಹೆಚ್ಚಾದರೆ ನಿದ್ರೆ ಕಡಮೆಯೇ; ಗೊತ್ತಾದ ವೇಳೆ ಕಳೆದರೂ ನಿದ್ರೆಗೆ ಆತಂಕವೆ. ಅತಿಯಾದ ನಿದ್ರೆಯೂ ರೋಗವೆಂದೇ ಎಣಿಕೆ.

ಹೊರಗಿನ ಗದ್ದಲ, ಅಭ್ಯಾಸವಿರದ ಸ್ಥಳ, ಉದ್ವೇಗವನ್ನುಂಟುಮಾಡುವ ಮಾತುಕತೆ, ಅಹಿತವಾದ ವಾತಾವರಣ ಇವೆಲ್ಲ ನಿದ್ರೆ ಕೆಡಲು ಕಾರಣಗಳು.

ಹಗಲು ಎಚ್ಚರವಾಗಿರುವಾಗ ಎಚ್ಚರಿಕೆಯಿಂದ ಇದ್ದುದಾದರೆ ನಿದ್ರೆಗೇನು ತೊಂದರೆಯಿರದು. ಎಚ್ಚರವಿರುವುದೆ ನಿದ್ರೆಗಾಗಿ ಎಂಬುದನ್ನು ಅರಿತುಕೊಳ್ಳಬೇಕು. ಚೆನ್ನಾಗಿ ಬಾಳಬೇಕಾದುದು ಸುಖವಾಗಿ ಸಾಯಬೇಕೆಂದಲ್ಲವೆ?

ವೈದ್ಯನ ವ್ಯಾಧಿ

ವ್ಯಾಧಿಯಿದ್ದವರು ವೈದ್ಯನ ಬಳಿ ಓಡುತ್ತಾರೆ. ವೈದ್ಯನಿಗೇ ವ್ಯಾಧಿಯಿರುವುದಾದರೆ ಮಾಡುವುದೇನು?

ವ್ಯಾಧಿ ದೈಹಿಕವೋ ಮಾನಸಿಕವೋ ಆದರೆ ಬೇರೊಬ್ಬ ವೈದ್ಯ ನೆರವಿಗೆ ಬಂದಾನು; ಚಿಕಿತ್ಸೆ ಪಡೆದುಕೊಳ್ಳುವಾಗ ವೈದ್ಯನೂ ರೋಗಿಯಂತೆಯೆ ತಾನೆ? ಆದರೆ ವೈದ್ಯನ ವ್ಯಾಧಿ ಈ ತೆರನಾದುದಲ್ಲ. ರೋಗಿಯನ್ನು ಕುರಿತಂತೆ ತಾತ್ಸಾರ, ಹಣವನ್ನು ಕುರಿತಂತೆ ದುರಾಶೆ, ಚಿಕಿತ್ಸೆಯ ವಿಚಾರದಲ್ಲಿ ಅಪ್ರಾಮಾಣಿಕತೆ, ಅನಗತ್ಯವಾದ ಪರೀಕ್ಷೆ- ಮುಂತಾದವು ವೈದ್ಯನನ್ನು ಕಾಡಬಹುದಾದ ರೋಗಗಳು. ಇಂಥ ಉಪದ್ರವಗಳು ಯಾವ ವೃತ್ತಿಯಲ್ಲಾದರೂ ಇರಬಹುದೆನ್ನಿ. ವೈದ್ಯವೃತ್ತಿಯಲ್ಲಾದರೆ ಅವು ಎದ್ದು ಕಾಣುತ್ತವೆ. ಕಾರಣ ಇಷ್ಟೆ-

ವೈದ್ಯವೃತ್ತಿಯೆಂದರೆ ಲೋಕೋಪಕಾರಕ್ಕೆಂದೇ ಸಿದ್ಧವಾದುದು. ವೈದ್ಯನೆಂದರೆ ಸೇವಾಮನೋಭಾವವುಳ್ಳವನು ಎಂಬ ಕಲ್ಪನೆ ಬಹುಜನರ ಮನಸ್ಸಿನಲ್ಲಿ ಇನ್ನೂ ಉಳಿದಿದೆ! ಉಳಿದ ವೃತ್ತಿಗಳಂತೆ ಅದೂ ಒಂದು ವೃತ್ತಿಯೇ- ಲಾಭ, ಸುಖ, ಅಭ್ಯುದಯ, ಸೌಲಭ್ಯ, ಸ್ಥಾನಮಾನ ಎಲ್ಲ ಬಯಕೆಗಳೂ ವೈದ್ಯವೃತ್ತಿಗೂ ಸಹಜವಾದುವೆ ತಾನೆ? ಅದೇನು ನಿವೃತ್ತಿ ಮಾರ್ಗವೆ? ವೈದ್ಯನೇನು ಸಂನ್ಯಾಸಿಯೆ? ಅವನಿಗೆ ಮಾತ್ರ ತ್ಯಾಗಬುದ್ಧಿ ಇರಬೇಕೆಂದು ನಿರೀಕ್ಷಿಸುವುದೇತಕ್ಕೆ?

ಅದು ಸರಿಯೆ. ಆದರೆ ವೈದ್ಯನ ಬಳಿ ಬರುವವರು ದುಃಖಿಗಳು, ಸಂತಪ್ತರು, ಆರ್ತರು. ಅವರ ವಿಚಾರವಾಗಿ ಅವನಲ್ಲಿ ಆಸಕ್ತಿ, ಅನುಕಂಪ, ಕಾತರ ಇರಬೇಕೆಂದು ನಿರೀಕ್ಷಿಸುವುದು ತಪ್ಪೇನಲ್ಲ. ಈ ನಿರೀಕ್ಷೆಯನ್ನು ಅರಿತುಕೊಳ್ಳಬೇಕಾದುದು ವೈದ್ಯನ ಕರ್ತವ್ಯ. ವೈದ್ಯನೂ ಬದುಕಬೇಕು ದಿಟ; ಆದರೆ ಆರ್ತರ ಆತಂಕವೇ ಅದಕ್ಕೆ ಸಾಧನೆಯಾಗಬಾರದು.

ದುಃಖದಲ್ಲಿರುವವರ ಅಸಹಾಯಕತೆಯನ್ನೇ ತನ್ನ ಬಂಡವಾಳವನ್ನಾಗಿ ಮಾಡಿಕೊಳ್ಳುವ ಉದ್ಯಮ ವೈದ್ಯನದ್ದಾದರೆ, ಅವನಿಂದ ಲೋಕೋಪಕಾರವಿರಲಿ, ಜನದ್ರೋಹವೆ ಆದೀತು ತಾನೆ? ವೈದ್ಯವೃತ್ತಿಯಲ್ಲೂ ವಿಚಿಕಿತ್ಸಕಮನೋವೃತ್ತಿಯಿದ್ದರೆ ಒಳ್ಳೆಯದೆ, ವೃತ್ತಿಗೂ ಗೌರವ ಬರುತ್ತದೆ; ವೈದ್ಯನ ಆರೋಗ್ಯವೂ ಉಳಿಯುತ್ತದೆ. ಇಂಥ ವೈದ್ಯರು ಹಲವಾರು ಮಂದಿ ಇನ್ನೂ ಇದ್ದಾರೆನ್ನಿ, ಇಲ್ಲವಾದರೆ ಜನ ಬದುಕುತ್ತಿರುವುದು ಹೇಗೆ? ಆದರೆ ಮೇಲೆ ಕಾಣಿಸಿದ ವ್ಯಾಧಿಗಳಿಗೆ ಪಕ್ಕಾಗುವ ವೈದ್ಯರ ಸಂಖ್ಯೆ ಹೆಚ್ಚುತ್ತಿದೆಯೊ ಎನಿಸುತ್ತದೆ.

ಬುದ್ಧಿಯೇ ಮದ್ದು

ರೋಗ ಬಂದಾಗ ಪರದಾಡುವುದಕ್ಕಿಂತ ರೋಗ ಬಾರದಂತೆ ತಡೆಗಟ್ಟುವುದರಲ್ಲಿ ಗುಣವಿದೆಯಲ್ಲವೆ?

ಆರೋಗ್ಯವೆಂಬುದು ಒಂದೇ ಸಮನೆ ಕದಲದೆ ನಿಲ್ಲುವ ಪದಾರ್ಥವಲ್ಲ. ಒಮ್ಮೆ ಪಡೆದುಕೊಂಡರೆ ಆಯಿತು; ಮತ್ತೆ ಅದಕ್ಕಾಗಿ ಕಷ್ಟ ಬೇಡ ಎನ್ನುವಂತಿಲ್ಲ.

ದಿನದಿನವೂ ಗಳಿಗೆಗಳಿಗೆಯೂ ಅದರಲ್ಲಿ ಏರುಪೇರಿನ ಸಾಧ್ಯತೆ ಇರುವುದೇ. ಅದನ್ನು ಕೆಡಿಸಲೆಂದು ಮೈಯೊಳಗೂ ಹೊರಗೂ ಹಾತೊರೆಯುತ್ತಿರುವ ವಿವರಗಳಿಗೆ ಕೊರತೆಯೇನಿಲ್ಲ.

ಆತಂಕ ಬಂದಡರಿದಾಗ ತೊಂದರೆಪಡುವುದು ಸಹಜವೆ; ಆದರೆ ಬಾಯಾರಿದಾಗ ಬಾವಿ ತೋಡುವುದು ಕಷ್ಟ. ಬಾವಿಯ ನೀರು ಮೊದಲೆ ಇದ್ದಿತಾದರೆ ಬಾಯಾರಿಕೆಯನ್ನು ಬೇಗನೆ ತೀರಿಸಿಕೊಳ್ಳುವುದು ಆದೀತು.

ಇದಕ್ಕಾಗಿ ಆಚಾರಸಂಹಿತೆಯೊಂದರ ಅಗತ್ಯವಿದೆ. ದಿನದಿನದ ಊಟ, ನಿದ್ರೆ, ಕೆಲಸ, ವಿರಾಮ, ವ್ಯಾಯಾಮ ಮೊದಲಾದವುಗಳಲ್ಲಿ ಒಂದು ನಿಯಮವನ್ನು ಇರಿಸಿಕೊಂಡರೆ ಆರೋಗ್ಯ ಕೆಡುವುದು ಕಡಮೆ. ಕೆಟ್ಟರೂ ಸುಧಾರಿಸುವುದು ಸುಲಭ.

ಮೈಮುರಿದು ಕೆಲಸಮಾಡುವುದು (ಪರಿಶ್ರಮ) ಮತ್ತು ಕಡಮೆ ಊಟಮಾಡುವುದು (ಮಿತಾಹಾರ), ಎರಡೂ ಭೂಮಿಗೆ ಬಂದಿಳಿದ ಅಶ್ವಿನೀ ದೇವತೆಗಳು ಎಂಬ ಮಾತಿದೆ.

ಸರಿಯಾಗಿ ನಿದ್ದೆ ಮಾಡುವುದಾದರೆ ಅರ್ಧ ರೋಗ ತೊಲಗುತ್ತದೆ ಎಂಬುದಿನ್ನೊಂದು ಮಾತು.

ತನ್ನ ದೇಹಬಲವನ್ನು ಗಮನಿಸಿ ಆಹಾರ, ವಿಹಾರ, ಭೋಗ, ವ್ಯಾಯಾಮ, ಕಾಯಕಗಳನ್ನು ಮಾಡುವವನು (ಸಮೀಕ್ಷ್ಯಕಾರೀ) ನೂರು ಕಾಲ ಬದುಕುವನು ಎಂಬುದು ಮತ್ತೊಂದು.

ರೋಗ ಬಂದಮೇಲೆ ನಡೆಯುವ ಚಿಕಿತ್ಸೆ ವೈದ್ಯನ ಕೈಲಿದೆ. ಆದರೆ ರೋಗಬಾರ ದಂತೆ ಎಚ್ಚರವಹಿಸುವುದು ನಮ್ಮ ಕೈಲಿದೆ.

ನಮ್ಮ ಆರೋಗ್ಯ ನಮ್ಮ ಕೈಲಿರಬೇಕಾದರೆ ನಮ್ಮ ಬುದ್ಧಿ ನಮ್ಮ ಹತೋಟಿ ಯಲ್ಲಿರಬೇಕು. ಬಹುಮಟ್ಟಿಗೆ ರೋಗಗಳು ಒದಗುವುದು ನಮ್ಮ ತಪ್ಪಿನಿಂದಲೆ.

ಮಾಡಬೇಕಾದುದನ್ನು ಮಾಡದೆ, ಮಾಡಬಾರದ್ದನ್ನು ಮಾಡಿದರೆ ಆಗಬಾರದ್ದು ಆಗದೆ ತಪ್ಪೀತೆ?

ರೋಗಿಯೂ ಧೈರ್ಯವೂ

ಯಾವುದೇ ಕಾರಣವಿರಲಿ, ಮಾಡಬೇಕಾದುದನ್ನು ಮಾಡಲಾಗದಿದ್ದರೆ, ಇರಬೇಕಾದಂತೆ ಇರಲಾಗದಿದ್ದರೆ, ಸುಖಪಡಬೇಕಾದಂತೆ ಪಡಲಾಗದಿದ್ದರೆ ಅದು ರೋಗವೆನಿಸಿಕೊಳ್ಳುತ್ತದೆ. ಮೈಯ ಅಥವಾ ಮನಸ್ಸಿನ ಜಡ್ಡು ದಿನನಿತ್ಯದ ವ್ಯವಹಾರಕ್ಕೆ ಅಡ್ಡಿಯಾಗುತ್ತದೆ ಎಂದು ಯಾರರಿಯರು?

ಆದರೆ ಎಲ್ಲ ರೋಗಗಳಲ್ಲೂ ಇರುವ ಒಂದು ಅಂಶವೆಂದರೆ ಆತಂಕ. ಮಾರಕವಾದ ರೋಗದಲ್ಲಿ ಮಾತ್ರ ಆತಂಕವೆಂದಲ್ಲ; ತಲೆನೋವು ಬಂದರೂ ಆತಂಕ ತಪ್ಪಿದ್ದಲ್ಲ, ಕಾಲು ಉಳುಕಿದರೂ ಆಂತಕವೇ. ರೋಗದಿಂದಾಗಿ, ಮಾಡಬೇಕಾದದ್ದನ್ನು ಮಾಡಲಾಗದಿದ್ದರೆ ಆತಂಕ ತಾನೆ? ಆತಂಕವಿರದಿದ್ದರೆ ರೋಗ ಗಮನಕ್ಕೇ ಬರುವುದಿಲ್ಲ!

ಆತಂಕದಿಂದಾಗಿಯೇ ಎಲ್ಲರೂ ವೈದ್ಯರತ್ತ ಓಡುವುದು. ವೈದ್ಯರು ರೋಗವನ್ನು ಪರಿಹರಿಸಿಯಾರೆಂಬ ನಂಬಿಕೆಯಿರುವುದು ಸಹಜವೇ. ಆದರೆ ವೈದ್ಯರು ರೋಗದ ಕಡೆ ಮಾತ್ರ ದೃಷ್ಟಿ ಹರಿಸಿ, ರೋಗಿಯ ಆತಂಕವನ್ನು ಗಮನಕ್ಕೆ ತಂದುಕೊಳ್ಳದಿದ್ದರೆ ಚಿಕಿತ್ಸೆ ಅಷ್ಟಾಗಿ ಫಲಕಾರಿಯಾಗದು. ರೋಗದ ಒಂದು ಪ್ರಧಾನ ವಿವರವೆಂದರೆ ಆತಂಕವೇ. ಆತಂಕವನ್ನು ಅಡಗಿಸದಿದ್ದರೆ ರೋಗ ಹಿಡಿತಕ್ಕೆ ಸಿಗುವುದಿಲ್ಲ.

ಈ ಗುಟ್ಟನ್ನು ಅರಿತ ವೈದ್ಯರು ರೋಗಿಗೆ ಮೊದಲು ನೀಡುವುದು ಮದ್ದನ್ನಲ್ಲ, ಆಶ್ವಾಸನೆಯನ್ನು. ರೋಗವು ಗುಣವಾಗುವುದರಲ್ಲಿ ರೋಗಿಗೆ ಯಾವ ಸಂಶಯವೂ ಇರದಂತೆ ಧೈರ್ಯವನ್ನು ತುಂಬುವುದೂ ವೈದ್ಯ ವೃತ್ತಿಯಲ್ಲಿ ಸೇರಿರುವ ಕರ್ತವ್ಯವೇ. ಮದ್ದಿನಷ್ಟೇ ಮುಖ್ಯವಾದುದು ಧೈರ್ಯ. ಎದೆಗುಂದಿದ ರೋಗಿಯನ್ನು ಗುಣಪಡಿಸುವುದು ತುಂಬ ಕಷ್ಟ. ಹಲವು ವೇಳೆ, ಅಂಜಿಕೆಯಿಂದಲೇ ರೋಗ ಉಲ್ಬಣಿಸುವುದೂ ಉಂಟು ; ಆತಂಕದಿಂದಲೇ ಹಲವಾರು ರೋಗಗಳು ಹುಟ್ಟಿಕೊಳ್ಳುವುದೆಂದು ಈಗೀಗ ತಿಳಿಯುತ್ತ ಬಂದಿದೆ.

ಆದ್ದರಿಂದಲೇ ಆಯುರ್ವೇದದ ಸುಭಾಷಿತವೊಂದು-

'ವ್ಯಾಧಿಗ್ರಸ್ತಸ್ಯ ಧೈರ್ಯಾದೃತೇ ನ ಪರಮೌಷಧಮಸ್ತಿ' ಎಂದು ಹೇಳುತ್ತದೆ. ಇದರ ಅರ್ಥ "ರೋಗದಿಂದ ಬಳಲುತ್ತಿರುವವನಿಗೆ ಧೈರ್ಯವನ್ನು ಬಿಟ್ಟು ಅದಕ್ಕಿಂತ ಹೆಚ್ಚಿನ ಮದ್ದು ಬೇರೊಂದಿಲ್ಲ" ಎಂದು. ಇದನ್ನು ರೋಗಿಗಳೂ ವೈದ್ಯರೂ ಸಮನಾಗಿಯೆ ಮನದಟ್ಟುಮಾಡಿಕೊಂಡರೆ ಒಳ್ಳೆಯದು.

ನಿಸರ್ಗ

ನಿಸರ್ಗದಲ್ಲಿ ವ್ಯವಸ್ಥೆಯಿದೆಯೆ?

ಅಥವಾ ವ್ಯವಸ್ಥೆಯೆಂಬುದು ಮನುಷ್ಯನ ಕಲ್ಪನೆಯೊ?

ಮನುಷ್ಯರ ಬದುಕಿನಲ್ಲಿ ವ್ಯವಸ್ಥೆಗೊಂದು ಬೆಲೆಯಿದೆ. ಕುಟುಂಬ, ಸಮಾಜ, ಸರ್ಕಾರ, ಅರ್ಥ, ಧರ್ಮ ಎಲ್ಲದರಲ್ಲೂ ವ್ಯವಸ್ಥೆಯಿದ್ದರೆ ಒಳಿತು. ಅವ್ಯವಸ್ಥೆಯೆಂದರೆ ಕಷ್ಟವೇ. ಮನುಷ್ಯ ಭೂಮಿಯಮೇಲೆ ಬದುಕತೊಡಗಿದ ಮೇಲೆ ವ್ಯವಸ್ಥೆಯ ಕಲ್ಪನೆಯೂ ಒದಗಿಬಂದಿತು ಎಂದು ಕೆಲವರ ವಾದ. ಬುದ್ಧಿಯೇ ಈ ಕಲ್ಪನೆಗೆ ಮೂಲ ಎಂಬುದು ಈ ವಾದದ ಸಮರ್ಥನೆ. ಆದರೆ, ರಾತ್ರಿ-ಹಗಲು, ಋತು-ಚಕ್ರ, ಚಂದ್ರನ ಏರಿಳಿತ, ನದಿಗಳ ಸ್ಥಿತಿ-ಗತಿ, ಪ್ರಾಣಿಗಳ ಸಹಯೋಗ, ಗಿಡಮರಗಳ ಅನ್ಯೋನ್ಯ ನೆರವು ಇವನ್ನೆಲ್ಲ ನೋಡಿದಾಗ ನಿಸರ್ಗದಲ್ಲೂ ವ್ಯವಸ್ಥೆಯ ಅರಿವಾಗುತ್ತದೆ. ಇನ್ನೂ ಸೂಕ್ಷ್ಮವಾಗಿ ಇದನ್ನು ಅರಿತುಕೊಳ್ಳಬೇಕೆಂದರೆ, ಒಂದು ನೀರಿನ ಪಾತ್ರೆಯಲ್ಲಿ ಒಂದು ಮೀನು, ಒಂದು ಬಸವನ ಹುಳು ಮತ್ತು ನೀರಿನಲ್ಲಿ ಬೆಳೆಯುವ ಒಂದು ಗಿಡ ಇಷ್ಟನ್ನು ಹಾಕಿ ಬಿಸಿಲಿಗೆ ಇಡಿ. ಹಲವಾರು ತಿಂಗಳುಗಳ ಕಾಲ ನೀವು ಮೀನಿಗಾಗಲಿ ಬಸವನ ಹುಳುವಿಗಾಗಲಿ ಆಹಾರ ನೀಡಬೇಕಾಗುವುದಿಲ್ಲ; ಗಿಡ ಉಳಿಯುವ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ; ನೀರು ಕೆಡುವುದಿಲ್ಲ. ಇದು ಹೇಗೆ ಸಾಧ್ಯವಾಗುತ್ತದೆ? ಮೀನು ಗಿಡದಿಂದ ಹೊಟ್ಟೆ ಹೊರೆದು ಕೊಳ್ಳುತ್ತದೆ. ಮೀನಿನ ಹಿಕ್ಕೆಯನ್ನು ಬಸವನಹುಳು ತಿಂದು, ತನ್ನ ಹಿಕ್ಕೆಯಲ್ಲಿ ಅದರ ಸಾರವನ್ನು ಉಳಿಸಿ ಹೊರಗೆ ಹಾಕುತ್ತದೆ. ಇದನ್ನು ಗಿಡ ಬಳಸಿಕೊಳ್ಳುತ್ತದೆ. ಗಿಡ ಮೀನಿನ ಹಿಕ್ಕೆಯನ್ನೂ ಬಸವನ ಹುಳುವಿನ ಹಿಕ್ಕೆಯನ್ನೂ ಬಳಸಿಕೊಳ್ಳುವಾಗ ಆಮ್ಲಜನಕವನ್ನು ಹೊರಗೆ ಬಿಡುತ್ತದೆ. ಆಮ್ಲಜನಕದಿಂದ ಮೀನೂ ಬಸವನಹುಳುವೂ ಬದುಕುತ್ತವೆ. ಆಮ್ಲಜನಕ ಇಲ್ಲದೆ ಅವು ಉಳಿಯಲಾರವು. ಇದು ನಿಸರ್ಗದಲ್ಲಿ ಪರಸ್ಪರ ನೆರವಾಗುವ ಒಂದು ನಿದರ್ಶನ.

ಮೀನು ಅಲ್ಲಿರದಿದ್ದರೆ ಬಸವನಹುಳುವಿಗೂ ಗಿಡಕ್ಕೂ ಏನೂ ಸಂಬಂಧವಿರದು. ಗಿಡ ಇರದಿದ್ದರೆ ಮೀನು ಬದುಕಲಾರದು, ಬಸವನ ಹುಳುವೂ ಉಳಿಯಲಾರದು.

ಬಸವನಹುಳುವನ್ನು ಅಲ್ಲಿಂದ ತೆಗೆದುಬಿಡಿ; ಗಿಡ ಸೊರಗಿಹೋಗುತ್ತದೆ; ಮೀನಿಗೆ ಉಪವಾಸ!

ಮೂರೂ ಇದ್ದರೆ ಪರಸ್ಪರ ಉಪಕಾರ, ಒಂದು ವ್ಯವಸ್ಥೆ.

ಪರಿಸರ

ನಮ್ಮ ಪರಿಸರ ಎಷ್ಟು ಹದಗೆಟ್ಟಿದೆಯೆಂದು ತಿಳಿದುಕೊಳ್ಳಬೇಕೆಂದರೆ ಪಟ್ಟಣದ ರಸ್ತೆಗಳಲ್ಲಿ ನಡೆದಾಡಿ ಬನ್ನಿ.

ಅಥವಾ ನರ್ಸಿಂಗ್ ಹೋಂ, ಅಸ್ಪತ್ರೆಗಳ ಕಡೆ ಹೋಗಿ ಬನ್ನಿ. ಹೆಚ್ಚುತ್ತಿರುವ ವೈದ್ಯರ ಸಂಖ್ಯೆಯನ್ನೇ ನೋಡಿ. ಹೇಳಿಕೊಳ್ಳುವಂಥ ಬೇನೆ ಇರದಿದ್ದರೂ ಆರೋಗ್ಯದ ಕಳೆಯಿರದೆ ಸೊರಗುತ್ತಿರುವ ಮುಖಗಳನ್ನೇ ಗಮನಿಸಿ. ಲವಲವಿಕೆಯಿಲ್ಲದೆ ಆಲಸಿಕೆಯಿಂದಿರುವ ಮಕ್ಕಳನ್ನೇ ನೋಡಿ. ಊರುಕೇರಿಗಳಲ್ಲಿ ನಡೆಯುವ ಹಗರಣಗಳೂ ವಾತಾವರಣದ ಲಕ್ಷಣವೆ. ಪರಿಸರವೆಂದರೆ ಒಳ್ಳೆಯ ಗಾಳಿ, ಬೆಳಕು; ನಿಸರ್ಗದಿಂದಲೆ ದೊರೆಯುವ ನೀರು; ಹಗಲು-ರಾತ್ರಿಗಳ ವಿಂಗಡಣೆ ನಮ್ಮ ಒಳಗೂ ಇರುವುದೇ ಎಂಬ ಅರಿವು ಮುಂತಾದವು. ಮನುಷ್ಯ ಭೂಮಿಯ ಮೇಲೆ ಬದುಕಿ ಬಾಳುವುದು ಸಾಧ್ಯವಾದದ್ದು ಪರಿಸರದ ಅನುಕೂಲದಿಂದ. ಪರಿಸರ ಇರುವಂತೆಯೆ ಇದ್ದರೆ ಮನುಷ್ಯನ ಉಳಿವಿಗೇನು ಆತಂಕವಿರದು. ಆದರೆ ನಮ್ಮ ದುರಾಸೆ ಪರಿಸರ ಹೀಗಿರಲು ಬಿಡುವುದಿಲ್ಲ. ಪರಿಸರವನ್ನು ಕೆಡಿಸಬೇಕೆಂಬ ಉದ್ದೇಶವಿರದಿದ್ದರೂ, ನಾವು ನಮ್ಮ ಬದುಕನ್ನು ನಡೆಸಿಕೊಳ್ಳುವ ಮೇಲಾಟದಲ್ಲಿ ಪರಿಸರ ಕೆಡುತ್ತದೆ. ಓಡಿಯಾಡುವುದನ್ನು ಬಿಟ್ಟು ಬಂಡಿಯನ್ನೇರುತ್ತೇವೆ; ಬಂಡಿಯು ಹಳತಾಗಿ ಕಾರು ಬರುತ್ತದೆ. ಮೋಟಾರಿನ ರೂಪಾಂತರಗಳು ಮನುಷ್ಯನ ಬಳಕೆಗೆ ತುಂಬ ಬರುತ್ತವೆಯಾಗಿ ಅವುಗಳ ಸಂಖ್ಯೆ ಏರುತ್ತದೆ. ರಸ್ತೆಗಳಲ್ಲಿ ಅವು ಓಡುವಾಗ ಅವುಗಳಿಂದ ಹೊರಬರುವ ವಿಷವೆಲ್ಲ ಗಾಳಿಯಲ್ಲಿ ಸೇರಿಕೊಳ್ಳುತ್ತದೆ. ಅದೇ ಗಾಳಿಯನ್ನು ನಾವೆಲ್ಲ ಆಶ್ರಯಿಸಬೇಕು! ರೋಗ ಬಾರದೆ ಹೇಗೆ? ಆದರೆ ಬೇರೆ ದಾರಿಯಿದೆಯೆ? ನೀರನ್ನು ಜನರಿಗೆ ಮುಟ್ಟಿಸುವಾಗ ಅದೆಷ್ಟು ಮಲಿನವಾಗುವುದೊ ಹೇಳುವವರು ಯಾರು?

ಇನ್ನು ಉದ್ಯಮಗಳ ಮೇಲಾಟದಲ್ಲಿ, ಕಾರ್ಖಾನೆಗಳ ಒತ್ತಡದಿಂದ, ಮತ್ತಿತರ ಆಧುನಿಕ ಕರ್ಮಕಾಂಡದಿಂದ ಪರಿಸರದ ನೈರ್ಮಲ್ಯ ಎಷ್ಟರಮಟ್ಟಿಗೆ ಉಳಿದೀತು?

ಜನರಿಗೆ ಇದರ ಅರಿವಿದ್ದರೆ ತಾನೆ ಪರಿಹಾರದ ಆಲೋಚನೆ?

ಪರಿಸರದ ಉಳಿವು

ಪರಿಸರವಿರುವುದು ಮನುಷ್ಯನ ಪ್ರಯೋಜನಕ್ಕಷ್ಟೆ ಎಂಬುದು ಹೊರಗಿನಿಂದ ನಮ್ಮವರಿಗೆ ಈಚೆಗೆ ಬಂದಿರುವ ತಿಳಿವಳಿಕೆ.

ಪರಿಸರದ ಮೇಲೆ ದಾಳಿ ಮಾಡದೆ, ಪರಿಸರದ ಅನುಕೂಲವನ್ನು ದೋಚಿಕೊಳ್ಳದೆ ಮನುಷ್ಯನ ಸುಖವಾಗಲಿ ಸಂಪತ್ತಾಗಲಿ ಬೆಳೆಯಲಾರದು ಎಂಬುದು ನಮ್ಮ ಸಂಸ್ಕೃತಿಗೆ ಹೊರತಾದುದು. ಆದರೆ ಈ ಮನೋವೃತ್ತಿಯೆ ಈಗ ಹೆಚ್ಚಿದೆ!

ವಿಜ್ಞಾನ ಹಾಗೂ ತಂತ್ರಜ್ಞಾನದ ವ್ಯಾಪಕತೆ ಮತ್ತು ಪರಿಣಾಮದಿಂದ ಪರಿಸರದ ಮೇಲೆ ನಮಗಿದ್ದ ಆದರ ಕಡಮೆಯಾಯಿತು. ಇದಕ್ಕೆ ಒತ್ತು ಕೊಡುವಂತೆ ನಮ್ಮ ಶಿಕ್ಷಣದ ವೈಪರೀತ್ಯ— ವಿಜ್ಞಾನ, ಉದ್ಯೋಗ ಎರಡೇ ಉದ್ದೇಶಗಳು ಅದಕ್ಕೆ. ಬದುಕುವುದನ್ನು ಕಲಿಸಲು ಹೊರಟಿಲ್ಲ ಈ ಶಿಕ್ಷಣ. ವಿಜ್ಞಾನ-ಉದ್ಯೋಗಗಳೆರಡೂ ಸಾಧಿಸಿರುವುದಾದರೂ ಏನನ್ನು? ಮೋಜಿನ ಬದುಕಿಗೆ ನೆರವಾಗುವ ಭೋಗಸಾಮಾಗ್ರಿಗಳನ್ನು ಉತ್ಪಾದನೆ ಮಾಡುವುದು, ವಿತರಣೆ ಮಾಡುವುದು. ಇಷ್ಟೇ ತಾನೆ? ಬದುಕಿಗೆ ಬೇಕಾದುದು ಮೌಲ್ಯಗಳ ಚಿಂತನೆ, ಪರಿಸರ ಪ್ರಜ್ಞೆ ಎಂಬ ಅರಿವೇ ಇಲ್ಲದೆ, ನಮ್ಮ ಎಳೆಯ ಮಕ್ಕಳು ಬೆಳೆಯುತ್ತಿದ್ದಾರೆ. ವಿಜ್ಞಾನ - ತಂತ್ರಜ್ಞಾನಗಳು ಒಟ್ಟುಗೂಡಿ ಮನುಷ್ಯರಲ್ಲಿ ದುರಾಸೆಯೆಂಬ ದೊಡ್ಡ ಬೆಂಕಿಯನ್ನು ಹೊತ್ತಿಸಿವೆ. ಇದೊಂದು ಭೋಗಲಾಲಸೆ; ಈ ದುರಾಸೆಯನ್ನು ತಣಿಸಬೇಕೆಂದರೆ ಪರಿಸರದ ಸಂಪನ್ಮೂಲವನ್ನೆಲ್ಲ ಬರಿದುಮಾಡಬೇಕು. ಪರಿಸರದೊಂದಿಗೆ ಸೆಣಸಾಟ ಪ್ರಾಣಿಗಳಿಗೆ ಸಹಜವಾದುದು ಎಂಬ ಡಾರ್ವಿನ್ ಸಿದ್ಧಾಂತವೊಂದು ಬೇರೆ ಈ ದುರಾಸೆಗೆ ಉತ್ತೇಜಕವಾಯಿತು. ವ್ಯಕ್ತಿ ಬದುಕಬೇಕೆಂದರೆ ಪರಿಸರ ಸೋಲಬೇಕು, ಸೊರಗಬೇಕು. ಇದೂ ವಿಜ್ಞಾನದ ಮುನ್ನಡೆಯಲ್ಲಿ ಕಾಣಿಸಿಕೊಂಡ ಒಂದು ಘಟ್ಟವೇ ಎನ್ನಿ. ಪಾಶ್ಚಾತ್ಯ ದೇಶಗಳಲ್ಲಿ ಮೂಡಿಕೊಂಡ ಈ ಮನೋಧರ್ಮ ನಮ್ಮ ದೇಶಕ್ಕೂ ಅಲ್ಲಿಂದ ಉಡುಗೊರೆಯಾಗಿ ಬಂದಿತು. ಇದನ್ನು ಆಸರೆಯಾಗಿರಿಸಿಕೊಂಡು ಮೈದಳೆದಿರುವುದು ನಮ್ಮ ಶಿಕ್ಷಣ ಪದ್ಧತಿ. ಇದರ ಫಲವನ್ನು ಅನುಭವಿಸಿ ಬೆಳೆಯುತ್ತಿರುವುದು ಇಂದಿನ ಪೀಳಿಗೆ.

ಇವರಿಗೆ ಪರಿಸರವನ್ನು ಉಳಿಸದಿದ್ದರೆ ತಾವೂ ಉಳಿಯುವುದಿಲ್ಲ ಎಂಬ ವಿವೇಕವಿಲ್ಲ. ವಿವೇಕ ಮೂಡಿಕೊಳ್ಳಬೇಕಾದರೆ ಚಿಂತನೆ ಮಾಡಬೇಕು, ವಿಚಾರ ಮಾಡಬೇಕು. ಇದಕ್ಕೆ ಅವಕಾಶವೆಲ್ಲಿದೆ? ಅನುಕೂಲವೆಲ್ಲಿದೆ?

ಕಾಡಿನ ಕರೆ

ಕಾಡನ್ನು ಕಡಿಯದೆ ಊರಾಗುವುದಿಲ್ಲ. ಆದರೆ ಕಾಡಿಲ್ಲದೆ ಊರು ಉಳಿಯುವುದೂ ಇಲ್ಲ.

ಇದನ್ನು ಮನುಷ್ಯ ಅರಿತುಕೊಳ್ಳದಿದ್ದರೆ ಅವನಿಗೆ ಉಳಿಗಾಲವಿರದು.

ಕಾಡಿರುವುದು ಸೌದೆಗಾಗಿ; ಮರವಿರುವುದೇ ನಮ್ಮ ಉಪಯೋಗಕ್ಕೆ ಎಂದು ತಿಳಿವಳಿಕೆಯಿಲ್ಲದ ಜನರ ವಾದ. ವಾಸ್ತವವಾಗಿ ಮರ-ಗಿಡಗಳು ನಿಸರ್ಗವು ನಮಗಿತ್ತಿರುವ ವರಗಳಲ್ಲಿ ಅತ್ಯಂತ ಶ್ರೇಷ್ಠವಾದುದು.

ಎಷ್ಟು ವಿಜ್ಞಾನದ ಅನ್ವಯವಾದರೂ, ನಮ್ಮ ಉಳಿವು ನಿಸರ್ಗದ ಚೌಕಟ್ಟಿನಲ್ಲೇ ತಾನೆ? ಭೂಮಿಯ ಮೇಲೆ ಬೆಟ್ಟ, ಕಾಡು ಇರುವುದರಿಂದಲೇ ಮಳೆ; ಮಳೆಯಿಂದ ಬೆಳೆ; ಬೆಳೆಯಿಂದ ನಮ್ಮ ಉಳಿವು.

ಕಾಡು ಬೆಟ್ಟವು ಕರಗದಂತೆ ನೋಡಿಕೊಳ್ಳುತ್ತದೆ; ಬೆಟ್ಟದ ಬದಿಯಲ್ಲಿ ಅಥವಾ ಬೆಟ್ಟದ ಮೇಲೆ ಮರಗಳಿರದಿದ್ದರೆ ಬೆಟ್ಟ ಗಾಳಿಯ ಹೊಡೆತಕ್ಕೆ ತುತ್ತಾಗಿ ಶಿಥಿಲವಾಗುತ್ತದೆ; ಬಂಡೆಗಳುರುಳುತ್ತವೆ.

ಬೆಟ್ಟ ಮೋಡವನ್ನು ತಡೆದು ಮಳೆಗರೆಸುವಾಗ ಮರಗಳದ್ದೂ ಪಾತ್ರವಿದೆ.

ಕಾಡಿನ ಮರಗಳು ಹಲವು ಮೈಲಿಗಳವರೆಗೆ ಹವಾನಿಯಂತ್ರಣಕ್ಕೆ ನೆರವಾಗುವುವು.

ಬಿಸಿಲಿನ ಬೇಗೆಯನ್ನು ತಡೆದು, ಗಾಳಿಯಲ್ಲಿ ತನುವನ್ನು ಮೂಡಿಸಿ, ಉರಿಬಿಸಿಲು ನೆಲವನ್ನು ಬರಡು ಮಾಡದಂತೆ ನೋಡಿಕೊಳ್ಳುವುದು ಮರಗಳೇ.

ಮರಗಳು ಮೇಲೆ ಮೇಲೆ ಬೆಳೆಯುತ್ತ ಆಕಾಶದಲ್ಲಿ ಕೂಡ ತನುವನ್ನು ಸಿಂಪಡಿಸಿ ಮೋಡಗಳ ಸಂಖ್ಯೆಯನ್ನು ಹೆಚ್ಚಿಸುತ್ತವೆ.

ಮರಗಳು ನೆಲದಿಂದ ನೀರನ್ನು ಟನ್ನುಗಟ್ಟಳೆ ಹೀರಿಕೊಂಡು ಬೆಳೆಯುತ್ತವೆ; ನೆಲದಲ್ಲಿ ತೇವದ ಅಂಶ ಹೆಚ್ಚಾಗಿ, ರೋಗಕ್ಕೆ ಕಾರಣವಾಗದಂತೆ ನೋಡಿಕೊಳ್ಳುತ್ತವೆ.

ಇನ್ನು ಪ್ರವಾಹದ ಆರ್ಭಟವನ್ನು ಅಡಗಿಸಲು ಮರಗಳೇ ದಾರಿ. ನದಿ ತನ್ನ ಪಾತ್ರದಲ್ಲಿದ್ದುಕೊಂಡು ನೆಮ್ಮದಿಯಿಂದ ಹರಿಯಲು ನೆರವಾಗುವುವೂ ಮರಗಳೆ.

ಮರಗಳು ಪಕ್ಷಿಗಳಿಗೆ ಆಸರೆಯೆಂಬುದನ್ನು ಯಾರರಿಯರು? ಅವುಗಳ ಆಹಾರ, ವಸತಿ, ರಕ್ಷಣೆ, ಸಂತಾನ ಎಲ್ಲವೂ ಮರಗಳಿಂದಲೆ.

ಹೀಗಿರುವಾಗ ಕಾಡಿನ ಮರಗಳನ್ನು ಕಡಿದುರುಳಿಸುವುದಕ್ಕಿಂತ ಹೆಚ್ಚಿನ ಅಪರಾಧವಿದೆಯೆ?

ಹೆಚ್ಚಿನ ಹೆಡ್ಡತನವಿದೆಯೆ ?

ನೆಲದೊಳಗೆ ನೀರು

ಜೀವಕ್ಕೆ ನೀರಿನ ಆಸರೆ ಮೂಲಭೂತವಾದದ್ದು.

ಮನುಷ್ಯರಿಗೆ ಮಾತ್ರವಲ್ಲ, ಪಶುಪಕ್ಷಿಗಳಿಗೂ ನೀರು ಬೇಕು; ಗಿಡಮರಗಳಿಗೂ ನೀರು ಬೇಕು. ನೀರಿನ ಅಗತ್ಯ ಎಲ್ಲ ಋತುಗಳಲ್ಲೂ ಉಂಟು, ಎಲ್ಲ ಭೂಭಾಗದಲ್ಲೂ ಉಂಟು.

ನಮಗೆ ದೊರೆಯುವ ನೀರಿನಲ್ಲಿ ನೂರಕ್ಕೆ ಎಪ್ಪತ್ತರಷ್ಟು ಉಪ್ಪುನೀರು ಸಮುದ್ರದ್ದು. ಉಳಿದ ಸ್ವಲ್ಪ ಭಾಗ ಮಾತ್ರ ಸಿಹಿ ನೀರು. ಇದರಲ್ಲಿ ಕೆಲವಂಶ ನೆಲದ ಮೇಲೆ ಹರಿಯುವ ನದಿಗಳು, ತೊರೆಗಳು; ನೆಲದ ಮೇಲಿರುವ ಹಳ್ಳ ಕೊಳ್ಳಗಳು, ಕೆರೆ ಕಾಲುವೆಗಳು. ಮನುಷ್ಯರ ಸಂಖ್ಯೆ ಹೆಚ್ಚಿದಂತೆ, ಅವರ ತಾಂತ್ರಿಕ ಕೌಶಲ ಬೆಳೆದಂತೆ ಈ ನೀರನ್ನು ಮಿತಿಮೀರಿ ಬಳಸಿಕೊಳ್ಳುವುದಲ್ಲದೆ, ಅದನ್ನು ಕೆಡಿಸುತ್ತಿರುವುದೂ ಉಂಟಷ್ಟೆ? ಮನುಷ್ಯನ ದುರಾಸೆಯ ಫಲವಾಗಿ ಈಗ ನೆಲದೊಳಗೆ ಅಡಗಿರುವ ನೀರನ್ನೂ ಬಗೆದು ಮೇಲೆತ್ತಿ ಬಳಸಿಕೊಳ್ಳುವ ಕಾರ್ಯ ಶುರುವಾಗಿದೆ. ಎಲ್ಲೆಲ್ಲಿ ನೋಡಿದರೂ ಬೈರಿಗೆ ಬಾವಿಗಳೇ. ಪ್ರಕೃತಿಯ ವ್ಯವಸ್ಥೆಯಲ್ಲಿ ನೆಲದ ಮೇಲೆ ನೀರೆಷ್ಟಿರಬೇಕು, ನೆಲದೊಳಗೆ ನೀರೆಷ್ಟಿರಬೇಕು ಎಂಬ ವಿವೇಕವಿದೆ. ಈ ಅಂತರವನ್ನು ಮಿತಿಮೀರಿ ದಾಟಿದರೆ ಅಪಾಯವೆಂಬುದೂ ವ್ಯವಸ್ಥೆಯ ಒಂದು ಅಂಶವೇ.

ಮಳೆಯಿಂದ ಬಿದ್ದ ನೀರು ನೆಲದೊಳಗೆ ಹೋಗಿ ಅಲ್ಲಿನ ಅಂತರ್ಜಲವ್ಯಾಪ್ತಿಗೆ ಪೂರಕವಾಗಬೇಕೆಂಬುದೂ ವ್ಯವಸ್ಥೆಯ ಅಂಶವೇ. ಆದರೆ ನಗರಗಳಲ್ಲಿ ಮನೆಗಳು, ಕಾಂಕ್ರೀಟ್ ರಸ್ತೆಗಳು, ಉದ್ಯಮದ ಕಟ್ಟಡಗಳು ಇವೆಲ್ಲ ಹೆಚ್ಚಿ ಮಳೆನೀರು ನೆಲದೊಳಗೆ ಇಂಗುವುದೇ ಕಡಮೆ. ಹೀಗಾಗಿ ಮೊದಲೇ ಬತ್ತುತ್ತಿರುವ ನೆಲದೊಳಗಣ ನೀರಿನ ಹರವು, ಬೈರಿಗೆ ಬಾವಿಗಳ ದಾಳಿಗೆ ತುತ್ತಾಗಿ ಇನ್ನಷ್ಟು ಸೊರಗಿಹೋಗುತ್ತಿದೆ.

ನೀರು ನೆಲದೊಳಗೆ ಅಡಗಿರಬೇಕಾದುದೂ ಪ್ರಕೃತಿಯ ಒಂದು ವ್ಯವಸ್ಥೆಯೇ; ಅದರ ಪ್ರಯೋಜನ ಪ್ರಾಣಿವರ್ಗಕ್ಕೆ ಒದಗಬೇಕಾದುದು ತೀರ ಮಿತವಾಗಿಯೇ, ಅನಿವಾರ್ಯವಾದಾಗ ಮಾತ್ರ. ಈ ವಿವೇಕವಿಲ್ಲದ ಮೇಲೆ ಉಳಿವು ಹೇಗೆ?

ಉದ್ಯಮಗಳಿಂದಾಗಿ ನೆಲದ ಮೇಲಣ ನೀರು ಕೆಡುತ್ತಿರುವುದಲ್ಲದೆ, ಈ ವಿಷವು ನೆಲದೊಳಗೂ ಇಂಗಿ ಅಂತರ್ಜಲವನ್ನೂ ಕೆಡಿಸುತ್ತಿದೆ. ಆ ನೀರು ಹೊರಗೆ ಬಂದರೆ ಹೊರ ತೆಗೆದ ಮಂಗಗಳಿಗೇ ಕುತ್ತು ತಾನೆ?

ತನ್ನ ಸುಖವನ್ನೆ ಬದಿಗೊತ್ತಿ ಸಂಪತ್ತನ್ನು ದೋಚಿಕೊಳ್ಳಲು ಹೊರಟಿರುವ ಮನುಷ್ಯನ ಮೇಲ್ಮೆ ಯಾತರದು ?

ಮೃಗಾಲಯ

ಮನುಷ್ಯ ತನ್ನ ಕುತೂಹಲವನ್ನು ತಣಿಸಲೆಂದೋ, ತನಗೆ ವಿನೋದವನ್ನು ಒದಗಿಸಲೆಂದೋ ಮೃಗಾಲಯಗಳನ್ನು ಏರ್ಪಡಿಸಿಕೊಂಡ.

ಊರೊಳಗೆ ಎಲ್ಲರೂ ಕಾಣುವಂತೆ ಕಾಡಿನ ಪ್ರಾಣಿಗಳನ್ನು ತಂದಿರಿಸಿಕೊಂಡ. ಹಲವಾರು ಬಗೆಯ ಪ್ರಾಣಿಗಳನ್ನು ಒತ್ತಟ್ಟಿಗೇ ಕಾಣಲು ಅನುಕೂಲವಾಗುವಂತೆ ಇರುವುದು ಮೃಗಾಲಯ.

ಕಾಡಿನ ಪ್ರಾಣಿಗಳಿಗೆ ಸಹಜವಾದ ವಾತಾವರಣ ಕಾಡು. ಅಲ್ಲಿ ಬೇಟೆಯಾಡಿ ಹೊಟ್ಟೆ ಹೊರೆದುಕೊಳ್ಳುವ ಹುಲಿಯನ್ನು ಹಿಡಿದು ತಂದು ಇಲ್ಲಿರಿಸಿ ಹೊತ್ತಿಗೆ ಸರಿಯಾಗಿ ತಿನಿಸನ್ನು ಅದರ ಮುಂದೊಡ್ಡಿದರೆ ಅದಕ್ಕೇನು ಹಿತವೆ?

ಮನಬಂದಂತೆ ಅಲೆದಾಡುವ ಆನೆಯನ್ನು ಹಿಡಿದು ಅದನ್ನು ಇಲ್ಲಿ ಕೂಡಿಟ್ಟರೆ ಅದಕ್ಕೆ ಸೊಗಯಿಸುವುದು ಹೇಗೆ? ಅಲ್ಲಲ್ಲಿ ನೆಗೆದಾಡಿ ಹುಲ್ಲನ್ನು ಮೇಯುವ ಹುಲ್ಲೆಮರಿ ಮೃಗಾಲಯದಲ್ಲಿ ಏನು ಸುಖ ಕಂಡೀತು?

ಇನ್ನು ದೊಡ್ಡ ದೊಡ್ಡ ವಾನರಗಳನ್ನು ನೋಡಿ. ಮೃಗಾಲಯದ ಸಣ್ಣ ಕೋಣೆಯೊಂದರಲ್ಲಿ ಅವು ಕುಳಿತ ಭಂಗಿಯಲ್ಲಿ ನಿರಾಶೆ, ಅವುಗಳ ಮುಖದಲ್ಲಿ ನೀರವತೆ, ಕಣ್ಣುಗಳಲ್ಲಿ ಮುನಿಸು ಇವನ್ನು ಯಾರಾದರೂ ಗಮನಿಸಿಯಾರು.

ಮೃಗಾಲಯ ಇರುವುದು ಮೃಗಗಳ ಸಲುವಾಗಿ ಅಲ್ಲ; ಮನುಷ್ಯನ ಒಂದು ಬಯಕೆಯ ತೀರಿಕೆಗಾಗಿ. ಸ್ವಾರ್ಥಪರನಾದ ಮಾನವ ಏನನ್ನಾದರೂ ಮಾಡಿಯಾನು ಎನ್ನುವುದಕ್ಕೆ ಇದೊಂದು ನಿದರ್ಶನ.

ಮೃಗಾಲಯದಲ್ಲಿರುವ ಮೃಗಗಳು ಸುರಕ್ಷಿತವಾಗಿರುತ್ತವೆ; ಅವಕ್ಕೆ ಕಾಡಿನಲ್ಲಿರುವ ಆತಂಕವಿರದು, ಹೊಟ್ಟೆ ಹೊರೆದುಕೊಳ್ಳುವ ಪ್ರಯಾಸವಿರದು, ಕಾದಾಡಬೇಕಾದ ಕಾರಣವಿರದು ಎಂದೆಲ್ಲ ಹೇಳುವವರಿದ್ದಾರೆ. ಇವೆಲ್ಲ ಮನುಷ್ಯ ತನಗಾಗಿ ನೀಡುವ ಸಮಾಧಾನಗಳು; ತನ್ನ ಅಳುಕನ್ನು ಮರೆಮಾಚಿಕೊಳ್ಳಲೆಂದು.

ಮೃಗಗಳು ಈ ವಾದವನ್ನು ಒಪ್ಪುವುವೋ ತಿಳಿಯದು. ಮುಖ್ಯವಾಗಿ ಬಂಧನವೆಂಬುದು ಯಾವ ಪ್ರಾಣಿಗೂ ಹಿತವಲ್ಲ. ಎಂಥ ಸುರಕ್ಷೆಯಿದ್ದರೂ ಸ್ವಾತಂತ್ರ್ಯ ಇರದಿದ್ದರೆ ಅದು ರುಚಿಸುವುದಿಲ್ಲ.

ತಾನಾಗಿ ದುಡಿದು ಪಡೆದುಕೊಂಡ ತಿನಿಸು ಮೈಗೆ ನೀಡುವ ಶಕ್ತಿಯನ್ನು ಬೇರೆಯವರು ನೀಡುವ ಭಿಕ್ಷೆ ಒದಗಿಸಲಾರದು. ಪ್ರಾಣಿ ಜೀವನದಲ್ಲಿ ಇದಕ್ಕೆ ಬೆಲೆಯಿದೆ; ಮನುಷ್ಯನು ಮಾತ್ರ ಇದನ್ನು ಅರಿತುಕೊಂಡಿಲ್ಲ.

ಪ್ರಾಣಿಹಿಂಸೆ

ಮನುಷ್ಯನು ಮೂಕಪ್ರಾಣಿಗಳನ್ನು ತನ್ನ ಉಪಯೋಗಕ್ಕೆ ಬಳಸಿಕೊಳ್ಳ ತೊಡಗಿದುದು ತುಂಬ ಹಿಂದೆ. ಸಂಸ್ಕೃತಿಯು ಆರಂಭವಾದುದೆ ಹಾಗೆ. ಸಂಚಾರಕ್ಕೆ ಕುದುರೆ; ಭಾರ ಹೊರಲು ಕತ್ತೆ, ಎತ್ತು, ಆನೆ; ಉಳುಮೆಗೆ ದನ, ಒಂಟೆ; ಉಣ್ಣೆಗೆ ಕುರಿ; ಬೇಟೆಗೆ ನಾಯಿ; ಆಹಾರಕ್ಕಂತೂ ಹಲವು ಪ್ರಾಣಿಗಳು.

ಮನುಷ್ಯನ ಸ್ವಾರ್ಥ ಅಷ್ಟಕ್ಕೆ ಮುಗಿಯುವುದಿಲ್ಲ. ತನ್ನ ವಿನೋದಕ್ಕೂ ಪ್ರಾಣಿಗಳನ್ನು ಹಿಂಸಿಸುವುದಿದೆ. ಹುಂಜಗಳ ಕಾಳಗ, ಟಗರುಗಳ ಹೋರಾಟ, ಕೋಣಗಳ ಕಂಬಳ; ಸರ್ಕಸ್ಸಿನಲ್ಲಿ ಆಟಕ್ಕೆ ಹಲವು ಪ್ರಾಣಿಗಳು, ಕಾಡಿನಲ್ಲಿ ಬೇಟೆಯಾಡುವಾಗ ಕ್ರೀಡೆಯ ಉದ್ದೇಶ, ಧರ್ಮದ ಹೆಸರಿನಲ್ಲಿ ಪಶುಬಲಿ ನಡೆಯುವುದಿಲ್ಲವೆ?

ವಿಜ್ಞಾನಿಗಳೂ ಪ್ರಯೋಗಾಲಯಗಳಲ್ಲಿ ಪ್ರಾಣಿಹಿಂಸೆ, ಪ್ರಾಣಿವಧೆ ಮಾಡುತ್ತಲೆ ಇದ್ದಾರೆ. ಮೋಜಿಗಾಗಿ ನಾಯಿ, ಬೆಕ್ಕುಗಳನ್ನು ಸಾಕಿಕೊಳ್ಳುವುದಿಲ್ಲವೆ? ಇವೆಲ್ಲದರ ಹಿನ್ನೆಲೆಯಲ್ಲಿರುವ ಕಲ್ಪನೆಯೇನು?

ಮನುಷ್ಯನ ಸಲುವಾಗಿಯೇ ಎಲ್ಲ ಪ್ರಾಣಿಗಳೂ ಇರುವುದು; ಇಡೀ ಪ್ರಪಂಚವೇ ಮನುಷ್ಯನ ಸುಖಕ್ಕಾಗಿ ಎಂಬುದು. ಈ ವಿಚಾರವಾಗಿ ಪ್ರಾಣಿಗಳ ಅಭಿಪ್ರಾಯವೇನೆಂದು ಯಾರು ಹೇಳಬೇಕು? ಅದನ್ನು ತಿಳಿಯುವ ಕುತೂಹಲ ಯಾರಿಗಿದೆ? ಮನುಷ್ಯನ ಮೇಲ್ಮೆಯನ್ನು ಮನುಷ್ಯನೇ ಹೇಳಿಕೊಳ್ಳಬೇಕು. ಉಳಿದ ಪ್ರಾಣಿಗಳು ಹೇಳಬಹುದೆ?

ಹೀಗೆಂದಮೇಲೆ ತನ್ನ ಸುಖಕ್ಕಾಗಿ ಪ್ರಾಣಿಗಳನ್ನು ಹಿಂಸಿಸುವ ಹಕ್ಕು ಮನುಷ್ಯನದ್ದು ಎಂದಾಯಿತೆ? ಮನುಷ್ಯನ ಸ್ವಭಾವದಲ್ಲಿ ಕಾರುಣ್ಯಕ್ಕೆ ಎಡೆಯಿಲ್ಲವೆ? ಇದೆಯೆಂದು ತಿಳಿದವರು ಹೇಳುತ್ತಾರೆ. ಉಳಿದವರಿಗೆ, ಅದರ ಗೊಡವೆ ನಮಗೇಕೆ ಎಂಬ ಅನಾದರ!

ನೂರ ಮೂವತ್ತು ವರ್ಷಗಳ ಹಿಂದೆ ಅಮೆರಿಕದಲ್ಲಿ ಹೆನ್ರಿಬರ್ಗ್ ಎಂಬ ಪುಣ್ಯಾತ್ಮನು ಪ್ರಾಣಿಗಳ ನೋವಿಗಾಗಿ ಮರುಗಿ ಚಳುವಳಿಯೊಂದನ್ನೇ ತೊಡಗಿಸಿದ. ಪ್ರಾಣಿಹಿಂಸಾನಿರೋಧವೇ ಈ ಚಳುವಳಿಯ ಉದ್ದೇಶ. ಇದರ ಕರೆಗೆ ಜಗತ್ತಿನಲ್ಲೆಲ್ಲ ಓಗೊಡುವವರಿದ್ದಾರೆ.

ಮನುಷ್ಯ ಪ್ರಾಣಿ !

ಅಡವಿಯಲ್ಲಿ ಪ್ರಾಣಿಗಳಿವೆ, ಮಡುವಿನಲ್ಲಿ ಮೀನುಗಳಿವೆ. ಹಾಗೆಂದು ಮನುಷ್ಯ ಅಡವಿಯಲ್ಲಿ ಬಾಳಲಾರ, ಮಡುವಿನಲ್ಲಿ ಉಳಿಯಲಾರ.

ಎಲ್ಲ ಜೀವಿಗಳಿಗೆ ಅವಕ್ಕೆ ತಕ್ಕಂತೆ ಪರಿಸರದ ಕಲ್ಪನೆಯಿದೆ. ತಂತಮ್ಮ ಪರಿಸರವನ್ನು ಮೀರಿ ಹೊರಗೆ ಬರಲು ಅವು ಹಾತೊರೆಯುವುದಿಲ್ಲ. ಪ್ರಾಣಿಗಳು ಅಡವಿಯನ್ನು ಬಿಟ್ಟು ಊರೊಳಗೆ ತಾವಾಗಿ ಬರುವುದಿಲ್ಲ; ಮೀನುಗಳು ಮಡುವನ್ನು ಬಿಟ್ಟು ಮೇಲೇರಿ ಬರುವುದಿಲ್ಲ.

ಆದರೆ ಈ ಮಾತು ಮನುಷ್ಯನಿಗೆ ಅನ್ವಯಿಸುವುದಿಲ್ಲ. ಏಕೆಂದರೆ ಅವನಿಗೆ ತನ್ನದೇ ಪರಿಸರವೆಂಬ ಕಲ್ಪನೆಯೇ ಇಲ್ಲ. ಊರನ್ನು ಬಿಟ್ಟು ಅಡವಿಗೂ ಹೋಗುತ್ತಾನೆ, ಮಡುವಿನೊಳಗೂ ಮುಳುಗುತ್ತಾನೆ.

ತಾನು ಹೋದಕಡೆಯೆಲ್ಲ ತನ್ನ ಅಂಕೆಯಿಂದ ಅಲ್ಲಿನ ಪ್ರಾಣಿಗಳಿಗೆ ಆತಂಕವೊದಗಿಸುತ್ತಾನೆ. ಕಾಡನ್ನು ಕಡಿಯುತ್ತಾನೆ; ಮಡುವನ್ನು ಮುಚ್ಚುತ್ತಾನೆ.

ಹೀಗೆ ಉಳಿದೆಲ್ಲ ಪ್ರಾಣಿಗಳ ಪರಿಸರವನ್ನು ದೂಳಿಗೆಬ್ಬಿಸುವ ಅವನ ಕೆಲಸವನ್ನು ಕಂಡು ಅವನೇ ಉಬ್ಬಿದ್ದಾನೆ, ಸೊಕ್ಕಿದ್ದಾನೆ. ಸಂಸ್ಕೃತಿಯೆಂದರೆ ಪರಿಸರವನ್ನು ಗೆಲ್ಲುವುದೇ ಎಂದು ಅವನ ಭಾವನೆ.

ಕಥೆಗಳಲ್ಲಿ ಸಿಂಹಕ್ಕೆ ಮೃಗರಾಜ ಎಂಬ ಬಿರುದು. ಅದು ಕಾಡಿನ ಪ್ರಾಣಿಗಳಿಗೆಲ್ಲ ಒಡೆಯನಂತೆ. ಆದರೆ ಇದೇನು ದಿಟವಲ್ಲ. ಕಾಡಿನಲ್ಲಿ ಯಾರು ಯಾರಿಗೂ ಒಡೆಯರಲ್ಲ. ಅಡವಿಯ ಮೇಲೆ ಎಲ್ಲ ಪ್ರಾಣಿಗಳಿಗೂ ಸಮನಾದ ಹಕ್ಕೇ.

ಆದರೆ ಮನುಷ್ಯ ಉಳಿದೆಲ್ಲ ಪ್ರಾಣಿಗಳ ಮೇಲೆ ಒಡೆತನ ಮಾಡಬೇಕೆಂದು ಹೊರಟಿದ್ದಾನೆ. ಬೇರೆಲ್ಲ ಪ್ರಾಣಿಗಳ ಪರಿಸರ ತನ್ನ ಬಯಕೆಯಂತೆ ಮಾಡಿಕೊಳ್ಳ ಬೇಕೆಂಬ ತವಕ ಅವನದ್ದು.

ಇದರ ಫಲವೇನೆಂದು ಬಲ್ಲಿರಾ? ಮನುಷ್ಯರ ನಡುವೆ ಮನುಷ್ಯನಿಗೆ ಎಡೆಯಿಲ್ಲದಿರುವುದು. ಎಲ್ಲ ಪರಿಸರಗಳ ನಡುವೆ ತನಗೇ ಒಂದು ಪರಿಸರವಿಲ್ಲದಿರುವುದು!

ಇತರ ಪ್ರಾಣಿಗಳೊಂದಿಗೆ ಸೆಣಸುತ್ತ ಮನುಷ್ಯತ್ವವನ್ನೇ ಕಳೆದುಕೊಳ್ಳುತ್ತಿರುವ ಈ ಪ್ರಾಣಿಗೆ ಏನನ್ನೋಣ?

ಆಳರಸರ ಮಾತು

ಕುಮುದೇಂದುವಿನ ರಾಮಾಯಣದಲ್ಲಿ ಬರುವ ಈ ಮಾತು ಎಲ್ಲ ಕಾಲಕ್ಕೂ ನಿಲ್ಲಬಲ್ಲುದು : 'ನುಡಿದೆರಡ ನುಡಿವವಂ ನೃಪಾಲಕನೆ?'

ರಾಮನ ವರ್ಣನೆಯಲ್ಲಿ 'ರಾಮೋ ದ್ವಿರ್ನಾಭಿಭಾಷತೇ' ಎಂಬುದು ಎದ್ದು ಕಾಣುತ್ತದೆ. ಎಂದರೆ ಒಂದು ಮಾತನ್ನು ಆಡಿದಮೇಲೆ ಅದನ್ನು ತಪ್ಪದೆ ನಡೆಸುವವನು ರಾಮ; ಅದನ್ನು ನಡೆಸಲಾರದೆ ಮತ್ತೊಂದು ಮಾತನ್ನು ಆಡುವವನಲ್ಲ.

ತ್ಯಾಗರಾಜರೂ 'ಒಕ ಮಾಟ, ಒಕ ಬಾಣಮು' ಎಂದು ಬಣ್ಣಿಸಿದ್ದಾರೆ. ಒಂದು ಮಾತನ್ನಾಡಿ ಅದನ್ನು ಹಿಂದಕ್ಕೆ ತೆಗೆದುಕೊಳ್ಳುವವನಲ್ಲ; ಒಂದು ಬಾಣವನ್ನು ಹೊಡೆದ ಮೇಲೆ ಅದು ಹಿಂದಕ್ಕೆ ಬರಬಾರದು.

ಆಳುವವರ ಮಾತು ಇಷ್ಟು ಸ್ಪಷ್ಟವಾಗಿ ನಿರ್ದುಷ್ಟವಾಗಿ ಇದ್ದರೇನೆ ಪ್ರಜೆಗಳಿಗೆ ಅವರಲ್ಲಿ ವಿಶ್ವಾಸ ಮೂಡುವುದು. ಒಂದು ನಿಲುವನ್ನು ತಳೆದ ಮೇಲೆ ಅದನ್ನು ಶಕ್ತಿಯಿದ್ದಷ್ಟೂ ಉಳಿಸಿಕೊಳ್ಳಬೇಕು ತಾನೆ?

ಇಂದು ಒಂದು ಮಾತು, ನಾಳೆ ಇನ್ನೊಂದು, ನಾಡದ್ದು ಮತ್ತೊಂದು ಎಂದಾದರೆ ಯಾವ ಮಾತನ್ನಾದರೂ ಅವನು ನಡೆಸಿಯಾನೆ ಎಂಬ ಸಂಶಯ ಯಾರಿಗಾದರೂ ಬಂದೀತು! ಮಾತಿನ ಹಿಂದೆ ಮನಸ್ಸು ಇದ್ದಿತೋ ಎಂಬ ಸಂದೇಹವೂ ಯಾರನ್ನಾದರೂ ಕಾಡೀತು!

ರಾಜಕಾರಣದಲ್ಲಿ ಆಳರಸರ ಪಂಕ್ತಿಗೆ ಸೇರಬಯಸುವುದೇನೋ ಸರಿಯೆ. ಆಳಿಸಿಕೊಳ್ಳುವವರು ಇರುವಾಗ ಆಳುವವರೂ ಇರಬೇಕಷ್ಟೆ? ಆದರೆ ಸಂದರ್ಭಕ್ಕೆ ತಕ್ಕಂತೆ, ಅಂತೆಗೆ ತಕ್ಕ ಬೊಂತೆಯಾಗಿ, ತುದಿನಾಲಗೆಯ ಮಾತನ್ನಾಡಿ ಅಧಿಕಾರವನ್ನು ಪಡೆದುಕೊಂಡ ಮೇಲೆ, ಮೊದಲು ಆಡಿದ ಮಾತನ್ನೆಲ್ಲ ಮರೆಯುವವರೇ ಬಹುಮಂದಿ. ಅನಂತರ ಅವರ ಮಾತಿನ ಧೋರಣೆಯೇ ಬೇರೆ!

'ವಾಕ್‌ಶುದ್ಧಿ'ಯೆಂಬುದರ ಅಗತ್ಯ ಎಲ್ಲರಿಗೂ ಇದ್ದದ್ದೇ. ಸುಳ್ಳಾಡಬಾರದು ಎಂದಷ್ಟೆ ಅದರ ಅರ್ಥವಲ್ಲ. ನುಡಿದಂತೆ ನಡೆಯಬೇಕು, ನಡೆದಂತೆ ನುಡಿಯಬೇಕು ಎಂಬುದೂ ಅದರಲ್ಲಿ ಸೇರುತ್ತದೆ. ಆಡಿದ ಮಾತು ಉಳಿಯಬೇಕು, ನಾಡನ್ನು ಆಳುವ ಮಂದಿಗೆ ಇಷ್ಟಾದರೂ ಗುಣ ಇರಬೇಡವೆ?

ಜನರ ಹಿತ

ಆ ಕಾಲದಲ್ಲಿ ಅರಸರಿದ್ದರು. ಈ ಕಾಲದಲ್ಲಿ ಜನರೇ ದಣಿಗಳು.

ದೊರೆಗಳು ದೇಶವನ್ನಾಳುತ್ತಿದ್ದಾಗ, ಜನರ ಮೊರೆ ಅವರನ್ನು ಮುಟ್ಟುವುದೆ ಕಷ್ಟವಾಗುತ್ತಿತ್ತು. ಜನರಿಗೂ ದೊರೆಗೂ ನಡುವೆ ಹತ್ತಾರು ಅಧಿಕಾರಿಗಳು. ದೊರೆಯ ಚಿತ್ತಕ್ಕೆ ಎದುರಿಲ್ಲ ಎಂದಾಗ, ದೊರೆಯ ಮರ್ಜಿಯನ್ನು ಹಿಡಿದು, ಅವನಿಗೆ ಅನುಕೂಲನಾಗಿ ನಡೆದುಕೊಂಡ ಅಧಿಕಾರಿ ಪ್ರಬಲನಾಗುವುದು ಸಹಜವೆ. ಆಗ ಅವನೆ ಜನರ ಪಾಲಿಗೆ ದೊರೆ. ಅವನು ಸಂಭಾವಿತನಾದರೆ ಜನರಿಗೆ ಹಿತ; ಅವನು ದುಷ್ಟನಾದರೆ ಮಾಡುವುದೇನು?

ದೊರೆಗಾಗಲಿ ಜನರ ಹಿತವೇ ಮುಖ್ಯವೆಂಬುದು ಶಾಸ್ತ್ರದ ಮಾತು; ಅದು ಪ್ರಯೋಗದಲ್ಲಿ ಬರಬೇಕೆಂಬ ನಿಯಮವೇನಿಲ್ಲ! ಜನರ ದೂರು ದೊರೆಯವರೆಗೆ ಹೋದರೂ, ದೊರೆ ಅದಕ್ಕೆ ಮಣಿಯುವನೆಂಬ ಭರವಸೆಯೇನು?

ಹೀಗಾಗಿ ಜನರ ಗೋಳನ್ನು ಕೇಳುವವರೆ ಇರದಿದ್ದರೆ ಜನರು ರೋಸಿ ದಂಗೆಯೇಳುತ್ತಾರೆ. ಅಧಿಕಾರಿಯನ್ನು ಓಡಿಸುತ್ತಾರೆ. ದೊರೆಯನ್ನು ಸೆರೆಯಲ್ಲಿಡುತ್ತಾರೆ.

ಪ್ರಜಾಪ್ರಭುತ್ವ ಮೊದಲಾದುದು ಹೀಗೆ. ಜನರು ತಮ್ಮ ಆಡಳಿತವನ್ನು ತಾವೇ ನಡೆಸಿಕೊಳ್ಳುವ ಹವಣಿಕೆ. ಅದರಿಂದ ತಮ್ಮ ಹಿತಸಾಧನೆಯಾಗುವುದೆಂಬ ನಂಬಿಕೆ.

ಸಿದ್ಧಾಂತದಲ್ಲೇನೋ ಸರಿಯೆ, ಆದರೆ ದೇಶದ ಜನರೆಲ್ಲ ಸೇರಿ ಆಡಳಿತವನ್ನು ನಡೆಸುವುದಾದೀತೆ?

ತಮ್ಮ ಪ್ರತಿನಿಧಿಗಳು ಕೆಲವರನ್ನು ಆರಿಸಿ, ಅವರಿಗೆ ಅಧಿಕಾರವನ್ನೊಪ್ಪಿಸುವುದಷ್ಟೆ ಜನರು ಮಾಡಬಹುದಾದ ಕೆಲಸ. ಆರಿಸಿ ಬಂದವರು ಅಧಿಕಾರಿಗಳು. ದೊರೆಗಳಿಲ್ಲದಿದ್ದಾಗ ಅವರೆ ದೊರೆಗಳು. ಯಾರಾದರೂ ಆಳಬೇಕಲ್ಲ? ಆರಿಸಿಬಂದ ಹೊಸತರಲ್ಲಿ ಇರುವ, ಇರಬಹುದಾದ, ಒಳ್ಳೆಯತನ ಬಹುಕಾಲ ಉಳಿಯುವುದಿಲ್ಲ; ಅಧಿಕಾರ ಅದನ್ನು ಕೆಡಿಸುತ್ತದೆ.

ಆಗ ಅವನನ್ನು ಅಧಿಕಾರದಿಂದ ಇಳಿಸುವುದು ಜನರಿಗೆ ಸುಲಭವೇನಲ್ಲ. ಪ್ರಜಾಸತ್ತೆಯ ನಿಯಮ ಅಡ್ಡಿ ಬರುತ್ತದೆ. ಆರಿಸಿ ಬಂದವನು ಅರಸ; ಅವನನ್ನು ಆರಿಸಿ ಅರಸನಾಗಿಸಿದವರು ಹೆಡ್ಡರು. ಈ ಜ್ಞಾನೋದಯವಾಗುವ ವೇಳೆಗೆ ಅವನು ಬಲಿಯುತ್ತಾನೆ, ಜನ ಸೊರಗುತ್ತಾರೆ.

ಎಲ್ಲರೂ ಹೀಗಲ್ಲ; ಆದರೆ ಇಂಥವರು ಹೆಚ್ಚುತ್ತಿದ್ದಾರೆ.

ಹಿತಸಾಧನೆ

ರಾಜಕಾರಣದಲ್ಲಿ ಆಧ್ಯಾತ್ಮಿಕತೆಯನ್ನು ಒದಗಿಸಬೇಕೆಂಬ ಹಂಬಲ ಹಿಂದಿನ ಕೆಲವರಾದರೂ ರಾಜಕಾರಣಿಗಳಲ್ಲಿದ್ದಿತು.

ಗೋಪಾಲಕೃಷ್ಣ ಗೋಖಲೆಯವರು politics must be spiritualised ಎಂಬ ಕರೆಯನ್ನು ಕೊಟ್ಟಿದ್ದರು. ಅದಕ್ಕೆ ಓಗೊಟ್ಟವರೂ ಕೆಲವರಿದ್ದರು. ಆದರೆ ಅದು ಹಳೆಯ ಮಾತಾಯಿತು. ಈಗ ಅಂಥ ಕರೆಯನ್ನು ಕೊಡುವವರೂ ಇಲ್ಲ; ಕೊಟ್ಟರೆ ಕೇಳುವವರೂ ಇಲ್ಲ. ಆಧ್ಯಾತ್ಮಿಕತೆಯಿರಬೇಕಾದುದು ಧಾರ್ಮಿಕ ಸಂಸ್ಥೆಗಳಲ್ಲಿ; ಅಲ್ಲೇ ಈಗ ಆಧ್ಯಾತ್ಮಿಕತೆಯ ಗಾಳಿಗಂಧವೂ ಇಲ್ಲ. ಇನ್ನು ರಾಜಕಾರಣದಲ್ಲಿ ಹೇಗಿದ್ದೀತು? ಧಾರ್ಮಿಕ ವೆನಿಸಿಕೊಳ್ಳುವ ಸಂಸ್ಥೆಗಳಲ್ಲಿ ಈಗ ರಾಜಕೀಯ ಧಾರಾಳವಾಗಿ ಬೇರೂರಿದೆ ಯೆಂಬುದನ್ನು ಯಾರರಿಯರು? ವಿರಕ್ತಿಯಿಂದ ಮಠವನ್ನು ಸೇರುತ್ತಿದ್ದ ಕಾಲವೊಂದಿದ್ದಿತಲ್ಲ? ಹಾಗೆಯೇ ಸೇವಾ ಮನೋಭಾವದಿಂದ ರಾಜಕಾರಣಕ್ಕೆ ಇಳಿಯುತ್ತಿದ್ದ ಕಾಲವೂ ಒಂದು ಇದ್ದಿತು. ಈಗ ಸ್ವಾರ್ಥಸಾಧನೆಗೆ ಮಠ, ರಾಜಕೀಯ ಸೇರುವುದು ವಾಡಿಕೆಯಾಗಿದೆ. ಇದರಲ್ಲಿ ವಿಚಾರಮಾಡಬೇಕಾದ ಅಂಶವೂ ಒಂದಿದೆ. ಉಳಿದವರಿಗಾದರೆ ಒಂದು ಉದ್ಯೋಗವೋ, ಉದ್ಯಮವೋ, ವೃತ್ತಿಯೋ ಇರುತ್ತದೆ; ಅದು ಸಂಪಾದನೆಯ ಮಾರ್ಗ. ರಾಜಕಾರಣಕ್ಕೆ ಬದುಕನ್ನು ಮೀಸಲಾಗಿರಿಸಿಕೊಂಡವರಿಗೆ ಬೇರೆ ಯಾವ ದಾರಿಯಿದೆ? ತಮ್ಮ ಹೊಟ್ಟೆಪಾಡನ್ನು ತಾವೇ ನೋಡಿಕೊಳ್ಳಬೇಕು ತಾನೆ? ತಮ್ಮನ್ನು ನಂಬಿದವರನ್ನು ಕಾಪಾಡುವ ಹೊಣೆಯನ್ನು ಕೈಬಿಡುವುದು ಹೇಗೆ? ನಾಲ್ಕು ಜನರ ಹಿತಕ್ಕೆಂದು ಹೊರಡುವವರನ್ನು ನಾಲ್ಕೂ ಜನ ನೋಡಿಕೊಳ್ಳ ಬೇಕಾದುದು ಸಹಜವೇ. ಆದರೆ ನಾಲ್ಕೂ ಜನರ ಹಿತದ ಚಿಂತೆಯನ್ನು ಕನಸಿನಲ್ಲೂ ಮಾಡದೆ ತಮ್ಮ ದುರಾಸೆಯನ್ನು ತೀರಿಸಿಕೊಳ್ಳಲೆಂದೇ ರಾಜಕಾರಣಿಗಳಾದವರನ್ನು ಮಾಡುವುದೇನು? ಇಂಥವರ ಸಂಖ್ಯೆಯೇ ಬೆಳೆಯುತ್ತಿದ್ದರೆ ರಾಜಕಾರಣಕ್ಕೆ ಮರ್ಯಾದೆ ಉಳಿಯುತ್ತದೆಯೆ?

ರಾಜಕಾರಣವೆಂದರೆ ಆಸೆಬುರುಕರು, ಮೋಸಗಾರರು, ಮಾತಿಗೆ ತಪ್ಪುವವರು, ಲಂಚಕೋರರು ಇವರದ್ದೇ ಮೇಲಾಟವಾಗಿಬಿಟ್ಟರೆ ಸಾಮಾನ್ಯ ಜನರ ಆದರವನ್ನು ಅವರು ಗಳಿಸುವುದು ಸಾಧ್ಯವೇ? ಪರಸ್ಪರ ಹಿತಸಾಧನೆಯನ್ನು ಮಾಡಿಕೊಳ್ಳಬೇಕಾದರೆ ಮೊದಲು ರಾಜಕಾರಣಿಗಳು ಜನರ ಹಿತದತ್ತ ಗಮನಹರಿಸಬೇಕು. ಅನಂತರವೇ ಅವರ ಹಿತವನ್ನು ಜನ ನೋಡಿಕೊಂಡಾರು.

ರಾಜಕಾರಣಿಯ ಧೋರಣೆ

ಪ್ರಜಾಸತ್ತೆಯಲ್ಲಿ ರಾಜಕಾರಣಿಯ ಪಾತ್ರ ದೊಡ್ಡದು. ಪ್ರಜೆಗಳನ್ನು ಪ್ರತಿನಿಧಿಸುವವನು ಅವನೆ ಎಂಬುದೊಂದು ನಂಬಿಕೆಯಿದೆಯಷ್ಟೆ? ಅನೇಕ ವೇಳೆ ಇದು ಕುರುಡುನಂಬಿಕೆಯೆ ಎನ್ನಿ!

ರಾಜಕಾರಣಿಗೆ ಪ್ರಜಾಸತ್ತೆಯಲ್ಲಿ ಅಭ್ಯುದಯ ಇದೆ ಎಂಬುದೇನೊ ನಿಶ್ಚಯವೆ. ಅದು ರಾಜಕಾರಣಿಗಳ ಅನುಭವದಲ್ಲೂ ಇದೆ; ಇತರರ ಅನುಭವದಲ್ಲೂ ಇದೆ. ಅವನು ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲೇರುವ ಚಹರೆಗಳೆ ಹೆಚ್ಚು. ಜನನಾಯಕನೆಂಬ ಬಿರುದು ದೊರೆತರಂತೂ ಅವನನ್ನು ಹಿಡಿಯುವವರು ಯಾರು?

ಎಲ್ಲ ರಾಜಕಾರಣಿಗಳಿಗೂ ಅಭ್ಯುದಯದ ಪುಣ್ಯ ಇದ್ದೀತೆಂದು ಮಾತ್ರ ಭಾವಿಸಬಾರದು. ಕೆಲವರು ನೀತಿ-ನಿಯಮಗಳಿಗೇ ಅಂಟಿಕೊಂಡು ಸೇವೆಯೆಂಬ ಕನಸನ್ನು ಕಾಣುತ್ತ, ಹಸಿದೇ ಇರುತ್ತಾರೆ. ಅವರು ಪ್ರವೃತ್ತರಾಗಿರುವಾಗಲೆ ನಿವೃತ್ತರು. ಇನ್ನು ಅಭ್ಯುದಯದ ಮಾತೆಲ್ಲಿ? ಅವರಿಗೆ ಜನಪ್ರೀತಿಯಾಗಲಿ ಒದಗುವುದು ಅಷ್ಟಕಷ್ಟೆ. ಮುಂದೆ ಬರುವ ರಾಜಕಾರಣಿಯಾದರೆ ಅವನ ಕಣ್ಣು ಜನಾನುರಾಗದ ಮೇಲೆ, ಜನರು ಏನನ್ನು ಬಯಸಿಯಾರೊ ಅದನ್ನೆಲ್ಲ ಇವನು ಮೊದಲೆ ಊಹಿಸಿಕೊಂಡು, ಅದನ್ನು ಈಡೇರಿಸುವುದೇ ತನ್ನ ಕರ್ತವ್ಯವೆಂದು ಅವರಿಗೆ ಸಾರಿ ಹೇಳುವನು. ಜನರ ಬಯಕೆಯ ಗೀಳನ್ನೇನು ಇವನು ಹಚ್ಚಿಕೊಂಡಿರುವುದಿಲ್ಲವೆನ್ನಿ. ಎಲ್ಲ ಜನರ ಎಲ್ಲ ಬಯಕೆಗಳನ್ನೂ ತೀರಿಸುವುದು ಪರಮೇಶ್ವರನಿಗೂ ಸಾಧ್ಯವಿಲ್ಲವಷ್ಟೆ? ಆದರೆ ಜನರ ಕಷ್ಟಕಾರ್ಪಣ್ಯಗಳನ್ನು ಕುರಿತು ಮಾತನಾಡಿದರೆ ಸಾಕು! ಜನರಿಗೆ ಅಷ್ಟೇನು ಕಷ್ಟವಿಲ್ಲವೆನ್ನಿ. ಹೇಳಿಕೊಳ್ಳುವಂಥ ತೊಂದರೆಯಿರದೆನ್ನಿ. ಆದರೂ ರಾಜಕಾರಣಿ ಅಷ್ಟಕ್ಕೆ ಬಿಡಬಾರದು. ಮುಂದೆ ಬರಬಹುದಾದ ಕಷ್ಟಗಳನ್ನು ಕಣ್ಣಿಗೆ ಕಾಣುವಂತೆ ಬಣ್ಣಿಸಬೇಕು. ಇಲ್ಲದೆ ಇರುವ ಕಷ್ಟಗಳನ್ನೂ ಇರುವಂತೆ ಕಾಣಿಸಬೇಕು, ಜನರನ್ನು ಬೆದರಿಸಬೇಕು. ಆಮೇಲೆ ಅವುಗಳ ಪರಿಹಾರ ತನ್ನಿಂದಲೆ ಆದೀತು ಎಂಬುವಂತೆ ಮಾತನಾಡಬೇಕು. ಇರದಿರುವ ತೊಂದರೆಗಳನ್ನು ಪರಿಹರಿಸುವುದೇನು ಕಷ್ಟ? ದಿಟವಾಗಿ ಪರಿಹರಿಸಬೇಕಾದುದೂ ಇಲ್ಲವಷ್ಟೆ?

ಮತದಾರ ಮಡ್ಡಿಯಾಗಿದ್ದರೆ ಇವನಿಗೆ ಕ್ಷೇಮ; ಮಡ್ಡಿಯಾಗಿರದಿದ್ದರೆ ಮರುಳು ಮಾಡುವ ಮಾತುಗಳನ್ನಾದರೂ ಅವನ ಮೇಲೆ ಪ್ರಯೋಗಿಸಬೇಕು.

ಅಧಿಕಾರ-ದಾಹ

ದಾಹವೆಂದರೆ ಬಾಯಾರಿದಾಗ ನೀರುಬೇಕೆಂಬ ಬಯಕೆ. ದಾಹವೆಂಬ ಮಾತಿನ ಮೂಲಾರ್ಥದಲ್ಲಿ ಉರಿ ಎಂಬುದಿದೆ. ಮೈಯಲ್ಲಿ ತನುವೆಲ್ಲ ಇಂಗಿಹೋಗಿ ಬಾಯಿ ಒಣಗಿದಾಗ ನೀರಿನ ಅಗತ್ಯ. ಆಗ ನೀರಿನ ಬಯಕೆ ಅಷ್ಟೆ ಅಲ್ಲ; ನೀರಿಗಾಗಿ ತವಕ, ಕಾತರ, ತಹತಹ. ನೀರಲ್ಲದೆ ಬೇರೆ ಯಾತರಿಂದಲೂ ದಾಹದ ಪರಿಹಾರವಿರದು. ಅಧಿಕಾರದಾಹ ಎಂಬ ಮಾತಿದೆಯಲ್ಲವೆ? ಅಧಿಕಾರದ ಬಯಕೆಯೆಂದಷ್ಟೇ ಅದರ ಅರ್ಥವಲ್ಲ. ಅಧಿಕಾರದ ರುಚಿ ಕಂಡವರಿಗೆ ಅದರ ಗೀಳು ಒಡಮೂಡಿಕೊಳ್ಳುತ್ತದೆ. ಅದು ಕೈ ತಪ್ಪಿ ಹೋದೀತೆಂಬ ಭೀತಿಯೂ ಇರುತ್ತದೆ; ಅದರ ಹರವು ಹೆಚ್ಚಬೇಕೆಂಬ ಆಸೆಯೂ ಇರುತ್ತದೆ.

ಅಧಿಕಾರವೆಂದರೆ ಹಣದ ಗಳಿಕೆ, ಹೆರವರ ಮೇಲೆ ಆಳ್ವಿಕೆ, ಪ್ರಬಲರಾದವರ ಮೇಲೆ ಪ್ರಭಾವ, ಇಷ್ಟಲ್ಲದೆ, ಬೇಕೆಂದುದನ್ನೆಲ್ಲ ಆಯಾಸವಿಲ್ಲದೆ ಪಡೆದುಕೊಳ್ಳುವ ಅವಕಾಶ. ಎಲ್ಲರೂ ತನ್ನ ಸುತ್ತ ನೆರೆದು ತನ್ನನ್ನೆ ಓಲೈಸುವ ಸಂದರ್ಭ. ಇದು ಮೈಯ, ಮನಸ್ಸಿನ ಧರ್ಮವಾಗಿಬಿಟ್ಟರೆ ಅದೇ ಒಂದು ಅಗತ್ಯವಾಗಿ ಪರಿಣಮಿಸುತ್ತದೆ; ಬಾಯಾರಿಕೆಯಲ್ಲಿನ ನೀರಿನಂತೆ. ಬಾಯಿ ಒಡಗಿದಾಗ ನೀರಲ್ಲದೆ ಮತ್ತೇನೂ ಬೇಡವಾದೀತು. ಅಧಿಕಾರದ ದಾಹ ಇರುವಾಗಲೂ ಬೇರೆ ಯಾತರ ಪರಿವೆಯೂ ಇರಲಾರದು.

ರಾಜಕಾರಣದಲ್ಲಿ ಇದನ್ನು ವಿಶೇಷವಾಗಿ ಕಾಣುತ್ತೇವೆ. ಮಂತ್ರಿಯಾದರೆ ಪ್ರಜಾಪ್ರತಿನಿಧಿಯಾದರೆ, ಮೇಲಧಿಕಾರಿಯಾದರೆ, ಕರ್ತವ್ಯನಿರ್ವಹಣೆ ಇದೆಯೋ ಇಲ್ಲವೋ, ಅಧಿಕಾರದ ಚಲಾವಣೆಯಂತೂ ತಪ್ಪಿದ್ದಲ್ಲ. ಅವನ ಅನುಗ್ರಹಕ್ಕೆ ಬಾಯಿ ತೆರೆದುಕೊಂಡು, ಅವನನ್ನು ಹಿಂಬಾಲಿಸಿ, ಅವನನ್ನು ಇಂದ್ರ-ಚಂದ್ರ-ದೇವೇಂದ್ರನೆಂದು ಹೊಗಳುತ್ತ, ಸಲಾಮು ಸಲ್ಲಿಸುವ ಕುನ್ನಿಗಳೆಷ್ಟು ಮಂದಿಯೊ! ಅವನ ಯೋಗ್ಯತೆಗೆ ಮೀರಿದ ಸೌಕರ್ಯಗಳು, ಸೌಲಭ್ಯಗಳು, ಸಾಧನೆಗಳು; ನಿಗ್ರಹಾನುಗ್ರಹಶಕ್ತಿ; ಠೇಂಕಾರ. ಅಧಿಕಾರವಿದ್ದರೆ ಇವೆಲ್ಲ. ಅಧಿಕಾರ ತಪ್ಪಿತೆಂದರೆ ಅವನನ್ನು ಮೂಸುವವರು ಯಾರು? ಆಳಿಗೊಂದು ಕಲ್ಲು ಎಂದಾದರೂ ಸರಿಯೆ! ಆದ್ದರಿಂದ ಇದ್ದ ಅಧಿಕಾರ ಉಳಿದು ಕೊಳ್ಳಬೇಕು, ಅದಿರುವಾಗಲೆ ಅದು ಬೆಳೆಯಬೇಕು ಬೇರೂರಿಕೊಳ್ಳಬೇಕು ಅಲ್ಲವೆ?

ಎಮ್ಮೆ ಯಾರದ್ದು?

ಹಿಂದಿಯಲ್ಲೊಂದು ಗಾದೆ- 'ಜಿಸೇ ಕಾ ಲಾಠೀ ಉಸೀಕಾ ಭೈಂಸ್' ಅದರ ಅರ್ಥ-ದೊಣ್ಣೆ ಯಾರದ್ದೋ ಎಮ್ಮೆ ಅವನದ್ದೇ. ಹಳ್ಳಿಯಲ್ಲಿ ಎಮ್ಮೆ ಯಾರದ್ದು ಎಂಬ ತಕರಾರು ಎದ್ದುಕೊಂಡಾಗ, ನನ್ನದು ನನ್ನದೆಂದು ನಾಲ್ಕಾರು ಜನ ಜಗಳವಾಡುವಾಗ, ಎಮ್ಮೆ ಯಾರಿಗೆ ಸೇರಬೇಕು ಎಂದು ನಿರ್ಣಯಿಸುವುದು ಹೇಗೆ? ಎಮ್ಮೆ ದಿಟವಾಗಿ ಯಾರದ್ದಾದರಿರಲಿ, ಅವನು ಜೋರಾಗಿರದಿದ್ದರೆ ಅವನಿಗೆ ತನ್ನದೇ ಎಮ್ಮೆ ದಕ್ಕಲಾರದು. ದೊಣ್ಣೆ ಹಿಡಿದು ದನಿ ಏರಿಸಿದರೆ ನ್ಯಾಯ ಅವನ ಕಡೆಗೇ! ಲೋಕದ ವಾಡಿಕೆಯೇ ಹಾಗೆನ್ನಿ.

ಹೆದರಿದವರ ಮೇಲೆ ಹುಳುವೂ ಎರಗಿ ಬಿದ್ದೀತು! ಅದು ಹುಳುವೇ ಇರಲಿ, ಅದಕ್ಕೆ ಹಣದ ಬಲವೋ, ಅಧಿಕಾರದ ಬೆಂಬಲವೋ, ರಾಜಕೀಯ ಪ್ರಭಾವವೋ ಇದ್ದಿತಾದರೆ ಹುಳುವೇ ಹಾವಾದೀತು, ಹುಲಿಯೂ ಆದೀತು! ಲೋಕದ ದೃಷ್ಟಿಯಲ್ಲಿ ಬಲವೆಂದರೆ ಭೌತಿಕವಾದುದು, ಪ್ರಾಪಂಚಿಕವಾದುದು. ಕೆಲಸಕ್ಕೆ ಬರುವಂಥದು. ಹಣ, ಪದವಿ, ಉದ್ಯೋಗ, ಅನುಕೂಲ, ಜೋರು, ಜಂಬ ಪ್ರಭಾವ ಇವೆಲ್ಲ ಬಲದ ಪ್ರಕಾರಗಳೇ. ಇದರಲ್ಲಿ ನೀತಿ-ನಿಯಮ-ನ್ಯಾಯ ಇವುಗಳ ಪಾತ್ರ ಕಡಮೆ, ಇಲ್ಲವೇ ಇಲ್ಲವೆಂದರೂ ತಡೆದೀತು. ಸಂಕೋಚಕ್ಕೆ ಇಲ್ಲಿ ಎಡೆಯಿಲ್ಲ. ಲೋಕಾಪವಾದಕ್ಕೆ ಬೆಲೆಯಿಲ್ಲ. ಅಡ್ಡ ಬಂದವರ ಗೋಣು ಮುರಿದು ಮುನ್ನುಗ್ಗುವುದೊಂದೇ ದಾರಿ. ದೊಣ್ಣೆ ಹಿಡಿದಿರುವ ಉದ್ದೇಶವೇ ಅದು.

ಕೈಯಲ್ಲಿ ದೊಣ್ಣೆ ಇದ್ದರೆ ಅದನ್ನು ಎತ್ತಿತೋರಿಸುವ ಉತ್ಸಾಹ ಇರುವುದು ಸರಿಯೆ; ಅನುವು ದೊರೆತರೆ ಅದನ್ನು ಬಳಸುವ ಚಪಲವೂ ಇರುವುದುಂಟು.

ಇನ್ನು ನೀತಿ-ನ್ಯಾಯ ಎಂದು ಅಂಜಿಕೊಂಡು ನಡೆಯುವವರ ಪಾಡೇನು? ಅವರಿಗೆ ತೊಂದರೆ ತಪ್ಪಿದ್ದಲ್ಲ. ನೇರವಾಗಿ ಬೆಳೆದು ನೆಟ್ಟಗೆ ನಿಂತ ಮರವೇ ಬಿರುಗಾಳಿಗೆ ಬೀಳುವುದು. ಸೊಟ್ಟಸೊಟ್ಟಗೆ ಬೆಳೆದದ್ದು ಹೇಗೋ ಉಳಿದುಕೊಳ್ಳುತ್ತದೆ. ಆದರೆ ಬೇರು ಆಳವಾಗಿದ್ದರೆ ಮರ ಸೊಟ್ಟಗಿದ್ದರೂ ಬೀಳುವುದಿಲ್ಲ. ಅಲ್ಲವೆ?

ಕೈಯಾಸೆ

ಲಂಚವೆಂಬುದಕ್ಕೆ ಈ ಕನ್ನಡದ ಮಾತು ಎಷ್ಟು ಸೊಗಸಾಗಿದೆ!

ಸೋಮೇಶ್ವರ ಶತಕದಲ್ಲಿ 'ಕೈಯಾಸೆಯಂ ಮಾಡದಂ ನಿಜಮಂತ್ರೀಶ್ವರ' ಎಂಬ ಮಾತು ಬರುತ್ತದೆ. ಇದೂ ಎಷ್ಟು ಸಮಯೋಚಿತವಾಗಿದೆ!

'ಪ್ರಜೆಯಂ ಪಾಲಿಸಬಲ್ಲೊಡಾತನರಸಂ' ಎಂಬುದು ಸೋಮೇಶ್ವರ ಶತಕದಲ್ಲಿ ಬರುವ ಹಿಂದಿನ ಒಕ್ಕಣೆ. ಅರಸರಂತೂ ಈಗಿಲ್ಲ. ಆಳುವವರೇನೋ ಇದ್ದಾರೆ.

ಆಳುವವರ ಗುಣ ಜನರನ್ನು ಕಾಪಾಡುವುದು ಎಂದು ಕವಿಯ ಎಣಿಕೆ. ಜನರಿಗೆ ಕಷ್ಟಕಾರ್ಪಣ್ಯಗಳ ಮಾಲೆಗಳನ್ನೆ ತೊಡಿಸುತ್ತಿರುವವರು ಎಂಥ ಆಳುವವರು?

ಈಗ ಆಳುವವರು ಮಂತ್ರಿಗಳೇ ಆದುದರಿಂದ ಕವಿಯ ಎಣಿಕೆ ಅವರಿಗೇ ಅನ್ವಯವಾಗಬೇಕು. ಕವಿಯ ಕಾಲದಲ್ಲೇನೋ ಅರಸರೂ ಮಂತ್ರಿಗಳೂ ಬೇರೆ ಬೇರೆಯಾಗಿದ್ದರು: ಈಗ ಸಂದರ್ಭ ಮಾರ್ಪಟ್ಟಿದೆ.

ಕವಿಯ ಮಂತ್ರಿಗೇ ವಿಶಿಷ್ಟವಾಗಿ ಇರಬೇಕಾದ ಒಂದು ಗುಣವನ್ನು ತಿಳಿಯ ಹೇಳಿದ್ದಾನೆ- ಕೈಯಾಸೆಯನ್ನು ಮಾಡದಿರುವುದು. ಎಂದರೆ ಲಂಚಕ್ಕೆ ಕೈಯೊಡ್ಡದಿರುವುದು.

ಕವಿಯು ಕಾಲದಲ್ಲೂ ಇದು ಇದ್ದಿರಬೇಕಲ್ಲ? ಇಲ್ಲದೆ ಇದ್ದರೆ ಹಾಗೇಕೆ ಹೇಳುತ್ತಿದ್ದ?

ಇದು ಎಂದಿಗೂ ಇದ್ದದ್ದೇ. ಆದರೆ ಅದು ತಪ್ಪೆಂಬ ಕಲ್ಪನೆಯೂ ಇದ್ದಿತು ಅಲ್ಲವೆ? ಎಂದಿನಿಂದಲೂ ಇದೆ ಎಂಬಷ್ಟೇ ಕಾರಣದಿಂದ ಕೆಟ್ಟದ್ದು ಒಳ್ಳೆಯದಾದೀತೆ? ಹಳೆಯದೆಂಬ ಮಾತ್ರಕ್ಕೆ ಹಿರಿತನವೆ?

ಕೈಯಾಸೆಯೆಂದರೆ ದಿಟವಾಗಿ ಮನಸ್ಸಿನಾಸೆ. ಲೋಭಿಯಾದವನಿಗೆ ದುರಾಸೆಯಿದ್ದವನಿಗೆ ಕೈ ತಾನಾಗಿ ಮುಂದೆ ಹೋಗುತ್ತದೆ, ಅಂಗೈ ಮೇಲೆ ಮಾಡಿ. ಮನಸ್ಸಿನ ಮೇಲೆ ಅಂಕೆಯಿದ್ದವನಿಗಾದರೆ ಕೈ ಹಿಂದೆ ಇರುತ್ತದೆ.

ಕೈಯೊಡ್ಡುವುದು ತಪ್ಪೆಂದಲ್ಲ. ಬಡವ ಕೈಯೊಡ್ಡಿದರೆ ಅದೇನು ತಪ್ಪೆನಿಸದು. ಅದಕ್ಕೆ ಕಾರಣವಿದೆ; ಸಮರ್ಥನೆಯಿದೆ. ಕೈಯೊಡ್ಡದಿದ್ದರೆ ಹೊಟ್ಟೆ ಹಸಿಯುತ್ತದೆ.

ಆದರೆ ಉಳ್ಳವರೂ ಕೈಯೊಡ್ಡುವ ಚಾಳಿಯನ್ನು ಬೆಳೆಸಿಕೊಂಡರೆ ಹೇಗೆ? 'ಅಷ್ಟಿದ್ದರೆ ಮತ್ತಷ್ಟರಾಸೆ 'ಎಂದಾದರೆ ಎಂದಿಗಾದರೂ ಕಷ್ಟ ತಪ್ಪೀತೆ?

ಲಂಚದ ಹೊಣೆ

ಇಂದಿನ ಬದುಕಿನಲ್ಲಿ ಲಂಚಗುಳಿತನ ಹೆಚ್ಚುತ್ತಿದೆಯೆಂದು ಎಲ್ಲರೂ ದೂರುವವರೇ. ಪರಿಸ್ಥಿತಿ ಹಾಗಿರುವುದೇನೋ ದಿಟವೆ.

ಲಂಚವಿಲ್ಲದೆ ಸರಕಾರದಲ್ಲಿ ಏನು ಕೆಲಸ ತಾನೆ ನಡೆದೀತು ಎಂದು ತಿಳಿದು ಹೇಳುವವರಿಲ್ಲವೆ? ಲಂಚ ತೆಗೆದುಕೊಳ್ಳುವುದು ತಪ್ಪೆಂದು ಎಲ್ಲರೂ ಬಲ್ಲರು - ಎಲ್ಲರ ಬೆರಳೂ ಲಂಚ ತೆಗೆದುಕೊಳ್ಳುವವರ ಕಡೆಗೇ. ಆದರೆ ಲಂಚ ಕೊಡುವ ದಾನಿಗಳಿರದಿದ್ದರೆ ಲಂಚ ತಿನ್ನುವ ಹೊಟ್ಟೆಬಾಕರು ಹುಟ್ಟಿಕೊಳ್ಳುವುದು ಹೇಗೆ?ಲಂಚ ತೆಗೆದುಕೊಳ್ಳುವುದು ತಪ್ಪೆಂದರೆ, ಲಂಚ ನೀಡುವುದೂ ಅಷ್ಟೇ ತಪ್ಪು. ಶಿಕ್ಷೆಯಾಗುವುದಾದರೆ ಇಬ್ಬರಿಗೂ ಆಗಬೇಕು ತಾನೆ? ತಾನಾಗಿ ಆಗಬೇಕಾದ ಕೆಲಸಕ್ಕೆ, ಯಾವೊಂದು ಅನ್ಯಾಯವೂ ಅಡ್ಡಿಯೂ ಇರದ ಕೆಲಸಕ್ಕೆ, ಲಂಚದ ಅಗತ್ಯವೇನಿದೆ? ಆಗಬಾರದ ಕೆಲಸವನ್ನು ಆಗಮಾಡಿಸಿಕೊಳ್ಳಲು ಲಂಚದ ನೆರವು ಬೇಕು ಅಲ್ಲವೆ?

ಕಾನೂನಿನ ಓರೆಕೋರೆಗಳನ್ನು ನಿವಾರಿಸಿಕೊಂಡು ಸುಧಾರಿಸಿಕೊಂಡು ತಮ್ಮ ಅನುಕೂಲವನ್ನು ಸಾಧಿಸಿಕೊಳ್ಳುವ ಮಂದಿ ಲಂಚ ನೀಡಲು ಹೇಸುವುದಿಲ್ಲ. ಸಾಮಾನ್ಯ ಜನರ ದಿನನಿತ್ಯದ ವ್ಯವಹಾರಕ್ಕೆ ಈ ಮಾತು ಅನ್ವಯಿಸಲಾರದು.

ಕಷ್ಟಸಾಧ್ಯವಾದುದನ್ನು ಸುಲಭವಾಗಿ ಕೈಗೂಡಿಸಲು, ವಿಳಂಬವಾಗುವುದನ್ನು ಬೇಗನೆ ಮಾಡಿಕೊಳ್ಳಲು, ನ್ಯಾಯದ ಬಲವಿಲ್ಲದ ಕೆಲಸವನ್ನು ಮರೆಯಲ್ಲಿ ಸಾಧಿಸಿಕೊಳ್ಳಲು ಲಂಚವೆಂಬ ದಾರಿ ಏರ್ಪಟ್ಟಿದೆ.

ಲಂಚದ ಹಿನ್ನೆಲೆಯಲ್ಲಿರುವುದು ಅನ್ಯಾಯ, ಅಧರ್ಮ, ಅಕ್ರಮ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಆದರೆ ನ್ಯಾಯ, ಧರ್ಮ, ಕ್ರಮ, ಇಷ್ಟನ್ನೆ ಹಿಡಿಯುತ್ತೇನೆ ಎಂದವರಿಗೂ ಲಂಚದ ಬೇಗೆ ತಟ್ಟಬೇಕಾದುದೇನು?

'ತಡವಾದರೂ ಚಿಂತೆಯಿಲ್ಲ, ಕಾಯುತ್ತೇನೆ, ಲಂಚ ಕೊಡುವುದಿಲ್ಲ' ಎಂದು ಗಟ್ಟಿಯಾಗಿ ನಿಲ್ಲುವವರು ಎಷ್ಟು ಮಂದಿ? 'ಕೆಲಸವಾಗದಿದ್ದರೂ ಕೊರತೆಯಿಲ್ಲ: ಲಂಚವನ್ನು ತಿನ್ನಿಸಲಾರೆ' ಎಂದು ನಿರ್ಧಾರದಿಂದ ಸುಮ್ಮನಿರುವವರು ಯಾರು?

ಲಂಚದ ಆಸೆಯನ್ನು ತೋರಿಸುವ ಜನ ಹೆಚ್ಚಾಗುತ್ತಿರುವುದರಿಂದಲೇ ಲಂಚಗುಳಿತನವೂ ಹೆಚ್ಚಾಗುತ್ತಿದೆ. ಲಂಚದ ರುಚಿ ಕಂಡವರಂತೂ ಅದನ್ನು ಎಲ್ಲರಿಂದಲೂ ಬಯಸುವುದೇನೋ ಸಹಜವೆ.

ಲಂಚವನ್ನು ಉಣಬಡಿಸುವ ಉದಾರಿಗಳು ಲಂಚಪ್ರಪಂಚದ ಸೂತ್ರಧಾರರು. ಸಂತಪ್ತರ ಶಾಪ ಇರಬೇಕಾದುದು ಅವರ ಮೇಲೆ.

ಪ್ರೊ. ಎಸ್. ಕೆ. ರಾಮಚಂದ್ರ ರಾವ್ ಅವರು ಖ್ಯಾತ ವಿದ್ವಾಂಸರು, ಚಿಂತಕರು, ಕಲಾಪ್ರೇಮಿಗಳು, ಪ್ರಬಂಧಕಾರರು, ಉತ್ತಮ ವಾಗ್ಮಿಗಳು.

ವಿಚಾರಲಹರಿ 1990ರ ದಶಕದಲ್ಲಿ 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾದ ಆಯ್ದ ಚಿಂತನ ಬರಹಗಳ ಸಂಕಲನ. ಪ್ರೊ. ರಾಮಚಂದ್ರ ರಾವ್ ಅವರು 'ದಾಸಯ್ಯ' ಕಾವ್ಯನಾಮದಲ್ಲಿ ಬರೆದ 300 ಚಿಂತನಗಳನ್ನೊಳಗೊಂಡ ಕೃತಿ ಇದು. ಧರ್ಮ, ನೀತಿ, ಭಕ್ತಿ, ದರ್ಶನ, ಸಮಾಜ, ಆರೋಗ್ಯ, ಪರಿಸರ, ಲೋಕನೀತಿ - ಹೀಗೆ ಹಲವಾರು ವಿಷಯಗಳ ವ್ಯಾಪ್ತಿ ಇಲ್ಲಿದೆ.

ಇಲ್ಲಿ ಅನುಭವ ಶ್ರೀಮಂತಿಕೆಯಿದೆ; ರೀತಿನೀತಿಗಳ ವಿಮರ್ಶೆಯಿದೆ. ಮಾನವಸ್ವಭಾವದ ವಿವಿಧ ಮುಖಗಳ ಪರಿಚಯವಿದೆ; ನೋವುನಲಿವಿನ ಚಿತ್ರಣವಿದೆ. ಅಂತರಂಗದ ಭಾವಗಳ ಆತ್ಮೀಯ ಮಿಡಿತವಿದೆ; ಪೂರ್ವಾಗ್ರಹವಿಲ್ಲದ, ಸಮನ್ವಯ ದೃಷ್ಟಿಯ ಚಿಂತನಶೀಲತೆಯಿದೆ. ಖಚಿತತೆ, ಸಂಕ್ಷಿಪ್ತತೆ ಹಾಗೂ ಸ್ಪಷ್ಟತೆಯಿಂದ ಮೈಗೂಡಿದ ಹದವರಿತ ಔಚಿತ್ಯಪ್ರಜ್ಞೆ ಇಲ್ಲಿನ ಬರವಣಿಗೆಯ ಹೆಗ್ಗಳಿಕೆ.

ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ